ಮಾದಿಗ ಸಮುದಾಯದ ಸಾಮಾಜಿಕ ಬದಲಾವಣೆ
(ಚಿತ್ರದುರ್ಗ ಜಿಲ್ಲೆಯನ್ನು ಅನುಲಕ್ಷಿಸಿ)

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್ ಡಿ (ಸಮಾಜಶಾಸ್ತ್ರ) ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕರು
ರಾಜಣ್ಣ ಡಿ

ಮಾರ್ಗದರ್ಶಕರು
ಪ್ರೊ ಚಲುವರಾಜು
ಪ್ರಾಧ್ಯಾಪಕರು

ಸಹ ಮಾರ್ಗದರ್ಶಕರು
ಪ್ರೊ ಕೆ ಎಂ ಮೇತ್ರಿ
ಪ್ರಾಧ್ಯಾಪಕರು

ಬುಡಕಟ್ಟು ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೧೯

ಮಾದಿಗ ಸಮುದಾಯದ ಸಾಮಾಜಿಕ ಬದಲಾವಣೆ

(ಚಿತ್ರದುರ್ಗ ಜಿಲ್ಲೆಯನ್ನು ಅನುಲಕ್ಷಿಸಿ)

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್ ಡಿ(ಸಮಾಜಶಾಸ್ತ್ರ) ಪದವಿಗಾಗಿ ಸಲ್ಲಿಸಿದ
ಮಹಾಪ್ರಬಂಧ

ಸಂಶೋಧಕರು
ರಾಜಣ್ಣ ಡಿ

ಮಾರ್ಗದರ್ಶಕರು
ಪ್ರೊ ಚಲುವರಾಜು
ಪ್ರಾಧ್ಯಾಪಕರು

ಸಹ ಮಾರ್ಗದರ್ಶಕರು
ಪ್ರೊ ಕೆ ಎಂ ಮೇತ್ರಿ
ಪ್ರಾಧ್ಯಾಪಕರು

ಬುಡಕಟ್ಟು ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

೨೦೧೯

ಸಂಶೋಧಕರ ಪ್ರಮಾಣ ಪತ್ರ

"ಮಾದಿಗ ಸಮುದಾಯದ ಸಾಮಾಜಿಕ ಬದಲಾವಣೆ" (ಚಿತ್ರದುರ್ಗ ಜಿಲ್ಲೆಯನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು **ಪ್ರೊ ಚಲುವರಾಜು** ಅವರ ಮಾರ್ಗದರ್ಶನದಲ್ಲಿ ಹಾಗೂ **ಪ್ರೊ ಕೆ ಎಂ ಮೇತ್ರಿ ಅವರ** ಸಹ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಪಿಎಚ್ ಡಿ(ಸಮಾಜಶಾಸ್ತ್ರ) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಸಮಾಜ ವಿಜ್ಞಾನಗಳ ನಿಕಾಯದ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಸಲ್ಲಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ.

Rajanna.D

ದಿನಾಂಕ:

ಸ್ಥಳ : ವಿದ್ಯಾರಣ್ಯ

ರಾಜಣ್ಣ ಡಿ
ಸಂಶೋಧನ ವಿದ್ಯಾರ್ಥಿ
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

ಸಹ ಮಾರ್ಗದರ್ಶಕರ ದೃಢೀಕರಣ ಪತ್ರ

ರಾಜಣ್ಣ ಡಿ ಇವರು **"ಮಾದಿಗ ಸಮುದಾಯದ ಸಾಮಾಜಿಕ ಬದಲಾವಣೆ" (ಚಿತ್ರದುರ್ಗ ಜಿಲ್ಲೆಯನ್ನು ಅನುಲಕ್ಷಿಸಿ)** ಎಂಬ ಶೀರ್ಷಿಕೆ ಮಹಾಪ್ರಬಂಧವನ್ನು ನನ್ನ ಸಹ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಪಿಎಚ್ ಡಿ(ಸಮಾಜಶಾಸ್ತ್ರ) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಸಮಾಜ ವಿಜ್ಞಾನಗಳ ನಿಕಾಯದ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಸಲ್ಲಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ: 04.02.2019
ಸ್ಥಳ : ವಿದ್ಯಾರಣ್ಯ

ಪ್ರೊ ಕೆ ಎಂ ಮೇತ್ರಿ
ಪ್ರಾಧ್ಯಾಪಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

ಮಾರ್ಗದರ್ಶಕರ ದೃಢೀಕರಣ ಪತ್ರ

ರಾಜಣ್ಣ ಡಿ ಇವರು **"ಮಾದಿಗ ಸಮುದಾಯದ ಸಾಮಾಜಿಕ ಬದಲಾವಣೆ"** (ಚಿತ್ರದುರ್ಗ ಜಿಲ್ಲೆಯನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಪಿಎಚ್‌ಡಿ(ಸಮಾಜಶಾಸ್ತ್ರ) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಸಮಾಜ ವಿಜ್ಞಾನಗಳ ನಿಕಾಯದ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಸಲ್ಲಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ: ೮-೨-೨೦೧೬.
ಸ್ಥಳ : ವಿದ್ಯಾರಣ್ಯ

ಪ್ರೊ ಚಲುವರಾಜು
ಪ್ರಾಧ್ಯಾಪಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

ಕೃತಜ್ಞತೆಗಳು

"ಮಾದಿಗ ಸಮುದಾಯದ ಸಾಮಾಜಿಕ ಬದಲಾವಣೆ" (ಚಿತ್ರದುರ್ಗ ಜಿಲ್ಲೆಯನ್ನು ಅನುಲಕ್ಷಿಸಿ) ಎಂಬ ವಿಷಯದ ಸಂಶೋಧನಾ ಮಹಾಪ್ರಬಂಧವನ್ನು ಪಿಎಚ್ ಡಿ (ಸಮಾಜಶಾಸ್ತ್ರ) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಅರ್ಪಿಸಲು ನನಗೆ ತುಂಬಾ ಹರ್ಷವೆನಿಸುತ್ತದೆ. ನಾನು ಕಟ್ಟಿಕೊಂಡಿದ್ದ ಸಂಶೋಧನೆಯ ಕನಸು ನನಸಾದ್ದು ಪ್ರಸ್ತುತ ಮಹಾಪ್ರಬಂಧ ಮೂಲಕ. ಈ ಮೂಲಕ ನನ್ನ ಅಧ್ಯಯನಕ್ಕೆ ನೆರವಾದವರನ್ನು ಸ್ಮರಿಸುವುದು ನನ್ನ ಅದ್ಯ ಕರ್ತವ್ಯ ಹಾಗೂ ಸಂತೋಷದ ವಿಷಯ.

ಪ್ರಾರಂಭದಲ್ಲಿ ಪಿಎಚ್ ಡಿ ಅಧ್ಯಯನಕ್ಕೆ ಅವಕಾಶ ಮಾಡಿಕೊಟ್ಟಂತಹ ಹಿಂದಿನ ಕುಲಪತಿಗಳಾದ ಪ್ರೊ ಹಿ ಚಿ ಬೋರಲಿಂಗಯ್ಯ ಅವರಿಗೆ ಹಾಗೂ ಇಂದಿನ ಕುಲಪತಿಗಳಾದ ಡಾ. ಮಲ್ಲಿಕಾ ಎಸ್ ಘಂಟಿ ಅವರಿಗೂ, ಹಿಂದಿನ ಕುಲಸಚಿವರಾದ ಡಾ. ವಿಜಯ್ ಪೂಣಚ್ಚ ತಂಬಂಡ, ಇಂದಿನ ಕುಲಸಚಿವರಾದ ಹಾಗೂ ಹಿಂದಿನ ಸಮಾಜ ವಿಜ್ಞಾನ ನಿಕಾಯದ ಡೀನ್‌ರಾದ ಡಾ. ಮಂಜುನಾಥ ಬೇವಿನಕಟ್ಟಿ ಅವರಿಗೂ, ಇಂದಿನ ಸಮಾಜ ವಿಜ್ಞಾನ ನಿಕಾಯದ ಡೀನ್‌ರಾದ ಡಾ. ಸ ಚಿ ರಮೇಶ ಅವರಿಗೂ, ಅಧ್ಯಯನಾಂಗದ ನಿರ್ದೇಶಕರಾದ ಡಾ. ಎಸ್ ಶಿವಾನಂದ ವಿರಕ್ತಮಠ ಅವರಿಗೆ ಮೊದಲಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೆನೆ.

ನನ್ನ ಸಂಶೋಧನೆಗೆ ಸೂಕ್ತ ವಿಷಯವನ್ನು ನೀಡಿ ಅದಕ್ಕೆ ಪೂರಕವಾಗುವಂತೆ ಚರ್ಚಿಸುತ್ತಾ ಪ್ರತಿ ಹಂತದಲ್ಲೂ ಸೂಕ್ತ ಸಲಹೆ ಸೂಚನೆಗಳನ್ನು ಸೂಚಿಸಿ, ಸಹಕರಿಸಿದ ಪ್ರಾಧ್ಯಾಪಕರೂ ಮತ್ತು ಮಾರ್ಗದರ್ಶಕರೂ ಆದ ಡಾ. ಚಲುವರಾಜು ಅವರಿಗೂ ಕೃತಜ್ಞತೆಯನ್ನು ಹೇಳುತ್ತೇನೆ.

ಪ್ರಸ್ತುತ ಸಂಶೋಧನೆಗೆ ಸಹ ಮಾರ್ಗದರ್ಶಕರಾಗಿ ವಿವಿಧ ರೀತಿಯಲ್ಲಿ ಬರವಣಿಗೆಯ ಓರೆ ಕೋರೆಗಳನ್ನು ತಾಳ್ಮೆಯಿಂದ ತಿದ್ದಿತೀಡಿ ಆತ್ಮೀಯತೆಯಿಂದ ಸಹಕರಿಸಿದ ಪ್ರಾಧ್ಯಾಪಕರಾದ ಡಾ. ಕೆ ಎಂ ಮೇತ್ರಿ ಅವರಿಗೂ ಕೃತಜ್ಞತೆಯನ್ನು ಹೇಳುತ್ತೇನೆ.

ಅಧ್ಯಯನ ಅವಧಿಯಲ್ಲಿ ಸಹಕರಿಸಿದ ವಿಭಾಗದ ಪ್ರಾಧ್ಯಾಪಕರುಗಳಾದ ಡಾ. ಗಂಗಾಧರ ದೈವಜ್ಞ, ಡಾ. ಕೆ ಕೇಶವನ್ ಪ್ರಸಾದ್, ಡಾ. ಎ ಎಸ್ ಪ್ರಭಾಕರ ಹಾಗೂ ಕಿರಿಯ ಸಹಾಯಕರಾದ ವಿರುಪಾಕ್ಷಪ್ಪ, ಜಾಫರ್ ಅಲಿ, ಬಸವರಾಜ ಹಾಗೂ ತೋಟಮಾಲಿಯಾದ ದೇವೇಂದ್ರಪ್ಪ, ಗೌಳಿಗ ನಾಗರಾಜ ಅವರಿಗೆ ಅಭಾರಿಯಾಗಿದ್ದೇನೆ.

ಸ್ನಾತಕೋತ್ತರ ಪದವಿ ವ್ಯಾಸಂಗದ ಅವಧಿಯಲ್ಲಿ ಸಂಶೋಧನೆಯ ಕಡೆಗೆ ಅಸ್ತಕಿಯನ್ನು ಮೂಡಿಸಿದ ಅತ್ಮೀಯ ಗುರುಗಳಾದ ಪ್ರೊ ಚಂದ್ರಶೇಖರ್, ಕುಲಸಚಿವರು, ಜಾನಪದ ವಿಶ್ವವಿದ್ಯಾಲಯ, ಪ್ರೊ ರಾಮೇಗೌಡ ಎ, ಪ್ರೊ ಗುರುಲಿಂಗಯ್ಯ ಎಂ, ಪ್ರೊ ಅಂಜಿನಪ್ಪ ಬಿ ಹೆಚ್, ಪ್ರೊ ಚಂದ್ರಶೇಖರ್ ಈ ಹಾಗೂ ಈ ಸಂಶೋಧನ ಮಹಾ ಪ್ರಬಂಧವನ್ನು ತುಂಬ ತಾಳ್ಮೆಯಿಂದ ಕರಡು ತಿದ್ದಿದ ಡಾ. ಮೊಹನ್ ಕುಮಾರ್ ಮಸ್ತಕ ಪ್ರಕಟನೆಯ ಸಹಾಯಕ ನಿರ್ದೇಶಕರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಅಧ್ಯಯನ ಅವಧಿಯಲ್ಲಿ ವಿಶ್ವಾಸ ತೋರಿಸಿದ ಡಾ. ಎಂ. ಚಂದ್ರ ಪೂಜಾರಿ, ಡಾ. ಸಿದ್ಧಗಂಗಮ್ಮ, ಡಾ. ಎಚ್ ಡಿ ಪ್ರಶಾಂತ್, ಡಾ. ವಿರೂಪಾಕ್ಷ ಪೂಜಾರಹಳ್ಳಿ ಡಾ. ಪಾಂಡರಂಗಬಾಬು, ಡಾ. ಪಿ ಮಹಾದೇವಯ್ಯ, ಡಾ. ಜಕ್ಕಪಾರ್ಥಸಾರಥಿ, ಡಾ. ಕಿಕ್ಕೇರಿ ನಾರಾಯಣ, ಡಾ ಅಬ್ದುಲ್ ಅಜೀಜ್ ಸಾಹೇಬ್, ಡಾ. ಬಿ ಎಂ ಪುಟ್ಟಯ್ಯ, ಡಾ. ಮೊಗಳ್ಳಿ ಗಣೇಶ್, ಡಾ. ಎರಿಸ್ವಾಮಿ, ಡಾ. ನಾಗಪುಷ್ಪಲತಾ, ಚಿನ್ಮಯ ಹಾಗೂ ಚೇತನ್ ಕುಮಾರ್ ಅವರಿಗೂ ಅಭಾರಿಯಾಗಿರುವೆ.

ಸದಾ ನನ್ನ ಶ್ರೇಯಸ್ಸನ್ನು ಹಾಗೂ ಸಂಶೋಧನೆ ಮಾಡಬೇಕೆಂಬ ನನ್ನ ಆಸೆಗೆ ನೀರೆರೆದು ಪ್ರೋತ್ಸಾಹಿಸಿ ಆರ್ಶೀವದಿಸಿದ ನನ್ನ ಅಜ್ಜಿ ಸಣ್ಣೀರಮ್ಮ, ತಂದೆ ದುರುಗಪ್ಪ, ತಾಯಿ ದುರುಗಮ್ಮ, ತಂಗಿ ಲಕ್ಷ್ಮಿ ಡಿ ಎನ್. ಸಹೊದರರಾದ ಶಿವಣ್ಣ ಡಿ ಎನ್, ಉಮಾಮಹೇಶ್ವರ ಎನ್ ಡಿ (ಪೋಲೀಸ್ ಇಲಾಖೆ), ಕುಮಾರಸ್ವಾಮಿ ಡಿ ಎನ್ (BMTC, ಬೆಂಗಳೂರು), ಹರೀಶ ಡಿ ಎನ್ ಮತ್ತು ದೊಡ್ಡಮನೆ ವಂಶಸ್ಥರಿಗೆ ಹಾಗೆಯೇ ನೇರ್ಲಹಳ್ಳಿ ಎಲ್ಲ ಗ್ರಾಮದ ಹಿರಿಯರನ್ನು ನೆನಯುತ್ತೇನೆ.

ಈ ಸಂಶೋಧನೆಗೆ ಸೂಕ್ತ ಸಲಹೆ ಮತ್ತು ಜೀವನದ ಪಾಠವನ್ನು ಕಲಿಸಿದ ನನ್ನ ಪ್ರೀತಿಯ ಗುರುಗಳಾದ ತಿಪ್ಪೇಸ್ವಾಮಿ ಹೆಚ್. ಓ ಪ್ರಥಮ ದರ್ಜೆ ಸಹಾಯಕರು, ಜಿಲ್ಲಾಧಿಕಾರಿಗಳ ಕಛೇರಿ, ಚಿತ್ರದುರ್ಗ, ಡಾ. ಮೇಘನಾಥ ಎ ಕೆ, ಸಂಶೋಧನಾ ಸಹಾಯಕರು, ಜಾನಪದ ವಿಶ್ವವಿದ್ಯಾಲಯ ಅವರಿಗೆ ಹೃದಯ ಪೂರ್ವಕವಾಗಿ ಕೃತಜ್ಞತೆಗಳು.

ಸೂಕ್ತವಾದ ಸಲಹೆ ಸೂಚನೆಯನ್ನು ನೀಡಿದ ಹಾಗೂ ಯಾವಾಗಲೂ ನನ್ನ ಏಳಿಗೆ ಬಯಸುವ ಸನ್ಮಿತ್ರರಾದ ಹೇಮಾವತಿ ಬಿ ಹೆಚ್, ಸನ್ಮಿತ್ರರಾದ ಹೊನ್ನೂರಸ್ವಾಮಿ ಹೆಚ್, ನಾಗರಾಜ ಎನ್ ಟಿ, ಸಹಾಯಕ ಪ್ರಾಧ್ಯಾಪಕರು, ಡಾ. ಕುಮಾರ್ ಆರ್ ಬಿ, ತಿಪ್ಪೇಸ್ವಾಮಿ ಹೆಚ್, ನಾಗೇಶ ಎಂ, ಡಾ. ರಾಧಮ್ಮ, ಶಾರದ ಬಿ, ದಾಸರ ಪ್ರತಿಭಾ, ಶರಣಪ್ಪ, ಶಶಿಕಲಾ ಟಿ, ಸಂತೋಷ ಕುಮಾರ ಜಿ ಡಿ, ಕಾಟಂಲಿಂಗಯ್ಯ ಪಿ, ರಾಧ ಟಿ, ಡಾ. ಅಕ್ಕಮ್ಮ ಟಿ, ಡಾ. ಮಂಜಪ್ಪ ಹೆಚ್ ಬಿ, ನಾಗರಾಜ ಜಿ ಎಸ್, ವಿರುಪಾಕ್ಷಪ್ಪ ಜಿ, ರಾಮಕೃಷ್ಣ ಡಿ ಸಿ, ಶ್ರೀಧರ, ದೇವೇಂದ್ರಪ್ಪ ಹೆಚ್, ಶಿಲ್ಪ ಕೆ ಎಚ್, ರಾಜೇಶ್ವರಿ ಎಸ್, ಯುವರಾಜ ಎನ್ ಕೆ, ವೇಷ್ಗಾರು ರಾಮಾಂಜೀನಯ, ಅಂಜಿನಪ್ಪ ಗಡಾದ, ವೆಂಕಟೇಶ್ ಹೆಚ್, ಪ್ರವೀಣ ಕುಮಾರ್, ನಾಗಪ್ಪ, ಅಶ್ವಿನಿ ಬಿ, ಚಂದ್ರ ಕಂಬಾರ್ ಅವರಿಗೆ ಹಾಗೂ ಎಂ ಎ ಪಿಎಚ್. ಡಿ ಸಮಾಜಶಾಸ್ತ್ರದ ಪ್ರೀಯ ವಿದ್ಯಾರ್ಥಿಗಳಿಗೆ ಮನಃಪೂರ್ವಕ ಕೃತಜ್ಞತೆಗಳು.

ನನ್ನ ಕ್ಷೇತ್ರಕಾರ್ಯದ ಬರವಣಿಗೆ ಸಂದರ್ಭದಲ್ಲಿ ಹೆಚ್ಚಿನ ಮಾಹಿತಿಯನ್ನು ನೀಡಿದ ವಕ್ತೃಗಳಿಗೆ ನನ್ನ ಕೃತಜ್ಞತೆಗಳು. ಹಾಗೆಯೇ ಗ್ರಂಥಾಲಯ ವಿಭಾಗದಲ್ಲಿ ಮಾಹಿತಿ ನೀಡಿದಂತಹ ಗ್ರಂಥಪಾಲಕರು, ಬುಡಕಟ್ಟು ಅಧ್ಯಯನ ವಿಭಾಗದ ಸಿಬ್ಬಂದಿಗಳಿಗೂ ಮತ್ತು ಪ್ರತ್ಯೇಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಕೃತಜ್ಞತೆಗಳು.

ಅಂತಿಮ ಹಾಗೂ ಪ್ರಮುಖವಾಗಿ ನನ್ನ ಸಂಶೋಧನಾ ಪ್ರಬಂಧದ ನಿರ್ಮಾಣದ ಮುದ್ರಣ ಕಾರ್ಯದಲ್ಲಿ ಯಾವುದೇ ಸಮಯದ ಮಿತಿಯಿಲ್ಲದೆ ತಕ್ಷಣದಲ್ಲೇ ತ್ವರಿತವಾಗಿ ಅಚ್ಚುಕಟ್ಟಾಗಿ ಸಕಾಲದಲ್ಲಿ ಮಹಾಪ್ರಬಂಧವನ್ನು ಅಂತಿಮವಾಗಿ ಸುಂದರ ಪುಟವಿನ್ಯಾಸ ಮಾಡಿಕೊಟ್ಟ ಮಂಜುನಾಥ ಡಿ. ಕಮಲಾಪುರ, ಇವರಿಗೆ ನಾನು ಅಭಾರಿಯಾಗಿರುವೆ.

ರಾಜಣ್ಣ ಡಿ

ಪರಿವಿಡಿ

ಅಧ್ಯಾಯ: ಒಂದು
ಪ್ರವೇಶ

೧.೧ ಪ್ರಸ್ತಾವನೆ

೧.೨ ಅಧ್ಯಯನದ ಉದ್ದೇಶ

೧.೩ ಅಧ್ಯಯನದ ವ್ಯಾಪ್ತಿ

೧.೪ ಅಧ್ಯಯನದ ಪ್ರಮೇಯಗಳು

೧.೫ ಅಧ್ಯಯನದ ಮಹತ್ವ

೧.೬ ಇಲ್ಲಿಯವರೆಗೆ ನಡೆದ ಅಧ್ಯಯನದ ಸಮೀಕ್ಷೆ

೧.೭ ಸಂಶೋಧನಾ ವಿಧಾನಗಳು

೧.೮ ಸಂಶೋಧನಾ ವಿನ್ಯಾಸ

ಅಧ್ಯಾಯ: ಒಂದು
ಪ್ರವೇಶ

೧.೧ ಪ್ರಸ್ತಾವನೆ

ಮಾನವನ ಸೃಷ್ಟಿಯನ್ನು ಗುರುತಿಸುವುದು ಬಹಳ ಕಷ್ಟದ ಕೆಲಸ. ಹಿಂದಿನಿಂದಲೂ ಪ್ರಕೃತಿಯ ಜೊತೆಗೆ ಮಾನವ ಅವಿನಾಭಾವ ಸಂಬಂಧವನ್ನು ಹೊಂದಿಕೊಂಡು ಬೆಳೆದು ಬಂದಿದ್ದಾನೆ. ಸೃಷ್ಟಿಯ ಒಡಲಲ್ಲಿ ಕೋಟ್ಯಾಂತರ ಜೀವರಾಶಿಗಳು ಜನ್ಮತಾಳಿವೆ. ಇವುಗಳಲ್ಲಿ ಮಾನವ ಬುದ್ಧಿಜೀವಿಯಾಗಿ, ಸಮಾಜದಲ್ಲಿ ಅತ್ಯಂತ ವೈಶಿಷ್ಟ್ಯಪೂರ್ಣವಾಗಿ ಕಂಡುಬರುತ್ತಾನೆ. ಬೇರೆ ಬೇರೆ ಜೀವಿಗಳಿಗೆ ಹೋಲಿಸಿದರೆ ಮಾತನಾಡುವ ಶಕ್ತಿ, ಆಲೋಚಿಸುವ ಶಕ್ತಿ, ಜ್ಞಾಪಕಶಕ್ತಿ, ಸಂತೋಷಪಡುವ ಮತ್ತು ವೈಚಾರಿಕವಾಗಿ ನೋಡುವ ಕ್ರಮ ಮಾನವನಿಂದ ಮಾತ್ರ ಸಾಧ್ಯವಾಗಿದೆ. ಆದ್ದರಿಂದ ದಿನದಿಂದ ದಿನಕ್ಕೆ ವೈವಿಧ್ಯತೆಯನ್ನು ಸೃಷ್ಟಿಸಿಕೊಳ್ಳುತ್ತಾ ಸಾಗಿದ್ದಾನೆ. ಜಗತ್ತಿನಲ್ಲಿ ಮಾನವ ಹೊಸ ಇತಿಹಾಸವನ್ನು ಸೃಷ್ಟಿಸುವ ಹಾಗೂ ಹೊಸ ಯುಗ ನಿರ್ಮಾಣ ಮಾಡುವಲ್ಲಿ ಮುಖ್ಯ ಪಾತ್ರಧಾರಿಯಾಗಿದ್ದಾನೆ.

ಇಂದಿನ ಸಮಾಜ ಬಂಡವಾಳಶಾಹಿ, ವರ್ಣಬೇದ, ದಾರಿದ್ರ್ಯ ಎಂಬ ಮೂರು ಬಗೆಯ ಅನ್ಯಾಯಗಳಿಂದ ತತ್ತರಿಸಿ ಹೋಗುತ್ತಿದೆ. ಪ್ರಜಾಪ್ರಭುತ್ವದಲ್ಲಿ ಸಮಾನತೆ ಅರ್ಥ ಬರಬೇಕಾದರೆ ಜಾತಿ ನಾಶವಾಗಬೇಕು. ಬಡತನ ನಿರ್ಮೂಲನೆಯಾಗಬೇಕಾದಲ್ಲಿ ಸಂಪತ್ತಿನ ಸಮಾನ ಹಂಚಿಕೆಯಾಗಬೇಕು. ಕೈಗಾರಿಕೆಗಳು ಮತ್ತು ಭೂಮಿ ಎರಡು ರಾಷ್ಟ್ರೀಕರಣವಾಗಬೇಕು. ರಾಷ್ಟ್ರೀಕರಣ ಮತ್ತು ಸಹಕಾರಿ ಕ್ಷೇತ್ರಗಳ ಮೂಲಕ ಸರ್ವಕಲ್ಯಾಣ ಸಾಧ್ಯವಾಗುತ್ತದೆ ಮತ್ತು ಸಮಾನತೆಯ ಸಮಾಜ ನಿರ್ಮಾಣವಾಗುತ್ತದೆ ಎನ್ನುವ ಬಹುದೊಡ್ಡ ಆಶಯವನ್ನು ಅಂಬೇಡ್ಕರ್ ಅವರು ಹೊಂದಿದ್ದರು. ಈ ದೇಶದ ಅಸಂಖ್ಯಾತ ದಲಿತರು ಭೂರಹಿತರಾಗಿದ್ದಾರೆ. ದಲಿತರು ಅಸ್ಪೃಶ್ಯತೆಯ ನೋವಿನಲ್ಲಿ ನರಳುತ್ತಿದ್ದಾರೆ. ಇಂತಹ ಸಾವಿರರು ಸಮಸ್ಯೆಗಳಿಗೆ ಒಂದೇ ಮದ್ದು; ಅದು ಶಿಕ್ಷಣ. ಜನ ಸಮುದಾಯಗಳಲ್ಲಿ ಶಿಕ್ಷಣ ಯಾವಾಗ ಪ್ರವೇಶವಾಯಿತೋ ಆಗ ಸಾಮಾಜಿಕ ವ್ಯವಸ್ಥೆಯು ನಿರಂತರವಾಗಿ ಪರಿವರ್ತನೆಯನ್ನು ಹೊಂದಿತ್ತು. ಬದಲಾಗುತ್ತಾ ಸಾಗುವ ಜನರ ಮನೋಭಿಲಾಷೆಗಳಿಗೆ ತಕ್ಕಂತೆ ಆ ಸಾಮಾಜಿಕ ಕಟ್ಟುಪಾಡುಗಳು, ವಿಧಿ-ವಿಧಾನಗಳು ಸಹ ಹೊಸ ರೂಪವನ್ನು ಪಡೆಯುತ್ತಿವೆ. ಏಕೆಂದರೆ

ಸಮಾಜ ನಿಂತ ನೀರಲ್ಲ, ಹರಿಯುವ ನದಿ ನೀರಿನಂತೆ. ಬದಲಾವಣೆ ಎಂಬುದು ಕೂಡ ಸಾಮಾಜಿಕ ವ್ಯವಸ್ಥೆಯ ಸಹಜ ಪ್ರಕ್ರಿಯೆ, ಇದು ಪ್ರಪಂಚದ ಎಲ್ಲಾ ಜನ ಸಮುದಾಯಗಳಿಗೂ ಅನ್ವಯವಾಗುತ್ತದೆ.

ಪ್ರಾಚೀನ ಕಾಲದ ಭಾರತದಲ್ಲಿ ಸಮಾಜವು ವರ್ಣ ವ್ಯವಸ್ಥೆಯಿಂದ ಪ್ರಾರಂಭವಾಗಿ ನಂತರ ಜಾತಿಯಾಗಿ ಬೆಳೆದುಕೊಂಡು ಬಂದಿದೆ. ಸಾವಿರಾರು ಜಾತಿ-ಉಪಜಾತಿಗಳು, ಹಲವಾರು ಭಾಷೆಗಳು, ವಿವಿಧ ಧರ್ಮಗಳು, ವಿವಿಧ ಸಮುದಾಯಗಳನ್ನು ಹೊಂದಿದೆ. ಇಂತಹ ಸಮಾಜದಲ್ಲಿ ಸಂವಿಧಾನ ಎಲ್ಲರಿಗೂ ಸಮಾನತೆಯನ್ನು ಕಲ್ಪಿಸಿದೆ. ಸರ್ವರಿಗೂ ಸಮಬಾಳು, ಸರ್ವರಿಗೂ ಸಮಪಾಲು ಎಂಬ ಸಮಾನ ಭಾವನೆಗಳನ್ನು. ಈ ರೀತಿಯ ವಿಶಾಲವಾದ ಮನೋಭಾವನೆ ಬರಬೇಕಾದರೆ, ನಿರ್ದಿಷ್ಟ ಗುರಿಯ ಕಡೆಗೆ ಕರೆದುಕೊಂಡು ಹೋಗಲು ಶಿಕ್ಷಣದಿಂದ ಮಾತ್ರ ಸಾಧ್ಯ. ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆ ಯಶಸ್ವಿಯಾಗಬೇಕಾದರೆ ಎಲ್ಲರಿಗೂ ಶಿಕ್ಷಣ ಅಗತ್ಯ. ಅದರಿಂದ ಸಾಮಾಜಿಕ ಕೆಳಸ್ಥರದಿಂದ ಮೇಲೆ ಬರಲು ಸಾಧ್ಯವಾಗುತ್ತದೆ.

ಪ್ರಸ್ತುತ ಅಧ್ಯಯನವು ಮಧ್ಯಕರ್ನಾಟಕದ ಚಿತ್ರದುರ್ಗ ಜಿಲ್ಲೆಯನ್ನು ಕೇಂದ್ರೀಕರಿಸಿದೆ. ಇದು ಪಾರಂಪರಿಕ ಐತಿಹಾಸಿಕ ಹಿನ್ನೆಲೆಯುಳ್ಳ ಜಿಲ್ಲೆಯಾಗಿದೆ. ಈ ಜಿಲ್ಲೆಯಲ್ಲಿ ನೆಲೆಯೂರಿರುವ ಮಾದಿಗ ಸಮುದಾಯದ ಸಾಮಾಜಿಕ ಬದಲಾವಣೆ ಬಗ್ಗೆ ಅಧ್ಯಯನವನ್ನು ಮಾಡಲಾಗಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ ಮಾದಿಗ ಸಮುದಾಯದವರು ಹಿಂದಿನಿಂದಲೂ ಸಾಮಾಜಿಕವಾಗಿ ಅಸ್ಪೃಶ್ಯತೆಗೆ ಸಿಲಿಕಿಕೊಂಡು ನರಳುತ್ತ ಬಂದಿದ್ದಾರೆ. ಕ್ರಮವಿಲ್ಲದ ಬದುಕು, ನೆಲೆಯಿಲ್ಲದ ವಾಸವನ್ನು, ಆರೋಗ್ಯವಿಲ್ಲದ ಶರೀರ, ಹೊತ್ತಿಗೂ ಊಟವಿಲ್ಲದ ಹೊಟ್ಟೆ ಈ ಇದು ಮಾದಿಗ ಸಮುದಾಯದ ಜೀವನದ ವಾಸ್ತವ ಸ್ಥಿತಿ. ಅವುಗಳಲ್ಲಿ ಮಾದಿಗರಹಟ್ಟಿ, ಎಕೆ ಹಟ್ಟಿ, ಹರಿಜನಹಟ್ಟಿ ಅಥವಾ ಹರಿಜನ ಕೇರಿಯಂತಹ ಬಹುಬಗೆಯ ಹೆಸರಿನಿಂದ ಕರೆಯುವದನ್ನು ನೋಡಬಹುದು.

ಈ ಅಧ್ಯಯನದಲ್ಲಿ ಮಾದಿಗರ ರಚನಾತ್ಮಕವಾದ ಜೀವನಕ್ರಮ ತಿಳಿಯಲಾಗಿದೆ. ಮಾದಿಗ ಸಮುದಾಯದ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ತಿಳಿಯಲು ಪ್ರಯತ್ನಿಸಲಾಗಿದೆ. ಅವರಲ್ಲಿ ಆಗಿರುವ ಸಾಮಾಜಿಕ ಬದಲಾವಣೆ ಏನು ಎಂಬುದನ್ನು ತಿಳಿಯಲು ಪ್ರಯತ್ನಿಸಲಾಗಿದೆ. ಪ್ರಸ್ತುತ ಅಧ್ಯಯನವು ಮಾದಿಗ ಸಮುದಾಯದ ಮೂಲ, ಬೆಳವಣಿಗೆ, ಸಾಮಾಜಿಕ ಬದುಕಿನ ಚಿತ್ರಣವನ್ನು ಕಟ್ಟಿಕೊಂಡಿರುವ ಬಗೆ, ತಮ್ಮ ಸಮುದಾಯದ ಸಾಂಸ್ಕೃತಿಕ ಮೂಲ ಪುರುಷರ ರೀತಿ ನೀತಿಗಳು ಮತ್ತು ಕಟ್ಟಳೆಗಳೊಂದಿಗೆ ಹೇಗೆ ಜೀವನವನ್ನು ರೂಪಿಸಿಕೊಂಡಿದ್ದಾರೆ ಎಂಬುದನ್ನು ತಿಳಿಯಲು ಕೇಂದ್ರಿಕರಿಸುತ್ತದೆ. ಈ ಸಮುದಾಯವು ಚಿತ್ರದುರ್ಗ, ಹೊಳಲ್ಕೆರೆ, ಹೊಸದುರ್ಗ, ಹಿರಿಯೂರು, ಚಳ್ಳಕೆರೆ ಹಾಗೂ ಮೊಳಕಾಲ್ಮೂರು ತಾಲ್ಲೂಕುಗಳಲ್ಲಿ ವ್ಯಾಪಕವಾಗಿ ನೆಲೆಸಿದ್ದಾರೆ. ಮಾದಿಗ ಸಮುದಾಯದ ಜೀವನಾವರ್ತನ ಆಚರಣೆಗಳಾದ ಜನನ, ನಾಮಕರಣ, ಋತುಮತಿ, ವಿವಾಹ, ಸೀಮಂತ, ಮರಣ ಇವುಗಳಲ್ಲಿ ಸಂಪ್ರದಾಯಬದ್ಧವಾದ ನೀತಿ ನಿಯಮ ಕಟ್ಟಳೆಗಳೊಂದಿಗೆ ಹೇಗೆ ಮಿಳಿತಗೊಂಡಿವೆ ಎಂಬುದನ್ನು ಪ್ರಸ್ತುತ ಅಧ್ಯಯನದಲ್ಲಿ ತಿಳಿಯಲು ಪ್ರಯತ್ನಿಸಲಾಗಿದೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಜಾಗತೀಕರಣ, ಶಿಕ್ಷಣದ ಪ್ರಭಾವದಲ್ಲಿ ಮಾದಿಗ ಸಮುದಾಯ ನಂಬಿಕೆಗಳು, ಮೌಲ್ಯಗಳು, ಹಬ್ಬಗಳು, ಸಂಪ್ರದಾಯಗಳು, ವಿಧಿನಿಷೇಧಗಳು, ಕಲಾರಾಧನೆ, ಸಾಹಿತ್ಯ, ಕಲೆ, ನೃತ್ಯ ಇವುಗಳನ್ನು ಉಳಿಸಿ ಬೆಳೆಸಿಕೊಂಡು ಬಂದ ರೀತಿಯನ್ನು ಅಧ್ಯಯನದ ಮೂಲಕ ತಿಳಿಯಲು ಪ್ರಯತ್ನಿಸಲಾಗಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ ನೆಲೆಸಿರುವ ಮಾದಿಗ ಸಮುದಾಯದವರು ಸಾಮಾಜಿಕವಾಗಿ, ಆರ್ಥಿಕವಾಗಿ, ಧಾರ್ಮಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಸಮಾಜದಲ್ಲಿ ಮುಂದೆಸಾಗಲು ಪ್ರಯತ್ನ ಮಾಡುತ್ತಿರುವ ಅಂಶಗಳನ್ನು ಅಧ್ಯಯನಕ್ಕೊಳಪಡಿಸಲಾಗಿದೆ.

೧.೨ ಅಧ್ಯಯನದ ವ್ಯಾಪ್ತಿ

ಸಂಶೋಧಕನು ಒಂದು ಅಧ್ಯಯನವನ್ನು ಪರಿಪೂರ್ಣವಾಗಿ ಅಥವಾ ಸೃಷ್ಟಿ ಮತ್ತು ವಸ್ತುನಿಷ್ಠವಾಗಿ ಎಲ್ಲಾ ಅಂಶಗಳನ್ನೊಳಗೊಂಡಂತೆ ಸಂಶೋಧನಾ ಕಾರ್ಯ ನಿರ್ವಹಿಸಬೇಕಾದರೆ. ಅಧ್ಯಯನಕ್ಕೊಂದು ನಿರ್ದಿಷ್ಟವಾದ ವ್ಯಾಪ್ತಿ ಸರಹದ್ದು ಅವಶ್ಯಕ ಆಗ ಮಾತ್ರ ಈ ಕ್ಷೇತ್ರದಲ್ಲಿ ಯಶಸ್ಸು ಸಾಧಿಸಬಹುದಾಗಿದೆ. ಈ ದೃಷ್ಟಿಯಿಂದ ಅಧ್ಯಯನ ವ್ಯಾಪ್ತಿ ಬಹಳ ಮುಖ್ಯವಾಗಿ ಒಂದು ಕ್ಷೇತ್ರವನ್ನು ಮಾತ್ರ ಆಯ್ಕೆ ಮಾಡಿಕೊಳ್ಳಬೇಕು.

ಪ್ರಸ್ತುತ ಅಧ್ಯಯನಕ್ಕೆ ಚಿತ್ರದುರ್ಗ ಜಿಲ್ಲೆಯನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ ಮಾದಿಗ ಸಮುದಾಯ ಕಂಡುಬರುವ ತಾಲೂಕುಗಳೆಂದರೆ ಚಿತ್ರದುರ್ಗ, ಹೊಸದುರ್ಗ, ಮೊಳಕಾಲ್ಮೂರು, ಹಿರಿಯೂರು, ಹೊಳಲ್ಕೆರೆ ಮತ್ತು ಚಳ್ಳಕೆರೆ ಈ ಎಲ್ಲ ತಾಲೂಕುಗಳ ಮಾದಿಗ ಸಮುದಾಯದವರು ಇದ್ದಾರೆ. ಚಿತ್ರದುರ್ಗ ಜಿಲ್ಲೆಯಲ್ಲಿ ಕಂಡುಬರುವ ಮಾದಿಗ ಸಮುದಾಯವನ್ನು ಪ್ರಸ್ತುತ ಸಂಶೋಧನೆಯ ಅಧ್ಯಯನದ ಕಾರ್ಯವ್ಯಾಪ್ತಿಯನ್ನಾಗಿ ಆಯ್ಕೆ ಮಾಡಿಕೊಂಡು ಮಹಾಪ್ರಬಂಧವನ್ನು ರಚಿಸಲಾಗಿದೆ.

೧.೩ ಅಧ್ಯಯನದ ಮಹತ್ವ

ಮಾದಿಗ ಸಮುದಾಯವನ್ನು ಕುರಿತು ಹಲವಾರು ಅಧ್ಯಯನಗಳು ನಡೆದಿವೆ. ಅದರೆ ಇಲ್ಲಿಯವರೆಗೆ ಮಾದಿಗ ಸಮುದಾಯದ ಸಾಮಾಜಿಕ ಬದಲಾವಣೆ ಕುರಿತು ಕನ್ನಡದಲ್ಲಿ ಯಾವುದೇ ತರಹದ ಅಧ್ಯಯನಗಳು ನಡೆದಿರುವುದಿಲ್ಲ. ಹೀಗಾಗಿ ಮಾದಿಗ ಸಮುದಾಯದ ಸಾಮಾಜಿಕ ಬದಲಾವಣೆಯನ್ನು ತಿಳಿಸುವ ಅಧ್ಯಯನಗಳಲ್ಲಿ ಈ ಅಧ್ಯಯನವು ಮೊದಲ ಪ್ರಯತ್ನವಾಗಿದೆ. ಈ ಅಧ್ಯಯನದಿಂದ ಈ ಸಮುದಾಯ ಆಧುನಿಕತೆ ಮತ್ತು ಜಾಗತೀಕರಣದ ಹಿನ್ನೆಲೆಯಲ್ಲಿ ಸಾಮಾಜಿಕವಾಗಿ ಆರ್ಥಿಕವಾಗಿ ಹೇಗೆ ಬದಲಾವಣೆಗೆ ಒಳಗಾಗುತ್ತಿದ್ದಾರೆ ಎಂದು ತಿಳಿಯಲು ಸಾಧ್ಯ.

ಜೊತೆಗೆ ಪ್ರಸ್ತುತ ಸಮಾಜದಲ್ಲಿ ಮಾದಿಗ ಸಮುದಾಯವು ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿದೆ. ಅಂತಹ ಸಮಸ್ಯೆಗಳಲ್ಲಿ ಮುಖ್ಯವಾಗಿ ಬಾಲ್ಯವಿವಾಹ, ದೇವದಾಸಿ ಪದ್ಧತಿ, ಜಾತೀಯತೆ, ಅಸ್ಪೃಶ್ಯತೆ ಆಚರಣೆ, ಬಾಲ ಕಾರ್ಮಿಕ ಪದ್ಧತಿ, ಬಡತನ, ವಸತಿ ಸಮಸ್ಯೆ, ಆರೋಗ್ಯ ಸಮಸ್ಯೆ ಇತ್ಯಾದಿಗಳು ಇಂತಹ ಸಮಸ್ಯೆಗಳಿಗೆ ಸೂಕ್ತವಾದ ಪರಿಹಾರ ಕ್ರಮಗಳನ್ನು ಕಂಡುಕೊಂಡು ಅವುಗಳ ಮೂಲಕ ಸಮುದಾಯದ ಸಮಗ್ರ ಅಭಿವೃದ್ಧಿ ಸಾಧಿಸಲು ಸಾಧ್ಯವಾಗುತ್ತದೆ. ಈ ಸಮುದಾಯದ ಸಾಮಾಜಿಕ,

ಆರ್ಥಿಕ, ಧಾರ್ಮಿಕ, ಶೈಕ್ಷಣಿಕ, ರಾಜಕೀಯ ಅಂಶಗಳನ್ನು ಅಧ್ಯಯನ ಮಾಡುವುದರ ಮೂಲಕ ಇಡೀ ಸಂಸ್ಕೃತಿಯ ಚಹರೆಯನ್ನು ಪರಿಚಯಿಸುವುದಾಗಿದೆ. ಈ ಸಮುದಾಯವು ನಿರಂತರವಾಗಿ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ನಿರ್ಲಕ್ಷ್ಯಗೆ ಒಳಗಾಗಿರುವುದರಿಂದ ಅವುಗಳ ಸ್ವರೂಪವನ್ನು ವಿಶ್ಲೇಷಿಸಲಾಗಿದೆ. ಬಹುಮುಖ್ಯವಾಗಿ ಈ ಸಮುದಾಯವು ನಾಗರೀಕ ಸಮಾಜದಿಂದ ಬಲುದೂರ ಉಳಿದಿದೆ. ಈ ಕಾರಣಕ್ಕಾಗಿ ಇಂತಹ ನಿರ್ಲಕ್ಷಿತ ಸಮುದಾಯವನ್ನು ಅಧ್ಯಯನ ಮಾಡುವುದು ಮುಖ್ಯವಾಗಿದೆ.

ಮಾದಿಗ ಸಮುದಾಯವು ತನ್ನ ಸಾಂಪ್ರದಾಯಿಕ ಜೀವನ ಸ್ವರೂಪವನ್ನು ನಿಧಾನವಾಗಿ ಕಳಚಿಹಾಕಲು ಪ್ರಯತ್ನಿಸುತ್ತಿರುವುದು ಈ ಅಧ್ಯಯನದಲ್ಲಿ ತಿಳಿದುಬರುತ್ತದೆ. ಸಮುದಾಯದ ಯುವಕರಲ್ಲಿ ಉಂಟಾದ ಬದಲಾವಣೆಗಳು, ಮಹಿಳೆಯರಲ್ಲಿ ಉಂಟಾದ ಬದಲಾವಣೆಗಳು ಯಾವ ಸ್ವರೂಪದಲ್ಲಿವೆ ಎಂಬುದನ್ನು ತಿಳಿಯಲು ಸಾದ್ಯ. ಹಾಗೇ ಚಿತ್ರದುರ್ಗ ಜಿಲ್ಲೆಯ ಮಾದಿಗ ಸಮುದಾಯದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಸಾಂಸ್ಕೃತಿಕ, ರಾಜಕೀಯ ಸ್ಥಿತಿ ಗತಿಗಳನ್ನು ಈ ಅಧ್ಯಯನದ ಮೂಲಕ ಕಂಡುಕೊಳ್ಳವುದು ಮಹತ್ವವಾದಗಿದೆ.

೧.೪ ಇಲ್ಲಿಯವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

ಈ ಮೊದಲು ಪ್ರಸ್ತಾಪಿಸಿದಂತೆ ಚಿತ್ರದುರ್ಗ ಜಿಲ್ಲೆಯ ಮಾದಿಗ ಸಮುದಾಯದ ಸಮಾಜಶಾಸ್ತ್ರೀಯ ನೆಲೆಯ ಅಧ್ಯಯನ ಇದುವರೆಗೆ ನಡೆದಿಲ್ಲ. ಆದಾಗ್ಯೂ ಚಾರಿತ್ರಿಕ, ಸಾಹಿತ್ಯಕ ನೆಲೆಗಳಲ್ಲಿ ಅಧ್ಯಯನಗಳಾಗಿವೆ. ಕರ್ನಾಟಕ ರಾಜ್ಯ ಮತ್ತು ದೇಶಕ್ಕೆ ಸಂಬಂಧಿಸಿದಂತೆ ಮಾದಿಗ ಸಮುದಾಯವನ್ನು ಅನುಲಕ್ಷಿಸಿ ಅನೇಕ ಅಧ್ಯಯನಗಳು ನಡೆದಿವೆ–ನಡೆಯುತ್ತಿವೆ. ಪ್ರಸ್ತುತ ಅಧ್ಯಯನ ವ್ಯಾಪ್ತಿಯಾದ ಚಿತ್ರದುರ್ಗ ಜಿಲ್ಲೆಗೆ ಸಂಬಂಧಿಸಿದಂತೆ ಮಾದಿಗ ಸಮುದಾಯವನ್ನು ವಿಷಯವನ್ನಾಗಿಸಿಕೊಂಡ ಅಧ್ಯಯನಗಳನ್ನು ಇಲ್ಲಿ ಸಮೀಕ್ಷಿಸಲಾಗಿದೆ. ಹಾಗೆಯೇ ರಾಜ್ಯಕ್ಕೆ ಸಂಬಂಧಿಸಿದ ಪ್ರಮುಖ ಅಧ್ಯಯನಗಳನ್ನು ಸಮೀಕ್ಷಿಸಲಾಗಿದೆ.

ಹಯವದನರಾವ್ ಅವರು, **"ದ ಮೈಸೂರು ಟ್ರೈಬ್ಸ ಮತ್ತು ಕ್ಯಾಸ್ಟ್"** (೧೯೦೧) ನಾಲ್ಕನೆಯ ಸಂಪುಟದಲ್ಲಿ ಮಾದಿಗರ ಬಗೆಗೆ ವಿವರಣೆ ಸಿಗುತ್ತದೆ. ಮಾದಿಗರ ಹುಟ್ಟಿನ ಬಗೆಗಿನ ಕತೆಯನ್ನು ಹೇಳಲಾಗಿದೆ.

ಕೇಂದ್ರ ಸರ್ಕಾರದ, **"ಅಂತ್ರೋಪಾಲಜಿಕಲ್ ಸರ್ವೇ ಆಫ್ ಇಂಡಿಯ"** ೧೯೬೧ರಲ್ಲಿ ಸಂಪಾದಿಸಿದ ಎಂಥೋಗ್ರಾಫಿಕ್ ನೋಟ್ಸ್ ಆನ್ ಎಸ್‌ಸಿ ಎಂಬ ಪುಸ್ತಕದಲ್ಲಿ ದಕ್ಕಲಗಾರ್ ಇವರನ್ನು ವಜಂತ್ರಿಮಾಂಗ್ ಜಾತಿಯ ಉಪಜಾತಿ ಎಂದು ಹೇಳಲಾಗಿದೆ. ಮಾಂಗ್ಸ್ ಅಥವಾ ಮಾದಿಗರಲ್ಲಿ ಎಂಥೋವಿನ್ ಆರ್ ಇ ರವರು ಅಸಾದರು, ಚನ್ನ ಹೊಲೆಯ ಮೊದಲುಗೊಂಡು ದೊಕ್ಕಲೇರು, ದಬಕೆ, ಮಾದಿಗ, ದಲ್ಯ, ಡೋರರು, ಮಾಂಗ್ಸ್‌ಗಡ್ಡೀರು, ಮಾಂಗ್ಸ್‌ಗಡಿಗೇರ್, ಮಿಣಿ ಮಾದಿಗರು, ಮೋಚಿಗಾರ್ ಅಥವಾ

ಮೋಚಿ, ಪೆದ್ದ ಮಾಂಗ್‌ರಾಹುತ್, ವಜಂತ್ರಿ ಅಥವಾ ಸನಾದಿ ಎಂದು ಒಟ್ಟು ೧೩ ಉಪಜಾತಿಗಳಿರುವುದನ್ನು ಹೇಳಿ ಅದರಲ್ಲಿ ಮಾದಿಗರು ಕೂಡ ಒಂದು ಎಂದಿದ್ದಾರೆ.

ಕಮಲಾಕ್ಷ ಪಿ ಅವರ, **"ದಕ್ಷಿಣ ಕನ್ನಡ ಜಿಲ್ಲೆಯ ಹರಿಜನ ಮತ್ತು ಗಿರಿಜನ ಸಾಮಾಜಿಕ ಇತಿಹಾಸ"** (೧೯೬೮) ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಹರಿಜನ ಮತ್ತು ಗಿರಿಜನ ಸಾಮಾಜಿಕ ಇತಿಹಾಸವನ್ನು ಸಂಕ್ಷಿಪ್ತವಾಗಿ ನೀಡಿದೆ. ಮಾದಿಗ ಪಂಗಡದವರು ಮೂಲತಃ ತೆಲುಗು ದೇಶದವರೆಂದು ಹೇಳಲಾಗಿದೆ. ತಮಿಳು ದೇಶದಲ್ಲಿ ಕೂಡಾ ಇವರು ಅಧಿಕ ಸಂಖ್ಯೆಯಲ್ಲಿರುವರು. ಆದರೆ ತೆಲುಗು ದೇಶದಲ್ಲಿರುವಷ್ಟು ಇವರ ಸಂಖ್ಯೆ ಭಾರತದ ಇನ್ನಾವ ಪ್ರಾಂತ್ಯದಲ್ಲೂ ಇಲ್ಲವಾಗಿದೆ. ನಮ್ಮ ಮೈಸೂರು ಪ್ರಾಂತ್ಯದ ಬಳ್ಳಾರಿ, ಹೊಸಪೇಟೆ, ಹಳೇ ಮೈಸೂರು, ಬೆಂಗಳೂರು ಜಿಲ್ಲೆಗಳಲ್ಲಿ ಕೂಡಾ ಇವರ ಸಂಖ್ಯೆ ಗಣನೀಯವಾಗಿದೆ. ತಮಿಳು ದೇಶದಲ್ಲಿ ಇವರನ್ನು ಚಕ್ಕಲಿಯಾನ್ ಎಂಬ ಹೆಸರಿನಿಂದ ಕರೆಯುವರು. ಮಾದಿಗರು ತಾವು ಮಾತಂಗಿಯ ಮಕ್ಕಳು, ಇನ್ನು ಕೆಲವು ಕಡೆ 'ಆದಿಜಾಂಬವರು' ಎಂದು ಕರೆದುಕೊಳ್ಳುವರು. ಮಹಾಭಾರತದ ಜಾಂಬವ ಎಂಬ ಮಹಾಮುನಿ ಹಾಗೂ ಅಂದಿನ ಕಾಡುಗುಡ್ಡ ಜನರ ನಾಯಕನ ಸಂತತಿಯವರು ಎಂಬುದಾಗಿ ಇವರ ಕೆಲವು ಪಂಗಡಗಳವರ ನಂಬಿಕೆ. ಮಾದಿಗರ ಮೂಲ ಕಸುಬು ಚರ್ಮದ ಕೈಗಾರಿಕೆ, ಚರ್ಮ ತಯಾರಿ, ಚರ್ಮದಿಂದ ಪಾದರಕ್ಷೆ, ಹಳ್ಳಿಯಲ್ಲಿ ಬಾವಿಯಿಂದ ನೀರೆತ್ತುವ ಚರ್ಮದ ಬುಟ್ಟಿ ಮತ್ತು ಹಿಂದಿನ ಕಾಲದಲ್ಲಿ ರೈತರಿಗೆ ಬೇಕಾಗುತ್ತಿದ್ದ ಚರ್ಮದ ಸಾಮಾನುಗಳು ಇವೇ ಮುಂತಾದುವುಗಳ ಕಸುಬಿನಿಂದ ಅಕ್ಕಿ, ಧಾನ್ಯಗಳ ರೂಪದಲ್ಲಿ ಸಂಬಳ ಪಡೆಯುವ ರೂಢಿಯಿತ್ತು ಎಂಬ ಅಂಶವನ್ನು ಈ ಕೃತಿಯು ವಿವರಿಸುತ್ತದೆ.

ಕೊಟಗಾನಹಳ್ಳಿ ರಾಮಯ್ಯ ಅವರು, **"ಸಿಂದ್ ಮಾದಿಗರರ ಸಂಸ್ಕೃತಿ"** (೧೯೯೩) ಪುಸ್ತಕದಲ್ಲಿ ಮಾದಿಗರ ಒಂದು ಪಂಗಡವಾದ ಸಿಂದ್ ಮಾದಿಗರನ್ನು ವಿಶೇಷವಾಗಿ ಅಧ್ಯಯನಕ್ಕಾಗಿ ಒಳಪಡಿಸಿಕೊಂಡಿದ್ದಾರೆ. ಈ ಕೃತಿಯಲ್ಲಿ ಸಿಂದ್ ಮಾದಿಗರು, ಮಾದಿಗರೊಂದಿಗೆ ಹೊಂದಿರುವ ಪೌರಾಣಿಕ ಮತ್ತು ಚಾರಿತ್ರಿಕ ಸಂಬಂಧಗಳ ಬಗ್ಗೆ ಸಾಕಷ್ಟು ವಿವರಗಳು ದೊರೆಯುತ್ತವೆ. ಮಾದಿಗ ಮತ್ತು ಹೊಲೆಯರ ನಡುವೆ ಇರುವ ಎಡ, ಬಲ ಭಿನ್ನತೆಯಲ್ಲಿ ನಡೆದ ಸಾಂಸ್ಕೃತಿಕ ಸಂಘರ್ಷದ ಬಗ್ಗೆ ವಿಪುಲವಾದ ಲೇಖಕರು ಮಾಹಿತಿಯನ್ನು ಒದಗಿಸಿದ್ದಾರೆ. ಸಿಂದ್ ಮಾದಿಗರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಅಂಶಗಳ ಬಗ್ಗೆ ಸಾಕಷ್ಟು ಚರ್ಚೆಯನ್ನು ನಡೆಸಲಾಗಿದೆ.

ಚಲುವರಾಜು ಅವರ, **"ದಕ್ಕಲಿಗರ ಸಂಸ್ಕೃತಿ"** (೧೯೯೩) ಉಪಸಂಸ್ಕೃತಿ ಮಾಲೆಯಡಿಯಲ್ಲಿ ಪ್ರಕಟವಾದ ಕೃತಿ ಕರ್ನಾಟಕದಲ್ಲಿ ಇವರನ್ನು ದಕ್ಕಲಿಗ, ದಕ್ಕಲ, ದಕ್ಕಲ್ಲಾರ್, ಡೊಕ್ಕಲು ಇತ್ಯಾದಿ ಹೆಸರುಗಳಿಂದ ಗುರುತಿಸಲಾಗುತ್ತಿದೆ. ಮಾದಿಗರೊಂದಿಗೆ ದಕ್ಕಲಿಗರು ಹೊಂದಿರುವ ಸಾಂಸ್ಕೃತಿಕ ಸಂಬಂಧವನ್ನು ಸೂಚಿಸುತ್ತದೆ. ಮಾದಿಗರ ಮೂಲವ್ಯಕ್ತಿಯಾದ ಜಾಂಬವನೊಂದಿಗೆ ಹೊಂದಿರುವ ಸಂಬಂಧ ಇಂತಹ ಕಲ್ಪನೆಗೆ ಇಂಬುಕೊಡುವಂತೆ ದಕ್ಕಲರು ಇಂದಿಗೂ ಮಾದಿಗರ ಕೇರಿ ಅಥವಾ

ಹಟ್ಟಿಯ ಪಕ್ಕದಲ್ಲೆ ಮನೆಗಳಲ್ಲಿ ನಿರ್ಮಿಸಿಕೊಂಡಿರುತ್ತಾರೆ. ಮಾದಿಗರು ದಕ್ಕಲರಿಗೆ ಅನ್ನ, ನೀರು, ಬಟ್ಟೆ ಕೊಡಬೇಕು ಅವರು ಕೇಳಿದುವನ್ನು ಕೊಡಲು ಒಪ್ಪದೆಹೊಂದರೆ ಅವರ ಓಡಾಡುವರಿಗೆ ಹಗ್ಗವನ್ನು ಹಾಕುವ ಇಲ್ಲವೇ ಕೇರಿಯ ಬಾವಿಗೆ ಬೊಂಬೆ ಕಟ್ಟಿ ಅವಮಾನಿಸುವ ಅಧಿಕಾರ ಅವರಿಗಿರುತ್ತದೆ ಇಂತಹ ಪ್ರಮುಖವಾದ ಮಾಹಿತಿಗಳು ಈ ಕೃತಿಯಲ್ಲಿವೆ.

ಲಕ್ಷ್ಮೀಪತಿ ಕೋಲಾರ ಅವರು, **"ಮಾಸ್ತಿಕರ ಸಂಸ್ಕೃತಿ"** (೧೯೯೩) ಎಂಬ ಉಪಸಂಸ್ಕೃತಿ ಮಾಲೆ ಪುಸ್ತಕದಲ್ಲಿ ವಿವರಿಸಿರುವವಂತೆ ಮಾದಿಗ ಸಂಬಂಧಿತ ಜಾತಿಗಳಲ್ಲಿ ಮಾಸ್ತಿಕರು ಒಬ್ಬರು. ಈ ಪಂಗಡದಲ್ಲಿ ಎರಡು ಬಗೆಯ ಮಾಸ್ತಿಕರು ಕಂಡು ಬರುತ್ತಾರೆ. ೧. ಮಾದಿಗ ಮಾಸ್ತಿಕರು ೨. ಹೊಲೆಯ ಮಾಸ್ತಿಕರು. ಈ ಮಾಸ್ತಿಕರು ಆಯಾ ಜಾತಿಯ ಮಾದಿಗರನ್ನು ಮತ್ತು ಹೊಲೆಯರನ್ನು ಆಶ್ರಯಸಿದ್ದಾರೆ. ಸಂಬಂಧ ಹೊಂದಿದ್ದರೂ ಇವರು ಪ್ರತ್ಯೇಕವಾದ ಜಾತಿಯಾಗಿ ಗುರುತಿಸಿಕೊಂಡಿದ್ದಾರೆ. ಇವರು ಮೂಲತಃ ಮಾದಿಗ ಸಮುದಾಯಕ್ಕೆ ಸೇರಿದವರಾಗಿದ್ದುಕೊಂಡು ಬಂದಿರಬಹುದೇ ಇತ್ಯಾದಿ ಮಾಹಿತಿಗಳ ತಿಳಿಸುವಂಥ ಪ್ರಯತ್ನ ಮಾಡಿದ್ದಾರೆ.

ಸುಭಾಷ್ ಭರಣಿ ಅವರು, **'ಧರೆಗೆ ದೊಡ್ಡವರು'** (೧೯೯೬) ಎಂಬ ಗ್ರಂಥದಲ್ಲಿ ಆದಿ ಕರ್ನಾಟಕ (ಮಾದಿಗ) ಸಮುದಾಯದ ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಹಿನ್ನೆಲೆ, ಜೀವನ ವಿಧಾನ, ಸಾಮಾಜಿಕ ವ್ಯವಸ್ಥೆ, ಆದಿಕರ್ನಾಟಕ ಜನವರ್ಗ, ಸಾಹಿತ್ಯ ಮತ್ತು ಸಂಸ್ಕೃತಿ ಇತ್ಯಾದಿ ಅನೇಕ ವಿಷಯಗಳನ್ನು ಪ್ರಸ್ತಾಪಿಸಿದ್ದಾರೆ.

ಗಾಡ್ವಿನ್ ಶಿರಿ, **"ದಲಿತ ಕ್ರೈಸ್ತರು"** (೧೯೯೭) ಅವರ ಈ ಕೃತಿಯಲ್ಲಿ ದಲಿತರ ಬಗೆಗೆ ವಿಶ್ಲೇಷಣೆಯಿದೆ. ಮಾದಿಗರಲ್ಲಿ ಬರುವಂತಹ ದಲಿತ ಕ್ರೈಸ್ತರ ಬಗೆಗೆ ಬೈಯ್ಯಲು ಉಪಯೋಗಿಸುವ ಈ ಶಬ್ದಗಳು ಕೇವಲ ನಿಂದನೆಯ ಮಾತುಗಳಾಗಿರದೆ ಮತೀಯ ದುರ್ಭಾವನೆಗಳಿಂದ ಕೂಡಿದೆ. 'ಮಾದಿಗ' ಎಂಬ ಜಾತಿ ಹೆಸರೇ ಒಂದು ಬೈಗುಳದ ಮಾತಾಗಿದೆ. ಈ ಕ್ರೈಸ್ತರನ್ನು ಮಾದಿಗರೆಂದೇ ಕರೆಯುವುದು ಅವರ ಪರಿಪಾಟವಾಗಿದೆ. ಈ ಜನರ ಸಭಾಪಾಲಕರನ್ನು 'ಮಾದಿಗ ದೇವರು' ಅಂತಲೇ ಕರೆಯುತ್ತಿದ್ದಾರೆ. 'ಮಾದಿಗ ಸೂಳೆಮಗನೆ' 'ಕತ್ತೆಸೂಳೆ ಮಗನೆ' ಇವು ದಲಿತ ಕ್ರೈಸ್ತರನ್ನು ಬೈಯ್ಯಲು, ನಿಂದಿಸಲು ಸಾಮಾನ್ಯವಾಗಿ ಉಪಯೋಗಿಸುವ ಮಾತುಗಳು, ಅವರ ಮನೆಯ ಹೆಂಗಸರನ್ನು ಅಂದರೆ ತಾಯಿಯಂದಿರನ್ನು, ಹೆಂಡಂದಿರನ್ನು ಅಥವಾ ಅಕ್ಕ ತಂಗಿಯಂದಿರನ್ನು ಲೈಂಗಿಕವಾಗಿ ಅವಹೇಳನ ಮಾಡುವ ಹೊಲಸು ಮಾತುಗಳನ್ನು ಉಪಯೋಗಿಸಲಾಗುತ್ತದೆ. ಕ್ರೈಸ್ತ ದಲಿತನೊಬ್ಬನು ಒಂದು ಚಿಕ್ಕ ತಪ್ಪೇ ಮಾಡಲಿ ದಲಿತೇತರರ ಬಾಯಿಯಿಂದ ಬೈಗುಗಳ ಸುರಿಮಳೆಯೇ ಆಗುತ್ತದೆ. ಈ ದಲಿತರಿಗೆ ಬೈಯ್ಯಲೆಂದೇ ಅನೇಕ ನುಡಿಗಟ್ಟುಗಳನ್ನು ಅವರು ಇಟ್ಟುಕೊಂಡಿದ್ದಾರೆ. ಮಾದಿಗನಿಗೇನು ತಿಳಿಯುತ್ತದೆ? 'ದನದ ಮಾಂಸ ತಿನ್ನುವ ಮಾದಿಗನಿಗೇನು ಗೊತ್ತು? 'ಮಾದಿಗನ ಮಾತು ಸಂಜೆ ತನಕ' ಮೆಟ್ಟನ್ನು ಅದರ ಜಾಗದಲ್ಲಿಯೇ ಇಡಬೇಕು. ಇಂತಹ ಹತ್ತು ಹಲವು ಮಾತುಗಳು ಈ ದಲಿತರನ್ನು ಚುಚ್ಚುತ್ತಲೇ ಇರುತ್ತವೆ. ಒಬ್ಬ ದಲಿತನಲ್ಲಿ ಏನಾದರೂ ಸುಧಾರಣೆ ಕಂಡುಬಂದರೆ ಅಂಥವನನ್ನು ವ್ಯಂಗ್ಯವಾಗಿ ಈ ಮಾದಿಗನನ್ನು ನೋಡು ಎಂದು ಅವನನ್ನು ಗೇಲಿ ಮಾಡುತ್ತಾರೆ.

ಈ ರೀತಿಯ ಎಲ್ಲ ಬೈಗುಳಗಳನ್ನು ಕೇಳುತ್ತಿರುವಾಗಲೂ ಈ ದಲಿತರು ಸಾಮಾನ್ಯವಾಗಿ ಸುಮ್ಮನಿರುತ್ತಾರೆ. ಒಂದುವೇಳೆ ಇದಕ್ಕೇನಾದರೂ ಸ್ವಲ್ಪಪ್ರತಿಭಟಿಸಿದರೂ ಸಾಕು ಅವರ ಮೇಲೆ ಏಟಿನ ಪ್ರಹಾರಗಳು ಆಗುತ್ತವೆ. ಇಂತಹ ಸ್ಥಿತಿಯನ್ನು ಕ್ರೈಸ್ತ ದಲಿತರಿಗೆ ಎದುರಿಸುವ ಶಕ್ತಿಯಾಗಲಿ, ಮಾನಸಿಕ ಸ್ಥಿತಿಯಾಗಲಿ ಇಲ್ಲ ಸ್ವಲ್ಪ ಶಿಕ್ಷಣ ಹೊಂದಿರುವ ಕ್ರೈಸ್ತ ದಲಿತರೊಂದಿಗೆ ಮಾತ್ರ ಸ್ವಲ್ಪ ಎಚ್ಚರಿಕೆಯಿಂದ ವರ್ತಿಸುತ್ತಾರೆ. ಆದರೆ ಇಂತಹ ದಲಿತರು ಸಂಖ್ಯೆ ತೀರಾ ಕಡಿಮೆ ಅಸ್ಪೃಶ್ಯತೆಯ ಜಾತಿ ಹಿನ್ನೆಲೆಯಿಂದಾಗಿ, ಕಿತ್ತುತಿನ್ನುವ ಬಡತನ ಮತ್ತು ಅನಕ್ಷರತೆಯಿಂದಾಗಿ ಈ ಕ್ರೈಸ್ತ ದಲಿತರು ನಾನಾ ರೀತಿ ಕಿರುಕುಳ ಮತ್ತು ಅನೇಕ ಸಲ ದೈಹಿಕ ಹಿಂಸೆಗೂ ಗುರಿಯಾಗುತ್ತಾರೆ. ಒಕ್ಕಲುತನ ಮಾಡುವ ಮಾದಿಗರು ತಾನು ಸಲ್ಲಿಸುವ ಈ ಎಲ್ಲ ಸೇವೆಗಳಿಗೆ ಪ್ರತಿಯಾಗಿ ಕೊಯ್ಲಿನ ಸಮಯದಲ್ಲಿ ಸ್ವಲ್ಪ ಧಾನ್ಯವನ್ನು ಪಡೆಯುತ್ತಾನೆ. ಅಗೊಮ್ಮೆ ಈಗೊಮ್ಮೆ ತಾವು ಅಲ್ಲಿಸುತ್ತಿರುವ ಹೆಚ್ಚುವರಿ ಸೇವೆಗಾಗಿ ಸ್ವಲ್ಪ ಹಣದ ರೂಪದಲ್ಲಿ ಕೂಡಾ ಅವನು ಪ್ರತಿಫಲವನ್ನು ಪಡೆಯಬಹುದು. ಕೆಲವು ಹಳ್ಳಿಗಳಲ್ಲಿ ಅನೇಕ ಮಾದಿಗರು ತಮ್ಮ ಜೀವನೋಪಾಯಕ್ಕಾಗಿ ಮಾದಿಗತನ–ಒಕ್ಕಲುತನವನ್ನೇ ಸಂಪೂರ್ಣವಾಗಿ ಅವಲಂಬಿಸಿರುತ್ತಾರೆ ಎಂಬುದು ಬೆಳಕಿಗೆ ಬಂದಿದೆ. ಮಾದಿಗತನ–ಒಕ್ಕಲುತನ ಮಾಡುತ್ತಿರುವ ದಲಿತೇತರ ಮನೆಗಳಿಂದ ಮಾದಿಗರು ಆಗಾಗೆ, ಸಾಲ ಮಾಡುತ್ತಿರುವುದು ಸಾಮಾನ್ಯ. ಈ ಸಾಲದ ಬಲೆಯಿಂದ ಸಿಕ್ಕಿಕೊಂಡಿರುವ ಈ ಜನಕ್ಕೆ ಮಾದಿಗತನ–ಒಕ್ಕಲುತನದ ಮುಷ್ಟಿಯಿಂದ ಹೊರಬರಲು ಎಂದು ಸಾಧ್ಯವಾಗುತ್ತಿಲ್ಲ. ಅನೇಕ ವಿಷಯಗಳಲ್ಲಿ ಮಾದಿಗತನ ಮತ್ತು ಒಕ್ಕುಲುತನವು ತಲ–ತಲಾಂತರಗಳವರೆಗೆ ಒಡೆಯರ ಸೇವೆಮಾಡುವ ಜೀತ ಪದ್ಧತಿಗೆ ಸರಿಸಮವಾಗಿ ಇದೆ.

ಮಾದಿಗರು ಮಾದಿಗತನ–ಒಕ್ಕಲುತನವನ್ನು ವ್ಯಾಪಕವಾಗಿ ಅನುಸರಿಸುತ್ತಿದ್ದರೂ ಈ ಪದ್ಧತಿಯ ಬಗ್ಗೆ ಅವರಲ್ಲಿ ವಾಕರಿಕೆ ಹೆಚ್ಚುತ್ತಾಲಿದೆ. ಮಾದಿಗತನ–ಒಕ್ಕಲುತನವು ಒಂದು ಅನ್ಯಾಯ ಮತ್ತು ದಮನಕರ ಪದ್ಧತಿಯೆಂದು ಈ ಜನ ತಿಳಿಯಲಾರಂಭಿಸಿದ್ದಾರೆ. ಹಿಂದಿನ ಕಾಲದಲ್ಲಿ ಮಾದಿಗತನ ಒಕ್ಕಲುತನದ ಸೇವೆಗೆ ಪ್ರತಿಯಾಗಿ ಬೆಳೆಯ ಕಾಲಾಂಶವು ದೊರೆಯುತ್ತಿತ್ತು. ಆದರೆ ಅವರಿಗೆ ತಾವು ಮಾಡುತ್ತಿದ್ದ ವೃತ್ತಿಯ ಬಗ್ಗೆ ಆಸಹ್ಯಭಾವನೆ ಹೆಚ್ಚುತ್ತಿದೆ. ಆದರೆ ಸಾಂಪ್ರದಾಯಿಕ ವೃತ್ತಿಯನ್ನು ಅವರು ತುಂಬಾ ಹೇಸುತ್ತಿದ್ದರು. ಈ ಕಾರ್ಯವನ್ನು ಅವರು ಸದ್ಯದಲ್ಲಿ ಬಿಡುವಂತೆ ಕಾಣುವುದಿಲ್ಲ ತಮ್ಮ ನಿಸ್ಸಹಾಯಕ ಬಡತನದಿಂದಾಗಿಯೇ ಈ ಮಾದಿಗತನ ಮತ್ತು ಒಕ್ಕಲುತನ ಇನ್ನೂ ಉಳಿದುಕೊಂಡಿದೆ ಅರಿವು ಅವರಿಗಿದೆ ಎಂಬ ಅಂಶವನ್ನು ಈ ಕೃತಿಯಿಂದ ತಿಳಿಯಬಹುದಾಗಿದೆ.

ವೆಂಕಟಸ್ವಾಮಿ ಎಂ ಅವರು, **"ಅಸ್ಪೃಶ್ಯರು ಒಂದು ಪರಿಶೀಲನೆ"** (೧೯೯೭) ಎಂಬ ಪುಸ್ತಕದಲ್ಲಿ ಜಾತಿ ಮೂಲಗಳು ಅಸ್ಪೃಶ್ಯತೆಯ ಮೂಲಗಳು, ಗೋಮಾಂಸ ಭಕ್ಷಣೆಯಿಂದ ಅಸ್ಪೃಶ್ಯರು ಹುಟ್ಟಿಕೊಂಡ ಬಗೆಗೆ, ಹರಿಜನ ಹೋರಾಟಗಳು, ಚಳುವಳಿಗಳು ಎಂಬ ಅಂಶಗಳನ್ನು ಕುರಿತಾಗಿ ವಿವರಿಸಿದ್ದಾರೆ.

ಬುದ್ಧಕಾಶಪ್ಪ ಅವರು, **"ಹೈದರಾಬಾದ್ ಕರ್ನಾಟಕ ಮಾದಿಗರ ಸಾಂಸ್ಕೃತಿಕ ಅಧ್ಯಯನ"** (೧೯೯೮) ಎಂಬ ಪುಸ್ತಕದಲ್ಲಿ ಮಾದಿಗ ಕುಲದ ಹುಟ್ಟು ಮತ್ತು ಚರಿತ್ರೆಯನ್ನು ವಿವರಿಸಿದ್ದಾರೆ. ಮಾದಿಗ ಆಟ ಅಥವಾ ಎಲ್ಲಮ್ಮನ ಆಟ ಮತ್ತು ಸಿಂಧ್‌ಕತೆ ಅಥವಾ ಆದಿಜಾಂಬವ ಪುರಾಣ ಇವುಗಳನ್ನು

ವಿಶೇಷವಾಗಿ ಮಾದಿಗರಲ್ಲೇ ಒಂದು ಪಂಗಡವಾಗಿ ಪ್ರದರ್ಶಿಸುತ್ತಾರೆ. ಸಿಂದ್ ಪದವನ್ನು ತಮ್ಮ ಸಮುದಾಯದ ಹೆಸರಿನೊಂದಿಗೆ ಗುರುತಿಸಿ ಕೊಳ್ಳುತ್ತಿರುವ, ಸಿಂದ್‌ಮಾದಿಗರು, ಮಾದಿಗ ಆಟ ನಾಟಕ ರೂಪದಲ್ಲಿದ್ದರೆ ಸಿಂದ್‌ಕತೆ ಕಥನ ಶೈಲಿಯಲ್ಲಿದೆ ಎಂದಿದ್ದಾರೆ.

ಚಂದ್ರಶೇಖರ್ ಟಿ ಆರ್ (ಸಂ), ಅವರು, **"ದಲಿತ ಅಧ್ಯಯನ"** (೨೦೦೧) ಕೃತಿಯಲ್ಲಿ ಲೇಖಕರು ಭಾರತ ಸಾಮಾಜಿಕ ವ್ಯವಸ್ಥೆಯನ್ನು ಅಸಮಾನತೆಯ ತವರು ಎಂದು ಕರೆದಿದ್ದಾರೆ. ಅದರಲ್ಲಿ ಹಿಂದೂ ಸಮಾಜ ಒಂದು ಎತ್ತರವಾದ ಗೋಪುರವಿದ್ದಂತೆ, ಅದಕ್ಕೆ ಹಲವು ಅಂತಸ್ತುಗಳುಂಟು. ಆದರೆ ಅದಕ್ಕೆ ಬಾಗಿಲುಗಳಾಗಲಿ, ಅದನ್ನೇರಲು ಏಣಿಯಾಗಲಿ ಇಲ್ಲ. ಒಂದು ಅಂತಸ್ತಿನಲ್ಲಿ ಹುಟ್ಟಿದ ವ್ಯಕ್ತಿ ಅದೇ ಅಂತಸ್ತಿನಲ್ಲಿ ಸಾಯಬೇಕು. ಅನ್ಯಮಾರ್ಗವೇ ಅವನಿಗಿಲ್ಲ, ಹಿಂದೂ ಸಮಾಜದಲ್ಲಿ ಬ್ರಾಹ್ಮಣರು, ಬ್ರಾಹ್ಮಣೇತರರು ಮತ್ತು ಅಸ್ಪೃಶ್ಯರು ಎಂಬ ಮೂರು ಭಾಗಗಳಿವೆ. "ಈಶಾವಾಸ್ಯಮಿದಂ ಸರ್ವಂ" ಎಂದು ಹಿಂದುಗಳು ಉದ್ಘೋಷಿಸುತ್ತಾರೆ. ಆದರೆ ತಮ್ಮ ಧರ್ಮದವರೇ ಆದ ಕೆಲವರನ್ನು ಅಸ್ಪೃಶ್ಯರೆಂದು ಕಡೆಗಾಣಿಸುತ್ತಾರೆ. ಜ್ಞಾನ ಪ್ರಸಾರವಾಗಲೀ, ವಿದ್ಯಾಪ್ರಸಾರವಾಗಲೀ ಬ್ರಾಹ್ಮಣರ ನಿಜವಾದ ಗುರಿಯಾಗಿಲ್ಲ. ಏಕಸ್ವಾಮ್ಯವೇ ಅವರ ಧ್ಯೆರ್ಯ. ಇದು ದುಃಖಕರವಾದ ಸಂಗತಿ. ಬ್ರಾಹ್ಮಣೇತರರು ಹಿಂದುಳಿದಿರುವುದಕ್ಕೆ ಕಾರಣ ಅವರಿಗೆ ಸರಿಯಾದ ಶಿಕ್ಷಣವಿಲ್ಲದಿರುವುದು. ನಿರಂತರವಾದ ದಾಸ್ಯ, ದಾರಿದ್ರ್ಯ ಮತ್ತು ಅಜ್ಞಾನಗಳಿಂದ ದಲಿತರ ವರ್ಗಗಳನ್ನು ಪಾರು ಮಾಡಲು ಅವರಲ್ಲಿ ಜಾಗೃತಿಯುಂಟು ಮಾಡಲು ಭಗೀರಥ ಪ್ರಯತ್ನವನ್ನೇ ಮಾಡಬೇಕು.

ನಾವು ಪ್ರಗತಿ ಹೊಂದಬೇಕಾದರೆ ನಮ್ಮನ್ನು ನಾವು ಮೂರು ವಿಧವಾದ ಶುದ್ಧೀಕರಣಕ್ಕೆ ಒಳಪಡಿಸಿಕೊಳ್ಳಬೇಕು. ನಮ್ಮ ವಿಚಾರ ವಿಕಸಿತವಾಗಬೇಕು, ನಮ್ಮ ಮಾತು ಸುಧಾರಿಸಬೇಕು. ನಮಗೆ ಮರ್ಯಾದೆ ಕೊಡುವವರಿಗೆ ನಾವು ಮರ್ಯಾದೆ ತೋರಬೇಕು. ನಮ್ಮ ಆತ್ಮಗೌರವವನ್ನು ಮಾರಿಕೊಂಡು ಅನ್ಯರಿಗೆ ಗೌರವ ತೋರಿಸುವುದು ಹೀನತನ, ಹೇಡಿತನ. ನಾವು ಮಾಂಸಹಾರವನ್ನು ತ್ಯಜಿಸಬೇಕು. ನಮ್ಮ ಪರಿಸರವನ್ನು ನಿರ್ಮಲವಾಗಿಡಬೇಕು. ಅನ್ಯರು ಎಸೆದದ್ದನ್ನು ಮಹಾಪ್ರಸಾದವೆಂದು ತಿಂದು ಬದುಕುವ ಬದಲು, ನಮ್ಮದೇ ಆದ ಹೊಲಗದ್ದೆಗಳಲ್ಲಿ ಸಂಪಾದಿಸಿ ದುಡಿದು ತಿನ್ನಬೇಕು. ನಾವು ಒಗ್ಗಟ್ಟಾಗಿದ್ದರೆ, ಸತತ ಪ್ರಯತ್ನಶಾಲಿಗಳಾಗಿದ್ದರೆ, ಛಲಗಾರರಾಗಿದ್ದರೆ ನಮಗೆ ಇಂದಲ್ಲ ನಾಳೆ ಜಯ ದೊರೆತೇ ದೊರೆಯುತ್ತದೆ. ಈ ಹೋರಾಟ ನಾಂದಿಯಾಗಿ ಚೌಡರ ಕರೆಯನ್ನು ನೀರನ್ನು ನಾವು ಕುಡಿಯಬೇಕು. ಶತ-ಶತಮಾನಗಳ ಈ ಶಾಪದ ಸಂಕೋಲೆಯನ್ನು ಕಡಿದೊಗೆಯಬೇಕು ಎಂದು ನೆರೆದು ಜನರನ್ನು ಬಡಿದೆಬ್ಬಿಸಿದರು. ಈ ಒಂದು ಕೃತಿಯಿಂದ ದಲಿತ ಸಮುದಾಯಗಳು ಅನುಭೋಗಿಸುವಂತಹ ನೋವು ಕುರಿತು ತಿಳಿಯಬಹುದು.

ಮೈಲಹಳ್ಳಿ ರೇವಣ್ಣ ಅವರ, **"ಮಾದಾರರ ಜನಪದ ಸಾಹಿತ್ಯ: ಒಂದು ಅಧ್ಯಯನ"** (೨೦೦೪) ಕೃತಿಯಲ್ಲಿ ಮಾದಾರರ ಸಾಮಾಜಿಕ ಜೀವನ ವಿಧಾನದಲ್ಲಿ ಸಮಾಜದ ಒಳಾಡಳಿತ ರಚನೆ ಬಗೆ ವಿವರಿಸಲಾಗಿದೆ. ಸಾಮಾನ್ಯವಾಗಿ ಯಾವುದೇ ಒಂದು ಸಮಾಜ ಆಂತರಿಕ ಬಂಧುತ್ವ, ಧಾರ್ಮಿಕ,

ನೈತಿಕ ಹಾಗೂ ಸಾಂಸ್ಕೃತಿ ಐಕ್ಯತೆಯನ್ನು ಜವಾಬ್ದಾರಿಯುತವಾಗಿ ಕಾಯ್ದುಕೊಂಡು ರೂಢಿಸಿಕೊಳ್ಳುವುದು ಬಹುಮುಖ, ಸಮುದಾಯದ ಕ್ಷೇಮಪಾಲನೆಯೇ ಇಲ್ಲಿಯ ಮಖ್ಯ ಆಶಯ ಅದಕ್ಕಾಗಿಯೇ ರೂಪಿಸಿಕೊಳ್ಳುವ ನಿಯಮಾನುಸಾರ ಅಡಳಿತ ಕಟ್ಟಳೆಯ ವಿಧಿ ವಿಧಾನವೇ 'ಒಳಾಡಳಿತ ರಚನೆ' ಮಾದಾರರು ತಮ್ಮಲ್ಲಿ ಯಾವುದೇ ರೀತಿಯ ಜಗಳ, ಆಂತರಿಕ ಭಿನ್ನಾಭಿಪ್ರಾಯಗಳನ್ನು ಸರಿಪಡಿಸಿಕೊಳ್ಳಲು ಹಾಗೂ ನ್ಯಾಯವನ್ನು ಪಡೆಯಲು ರಚಿಸಿಕೊಂಡಿರುವ ವ್ಯವಸ್ಥಿತ ರಚನೆಗಳು ಇವಾಗಿವೆ. ಇವರಲ್ಲಿ ಇವುಗಳಿಗೆ ಮಹತ್ವದ ಸ್ಥಾನವುಂಟು ಅವರ ನ್ಯಾಯೋಚಿತ ಅಂಗಗಳನ್ನು ಮುಖ್ಯವಾಗಿ ಮೂರು ರೀತಿಯಲ್ಲಿ ಗುರುತಿಸಿಕೊಂಡು ಇಲ್ಲಿ ವಿವೇಚಿಸಿದೆ.

ಕಟ್ಟೆಮನೆ, ಗುಡಿಕಟ್ಟೆ, ನ್ಯಾಯಪದ್ದತಿ ಆಂತರಿಕ ಒಳಜಗಳವಾದಾಗ ನ್ಯಾಯತಿರ್ಮಾನ ಮಾಡಿಕೊಳ್ಳಲು ಒಂದೇ ಸಮೂಹದವರು ಸೇರಿ ರಚಿಸಿಕೊಂಡು ಒಂದು ವ್ಯಾಪ್ತಿಗೆ ಮೂವತ್ತುಮೂರು ಹಳ್ಳಿಗಳುಬರುತ್ತವೆ. ಹತ್ತತ್ತು ಹಳ್ಳಿಗೆ ಒಂದು ಕಸಬಿ ರಚನೆಯನ್ನು ಮಾಡಿಕೊಂಡಿರುವರು. ಈ ರೀತಿಯ ಒಳಾಡಳಿತ ವ್ಯವಸ್ಥೆ ಅವರ ಒಗ್ಗಟ್ಟಿನ ಕುರುಹು ಆಗಿದೆ. ಒಗ್ಗಟ್ಟು ಬರುವುದು ಸೌಹಾರ್ದತೆಯಿಂದ ಮಾತ್ರ ಇವರಲ್ಲಿ ಚಿಕ್ಕ ಚಿಕ್ಕ ಒಳಜಗಳಗಳಾದರೆ ಹಟ್ಟಿಯ ಯಜಮಾನನೇ ಪರಿಹರಿಸುವನು ದೊಡ್ಡ ವ್ಯಾಜ್ಯವಾದರೆ ಅದು 'ಕಟ್ಟೆಮನೆ'ಗೆ ಹೋಗುವ ಅನಿವಾರ್ಯತೆ ಬರುವುದು. ನ್ಯಾಯ ತಿರ್ಮಾನಕ್ಕಾಗಿಯೇ ಕಟ್ಟೆಮನೆಯಲ್ಲಿ ಹಟ್ಟಿಯ ಸದಸ್ಯರಿಂದ ನಿಯಮಿಸಲ್ಪಟ್ಟ ಯಜಮಾನರು ಇರುತ್ತಾರೆ. ಸಾಮಾನ್ಯವಾಗಿ ಕಟ್ಟೆಮನೆ ದೇವರು ನೆಲೆಸಿದ ಗುಡಿಯ ಮಂಭಾಗದಲ್ಲಿರುವುದು, ಈ ಕೃತಿಯಿಂದ ಮಾದಿಗರ ಒಳಾಡಳಿತದ ರಚನೆಯನ್ನು ಕುರಿತು ತಿಳಿಸಲಾಗಿದೆ.

ಹನುಮಂತಪ್ಪ ಡಿ ಅವರು, **"ಮೊಳಕಾಲ್ಮೂರು ಪರಿಸರ ಮಾದಿಗ ಸಮುದಾಯದ ಆಚರಣೆಗಳು"** (೨೦೦೬) ಎಂಬ ಎಂ.ಫಿಲ್ ಸಂಪ್ರಬಂಧದಲ್ಲಿ (ಕನ್ನಡ ವಿಶ್ವವಿದ್ಯಾಲಯ, ಹಂಪಿ,) ಮಾದಿಗ ಸಮುದಾಯದ ಮೊಳಕಾಲ್ಮೂರು ಭೌಗೋಳಿಕ ಪರಿಸರ, ಮಾದಿಗರ ಸಾಮಾಜಿಕ ಸ್ಥಿತಿಗತಿಯಲ್ಲಿ, ಕೌಟುಂಬಿಕ ಪದ್ಧತಿ, ವಿಧಿ ನಿಷೇದ, ಶಿಕ್ಷಣ, ಮಾದಿಗರ ಬೆಡಗುಗಳು ಮತ್ತು ಮಾದಿಗ ಸಮುದಾಯದ ಜೀವನಾವರ್ತದ ಆಚರಣೆಗಳು ಮತ್ತು ವಾರ್ಷಿಕಾವರ್ತದ ಆಚರಣೆಗಳನ್ನು ವಿಶ್ಲೇಷಿಸಿದ್ದಾರೆ.

ದೊಡ್ಡಮನಿ ನಿಂಗಪ್ಪ ಮಹಾದೇವಪ್ಪ ಅವರು, **"ಮಾದಿಗ ಸಮುದಾಯದ ಒಂದು ಅಧ್ಯಯನ"** (೨೦೦೬) (ಕನ್ನಡ ವಿಶ್ವವಿದ್ಯಾಲಯ, ಹಂಪಿ,) ಅಪ್ರಕಟಿತ ಎಂ ಫಿಲ್ ಪ್ರಬಂಧದಲ್ಲಿ ಮಾದಿಗ ಸಮುದಾಯದ ಸಾಮಾಜಿಕ ಜೀವನ, ಮಾದಿಗರು ಎಂದರೆ ಯಾರು? ಮಾದಿಗ ಸಮುದಾಯದ ಆಚರಣೆಗಳನ್ನು ತಿಳಿಸಿದ್ದಾರೆ.

ರಾಜಕುಮಾರ್ ಕೆ ಆರ್ ಜೆ ಅವರು, **"ಸ್ವಾತಂತ್ರ್ಯೋತ್ತರ ಕರ್ನಾಟಕದಲ್ಲಿ ಮಾದಿಗರು: ಚಾರಿತ್ರಿಕ ಅಧ್ಯಯನ"** (೨೦೦೭) ಪಿಎಚ್. ಡಿ ಮಹಾಪ್ರಬಂಧದಲ್ಲಿ ಮಾದಿಗ ಸಮುದಾಯದವರು ಮೂಲತಃ ತೆಲುಗು ರಾಜ್ಯದರೆಂದು ಹೇಳಲಾಗಿದೆ. ತಮಿಳು ರಾಜ್ಯದಲ್ಲಿ ಕೂಡ ಇವರು ಆಧಿಕ ಸಂಖ್ಯೆಯಲ್ಲಿರುವರು. ನಮ್ಮ ಮೈಸೂರು ಪ್ರಾಂತ್ಯದ ಬಳ್ಳಾರಿ, ಚಿತ್ರದುರ್ಗ, ಹೊಸಪೇಟೆ, ಬೆಂಗಳೂರು ಜಿಲ್ಲೆಗಳಲ್ಲಿ ಹೆಚ್ಚಿನ

ಸಂಖ್ಯೆಯಲ್ಲಿದ್ದಾರೆ. ಕರ್ನಾಟಕದ ಹೆಚ್ಚಿನ ಭಾಗಗಳಲ್ಲಿ ಇವರು ತಮ್ಮ ಕುಲದೇವತೆ ಮಾರಿಯಮ್ಮ, ದೇರ್ಗಾದೇವಿ, ಮಹಾಕಾಳಿ ಎಂಬ ಪಾರ್ವತಿದೇವಿಯ ಅವತಾರ ರೂಪವಾದ ಹಾಗೂ ಅವಳಿಂದ ಉದ್ಭವವಾದ ದೈವಶಕ್ತಿಯ ದೇವತೆಗಳನ್ನು ಆರಾಧಿಸುವುದರಿಂದ ಮಾತಂಗಿ ಮಕ್ಕಳೆಂದು ಇವರನ್ನು ಕರೆಯಲಾಗಿದೆ. ಮಾದಿಗ ಸಮುದಾಯದ ಚಾರಿತ್ರಿಕ ಹಿನ್ನೆಲೆ ಮತ್ತು ಸಾಮಾಜಿಕ, ಆರ್ಥಿಕ, ರಾಜಕೀಯ, ಆಚರಣೆಗಳು, ಸಂಪ್ರದಾಯಗಳನ್ನು ಈ ಕೃತಿಯಲ್ಲಿ ವಿವರಿಸಿದ್ದಾರೆ.

ಮಲ್ಲಿಕಾ ಎಸ್ ಘಂಟಿ (ಸಂ) ಅವರು, **"ದಲಿತ ಸಾಹಿತ್ಯ ಚಳವಳಿ"** ದಲಿತ ಸಂಘರ್ಷ ಸಮಿತಿ ಹುಟ್ಟು" (೨೦೦೮) ಕೃತಿಯಲ್ಲಿ ದಲಿತ ಚಳವಳಿಯ ಮಾತೃ ಸ್ವರೂಪವಾದ ಕರ್ನಾಟಕ ದಲಿತ ಸಂರ್ಘ ಸಮಿತಿಯು ೧೯೭೪ರಲ್ಲಿ ಭದ್ರಾವತಿಯಲ್ಲಿ ಅಸ್ತಿತ್ವ ಪಡೆದು. ಆನಂತರ ರಾಜ್ಯವ್ಯಾಪಿಯಾಗಿ ಹಬ್ಬಿಕೊಂಡಿತು ಆ ಬಗ್ಗೆ, ಸಮಿತಿಯ ಸ್ಥಾಪಕರೂ, ಮೊದಲ ಅಧ್ಯಕ್ಷರೂ ಆದ ದಿ. ಪ್ರೊ ಬಿ ಕೃಷ್ಣಪ್ಪನವರ ಮಾತುಗಳನ್ನೇ ನೋಡೋಣ, ಅವರು ಬರೆಯುತ್ತಾರೆ. ದಲಿತ ಚಳುವಳಿ ಆರಂಭವಾಗುವುದಕ್ಕಿಂತ ಮೊದಲು ೧೯೭೦ರ ದಶಕದ ಆರಂಭದಲ್ಲಿ ಕರ್ನಾಟಕದಲ್ಲಿ ಜಾತಿವಿರೋಧಿ ಚಳುವಳಿ ಆರಂಭವಾಗಿತ್ತು. ಅವರು ಜಾತಿ ವಿನಾಶ ಸಮ್ಮೇಳನವನ್ನು ಕಟ್ಟಿ ಜಾತಿಯನ್ನು ವಿನಾಶ ಮಾಡುವ ಉದ್ದೇಶವನ್ನು ಇಟ್ಟುಕೊಂಡಿತ್ತು. ಅದು ಕರ್ನಾಟಕದ ಶೂದ್ರ ವರ್ಗದಲ್ಲಿದ್ದ ಜಾತಿ ವ್ಯವಸ್ಥೆಯನ್ನು ಕುರಿತ ತಿಳುವಳಿಕೆ. ಆ ವರ್ಷಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕರ್ನಾಟಕದ ಪ್ರಧಾನ ಭೂ ಒಡೆತನ ಹೊಂದಿದ್ದ ಲಿಂಗಾಯತ, ಒಕ್ಕಲಿಗ ಜಾತಿಗಳ ಹುಡಗ ಹುಡುಗಿಯರು ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾಭ್ಯಾಸಕ್ಕೆ ಬರತೊಡಗಿದರು. ಹಾಗಾಗಿ ಶೂದ್ರ ಸಮುದಾಯಗಳು ವಿದ್ಯಾಭ್ಯಾಸದಲ್ಲಿ ಕಡಿಮೆ ಪ್ರಮಾಣವನ್ನು ಹೊಂದಿರುವದನ್ನು ನೊಡಬಹುದು ವಿಷಯವನ್ನು ತಿಳಿದುಕೊಳ್ಳಲಾಗಿದೆ.

ಕೆಕೆಪುರ ಯಲ್ಲಪ್ಪ, **"ದೊಕ್ಕಲು ಮಕ್ಕಳು"** (೨೦೧೧) ಎಂಬ ಪುಸ್ತಕದಲ್ಲಿ ದೊಕ್ಕಲು ಮಕ್ಕಳ ಮೂಲವು, ವಿಶ್ವ ಸೃಷ್ಟಿಯ ಕತೆಯೊಂದಿಗೆ ಆರಂಭಗೊಳ್ಳುವುದು. ದೊಕ್ಕಲಿಗರ ಮೂಲಿಗರು ಮಾದಿಗರು, ಇನ್ನು ಮಾದಿಗರು ಮೂಲಪುರುಷ ಆದಿಜಾಂಬವಂತ. ಈತನು ಆದಿಯಿಂದ ಹುಟ್ಟಿ, ವಿಶ್ವಸೃಷ್ಟಿಗೆ ಕಾರಣಿಭೂತನೂ, ಕಾರಣೀಕರ್ತನೂ ಆಗಿರುವನು. ಆದಿಶಕ್ತಿಯ ಹುಟ್ಟು ಈತನು ಬೆವರಿನ ಹನಿಯೊಂದರಿಂದಲೇ ಆಗುವುದಲ್ಲದೆ, ಆಕೆಯನ್ನೇ ವಿವಾಹವಾಗಿ ಇಡೀ ಜೀವ ಜಗತ್ತಿಗೆ ತಂದೆಯಾಗಿ, ತಾತನಾಗಿಯೂ ಕಂಡುಬರುವನು. ಇದನ್ನೇ ಸವಿಸ್ತಾರವಾಗಿ ನಿರೂಪಿಸುವ ಸದರಿ ಕತೆಯಲ್ಲಿ ದಕ್ಕಲಿಗರೂ ಮತ್ತು ಮಾದಿಗರೂ ಒಂದೇ ಮೂಲದವರು, ಒಡಹುಟ್ಟಿದವರಿರಬೇಕು ಎನಿಸುತ್ತದೆ. ಆದರೆ ಯಾವುದೋ ಗುರುತವಾದ, ಸಾಮಾಜಿಕ ಕಟ್ಟುಪಾಡು ಮೀರಿದ್ದಕ್ಕಾಗಿ ಬೇರೆಯಾಗಿರಬೇಕು. ಆದರೆ ಪ್ರಸ್ತತ ದಿನಮಾನದಲ್ಲಿ ಈ ಸಮುದಾಯಗಳಲ್ಲಿ ಅನೇಕ ಉಪಗುಂಪುಗಳಾಗಿ ಚದರಿವೆ ಎಂದು ಹೇಳಬಹುದಾಗಿದೆ.

ಯಲ್ಲಪ್ಪ ಬೂತಯ್ಯ ಟಿ ಅವರು, **"ಮಾತಂಗ ವಚನಗಳು"** (೨೦೧೨) ಕೃತಿಯಲ್ಲಿ ಮಾತಂಗ ಸಮಾಜದ ಜನ ಜೀವನವನ್ನು ಕುರಿತಾದ ಮತ್ತು ಅವರ ಆರ್ಥಿಕ ಮತ್ತು ಸಾಮಾಜಿಕ

ಸ್ಥಾನಮಾನಗಳನ್ನು, ರೀತಿ ನೀತಿ ರಿವಾಜುಗಳನ್ನು ವಿವರಿಸುವ ವಚನಗಳು ಮೂಡಿಬಂದಿವುದೇ ಆಗಿದೆ. ಮಾತಂಗ ಪದವು ಅತ್ಯಂತ ಮಹತ್ವ ಪೂರ್ಣ ಹಿನ್ನೆಲೆಯನ್ನು ಹೊಂದಿದೆ. ಅತಿ ಪ್ರಾಚೀನ ಕೃತಿಗಳಾದ ಗುಣಾಢ್ಯನ ಬೃಹಕ್ಕಥೆ, ಜೈನರ ಹರಿವಂಶ ಪುರಾಣ ಮತ್ತು ಶಾಂತಿ ಪುರಾಣಗಳಲ್ಲಿ, ಬೌದ್ಧರ ಲಲಿತ ವಿಸ್ತಾರ ಮತ್ತು ಜಾತಕ ಕಥೆಗಳಲ್ಲಿ ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತಗಳಲ್ಲಿ ಮತ್ತು ಕೇಲವು ಪುರಾಣಗಳಲ್ಲಿ ಮತಂಗ ಪ್ರಸ್ತಾಪಗೊಂಡಿದೆ.

ಅಮರಸಿಂಹ ಕೃತಿ ಅಮರಕೋಶದ ದ್ವಿತೀಯ ಕಾಂಡ ೧೦ನೇ ಶೂದ್ರವರ್ಗ ೨೦. ೨೧ನೇ ಶ್ಲೋಕಗಳು

ಚಾಂಡಾಲ ಪ್ಲವ ಮಾತಂಗ ದಿವಾಕೀರ್ತಿ ಜನಾಂಗಮಾಃ!!

ನಿಷಾದ ಸ್ವಪಚಾವಂತೇವಾಸಿ ಚಂಡಾಲ ಪುಕ್ಕಸಾಃ!!

ಭೇದಃ ಕಿರತಾ ಶಬರ ಪುಲಿಂದಾ ಮ್ಲೇಚಾಜತಯಃ!!

ಇಲ್ಲಿ ಮಾತಂಗ ಪದವು ಶೂದ್ರ ವರ್ಗದಲ್ಲಿ ಒಂದು ಪ್ರಮುಖ ಸಮುದಾಯವನ್ನು ಗುರುತಿಸುವ ಸಂಕೇತವಾಗಿದೆ. ಈ ಕಾರಣದಿಂದಲೇ ಮಾತಂಗ ಪದದ ನಿಷ್ಪತ್ತಿಗೆ ಕಾರಣವಾದ ಮತಂಗ ಪದದದಿಂದ ತಮ್ಮನ್ನು ಮತಂಗರುಲೊದ್ಭವರೆಂದು ಮಾದಿಗರು ಕರೆದು ಕೊಳ್ಳುತ್ತಾರೆ. ಮಾದಿಗ ಪದವು ಕೂಡ ಮಾತಂಗ ಪದದ ಅಪಭ್ರಂಶವೆಯಾಗಿದೆ.

ದೇವರಾಜ ಓ ಅವರು, **"ಮಧ್ಯಕಾಲೀನ ಕರ್ನಾಟಕ ಚರಿತ್ರೆಯಲ್ಲಿ ದಲಿತರು"** (೨೦೧೩) ಎಂಬ ಪುಸ್ತಕದಲ್ಲಿ 'ಮಾದಿಗ' ಎಂಬ ಶಬ್ದದ ನಿಷ್ಪತ್ತಿ ಭಿನ್ನಾಭಿಪ್ರಾಯದಿಂದ ಕೂಡಿದೆ. ಮಾದಿಗರು ಈ ನಾಡಿನ ಮೂಲನಿವಾಸಿಗಳೆಂದು, ಮಾತಂಗ ಶಬ್ದದಿಂದ ಹುಟ್ಟಿರುವಂತೆ ಕಾಣುತ್ತದೆ. ಮಾತಂಗರು ಚರ್ಮದ ಕೆಲಸ ಮಾಡುವವರು ಹಾಗೂ ಹೊಲೆಯರ ನಂತರದ ಸ್ಥಾನವನ್ನು ಪಡೆದುಕೊಂಡಿರುವವರು. ಮಾತಂಗಿಯ ಸಂಸ್ಕೃತ ರೂಪಾಂತರ ಕಾಳಿ, ಚಕ್ಕಲಿಯನ್ ಎಂದು ತಮಿಳು ಪ್ರಾಂತ್ಯದಲ್ಲಿ ಕರೆಸಿಕೊಂಡರೆ, ಎಡಗೈ ಗುಂಪಿನವರೆಂದು ಗುರುತಿಸಿ ಕೊಂಡಿದ್ದಾರೆ. ಕನ್ನಡ ಮತ್ತು ತೆಲುಗು ಭಾಷೆಯನ್ನು ಮಾತನಾಡುತ್ತಾರೆ. ತುಮಕೂರು, ಬೆಂಗಳೂರು, ಕೋಲಾರ, ಚಿತ್ರದುರ್ಗದಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ. ಮಾದಿಗರಲ್ಲಿ ಹಲವು ಉಪಪಂಗಡಗಳಿವೆ ಅವುಗಳು ತನ್ನ ಸಂಸ್ಕೃತಿಯ ಜೊತೆಗೆ ಗುರುತಿಸಿಕೊಳ್ಳುತ್ತಾವೆ. ಈ ಪುಸ್ತಕದಲ್ಲಿ ಮಾದಿಗರ ಮೂಲ, ಕಸುಬು, ಆರಾಧ್ಯ ಮಾಡುವ ದೇವರು ಬಗೆಗೆ ಮಾಹಿತಿಯನ್ನು ನೀಡಲಾಗಿದೆ.

ರಹಮತ್ ತರೀಕೆರೆ ಅವರು, **"ಕರ್ನಾಟಕ ಶಾಕ್ತಪಂಥ"** (೨೦೧೭) ಎಂಬ ಕೃತಿಯಲ್ಲಿ ಕೋಣಬಲಿ ಬೇಡುವ ದುರುಗಮ್ಮನ ಗುಡಿಗಳು ಸಾಮಾನ್ಯವಾಗಿ ಮಾದಿಗರ ಕೇರಿಗಳಲ್ಲಿರುತ್ತವೆ. ಮಾದಿಗರ ದೈವವಾದ ದುರುಗಿಯ ಹೆಸರಲ್ಲಿರುವ 'ದುರ್ಗ' ಶಬ್ದಕ್ಕೂ ಆಕೆ ದುರ್ಗರಕ್ಷಕ ದೇವತೆಯಾಗಿರುವುದಕ್ಕೂ, ಮಾದಿಗರು ಕೋಟೆ ರಕ್ಷಕರಾಗಿರುವುದಕ್ಕೂ ಸಂಬಂಧವಿದೆ. ಅಲ್ಲೂರು ದೇವದುರ್ಗ ದೇವಗಿರಿಗಳಲ್ಲಿ

ಕೋಟೆಗಳ ಮುಂದೆ ದುರ್ಗಮ್ಮನ ಗುಡಿಗಳಿವೆ. ಶಾಕ್ತಕ್ಷೇತ್ರಗಳಾದ ಬಾದಾಮಿಯ ಚಾಲುಕ್ಯರು, ಚಂದ್ರಗುತ್ತಿಯ ಗುತ್ತರು, ಸವದತ್ತಿಯ ರಟ್ಟರು, ಕೊಲ್ಹಾಪುರದ ಶಾಹು ಮಹಾರಾಜ, ಮೈಸೂರು ಒಡೆಯರು, ಉಚ್ಚಂಗಿದುರ್ಗ ಹಾಗೂ ಬಳ್ಳಾರಿಗಳು ಕೋಟೆಯ ಊರುಗಳು. ಮಾದಿಗರು ಬಹುಸಂಖ್ಯಾತರಾಗಿರುವ ಊರುಗಳು ಸಾಮಾನ್ಯವಾಗಿ ಕೋಟೆ ಮತ್ತು ಪ್ರಭುತ್ವಗಳಿಂದ್ದ ಪ್ರದೇಶಗಳಿಲ್ಲಿವೆ. ಇಲ್ಲೇ ದಂಡಿನರಸೀಕೆರೆಯ ಮಾದಿಗರು ಆರಾಧಿಸುವ ದಂಡಿನ ದುರುಗಮ್ಮ, ಬ್ರಿಟಿಷರ ಮೇಲೆ ಕಾಳಗ ಹೂಡುವ ಕಥನವನ್ನು ಉಲ್ಲೇಖಿಸಬೇಕು. ಸಮುದಾಯವೊಂದರ ಪಂಥೀಯ ಹಿನ್ನೆಲೆಯು ಪ್ರಭುತ್ವಕ್ಕೆ ಬಳಕೆಯಾದ ಈ ಕ್ರಮದಲ್ಲಿ ಶೋಷಣೆಯ ಅಂಶವಿದೆ. ಆದರೆ ಅಲ್ಲಿ ಸಮುದಾಯವು ತನ್ನ ಕುಶಲತೆ ಬಳಸಿಕೊಂಡು ಸಾಮಾಜಿಕವಾಗಿ, ಆರ್ಥಿಕವಾಗಿ ಮುಂಚಲನೆ ಸಾಧಿಸಿದ ಮುಖವೂ ಅಡಗಿದೆ. ಈಗೇ ಕೃತಿಯನ್ನು ಗಮನಿಸಿದ್ದಗ ಚಿತ್ರದುರ್ಗದ ಕೋಟೆಯಲ್ಲಿ ಇರುವ ಮಾತಂಗಿಯು ಸಹ ದುರ್ಗದ ಕೋಟೆಯನ್ನು ರಕ್ಷಣೆಮಾಡುವ ದೇವತೆಯಾಗಿವುದು ತಿಳಿದುಬರುತ್ತದೆ. ಈ ಕೃತಿಯ ಉದಕು ಸಮುದಾಯದ ಮಾದಿಗರು ಆರಾಧಿಸುವ ದಂಡಿನ ದುರುಗಮ್ಮನ ಬಗೆಗೆ ವಿವರಿಸಿದ್ದಾರೆ.

ಪ್ರಸ್ತುತ ಅಧ್ಯಯನ ಇವತ್ತಿನ ಆಧುನೀಕರಣ, ಜಾಗತೀಕರಣ, ಉದಾರೀಕರಣ ಸಂದರ್ಭದಲ್ಲಿ ಮಾದಿಗ ಸಮುದಾಯದಲ್ಲಿ ಆಗಿರುವ ಬದಲಾವಣೆಯನ್ನು ತಿಳಿಸಲು ಪ್ರಯತ್ನ ಮಾಡಿದ್ದೇನೆ.

೧.೫ ಅಧ್ಯಯನದ ಉದ್ದೇಶ

ಚಿತ್ರದುರ್ಗ ಜಿಲ್ಲೆಯ ಮಾದಿಗ ಸಮುದಾಯದ ಸಾಮಾಜಿಕ ಬದಲಾವಣೆಯ ಕುರಿತಂತೆ ಇದುವರೆಗೆ ಸಮಾಜಶಾಸ್ತ್ರೀಯ ನೆಲೆಯಲ್ಲಿ ಅಧ್ಯಯನ ನಡೆದಿಲ್ಲ. ಎಲ್ಲ ಕ್ಷೇತ್ರಗಳಲ್ಲಿ ಅತ್ಯಂತ ಹಿಂದುಳಿದ ಸಮುದಾಯವಾಗಿದೆ. ಈ ಹಿನ್ನೆಲೆಯಲ್ಲಿ ಮಾದಿಗ ಸಮುದಾಯದ ಸಾಮಾಜಿಕ ಹಿನ್ನೆಲೆ ಅವರ ಧಾರ್ಮಿಕ, ಆರ್ಥಿಕ, ಶೈಕ್ಷಣಿಕ ಮತ್ತು ರಾಜಕೀಯ ಸ್ಥಿತಿಗತಿಗಳ ವಿಷಯುಗಳನ್ನು ಅಧ್ಯಯನಕ್ಕೊಳಪಡಿಸಲಾಗಿದೆ. ಈ ಸಮುದಾಯ ಎದುರಿಸುತ್ತಿರುವ ಸಮಸ್ಯೆಗಳನ್ನು ವಿಶ್ಲೇಷಿಸುವುದು, ಪರಿಹಾರೋಪಾಯಗಳನ್ನು ಸೂಚಿಸುವುದು ಮತ್ತು ಇತ್ತೀಚಿನ ದಿನಗಳಲ್ಲಿ ಉಂಟಾಗುತ್ತಿರುವ ಬದಲಾವಣೆಗಳನ್ನು ಅಧ್ಯಯನದಲ್ಲಿ ಗಮನಿಸಲಾಗಿದೆ. ಸಮಾಜವು ನಿತ್ಯ ಪರಿವರ್ತನಾಶೀಲವಾದುದು, ಸಮುದಾಯಗಳು ಪರಿವರ್ತನೆಗೆ ಒಗ್ಗಿಕೊಳ್ಳುತ್ತಿರುವೆ. ಪ್ರಸ್ತುತ ಅಧ್ಯಯನವು ಅಂತರ್‌ಶಿಸ್ತೀಯ ಅಂಶಗಳನ್ನು ಹೊಂದಿದ್ದು, ಮಾದಿಗ ಸಮುದಾಯದ ಸಾಮಾಜಿಕ ಬದಲಾವಣೆಯನ್ನು ಅಧ್ಯಯನ ಮಾಡಲಾಗಿದೆ.

ಪ್ರಸ್ತುತ ಅಧ್ಯಯನವು ಈ ಕೆಳಗಿನ ಉದ್ದೇಶಗಳನ್ನು ಹೊಂದಿದೆ.

೧. ಮಾದಿಗ ಸಮುದಾಯದ ಹಿನ್ನೆಲೆಯನ್ನು ಅಧ್ಯಯನ ಮಾಡುವುದು.

೨. ಮಾದಿಗ ಸಮುದಾಯದ ಸಾಮಾಜಿಕ, ಆರ್ಥಿಕ, ಧಾರ್ಮಿಕ ಬದಲಾವಣೆಗಳನ್ನು ಗುರುತಿಸುವುದು.

೩. ಮಾದಿಗ ಸಮುದಾಯದ ಶೈಕ್ಷಣಿಕ ಮತ್ತು ರಾಜಕೀಯ ಬದಲಾವಣೆಗಳನ್ನು ವಿಶ್ಲೇಷಿಸುವುದು.

೪. ಮಾದಿಗ ಸಮುದಾಯದ ಬದುಕಿನಲ್ಲಾದ ಬದಲಾವಣೆಗಳನ್ನು ಅಧ್ಯಯನದಲ್ಲಿ ಗುರುತಿಸುವುದು.

೫. ವರ್ತಮಾನದಲ್ಲಿ ಮಾದಿಗ ಸಮುದಾಯ ಎದುರಿಸುತ್ತಿರುವ ಸಮಸ್ಯೆಗಳು ಯಾವ ಬಗೆಯದು ಎಂದು ತಿಳಿಯುವುದು.

೧.೬ ಅಧ್ಯಯನದ ಪ್ರಮೇಯಗಳು

೧. ಗ್ರಾಮೀಣ ಪ್ರದೇಶದ ಮಾದಿಗ ಸಮುದಾಯದ ಜನರ ಪರಿಸ್ಥಿತಿ ಮಂದಗತಿಯಲ್ಲಿ ಇದೆ.

೨. ಪೂರ್ವದ ಹಿರಿಯರು ತಮ್ಮ ಮೂಲ ವೃತ್ತಿಗೆ ಅಂಟಿಕೊಂಡು ಬದುಕನ್ನು ಸಾಗಿಸುತ್ತಿದ್ದರೆ ಇತ್ತೀಚಿನ ಯುವಕರು ಮೂಲ ವೃತ್ತಿಯಿಂದ ದೂರವಾಗುತ್ತಿದ್ದಾರೆ.

೧.೭ ಅಧ್ಯಯನದ ವಿಧಾನಗಳು

ಪರಿಶಿಷ್ಟ ಜಾತಿಗೆ ಸೇರಿದ ಮಾದಿಗ ಸಮುದಾಯಕ್ಕೆ ಸಂಬಂಧಿಸಿದಂತೆ ಸಮುದಾಯದವರು ನೆಲೆಗೊಂಡ ಪ್ರದೇಶಗಳಲ್ಲಿ ಸಂಚರಿಸಿ ಸಮುದಾಯದವರ ಮತ್ತು ವಿದ್ವಾಂಸರ ಮೂಲಕ ಮಾಹಿತಿ ಪಡೆದಿದ್ದೇನೆ. ವಿಷಯಕ್ಕೆ ಸಂಬಂಧಿಸಿದ ಕೃತಿಗಳು, ಲೇಖನಗಳು, ಅನುಭವಗಳು ಹಾಗೂ ವಿಷಯಗಳನ್ನು ಅರಿತುಕೊಂಡು ವಿವಿಧ ಸಂಪನ್ಮೂಲ ಮತ್ತು ವಿಧಾನಗಳಿಂದ ಮಾಹಿತಿಯನ್ನು ಸಂಗ್ರಹಿಸಿ ಮಹಾಪ್ರಬಂಧವನ್ನು ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ.

೧.೭.೧ ಅವಲೋಕನ ವಿಧಾನ

ಮಾದಿಗ ಸಮುದಾಯದ ಮಾಹಿತಿ ಪಡೆಯಲು ಕ್ಷೇತ್ರಕಾರ್ಯದಲ್ಲಿ ಅವಲೋಕನ ವಿಧಾನವು ಮುಖ್ಯವಾದುದು. ಅವಲೋಕನವು ಸಾಮಾಜಿಕ ಸಂಶೋಧನೆಯಲ್ಲಿ ಮಾಹಿತಿ ಸಂಗ್ರಹಣೆಗಾಗಿ ಬಳಸಲಾಗುತ್ತಿರುವ ಮುಖ್ಯ ತಂತ್ರ ಸಾಧನಗಳಲ್ಲೊಂದು. ಪ್ರಶ್ನಾವಳಿ ಮತ್ತು ಸಂದರ್ಶನ ಅವಧಿಯಲ್ಲಿ ಕಂಡುಬರಬಹುದಾದ ಕೆಲವು ಸಮಸ್ಯೆಗಳನ್ನು ಅವಲೋಕನದ ಮೂಲಕ ಬಗೆಹರಿಸಿಕೊಳ್ಳಲು ಸಾಧ್ಯವಾಗುತ್ತದೆ. ಮಾದಿಗರ ಜೊತೆಯಲ್ಲಿ ಸಹಭಾಗಿಯಾಗಿ ಸಮುದಾಯದ ಅಂತರಾಳದಲ್ಲಿ ಹುದುಗಿರುವ ಮಾಹಿತಿ ಮತ್ತು ಇವರ ಬದುಕಿನ ಸವಾಲುಗಳನ್ನು ಕುರಿತು ಮಾಹಿತಿಯನ್ನು ತಿಳಿದು ಅಧ್ಯಯನಕ್ಕೆ ಪೂರಕವಾಗಿ ರೂಪಿಸಿಕೊಳ್ಳಲಾಗಿದೆ.

೧.೭.೨ ಪ್ರಶ್ನಾವಳಿ ವಿಧಾನ

ಚಿತ್ರದುರ್ಗ ಜಿಲ್ಲೆಯ ಮಾದಿಗ ಸಮುದಾಯದ ಸಾಮಾಜಿಕ ಬದಲಾವಣೆ ಎಂಬ ಶೀರ್ಷಿಕೆಯ ಅಧ್ಯಯನಕ್ಕೆ ಸಂಬಂಧಿಸಿದಂತೆ ಪ್ರಶ್ನಾವಳಿ ವಿಧಾನದ ಮೂಲಕ ಮಾಹಿತಿಗಳನ್ನು ಪಡೆಯಲಾಗಿದೆ. ಅಧ್ಯಯನ ವ್ಯಾಪ್ತಿಯಾದ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ, ಚಿತ್ರದುರ್ಗ, ಮೊಳಕಾಲ್ಮೂರು, ಹಿರಿಯೂರು, ಹೊಳಲ್ಕೆರೆ ಮತ್ತು ಹೊಸದುರ್ಗ ಈ ಆರು ತಾಲೂಕುಗಳ ಆಯ್ಕೆ ಮಾಡಿಕೊಂಡು ಅದರಲ್ಲಿ ಮುಖ್ಯವಾಗಿ ಸೂಕ್ಷ್ಮ ಅಧ್ಯಯನದ ದೃಷ್ಟಿಯಿಂದ ಆರು ತಾಲೂಕುಗಳಲ್ಲಿ, ಪ್ರತಿಯೊಂದು ತಾಲೂಕಿನಲ್ಲಿ ಎರಡು ಹಳ್ಳಿಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಮೊಳಕಾಲ್ಮೂರು ತಾಲೂಕಿನಲ್ಲಿ

ರಾಯಾಪುರ ಮತ್ತು ರಾಂಪುರ, ಚಳ್ಳಕೆರೆ ತಾಲೂಕಿನಲ್ಲಿ ನನ್ನಿವಾಳ ಮತ್ತು ಗೌರಸಮುದ್ರ, ಹಿರಿಯೂರು ತಾಲೂಕಿನಲ್ಲಿ ಧರ್ಮಪುರ ಮತ್ತು ದಿಂಡಾವರ, ಚಿತ್ರದುರ್ಗ ತಾಲೂಕಿನಲ್ಲಿ ಕೊನಬೇವು ಮತ್ತು ಗೋನೂರು, ಹೊಸದುರ್ಗ ತಾಲೂಕಿನಲ್ಲಿ ದೊಡ್ಡಘಟ್ಟ ಮತ್ತು ಮಾಡದಕೆರೆ ಹಾಗೂ ಹೊಳಲ್ಕೆರೆ ತಾಲೂಕಿನಲ್ಲಿ ತಾಳ್ಯ ಮತ್ತು ಚಿತ್ರಹಳ್ಳಿಯಲ್ಲಿ ಸುಮಾರು ೨೫ ಪುರುಷರು ಮತ್ತು ೨೫ ಮಹಿಳೆಯರ ಒಟ್ಟು ೬೦೦ ಜನರನ್ನು ವ್ಯಕ್ತಿ ಅಧ್ಯಯನ ಮಾಡಿ. ಅಧ್ಯಯನ ಮುಖ್ಯ ಉದ್ದೇಶಗಳಿಗೆ ಅನುಗುಣವಾಗಿ ವಿವಿಧ ಆಯಾಮಗಳಲ್ಲಿ ಹಲವಾರು ಪ್ರಶ್ನೆಗಳನ್ನು ಹೊಂದಿರುವ ಸೂಕ್ತ ಪ್ರಶ್ನಾವಳಿಯನ್ನು ತಯಾರಿಸಿಕೊಂಡು ಮಾಹಿತಿಗಳನ್ನು ಪಡೆಯಲಾಗಿದೆ.

೧.೬.೩ ಸಂದರ್ಶನ ವಿಧಾನ

ಸಂದರ್ಶನ ವಿಧಾನ ಎನ್ನುವುದು ಸಾಮಾಜಿಕ ಸಂಶೋಧನೆಯ ಕ್ಷೇತ್ರದಲ್ಲಿ ಮಾಹಿತಿ ಸಂಗ್ರಹಿಸಲು ಹೆಚ್ಚು ಪರಿಣಾಮಕಾರಿ ಹಾಗೂ ಯಶಸ್ವಿ ವಿಧಾನವಾಗಿದೆ. ಸಂದರ್ಶನದ ಮೂಲಕ ಅಭಿಪ್ರಾಯವನ್ನು ವಿನಿಮಯ ಮಾಡಿಕೊಂಡು ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಮಾದಿಗ ಸಮುದಾಯದವರು ಶತಶತಮಾನಗಳಿಂದ ಶೋಷಣೆಗೆ ಒಳಗಾಗಿ ಬಳಲಿದವರಾಗಿದ್ದಾರೆ. ಇವರ ಸಂಪೂರ್ಣ ಮಾಹಿತಿಯನ್ನು ಪಡೆಯುವುದರ ಸಲುವಾಗಿ ಚಿತ್ರದುರ್ಗ ಜಿಲ್ಲೆಯ ಆರು ತಾಲೂಕುಗಳಲ್ಲಿ ಪ್ರತಿಯೊಂದು ತಾಲೂಕಿನಲ್ಲಿ ಎರಡು ಗ್ರಾಮಗಳನ್ನು ಆಯ್ಕೆಮಾಡಲಾಗಿದೆ. ಇಪ್ಪತ್ತೈದು ಜನರನ್ನು ವೈಯಕ್ತಿಕವಾಗಿ ಸಂದರ್ಶಿಸಲಾಗಿದೆ. ಹಾಗೆಯೇ ಸಾಂಸ್ಕೃತಿಕವಾಗಿ ಹಾಗೂ ಸಾಮಾಜಿಕವಾಗಿ ವಿಭಿನ್ನವಾದ ತಾಲೂಕುಗಳಲ್ಲಿ ಕೇಲವು ಗ್ರಾಮಗಳನ್ನು ಆಯ್ಕೆಮಾಡಲಾಗಿದೆ. ಮೊಳಕಾಲ್ಮೂರು ತಾಲೂಕಿನಲ್ಲಿ ಕೋನಸಾಗರ ಮತ್ತು ನೇರ್ಲೆಹಳ್ಳಿ, ಚಳ್ಳಕೆರೆ ತಾಲೂಕಿನಲ್ಲಿ ಅಬ್ಬೇನಹಳ್ಳಿ ಮತ್ತು ಹನುಮಂತನಹಳ್ಳಿ, ಹಿರಿಯೂರು ತಾಲೂಕಿನಲ್ಲಿ ಬುರುಜನರೂಪ್ಪ ಮತ್ತು ಹೇಮದಳ, ಚಿತ್ರದುರ್ಗ ತಾಲೂಕಿನಲ್ಲಿ ಚಿತ್ರದುರ್ಗ ಮತ್ತು ರಂಗನಹಳ್ಳಿ, ಹೊಸದುರ್ಗ ತಾಲೂಕಿನಲ್ಲಿ ಕರಿದೊಡ್ಡಹಟ್ಟಿ ಮತ್ತು ಗೂಳಿಹಟ್ಟಿ ಹಾಗೂ ಹೊಳಲ್ಕೆರೆ ತಾಲೂಕಿನಲ್ಲಿ ಮುತ್ತುಗನೂರು ಮತ್ತು ಹೊಳಲ್ಕೆರೆಯಲ್ಲಿ ಒಟ್ಟು ೭೨೦ ಕುಟುಂಬಗಳನ್ನು ಸಂದರ್ಶಿಸಿ ಮಾಹಿತಿಯನ್ನು ಪಡೆಯಲಾಗಿದೆ.

೧.೬.೪ ಐತಿಹಾಸಿಕ ವಿಧಾನ

ಮಾದಿಗ ಸಮುದಾಯ ಇಡೀ ರಾಜ್ಯದಲ್ಲಿಯೇ ಸಾಮಾಜಿಕ ವ್ಯವಸ್ಥೆಯಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗಿದೆ. ಈ ಸಮುದಾಯ ಮೂಲ ಕಸುಬು ಚರ್ಮದ ಕೆಲಸ, ತಂಗಡಿ ಚಿಪ್ಪೆಯನ್ನು ಸುಲಿದು ಅದನ್ನು ಮಾರುವ ಕೆಲಸ, ಚರ್ಮದಿಂದ ಪಾದರಕ್ಷೆ, ಚರ್ಮ ಬುಟ್ಟಿ, ರೈತರಿಗೆ ಬೇಕಾದ ಚರ್ಮದ ಸಾಮಾನುಗಳು ಈ ಕಸುಬಿನಿಂದ ಅಕ್ಕಿ, ಧಾನ್ಯ ರೂಪದಲ್ಲಿ ಸಂಬಳ ಪಡೆಯುವ ರೂಢಿಯಿತ್ತು. ಮದುವೆ ಆಚರಣೆಯಲ್ಲಿ ಮತ್ತು ಶವಸಂಸ್ಕಾರದ ಆಚರಣೆಯಲ್ಲಿ ಈ ಸಮುದಾಯವು ಬಹಳ ಪ್ರಾಮುಖ್ಯತೆಯನ್ನು ಹೊಂದಿದೆ. ಆದ್ದರಿಂದ ಐತಿಹಾಸಿಕವಾಗಿ ವಿವಿಧ ರೀತಿಯ ಮಾಹಿತಿ ಪಡೆದುಕೊಂಡು ಮಹಾಪ್ರಬಂಧವನ್ನು ಕಟ್ಟಿಕೊಂಡುವಂಥ ಪ್ರಯತ್ನ ಮಾಡಲಾಗಿದೆ.

೧.೭.೫ ತುಲನಾತ್ಮಕ ವಿಧಾನ

ಚಿತ್ರದುರ್ಗ ಜಿಲ್ಲೆಯ ಮಾದಿಗ ಸಮುದಾಯದ ಹಿರಿಯರು (೬೦ರಿಂದ ಮೇಲ್ಪಟ್ಟು), ಮಧ್ಯವಯಸ್ಕರು (೪೦ರಿಂದ ೬೦), ಯುವಕರು (೧೮ರಿಂದ ೪೦) ಹೀಗೆ ಮೂರು ತಲೆಮಾರಿನವರನ್ನು ಅಧ್ಯಯನಕ್ಕೆ ಒಳಪಡಿಸಿ ಅವರ ಮಧ್ಯ ಇರುವ ಅಂತರಗಳನ್ನು ತುಲನಾತ್ಮಕವಾಗಿ ಅಧ್ಯಯನ ಮಾಡಲಾಗಿದೆ.

೧.೭.೬ ಸಂಶೋಧನಾ ಸಾಧನೆಗಳು

ಪ್ರಸ್ತುತ ಅಧ್ಯಯನದಲ್ಲಿ ಅಧ್ಯಯನದ ಉದ್ದೇಶದಿಂದ ಆಧುನಿಕ ಉಪಕರಣಗಳನ್ನು ಉಪಯೋಗಿಸಿ ಅಧ್ಯಯನವನ್ನು ಮಾಡಲಾಗಿದೆ. ಅದಕ್ಕಾಗಿ ಗಣಕಯಂತ್ರ, ಹ್ಯಾಂಡ್‌ಕ್ಯಾಮ್, ಕ್ಯಾಮರ, ಐಪೋಡ್, ಟೇಪ್‌ರೆಕಾರ್ಡರ್, ಲ್ಯಾಬ್‌ಟಾಪು, ನೋಟ್‌ಬುಕ್, ಪೆನ್ನು ಹಾಗೂ ಮೂಲಭೂತ ಸಾಮಗ್ರಿಗಳನ್ನು ಬಳಸಿಕೊಳ್ಳಲಾಗಿದೆ.

೧.೮ ಸಂಶೋಧನಾ ವಿನ್ಯಾಸ

ಮಾದಿಗ ಸಮುದಾಯದ ಸಾಮಾಜಿಕ ಬದಲಾವಣೆ (ಚಿತ್ರದುರ್ಗ ಜಿಲ್ಲೆಯನ್ನು ಅನುಲಕ್ಷಿಸಿ) ಎನ್ನುವ ಪ್ರಸ್ತುತ ಅಧ್ಯಯನವನ್ನು ಪ್ರಮುಖವಾಗಿ ಏಂಟು ಅಧ್ಯಾಯಗಳಾಗಿ ವರ್ಗೀಕರಿಸಲಾಗಿದೆ.

ಅಧ್ಯಾಯ ಒಂದು: ಈ ಅಧ್ಯಾಯದಲ್ಲಿ ಪ್ರಸ್ತಾವನೆ, ಅಧ್ಯಯನದ ಉದ್ದೇಶ, ಅಧ್ಯಯನದ ವ್ಯಾಪ್ತಿ, ಅಧ್ಯಯನದ ಪ್ರಮೇಯಗಳು, ಅಧ್ಯಯನದ ಮಹತ್ವ, ಇಲ್ಲಿಯವರೆಗೆ ನಡೆದ ಅಧ್ಯಯನದ ಸಮೀಕ್ಷೆ, ಸಂಶೋಧನಾ ವಿಧಾನಗಳು, ಸಂಶೋಧನಾ ವಿನ್ಯಾಸ ಕುರಿತು ವಿವರಿಸಲಾಗಿದೆ.

ಅಧ್ಯಾಯ ಎರಡು: ಭೌಗೋಳಿಕ ಪರಿಚಯ, ಚಿತ್ರದುರ್ಗ ಜಿಲ್ಲೆಯು ಹಿಂದೆ ಚಾರಿತ್ರಿಕವಾಗಿ ಎಷ್ಟು ಮಹತ್ವದ್ದಾಗಿತ್ತು, ಅದರ ಹಿನ್ನೆಲೆಯೇನು ಎಂಬುದನ್ನು ನೋಡುವುದರೊಂದಿಗೆ ಭೌಗೋಳಿಕ ಸ್ವರೂಪ ಹೇಗಿದೆ. ಈ ಜಿಲ್ಲೆಯಲ್ಲಿ ಹರಿಯುತ್ತಿರುವ ಪ್ರಮುಖ ನದಿಗಳು, ಕೃಷಿ ವಿಧಾನ, ನೀರಾವರಿಯ ಸ್ವರೂಪ, ಗುಡ್ಡಗಾಡು ಪ್ರದೇಶ, ಗಣಿಗಾರಿಕೆ ಮತ್ತು ಔದ್ಯೋಗಿಕತೆ, ನೈಸರ್ಗಿಕ ಪರಿಸರ ಮುಂತಾದವುಗಳ ಕುರಿತು ವಿಶ್ಲೇಷಿಸಲಾಗಿದೆ.

ಅಧ್ಯಾಯ ಮೂರು: ಮಾದಿಗ ಸಮುದಾಯದ ಪರಿಚಯ, ಪದನಿಷ್ಪತ್ತಿ, ಸಮುದಾಯದ ಪೌರಾಣಿಕ ಮತ್ತು ಚಾರಿತ್ರಿಕ ಹಿನ್ನಲೆ, ಅದಲ್ಲದೆ ಕರ್ನಾಟಕದ ಒಟ್ಟು ಜನಸಂಖ್ಯೆ ಮತ್ತು ಚಿತ್ರದುರ್ಗ ಜಿಲ್ಲೆಯ ಮಾದಿಗ ಸಮುದಾಯದ ಜನಸಂಖ್ಯೆಯನ್ನು ಬಗ್ಗೆ ವಿಶ್ಲೇಷಸಲಾಗಿದೆ.

ಅಧ್ಯಾಯ ನಾಲ್ಕು: ಈ ಅಧ್ಯಾಯದಲ್ಲಿ ಮಾದಿಗ ಸಮುದಾಯದ ಸಾಮಾಜಿಕ ಬದಲಾವಣೆಗಳನ್ನು ಗುರುತಿಸಲಾಗಿದೆ. ಜನನ, ನಾಮಕರಣ, ಜವುಳ, ಋತುಮತಿ, ವಿವಾಹ, ಸೀಮಂತ, ಶವಸಂಸ್ಕಾರ, ಕೌಟುಂಬಿಕ ವ್ಯವಸ್ಥೆ, ಉತ್ತರಾಧಿಕಾರತ್ವ, ಬಳಿಗಳು (ಕುಲ) ಮತ್ತು ಬಂಧುತ್ವ, ಸಮುದಾಯದ ಸಾಮಾಜಿಕ ಸಮಸ್ಯೆಗಳು ಮತ್ತು ಸವಾಲುಗಳು, ವರ್ತಮಾನದ ಸ್ಥಿತಿಗತಿಗಳ ಬಗ್ಗೆ ಚರ್ಚಿಸಲಾಗಿದೆ.

ಅಧ್ಯಾಯ ಐದು: ಈ ಅಧ್ಯಾಯದಲ್ಲಿ ಮಾದಿಗ ಸಮುದಾಯದ ಧಾರ್ಮಿಕ ಬದಲಾವಣೆಯಲ್ಲಿ ದೈವಾರಾಧನೆ, ಧಾರ್ಮಿಕ ನಂಬಿಕೆಗಳು, ವಾರ್ಷಿಕಾವರ್ತನ ಆಚರಣೆಗಳು, ಹಬ್ಬಗಳು, ಜಾತ್ರೆಗಳು, ಕೌಟುಂಬಿಕ ಆಚರಣೆಗಳು, ಮತಾಂತರ ಮುಂತಾದವುಗಳನ್ನು ಈ ಅಧ್ಯಾಯಗಳಲ್ಲಿ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

ಅಧ್ಯಾಯ ಆರು: ಈ ಅಧ್ಯಾಯದಲ್ಲಿ ಮಾದಿಗ ಸಮುದಾಯದ ಆರ್ಥಿಕ ಬದಲಾವಣೆಗಳನ್ನು ನೋಡಲಾಗಿದೆ. ಆರ್ಥಿಕ ಜೀವನ, ಪಾರಂಪರಿಕ ಕುಲಕಸುಬುಗಳು, ಪಶುಪಾಲನೆ, ಕೃಷಿ, ವರ್ತಮಾನದಲ್ಲಿ ಕಸುಬುದಾರರ ಸ್ಥಿತಿಗತಿಗಳು ಕುರಿತು ವಿಶ್ಲೇಷಿಸಲಾಗಿದೆ.

ಅಧ್ಯಾಯ ಏಳು: ಈ ಅಧ್ಯಾಯವು ಮಾದಿಗ ಸಮುದಾಯದ ಶೈಕ್ಷಣಿಕ ಬದಲಾವಣೆ ಎಂಬ ವಿಷಯವನ್ನು ಹೊಂದಿದ್ದು ಇದರಲ್ಲಿ, ಶಿಕ್ಷಣ ಸ್ವರೂಪ, ಶೈಕ್ಷಣಿಕ ಸ್ಥಿತಿಗತಿ, ಪ್ರಾಥಮಿಕ ಶಿಕ್ಷಣ, ಮಾಧ್ಯಮಿಕ ಶಿಕ್ಷಣ, ಪ್ರೌಢ ಶಿಕ್ಷಣ, ಕಾಲೇಜು ಶಿಕ್ಷಣ ಇತ್ಯಾದಿ ವಿಷಯಗಳ ಬಗ್ಗೆ ವಿಶ್ಲೇಷಿಸಲಾಗಿದೆ.

ಅಧ್ಯಾಯ ಎಂಟು: ಮಾದಿಗ ಸಮುದಾಯ ರಾಜಕೀಯ ಬದಲಾವಣೆ ಎಂಬ ಶೀರ್ಷಿಕೆಯ ಅಧ್ಯಾಯದಲ್ಲಿ ಒಳಾಡಳಿತ ವ್ಯವಸ್ಥೆ, ಕಟ್ಟೆಮನೆಗಳ ಪಾತ್ರ, ಪಂಚಾಯಿತ್‌ರಾಜ್ಯ ವ್ಯವಸ್ಥೆ, ಗ್ರಾಮ ಪಂಚಾಯಿತ್, ತಾಲೂಕು ಪಂಚಾಯತ್, ಜಿಲ್ಲಾ ಪಂಚಾಯತ್, ಆಧುನಿಕತೆಯ ಪ್ರಭಾವ, ಸಮುದಾಯ ಸಂಘಟನೆ ಮತ್ತು ಹೋರಾಟ ಕುರಿತು ವಿಶ್ಲೇಷಿಸಲಾಗಿದೆ.

ಕೋನೆಯಾದಗಿ ಸಮಾರೋಪವಾಗಿದ್ದು ಇದರಲ್ಲಿ ಅಧ್ಯಯನದ ಫಲಿತಗಳನ್ನು ಮತ್ತು ಸಲಹೆಗಳನ್ನು ನೀಡಲಾಗಿದೆ. ಅನುಬಂಧದಲ್ಲಿ ಪರಾಮರ್ಶನ ಗ್ರಂಥಗಳು, ಸಂಪನ್ಮೂಲ ವ್ಯಕ್ತಿಗಳ ವಿವರ, ಛಾಯಾಚಿತ್ರಗಳು, ಪ್ರಶ್ನಾವಾಳಿ, ಸಂದರ್ಶನ ಅನುಸೂಚಿಯನ್ನು ನೀಡಲಾಗಿದೆ.

ಟಿಪ್ಪಣಿಗಳು

ಕಮಲಾಕ್ಷ ಪಿ, ೧೯೬೮, ದಕ್ಷಿಣ ಕನ್ನಡ ಜಿಲ್ಲೆಯ ಹರಿಜನ ಮತ್ತು ಗಿರಿಜನ ಸಾಮಾಜಿಕ ಇತಿಹಾಸ, ಸಿದ್ಧಾರ್ಥ ಪ್ರಿಂಟರ್ಸ್, ಮಂಗಳೂರು.

ಕೆಕೆಪುರ ಯಲ್ಲಪ್ಪ, ೨೦೦೧, ದೊಕ್ಕಲು ಮಕ್ಕಳು, ಶ್ರೀದುರ್ಗ ಪ್ರಕಾಶನ, ಕೆಕೆ ಪುರ.

ಕೊಟಗಾನಹಳ್ಳಿ ರಾಮಯ್ಯ, ೧೯೯೩, ಸಿಂದ್ ಮಾದಿಗರರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಕೇಂದ್ರ ಸರ್ಕಾರದ, ೧೯೬೧, ಅಂತ್ರೋಪಾಲಜಿಕಲ್ ಸರ್ವೇ ಆಫ್ ಇಂಡಿಯ,

ಗಾಡ್ವಿನ್ ಶಿರಿ, ೧೯೯೭, ದಲಿತ ಕ್ರೈಸ್ತರು, ಕ್ರಿಶ್ಚಿಯನ್ ಇನ್‌ಸ್ಟಿಟ್ಯೂಟ್ ಫಾರ್ ದಿ ಸ್ಟಡಿ ಆಫ್ ರಿಲಿಜಿಯನ್ ಅಂಡ್ ಸೊಸೈಟಿ, ಬೆಂಗಳೂರು.

ಚಲುವರಾಜು, ೧೯೯೩, ದಕ್ಕಲಿಗರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಆಕಾಡೆಮಿ, ಬೆಂಗಳೂರು.

ಚಂದ್ರಶೇಖರ್ ಟಿ ಆರ್ (ಸಂ), ೨೦೦೧, ದಲಿತ ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ದೇವರಾಜ ಓ, ೨೦೧೩, ಮಧ್ಯಕಾಲೀನ ಕರ್ನಾಟಕ ಚರಿತ್ರೆಯಲ್ಲಿ ದಲಿತರು, ಪಲ್ಲವ ಪ್ರಕಾಶನ, ಚನ್ನಪಟ್ಟಣ.

ಬುದ್ಧಕಾಶಪ್ಪ, ೧೯೯೮, ಹೈದರಾಬಾದ್ ಕರ್ನಾಟಕ ಮಾದಿಗರ ಸಾಂಸ್ಕೃತಿಕ ಅಧ್ಯಯನ,

ಮಲ್ಲಿಕಾಘಂಟಿ (ಸಂ), ೨೦೦೮, ದಲಿತ ಸಾಹಿತ್ಯ ಚಳವಳಿ, ದಲಿತ ಸಂಘರ್ಷ ಸಮಿತಿ ಹುಟ್ಟು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಯಲ್ಲಪ್ಪ ಬೂತಯ್ಯ ಟಿ, ೨೦೧೨, ಮಾತಂಗ ವಚನಗಳು, ಆದಿ ಭಾರತ ಸಾಹಿತ್ಯ ಪ್ರಕಾಶನ, ಮೈಸೂರು

ರಹಮತ್ ತರೀಕೆರೆ, ೨೦೧೭, ಕರ್ನಾಟಕ ಶಾಕ್ತಪಂಥ, ಮೈಲಹಳ್ಳಿ ರೇವಣ್ಣ, ೨೦೦೪, ಮಾದಾರರ ಜನಪದ ಸಾಹಿತ್ಯ: ಒಂದು ಅಧ್ಯಯನ,

ರಾಜಕುಮಾರ್ ಕೆ ಆರ್ ಜೆ, ೨೦೦೭, ಸ್ವಾತಂತ್ರ್ಯೋತ್ತರ ಕರ್ನಾಟಕದಲ್ಲಿ ಮಾದಿಗರು: ಚಾರಿತ್ರಿಕ ಅಧ್ಯಯನ, ಚರಿತ್ರೆ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಲಕ್ಷ್ಮೀಪತಿ ಕೋಲಾರ, ೧೯೯೩, ಮಾಸ್ತಿಕರ ಸಂಸ್ಕೃತಿ, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ವೆಂಕಟಸ್ವಾಮಿ ಎಂ, ೧೯೯೭, ಅಸ್ಪೃಶ್ಯರು ಒಂದು ಪರಿಶೀಲನೆ,

ಸುಭಾಷ್ ಭರಣಿ, ೧೯೯೬, ಧರೆಗೆ ದೊಡ್ಡವರು, ಕನ್ನಡ ಪುಸ್ತಕ ಪ್ರಾದಿಕಾರ, ಬೆಂಗಳೂರು

ಹಯವದನರಾವ್, ೧೯೦೧, ದ ಮೈಸೂರು ಟ್ರೈಬ್ಸ ಮತ್ತು ಕ್ಯಾಸ್ಟ್, ಮೈಸೂರು ಸರ್ಕಾರ, ಮೈಸೂರು.

ಹನುಮಂತಪ್ಪ ಡಿ, ೨೦೦೬, ಮೊಳಕಾಲ್ಮೂರು ಪರಿಸರ ಮಾದಿಗ ಸಮುದಾಯದ ಆಚರಣೆಗಳು, ಜಾನಪದ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ.

ಅಧ್ಯಾಯ: ಎರಡು

ಚಿತ್ರದುರ್ಗ ಜಿಲ್ಲೆಯ ಪರಿಚಯ

ಅಧ್ಯಾಯ: ಎರಡು

ಚಿತ್ರದುರ್ಗ ಜಿಲ್ಲೆಯ ಪರಿಚಯ

ಪೀಠಿಕೆ

ಚಿತ್ರದುರ್ಗ ಹಿಂದಿನಿಂದಲೂ ಅನೇಕ ಹೆಸರುಗಳಿಂದ ಕರೆಯಲ್ಪಟ್ಟಿದೆ. ಇಲ್ಲಿಯ ಶಾಸನಗಳಲ್ಲಿ ಚಿಂಚಿನಕಲ್ಲು ಎಂದು ಕರೆಯಲ್ಪಟ್ಟಿದೆ. ಚಿತ್ರದುರ್ಗದ ಪಾಳೇಗಾರರ ಮೂಲ ಪುರುಷ ಚಿತ್ರನಾಯಕನ ಹೆಸರಿನಲ್ಲಿ ಚಿತ್ರದುರ್ಗ ಎಂದು ಹೆಸರಾಗಿದೆ ಎಂಬ ಅಭಿಪ್ರಾಯವಿದೆ. ತೆಲುಗು ಭಾಷೆಯಲ್ಲಿ 'ಚಿತ್ರಕಲ್ಲು ದುರ್ಗ' ಎಂದು ಕರೆಯಲ್ಪಟ್ಟಿದೆ. ಸೀತೆಯನ್ನು ಅಪಹರಿಸಿದ ರಾವಣನೊಂದಿಗೆ ಜಟಾಯು ಹೋರಾಡಿ ಅಸುನೀಗಿದ್ದರ ನೆನಪಿಗಾಗಿ ಆ ಪ್ರದೇಶವನ್ನು 'ಜಟ್ಟಂಗಿ ರಾಮೇಶ್ವರ' ಎಂದು ಕರೆಯಲಾಗಿದೆ.

ಚಿತ್ರದುರ್ಗವನ್ನು ಕ್ರಿ.ಶ ೧೨೮೬ರಲ್ಲಿ ಬೆಮ್ಮತ್ತನೂರು ದುರ್ಗ ಎಂದು, ಕ್ರಿ.ಶ. ೧೬೯೮ರಲ್ಲಿನ (ನೀರ್ಥಡಿ ದಾವಣಗೆರೆ ೧೬ನೇ ಶಾಸನದಲ್ಲಿ) " ಚಿಂನ್ಮನಗಿರಿದುರ್ಗ" ಎಂದು, ಕ್ರಿ.ಶ. ೧೭೦೦ ರಲ್ಲಿ (ಚಿತ್ರದುರ್ಗ ೩೭ನೇ ಮದಕರಿಪುರ) ಶಿಂಗನಗಿರಿದುರ್ಗ ಎಂದು, ಕ್ರಿ.ಶ. ೧೭೧೪ರಲ್ಲಿ (ಚಿತ್ರದುರ್ಗದ ೩೧ನೇ ಶಾಸನದಲ್ಲಿ) ಚಿಂಗನಗಿರಿದುರ್ಗ ಎಂದು, ಕ್ರಿ.ಶ. ೧೭೩೦ರಲ್ಲಿ (ಚಿತ್ರದುರ್ಗದ ೫೪ನೇ ಶಾಸನದಲ್ಲಿ) ಚಿಂತಕಲದುರ್ಗ ನಂತರ ಚಿಂತನಕಲ್ಲುದುರ್ಗ, ಚಿತ್ರದುರ್ಗ ಎಂದು ಕರೆಯಲ್ಪಟ್ಟಿದೆ. ಕೃಷ್ಣದೇವರಾಯನ ದಿನಚರಿಯಲ್ಲಿ ಚಿಮುಟದುರ್ಗ ಎಂದು ಹೆಸರಿದೆ. ಪೌರಾಣಿಕ ಕಾಲಕ್ಕಿಂತ ಮೊದಲೇ ಚಿನ್ಮೂಲಾದ್ರಿಪುರವೆಂದು, ಆಂದ್ರ ಭೃತ್ಯರ ಕಾಲದಲ್ಲಿ ಚಂದ್ರವಳ್ಳಿ ಎಂದು ಕರೆಯಲ್ಪಟ್ಟಿದೆ. ಟಿಪ್ಪುಸುಲ್ತಾನನ ಕಾಲದಲ್ಲಿ ಫರ್ರಕಾಬಾದ್ ಎಂದು ಇಂಗ್ಲೀಷರ ಕಾಲದಲ್ಲಿ "ಚಿಟಲ್‌ಡ್ರುಗ್" ಎಂದು, ಪ್ರಸ್ತುತ ಚಿತ್ರದುರ್ಗ ಎಂದು ಕರೆಯಲಾಗುತ್ತಿದೆ."[೧]

೨.೧ ಚಿತ್ರದುರ್ಗ ಜಿಲ್ಲೆಯ ಭೌಗೋಳಿಕ ಪರಿಚಯ

ಚಿತ್ರದುರ್ಗವನ್ನು ಭೌಗೋಳಿಕ ಹಿನ್ನೆಲೆಯಲ್ಲಿ ಸಂಸ್ಕೃತಿಯ ನಗರಿ ಎಂದು ಕರೆಯುತ್ತಾರೆ. ಚಿತ್ರದುರ್ಗದ ಎಲ್ಲಾ ತಾಲ್ಲೂಕುಗಳು ಅತಿ ಹೆಚ್ಚು ಬೆಟ್ಟ-ಗುಡ್ಡಗಳಿಂದ ನಿರ್ಮಾಣವಾಗಿವೆ. ಕರ್ನಾಟಕದಲ್ಲಿ ಅತಿ ಕಡಿಮೆ ಮಳೆ ಬೀಳುವಂಥ ಪ್ರದೇಶವನ್ನು ಚಿತ್ರದುರ್ಗ ಜಿಲ್ಲೆ ಹೊಂದಿದೆ. ಚಿತ್ರದುರ್ಗದಲ್ಲಿ ಬೆಟ್ಟದ

ಮೇಲೆನ ಭವ್ಯವಾದ ಕೋಟೆಯಿದ್ದು ಅದನ್ನು ಹೆಸರಾಂತ ಪಾಳೆಯಗಾರರು ನಿರ್ಮಿಸಿದ್ದಾರೆ. ಆರಂಭದಲ್ಲಿ ಅವರು ವಿಜಯನಗರ ಸಾಮಂತರಾಗಿದ್ದು ಅನಂತರ ಮರಾಠರೊಡನೆ ಒಪ್ಪಂದ ಮಾಡಿಕೊಂಡಿದ್ದರು. ಹೈದರ್‌ಅಲಿಯು ೧೭೭೮ರಲ್ಲಿ ಈ ಸಾಮಂತ ರಾಜ್ಯವನ್ನು ನಿರ್ನಾಮಗೊಳಿಸಿದನು ಈ ನಗರದಲ್ಲಿ ಹೊಯ್ಸಳರ, ವಿಜಯನಗರದ ಅರಸರ ಮತ್ತು ಪಾಳೆಗಾರ ಮನೆತನದ ನಾಯಕರ ಅನೇಕ ಶಿಲಾಶಾಸನಗಳಿವೆ. ಚಿತ್ರದುರ್ಗವೆಂಬ ಈಗಿನ ಹೆಸರು 'ಚಿತ್ರವತ್ತಾದ ಕೋಟೆ' ಎಂಬ ಅರ್ಥದ 'ಚಿತ್ರಕಲ್‌ದರ್ಗ' ಎಂಬುದರಿಂದಾಗಲಿ ಅಥವಾ ಕೊಡೆಯಾಕಾರದ ಬಂಡೆಗಲ್ಲು ಎಂಬ ಅರ್ಥದ ಛತ್ರಕಲ್ ಎಂಬ ಪದದಿಂದ ಬಳಕೆಯಿಂದ ಬಂದಿದೆಯೆಂದು ನಂಬಲಾಗಿದೆ. ಚಿತ್ರಕಲ್ ಎಂಬ ಪದವೇ ಇದರ ಮೊದಲಿನ ಹೆಸರಾದ 'ಸುಳಿಗಲ್' ಎಂಬುದರ ಉತ್ಪತ್ತಿಯಾಗಿರಬಹುದು. ಕನ್ನಡದಲ್ಲಿ 'ಸುಳಿ' ಎಂದರೆ ಚಿತ್ರ ಅರ್ಥ ಚಿಮ್ಮತ್ತನ ಕಲ್ಲು ಬ್ರಹ್ಮಗಿರಿಪುರ, ಪೆರುಮಾಳಪುರ, ಚಿಮ್ಮತ್ತನಾರು ಮುಂತಾದವು ಶಿಲಾಶಾಸನಗಳಲ್ಲಿ ಕಂಡುಬರುವ ಈ ಊರಿನ ಇನ್ನಿತರ ಹಳೆಯ ಹೆಸರುಗಳಾಗಿವೆ.

ಡಾ. ಎಂ ಹೆಚ್ ಕೃಷ್ಣ ಅವರ ೧೯೨೯ ಚಂದ್ರವಳ್ಳಿಯ ಭೂಸಂಶೋಧನೆಗಿಂತ ಮೊದಲು ಚಿತ್ರದುರ್ಗದ ಇತಿಹಾಸವನ್ನು ಕಳಕಂಡಂತೆ ಸ್ಥಳ ಪುರಾಣ ಹಾಗೂ ದಂತಕಥೆಗಳಿಂದ ವಿವರಿಸಲಾಗುತ್ತಿತ್ತು. ಐತಿಹ್ಯವೊಂದರ ಪ್ರಕಾರ ತ್ರೇತಾಯುಗದಲ್ಲಿ ಒಮ್ಮೆ ಲಂಕಾಧಿಪನಾದ ರಾವಣನು ನಂದಿಕೇಶ್ವರನನ್ನು ವಂದಿಸದೆ ಅಲಕ್ಷಿಸಿ ಕೈಲಾಸ ಪರ್ವತವನ್ನು ಎತ್ತಲು ಮುನ್ನುಗ್ಗಿದಾಗ ನಂದಿ ಅಲ್ಲಿಂದ ದಾರಿ ಬಂದು ಈ ಚಿತ್ರದುರ್ಗ ಬೆಟ್ಟದಲ್ಲಿ ಬಿದ್ದಾಗ ನಂತರ ಜ್ಞಾನೋದಯವಾಗಿ ಇಲ್ಲಿಂದಲೇ ನಂದಿಕೇಶ್ವರನನ್ನು ಸುತ್ತು ಹೊರಟನಂತೆ. ಹೀಗೆ ರಾವಣ 'ಚಿತ್' ಪರಿವರ್ತನೆಗೆ ಕಾರಣವಾಗಿ ಜ್ಞಾನವಿತ್ತ ಸ್ಥಳವಾದ್ದರಿಂದ ಈ ಬೆಟ್ಟಕ್ಕೆ 'ಚಿನ್ಮೂಲಾದ್ರಿ' ಎಂಬ ಹೆಸರು ಬಂದಿತಂತೆ. ಇನ್ನೊಂದು ಐತಿಹ್ಯದ ಪ್ರಕಾರ ಮೊಳಕಾಲ್ಮುರು ತಾಲೂಕಿನ ಜಟಿಂಗರಾಮೇಶ್ವರ ಬೆಟ್ಟದ ಮೇಲೆನ ಜಟಿಂಗರಾಮೇಶ್ವರ ದೇವಾಲಯವಿದೆ. ಇಲ್ಲಿ ಶ್ರೀರಾಮಚಂದ್ರನು ಜಟಾಯುವಿಗೆ ಅಗ್ನಿ ಸಂಸ್ಕಾರ ಮಾಡಿದ್ದರಿಂದನ ಈ ದೇವರಿಗೆ ಜಟಿಂಗರಾಮೇಶ್ವರ ಎಂದು, ಗುಡ್ಡಕ್ಕೆ ಜಟಂಗಿರಾಮಗಿರಿ ಎಂದು ಹೆಸರಾಗಿದೆ. ಅಲ್ಲದೆ ರಾವಣನು ಸೀತೆಯನ್ನು ಕದ್ದೊಯ್ಯುವಾಗ ಜಟಾಯು ಅವನನ್ನು ಇಲ್ಲಿ ತಡೆದು ಹೋರಾಡಿ ಸತ್ತಿತೆಂಬ ಐತಿಹ್ಯವಿದೆ.

ಚಿತ್ರದುರ್ಗ ಜಿಲ್ಲೆಯು ಪ್ರಾಕೃತಿಕವಾಗಿ ಸಂಪದ್ಭರಿತವಾಗಿದ್ದು ಭೌಗೋಳಿಕವಾಗಿ ವಿಶಿಷ್ಟತೆಯಿಂದ ಕೂಡಿರುವ ದಕ್ಷಿಣ ಭಾರತದ ಆಯಕಟ್ಟಿನ ಪ್ರದೇಶವಾಗಿದೆ. ಜಿಲ್ಲೆಯು ಪೂರ್ವಕ್ಕೆ ಆಂಧ್ರಪ್ರದೇಶ, ಉತ್ತರಕ್ಕೆ ಬಳ್ಳಾರಿ, ಪಶ್ಚಿಮಕ್ಕೆ ದಾವಣಗೆರೆ, ನೈರುತ್ಯಕ್ಕೆ ಚಿಕ್ಕಮಗಳೂರು, ಆಗ್ನೇಯಕ್ಕೆ ತುಮಕೂರ ಜಿಲ್ಲೆಗಳಿಂದ ಸುತ್ತುವರಿಯಲ್ಪಟ್ಟಿದೆ. ಜಿಲ್ಲೆಯ ವಾಸ್ತವಿಕ ಭೌಗೋಳಿಕ ನೆಲೆಯು ಉತ್ತರ ಅಕ್ಷಾಂಶ ೧೩.೧೫ರಿಂದ ೧೫.೨೦ ಹಾಗೂ ಪೂರ್ವ ರೇಖಾಂಶ ೭೯.೭೪.ರಿಂದ ೭೭.೨೦ರಲ್ಲಿದೆ. ಇದರ ಒಟ್ಟು ವಿಸ್ತೀರ್ಣ ೮೪೦೪.೯ (೯೩.೪೪೫) ಚ. ಕಿ. ಮೀ ಅಥವಾ ೩೨೪೮೯ ಚ. ಮೈಲಿಗಳೆಂದು ಅಂದಾಜು ಮಾಡಲಾಗಿದೆ.

ಪ್ರಸ್ತುತ ಜಿಲ್ಲೆಯು ಚಿತ್ರದುರ್ಗ, ಹಿರಿಯೂರು, ಮೊಳಕಾಲ್ಮೂರು, ಚಳ್ಳಕೆರೆ, ಹೊಳಲ್ಕೆರೆ, ಹೊಸದುರ್ಗ ಎಂಬ ಆರು ತಾಲೂಕುಗಳನ್ನು ೨೨ ಹೋಬಳಿಗಳನ್ನು, ೧೮೫ ಗ್ರಾಮ ಪಂಚಾಯಿತಿಗಳನ್ನು ಮತ್ತು ೧೧೦೦ ಹಳ್ಳಿಗಳನ್ನು ಹೊಂದಿದೆ.

ಚಿತ್ರದುರ್ಗ ಜಿಲ್ಲಾ ಉಪವಿಭಾಗ ತಾಲೂಕು ಕೇಂದ್ರ ಜನಸಂಖ್ಯೆ ೭೪.೨೫೩ ಹೊಂದಿದೆ. ಇಲ್ಲಿ ನಗರ ಸಭೆಯಿದೆ ಭವ್ಯವಾದ ಕೋಟೆಯನ್ನು ಹೊಂದಿದೆ. ದುರ್ಗದ ಕೋಟೆಗೆ ಏಳು ಬಾಗಿಲುಗಳಿವೆ ಅವುಗಳಲ್ಲಿ ಹೊರವಲಯದ ಗೋಡೆಗೆ ಪೂರ್ವದಲ್ಲಿ ರಂಗಯ್ಯನಬಾಗಿಲು, ಉತ್ತರದಲ್ಲಿ ಸಿದ್ದಯ್ಯನಬಾಗಿಲು, ಪಶ್ಚಿಮದಲ್ಲಿ ಸಿಹಿನೀರು ಹೊಂಡದ ಬಾಗಿಲು ಅಥವಾ ಉಚ್ಚಂಗಿಬಾಗಿಲು ಮತ್ತು ದಕ್ಷಿಣದಲ್ಲಿ ಲಾಲಾಕೋಟೆಬಾಗಿಲು ಎಂದು ೪ ಪ್ರವೇಶ ದ್ವಾರಗಳಿವೆ. ಪಣದ ದಕ್ಷಿಣಕ್ಕಿರುವ ಬೆಟ್ಟದ ತುದಿಯ ಮೇಲೆ ಓಬಳದೇವರ ಗುಡಿಯಿದ್ದು ವಿಶೇಷವಾಗಿ ಎಲ್ಲಾ ಬಾಗಿಲುಗಳ ಪಕ್ಕದಲ್ಲಿ ಎಡಭಾಗ ಮತ್ತು ಬಲಕ್ಕೆ ದೇವಾಲಯಗಳನ್ನು ಹೊಂದಿದೆ. ಪೂರ್ವಯಿಂದ ಬೆಟ್ಟದ ತುದಿಗೆ ಹೋಗುವಾಗ ೫ ಪ್ರವೇಶ ದ್ವಾರಗಳು ಎದುರಾಗುತ್ತವೆ. ಬೆಟ್ಟದ ತುದಿಯ ಮೇಲೆ ಸಂಪಿಗೆಸಿದ್ದೇಶ್ವರ, ಹಿಡಂಬೇಶ್ವರ, ಏಕನಾಥಮ್ಮ, ಪಲ್ಲುಣೇಶ್ವರ, ಗೋಪಾಲಕೃಷ್ಣ, ಆಂಜನೇಯ, ಸುಬ್ಬರಾಯ ಮತ್ತು ಬಸರ ಎಂಬ ದೇವಾಲಯಗಳಿವೆ. ಇಲ್ಲಿರುವ ಬಹುತೇಕ ಮಂದಿರಗಳು ಪಾಳೆಗಾರಿಕೆ, ಮನೆಶೈಲಿಯ ಕಣಶಿಲೆಯ ಕಟ್ಟಡಗಳಾಗಿವೆ.

ರಾಜ್ಯ ಸರ್ಕಾರದ ಪುರಾತತ್ವ ಇಲಾಖೆಯ ವಸ್ತು ಸಂಗ್ರಹಾಲಯವು ರಂಗಯ್ಯಬಾಗಿಲಿನಲ್ಲಿದೆ. ಇದನ್ನು ದಿವಂಗತ ಹುಲ್ಲೂರು ಶ್ರೀನಿವಾಸ ಜೋಯಿಸ್ ಎಂಬುವರು ಸ್ಥಾಪಿಸಿದರು. ಟಿ. ಎನ್. ಗಂಡುಗಲಿ ಎಂಬುವವರು ಇಲ್ಲಿಯ ಮದಕರಿ ನಿಲಯದಲ್ಲಿ ಐತಿಹಾಸಿಕ ಮಹತ್ವದ ವಿವಿಧ ವಸ್ತುಗಳ ಖಾಸಗಿ ವಸ್ತು ಸಂಗ್ರಹಾಲಯವನ್ನು ನಿರ್ಮಿಸುತ್ತಿದ್ದಾರೆ. ಎಚ್. ಶ್ರೀಶೈಲಾರಾಧ್ಯ ಎಂಬುವರ ಹತ್ತಿರ ಹಳೆಯ ನಾಣ್ಯಗಳೂ, ಉಪಕರಣಗಳೂ ಮತ್ತಿತರ ಐತಿಹಾಸಿಕ ಮಹತ್ವದ ವಸ್ತು ಸಂಗ್ರಹವಿದೆ. ಚೆನ್ನಕೇಶವ, ವೆಂಕಟರಮಣ, ಗೋಪಾಲಪುರ ನೀಲಕಂಠೇಶ್ವರ, ಚೋಳೇಶ್ವರ, ಆಹಾಶ್ವರ ಮತ್ತು ಗಂಗಾಧರೇಶ್ವರ ಮತ್ತು ಹೆಣ್ಣುದೇವತೆಗಳಾದ ಉಚ್ಚಂಗಿಯಮ್ಮ, ಮರಿಯಮ್ಮ, ಕೇರಿಮ್ಮ, ಬಾರೇಗಮ್ಮ ಇನ್ನೂ ಮುಂತಾದವು ಮಹತ್ವ ದೇವಾಲಯಗಳಿಗಿವೆ. ಅತ್ಯಂತ ಭವ್ಯ ಕಟ್ಟಡವನ್ನು ಹೊಂದಿದ ಮುರುಘರಾಜೇಂದ್ರ ಬ್ರಹನ್ಮಠ, ನಾಯಕಹಟ್ಟಿ ಗುರು ತಿಪ್ಪೇರುದ್ರಸ್ವಾಮಿ ದೇವಾಲಯ, ಅಜ್ಜಯ ದೇವಸ್ಥಾನ, ಕೂಡಲಿ ಶೃಂಗೇರಿ ಮಠ, ರಾಘವೇಂದ್ರ ಮಠ, ಉತ್ತಾರಾಧಿ ಮಠ ಉಚ್ಚಂಗಿ ಮಠ, ಕಂಟೇರ ಮಠ, ಮೂಸ್ಟೂರ ಮಠ, ಶ್ರೀಮಾದಾರ ಚನ್ನಯ್ಯನ ಮಠ, ಕೃಷ್ಣಗೊಲ್ಲರ ಅಥವಾ ಯಾದವರ ಮಠ, ಬಂಜಾರ ಮಠ, ಶ್ರೀತರಳುಬಾಳು ಜಗದ್ಗುರು ಮಠ. ಇವುಗಳಲ್ಲಿ ಬಹುತೇಕ ಮಠಗಳು ಶೈಕ್ಷಣಿಕ ಸಂಸ್ಥೆಗಳನ್ನು ನಡೆಸುತ್ತದೆ. ಕರ್ನಾಟಕದ ಮಾಜಿ ಮುಖ್ಯಮಂತ್ರಿ, ರಾಜಕೀಯ ಧುರೀಣರಾಗಿದ್ದ ಎಸ್. ನಿಜಲಿಂಗಪ್ಪನವರ ಸಮಾಧಿ ಇದೆ. ಮನುಷ್ಯರು ಮತ್ತು ದನಗಳ ಕಾಯಿಲೆಗಳನ್ನು ಗುಣಪಡಿಸುವ ವೈದ್ಯ ಪ್ರವೀಣವಾಗಿದ್ದು ಒಬ್ಬ ಜೋಗಿಯ ಸಮಾಧಿಯೊಂದು ಗಿರಿಧಾಮವಾಗಿದೆ. ಅತ್ಯಂತ ತಂಪಾದ ಸುಂದರವಾದ ನೈಸರ್ಗಿಕ ದೃಶ್ಯ ನಿತ್ಯ ಹಸುರಾಗಿದರಿಂದ ಇದು ಬೇಸಿಗೆಯ ಧಾಮವಾಗಿದೆ.

ಹಿಮವತ್ ಕೇದಾರ ಎಂಬುದು ಒಂದು ಜಲಪಾತವಾಗಿದ್ದು, ಜೋಗಿಮಟ್ಟೆ ರಸ್ತೆಯ ಬಲಬದಿಯಲ್ಲಿ ಬಂಡಿಕಲ್ಲೂಗಳಿಂದ ಆವೃತವಾದ ಪ್ರದೇಶದಲ್ಲಿ. ಈ ಜಲಪಾತವು ಬೆಟ್ಟದ ಓರೆಗಳಲ್ಲಿ ಉಂಟಾಗಿವೆ.

ಅಲ್ಲೊಂದು ಸಣ್ಣ ಗುಹೆಯಿದ್ದು ಅದರಲ್ಲಿ ಶಿವಲಿಂಗವಿದೆ ಹಾಗೂ ವೀರಭದ್ರ ಮತ್ತು ಬಸವನ ಮೂರ್ತಿಗಳು ಇವೆ. ನೀರು ಬಸವ ಮುಖದಿಂದ ಹೊರ ಚೆಲ್ಲುತ್ತದೆ. ಪಂಡರಹಳ್ಳಿ ಗುಡ್ಡವು ಚಿತ್ರದುರ್ಗದಿಂದ ಸುಮಾರು ೧೧ ಕಿ ಮೀ ದೂರದಲ್ಲಿದೆ.

ಚಿತ್ರದುರ್ಗ ಪ್ರದೇಶದಲ್ಲಿ ಬೆಟ್ಟ-ಗುಡ್ಡ, ಕೋಟೆಗಳು ಗೋಚರಿಸುವುದು ಸಹಜ. ಸ್ಥಳೀಯವಾಗಿ ಅವುಗಳಿಗೆ ನಾನಾ ಹೆಸರುಗಳಿವೆ. ಅವುಗಳಲ್ಲಿ ಮೊಳಕಾಲ್ಮೂರು ತಾಲೂಕಿನ ಜಟಂಗರಾಮೇಶ್ವರ ಬೆಟ್ಟ, ಬ್ರಹ್ಮಗಿರಿ, ನುಂಕಪ್ಪನ ಗುಡ್ಡ, ಜೋಗಪ್ಪನ ಗುಡ್ಡ. ಹೊಳಲ್ಕೆರೆ ತಾಲೂಕಿನ ದೊಡ್ಡಹಟ್ಟಿ ರಂಗಪ್ಪನ ಗುಡ್ಡ, ವಡ್ಡರಗುಡ್ಡ. ಹೊಸದುರ್ಗ ತಾಲೂಕಿನ ನೀರಗುಡ್ಡ, ಕೊಡಕಲ್‌ಗುಡ್ಡ, ತಿರುಮಲ ದೇವರಗುಡ್ಡ, ಹಾಲುರಾಮೇಶ್ವರ. ಹಿರಿಯೂರು ತಾಲೂಕಿನ ಉತ್ತರ ಸರಣಿಬೆಟ್ಟ, ಹಿಂದಸಕಟ್ಟೆ ಮತ್ತು ಚಿತ್ರದುರ್ಗ ತಾಲೂಕಿನ ಜೋಗಿಮಟ್ಟಿ, ಭವಳಪ್ಪನಗುಡ್ಡ, ಭೀರನಕಲ್ಲುಗುಡ್ಡ, ಈಚಲುಗುಡ್ಡ, ಓಬಳದೇವರಗುಡ್ಡ ಇನ್ನೂ ಮುಂತಾದವುಗಳು ಕಂಡುಬರುತ್ತವೆ.

ಜಲಸಂಪತ್ತಿನಲ್ಲಿ ಈ ಜಿಲ್ಲೆ ಮಹತ್ತರವಾದ ಸ್ಥಾನವೇನು ಪಡೆದಿಲ್ಲ. ಆದರೂ ವೇದಾವತಿ, ಚಿನ್ನಹಗರಿ (ಜನಿಗೆಹಳ್ಳ), ಸುವರ್ಣಮುಖಿ ಮುಂತಾದ ನದಿಗಳು ಹರಿದು ನೀರಾವರಿ ಸೌಲಭ್ಯವನ್ನು ಅಲ್ಪವಾಗಿ ಕಲ್ಪಿಸಿವೆ. ಈ ಜಿಲ್ಲೆಯಲ್ಲಿ ವೇದಾವತಿ ನದಿ ೨೦೮ ಕಿ. ಮೀ, ಜನನಿಹಳ್ಳ ೧೨೮ ಕಿ. ಮಿ, ಸುವರ್ಣಮುಖಿ ಹಳ್ಳ ೧೧ ಕಿ. ಮೀ ಹರಿದು ೨೦೨೦ ಎಕರೆಗೆ ನಿರೊದಗಿಸುತ್ತವೆ. ಭದ್ರ ಜಲಾಶಯದಿಂದ ೯೨೮ ಹೆಕ್ಟೇರು, ರಂಗಯ್ಯನದುರ್ಗ ಜಲಾಶಯದಿಂದ ಸು. ೧೦೦೦ ಎಕರೆಗೆ ನೀರಾವರಿ ಸೌಲಭ್ಯವಿದೆ. ಚಂದ್ರವಳ್ಳಿ, ರಾಣಿಕೆರೆ, ನಾಯಕಹಟ್ಟಿ, ಭರಮಸಾಗರ, ಗೌರಸಮುದ್ರ, ನಾಗಸಮುದ್ರ, ಗೋನೂರು, ಪರಶುರಾಂಪುರ, ಬುಕ್ಕಂಬುದಿ ಇನ್ನೂ ಮುಂತಾದ ಪ್ರಾಚೀನ ಕೆರೆಗಳಿಂದಲೂ ಕೃಷಿಗೆ ನೀರು ದೊರೆಯುತ್ತದೆ.

ಈ ಜಿಲ್ಲೆಯ ಪ್ರಮುಖ ನದಿ ವೇದಾವತಿ. ವೇದ ಮತ್ತು ಅವತಿ ಎಂಬ ಎರಡು ಹೊಳೆಗಳು ಸೇರಿ ವೇದಾವತಿ ನದಿಯಾಗಿ ಹರಿಯುತ್ತದೆ. ಹೊಸದುರ್ಗದ ಮೂಲಕ ಮತ್ತೋರು ಸಮೀಪದಿಂದ ಹರಿದುಬಂದು ಬ್ರಹ್ಮಗಿರಿದುರ್ಗದಿಂದ ವಾಣಿವಿಲಾಸ ಸಾಗರ ಸೇರುತ್ತದೆ. ನಂತರ ಹಿರಿಯೂರು ತಾಲೂಕಿನಿಂದ ಚಳ್ಳಕೆರೆ ತಾಲೂಕನ್ನು ಪ್ರವೇಶಿಸಿ ಘಟಪರ್ತಿಯಿಂದ ಆಂಧ್ರಕ್ಕೆ ಹರಿದು ತರುವಾಯ ಚಿನ್ನಹಗರಿ ನದಿಯನ್ನು ಕೂಡುವುದು. ಆನ್ನಿಗೆಹಳ್ಳ ಅಥವಾ ಚಿನ್ನಹಗರಿ ನದಿ ಈ ಭಾಗದ ಜನರಿಗೆ ಪವಿತ್ರವಾದುದು. ಈ ನದಿ ಅಧ್ಯಾತ್ಮಿಕವಾಗಿಯೂ, ಸಾಂಸ್ಕೃತಿಕವಾಗಿಯೂ, ದೇವರುಗಳ ಗಂಗೆ ಪೂಜೆ, ಹಬ್ಬ, ಜಾತ್ರೆಗಳಲ್ಲದೆ ಇನ್ನೂ ಮುಂತಾದವುಗಳಿಗೆ ಬಳಸುತ್ತಾರೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಮಳೆಯ ಪ್ರಮಾಣ ತುಂಬಾ ಕಡಿಮೆಯಿರುವ ಕಾರಣ ಜಿಲ್ಲೆಯು ಅರಣ್ಯ ಸಂಪತ್ತಿನಲ್ಲಿ ಇತರೆ ಜಿಲ್ಲೆಗಳಿಗಿಂತ ಹಿಂದುಳಿದಿದೆ ಎಂದು ಹೇಳಬಹುದು. ಆದ್ದರಿಂದ ಈ ಜಿಲ್ಲೆಯು ಬಯಲು ಸೀಮೆ ಎಂದು ಗುರುತಿಸಲ್ಪಟ್ಟಿದೆ. ಹಾಗಾಗಿ ಜಿಲ್ಲೆಯು ೭೭.೧೯೯ಹೆಕ್ಟೇರ್ ನಷ್ಟು ಮಾತ್ರ ಅರಣ್ಯ ಪ್ರದೇಶವನ್ನು ಹೊಂದಿದೆ. ಇದರಲ್ಲಿ ಹೆಚ್ಚಾಗಿ ಕುರುಚಲು ಗಿಡಗಳಿದ್ದು ೧/೩ ಭಾಗ ಜಾಲಿಗಿಡಗಳು ಉಳಿದ ಭಾಗ ಅಲ್ಲಲ್ಲಿ ಹುಣಸೆ, ಸೀತಾಫಲಗಳಿದ್ದು. ಕತ್ತೆಕಿರುಬ, ಜಿಂಕೆ, ನೀರುಕೋಳಿ, ನವಿಲು

ಇನ್ನೂ ಮುಂತಾದ ಪ್ರಾಣಿ–ಪಕ್ಷಿಗಳನ್ನು ಕಾಣಬಹುದು ಅಲ್ಲದೇ ಈ ಜಿಲ್ಲೆಯಲ್ಲಿ ಪಶುಪಾಲನೆ ಹೆಚ್ಚಾಗಿ ಕಂಡುಬರುತ್ತದೆ.

ಜಿಲ್ಲೆಯಲ್ಲಿನ ಹವಾಮಾನವು ಏರಿಳಿತಗಳಿಂದ ಕೂಡಿದ್ದು ಏಪ್ರಿಲ್ ತಿಂಗಳಲ್ಲಿ ಅತೀ ಹೆಚ್ಚು ಉಷ್ಣಾಂಶವಿದ್ದರೆ, ನವೆಂಬರ್, ಡಿಸೆಂಬರ್ ತಿಂಗಳುಗಳಲ್ಲಿ ಅತಿ ಹೆಚ್ಚು ತಂಪಾದ ವಾತಾವರಣವಿರುತ್ತದೆ. ಜಿಲ್ಲೆಯಲ್ಲಿನ ಕನಿಷ್ಠ ೧೬.೬೦ ಸೆಂಟಿಗ್ರೇಡ್ ವರ್ಷಕ್ಕೆ ಸರಾಸರಿ ೨೧.೯೫ ಅಂಗಲು ಮಳೆಯಾಗುತ್ತಿದೆ. ದಕ್ಷಿಣದಲ್ಲಿ ಕೆಂಪು ಮಣ್ಣುಗಳಿಂದ ಕೂಡಿದ ಭೂಮಿ ಹೆಚ್ಚಾಗಿದೆ. ಜಿಲ್ಲೆಯ ಮಧ್ಯ ಭಾಗದಲ್ಲಿ ಉತ್ತರ ದಿಕ್ಕಿನಿಂದ ದಕ್ಷಿಣ ದಿಕ್ಕಿನವರಿಗಿನ ಭೂಪ್ರದೇಶವು ಉಳಿದ ಪ್ರದೇಶಗಳಿಗಿಂತ ಫಲವತ್ತಾಗಿದ್ದು ವ್ಯವಸಾಯಕ್ಕೆ ಯೋಗ್ಯವಾಗಿದೆ. ಜಿಲ್ಲೆಯ ಪ್ರಮುಖ ಬೆಳೆಗಳೆಂದರೆ ಶೇಂಗಾ, ತೆಂಗು, ಅಡಿಕೆ, ರೇಷ್ಮೆ, ಹತ್ತಿ, ಸೂರ್ಯಕಾಂತಿ, ಎಳ್ಳು, ಭತ್ತ, ರಾಗಿ, ಜೋಳ, ಸಜ್ಜೆ, ಹೆಸರು, ಕಡಲೆ, ನವಣೆ, ಮೆಣಸಿನಕಾಯಿ ಇತ್ಯಾದಿ.

೨.೨ ಚಿತ್ರದುರ್ಗ ಜಿಲ್ಲೆಯ ತಾಲೂಕುವಾರು ಜನಸಂಖ್ಯಾ ವಿವರ ೨೦೧೧

ಕರ್ನಾಟಕದಲ್ಲಿ ಅತಿ ಹೆಚ್ಚು ಕನ್ನಡ ಭಾಷೆ ಮಾತನಾಡುವ ಜನರು ವಾಸವಾಗಿದ್ದರೆ. ಐತಿಹಾಸಿಕ ಹಾಗೂ ಭೌಗೋಳಿಕ ದೃಷ್ಟಿಯಿಂದ ವೈವಿಧ್ಯತೆಯನ್ನು ಪಡೆದುಕೊಂಡಿದೆ. ಕರ್ನಾಟಕದಲ್ಲಿ ಅನೇಕ ಧರ್ಮ, ಜಾತಿ, ಜನಾಂಗ, ಸಮುದಾಯ, ವಿಭಿನ್ನ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಹೊಂದಿರುವ ರಾಜ್ಯವಾಗಿದೆ.

ಪ್ರಸ್ತುತ ಅಧ್ಯಯನಕ್ಕೆ ಮಾದಿಗ ಸಮುದಾಯದ ಸಾಮಾಜಿಕ ಬದಲಾವಣೆ ಎಂಬ ವಿಷಯವನ್ನು ಆಯ್ಕೆ ಮಾಡಿಕೊಂಡು. ಚಿತ್ರದುರ್ಗ ಜಿಲ್ಲೆಯನ್ನು ವ್ಯಾಪ್ತಿಯನ್ನು ತೆಗೆದುಕೊಳ್ಳಲಾಗಿದೆ. ಈ ಜಿಲ್ಲೆಯ ಉದ್ದಗಲಕ್ಕೂ ಹರಡಿಕೊಂಡಿರುವ ಬೆಟ್ಟ, ಗುಡ್ಡಗಳ ಸಾಲು, ಗುಡಿಗುಂಡಾರಗಳು, ಕೋಟೆಕೊತ್ತಲಗಳು, ಕಲೆ, ಸಾಹಿತ್ಯ, ಶಾಸನ ಸ್ಮಾರಕಗಳು, ಬುಡಕಟ್ಟು ಸಂಸ್ಕೃತಿ, ಜನಪದ ಕಲಾವಿದರು ಹೀಗೆ ಭವ್ಯ ಇತಿಹಾಸವನ್ನು ಹೊಂದಿದೆ. ಚಿತ್ರದುರ್ಗವನ್ನು ಅಧ್ಯಯನದ ಹಿನ್ನೆಲೆಯಲ್ಲಿ ಭೌಗೋಳಿಕ ಆಯಾಮದಲ್ಲಿ ಅವಲೋಕಿಸಿದರೆ. ತನ್ನ ವ್ಯಾಪ್ತಿಯ ಸರಹದ್ದುಗಳು ಎಲ್ಲಿಯವರಗೆ ವಿಸ್ತರಿಸಿದೆ ಎಂಬುದರ ಪ್ರಮಾಣವನ್ನು ಗುರುತಿಸಲಾಗಿದೆ. ಯಾವುದರೂ ಒಂದು ಸಮುದಾಯವನ್ನು ನೋಡುವುದಾದರೆ. ಆ ಸಮುದಾಯವು ಚಿಕ್ಕದೊ ಅಥವಾ ದೊಡ್ಡದೊ ಆ ಸಮುದಾಯದ ಗಾತ್ರವನ್ನು ಗುರುತಿಸಬಹುದು. ಹಾಗೇ ಯಾವ ತಾಲೂಕಿನಲ್ಲಿ ಎಷ್ಟು ಜನಸಂಖ್ಯೆ ಇದೆ ಎನ್ನುವಂತಹ ಅಂಶವನ್ನು ಈ ಕೆಳಗಿನ ಕೊಟ್ಟಿರುವ ಕೋಷ್ಟಕ ಚಿತ್ರದುರ್ಗ ಜಿಲ್ಲೆಯನ್ನು ತಿಳಿಸುತ್ತದೆ. ಜಿಲ್ಲೆಯಲ್ಲಿ ಒಟ್ಟು ಆರು ತಾಲೂಕುಗಳು ಇದ್ದು ಆ ತಾಲೂಕುಗಳಲ್ಲಿ ತಾಲೂಕುವಾರು ವಿಂಗಡಣೆ ಮಾಡಿರುವುದು ತಿಳಿದುಬರುತ್ತದೆ.

ಜನಸಂಖ್ಯೆ ಬಗ್ಗೆ ಅನೇಕ ಸಾಮಾಜಿಕ, ಆರ್ಥಿಕ ಚಿಂತಕರು, ಸಂಖ್ಯಾಶಾಸ್ತ್ರಜ್ಞರು ಮತ್ತು ಜನಸಂಖ್ಯಾ ತಜ್ಞರು ಹಲವು ದೃಷ್ಟಿಯಲ್ಲಿ ಅನೇಕ ಆಯಾಮಗಳಲ್ಲಿ ವ್ಯಾಖ್ಯಾನಿಸುತ್ತಾರೆ. ರಾಷ್ಟ್ರದ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯಲ್ಲಿ ತನ್ನದೇ ಆದಂತಹ ನಿರ್ಣಯದ ನಿಲುವನ್ನು ತರುವುದೆಂಬುದನ್ನು ಚಿಂತಿಸುತ್ತಾರೆ. ಸಮಾಜ ಹೇಗೆ ಆಯಾಕಾಲಘಟ್ಟಗಳಲ್ಲಿ ಪರಿವರ್ತನೆಯಾಗುತ್ತದೆಯೋ ಹಾಗೆ ಜನಸಂಖ್ಯೆಯೂ ಜನಗಣತಿಯಿಂದ ಜನಗಣತಿಗೆ ಸಮೀಕ್ಷೆಯಿಂದ ಜನಸಂಖ್ಯಾ ಬೆಳವಣಿಗೆ ಪ್ರಮಾಣವನ್ನು ಗುರುತಿಸಬಹುದು.

ಕೋಷ್ಟಕ: ೨.೧. ಚಿತ್ರದುರ್ಗ ಜಿಲ್ಲೆಯ ತಾಲೂಕುವಾರು ಭೂವಿಸ್ತೀರ್ಣ ಮತ್ತು ಜನಸಂಖ್ಯೆ (೨೦೧೧)

ಕ್ರ.ಸಂ	ತಾಲೂಕು	ಭೌಗೋಳಿಕ ಭೂವಿಸ್ತೀರ್ಣ (ಚ.ಕೀ)	ಒಟ್ಟು ಜನಸಂಖ್ಯೆ			ಒಟ್ಟು ಕುಟುಂಬ			ದಶಕದ ಬೆಳವಣಿಗೆ ಪ್ರಮಾಣ (ಪ್ರತಿಶತ)
			ಗಂಡು	ಹೆಣ್ಣು	ಒಟ್ಟು	ನಗರ	ಗ್ರಾಮೀಣ	ಒಟ್ಟು	
೧	ಚಳ್ಳಕೆರೆ	೨೦೬೩.೯೩	೧೮೫೯೩೧	೧೭೯೮೫೩	೩೬೫೭೮೪	೧೨೦೫೦	೬೪೩೧೧	೭೬೩೬೧	೧೦.೦೮
೨	ಚಿತ್ರದುರ್ಗ	೧೩೭೫.೭೨	೨೧೪೫೬೩	೨೦೯೩೧೬	೪೨೩೮೭೯	೩೩೪೧೧	೫೬೮೪೫	೯೦೨೫೬	೧೨.೭೨
೩	ಹಿರಿಯೂರು	೧೭೦೧.೪೦	೧೪೪೧೬೦	೧೪೧೯೭೩	೨೮೬೧೩೩	೧೩೦೭೧	೫೧೦೧೫	೬೪೦೮೬	೮.೨೩
೪	ಹೊಳಲ್ಕೆರೆ	೧೦೯೪.೮೪	೧೦೪೯೯೨	೧೦೨೨೬೮	೨೦೭೨೬೦	೪೮೭೫	೪೦೮೫೫	೪೫೭೩೦	೪.೮೬
೫	ಹೊಸದುರ್ಗ	೧೪೧೬.೪೦	೧೧೯೧೪೮	೧೧೫೯೬೮	೨೩೫೧೧೬	೬೫೭೮	೪೬೪೪೧	೫೩೦೧೯	೭.೨೧
೬	ಮೊಳಕಾಲ್ಮೂರು	೭೩೬.೪೯	೭೨೦೪೯	೬೯೨೩೫	೧೪೧೨೮೪	೩೩೪೯	೨೪೨೦೨	೨೭೫೫೧	೧೦.೯೧
	ಒಟ್ಟು	೮೩೮೮.೭೮	೮೪,೦೮೪೩	೮೧,೮,೬೧೩	೧೬,೫೯,೪೫೬	೭೩೩೩೪	೨೮೩೬೬೯	೩೫೭೦೦೩	೯.೩೯

(ಕೃಪೆ: ಜಿಲ್ಲಾ ಸಂಗ್ರಹಣಾಧಿಕಾರಿಗಳು, ಜಿಲ್ಲಾ ಅಂಕಿ ಅಂಶಗಳ ನೋಟ ೨೦೧೧)

ಕೋಷ್ಟಕ ೨.೧ರಲ್ಲಿ ಗಮನಿಸಿದಾಗ ಚಿತ್ರದುರ್ಗ ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣವು ೮೩೮೮.೭೮ ರಷ್ಟು ಇದೆ. ತಾಲೂಕುವಾರು ಭೌಗೋಳಿಕ ವಿಸ್ತೀರ್ಣವನ್ನು ಗಮನಿಸಿದಾಗ ಚಳ್ಳಕೆರೆ ೨೦೬೩.೯೩ರಷ್ಟು ಇದ್ದು ವಿಸ್ತೀರ್ಣದಲ್ಲಿ ಪ್ರಥಮ ಸ್ಥಾನ ಪಡೆದಿರುತ್ತದೆ. ೧೭೦೧.೪೦ರಷ್ಟು ಹೊಂದಿರುವ ಹಿರಿಯೂರು ವಿಸ್ತೀರ್ಣದಲ್ಲಿ ಎರಡನೇ ಸ್ಥಾನ ಪಡೆದಿರುವುದು ತಿಳಿದುಬರುತ್ತದೆ. ಕ್ರಮವಾಗಿ ಹೊಸದುರ್ಗ ೧೪೧೬.೪೦ರಷ್ಟು ಇದ್ದು, ಚಿತ್ರದುರ್ಗವು ೧೩೭೫.೭೨ ರಷ್ಟು ಇದೆ. ಮೊಳಕಾಲ್ಮೂರು ತಾಲೂಕು ವಿಸ್ತೀರ್ಣದಲ್ಲಿ ಅತಿಕಡಿಮೆ ಅಂದರೆ ೭೩೬.೪೯ ಚ.ಕಿ ವಿಸ್ತೀರ್ಣವನ್ನು ಹೊಂದಿರುವುದು ಕಂಡುಬರುತ್ತದೆ.

ಮೇಲಿನ ಕೋಷ್ಟಕದಲ್ಲಿ ಮಹಿಳೆಯ ಮತ್ತು ಪುರುಷರ ಜನಸಂಖ್ಯೆ ಪ್ರಮಾಣವನ್ನು ಗುರುತಿಸಿದಾಗ, ಎರಡನೇ ಸ್ಥಾನದಲ್ಲಿ ಬರುವ ಚಳ್ಳಕೆರೆ ತಾಲೂಕಿನಲ್ಲಿ ಪುರುಷ ಶೇಕಡ ಪ್ರಮಾಣ ೫೦.೮೩ರಷ್ಟಿದೆ. ಮಹಿಳೆಯರ ಶೇಕಡ ಪ್ರಮಾಣ ೪೯.೧೭ರಷ್ಟು ಕಂಡುಬರುತ್ತದೆ. ಮೊದಲನೇ ಸ್ಥಾನವನ್ನು ಚಿತ್ರದುರ್ಗ ತಾಲೂಕು ಹೊಂದಿದೆ. ಚಿತ್ರದುರ್ಗ ತಾಲೂಕಿನಲ್ಲಿ ಪುರುಷ ಸಂಖ್ಯೆ ಶೇಕಡ ಪ್ರಮಾಣ ೫೦.೬೧ರಷ್ಟು, ಮಹಿಳೆಯರ ಪ್ರಮಾಣ ೪೯.೩೯ರಷ್ಟು ಇರುವುದು ಕಂಡುಬಂದಿದೆ. ಈ ತಾಲೂಕಿನಲ್ಲಿ ಪುರುಷರ ಸಂಖ್ಯೆಯೇ ಹೆಚ್ಚಾಗಿರುವುದು ಕಂಡುಬರುತ್ತದೆ. ಹಿರಿಯೂರು ತಾಲೂಕಿನಲ್ಲಿ ಪುರುಷರು ಶೇಕಡ ಪ್ರಮಾಣ ೫೦.೩೮ರಷ್ಟು, ಮಹಿಳೆಯರ ಪ್ರಮಾಣ ೪೯.೬೨ರಷ್ಟು ಇರುವುದು ಕಂಡುಬಂದಿದೆ. ಹೊಳಲ್ಕೆರೆ ತಾಲೂಕಿನಲ್ಲಿ ಪುರುಷರು ಶೇಕಡ ಪ್ರಮಾಣ ೫೦.೬೫ರಷ್ಟು, ಮಹಿಳೆಯರ ಪ್ರಮಾಣ ೪೯.೩೫ರಷ್ಟು ಇರುವುದು ತಿಳಿದುಬರುತ್ತದೆ. ಹೊಸದುರ್ಗ ತಾಲೂಕಿನಲ್ಲಿ ಪುರುಷರು ಸಂಖ್ಯೆ ಶೇಕಡ ಪ್ರಮಾಣ ೫೦.೬೭ರಷ್ಟು, ಮಹಿಳೆಯರ ಪ್ರಮಾಣ ೪೯.೩೩ರಷ್ಟು ಇದೆ. ಮೊಳಕಾಲ್ಮೂರು ತಾಲೂಕಿನಲ್ಲಿ ಪುರುಷರು ಶೇಕಡ ಪ್ರಮಾಣ ೫೦.೯೯ರಷ್ಟು ಇದ್ದರೆ, ಮಹಿಳೆಯರ ಸಂಖ್ಯೆ ಪ್ರಮಾಣ ೪೯.೦೧ರಷ್ಟು ಇರುವುದು ತಿಳಿದುಬರುತ್ತದೆ. ಚಿತ್ರದುರ್ಗ ಜಿಲ್ಲೆಯ ಒಟ್ಟು ಪುರುಷರ ಶೇಕಡ ಪ್ರಮಾಣ ೫೦.೬೬ರಷ್ಟು ಇದೆ. ಮಹಿಳೆಯರ ಶೇಕಡ ಪ್ರಮಾಣ ೪೯.೩೭ರಷ್ಟು ಇದೆ. ಒಟ್ಟಾರೆ ಚಿತ್ರದುರ್ಗ ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ಸ್ತ್ರೀಪುರುಷರ ಸಂಖ್ಯಾ ಪ್ರಮಾಣದಲ್ಲಿ ಪುರುಷರೇ ಹೆಚ್ಚಾಗಿರುವುದು ಕಂಡುಬರುತ್ತದೆ.

ಮೇಲಿನ ಕೋಷ್ಟಕದಲ್ಲಿ ವಿವರಿಸಲಾಗಿರುವ ಮಾಹಿತಿಯ ಪ್ರಕಾರ ಗ್ರಾಮ ಮತ್ತು ನಗರದ ಕುಟುಂಬಗಳ ಸಂಖ್ಯಾ ಪ್ರಮಾಣವನ್ನು ನೋಡಿದಾಗ ತಾಲೂಕುವಾರು ಕುಟುಂಬಗಳ ಸಂಖ್ಯೆ ಗಮನಿಸಿದಾಗ ಚಿತ್ರದುರ್ಗ ತಾಲೂಕಿನಲ್ಲಿ ೫೬,೮೪೫ ಕುಟುಂಬಗಳು ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿದ್ದು, ೩೩,೪೧೧ರಷ್ಟು ಕುಟುಂಬಗಳು ನಗರ ಪ್ರದೇಶದಲ್ಲಿ ವಾಸಿಸುವುದು ಕಂಡುಬರುತ್ತದೆ. ವಿಸ್ತೀರ್ಣದಲ್ಲಿ ಎರಡನೇ ಸ್ಥಾನದಲ್ಲಿರುವ ಚಳ್ಳಕೆರೆ ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ೬೪,೩೧೧ರಷ್ಟು ಇದ್ದು, ನಗರ ಪ್ರದೇಶದಲ್ಲಿ ೧೨,೦೫೦ರಷ್ಟು ಕುಟುಂಬಗಳು ವಾಸಿಸುವುದನ್ನು ಕಾಣಬಹುದು. ಎಲ್ಲಾ ತಾಲೂಕುಗಳ ವಾಸಿಸುವ ಕುಟುಂಬಗಳ ಸಂಖ್ಯೆಯನ್ನು ಗಮನಿಸಿದರೆ ಗ್ರಾಮೀಣ ಪ್ರದೇಶದಲ್ಲಿ

ವಾಸಿಸುವವರ ಕುಟುಂಬಗಳ ಸಂಖ್ಯೆಯೇ ಹೆಚ್ಚಾಗಿರುವುದು ಕಂಡುಬರುತ್ತದೆ. ಒಟ್ಟಾರೆಯಾಗಿ ಚಿತ್ರದುರ್ಗ ಜಿಲ್ಲೆಯ ಜನಸಂಖ್ಯೆ ೧೬,೫೯,೪೫೬ರಷ್ಟು ಇರುವುದು ಕಂಡುಬರುತ್ತದೆ.

ಕೋಷ್ಟಕ: ೨.೨. ಚಿತ್ರದುರ್ಗ ಜಿಲ್ಲೆಯ ತಾಲೂಕುವಾರು ಜನಸಂಖ್ಯಾ ವಿವರ (೨೦೧೧)

ಕ್ರ.ಸಂ	ತಾಲ್ಲೂಕಿನ ಹೆಸರು	ಪುರುಷ	ಮಹಿಳೆ	ಒಟ್ಟು	ಶೇಕಡ
೧	ಚಳ್ಳಕೆರೆ	೧೮೫೯೩೧	೧೭೯೮೫೩	೩೬೫೭೮೪	೨೨.೦೪
೨	ಚಿತ್ರದುರ್ಗ	೨೧೪೫೬೩	೨೦೯೩೧೬	೪೨೩೮೭೯	೨೫.೫೪
೩	ಹಿರಿಯೂರು	೧೪೪೧೬೦	೧೪೧೯೭೩	೨೮೬೧೩೩	೧೭.೨೪
೪	ಹೊಳಲ್ಕೆರೆ	೧೦೪೯೯೨	೧೦೨೨೬೮	೨೦೭೨೬೦	೧೨.೪೯
೫	ಹೊಸದುರ್ಗ	೧೧೯೧೪೮	೧೧೫೯೬೮	೨೩೫೧೧೬	೧೪.೧೭
೬	ಮೊಳಕಾಲ್ಮೂರು	೭೨೦೪೯	೬೯೨೩೫	೧೪೧೨೮೪	೮.೫೧
	ಒಟ್ಟು	**೮೪೦೮೪೩**	**೮೧೮೬೧೩**	**೧೬೫೯೪೫೬**	**೧೦೦.೦೦**

(ಕೃಪೆ: ಜಿಲ್ಲಾ ಸಂಗ್ರಹಣಾಧಿಕಾರಿಗಳು ಜಿಲ್ಲಾ ಅಂಕಿ ಅಂಶಗಳ ನೋಟ ೨೦೧೧)

ಕೋಷ್ಟಕ ೨.೨ರಲ್ಲಿ ಚಿತ್ರದುರ್ಗ ಜಿಲ್ಲೆಯ ಜನಸಂಖ್ಯೆಯನ್ನು ಅಂಕಿಅಂಶಗಳಲ್ಲಿ ನೋಡುವುದಾದರೆ ಜಿಲ್ಲೆಯ ಒಟ್ಟು ಜನಸಂಖ್ಯಾ ಪ್ರಮಾಣದಲ್ಲಿ ಚಿತ್ರದುರ್ಗ ತಾಲೂಕಿನಲ್ಲಿ ಶೇ. ೨೫.೫೪ರಷ್ಟು, ಚಳ್ಳಕೆರೆ ತಾಲೂಕಿನಲ್ಲಿ ಶೇಕಡ ಪ್ರಮಾಣ ೨೨.೦೪ರಷ್ಟು ಮತ್ತು ಹಿರಿಯೂರು ತಾಲೂಕಿನಲ್ಲಿ ಶೇಕಡ ಪ್ರಮಾಣ ೧೭.೨೪ರಷ್ಟು ಕಂಡುಬಂದಿದೆ. ಇತರ ತಾಲೂಕುಗಳಾದ ಮೊಳಕಾಲ್ಮೂರು ಶೇಕಡ ಪ್ರಮಾಣ ೮.೫೧ರಷ್ಟು, ಹೊಳಲ್ಕೆರೆ ಶೇಕಡ ಪ್ರಮಾಣ ೧೨.೪೯ರಷ್ಟು ಮತ್ತು ಹೊಸದುರ್ಗ ಶೇಕಡ ಪ್ರಮಾಣ ೧೪.೧೭ರಷ್ಟು ಇರುವುದು ಕಂಡುಬರುತ್ತದೆ.

೨.೨.೧ ಚಿತ್ರದುರ್ಗ ಜಿಲ್ಲೆಯ ತಾಲೂಕುವಾರು ಮಳೆ ಬೀಳುವ ಪ್ರಮಾಣದ ವಿವರ. ವಾರ್ಷಿಕ ವಾಸ್ತವಿಕ ಮಳೆ(ಮಿ.ಮೀ)

ಮಳೆಯೇ ರೈತರ ಜೀವಾಳ. ಈ ದೇಶದ ಬಹುಪಾಲು ಜನಸಮುದಾಯಗಳು ಮಳೆಯನ್ನು ನಂಬಿ ಜೀವನ ನಡೆಸುತ್ತಿವೆ. ಕನ್ನಡದ ಕವಿ ಸರ್ವಜ್ಞನು ತನ್ನ ವಚನದಲ್ಲಿ ಕೋಟಿವಿದ್ಯೆಗಿಂತ ಮೇಟಿ ವಿದ್ಯೆಯೇ ಮೇಲು ಎಂದು ಹೇಳಿರುವುದಕ್ಕೆ ಪೂರಕವಾಗಿ ಹಿಂದೆ ಹಳ್ಳಿಗಳಲ್ಲಿ ಯಾರು ತಮ್ಮ ಮಕ್ಕಳಿಗೆ ಶಿಕ್ಷಣವನ್ನು ಕೊಡಿಸುತ್ತಿರಲ್ಲಿಲ್ಲ. ಕಾರಣ ಅವರು ನಂಬಿದ ಭೂಮಿತಾಯಿ ನಮ್ಮನ್ನು ಯಾವತ್ತು ಕೈಬಿಡುವುದಿಲ್ಲ ಎನ್ನುವ ನಂಬಿಕೆ. ಕೃಷಿಗೂ ಜೀವನೋಪಾಯಕ್ಕೂ ಹೇಗೆ ನೇರವಾದ ಸಂಬಂಧವಿದೆಯೋ ಹಾಗೆಯೇ ಕೃಷಿಗೂ ಮತ್ತು ಮಳೆ ಬೀಳುವ ಪ್ರಮಾಣಕ್ಕೂ ನೇರವಾದ

ಸಂಬಂಧವಿರುವುದು. ಈ ಹಿನ್ನೆಲೆಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ಜೀವಿಸುವ ಪ್ರತಿಯೊಬ್ಬರೂ ಸಹ ಭೂಮಿ ಮತ್ತು ಪ್ರಕೃತಿಯನೇ ಅವಲಂಬಿಸಿ ತಮ್ಮ ಬದುಕನ್ನು ಮತ್ತು ಬದುಕಿನ ಕ್ರಮವನ್ನು ರೂಪಿಸಿಕೊಂಡಿರುವುದನ್ನು ನೋಡಬಹುದು. ಈ ಕೆಳಕಂಡ ಕೋಷ್ಟಕಳರಲ್ಲಿ ೨೦೦೯ರಿಂದ ೨೦೧೪ರವರೆಗೆ ಚಿತ್ರದುರ್ಗ ಜಿಲ್ಲೆಯಲ್ಲಿ ಮಳೆ ಬಿದ್ದ ಪ್ರಮಾಣವನ್ನು ಸಂಖ್ಯಾ ಶಾಸ್ತ್ರೀಯ ಆಯಾಮದಲ್ಲಿ ವಿಶ್ಲೇಶಿಸಲಾಗಿದೆ.

ಕೋಷ್ಟಕ: ೨.೩. ಚಿತ್ರದುರ್ಗ ಜಿಲ್ಲೆಯ ತಾಲೂಕುವಾರು ಮಳೆ ಬೀಳುವ ಪ್ರಮಾಣದ ವಿವರ (ಮಿ.ಮೀ. ಗಳಲ್ಲಿ)

ಕ್ರಸಂ	ತಾಲ್ಲೂಕಿನ ಹೆಸರು	೨೦೦೯	೨೦೧೦	೨೦೧೧	೨೦೧೨	೨೦೧೩	೨೦೧೪
೧	ಚಳ್ಳಕೆರೆ	೭೦೫	೭೩೫	೨೬೮	೫೩೨	೪೩೯	೫೬೫
೨	ಚಿತ್ರದುರ್ಗ	೮೩೪	೯೧೫	೩೨೮	೬೬೮	೭೦೨	೯೯೦
೩	ಹಿರಿಯೂರು	೭೧೫	೭೯೫	೩೦೮	೪೫೬	೬೨೭	೬೪೨
೪	ಹೊಳಲ್ಕೆರೆ	೯೩೦	೧೧೧೦	೫೪೦	೫೯೮	೭೧೫	೯೬೨
೫	ಹೊಸದುರ್ಗ	೮೬೪	೯೫೧	೪೨೩	೩೬೫	೩೭೨	೬೩೫
೬	ಮೊಳಕಾಲ್ಮೂರು	೮೧೭	೮೦೭	೨೯೫	೪೯೨	೨೨೧	೭೦೪
	ಒಟ್ಟು	೮೧೩	೮೯೧	೩೬೩	೫೨೮	೫೪೮	೭೬೮

(ಕೃಪೆ: ಜಿಲ್ಲಾ ಸಂಗ್ರಹಣಾಧಿಕಾರಿಗಳು, ಜಿಲ್ಲಾ ಅಂಕಿ ಅಂಶಗಳ ನೋಟ ೨೦೧೧)

ಕೋಷ್ಟಕ ೨.೩ರಲ್ಲಿ ಚಿತ್ರದುರ್ಗ ಜಿಲ್ಲೆಯಲ್ಲಿ ಮಳೆ ಬಿದ್ದ ಪ್ರಮಾಣವನ್ನು ಗಮನಿಸಬಹುದು. ಜಿಲ್ಲೆಯ ಒಟ್ಟು ಆರು ತಾಲೂಕುಗಳಲ್ಲಿ ೨೦೦೯ರಲ್ಲಿ ಎಲ್ಲಾ ತಾಲೂಕುಗಳ ೮೧೩ ಮಿ.ಮೀಳಲ್ಲಿ ನಷ್ಟು ಮಳೆಯಾಗಿದೆ. ಅದರಲ್ಲಿ ಅತಿ ಹೆಚ್ಚು ಮಳೆ ಬಿದ್ದಿರುವ ತಾಲೂಕು ಅಂದರೆ ಹೊಳಲ್ಕೆರೆ (೯೩೦ ಮಿ.ಮೀ). ಹೊಸದುರ್ಗದಲ್ಲಿ ೮೬೪ ಮಿ.ಮೀ. ನಷ್ಟು ಮಳೆಯಾಗಿದೆ. ಕಡಿಮೆ ಪ್ರಮಾಣ ಮಳೆ ಬಿದ್ದಿರುವ ತಾಲೂಕುಗಳೆಂದರೆ ಚಳ್ಳಕೆರೆ (೭೦೫ ಮಿ.ಮೀ) ಮತ್ತು ಹಿರಿಯೂರು (೭೧೫ ಮಿ.ಮೀ). ೨೦೧೪ರಲ್ಲಿ ಅತಿ ಹೆಚ್ಚು ಮಳೆ ಬಿದ್ದಿರುವ ತಾಲೂಕು ಅಂದರೆ ಹೊಳಲ್ಕೆರೆ (೯೬೨ ಮಿ.ಮೀ). ಚಿತ್ರದುರ್ಗದಲ್ಲಿ ೯೯೦ ಮಿ.ಮೀ. ಮಳೆಯಾಗಿರುವುದು ವರದಿಯಾಗಿದೆ.

೨.೨.೨ ಚಿತ್ರದುರ್ಗ ಜಿಲ್ಲೆಯಲ್ಲಿನ ಕೂಲಿಕಾರರ ವಿವರ

ಕೃಷಿಯು ರಾಜ್ಯದ ಮತ್ತು ದೇಶದ ಆರ್ಥಿಕತೆಗೆ ತನ್ನದೇ ಆದ ಕೊಡುಗೆಯನ್ನು ನೀಡುತ್ತಾ ಬಂದಿದೆ ಹಾಗೂ ದೇಶದಲ್ಲಿ ಬಹುಪಾಲು ಜನರು ಕೃಷಿಯನ್ನೇ ನಂಬಿ ತಮ್ಮ ಜೀವನ ಸಾಗಿಸುತ್ತಿರುವುದನ್ನು

ಗಮನಿಸಬಹುದು. ಇತರೆ ರಾಷ್ಟ್ರಗಳಿಗೆ ಹೋಲಿಕೆ ಮಾಡಿದರೆ ಭಾರತದಲ್ಲಿ ಭೂಮಿಗೂ ಕೃಷಿಗೂ ಮತ್ತು ಜೀವನಕ್ಕೂ ನೇರವಾದ ಸಂಬಧ ಇರುವುದು ಕಂಡುಬರುತ್ತದೆ. ಹಾಗೆಯೇ ಕೃಷಿ ಕೂಲಿಯನ್ನೇ ನಂಬಿ ಲಕ್ಷಾಂತರ ಗ್ರಾಮೀಣ ಕುಟುಂಬಗಳು ತೊಡಗಿಸಿಕೊಂಡಿದ್ದರೆಂಬುದನ್ನು ತೋರಿಸುತ್ತಿರು. ಚಿತ್ರದುರ್ಗ ಜಿಲ್ಲೆಯಲ್ಲಿ ಮಾದಿಗ ಸಮುದಾಯವು ಕೂಡ ಕೃಷಿಯನ್ನು ನಂಬಿ ತನ್ನ ಜೀವನವನ್ನು ಸಾಗಿಸುವುದು ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಜಿಲ್ಲೆಯ ಕೂಲಿಕಾರರ ಪ್ರಕಾರಗಳನ್ನು ಅವಲೋಕಿಸಿದರೆ ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿ ಕೂಲಿಕಾರರು ಕಂಡುಬರುತ್ತಾರೆ.

ಕೋಷ್ಟಕ: ೨.೪. ಚಿತ್ರದುರ್ಗ ಜಿಲ್ಲೆಯಲ್ಲಿನ ಕೂಲಿಕಾರರ ವಿವರ

ಲಿಂಗ	ಗ್ರಾಮೀಣ	ನಗರ	ಒಟ್ಟು
ಪುರುಷ	೩೬೦೨೧೮	೮೩೮೦೬	೪೪೪೦೨೪
ಮಹಿಳೆ	೧೯೯೯೬೬	೨೩೪೮೯	೨೨೩೪೫೫
ಒಟ್ಟು	೫೬೦೧೮೪	೧೦೭೨೯೫	೬೬೭೪೭೯

(ಕೃಪೆ: ಜಿಲ್ಲಾ ಸಂಗ್ರಹಣಾಧಿಕಾರಿಗಳು ಜಿಲ್ಲಾ ಅಂಕಿ ಅಂಶಗಳ ನೋಟ ೨೦೧೧)

ಕೋಷ್ಟಕ ೨.೪ರಲ್ಲಿ ಚಿತ್ರದುರ್ಗ ಜಿಲ್ಲೆಯಲ್ಲಿನ ಕೂಲಿಕಾರ ವಿವರವನ್ನು ಗಮನಿಸಬಹುದಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಪುರುಷ ಕೂಲಿಕಾರರ ಪ್ರಮಾಣ ಶೇಕಡ ೬೪.೩೦ರಷ್ಟು ಇದ್ದಾರೆ. ಮಹಿಳೆಯರ ಪ್ರಮಾಣ ಶೇಕಡ ೩೫.೭೦ರಷ್ಟು ಇರುವುದು ತಿಳಿದುಬರುತ್ತದೆ. ನಗರ ಪ್ರದೇಶದಲ್ಲಿ ಪುರುಷರ ಕೂಲಿಕಾರರ ಪ್ರಮಾಣ ಶೇಕಡ ೭೮.೧೦ರಷ್ಟು ಇದ್ದಾರೆ. ಮಹಿಳೆಯರ ಪ್ರಮಾಣ ಶೇಕಡ ೨೧.೯೦ರಷ್ಟು ಇದೆ. ಚಿತ್ರದುರ್ಗ ಜಿಲ್ಲೆಯ ಒಟ್ಟು ಗ್ರಾಮೀಣ ಮತ್ತು ನಗರ ಪ್ರದೇಶದ ಕೂಲಿಕಾರರಲ್ಲಿ ಪುರುಷರ ಪ್ರಮಾಣ ಶೇಕಡ ೬೫.೫೨ರಷ್ಟು ಇದ್ದಾರೆ. ಮಹಿಳೆಯರ ಪ್ರಮಾಣ ಶೇಕಡ ೩೩.೪೮ರಷ್ಟು ಇರುವುದು ತಿಳಿದುಬರುತ್ತದೆ. ಚಿತ್ರದುರ್ಗ ಜಿಲ್ಲೆಯಲ್ಲಿ ಮಹಿಳೆಯರಿಗಿಂತಲೂ ಪುರುಷ ಕೂಲಿಕಾರರ ಸಂಖ್ಯೆ ಹೆಚ್ಚಿರುವುದು ಕಂಡುಬಂದಿದೆ. ಪ್ರಾದೇಶಿಕ ಹಿನ್ನೆಲೆಯಲ್ಲಿ ಕೂಲಿಕಾರರನ್ನು ಅವಲೋಕಿಸಿದರೆ ನಗರ ಪ್ರದೇಶಗಳಿಗಿಂತಲೂ ಗ್ರಾಮೀಣ ಪ್ರದೇಶದಲ್ಲಿ ಕೂಲಿಕಾರರ ಸಂಖ್ಯೆ ಹೆಚ್ಚು ಇರುವುದು ಕಂಡುಬಂದಿದೆ.

ಕೋಷ್ಟಕ: ೨.೫. ಚಿತ್ರದುರ್ಗ ಜಿಲ್ಲೆಯ ತಾಲೂಕುವಾರು ಕುಟುಂಬಗಳ ವಿವರ

ಕ್ರಸಂ	ತಾಲೂಕಿನ ಹೆಸರು	ಕುಟುಂಬಗಳ ಸಂಖ್ಯೆ	ಶೇಕಡ
೧	ಚಳ್ಳಕೆರೆ	೭೬೩೬೧	೨೧.೩೮
೨	ಚಿತ್ರದುರ್ಗ	೯೦೨೫೬	೨೫.೨೮
೩	ಹಿರಿಯೂರು	೬೪೦೮೬	೧೭.೯೬

೪	ಹೊಳಲ್ಕೆರೆ	೪೫೭೩೦	೧೨.೮೦
೫	ಹೊಸದುರ್ಗ	೫೩೦೧೯	೧೪.೮೬
೬	ಮೊಳಕಾಲ್ಮೂರು	೨೭೫೫೧	೭.೭೨
	ಒಟ್ಟು	**೩೫೭೦೦೩**	**೧೦೦.೦೦**

(ಕೃಪೆ:ಜಿಲ್ಲಾ ಸಂಗ್ರಹಣಾದಿಕಾರಿಗಳು ಜಿಲ್ಲಾ ಅಂಕಿ ಅಂಶಗಳ ನೋಟ ೨೦೧೪-೧೫.)

ಕೋಷ್ಟಕ ೨.೫ರಲ್ಲಿ ಚಿತ್ರದುರ್ಗ ಜಿಲ್ಲೆಯಲ್ಲಿ ಒಟ್ಟು ಆರು ತಾಲೂಕುಗಳು ಇದ್ದು, ಅದರಲ್ಲಿ ಚಳ್ಳಕೆರೆ ತಾಲೂಕಿನಲ್ಲಿ ಕುಟುಂಬಗಳ ಪ್ರಮಾಣ ಶೇಕಡ ೨೧.೩೮ರಷ್ಟು, ಚಿತ್ರದುರ್ಗ ತಾಲೂಕಿನಲ್ಲಿ ಕುಟುಂಬಗಳ ಪ್ರಮಾಣ ಶೇಕಡ ೨೫.೨೮ರಷ್ಟು, ಹಿರಿಯೂರು ತಾಲೂಕಿನಲ್ಲಿ ಕುಟುಂಬಗಳ ಪ್ರಮಾಣ ಶೇಕಡ ೧೭.೯೬ರಷ್ಟಿದೆ. ಹೊಳಲ್ಕೆರೆ ತಾಲೂಕಿನಲ್ಲಿ ಕುಟುಂಬಗಳ ಪ್ರಮಾಣ ಶೇಕಡ ೧೨.೮೦ರಷ್ಟು, ಹೊಸದುರ್ಗ ತಾಲೂಕಿನಲ್ಲಿ ಕುಟುಂಬಗಳ ಪ್ರಮಾಣ ಶೇಕಡ ೧೪.೮೬ರಷ್ಟು, ಮತ್ತು ಮೊಳಕಾಲ್ಮೂರು ತಾಲೂಕಿನಲ್ಲಿ ಕುಟುಂಬಗಳ ಪ್ರಮಾಣ ಶೇಕಡ ೭.೭೨ರಷ್ಟಿದೆ. ಚಿತ್ರದುರ್ಗ ತಾಲೂಕಿನಲ್ಲಿ ಹೆಚ್ಚು ಕುಟುಂಬಗಳು ನೆಲೆಸಿರುವುದು ಕಂಡುಬಂದಿದೆ. ಉಳಿದ ಮೂರು ತಾಲೂಕುಗಳಾದ ಹೊಳಲ್ಕೆರೆ, ಹೊಸದುರ್ಗ ಮತ್ತು ಮೊಳಕಾಲ್ಮೂರು ತಾಲೂಕುಗಳಲ್ಲಿ ಅತೀ ಕಡಿಮೆ ಕುಟುಂಬಗಳು ನೆಲೆಸಿರುವುದನ್ನು ಸಂಖ್ಯಾತ್ಮಕವಾಗಿ ತಿಳಿಸಲಾಗಿದೆ.

೨.೩ ಚಿತ್ರದುರ್ಗ ಜಿಲ್ಲೆಯ ಶಿಕ್ಷಣ ಸಂಸ್ಥೆಗಳ ವಿವರ

ಚಿತ್ರದುರ್ಗ ಜಿಲ್ಲೆಯ ಗ್ರಾಮೀಣ ಪ್ರದೇಶ ಆರ್ಥಿಕವಾಗಿ, ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದ ಜಿಲ್ಲೆಯಾಗಿದೆ. ಕೆಲವು ಹಿಂದುಳಿದ ಸಮುದಾಯಗಳು ತಮ್ಮ ಮಕ್ಕಳನ್ನು ಅದರಲ್ಲೂ ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸಲು ಹಿಂಜರಿಯುತ್ತಾರೆ. ಸರ್ಕಾರದ ಅನೇಕ ಕಾರ್ಯಕ್ರಮಗಳಾದ ಹೆಣ್ಣು ಮಕ್ಕಳಿಗೆ ಉಚಿತ ಶಿಕ್ಷಣ, ವಿದ್ಯಾರ್ಥಿ ವೇತನ ಮುಂತಾದವುಗಳು ಲಿಂಗಬೇಧವನ್ನು ಕಡಿಮೆ ಮಾಡಲು ಸಹಾಯವಾಗಿರುತ್ತದೆ. ಇಲ್ಲಿ ಜಿಲ್ಲೆಯ ಶಿಕ್ಷಣ ಸಂಸ್ಥೆಗಳ ವಿವರವನ್ನು ತಿಳಿಸಲಾಗಿದೆ. ಅವುಗಳಲ್ಲಿ ಪ್ರಾಥಮಿಕ, ಮಾಧ್ಯಮಿಕ, ಪ್ರೌಢ, ವೈದ್ಯಕೀಯ, ಇಂಜಿನಿಯರಿಂಗ್ ಹಾಗೂ ಪಾಲಿಟೆಕ್ನಿಕ್ ಶಿಕ್ಷಣ ಸಂಸ್ಥೆಗಳ ಪ್ರಮಾಣವನ್ನು ಈ ಕೆಳಕಂಡ ಕೋಷ್ಟಕದಲ್ಲಿ ವಿವರಿಸಲಾಗಿದೆ.

ಕೋಷ್ಟಕ: ೨.೬, ಚಿತ್ರದುರ್ಗ ಜಿಲ್ಲೆಯ ತಾಲೂಕುವಾರು ಶಿಕ್ಷಣ ಸಂಸ್ಥೆಗಳ ವಿವರ

ಕ್ರ.ಸಂ	ತಾಲೂಕಿನ ಹೆಸರು	ಪ್ರಾಥಮಿಕ	ಮಾಧ್ಯಮಿಕ	ಪ್ರೌಢ	ಪದವಿ ಪೂರ್ವ	ಇಂಜನಿಯರ್	ಮೆಡಿಕಲ್	ಪಾಲಿಟೆಕ್ನಿಕ್
೧	ಚಳ್ಳಕೆರೆ	೨೧೮	೨೧೬	೮೯	೨೧	೦೦	೦೦	೦೧
೨	ಚಿತ್ರದುರ್ಗ	೧೩೪	೨೮೬	೧೧೫	೩೮	೦೧	೦೧	೦೧

೩	ಹಿರಿಯೂರು	೧೬೯	೧೯೫	೭೮	೨೧	೦೦	೦೦	೦೧
೪	ಹೊಳಲ್ಕೆರೆ	೧೨೭	೧೩೬	೪೯	೧೮	೦೦	೦೦	೦೦
೫	ಹೊಸದುರ್ಗ	೧೭೭	೧೬೪	೬೭	೧೮	೦೦	೦೦	೦೧
೬	ಮೊಳಕಾಲ್ಮೂರು	೭೭	೯೮	೨೯	೦೭	೦೦	೦೦	೦೦
	ಒಟ್ಟು	೯೦೨	೧೦೯೫	೪೨೭	೧೩೦	೦೧	೦೧	೦೪

(ಕೃಪೆ: ಜಿಲ್ಲಾ ಸಂಗ್ರಹಣಾಧಿಕಾರಿಗಳು ಜಿಲ್ಲಾ ಅಂಕಿ ಅಂಶಗಳ ನೋಟ ೨೦೧೧)

ಕೋಷ್ಟಕ ೨.೬ರಲ್ಲಿ ಚಿತ್ರದುರ್ಗ ತಾಲೂಕಿನಲ್ಲಿ ಹೆಚ್ಚು ಶಿಕ್ಷಣ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿರುವುದನ್ನು ಅಂಕಿ ಅಂಶಗಳಿಂದ ಗುರುತಿಸಬಹುದು. ಮುಖ್ಯವಾಗಿ ಇಂಜಿನಿಯರಿಂಗ್, ಮೆಡಿಕಲ್, ಪಾಲಿಟೆಕ್ನಿಕ್ ಮತ್ತು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಂಸ್ಥೆಗಳು ಇವೆ. ಚಳ್ಳಕೆರೆ ತಾಲೂಕಿನಲ್ಲಿ ತಾಂತ್ರಿಕ ಶಿಕ್ಷಣ ಸಂಸ್ಥೆಗಳು ಕಡಿಮೆ ಇರುವುದು ಕಂಡುಬಂದಿದೆ. ಮೊಳಕಾಲ್ಮೂರು ಮತ್ತು ಹೊಳಲ್ಕೆರೆ ತಾಲೂಕುಗಳ ಶಿಕ್ಷಣ ಸಂಸ್ಥೆಗಳು ಅತ್ಯಂತ ಕಡಿಮೆ ಪ್ರಮಾಣದಲ್ಲಿ ಇರುವುದು ನೋಡಬಹುದು.

೨.೪ ಚಿತ್ರದುರ್ಗ ಜಿಲ್ಲೆಯ ಆರೋಗ್ಯ ಕೇಂದ್ರಗಳ ವಿವರ

ಅನಾದಿ ಕಾಲದಿಂದಲೂ ಭಾರತದ ಸಾಮಾಜಿಕ, ಆರ್ಥಿಕ ಮತ್ತು ಸಂಸ್ಕೃತಿಯಲ್ಲಿ ಔಷಧೀಯ ಸಸ್ಯಗಳು ಮಹತ್ತರವಾದ ಪಾತ್ರವನ್ನು ನಿರ್ವಹಿಸುತ್ತಾ ಬಂದಿದೆ. ಇದಕ್ಕೆ ಮುಖ್ಯ ಕಾರಣ ದೇಶದಲ್ಲಿರುವ ನಮ್ಮ ಗ್ರಾಮಗಳಲ್ಲಿ ಇಂದಿಗೂ ಪರಂಪರಾನುಗತವಾಗಿ ಮುಂದುವರಿಸಿಕೊಂಡು ಬಂದಿರುವ ಗಿಡಮೂಲಿಕೆಯ ಉಪಚಾರವಾಗಿದೆ. ಈ ನಿಟ್ಟಿನಲ್ಲಿ ಹಳ್ಳಿಗಳಲ್ಲಿರುವ ಸಾಂಪ್ರದಾಯಿಕ ದಾದಿಯರು, ಜಾನಪದ ವೈದ್ಯರು ಮುಂತಾದವರು ಶ್ರಮಿಸುತ್ತಿದ್ದರು. ಇವರೊಂದಿಗೆ ನಮ್ಮ ಹಳ್ಳಿಗಳಲ್ಲಿ ವಾಸವಾಗಿರುವ ಸಾವಿರಾರು ನಾಟಿ ವೈದ್ಯರು, ಹಿರಿಯರು ಮತ್ತು ಹಿರಿಯ ಹೆಂಗಸರು ತಮ್ಮ ಹಳೆಯ ಅನುಭವಗಳ ಆಧಾರದಿಂದ ಮೂಲಿಕೆಗಳನ್ನು ಪ್ರಯೋಗ ಮಾಡಿ ಅನಾರೋಗ್ಯವನ್ನು ವಾಸಿ ಮಾಡುತ್ತಿರುವುದನ್ನು ಇಂದಿಗೂ ನಾವು ಕಾಣಬಹುದು. ಆದರೆ ಇನ್ನೊಂದೆಡೆಯಲ್ಲಿ ಆಧುನಿಕ ವೈದ್ಯ ಪದ್ಧತಿಯ ಪ್ರಭಾವದಿಂದ ಮತ್ತು ವಿದೇಶಿ ಸಂಸ್ಕೃತಿಯ ಪ್ರವೇಶದಿಂದ ನಮ್ಮ ಸಾಂಪ್ರದಾಯಿಕ ಔಷಧಿಯ ವ್ಯವಸ್ಥೆಗಳು ನಶಿಸಿಹೋಗುವ ಭೀತಿಯೂ ಕಂಡು ಬರುತ್ತಿದ್ದು, ಇದರೊಂದಿಗೆ ಸಾಂಪ್ರದಾಯಿಕವಾಗಿ ಪ್ರಯೋಗವಾಗುತ್ತಿದ್ದ ಗಿಡಮೂಲಿಕೆಗಳು ನಶಿಸಿಹೋಗುತ್ತಿರುವುದು ಬೆಳಕಿಗೆ ಬರುತ್ತಲಿದೆ."[೨]

ಸಾಮಾಜಿಕ ವ್ಯವಸ್ಥೆಯಲ್ಲಿ ಆರೋಗ್ಯ ಅಭಿವೃದ್ಧಿ ಸೂಚ್ಯಂಕದಲ್ಲಿ ಒಂದು ಪ್ರಮುಖ ಭಾಗವಾಗಿರುವುದು. ಆರೋಗ್ಯಕ್ಕೂ ಅಭಿವೃದ್ಧಿಗೂ ನೇರವಾದ ಸಂಬಂಧವಿದೆ. ಈ ವಿಷಯಗಳ ಮೇಲೆ ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ವಾದವಿವಾದಗಳು ನಡೆಯುತ್ತಿವೆ. ಈ ಹಿನ್ನೆಲೆಯಲ್ಲಿ ಜಾಗತಿಕ ಮಟ್ಟದಲ್ಲಿ ಆರೋಗ್ಯಕ್ಕೆ ಮೊದಲ ಆದ್ಯತೆ ನೀಡಿರುವುದು. ಅನೇಕ ಅಧ್ಯಯನಗಳಿಂದ ತಿಳಿಯುತ್ತದೆ ಆವರ

ಆರೋಗ್ಯ ರಕ್ಷಣೆಗೆ ಸಂಬಂಧಿಸಿದಂತೆ ಸರ್ಕಾರ ಮತ್ತು ಸಂಘ ಸಂಸ್ಥೆಗಳು ಸೌಲಭ್ಯಗಳನ್ನು ಒದಗಿಸಿರುವುದು ತಿಳಿಯುತ್ತದೆ.

ಕೋಷ್ಟಕ: ೨.೭, ಚಿತ್ರದುರ್ಗ ಜಿಲ್ಲೆಯ ತಾಲೂಕುವಾರು ಆರೋಗ್ಯ ಕೇಂದ್ರಗಳ ವಿವರ

ಕ್ರ.ಸಂ	ತಾಲೂಕಿನ ಹೆಸರು	ಸರ್ಕಾರಿ ಆಸ್ಪತ್ರೆ	ಪಿ.ಹೆಚ್.ಸಿ	ಖಾಸಗಿ ಆಸ್ಪತ್ರೆಗಳು	ಸಮುದಾಯ ಆರೋಗ್ಯ ಕೇಂದ್ರಗಳು
೧	ಚಳ್ಳಕೆರೆ	೧೮	೧೪	೦೫	೨
೨	ಚಿತ್ರದುರ್ಗ	೨೨	೧೮	೨೨	೩
೩	ಹಿರಿಯೂರು	೨೬	೨೧	೦೪	೨
೪	ಹೊಳಲ್ಕೆರೆ	೧೪	೧೩	೦೧	೦
೫	ಹೊಸದುರ್ಗ	೧೪	೦೯	೦೩	೩
೬	ಮೊಳಕಾಲ್ಮೂರು	೦೮	೦೬	೦೧	೧
	ಒಟ್ಟು	೧೦೨	೮೧	೩೬	೧೧

(ಕೃಪೆ: ಜಿಲ್ಲಾ ಸಂಗ್ರಹಣಾಧಿಕಾರಿಗಳು ಜಿಲ್ಲಾ ಅಂಕಿ ಅಂಶಗಳ ನೋಟ ೨೦೧೪-೧೫)

ಕೋಷ್ಟಕ ೨.೭ರಲ್ಲಿ ಚಿತ್ರದುರ್ಗ ಜಿಲ್ಲೆಯಲ್ಲಿ ಸಾರ್ವಜನಿಕ ಆರೋಗ್ಯಕ್ಕೆ ಸಂಬಂಧಿಸಿದಂತೆ ಖಾಸಗಿ ಮತ್ತು ಸರ್ಕಾರವು ಆರೋಗ್ಯದ ರಕ್ಷಣೆಗೆ ನೀಡಿರುವ ಸೌಲಭ್ಯಗಳನ್ನು ಅಂಕಿ ಅಂಶಗಳನ್ನು ಸಂಖ್ಯಾಶಾಸ್ತ್ರೀಯ ಹಿನ್ನೆಲೆಯಲ್ಲಿ ಪರಾಮರ್ಶಿಸಿ ಸಾಧ್ಯ. ಮೊದಲನೆಯದಾಗಿ ಚಿತ್ರದುರ್ಗದ ತಾಲೂಕಿನಲ್ಲಿ ಹೆಚ್ಚು ಸೌಲಭ್ಯಗಳನ್ನು ನೀಡಿದರೆ. ಎರಡನೆಯದಾಗಿ ಚಳ್ಳಕೆರೆ ತಾಲೂಕಿನಲ್ಲಿ ಆರೋಗ್ಯ ಸೌಲಭ್ಯಗಳನ್ನು ನೀಡಿರುವುದು ತಿಳಿಯುತ್ತದೆ. ಅತೀ ಕಡಿಮೆ ಆರೋಗ್ಯ ಸೌಲಭ್ಯಗಳನ್ನು ನೀಡಿರುವ ತಾಲೂಕುಗಳನ್ನು ನೋಡುವುದಾದರೆ ಮೊಳಕಾಲ್ಮೂರು ಮತ್ತು ಹೊಳಲ್ಕೆರೆ ಕಂಡುಬರುವುದು.

ಕೋಷ್ಟಕ: ೨.೮, ಚಿತ್ರದುರ್ಗ ಜಿಲ್ಲೆಯ ತಾಲೂಕುವಾರು ಸ್ತ್ರೀಶಕ್ತಿ ಸಹಾಯ ಗುಂಪುಗಳ ಮತ್ತು ಸದಸ್ಯರ ವಿವರ

ಕ್ರ. ಸಂ	ತಾಲೂಕು	ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳ ಸಹಾಯ	ಮಹಿಳೆಯರ ಸಂಖ್ಯೆ (ಪರಿಶಿಷ್ಟ ಜಾತಿ)	ಮಹಿಳೆಯರ ಸಂಖ್ಯೆ (ಪರಿಶಿಷ್ಟ ಪಂಗಡ)	ಮಹಿಳೆಯರ ಸಂಖ್ಯೆ (ಇತರೆ)	ಸದಸ್ಯರ ಒಟ್ಟು ಸಂಖ್ಯೆ
೧	ಚಿತ್ರದುರ್ಗ	೧೧೮೦	೨೪೧೮	೩೩೮೭	೫೬೬೭	೧೧೪೭೨
೨	ಚಳ್ಳಕೆರೆ	೭೨೫	೨೬೫೩	೨೩೬೭	೩೪೬೦	೮೪೮೦

೩	ಹಿರಿಯೂರು	೯೦೫	೨೨೨೨	೧೪೭೫	೭೬೫೬	೧೧೩೫೩
೪	ಹೊಸದುರ್ಗ	೭೩೦	೨೫೮೧	೧೫೪೭	೬೫೬೨	೧೦೬೯೦
೫	ಹೊಳಲ್ಕೆರೆ	೧೦೪೨	೨೪೫೬	೧೩೮೮	೧೦೨೪೩	೧೪೦೮೭
೬	ಮೊಳಕಾಲ್ಮೂರು	೪೯೩	೧೨೫	೧೪೪	೨೮೯	೫೫೮
	ಒಟ್ಟು	೫೦೭೫	೧೨೪೫೫	೧೦೩೦೮	೩೩೮೭೭	೫೬೬೪೦

(ಕೃಪೆ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿ, ಚಿತ್ರದುರ್ಗ ೨೦೧೪-೧೫)

ಕೋಷ್ಟಕ ೨.೮ರಲ್ಲಿ ಚಿತ್ರದುರ್ಗ ಜಿಲ್ಲೆಯಲ್ಲಿ ಸ್ತ್ರೀಶಕ್ತಿ ಸಹಾಯ ಗುಂಪಿಗಳ ಮತ್ತು ಸದಸ್ಯರ ಸಂಖ್ಯೆಗೆ ಸಂಬಂಧಿಸಿದಂತೆ ಕಂಡುಬರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಜಾತಿಗೆ ಸಂಬಂಧಿಸಿದ ವಿವರಣೆಯನ್ನು ಸಂಖ್ಯಾಶಾಸ್ತ್ರೀಯ ಹಿನ್ನೆಲೆಯಲ್ಲಿ ಪರಾಮರ್ಶಿಸಾಗಿದೆ. ಸ್ತ್ರೀಶಕ್ತಿ ಸಹಾಯ ಗುಂಪಿಗಳಲ್ಲಿ ಮಹಿಳೆಯರ ಸಂಖ್ಯೆ ಪರಿಶಿಷ್ಟ ಜಾತಿಯಲ್ಲಿ ಚಳ್ಳಕೆರೆ ಮತ್ತು ಹೊಸದುರ್ಗ ತಾಲೂಕುಗಳಲ್ಲಿ ಹೆಚ್ಚು ಇರುವುದು ಕಂಡುಬರುತ್ತದೆ. ಮಹಿಳೆಯರ ಸಂಖ್ಯೆ ಪರಿಶಿಷ್ಟ ಪಂಗಡದಲ್ಲಿ ಚಿತ್ರದುರ್ಗ ಮತ್ತು ಚಳ್ಳಕೆರೆ ತಾಲೂಕಿನಲ್ಲಿ ಹೆಚ್ಚು ಇರುವುದನ್ನು ನೋಡಬಹುದು. ಮಹಿಳೆಯರ ಸಂಖ್ಯೆ ಇತರೆ ಸಮುದಾಯದಲ್ಲಿ ಹಿರಿಯೂರು ಮತ್ತು ಹೊಳಲ್ಕೆರೆ ತಾಲೂಕಿನಲ್ಲಿ ಹೆಚ್ಚು ಇರುವುದು ತಿಳಿಯುತ್ತದೆ. ಅತೀ ಕಡಿಮೆ ಸ್ತ್ರೀಶಕ್ತಿ ಸಹಾಯ ಗುಂಪಿಗಳ ಮತ್ತು ಸದಸ್ಯರ ಸಂಖ್ಯೆ ಹೊಂದಿರುವ ತಾಲೂಕು ಮೊಳಕಾಲ್ಮೂರು.

ಚಿತ್ರದುರ್ಗ ಜಿಲ್ಲೆಯು ವಿವಿಧ ಜಾತಿ ಪಂಗಡಗಳನ್ನು ಒಳಗೊಂಡಿದೆ. ಈ ಜಿಲ್ಲೆಯಲ್ಲಿ ಮುಖ್ಯವಾಗಿ ಲಿಂಗಾಯತ, ಕುರುಬ, ಮುಸ್ಲಿಂ, ವಾಲ್ಮೀಕಿ, ಮಾದಿಗ, ಚಲುವಾದಿ, ದಕ್ಕಲಿಗ, ಕಮ್ಮಾರ, ಕುಂಬಾರ, ಅಗಸ, ಬಡಿಗ, ಕ್ಷೌರಿಕ, ಕಮ್ಮಾ ಮುಂತಾದ ಜಾತಿಗಳನ್ನು ಒಳಗೊಂಡಿದೆ. ಆದರೆ ಪ್ರಬಲ ಜಾತಿಯಾಗಿ ಲಿಂಗಾಯತ, ನಾಯಕ ಜಾತಿಗಳು ಕಂಡು ಬರುತ್ತವೆ. ಮಾದಿಗ, ಚಲುವಾದಿ, ವಾಲ್ಮೀಕಿ ಜಾತಿಗಳು ಪ್ರಮಾಣದಲ್ಲಿ ಹೆಚ್ಚು ಜನಸಂಖ್ಯೆಯನ್ನು ಹೊಂದಿದ್ದರೂ ರಾಜಕೀಯವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದ ಜಾತಿಗಳಾಗಿ ಕಂಡುಬರುತ್ತವೆ. ಇನ್ನುಳಿದ ಮೇಧ, ಅಗಸ, ಕ್ಷೌರಿಕ, ಕಮ್ಮಾರ, ಕುಂಬಾರ ಮುಂತಾದ ಕೆಳ ಹಂತದ ಜಾತಿಗಳೂ ಜನಸಂಖ್ಯಾ ಪ್ರಮಾಣದಲ್ಲಿ ಹಿಂದುಳಿದವುಗಳಾಗಿದ್ದು ಆರ್ಥಿಕವಾಗಿ, ಸಾಮಾಜಿಕವಾಗಿ ತುಂಬಾ ಹಿಂದುಳಿದಿವೆ. ಕೇವಲ ವೋಟ್ ಬ್ಯಾಂಕ್‌ನ ದೃಷ್ಟಿಯಲ್ಲಿರಿಸಿಕೊಂಡು ರಾಜಕಾರಣ ಮಾಡುವುದರಿಂದ ಇಂತಹ ಕೆಳಗೆ ತಳ್ಳಲ್ಪಟ್ಟ ಸಮುದಾಯಗಳು ಯಾವುದೇ ರೀತಿಯಲ್ಲಿ ರಾಜಕೀಯ ಸ್ಥಾನ ಗಳಿಸುವಲ್ಲಿ ಸೋಲನ್ನು ಅನುಭವಿಸಲೇಬೇಕಾಗುತ್ತವೆ.

ಟಿಪ್ಪಣಿಗಳು

೧. ರಂಗಪ್ಪ ಆರ್, ೨೦೦೯, ಚಿತ್ರದುರ್ಗ ಜಿಲ್ಲೆಯ ರಾಜಕೀಯ ನಾಯಕತ್ವ–ಜಗಲೂರು ಇಮಾಮ್‌ಸಾಬ್. ಅಪ್ರಕಟಿತ ಪಿಹೆಚ್ ಡಿ ಮಹಾ ಪ್ರಬಂಧ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. ಪುಟ, ೩೬.

೨. ಕಣಜ ಅಂತರ್ಜಾಲ ಕನ್ನಡ ಜ್ಞಾನಕೋಶ, ೨೦೦೩, ಅಧ್ಯಾಯ ೩: ಔಷಧೀಯ ಸಸ್ಯಗಳು–ಕೃಷಿ ಮತ್ತು ಮಾರುಕಟ್ಟೆ.

ಅಧ್ಯಾಯ: ಮೂರು
ಮಾದಿಗ ಸಮುದಾಯದ ಹಿನ್ನೆಲೆ

೩.೧ ಪದನಿಷ್ಪತ್ತಿ

೩.೨ ಸಮುದಾಯದ ಪೌರಾಣಿಕ ಮತ್ತು ಚಾರಿತ್ರಿಕ ಹಿನ್ನೆಲೆ

೩.೩ ಜನಸಂಖ್ಯೆ

ಅಧ್ಯಾಯ: ಮೂರು

ಮಾದಿಗ ಸಮುದಾಯದ ಹಿನ್ನೆಲೆ

ಪೀಠಿಕೆ

ಮಾನವ ಕುಲ ಒಂದೇ ಆದರೂ ಕೆಲವು ವಿಶಿಷ್ಟ ದೈಹಿಕ ಲಕ್ಷಣ ಹಾಗೂ ವೃತ್ತಿ ಉದ್ಯೋಗಗಳಲ್ಲಿ ವ್ಯತ್ಯಾಸಗಳು ಇವೆ. ಸಮಾಜದಲ್ಲಿ ಹಲವಾರು ಜಾತಿ–ಜನಾಂಗಗಳು ವರ್ಗೀಕರಣವಾಗಿರುವುದು ಕಂಡುಬರುತ್ತದೆ. ಪ್ರಾದೇಶಿಕವಾಗಿ, ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ ಅನೇಕ ಅಂಶಗಳು ಎದ್ದು ಕಾಣುಬರುತ್ತವೆ. ಈ ನೆಲೆಯಿಂದ ಮಾನವ ಬೇಟೆಯಾಡಿ ಬದುಕುತ್ತಿದ್ದ. ತನ್ನ ಅಲೆಮಾರಿತನವನ್ನು ಬಿಟ್ಟು ಒಂದೇ ಕಡೆ ನೆಲೆ ನಿಲ್ಲುವುದರೊಂದಿಗೆ ಕುಟುಂಬ ನಿರ್ಮಿಸಿಕೊಂಡು ವಂಶಾವಳಿಯಿಂದ ಒಂದು ಸಮುದಾಯವನ್ನು ಕಟ್ಟಿಕೊಂಡು ಸಹಾಬಾಳ್ವೆ ಜೀವನವನ್ನು ನಡೆಸುವಲ್ಲಿ ಸಫಲರಾದರು. ಇದು ಒಂದೊಂದು ಗುಂಪು, ಒಂದೊಂದು ವೃತ್ತಿಯನ್ನಾಧರಿಸಲು ಪೂರಕವಾದವು. ಹೀಗೆ ಪ್ರತ್ಯೇಕ ವೃತ್ತಿ ಜೀವನ ವಿಧಾನದಿಂದಾಗಿ ಮಾನವ ಸಂಸ್ಕೃತಿಯಲ್ಲಿ ವೈವಿಧ್ಯತೆಯನ್ನು ಕಾಣಲು ಸಾಧ್ಯವಾಯಿತು. ಅನಂತರ ಅದೇ ಮಾನವ ಗುಂಪುಗಳು ಜಾತಿಯಾಗಿ ಕಾಣಿಸಿಕೊಂಡವು. ವೃತ್ತಿ ಮೂಲದಿಂದ 'ಜಾತಿ' ಪದವನ್ನು ಬಳಸಲಾಯಿತು.

ಜಾತಿ ವ್ಯವಸ್ಥೆಯಲ್ಲಿ ವ್ಯಕ್ತಿಯ ಸ್ಥಾನಮಾನಗಳು ಆತನು ಹುಟ್ಟುವ ಕುಟುಂಬದ ಆಧಾರದ ಮೇಲೆ ನಿರ್ಧಾರವಾಗುತ್ತಿತ್ತು. ಉಪನ್ಯಾಸ ಹೇಳುವುದು, ಮಂತ್ರಗಳನ್ನು ಪಠಿಸುವುದು, ವೇದ ಉಪನಿಷತ್ತುಗಳನ್ನು ಹೇಳುವುದು ಮೇಲ್ಜಾತಿಯವರ ಪ್ರಮುಖವಾದ ಕೆಲಸವಾಗಿತ್ತು. ಸ್ವಲ್ಪ ಮಧ್ಯಮ ವರ್ಗ ಜಾತಿಯ ಜನರು ದೇಶವನ್ನು ಕಾಯುವುದು, ವ್ಯವಸಾಯ ಮಾಡುವುದು, ವ್ಯಾಪಾರ ಮಾಡುವುದು, ಮೇಲ್ವರ್ಗದ ಜನರನ್ನು ರಕ್ಷಣೆ ಮಾಡುವಂತಹ ವೃತ್ತಿಯಾಗಿತ್ತು. ಆದರೆ ಕೆಳವರ್ಗದ ಅಥವಾ ಕೆಳಜಾತಿ ಕೆಲಸವೆಂದರೆ ಮೇಲೆ ಜಾತಿಗಳಿಗೆ ಪಾದರಕ್ಷೆ ಮಾಡುವುದು, ಹೊಲದಲ್ಲಿ ಕೂಲಿ ಕಾರ್ಮಿಕರಾಗಿ ಮಾಡುತ್ತಿದ್ದರು. ಇದರಲ್ಲಿ ಮಾದಿಗ ಸಮುದಾಯದ ಜನರ ಸ್ಥಿತಿಯಂತೂ ಇನ್ನೂ

ಶೋಚಣೀಯವಾಗಿತ್ತು. ಇವರ ವೃತ್ತಿಯೇ ಚರ್ಮದ ಕೆಲಸವನ್ನು ಮಾಡುವುದರಿಂದ ಇವರನ್ನು ಮಾದಾರ, ಮಾದಿಗ, ಮಾರೀಚ, ಜಾಂಬವ, ಕಸೆ, ಮಲ್ಲಿ, ಹರಿಜನ, ಮಹಾಆದಿ, ಮಾತಂಗಿ ಮಕ್ಕಳು, ಹೊಲೆಮಾದಿಗ, ಕೆಳ ಜಾತಿಗಳೆಂದು ಪರಿಗಣಿತವಾಯಿತು.

ರಾಜಶೇಖರ್ ಅವರು ಮಾದಿಗ ಸಮುದಾಯದವರು ಮೂಲತಃ ಆಂಧ್ರ ಪ್ರದೇಶದವರಾದರೂ, ಕನ್ನಡ ಮಾತನಾಡುವವರೂ ಇದ್ದಾರೆ. ಕರ್ನಾಟಕದಲ್ಲಿ ಎಲ್ಲ ಜಿಲ್ಲೆಗಳಲ್ಲಿ ಇವರು ಕಂಡುಬರುತ್ತಾರೆ. ಕರ್ನಾಟಕದಲ್ಲಿ ಮಾದಿಗರು ತಾವು ಮಾತಂಗಿಯ ಮಕ್ಕಳು, ಕೆಲವು ಪ್ರದೇಶಗಳಲ್ಲಿ ಆದಿಜಾಂಬವರು ಎಂದು ಕರೆಸಿಕೊಳ್ಳುವರು. ಮಹಾಭಾರತದ ಜಾಂಬವ ಎಂಬ ಮಹಾಮುನಿ ಹಾಗೂ ಅಂದಿನ ಕಾಡುಗುಡ್ಡ ಜನರ ಸಂತತಿಯವರು ಎಂಬುದಾಗಿ ಇವರ ನಂಬಿಕೆ. ಭಾರತದ ಜನಗಣತಿ ವರದಿಯಲ್ಲಿ ಮಾದಿಗರನ್ನು ಮಾತಂಗ ಬ್ರಾಹ್ಮಣ ಎಂದು ಹೆಸರಿಸಲಾಗಿದೆ. ಇವರು ಕೆಲವು ಪ್ರದೇಶದಲ್ಲಿ ವಿಷ್ಣುವಿನ ಆರಾಧಕರು, ಕೆಲವು ಪ್ರದೇಶದಲ್ಲಿ ಶಿವನ ಭಕ್ತರು ಹಾಗೂ ಶಕ್ತ್ಯ ಎಂಬ ದೈವವನ್ನು ಪೂಜಿಸುತ್ತಾರೆ. ಇವರನ್ನು ಎಡಗೈಯವರು ಎಂದು ಸಾಮಾನ್ಯವಾಗಿ ಕರೆಯಲಾಗುತ್ತದೆ. ಇವರನ್ನು ಆದಿ ಜಾಂಬವರು ಮತ್ತು ಮಾತಂಗಿ ಮಕ್ಕಳು ಎಂದೂ ಕರೆಯುವರು. ಇವರಲ್ಲಿ ದೇಶಭಾಗದವರು ಮತ್ತು ಮಾತಂಗದವರು ಎಂಬ ಎರಡು ಪ್ರಭೇದಗಳಿವೆ. ಇವರ ಮಾತೃಭಾಷೆ ತೆಲುಗು ಆಗಿದ್ದರೂ ಜೊತೆಗೆ ಕನ್ನಡದಲ್ಲೂ ಇವರು ವ್ಯವಹರಿಸಬಲ್ಲರು.

ಮಾದಿಗರು ಸಾಮಾನ್ಯವಾಗಿ ಪ್ರತಿಯೊಂದು ಗ್ರಾಮದಲ್ಲಿಯೂ ಇದ್ದರೂ ಅವರು ಊರಿನಿಂದ ಹೊರಗಡೆ ವಾಸಿಸುತ್ತಿದ್ದರು. ಇದಕ್ಕೆ ಮುಖ್ಯ ಕಾರಣ 'ತೊಗಲಿನ' ಕೆಲಸ ಮಾಡುವುದರಿಂದ ಊರಿನಲ್ಲಿ ವಾಸನೆ ಬರುತ್ತದೆ ಎಂಬುದಾಗಿತ್ತು. ಸತ್ತ ದನಗಳನ್ನು ಊರಿನಿಂದ ಹೊರಗೆ ತೆಗೆದುಕೊಂಡು ಹೋಗಿ ಚರ್ಮವನ್ನು ಸುಲಿಯುವುದು ಹಾಗೂ ಅದರ ಮಾಂಸವನ್ನು ತರುವುದು. ತಂದ ಚರ್ಮವನ್ನು ಕರೆಬಾನಿ (ಗಲ್ಲೆಬಾನಿ)ಗಳಲ್ಲಿ ನೆನೆಹಾಕಿ ಹದ ಮಾಡುವುದರಿಂದ ಅದು ಕೆಟ್ಟ ವಾಸನೆ ಬರುವುದರಿಂದ ಜೊತೆಗೆ ಅಸಹನೀಯವೆನಿಸುವುದರಿಂದ ಊರ ಹೊರಗೆ ಉಳಿಯಬೇಕಾಯಿತು. ನಂತರ ಸಾಮಾನ್ಯವಾಗಿ ಮಾದಿಗ ಸಮುದಾಯವು ಅತ್ಯಂತ ಬಡತನ, ಭೂರಹಿತ ಜನ, ಅನೇಕ ನೊವನ್ನು ಅನುಭವಿಸುತ್ತಲೇ ಬಂದ ಮಾದಿಗ ಸಮುದಾಯ ಹಿಂದಿನಿಂದಲೂ ತಲೆಮೇಲೆ ಸೂರು ಇಲ್ಲದೇ ವಾಸಿಸುತ್ತಾ ಬಂದವರು. ಇವರ ಮೂಲ ಉದ್ಯೋಗವಾಗಿ ಚಮ್ಮಾರಿಕೆಯಾಗಿರುವುದರಿಂದ ಉಪಜೀವನಕ್ಕೂ ಸಾಲದ ಪರಿಸ್ಥಿತಿ ಇತ್ತು. ಹಾಗಾಗಿ ರೈತರ ಅಥವಾ ಶ್ರೀಮಂತರ ಮನೆಗಳಲ್ಲಿ 'ಜೀತದಾಳು'ಗಳಾಗಿ ದುಡಿಯುವ ಪರಿಸ್ಥಿತಿ ಮಾದಿಗ ಸಮುದಾಯಕ್ಕೆ ಉಂಟಾಯಿತು.

ಹಿಂದಿನ ಕಾಲಕ್ಕೆ ಹೋಲಿಕೆ ಮಾಡಿದರೆ ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ಧಾರ್ಮಿಕವಾಗಿ, ರಾಜಕೀಯವಾಗಿ ಹೀಗೆ ಎಲ್ಲಾ ಕ್ಷೇತ್ರದಲ್ಲಿ ಸಾಮಾಜಿಕವಾಗಿ ಬದಲಾವಣೆಯನ್ನು ಹೊಂದುತ್ತಿದ್ದಾರೆ. ಹಿಂದೆ ಪ್ರತಿಯೊಂದು ಮನೆಯಲ್ಲಿ ಚರ್ಮವನ್ನು ಹದ ಮಾಡುವಂಥ ವೃತ್ತಿಯನ್ನು ಅವಲಂಬಿಸಿದ್ದರು. "ಹಳೆಕಾಲದ ಆಯಗಾರ ಪದ್ಧತಿ ಪ್ರಕಾರ ಒಂದು ಜೊತೆ ಕೆರ, ನೊಗಸುತ್ತು,

ಬಾರುಕೋಲು, ಪಟಗಣ್ಣಿ ಮಾಡಿಕೊಡಬೇಕು. ಒಕ್ಕಲು ಮನೆಗಳ ಕೆಲಸಗಳನ್ನು ಮುತುವರ್ಜಿಯಿಂದ ಮಾಡಬೇಕಾಗಿತ್ತು, ಆಯದ ಒಕ್ಕಲು ಮನೆಯವರು ಇವನನ್ನು 'ಮನೆಮಗ' ಎಂದು ಕರೆಯುವುದಲ್ಲದೆ ಆಯಗಾರನಿಗೆ 'ಮಣೆಗಾರ' ಬ್ಯಾಗಾರ ಇತ್ಯಾದಿ ಹೆಸರುಗಳಿಂದ ಕರೆಯುತ್ತಾರೆ. ದನಕರುಗಳ ಸಗಣಿ ಹೊಡೆಯುವುದು, ಹಟ್ಟಿ ಗುಡಿಸುವುದು, ಒಕ್ಕಲು ಮನೆಯಲ್ಲಿ ಮದುವೆ ಮುಂಜಿಗಳಲ್ಲಿ ಗ್ರಾಮದೇವರ ಕೆಲಸಗಳನ್ನು ಮಾಡುವುದು, ಊರಿನ ಶಾಂತಿ ಮತ್ತು ರಕ್ಷಣೆಗಾಗಿ ಮಾರಿಜಾತ್ರೆಗಳಲ್ಲಿ 'ಚರಗ ಚೆಲ್ಲುವ" ಮುಖ್ಯ ಕೆಲಸವನ್ನು ನಿರ್ವಹಿಸುವ ಈ ಕೆಲಸಗಳಿಂದ ಅವರಿಗೆ ಬರುವ ವಾರ್ಷಿಕ ಆದಾಯ ೬೦ ರಿಂದ ೮೦ ಸೇರು ಕಾಳಷ್ಟೆ. ಸುಗ್ಗಿಯ ಸಂದರ್ಭದಲ್ಲಿ ಕಣಗಳಲ್ಲಿ ಬಿಟ್ಟ ಚೂರ-ಪಾರು ಧಾನ್ಯಗಳಲ್ಲಿ ವರ್ಷ ಪೂರ್ತಿ ಜೀವನ ನಡೆಸಬೇಕು."[೧] ಹೊಟ್ಟೆ-ಬಟ್ಟೆಗೂ ಹೋರಾಟ ಮಾಡಬೇಕಾದ ಗಂಭೀರ ಸ್ಥಿತಿ ಮಾದಿಗರದು, ರೈತರನ್ನೇ ಆಶ್ರಯಿಸಿ ಬದುಕುವ ಮಾದಿಗ ಸಮುದಾಯ ಕರ್ನಾಟಕದ ವಿವಿಧೆಡೆಗಳಲ್ಲಿ ಕಂಡುಬರುತ್ತಾರೆ. ಸಾಮಾಜಿಕವಾಗಿ ಶೋಚನೀಯ ಸ್ಥಿತಿಯಲ್ಲಿದ್ದರೂ ಸಾಂಸ್ಕೃತಿಕ ಮತ್ತು ಸಾಹಿತ್ಯಕವಾಗಿ ಮಾದಿಗರು ಇಂದಿಗೂ ಸಮಾಜದಲ್ಲಿ ವಿಶಿಷ್ಟವಾಗಿಯೇ ಉಳಿದು ಬಂದಿದ್ದಾರೆ. ಇವತ್ತಿನ ದಿನಮಾನಗಳಲ್ಲಿ ಮಾದಿಗರು ಎಲ್ಲಾ ಸ್ಥಾನಮಾನಗಳಲ್ಲಿ ಚೇತರಿಕೆಯನ್ನು ಪಡೆದುಕೊಂಡಿದ್ದಾರೆ. ಅವರದೇಯಾದ ವೃತ್ತಿ ಜೀವನ, ಆಚಾರ-ವಿಚಾರ, ಸಂಪ್ರದಾಯ, ಆಹಾರ ಪದ್ಧತಿ, ಆರ್ಥಿಕವಾಗಿ, ಔದ್ಯೋಗಿಕವಾಗಿ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಬದಲಾವಣೆಯನ್ನು ಹೊಂದಿದ್ದಾರೆ. ಹಿಂದೆ ಕೂಲಿಕಾರ್ಮಿಕರಾಗಿ ಕೆಲಸ ಮಾಡುವಂಥ ಜನರು ಇವತ್ತು ಸ್ವತಃ ಉದ್ಯೋಗವನ್ನು ಮಾಡುವಂಥ ಬೆಳವಣಿಗೆಯನ್ನು ಮಾದಿಗ ಸಮುದಾಯದಲ್ಲಿ ಕಾಣಬಹುದು.

೩.೧ ಪದನಿಷ್ಪತ್ತಿ

ಮಾದಿಗ ಪದದ ಅರ್ಥ ಇನ್ನೂ ಸ್ಪಷ್ಟವಾಗಿಲ್ಲ ಆದರೆ ಸಮಾಜದ ಅತ್ಯಂತ ಕೆಳಸ್ತರದಲ್ಲಿರುವ ದಲಿತ ವೃಂದಗಳಲ್ಲಿ "ಮಾದಿಗರು" ಒಂದು. ಮಧ್ಯ ಕರ್ನಾಟಕದಾದ್ಯಂತ ಸಾಮಾನ್ಯವಾಗಿ ಮಾದಿಗರು ಎಂಬ ಹೆಸರಿನಿಂದ ಕರೆಯುತ್ತಿದ್ದರೆ. ಪ್ರಾದೇಶಿಕವಾಗಿ ಬೇರೆ ಬೇರೆ ಹೆಸರುಗಳಿಂದ ಕರೆಯುವುದು ವಾಡಿಕೆ. ಕೆಲವು ವಿದ್ವಾಂಸರ ಪ್ರಕಾರ ಈ ಪದ 'ಮತಂಗ' ಪದದ ಅಪಭ್ರಂಶ ರೂಪ. ಇದಕ್ಕೆ ಮುಖ್ಯ ಕಾರಣ ಮಾದಿಗ ಹೆಸರಿಗೆ ಪರ್ಯಾಯವಾಗಿ 'ಮತಂಗ' ಪದವೇ ಪುರಾಣ ಹಾಗೂ ಚರಿತ್ರೆಗಳಲ್ಲಿ ಹೆಚ್ಚಾಗಿ ಬಳಕೆಯಾಗಿರುವುದು ಕೋಶ, ಗೆಜೆಟಿಯರ್ ಹಾಗೂ ಸಾಹಿತ್ಯ ಕೃತಿಗಳಲ್ಲಿ ಉಲ್ಲೇಖಿತವಾಗಿರುವ ಮಾದಿಗ ಪದದ ವಿವರಣೆಯನ್ನು ಗಮನಿಸೋಣ.

"ಮಾದಿಗ ಎಂಬುದು 'ಮಾದ' ಮತ್ತು 'ಇಗ' ಎಂಬೆರಡು ಶಬ್ದಗಳಿಂದ ರೂಪಿತವಾಗಿದೆ, ಮಾದ ಎಂಬ ಕನ್ನಡ ಪದದ ಅರ್ಥ ಅಸ್ಪೃಶ್ಯ, ಹರಿಜನ ಎಂದಾಗುತ್ತದೆ. ಇದಕ್ಕೆ ಇಗ ಎಂಬ ತದ್ಧಿತ ಪ್ರತ್ಯಯ ಸೇರಿ 'ಮಾದಿಗ' ಎಂದಾಗಿದೆ. ಇವರನ್ನು ಮಾದರ, ಮಾತಂಗ, ಮಾದೀಗ, ಮಾದೆಂಗ, ಮಾದೆಗ, ಮಾಂಗ, ಮನೆಗಾರ, ಮನೆಮಗ, ಹರಿಜನ, ಎಡಗೈಯವರು ಮುಂತಾದ ಹೆಸರುಗಳಿಂದ ಕರೆಯುವ ವಾಡಿಕೆ ಇದೆ. ಈ ಪದವು ಜಾತಿಸೂಚಕ, ವೃತ್ತಿ ಸೂಚಕ, ಬೈಗುಳ

ವಾಚಕವಾಗಿಯೂ ಬಳಕೆಯಾಗುತ್ತ ಬಂದಿರುವುದನ್ನು ಕಾಣಬಹುದು. ಕೊಲ್ಲುವವನೆ 'ಮಾದಿಗ' ಹೊಲಸು ತಿಂಬುವವನು 'ಹೊಲೆಯ' ಎಂಬಲ್ಲಿ ಒಂದು ಜೀವವನ್ನು ಕೊಲ್ಲುವವರರೆಲ್ಲರೂ "ಮಾದಿಗರು" ಎಂಬರ್ಥದಲ್ಲಿ ಬಳಕೆಯಾಗಿದೆ."[೨] ಕೆಲವು ವಿದ್ವಾಂಸರು ಮಾದಿಗ ಪದವನ್ನು ಭಿನ್ನ ರೀತಿಯಲ್ಲಿ ಅರ್ಥೈಸಿದ್ದಾರೆ, 'ಥರ್ಸ್ಟನ್ ಮತ್ತು ಸಿರಾಜುಲ್ ಹಸನ್' ಅವರು ಮಾದಿಗ ಹೆಸರು 'ಮಾಹಾದಿಗೆ' (ಕೆಳಗೆ ಇಳಿದು ಬಂದ ಮಹಾಶ್ರೇಷ್ಠ ಪುರುಷ) ಅಥವಾ 'ಮಹಾದಿಗಿರಾ' (ಮಹಾಪುರುಷ ಇಳಿದು ಬಾ) ಎಂಬುದರಿಂದ ನಿಷ್ಪನ್ನಗೊಂಡಿದೆ ಎಂದಿದ್ದಾರೆ. ಈ ಪದಗಳು ಜಾಂಬುವಂತನನ್ನು ಕುರಿತದ್ದೆಂದು ತೆಲಂಗಾಣದವರ ಸಾಮಾನ್ಯ ನಂಬಿಕೆ. "ಒಮ್ಮೆ ದೇವತೆಗಳೆಲ್ಲಾ ತುಂಬಾ ಸಂಕಷ್ಟದಲ್ಲಿ ಸಿಲುಕಿದ್ದರು. ಮಾದಿಗರ ಪೌರಾಣಿಕ ಮೂಲಪುರುಷ ಜಾಂಬವಂತ ಮಾತ್ರ ಅವರಿಗೆ ನೆರವಾಗಬಲ್ಲವನಾದ್ದ. ಆಗ ಅವರು ಅತನನ್ನು ಹೀಗೆ ಕರೆದರು 'ತಾತಾ ಮಾಹಾದಿಗಿರಾ' (ಮಹಾನ್ ತಾತ, ಇಳಿದು ಬಾ) ಜಾಂಬವಂತ ಬಂದು ಅವರ ಕೋರಿಕೆಯನ್ನು ಈಡೇರಿಸಿದ. ಅಂದಿನಿಂದ ಅತ ಮಹಾದಿಗಿರೆ ಕೆಳಗಿಳಿದು ಬಂದ ಮಹಾಪುರುಷ ಎಂದೇ ಖ್ಯಾತನಾದ. ಅತನ ವಂಶಸ್ಥರನ್ನು 'ಮಹಾದಿಗೆವಾರು' ಎಂದು ಕರೆಯಲಾಯಿತು. ಇದೇ ಮುಂದೆ ಮಾದಿಗ ಎಂದು ಉಳಿಯಿತು."[೩]

ಮತ್ತೊಂದು ವಿವರಣೆ ಹೀಗಿದೆ– 'ಮಾದಿಗ' ಎಂಬ ಪದವು 'ಮಾತಂಗ' ಎಂಬುದರಿಂದ ಬಂದಂತೆ ತೋರುತ್ತದೆ. 'ಮಾತಂಗ' ಎಂಬ ಸಂಸ್ಕೃತಿ ಪದ 'ಕಿರಾತ' ಎಂಬ ಪದಕ್ಕೆ ಅನ್ವಯಿಸುತ್ತದೆ. 'ಪರ್ವತಾರೊ ಹಿ' ಅನಾಗರಿಕ ಕೀಳು ಜಾತಿಯವ ಎಂದರ್ಥವಾಗುತ್ತದೆ. ಅಲೆಮಾರಿ ಸಮುದಾಯವಾದ ಮಾತಂಗರಿಂದ ನಿರ್ಲಕ್ಷಿಸಲ್ಪಟ್ಟವರು ಈ ಮಾದಿಗರಾಗಿರಬೇಕು. ಅಲೆಮಾರಿಗಳಾದ ಮತಂಗರನ್ನು ಸಂಬಂಧ ಹೊಂದಿದವರು ಮಾದಿಗ ಹೊಲೆಯರನ್ನು ತೆಲುಗಿನ Nallajananu ರಂತೆ ಕಪ್ಪು ಜನರು ಕರಿಯಮ್ಮ ದೇವತೆಯ ಸಂಕೇತ ಸೂಚಕ ಎಂದು ಕರೆಯಲಾಗಿದೆ."[೪]

ಭೂತೇಶಗೆರುಗುವನು ಜಾತಿ ಮಾದಿಗನಲ್ಲ
ಜಾತಿಯಲಿ ಹುಟ್ಟಿ ಶಿವನಿಗೆ ಶರಣೆನ್ನು
ದಾತ ಮಾದಿಗನು ಸರ್ವಜ್ಞ

ಎಂದು ಸರ್ವಜ್ಞನ ಜಾತಿಯಿಂದ ಹುಟ್ಟಿದವನಷ್ಟೇ ಮಾದಿಗನಲ್ಲಿ ಅನ್ಯಜಾತಿಯಲ್ಲಿ ಹುಟ್ಟಿಯೂ ಶಿವನಿಗೆ ನಮಿಸದವನು ಮಾದಿಗನಾಗುತ್ತಾನೆ. ಸಾಮಾಜಿಕವಾಗಿ ಅವಹೇಳನಕ್ಕೆ ಗುರಿಯಾದ ಇವರನ್ನು ಶರಣರು 'ಆಯ್ಯ' ಅಪ್ಪ, ಅಮ್ಮ ಎಂದು ಸಂಭೋಧಿಸಿದರು. ಅವರೇ 'ಮಾದರ ಚನ್ನಯ್ಯ' ಮಾದರ (ಸಮಗಾರ) ಹರಳಯ್ಯ, ಸೂಳೆ ಸಂಕವ್ವ ಮುಂತಾದವರು."[೫]

ರೆವರೆಂಡ್ ಎಫ್ ಕಿಟ್ಟಲ್ ಅವರು ತಮ್ಮ "A Kannada-English Dictionary (೧೮೯೪)"ರಲ್ಲಿ ಮಾದಿಗ (Tbh of ಮಾತಂಗ) = ಮಾದೆಗ, A Cobbler, a chuckler and outcast (My:Te ಶ್ವಪಚ, ಮಾತಂಗ), ಮಾದಿಗರವನ ಮೀಣೆ (ಚಣ್ಡಾಲಿಕೆ) ಆದಿಯಾ ದೈವವಲ ಭೇದಿಸಲಿ ಕಟೆಯದೇ–ಹಾದಿಯಾ ಕಲ್ಲಗೆಡೆ ಮಾಡಿ. ನಮಿಸುವ ಮಾದಿಗರ ನೋಡ; ಹೊಲೆಯ ಮಾದಿಗರುಣ್ಣು

ತೊಗಲಿಟ್ಟ, ತೊಗಲೊಳು ಕುಲಜರೆಮ್ಬರಿಗುಣಲಾಯಿತು (Sitting on it at their meals) ಹೊಲೆಯನ ಕುಲವಾವುದಯ್ಯ? ಮಾದಿಗನ ಮನೇಲಿ ಪರಮಾನ್ನವಿದ್ದರೆ ಹಾದೀಲಿ ಹೋಗೋರಿಗೇನು? ಮಾದಿಗನ ಮೆಟ್ಟು ಕಚ್ಚುತ್ತದೆ, ನಾದಿಗನ ತಲ್ತೆಚುಚ್ಚುತ್ತದೆ– ಮಾದಿಗನ ಹೊಲಸು ಸಲ್ಲ–ನಾದಿಗನ ಗಾಯನಲ್ಲ."[೬] ಹೀಗೆ ಮಾದಾರ ಪದದ ಅರ್ಥವನ್ನು ಕೊಟ್ಟಿದ್ದಾರೆ.

"ದ್ರವಿಡಿಯನ್ ಎಟಿಮಲಾಜಿಕಲ್ ಡಿಕ್ಷನರಿ (೧೯೬೧)ಯಲ್ಲಿ 'ಮಾದಿಗ' ಪದದ ವಿವರ ಹೀಗಿದೆ "Madiaga (Kan) Cobbler-chuckler, outcasts, madiga (Tulu), a Chuckler, a class of pariahas (Tulu English Dictionary; 1967, Mariyappa Bhat. M, and Shanker Kediaya, A.P 196), Madiga (Telugu), Cobbler of skt, Matanga a candela- a man of the lowest rank."[೭]

ಕರ್ನಾಟಕ ಮತ್ತು ಆಂಧ್ರಪ್ರದೇಶದ ಕೆಲವು ಹಳ್ಳಿಗಳಲ್ಲಿ ರೈತ ಕುಟುಂಬಗಳು ಮಾದಿಗರನ್ನು ತಮ್ಮ ಮನೆಗಳಲ್ಲಿ 'ಜೀತದಾಳು'ಗಳಾಗಿ ನೇಮಿಸಿಕೊಳ್ಳುವ ಪದ್ಧತಿ ಹೇಗಿತ್ತೋ ಹಾಗೆಯೇ 'ಮಾದಿಗತನ' ಮಾಡಲೂ ಅವರನ್ನು ನೇಮಿಸಿಕೊಳ್ಳುತ್ತಿದ್ದರು. ಮಾದಿಗತನ ಮಾಡುವವರು ಶ್ರೀಮಂತ ರೈತರಿಗೆ ನಿರ್ದಿಷ್ಟ ಕಾಲದಲ್ಲಿ ಚರ್ಮದಿಂದ ತಯಾರಿಸಿದ ವಸ್ತುಗಳನ್ನು ಒದಗಿಸುತ್ತಿದ್ದರು. ಆ ಬಗೆಯ ವೃತ್ತಿಯನ್ನು 'ಮಾದಿಗತನ' ಎಂದು ಕರೆಯುತ್ತಿದ್ದರು. ಅವರ ಈ ವೃತ್ತಿಗೆ ಪೂರಕವಾಗಿ ಬಂದಿರುವ ಕನ್ನಡ ಪ್ರಚಲಿತ ಗಾದೆಯನ್ನು ಉಲ್ಲೇಖಿಸಬಹುದು.

ವರುಸಕೊಂದ ಸಾರಿ ಕಂದ್ಗರ ಸತ್ತೈತೆ
ನೋಡ್ ನನೂಂಡನ ಮಾದಿಗತನ

'ಮಾದಿಗ' ಪದ ತೆಲುಗು ಮೂಲವಾದ್ದರಿಂದ ತೆಲುಗು ಅರ್ಥಕೋಶದಲ್ಲಿ ಈ ವೃತ್ತಿಗೆ ಸಂಬಂಧಿಸಿದಂತೆ ಅರ್ಥ ಕೊಡಲಾಗಿದೆ. ಅದರ ಪ್ರಕಾರ 'ಮಾದಿಗ' ಅಂದರೆ 'ಮಾತಂಗ', 'ಮಾದಿಗವಾಡು', 'ಚಪ್ಪಲು ಕಟ್ಟುವಾಡು', 'ಮಾದಿಗದಿ."[೮] ಎಂಬ ಉಲ್ಲೇಖಗಳಿವೆ. ಆ ಪ್ರಕಾರ 'ಮಾದಿಗ ಎಂದರೆ ಚಪ್ಪಲಿ ಹೊಲಿದು ಬದುಕುವ ಜಾತಿ, ಗೋಹಿಂಸಕ, ವ್ಯವಸಾಯಕ್ಕೆ ಬೇಕಾದ ಕಪಿಲೆ ಬಾನೆ, ಚರ್ಮಪಟ್ಟಿ ಇತ್ಯಾದಿಯನ್ನು ಸಿದ್ಧಪಡಿಸಲು "ಚರ್ಮ" ಮೂಲವಸ್ತುವಾದ್ದರಿಂದ ಅದನ್ನು ಪಡೆಯಲು ದನಗಳನ್ನು ಕಡಿದು, ಸಿಗಿದು ಮಾಡುವುದರಿಂದ ಉಳಿದವರ ಕಣ್ಣಿಗೆ ಗೋಹಿಂಸಕರಾಗಿ ಕಂಡಿರುವುದರಲ್ಲಿ ಆಶ್ಚರ್ಯವಿಲ್ಲ ಹೀಗೆ ಚರ್ಮಗಾರಿಕೆಯೇ ಕಸುಬಾದ ಮಾದಿಗರಿಗೆ ಈ ವೃತ್ತಿ ಮೂಲದ ಹೆಸರು ಬಂದಿರಬಹುದೆಂದು."[೯] ಸಿಂದ್ ಮಾದಿಗರ ಸಂಸ್ಕೃತಿ ಕೃತಿಯಲ್ಲಿ ಉಲ್ಲೇಖಿಸಲಾಗಿದೆ.

ಚಿತ್ರದುರ್ಗ ಜಿಲ್ಲೆಗಳ ಬಹುಪಾಲು ಭಾಗದಲ್ಲಿ 'ಮಾದಿಗರು' 'ಮಾದಿರು' ಎಂದು ಕರೆದರೂ ಬೆಳಗಾಂವಿ, ವಿಜಯಪುರ ಜಿಲ್ಲೆಯ ಗಡಿಭಾಗದಲ್ಲಿ ಇವರನ್ನು ಹೊಲೆಯರೆಂದು ಕರೆಯುವುದು

ಕಂಡುಬರುತ್ತದೆ. ಹಾಗೆಯೇ ಶರಣ ಮಾದರ ಹರಳಯ್ಯ ನನ್ನು 'ಹೊಲೆಯ ಹರಳಯ್ಯ' ಎಂದು ಕರೆಯುತ್ತಿರುವುದು ಅಲ್ಲಲ್ಲಿ ಕಂಡುಬರುತ್ತದೆ. ದಕ್ಷಿಣ ಕರ್ನಾಟಕ ಭಾಗದಲ್ಲಿ ಹಾಗೂ ಬಳ್ಳಾರಿಯ ಹೊಸಪೇಟೆ, ಕಂಪ್ಲಿ, ಸಿರುಗುಪ್ಪ ಮುಂತಾದ ಕಡೆಗಳಲ್ಲೆಲ್ಲಾ ಆದಿದ್ರಾವಿಡ (ಎ.ಕೆ) ಎಂದು ಕರೆಯುತ್ತಿದ್ದಾರೆ. ಮಹಾರಾಷ್ಟ್ರ ಹಾಗೂ ಹೈದ್ರಾಬಾದ್ ಪ್ರದೇಶದಲ್ಲಿ ಭಾಷೆ ಪ್ರಭಾವದಿಂದ ಮಾದಿಗರನ್ನು 'ಮಾಂಗರು' ಎಂದು ಕರೆಯುತ್ತಾರೆ."[೧೦]

ಜನಪದರಲ್ಲಿ 'ಮಾದಾರ' ಪದದ ಮೂಲವನ್ನು ಕುರಿತ ಸ್ವಾರಸ್ಯಕರ ಸಂಗತಿ ಹೀಗಿದೆ. ನಾಯಕ, ಗೊಲ್ಲ ಮತ್ತು ಮಾದಿಗ ಈ ಮೂವರೂ ಪೂರ್ವದಲ್ಲಿ ಅಣ್ಣತಮ್ಮಂದಿರಾಗಿದ್ದರು. ಇವರಲ್ಲಿ ಮಾದಿಗ ಹಿರಿಯವನು, ಉಳಿದಿಬ್ಬರು ತಮ್ಮಂದಿರು. ಯಾವುದೊ ಕಾರಣಾಂತರದಿಂದ ಮೂವರು ಬೇರೆ ಬೇರೆಯಾದರು, ಆಗ ಒಬ್ಬೊಬ್ಬರು ಒಂದೊಂದು ಜಾತಿ ಹೆಸರನ್ನು ಇಟ್ಟುಕೊಂಡರು. ಅವರದೇ ವೃತ್ತಿಯನ್ನು ಆಯ್ಕೆ ಮಾಡಿಕೊಂಡರು ಕುಟುಂಬಕ್ಕೆ ಮಾದಿಗ ಹಿರಿಯನಾದ್ದರಿಂದ ಅವನನ್ನು 'ಮೊದಲಿಗ' ಎಂದು ಕರೆಯುತ್ತಿದ್ದರು. ಆದರೆ ಕಾಲಕ್ರಮೇಣ ಮೊದಲಿಗ ಹೋಗಿ 'ಮಾದಿಗ' ಆಗಿದೆ. 'ಮಾದಿಗ' ಪದ ಮೊದಲಿಗೆ>ಮೊದಲಿಗ>ಮಾದಿಗ ಎಂದಾಗಿದೆ (ತಿಪ್ಪೇಸ್ವಾಮಿ, ಕೆಳಗೋಟೆ, ಚಿತ್ರದುರ್ಗ) ಇದು 'ಮಾದಿಗ' ಪದನಿಷ್ಪತ್ತಿಯ ಕುತೂಹಲಕರ ಅಂಶವಾಗಿದೆ."[೧೧]

ಮಾದಿಗರಿಗೂ ಇದೇ ಬಗೆಯ ಐತಿಹಾಸಿಕ ಹಿನ್ನೆಲೆಗಳಿವೆ. "ಮಾದಿಗರಿಗೆ ಮೂಲ ಪುರುಷ ಜಾಂಬವಂತ ಮುನಿಯೆಂದು ಪೌರಾಣಿಕ ಹಿನ್ನೆಲೆಯಲ್ಲಿ ಹೇಳಲಾಗುತ್ತದೆ. ಮಾದಿಗ ಪದವನ್ನು ಮಹಾ+ಆದಿ=ಆದಿಪುರುಷ ಮೂಲ ಪುರುಷನೆಂದು ಹೇಳುವುದುಂಟು. ಮಾದಿಗ ಪದವನ್ನು ಮಾತಂಗ, ಮತಂಗರು ಎಂದು ಕೆಲವು ವಿದ್ವಾಂಸರು ಅರ್ಥೈಸಿದ್ದಾರೆ. ಮಾದಿಗರು ಸಮಾಜದಲ್ಲಿ ಹಿಂದೆ ಮಾತಂಗರು ಸಾಮ್ರಾಜ್ಯವನ್ನು ರಕ್ಷಣೆ ಮಾಡುವ ಪ್ರಥಮ ರಾಜ್ಯಗಳನ್ನು ಸ್ಥಾಪಿಸುವ ಅಭಿಪ್ರಾಯವನ್ನು ಮೇಲಿನ ಅಂಶಗಳ ಮೂಲಕ ತಿಳಿಯಬಹುದು.

೩.೨ ಸಮುದಾಯದ ಪೌರಾಣಿಕ ಮತ್ತು ಚಾರಿತ್ರಿಕ ಹಿನ್ನೆಲೆ

ಮಾದಿಗರಲ್ಲಿ ಅತಿಶ್ರೇಷ್ಠತೆಯನ್ನು ಹೊಂದಿರುವ ದೇವ ಪುರುಷ, ಮಹಾ ತಪಸ್ವಿಗಳಾದ, ಶ್ರೀಮಾತಂಗ ಮಹಾಮುನಿಗಳು ಮತ್ತು ಈತನ ಮಗಳಾದ ಮಾತೇ ಶ್ರೀಮಾತಂಗಿಯವರು ಹಂಪಿಯಲ್ಲಿರುವ ಮಾತಂಗಿ ಬೆಟ್ಟದಲ್ಲಿ ನೆಲೆಸಿದ್ದರಿಂದ 'ಮಾತಂಗಿ" ಬೆಟ್ಟ ಎಂದು ಈಗಲೂ ಕರೆಯುತ್ತಿದ್ದಾರೆ. ಮಹಾ ಆದಿಗ, ಮಾದರ, ಮಾದಿಗ, ಮತಾಂಗ, ಮಾತಂಗ ಮುನಿಯ ಮೊಮ್ಮಕ್ಕಳೇ ಜಾಂಬವಂತನ ಕುಲದೇವರೇ, ಜಂಬೂದ್ವೀಪದ ಮೂಲ ನಿವಾಸಿಗಳೇ ನಾವು. ಅತ್ಯಂತ ಶ್ರೇಷ್ಠ ಪೌರಾಣಿಕ, ಇತಿಹಾಸ, ಸಂಸ್ಕೃತಿ, ಚರಿತ್ರೆ ಮತ್ತು ಪರಂಪರೆಯನ್ನು ಹೊಂದಿದ್ದಾರೆ. ಶ್ರೇಷ್ಠ ಸಂಸ್ಕೃತಿಗೆ ಹೆಸರಾದ ನಮ್ಮ ಪೂರ್ವಜರು ಋಷಿಮುನಿಗಳಾಗಿ, ರಾಜಮಹಾರಾಜರುಗಳಾಗಿ, ಅಧಿಕಾರಿಗಳಾಗಿ ಈ ದೇಶದ ಪರಂಪರೆ ಮತ್ತು ಸಂಸ್ಕೃತಿಗೆ ತಮ್ಮದೇ ಬಹುದೊಡ್ಡ ಕೊಡುಗೆ ನೀಡಿದ್ದಾರೆ. ಆದ್ದರಿಂದ ಪೌರಾಣಿಕ ಹಾಗೂ ಚಾರಿತ್ರಿಕ ಹಿನ್ನೆಲೆಯನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

ಮಾದಿಗರ ಪೌರಾಣಿಕ ಹಿನ್ನೆಲೆಯ ಬಗ್ಗೆ ನಾಗರಾಜು ಮಾಹಿತಿ ನೀಡಿದ್ದಾರೆ. ಸ್ವರ್ಗದಲ್ಲಿ ದೇವಾನುದೇವತೆಗಳಿಗೆ ಮಾಂಸದ ಊಟವನ್ನು ಏರ್ಪಡಿಸಲಾಗಿತು. ಈ ಕೂಟದಲ್ಲಿ ಹರಳಯ್ಯ ಭಾಗಹಸಿದ್ದರು. ಕುದಿಯುವ ಪಾತ್ರೆಯಿಂದ ಒಂದು ಮಾಂಸದತುಂಡು ಕೆಳಗೆ ಬೀಳುತ್ತದೆ. ಆಗ ಆ ಮಾಂಸದ ತುಂಡನ್ನು ಕುದಿಯುವ ಪಾತ್ರೆಗೆ ಹಾಕಿದನಂತೆ ದೇವರುಗಳು ಸೇರಿ ಆ ಮಾಂಸದ ತುಂಡು ನೀನೆ ಸೇವಿಸು. ಅದು ಎಂಜಲಾಯಿತು ಅಂತ ಹೇಳಿದಾಗ ಅವನನ್ನು ಹೀನಾಯ ಸ್ಥಿತಿಯಲ್ಲಿ ಕಂಡಿದ್ದಕ್ಕೆ ಅಂದಿನಿಂದ ಮಾದಿಗನಾದ. ಆದ್ದರಿಂದ ಹರಳಯ್ಯನನ್ನು ಭೂಲೋಕಕ್ಕೆ ಕಳುಹಿಸುತ್ತಾರೆ. ಭೂಲೋಕಕ್ಕೆ ನಾನು ಒಬ್ಬನೇ ಹೇಗೆ ಹೋಗಲಿ ಎಂದಾಗ ಜೊತೆಗೆ ಬಸವ (ಬಸವವೆಂದರೆ ಹಸು) ಹರಳಯ್ಯನ ಗೆಳೆಯನಾದ ಅಕ್ಕಸಾಲಿಗನು, (ಮುದ್ದೆ ಕಂಬಾರ) ನಾನು ನೀನು ಎಲ್ಲಿ ವಾಸ ಮಾಡುತ್ತಿಯಾ ನಾನು ಬರುತ್ತೇನೆ ಎಂದು ಜೊತೆಗೆ ಬರುತ್ತಾನೆ. ನಾನು ನಿನ್ನ ಜೊತೆಗೆ ಜೀವನ ಮಾಡುತ್ತೇನೆ ಎಂಬುದಾಗಿ ಬಸವಣ್ಣ ಮತ್ತು ಅಕ್ಕಸಾಲಿಗ ಭೂಮಿಗೆ ಬರುತ್ತಾರೆ.

ಭೂಮಿ ನೀರಾಗಿ ಹರಿಯುತಿತ್ತು. ಭೂಮಿಯ ಮೇಲೆ ಹರಳಯ್ಯ ಬಂದರೆ ಗಟ್ಟಿಯಾಗುತಿತ್ತು. ಬಸವಣ್ಣ ಮತ್ತು ಅಕ್ಕಸಾಲಿಗ ಬಂದರೆ ಸಿಕ್ಕಿಕೊಳ್ಳುತ್ತಿತ್ತು. ಒಂದು ಕಡೆ ನಿಂತರು ಹಿಂದೆ ಬಸವಣ್ಣನಿಗೆ ಮಾತುಗಳು ಬರುತ್ತಿದ್ದವಂತೆ ಯಾವುದೇ ಶಾಪದಿಂದ ಮಾತು ಬರದ ಬರದಾಗಿದೆ. ಭೂಮಿಯು ನೀರಾಗಿ ಹರಿಯುವುದರಿಂದ ನಾವು ಜೀವನವನ್ನು ಮಾಡುವುದು ಹೇಗೆ ಎಂದು ಯೋಚನೆ ಮಾಡುತ್ತಾರೆ. ಇಂತಹ ಸಮಯದಲ್ಲಿ ಶಿವ ಪ್ರತ್ಯಕ್ಷನಾಗಿ ಹರಳಯ್ಯನಿಗೆ ಶಿವ ಹೇಳುತ್ತಾನೆ. ಹರಳಯ್ಯ ನಿನ್ನ ಮಕ್ಕಳಾದ ಭೂಮಿಭೂತಳ, ಎತ್ತುಭೂತಳ, ರಕ್ತಭೂತಳ ಎನ್ನುವ ಮೂರು ಮಕ್ಕಳನ್ನು ಭೂಮಿಗೆ ಆಹುತಿ ಕೊಟ್ಟರೆ ಭೂಮಿ ಹೆಪ್ಪುಗಟ್ಟುತ್ತದೆ. ಹರಳಯ್ಯ ತನ್ನ ಮೂರು ಮಕ್ಕಳನ್ನು ಭೂಮಿಗೆ ಆಹುತಿ ಕೊಡುತ್ತಾನೆ. ಆಗ ಭೂಮಿ ಹೆಪ್ಪು ಗಟ್ಟುತ್ತದೆ. ಇಬ್ಬರು ಒಂದೊಂದು ಮನೆಯನ್ನು ಕಟ್ಟಿಕೊಂಡು ವಾಸ ಮಾಡುತ್ತಾರೆ. ಬಸವಣ್ಣನಿಗೆ ಮೂಗುದಾರ ಇಲ್ಲದಿದಕ್ಕೆ ಕೈಯಿಗೆ ಸಿಗುತ್ತಿರಲಿಲ್ಲ. ಇಬ್ಬರು ಅಣ್ಣ ತಮ್ಮ ಮಾತನಾಡಿಕೊಂಡು ಬಸವಣ್ಣನಿಗೆ ಸಿಂಗಾರವನ್ನು ಮಾಡತೊಡಗಿದರು. ಎಲ್ಲಾ ವಸ್ತುಗಳಿಂದ ಸಿಂಗರಿಸಿ ಕೊನೆಯಾದಾಗಿ ಮೂಗುದಾರವನ್ನು ಹಾಕುತ್ತಾರೆ.

ನಂತರ ಬೇಸಾಯ ಮಾಡುವುದಕ್ಕೆ ಬಳಸುತ್ತಾರೆ. ಬೇಸಾಯ ಮಾಡಿ ಮಾಡಿ ಎತ್ತಿನ ಹೆಗಲು ನೋಯುತ್ತಿತ್ತು. ಆ ನೋವು ತಾಳಲಾರದೆ ಅರಚುವುದಕ್ಕೆ ಪ್ರಾರಂಭ ಮಾಡುತ್ತೆದೆ. ಅದು ಶಿವನಿಗೆ ಕೇಳಿಸುತ್ತದೆ. ಆಗ ಶಿವ ವರಹ (ಹಂದಿ)ವನ್ನು ಕರೆದು ಹೇಳುತ್ತಾನೆ, ಭೂಲೋಕದಲ್ಲಿ ಬಸವಣ್ಣನಿಗೆ ಬಾರಿ ನೋವಾಗಿದೆ. ಅದಕ್ಕೆ ಏನಾದರು ಪರಿಹಾರ ಹುಡುಕಬೇಕು ಎಂದಾಗ ಶಿವ ಹಂದಿಗೆ ಅಮೃತ ಅಂಜನಿಯನ್ನು ಕಳುಹಿಸುತ್ತಾನೆ. ಶಿವ ಏನೋ ಕಳುಹಿಸಿದ್ದಾನೆಂದರೆ ಇದರಲ್ಲಿ ಏನೋ ಅಗಾಧವಾದ ಶಕ್ತಿಯಿದೆ ಎಂದು ತಿಳಿದು, ಹಂದಿ ಸ್ವಲ್ಪ ತನ್ನ ಮೂತಿಗೆ ಹಚ್ಚಿಕೊಂಡು ನೆಲವನುಗುದ್ದತ್ತದೆ ಆಗ ನೆಲತಗ್ಗು ಬೀಳುತ್ತದೆ. ಶಿವ ಕೊಟ್ಟಿರುವ ಅಮೃತ ಅಂಜಿನಿ ಎಣ್ಣೆ ಎಲ್ಲವನ್ನು ಹಂದಿ ತನ್ನ ಮೂತಿಗೆ ಹಚ್ಚಿಕೊಳ್ಳುತ್ತದೆ. ಸ್ವಲ್ಪ ಮಾತ್ರ ಬಸವಣ್ಣನ ಹೆಗಲಿಗೆ ಹಚ್ಚಿತು. ಆಗ ಬಸವಣ್ಣನ ಹೆಗಲು ಗಟ್ಟಿಯಾಗುತ್ತದೆ.

ಇದನ್ನು ನೋಡಿದ ಶಿವ ಹಂದಿಗೆ ಶಾಪವನ್ನು ಕೊಡುತ್ತಾನೆ. ಬಸವಣ್ಣನಿಗೆ ಹಚ್ಚಿ ಬಾ ಎಂದರೆ ಅದನ್ನು ನೀನೆ ಹಚ್ಚಿಕೊಂಡಿದಿಯಾ ಆದ್ದರಿಂದ ನೀನು ಮೋಸ ಮಾಡಿದ್ದಿಯಾ ಆದ್ದರಿಂದ ನೀನು ಭೂಲೋಕಕ್ಕೆ ಹೋಗು ಎಂದು ಹೇಳುತ್ತಾನೆ. ನಂತರ ಹರಳಯ್ಯನು ಭೂಮಿ ಘನರೂಪಕ್ಕೆ ಬಂದರೆ ನಿನ್ನಗೆ ಒಂದು ಕೊಡುತ್ತೇನೆ ಎಂದು ಹೇಳಿದ ಶಿವ ಹರಳಯ್ಯನಿಗೆ ಒಂದು ತಂಗಡಿ ಗಿಡ ಇನ್ನೊಂದು ಕಬ್ಬಿಣದ ಚೂರಿಯನ್ನು ಕೊಡುತ್ತಾನೆ. ಮಾದಿಗರು ಮಾಂಸವನ್ನು ಕೊಯ್ಯುವುದಕ್ಕೆ ಆಗಿನಿಂದ ಪ್ರಾರಂಭಸುತ್ತಾರೆ. ಮೊದಲು ಮಾದಿಗರು ಲಿಂಗವನ್ನು ಹಾಕಿಕೊಳ್ಳುತ್ತಿದ್ದರು. ಒಂದು ದಿನ ದನವನ್ನು ಕೊಯ್ಯುವ ಸಂದರ್ಭದಲ್ಲಿ ಲಿಂಗವನ್ನು ತೆಗೆದು ತಂಗಡಿ ಗಿಡದಲ್ಲಿಟ್ಟಿದ್ದರು ಬೇರೆ ಸಮುದಾಯದವರು ಅದನ್ನು ತೆಗೆದುಕೊಂಡು ಹಾಕಿಕೊಂಡರು. ಆದ್ದರಿಂದ ಇಂದಿನವರಗೆ ಮಾದಿಗರಾಗಿಯೇ ಉಳಿದುಕೊಂಡು ಬಂದರು.(ಮಾಹಿತಿ ನೀಡಿದವರು ನಾಗರಾಜ ಮತ್ತು ಸಣ್ಣ ಹನುಮಂತಪ್ಪ, ಸಿದ್ದಯ್ಯ ಕೋಟೆ).

ಥರ್ಸ್ಟನ್ ವಿವರಣೆ ಹೀಗಿದೆ "ಮಾತಂಗಿಯ ಪಾರಮ್ಯದ ಮೂಲ ಅಸ್ಪಷ್ಟವಾಗಿದೆ ಮತ್ತು ದಂತಕಥೆಗಳಲ್ಲಿ ಅಡಗಿಬಿಟ್ಟಿದೆ. ಅವುಗಳ ಪೈಕಿ ಒಂದರ ಪ್ರಕಾರ, ಭೃಗಮುನಿಯ ಪತ್ನಿ ರೇಣುಕೆಯ ರುಂಡ ಆಕೆಯ ಪತಿಯ ಆಜ್ಞಾನುಸಾರ ಕಡಿದುದು. ಮಾದಿಗರ ಮನೆಯಲ್ಲಿ ಬಿದ್ದು, ಅದು ಮಾದಿಗ ಸ್ತ್ರೀಯಾಗಿ ಬೆಳೆಯಿತು. ಮತ್ತೊಂದು ಐತಿಹ್ಯ ಅನುಸಾರ, ರಾಜನೊಬ್ಬ ತನ್ನ ಪುತ್ರಿಗಾಗಿ ವರವನ್ನು ಪ್ರಾರ್ಥಿಸಿದ, ಇದಕ್ಕೆ ಉತ್ತರ ರೂಪವಾಗಿ (ಪರವಾಗಿ) ದೇವತೆಗಳು ಚಿನ್ನದ ಗಿಣಿಯನ್ನು ಕಳುಹಿಸಿದರು. ಅದು ತಕ್ಷಣ ಹುತ್ತದ ಮೇಲೆ ಕುಳಿತು, ಅದರೊಳಗೆ ಅದೃಶ್ಯವಾಗಿಬಿಟ್ಟಿತು. ನಿರಾಶೆಗೊಂಡ ತಂದೆ ಹುತ್ತವನ್ನು ಅಗೆಸಿದ, ಆತನ ಶ್ರಮದ ಪ್ರತಿಫಲವಾಗಿ ದೈವೀಸ್ವರೂಪದ ಕನ್ಯೆಯಾಗಿ ತನ್ನ ಮಗಳು ಅಲ್ಲಿಂದ ಬಂದಳು; ಈಕೆಯನ್ನೇ ಮಾತಂಗಿ ಎಂದು ಪೂಜಿಸಲಾರಂಭಿಸಿದರು. ಮತಂಗರು ದಕ್ಷಿಣ ರಾಜ್ಯ ದೊರೆಗಳ ಪ್ರಾಚೀನ ಸಂತತಿ."[೧೨] ಎಂಬುದು ಗಮನಾರ್ಹ. ಹಾಗಾಗಿ ಮಾದಿಗರು ತಾವು ಮಾತಂಗಿ ಮಕ್ಕಳ ಅಥವಾ (ದುರ್ಗೆಯು) ಎಂದು ಕರೆದುಕೊಳ್ಳುವರು ಅಲ್ಲದೆ ದುರ್ಗೆ ಅವರ ದೇವತೆಯಾಗಿದ್ದಾಳೆ.

ಮೇಲಿನ ಉಲ್ಲೇಖ ಮತ್ತು ಐತಿಹ್ಯಗಳಿಂದ ಮಾದಿಗರು ಈ ದೇಶದ ಅತ್ಯಂತ ಪ್ರಾಚೀನ ನಿವಾಸಿಗಳು ಮತ್ತು ಒಂದು ಕಾಲದಲ್ಲಿ ದೇಶವನ್ನು ಆಳುತ್ತಿದ್ದರು. ಬಲಿಷ್ಠರಾದ ಯಾರೋ ನೆರೆಯವರು ದಾಳಿ ಮಾಡಿ ಪರಾಭವಗೊಳಿಸಿದ ಕಾರಣ. ಅವರು ಇಂದು ಶೂದ್ರ ಸ್ಥಿತಿಯನ್ನು ಬಲಾತ್ಕಾರವಾಗಿ ಒಪ್ಪಿಕೊಳ್ಳಲೇಬೇಕಾಯಿತು.

೩.೨.೧ ಆದಿಜಾಂಬವ ಪುರಾಣ

"ಮಾದಿಗ ಕುಲದ ಹುಟ್ಟು ಮತ್ತು ಚರಿತ್ರೆಯನ್ನು ಸಾದರಪಡಿಸುವ ಕಲಾ ಪ್ರಕಾರಗಳೆಂದರೆ ಮಾದಿಗ ಆಟ ಅಥವಾ ಎಲ್ಲಮ್ಮನ ಆಟ ಮತ್ತು ಸಿಂದ್ ಕತೆ ಅಥವಾ ಆದಿಜಾಂಬವ ಪುರಾಣ

ಇವುಗಳನ್ನು ವಿಶೇಷವಾಗಿ ಮಾದಿಗರಲ್ಲೇ ಒಂದು ಪಂಗಡವಾಗಿ ಪ್ರದರ್ಶಿಸುತ್ತಾರೆ."[೧೩] ಮಾದಿಗ ಆಟದಲ್ಲಿ ಬ್ರಾಹ್ಮಣ ಜಾಂಬವ ಮಹಾಮುನಿ (ಗೋಸಂಗಿ ಮುನಿ) ಸಂವಾದದಲ್ಲಿ ಸೃಷ್ಟಿ ಕ್ರಮವನ್ನು ಕುರಿತು ವಿವರಿಸುವ ಪ್ರಸಂಗವಿದೆ."[೧೪] ಸಿಂದ್ ಕತೆ ಅಥವಾ ಆದಿಜಾಂಬವ ಪುರಾಣವು ಮಾದಿಗ ಕುಲದ ಮೂಲದ ಪುರುಷನಾದ ಆದಿಜಾಂಬವನ ಹುಟ್ಟಿನೊಂದಿಗೆ ಆರಂಭವಾಗಿ ಕುಲಮತಗಳ ವಿಂಗಡನೆಯವರೆಗೂ ಸಾಗುತ್ತದೆ. ಈ ಮಧ್ಯೆ ಆದಿಜಾಂಬವ 'ತಾತಾ' ಆದಿಶಕ್ತಿಯೊಂದಿಗೆ ಕೂಡಿ ತ್ರಿಮೂರ್ತಿಗಳಿಗೆ ಜನ್ಮಕೊಟ್ಟಿದ್ದು ಆಕಾಶ, ಭೂಮಿ, ಸೂರ್ಯ, ಚಂದ್ರ, ನಕ್ಷತ್ರಗಳನ್ನು ಸೃಷ್ಟಿಸಿದ್ದು, ಜಲಮಯವಾಗಿದ್ದು ಈ ಜಗತ್ತಿನಲ್ಲಿ ಭೂಭಾಗವನ್ನು ರೂಪಿಸಲು ತನ್ನ ಸ್ವಂತ ಮಗನನ್ನೆ ಬಲಿಕೊಟ್ಟದ್ದು. ತ್ರಿಮೂರ್ತಿಗಳಲ್ಲಿ ಒಬ್ಬನಾದ ವಿಶ್ವಬ್ರಹ್ಮ ತನ್ನ ನಿರ್ಮಿಸುವ ಶಕ್ತಿಯನ್ನೇ ಕಳೆದುಕೊಂಡಾಗ, ಇನ್ನೊಬ್ಬ ಮಗನನ್ನು ಕಡಿದು ಕೊಂಡು ಅವನ ದೇಹದ ಅಂಗಾಂಗಳಿಂದ ವಿಶ್ವ ಬ್ರಹ್ಮನಿಗೆ ಬೇಕಾದ ಆಯುಧಗಳನ್ನು ಮಾಡಿಕೊಟ್ಟದ್ದು–ಹೀಗೆ ಮುಂದುವರಿಯುತ್ತದೆ.

ಭೂಮಿಗೂ ಮೊದಲು ಹುಟ್ಟಿದ ತಾತ ಜಾಂಬವಂತನೇ ಈ ಸಮಸ್ತ ಸೃಷ್ಟಿಗೆ ಮೂಲಪುರುಷ. ಆತನೇ ಸೃಷ್ಟಿಕರ್ತನೆಂಬುದು ಮಾದಿಗ ಕುಲಗಳ ನಂಬಿಕೆ. ಅಂತೆಯೇ ಈ ಕುಲಗಳ ವಿಂಗಡಣೆಯೂ ಆತನಿಂದಲೇ ಆಯಿತೆಂದು ಇವರು ನಂಬಿದ್ದಾರೆ.

ತಾತಾ ಆದಿ ಜಾಂಬವ ತನ್ನ ಮಗಳಾದ ಮತಂಗ ಕನ್ಯೆಯ ಬೆನ್ನಿನ ಚರ್ಮವನ್ನೇ ಸಿಗಿದು ತುಂಡು ತುಂಡುಗಳನ್ನಾಗಿ ಕತ್ತರಿಸಿ ಒಂದೊಂದು ಗುಂಪಿಗೂ ಹಂಚಿದನಂತೆ. ಇದು ಮಾಲವಾರ (ಹೊಲೆಯರ ತಂಡು), ಇದು ಮಾದಿಗವಾರ (ಮಾದಿಗರ ತುಂಡು), ಇದು ಕಾಪುವಾರ (ಒಕ್ಕಲಿಗರ ತುಂಡು), ಇದು ಗಾಂಡ್ಲವಾರ (ಗಾಣೀಗಾರ ತುಂಡು), ಇದು ಬಲಿವಾರ (ಬರಿಜಿಗರ ತುಂಡು), ಇದು ಬಾಪುನಿವಾರ (ಬ್ರಾಹ್ಮಣನ ತುಂಡು) ಎಂದು ಒಂದೊಂದು ಕುಲದವರಿಗೂ ಹಂಚಿಬಿಟ್ಟನಂತೆ. ಆಗ ಕೊನೆಗೆ ಎಲ್ಲರಿಗೂ ಹಂಚಿದ ಮೇಲೆಯೂ ಉಳಿದು ಕೊಂಡಿದ್ದನ್ನ ಮೊಂಡಿವಾರ (ಮಾಂಡರ ತುಂಡು) ಎಂದನಂತೆ."[೧೫]

ಈ ಮೇಲಿನ ಐತಿಹ್ಯದಂತೆ ಮಾದಿಗರು ಇಂದಿಗೂ ಪೂಜೆ ಮಾಡುವ ಎಲ್ಲಮ್ಮನ ದೇವರು ಮತ್ತು ಮಾತಂಗಿಯನ್ನು ಮನೆಯ ದೇವರುಗಳೆಂದು ಪೂಜಿಸುತ್ತಾರೆ. ಇಲ್ಲಿ ಎಲ್ಲಾ ಜೀವ ಜಗತ್ತ ಸೃಷ್ಟಿ ಮಾಡಿದ ಮಾತಂಗಿಯ ಚರ್ಮ ಮತ್ತು ಅವಳ ಭಾಗದಿಂದಾಗಿ. ಇದು ಅವೈಜ್ಞಾನಿಕವಾಗಿದ್ದರೂ ಮಾದಿಗರ ಮೂಲ ಪುರುಷ, ಚರ್ಮವೃತ್ತಿ ಹಾಗೂ ಸತ್ತಪ್ರಾಣಿಗಳ ಚರ್ಮವನ್ನು ಸುಲಿಯುವ ಚಾಣಕ್ಷತೆಗೂ ಮಾದಿಗರಿಗೂ ಸಂಬಂಧ ಇದೆ. ಆದಿಜಾಂಬವನನ್ನು ಇಂದಿಗೂ ಮಾದಿಗರ ಕುಲದೈವ ಎಂದು ಕರೆಯುತ್ತಾರೆ. ಜೊತೆಗೆ ಮಾತಂಗಿ ಈ ಸಮುದಾಯಕ್ಕೆ ಸಂಬಂಧವಿರುವ ಕೆಳ ಸಮುದಾಯದ ದೇವರ ಗುಡಿಯ ಮುಂದೆ ಇವತ್ತಿಗೂ ದೇವಸ್ಥಾನ ಇರುವುದನ್ನು ನೋಡಬಹುದು. ಮಾದಿಗ ಸಮುದಾಯದ ಹಿರಿಯ ಮಾತಂಗಿಯನ್ನು ಸಂಪ್ರದಾಯವನ್ನು ಇವತ್ತಿಗೂ ನೋಡಬಹುದು. ಆದ್ದರಿಂದ ಆದಿಜಾಂಬವ ಮುನಿಗೆ ಮತ್ತು ಮಾತಂಗಿಗೆ ನೇರವಾದ ಸಂಬಂಧವಿದೆ ಎಂದು ಹೇಳಬಹುದು.

ಜಾಂಬವಂತ ೧

ವಾಲ್ಮೀಕಿ ರಾಮಾಯಣದ ಬಾಲಕಾಂಡದ ಕತೆಯೊಂದು ಜಾಂಬವಂತನ ಕುರಿತು ಹೀಗೆ ಹೇಳಿದೆ. ಜಾಂಬವಂತ ಪ್ರಚಂಡ ಕಪಿ, ಸುಗ್ರೀವನ ಮಂತ್ರಿಯಾಗಿದ್ದವನು; ಇವನ ಹುಟ್ಟಿನ ಬಗೆಗಿರುವ ಸಾಮಾನ್ಯ ಕಥೆ ಹೀಗಿದೆ. ರಾವಣನ ಅನೇಕ ಕ್ರೂರ ವರ್ತನೆಗಳನ್ನು ತಾಳಲಾರದೆ ಭೂದೇವಿ ಮತ್ತು ಇತರೆ ದೇವತೆಗಳು ಬ್ರಹ್ಮನ ಬಳಿಗೆ ಹೋಗಿ ತಮ್ಮ ತೊಂದರೆಗಳನ್ನು ಹೇಳಿ ಪರಿಹಾರ ಸೂಚಿಸಬೇಕೆಂದು ಕೇಳಿಕೊಂಡರು. ಬ್ರಹ್ಮನು ಅವರನ್ನು ವಿಷ್ಣುವಿನಲ್ಲಿಗೆ ಕರೆದುಕೊಂಡು ಹೋದನು. ಮಹಾವಿಷ್ಣುವು ಎಲ್ಲವನ್ನು ಕೇಳಿ ತಾನು ದಶರಥನ ಮಗನಾಗಿ ಹುಟ್ಟಿ ರಾವಣನನ್ನು ಕೊಲ್ಲುತ್ತೇನೆಂದು ಹೇಳಿದನು. ಆ ಸಂದರ್ಭಕ್ಕೆ ತನ್ನ ಸಹಾಯಕ್ಕಾಗಿ ಕಪಿಗಳನ್ನು ಸೃಷ್ಟಿಸುವಂತೆ ಬ್ರಹ್ಮನಿಗೆ ತಿಳಿಸಿದನು. ಇವರ ಪ್ರಕಾರ ಬ್ರಹ್ಮನು ಜಾಂಬವಂತ ಮತ್ತಿತರ ಕಪಿಗಳನ್ನು ಸೃಷ್ಟಿಸಿದನು ಜಾಂಬವಂತನ ಹುಟ್ಟಿನ ಬಗೆಗೆ ಪುರಾಣದಲ್ಲಿ ಎರಡು ಕಥೆಗಳಿವೆ. ಬ್ರಹ್ಮ ಬಹಳ ಕಾಲದವರೆಗೂ ಕಪಿಗಳನ್ನು ಸೃಷ್ಟಿಸುವುದರ ಬಗೆಗೆ ಯೋಚಿಸುತ್ತಾ ಕುಳಿತನು. ಆ ವೇಳೆಗೆ ಬ್ರಹ್ಮನಿಗೆ ಆಕಳಿಕೆ ಬಂತು. ಹಾಗೆ ಆಕಳಿಸಲು ತೆರೆದ ಬಾಯಿಯಿಂದಲೇ ಜಾಂಬವಂತ ಹುಟ್ಟಿಬಂದ. ನನ್ನ ಆಕಳಿಸಿದ ಬಾಯಿಂದ ನಾನು ಶ್ರೇಷ್ಠನಾದ ಕರಡಿ ರೂಪದ ಜಾಂಬವಂತನನ್ನು ಈಗಾಗಲೇ ಸೃಷ್ಟಿಸಿದ್ದೇನೆಂದು ಹೇಳಿಕೊಂಡನು."[೧೬]

ಜಾಂಬವಂತ ೨

ವಾಲ್ಮೀಕಿ ರಾಮಾಯಣದ ಕಿಷ್ಕಿಂದಕಾಂಡವು ರಾಮನ ಕಾಲದಲ್ಲಿ ಜಾಂಬವಂತನು ಸುಂಗ್ರೀವನ ಮಂತ್ರಿಯಾಗಿದ್ದನು. ಅಗ್ನಿಯ ಮಗನಾದ ನೀಲ, ಹನುಮಂತ, ಜಾಂಬವಂತ, ಸುಹೋತ್ರ, ಋಷಭ, ಮೈಂದ, ದ್ವಿವಿದ, ವಿಜಯ, ಗಂಧಮಾದನ, ಉಲ್ಕಾಮುಖ, ಅಸಂಗ, ಅಂಗದ ಮತ್ತಿತರರು ಸುಗ್ರೀವನ ಮಂತ್ರಿಗಳಾಗಿದ್ದರೆಂದು"[೧೭] ತಿಳಿಸುತ್ತದೆ. ಈ ಮೇಲಿನ ಪುರಾಣದಿಂದ ಜಾಂಬವಂತ ದೈವ ಸ್ವರೂಪ ಹೊಂದಿರುವ ಎಲ್ಲರ ಜೊತೆಯಲ್ಲಿ ಗುರುತಿಸಿಕೊಂಡಿರುವುದು ಒಂದು ವಿಶೇಷ. ಆದ್ದರಿಂದ ಮಾದಿಗ ಮೂಲ ಜಾಂಬವಂತ ಮುನಿ ಮಾದಿಗರಿಗೆ ತಾತಾ ಎಂದು ಕರೆಯುತ್ತಾರೆ. ಏಕೆಂದರೆ ಮಾತಂಗಿಯ ತಂದೆ ಜಾಂಬವಂತ ಆಗಿರುವುದರಿಂದ ಮಾದಿಗರ ದೈವ ಸ್ವರೂಪಿನಿ ಮಾತಂಗಿ ಮಾದಿಗರ ಆರಾಧ್ಯದೈವ ಆಗಿರುವುದರಿಂದ ಅವಳ ಮಕ್ಕಳು ಎಂದು ಗುರುತಿಸಿಕೊಂಡಿದ್ದಾರೆ.

ಜಾಂಬವಂತ ೩

ಕೃಷ್ಣವತಾರದ ಜಾಂಬವಂತನ ವರ್ಣನೆಯಲ್ಲಿ ಮಹಾವಿಷ್ಣುವಿನ ಹತ್ತು ಅವತಾರಗಳಲ್ಲಿ ಒಂಬತ್ತು ಅವತಾರಗಳನ್ನು ಕಣ್ಣಾರೆ ಕಂಡಂಥ ದೀರ್ಘಾಯುಷಿ ಜಾಂಬವಂತನು ಕೃಷ್ಣಾವಾತಾರದ ಕಾಲದಲ್ಲಿ ಅಮೂಲ್ಯವಾದ ಶಮಂತಕ ಮಣಿಯ ಕಥೆಗೆ ಸಂಬಂಧಪಟ್ಟಂತೆ ಮತ್ತೆ ಕಾಣಿಸಿಕೊಳ್ಳುವನು. ಸತ್ರಾರ್ಜಿತ ರಾಜನಿಗೆ ಸೂರ್ಯದೇವನು ಶಮಂತಕ ಮಣಿಯನ್ನು ಕೊಟ್ಟಿದ್ದನು. ಸತ್ರಾಜಿತನ ಕಿರಿಯ ಸೋದರ ಪ್ರಸೇನನು ಈ ಮಣಿಯನ್ನು ಧರಿಸಿ ಬೇಟೆಗೆ ಹೋದನು. ಕಾಡಿನಲ್ಲಿ ಹೋಗುತ್ತಿರುವಾಗ ಜಾಂಬವಂತನು ಆ ಸಿಂಹವನ್ನು ಕೊಂದು ಮಣಿಯನ್ನು ವಶಪಡಿಸಿಕೊಂಡನು. ಕೃಷ್ಣನೇ ಪ್ರಸೇನನನ್ನು ಕೊಂದು

ಮಣಿಯನ್ನು ಅಪಹರಿಸಿದನೆಂದು ಸುದ್ದಿ ಹಬ್ಬಿತ್ತು . ಆಗ ಕೃಷ್ಣನೇ ಕಾಡಿಗೆ ಹೋಗಿ ಜಾಂಬವಂತನನ್ನು ಸೋಲಿಸಿ ಆ ಮಣಿಯನ್ನು ಸತ್ರಾಜಿತನಿಗೆ ಹಿಂದುರಿಗಿಸಿದನು. ಅಲ್ಲದೆ ಕೃಷ್ಣನು ಜಾಂಬವಂತನ ಮಗಳಾದ ಜಾಂಬವಂತಿಯನ್ನು ವಿವಾಹವಾದನು."[೧೮] ಈ ಐತಿಹ್ಯವನ್ನು ಗಮನಿಸಿದಾಗ. ಮಾದಿಗ ಸಮುದಾಯ ಮಾತಂಗ ಎನ್ನುವ ಮೂಲ ನೆಲೆಯಿಂದ ಬಂದಿರುವುದನ್ನು ತಿಳಿದುಕೊಳ್ಳಬಹುದು. ಒಂದು ಕಡೆ ವಡ್ಡಗೆರೆ ನಾಗರಾಜಯ್ಯ ಅವರು ಬ್ರಾಹ್ಮಣರು ಮಾದಿಗರ ಅಳಿಯಕಟ್ಟು ಸಂತತಿ ಬ್ರಾಹ್ಮಣರಿಗೆ ಮತ್ತು ಮಾದಿಗರಿಗೆ ಹಿಂದೆ ವೈವಾಹಿಕ ಸಂಬಂಧಗಳು ನಡೆಯುತ್ತಿತ್ತೆಂದು ತಿಳಿಸುತ್ತಾರೆ.

ಆದಿಜಾಂಬವನೆಂಬ ಐತಿಹಾಸಿಕ ಪುರುಷನೊಬ್ಬ ನಿಜವಾಗಿಯೂ ಇದ್ದನೆಂದು ಪುರಾಣಕಾಲದಿಂದಲೂ ಈಗಿನ ಕಾಲದವರೆಗೆ ಚಾರಿತ್ರಿಕ ನೆನಪುಗಳನ್ನು ಆತನ ವಾರಸುದಾರರು ಹೊತ್ತು ತಂದಿದ್ದಾರೆ. ಕರ್ನಾಟಕದ ಮಾದಿಗರ ಗುರು ಪರಂಪರೆಯಲ್ಲಿ "ಜಾಂಬವಯ್ಯ' ಎಂಬ ಒಂದು ಪ್ರತ್ಯೇಕ ಪೂಜಾರಿ ವರ್ಗವಿದೆ. ಅವರನ್ನು 'ಜಾಂಬವರು', 'ಜಾಂಬವಯ್ಯೋರು', ಜಂಜೂಕುಲಸ್ವಾಮಿ' ಮುಂತಾಗಿ ಕರೆಯುತ್ತಾರೆ. ಈ ಪೂಜಾರಿ ಪರಂಪರೆಯ ಹೆಣ್ಣುಮಕ್ಕಳನ್ನು 'ಜಾಂಬವತಿ' ಎಂದು ಕರೆಯುತ್ತಾರೆ. ಮಾದಿಗರು ತಮ್ಮ ಕುಲಸ್ವಾಮಿಗಳಾದ ಜಾಂಬವರು ಹಟ್ಟಿಕೇರಿಗಳಿಗೆ ಬಂದಾಗ ಅತ್ಯಂತ ಭಕ್ತಿಭಾವಗಳಿಂದ ನಡೆದುಕೊಳ್ಳುತ್ತಾರೆ."[೧೯] ಜಾಂಬಮುನಿಯು ವಿಶ್ವ ಸೃಷ್ಟಿಸಿದ ಮಾದಿಗರ ಪೌರಾಣಿಕತೆ, ಐತಿಹ್ಯಗಳನ್ನಾಗಿಸುವುದನ್ನು ಈ ಸಮುದಾಯದಲ್ಲಿ ಕಾಣಬಹುದು. ತನ್ನ ಮೂಲ ಮುಂದುವರಿಸಿಕೊಂಡು ಹೋಗುವ ಸಲುವಾಗಿ "ಚಿತ್ರದುರ್ಗದ ಮುರುಘಾಮಠದ ಮುರುಘರಾಜೇಂದ್ರ ಶರಣರು ಜಾತಿಗೊಬ್ಬ ಧಾರ್ಮಿಕ ಗುರುವನ್ನು ನೇಮಿಸಲು ಯತ್ನಿಸಿ, ಕೃಷ್ಣಮೂರ್ತಿ ಎಂಬ ಪಡ್ಡೆಹುಡುಗನನ್ನು ಮಾದರ ಚೆನ್ನಯ್ಯ ಸ್ವಾಮೀಜಿ ಎಂಬ ಹೆಸರಿನಿಂದ ಸ್ವಾಮೀಜಿಯನ್ನಾಗಿ ನೇಮಿಸಿದ ಬಳಿಕ ಮಾದಿಗ ಸಮುದಾಯದ ಮೇಲೆ ವಂಶಪಾರಂಪರ್ಯವಾಗಿ ಹೊಂದಿದ್ದು, ಆದಿಜಾಂಬವ ಮಠದ ಕುಲಸ್ವಾಮಿಗಳ ಹಿಡಿತ ಮತ್ತಷ್ಟು ಸಡಿಲಗೊಂಡಿತು. ಮಾದಾರ ಚೆನ್ನಯ್ಯ ಸ್ವಾಮೀಜಿ ಎಂಬ ಹೆಸರಿನಿಂದ ಹೊಸದಾಗಿ ಸ್ವಾಮೀಜಿಯಾಗಿ ಪಟ್ಟ ಅಲಂಕರಿಸಿದ ಕೃಷ್ಣಮೂರ್ತಿಗೆ, ಪಿತಾಮಹ ಆದಿಜಾಂಬವನ ವಂಶಪರಂಪರೆಯ ಪಾರಂಪರಿಕ ವಾರಸುದಾರಿಕೆ ಇರುವುದಿಲ್ಲ."[೨೦] ಆದರೆ ಮಾದಿಗ ಸಮುದಾಯದ ಅಸ್ತಿತ್ವವನ್ನು ಉಳಿಸಿಕೊಳ್ಳುವ ಪ್ರಯತ್ನ ಈ ಮಠದ ಸ್ವಾಮೀಜಿ ಮಾಡಬೇಕು. ಅದನ್ನು ಹೊರತುಪಡಿಸಿ ಜಾಂಬವಮುನಿಗೆ ಭಂಗ ತರುವಂತಹ ಕೆಲಸವನ್ನು ಮಾಡಬಾರದು ಎನ್ನುವಂಥ ಅಂಶವನ್ನು ಈ ಸಂಶೋಧನೆಯ ಮುಖ್ಯ ಉದ್ದೇಶವು ಹೌದು.

೩.೨.೩ ಪುರಾಣಗಳಲ್ಲಿ ಮಾತಂಗ ಮತ್ತು ಮಾತಂಗಿಯ ಬಗೆಗಿನ ವಿವರ

ಮಾತಂಗ ಮುನಿಯ ಮಗಳೇ ಮಾತಂಗಿ ದೇವಿ. ಕಾಳಿದಾಸ ತನ್ನ ಶಾಮಲಾದೇವಿ ದಂಡಕದಲ್ಲಿ ಬರೆಯುತ್ತಾರೆ. "ಮಾತಂಗ್ಯಕನ್ಯ ಮಾನಸಸಾರಮಿ", 'ಮಾತಂಗಿ ಮಧು ಶಾಳಿನಿ,' ವಿದ್ಯೆ ಆದಿದೇವತೇ,' ದೇವಿ ಸರಸ್ವತಿ, ಮಾತಂಗಿ, ಮಾತಂಗ ಮಹಾಮುನಿಯ ಮಗಳೇ ಮಾತಂಗಿ ಮಾದಿಗರಲ್ಲಿ ಕರೆದುಕೊಳ್ಳುವುದು. ಮಾತಂಗಿ ಮಕ್ಕಳು, ಮಾತಂಗ ಬ್ರಹ್ಮರು. ಇದಕ್ಕೆ ಥಸ್ಟನ್ ಕೂಡ ದಾಖಲೆ

ಕೊಡುತ್ತಾರೆ. ವ್ಯಾಸ ಭಾರತದಲ್ಲಿ ಮಾತಂಗದ ಬಗ್ಗೆ ಹಲವೆಡೆ ಉಲ್ಲೇಖವಿದೆ. ಹಿಂದೂಶಾಸ್ತ್ರ ಗ್ರಂಥಗಳಲ್ಲಿ ಮಾತ್ರವಲ್ಲದೆ ಜೈನ, ಬೌದ್ಧ ಧರ್ಮದಲ್ಲಿ ಕೂಡ ಮಾತಂಗ, ಮತಂಗ, ಮಾತಂಗಿ ಎಂಬ ಹೆಸರುಗಳನ್ನು ಉಲ್ಲೇಖ ಮಾಡಲಾಗಿದೆ.

'ದ್ರಾವಿಡರ ಮಾದಿಗ ಪದವೇ ಸಂಸ್ಕೃತಕ್ಕೆ ಮಾತಂಗವಾಗಿ ಸೇರಿತು ಎಂಬ ದ್ರಾವಿಡ ಎಟಮಲಾಜಿಕಲ್ ಶಬ್ದ ಕೋಶದ ವಾದವು ಗಟ್ಟಿ ಎನ್ನುವುದಾದರೆ ಮಾತಂಗರು ಭಾರತದಲ್ಲಿ ಪ್ರಥಮ ರಾಜ್ಯಗಳನ್ನು ಸ್ಥಾಪಿಸಿದರೆಂಬ ಮತ್ತೊಂದು ಘನವಾದ ವಿಚಾರಕ್ಕೆ ಪ್ರವೇಶಿಸುತ್ತೇವೆ. ಆನೆಯನ್ನು ತಮ್ಮ ಕುಲದೇವತೆಯಾಗುಳ್ಳವರು ಮಾತಂಗರು, ಗಣಪತಿಯ ಆನೆ ಮುಖದ ಗುಟ್ಟನ್ನು ಬಯಲಿಗೆಳೆಯುವ ಸಂದರ್ಭದಲ್ಲಿ ದೇವಿಪ್ರಸಾದ ಚಟ್ಟೋಪಾಧ್ಯಾಯರು ಮಾತಂಗರು ರಾಜ್ಯ ಸ್ಥಾಪಕರಾದಾಗ ಗಣತಿ ದೇವನಾದನೆಂದು ಪ್ರತಿಪಾದಿಸುತ್ತಾರೆ. ಮಾದಿಗರ ಮೂಲದ ಮಾತಂಗರು ಯುದ್ಧ ವೀರರಾಗಿದ್ದು, ಯುದ್ಧದಲ್ಲಾದ ಪರಾಭವದಿಂದ ತನ್ನ ಉನ್ನತ ಸ್ಥಾನವನ್ನು ಕಳೆದುಕೊಂಡು ಗೆದ್ದವರ ಗುಲಾಮರಾಗಿರುವ ಸಾಧ್ಯತೆಯಿದೆ."[೨೧]

"ಮತ್ತೊಬ್ಬ ಮಹರ್ಷಿ ಬ್ರಾಹ್ಮಣ ಸ್ತ್ರೀಯರಲ್ಲಿ ನಾಯಿಂದನಿಂದ ಜನಿಸಿದವ ಒಮ್ಮೆ ಈ ನಿಷ್ಕಾರಣವಾಗಿ ಕತ್ತೆಯ ಮರಿಯನ್ನು ಹೊಡೆಯಲಾಗಿ, ಅದು ತನ್ನ ತಾಯಿಯ ಬಳಿ ದೂರಿತು ಆಗ. ಹೆಣ್ಣು ಕತ್ತೆ, 'ಅವನು ಚಂಡಾಲ', ಎಷ್ಟು ತಪಸ್ಸು ಮಾಡಿದರೇನು? ಹುಟ್ಟು ಗುಣ ಎಲ್ಲಿ ಹೋದೀತು? ಎಂದಿತು. ಅದನು ಕೇಳಿದ ಮಾತಂಗ, ಆ ಹೆಣ್ಣು ಕತ್ತೆಯ ಬಳಿ ಸಾಗಿ ತನ್ನ ಹುಟ್ಟಿನ ಗುಟ್ಟನ್ನು ತಿಳಿದು ತಪಸ್ಸು ಮಾಡತೊಡಗಿದ. ಅನೇಕ ವೇಳೆ ಇಂದ್ರ ಈ ತನಲ್ಲಿಗೆ ಬಂದು ಬ್ರಾಹಣ್ಯ ದುರ್ಲಭವೆಂದು ಹೇಳಿ, ಬೇರೆ ಬೇರೆ ಎಷ್ಟೋ ವರಗಳಿಂದ ಪ್ರಲೋಭಗೊಳಿಸಿದರೂ ತನ್ನ ತಪೋ ಮಹಿಮೆಯಿಂದ ಕಡೆಗೂ ಬ್ರಹ್ಮರ್ಷಿಯಾದ."[೨೨] ಈ ಮೇಲಿನ ಪುರಾಣಗಳನ್ನು ಯೋಚಿಸಬೇಕಾದ ಅಗತ್ಯವಿದೆ. ಬ್ರಾಹ್ಮಣರಿಗೆ ಹಾಗೂ ಮಾದಿಗರಿಗೆ ಯಾವುದೊ ಸಂಬಂಧವಿದೆ ಎನ್ನುವಂಥದ್ದು ಗೋಚರವಾಗುತ್ತದೆ.

೩.೨.೪ ಚಾರಿತ್ರಿಕ ಹಿನ್ನೆಲೆ

ಸಾಮಾಜಿಕ ಏಣಿಶ್ರೇಣಿ ವ್ಯವಸ್ಥೆಯಲ್ಲಿ ನಲುಗಿದ ಮಾದಿಗರ ಬಗ್ಗೆ ಯಾವುದೇ ಶ್ರೇಷ್ಠ ಚಾರಿತ್ರಿಕ ದಾಖಲೆಗಳು ಸಿಗುವುದು ಬಹಳ ಕಷ್ಟ. ಮೌಖಿಕವಾಗಿ ಐತಿಹ್ಯಗಳು ಮಾತ್ರ ಹೇರಳವಾಗಿ ಮಾದಿಗರ ಬಗ್ಗೆ ವಿವರಿಸುತ್ತವೆ. ಕರ್ನಾಟಕದಲ್ಲಿ ಅನೇಕ ಶಾಕ್ತ ಪಂಥಗಳು ಇವೆ, ಅವುಗಳಲ್ಲಿ ಮಾದಿಗ ಸಮುದಾಯವು ಒಂದು. ಬೇರೆ ಯಾವುದೇ ಜಾತಿ ಸಮುದಾಯಗಳಿಗೆ ಇರುವುದಕ್ಕಿಂತ ಬಹುದೊಡ್ಡ ಸಿದ್ಧಾಂತಗಳನ್ನು ಇದು ಒಳಗೊಂಡಿದೆ. ಬೇರೆ ದಲಿತ ಸಮುದಾಯಗಳಿಗಿಂತ ಸಮೃದ್ಧವಾದ ಪುರಾಣ ಪರಂಪರೆಯಿದೆ. ಆದರೆ ಮಾದಿಗರ ಬಗ್ಗೆ ದೊರೆಯುವ ಚರಿತ್ರೆಯಲ್ಲಿ ಯಾರು ರಾಜ್ಯ ಪ್ರಭುತ್ವವನ್ನು ಅಳ್ವಿಕೆ ಮಾಡುವುದರ ಪ್ರಮಾಣ ಕಡಿಮೆ ಇದೆ. ಶೂದ್ರವನಿಸಿಕೊಂಡಿರುವ ಈ ಸಮುದಾಯ ಕೇವಲ ಸಾಮ್ರಾಜ್ಯದಲ್ಲಿ ಅತ್ಯಂತ ಕಷ್ಟದ, ಶ್ರಮದ ಹಾಗೂ ಅಸಹ್ಯ ತರುವಂತಹ ಕೆಲಸಗಳನ್ನು ನಿರ್ವಹಿಸುತ್ತಿದ್ದರು. ಇದಕ್ಕಾಗಿಯೇ ಶೂದ್ರರನ್ನು ಪುರುಷ ಸೂಕ್ತದಲ್ಲಿ ಬ್ರಹ್ಮಪಾದದಿಂದ ಹುಟ್ಟಿ ಬಂದರು ಹಾಗೂ ಅವರ

ಕರ್ತವ್ಯವೆಂದರೆ ಮೇಲಿನ ಮೂರು ವರ್ಣಗಳ ಸೇವೆ ಮಾಡಲು ಜನ್ಮವೆತ್ತಿದ ಜನರೆಂದು ನಿರೂಪಿಸಲಾಗಿದೆ.

ಈ ಸಮುದಾಯಗಳು ಇಂತಹ ಕಾಯಕ ಮಾಡಿ ಜೀವನ ಮಾಡಬೇಕಾಗಿತ್ತು. "ಶ್ರೀಮಂತರ ಜಮೀನಿನಲ್ಲಿ ಯಾವುದೇ ರೀತಿಯ ಸೌಕರ್ಯಗಳಿಲ್ಲದೆ ನಾಯಿಗಿಂತಲೂ ಕೆಳಮಟ್ಟದಲ್ಲಿ ದುಡಿಯಬೇಕಾಗಿತ್ತು. ತಪ್ಪಿದರೆ ಕಠಿಣ ಶಿಕ್ಷೆಗೆ ಗುರಿಯಾಗುತ್ತಿದ್ದರು. ದೇವತಾಕಾರ್ಯಗಳಲ್ಲಿ ನರಬಲಿ ಕೊಡುವ ಕೆಟ್ಟ ಸಂಪ್ರದಾಯ ಬಳಕೆಯಲ್ಲಿತ್ತು. ಇಂತಹ ಸಮಯದಲ್ಲಿ ನರಬಲಿಗೆ ದಲಿತ ವರ್ಗದವರನ್ನು ನೀಡಲಾಗುತ್ತಿತ್ತು. ಅವರಲ್ಲಿದ್ದ ಅಜ್ಞಾನದಿಂದ ಅವರು ಅದನ್ನು ದೇವತಾಕಾರ್ಯವೆಂಬಂತೆ ಭಕ್ತಿಭಾವದಿಂದ ಅರ್ಪಿಸಿಕೊಳ್ಳುತ್ತಿದ್ದರು. ಇವರು ಆಚರಿಸುತ್ತಿದ್ದ ಹಬ್ಬಗಳಲ್ಲಿ ಪ್ರಾಣಿಬಲಿ, ನರಬಲಿ, ಅಂಗಾಗಗಳ ಛೇದನ ಮುಂತಾದ ಬಲಿಗಳನ್ನು ಅರ್ಪಿಸಿ ತಮ್ಮ ದೇವರುಗಳನ್ನು ತೃಪ್ತಿಪಡಿಸುತ್ತಿದ್ದರು. ಇದು ಅವರ ಅಜ್ಞಾನಕ್ಕೆ ಹಿಡಿದ ಕನ್ನಡಿ ಎನ್ನಬಹುದು."[೨೩]

ಕೆಲವು ರಾಜ ವಂಶರ ಆಡಳಿತದಲ್ಲಿ ಸೈನಿಕರಾಗಿದ್ದರೂ ಯುದ್ಧಗಳಲ್ಲಿ ಹೆಚ್ಚು ಪ್ರಾಣಹಾನಿಯಾಗುತ್ತಿದದ್ದು ಮಾದಿಗ ಸಮುದಾಯದಲ್ಲಿ ಹಾಗಿತ್ತು. ಯುದ್ಧ ಘೋಷಣೆಯಾದಾಗ ಪ್ರತಿಯೊಂದು ಗ್ರಾಮದಿಂದಲೂ ಸಹ ಮನೆಗೊಬ್ಬ ಗಂಡಸು (ಹೊಲೆಮಾದಿಗರ ಕೇರಿಯಿಂದ) ಸ್ವತಃ ತಾನೇ ಯುದ್ಧ ಸಾಮಗ್ರಿಗಳಾದ ಭರ್ಚಿ, ಕತ್ತಿ, ಕೊಡಲಿ, ಬಾಕು, ಬೀಸುಕೊಡಲಿಗಳನ್ನು ತಯಾರಿಸಿಕೊಂಡು ಸಿದ್ಧನಾಗಿ ಬರಬೇಕಾಗಿತ್ತು. ತಪ್ಪಿದಲ್ಲಿ ಶಿಕ್ಷೆಗೆ ಒಳಗಾಗುವುದು ಖಂಡಿತಾ! ಇದು ರಾಜಾಜ್ಞೆಯಾಗಿತ್ತು. ಇಂತಹ ಸನ್ನಿವೇಶದಲ್ಲಿಯೇ ಗ್ರಾಮೀಣ ಪ್ರದೇಶದಲ್ಲಿ ಅದರಲ್ಲಿಯೂ ದಲಿತ ಜನರಲ್ಲಿ 'ದಂಡಿಗೆ ಹೋದವನ ಹೆಂಡತಿ ಮುಂಡೆ' ಎಂಬ ಗಾದೆ ಹುಟ್ಟಿರುವುದು. ಇಂತಹ ಅನೇಕ ಸಂಗತಿಗಳನ್ನು ವೀರಗಲ್ಲುಗಳಲ್ಲಿ ಗಮನಿಸಬಹುದು."[೨೪]

ಮಾದಿಗರ ವಿವರಗಳನ್ನು ದಾಖಲೆ ಮಾಡಿರುವುದು ಹಾಗೂ ಶಾಸನಗಳಲ್ಲಿ ದೊರೆಯುವುದು ತುಂಬಾ ಅಪರೂಪದ ಸಂಗತಿಯಾಗಿದೆ. ಇನ್ನೂ ಕೆಲವು ಶಾಸನಗಳು ಚರಿತ್ರೆಯ ಗುರುತುಗಳನ್ನು ಅರಿಯಲು ನೆರವಾಗುತ್ತವೆ. "ವರ್ಣಬಾಹಿರರಾದ ಅಸ್ಪೃಶ್ಯರು ದಾನವನ್ನು ಕೊಡುವಷ್ಟು ಶ್ರೀಮಂತರಲ್ಲದೇ ಹೋದರೂ ದಾನ ಪಡೆದುಕೊಳ್ಳುವುದಕ್ಕಂತೂ ಅವರು ಅನರ್ಹರಲ್ಲ. ಆದರೆ ನಮಗೆ ದೊರೆತಿರುವ ದಾನ ಶಾಸನವೊಂದು ಮಾದಿಗ ಜಾತಿಯ ವ್ಯಕ್ತಿಯೊಬ್ಬ ಗೋವುಗಳನ್ನು ದಾನಮಾಡಿ ಊರಿನ ಜನರಿಂದ ಹರಸಲ್ಪಟ್ಟ ಸಂಗತಿಯನ್ನು ವಿವರಿಸುತ್ತದೆ. ಕಿ. ಶ. ೯೭೪ರಲ್ಲಿ ಕೆತ್ತಿಸಲಾದ ಸೊರಬ ಶಿಲಾ ಶಾಸನದ ಪ್ರಕಾರ ತಾಳಗುಂದದ ಬ್ರಾಹ್ಮಣರು ಗೋವುಗಳನ್ನು ದಾನ ನೀಡಿದ ಮಾದಿಗ ವ್ಯಕ್ತಿಯನ್ನು ಹಾಡಿಹರಸಿದ್ದಾರೆ."[೨೫]

ಮತ್ತೊಂದು ಶಾಸನವೊಂದರಲ್ಲಿ ಹೀಗೆ ಹೇಳಲಾಗಿದೆ– "ಶಾಸನವೊಂದರಲ್ಲಿ ಮಾದಿಗರ ತಾವು ಕೈಗೊಂಡಿದ್ದ ಪ್ರಧಾನ ವೃತ್ತಿಯಾದ ಚರ್ಮಗಾರಿಕೆಗೂ ತೆರಿಗೆಗಳನ್ನು ಸಲ್ಲಿಸುತ್ತಿದ್ದುದು ಕಂಡುಬರುತ್ತದೆ. ಬಾದಾಮಿಯ ಮಹಾಜನರು ಊರಿನ ಚರ್ಮಕಾರರ ತೆರಿಗೆಗಳನ್ನು ತೆಗೆದು ಹಾಕಿದರಂತೆ, ಈ

ಹಿನ್ನೆಲೆಯಲ್ಲಿ ರಾಜ್ಯದ ಬೊಕ್ಕಸಕ್ಕೆ ಬರುತ್ತಿದ್ದ ಆದಾಯಗಳಲ್ಲಿ ಚರ್ಮಗಾರಿಕೆಯ ತೆರಿಗೆ ಒಂದಾಗಿತ್ತು ಎನ್ನಬಹುದು. ಇದಲ್ಲದೆ 'ಮಾದಾರಿಕೆ' ಎಂಬುದು ಮಾದಿಗರು ಕೊಡುವ ಸುಂಕದ ಹೆಸರಾಗಿ ಅನೇಕ ಶಾಸನಗಳಲ್ಲಿದೆ. ಶ್ರವಣಬೆಳಗೊಳದಲ್ಲಿ ಹದಿನಾಲ್ಕನೆಯ ಶತಮಾನದ ಶಾಸನವೊಂದರಲ್ಲಿ ಸಾತ್ವಿಕರು, ಬೋಷ್ಟಿಕರು ತಿರುಪಣೆ ತರುವಡಿ ತಂಣ್ನಿರವರು ನಾಲ್ವತ್ತೆಂಟು ಜನಂಗಳು ಸಾವಂತ ಬೋವಕ್ಕಳು, ತಿರಿಕುಲ ಜಾಂಬವ ಕುಲವೊಳಗಾದ ಹದಿನೆಂಟು ನಾಡ ಎಂದರೆ ಇದರಲ್ಲಿ ಪ್ರಸ್ತಾವಗೊಂಡಿರುವ 'ಜಾಂಬವ ಕುಲ ಬೇರಾವುದಾಗಿರದೇ ಮಾದಿಗ ಜಾತಿಯೇ ಆಗಿದೆ. ಏಕೆಂದರೆ ಮಾದಿಗರು ತಮ್ಮ ಮೂಲ ಪುರುಷನಾದ ಆದಿಜಾಂಬವನ ಹೆಸರಲ್ಲಿ ಮತ್ತು ಜಾಂಬವ ಎಂತಲೂ ಗುರುತಿಸಿಕೊಳ್ಳುತ್ತಾರೆ."[೨೬]

ಎಪಿಗ್ರಾಫಿಯಾ ಕರ್ನಾಟಿಕದ ಐದನೆ ಸಂಪುಟದ ಕೆಂಚನಗೋಡು ಗ್ರಾಮದಲ್ಲಿ ದೊರೆತಿರುವ ೧೯ನೇ ಶತಮಾನದ ಶಾಸನದಲ್ಲಿ ಶ್ರೀಮಾದಿಗ ಹೋಚನ ಶ್ರೀಕರನ ಕೊಡುಗೆಯ ಗದ್ದೆಕೊಳಗ ಅರ್ಥಕ್ಕೆ 'ಅಳುಹಿದನವನು ಹೆಣ ಬಾಯ ಅಕ್ಕಿಯನು ನಾಯದುಡುನವನು ತಿಂದನು' ಎಂಬ ಉಲ್ಲೇಖವಿದೆ. 'ಶ್ರೀ ಮಾದಿಗ' ಎಂದು ಹೋಚನನ್ನು ಗೌರವ ಸೂಚಕವಾಗಿ ಸಂಬೋಧಿಸಿರುವುದು ಅಪರೂಪದ ದಾಖಲೆ ಹಾಗೂ ಮಾದಿಗರನ್ನು ಏಕವಚನದಲ್ಲಿ ಸಂಬೋದಿಸುವ ಹೆಚ್ಚು ಶಾಸನಗಳು ಸಿಗುವುದು. ಆದರೆ ಇಂತಹ ಗೌರವ ಸೂಚಕ ಪದಗಳು ಸಿಗುವುದು ಅಪರೂಪದ ಜೊತೆ ಈ ಸಮುದಾಯಕ್ಕೆ ಸಂದ ಗೌರವ ಎಂದು ಹೇಳಬಹುದು.

"ವಿಜಯನಗರ ಸಾಮ್ರಾಜ್ಯದಲ್ಲಿ ಅಸ್ಪೃಶ್ಯರಲ್ಲಿಯೇ ಅತ್ಯಂತ ಕೆಳವರ್ಗದವರಾದ ಹೊಲೆಯರು ಮತ್ತು ಮಾದಿಗರು ಊರ ಹೊರಗೆ ಒಟ್ಟಾಗಿ ವಾಸ ಮಾಡುತ್ತಿದ್ದರು. ಆ ಕೇರಿಗಳನ್ನು ಮಾದಿಗೇರಿ, ಹೊಲೆಗೇರಿ ಎಂಬ ಜಾತಿಗಳಿಂದ ಗುರುತಿಸಿಕೊಂಡಿವೆ. ಇವರುಗಳು ಪ್ರತಿಯೊಂದು ಊರಿನಲ್ಲಿಯೂ ಗ್ರಾಮದ ದಕ್ಷಿಣ ದಿಕ್ಕಿನಲ್ಲಿಯೇ ವಾಸಿಸುತ್ತಿದ್ದರು. ಏಕೆಂದರೆ ನಾಲ್ಕು ದಿಕ್ಕುಗಳಲ್ಲಿ ದಕ್ಷಿಣ ದಿಕ್ಕು ಅಮಂಗಳವಾದದ್ದೆಂದು ಶಾಸ್ತ್ರಗಳು ತಿಳಿಸುತ್ತವೆ. ಊರಿನ ಹೊರಗೆ ಒಟ್ಟಾಗಿ ವಾಸ ಮಾಡುತ್ತಿದ್ದರು ಆ ಭಾಗವನ್ನು ಹೊಲಗೇರಿ ಎಂದು ಕರೆಯಲಾಗುತ್ತಿತ್ತೆಂದು ಸಾಹಿತ್ಯಧಾರಗಳಿಂದ, ಶಾಸನಗಳಿಂದಲೂ ತಿಳಿಯಬಹುದಾಗಿದೆ. ಅನೇಕ ಶಾಸನಗಳಲ್ಲಿ ಹೊಲೆಯ ಮಾದಿಗ ಎಂಬ ಜಾತಿ ಸೂಚಕವನ್ನು ಸೂಚಿಸುವ ಹೆಸರುಗಳಿರುವುದು ಕಂಡು ಬರುತ್ತದೆ. ಉದಾಹರಣೆಗೆ ಹೊಲೆಯರ ಹುಟ್ಟು, ಮಾದಿಗರ ಕಂಪ ಮುಂತಾದವು. ಹಾಗೆಯೇ ಮಾತಂಗಿಯನ್ನು ಕವಿಗಳು ಮಾದಿಗಿತ್ತಿ ಎಂದು ಕರೆದಿದ್ದಾರೆ."[೨೭] 'ಮತಂಗ ಪರ್ವತದ ಮೇಲೆ ದಕ್ಷಿಣಕ್ಕಿರುವ ಮೆಟ್ಟಿಲುಗಳ ಉತ್ತರಕ್ಕಿರುವ ಬಂಡೆಯ ಮೇಲೆ ಇವರ ಶಾಸನದಲ್ಲಿ ಶಕವರ್ಷದ ಉಲ್ಲೇಖವಿಲ್ಲ, ಪಿಂಗಳ, ಫಾಲ್ಗುಣ, ಸು. ೧೦ ಆದಿವಾರದಂದು ಹಡದೆ ಸಾಯಂಣ ಎಂಬುವವನು ಮತಂಗ ಪರ್ವತದಿಂದ ವಿರೂಪಾಕ್ಷ ದೇವರ ದರ್ಶನ ಪಡೆದನೆಂದು ತಿಳಿಸುತ್ತದೆ."[೨೮] ಮತ್ತು ವಿಶೇಷವಾಗಿ ಹೊಲೆಯರ ಮತ್ತು ಮಾದಿಗರ ನ್ಯಾಯ ಕೇಂದ್ರ ರತ್ನಕೂಟ ಎಂದು ಕೆಲವು ವಿದ್ವಾಂಸರು ಉಲ್ಲೇಖಿಸಿದ್ದಾರೆ.

ಹಂಪಿಯಲ್ಲಿ ದೊರೆತಿರುವಂಥ ಇನ್ನೊಂದು ಶಾಸನ "ಹಂಪಾದೇವಿಯದಿಡ್ಡಿಯ ಉತ್ತರಕ್ಕಿರುವ ಗುಂಡಿನ ಮೇಲೆ ಶಾಸನದಲ್ಲಿ ಶಕವರ್ಷದ ಉಲ್ಲೇಖವಿಲ್ಲ, ಆದರೆ ಈ ಶಾಸನವು ಮತಂಗ ದೇವರ (ಹೆಸರಿನ) ಕೊತ್ತಳವನ್ನು ಹೆಸರಿಸಿದೆ. ಇದರ ಮೂಲ "ಶ್ರೀಮತಂಗದೇವರ ಕೊತ್ತಳ."[೨೯] ಎಂಬ ಮಾತಂಗ ದೇವರ ಹೆಸರಿನಲ್ಲಿ ಇರುವ ಶಾಸನದಲ್ಲಿ ದಾಖಲೆಯಿದ್ದರೂ ಸಹ ಮೇಲ್‌ಜಾತಿ ಸಮುದಾಯವರು ವೀರಭದ್ರಸ್ವಾಮಿ ಮೂರ್ತಿಯನ್ನು ಪ್ರತಿಷ್ಠಾಪಿಸಿದ್ದಾರೆ. ಜೊತೆಗೆ ವರ್ಷವನ್ನು ದಾಖಲೆ ಮಾಡಿಲ್ಲ. ಇಂತಹ ದುರಾದೃಷ್ಟಕರವಾದ ಅಂಶಗಳು ನಮಗೆ ತಿಳಿದುಬರುತ್ತವೆ. "ಕ್ರಿ. ಶ, ೧೫೨೬ ಮಾರ್ಚ್ ೧೩ರ ಮಂಗಳವಾರಕ್ಕೆ ಸರಿಹೊಂದುತ್ತದೆ, ಹತ್ತು ಸಾಲುಗಳಿರುವ ಈ ಶಾಸನ ಪಾಠವು ತಿಳಿಸುವುದೇನೆಂದರೆ ಶ್ರೀ ಮಹಾಮಾಯಿಯಾದ ಮಾತಂಗಿ ಅಮ್ಮನ ಗುಡಿಯನ್ನು ಶ್ರೀಕೃಷ್ಣದೇವರಾಯನು ತನ್ನ ತಂದೆ ತಾಯಿಗಳಿಗೆ ಪುಣ್ಯವಾಗಲೆಂದು ಕಲ್ಲಿನಿಂದ ಕಟ್ಟಿಸಿದ್ದಾನೆ. ಮಾತಂಗಿ ಅಮ್ಮನನ್ನು ಶಾಸನದಲ್ಲಿ ಶ್ರೀ ಮಹಾಮಾಯಿ ಎಂದು ಕರೆಯಲಾಗಿದೆ. ಈ ದೇವರಿಗೆ ಭೂಮಿಯನ್ನು ದಾನ ನೀಡಿರುವುದನ್ನು ಶಾಸನದಲ್ಲಿ ಉಲ್ಲೇಖಿಸಲಾಗಿದೆ."[೩೦]

"ಕ್ರಿ. ಶ. ೯೬೪ರ ಸೊರಬದ ಶಾಸನದ ರೀತ್ಯ ಮಾದಿಗರ ತಮ್ಮಯ್ಯನ ಮಗಂ ನರಿವನ್ನ ಗವುಂಡಗೆಯ್ಯ ಆತನ ತಮ್ಮ ನಾಣ್ಮೆಯೆಂನಿಗೆ ಗೋಸಾಸ ಕಂಬ ನಿಲ್ಲಿಸಲಾಗಿದೆ. 'ಮಾದಿಗರ' ಶಬ್ದ ಮಾದಿಗ ಜಾತಿಯ ಸೂಚಿ ಎಂದರೆ ಆ ನಿಮ್ನ ವರ್ಗದವರಿಗಿದ್ದ ಗೌಡಿಕೆ ಹಾಗೂ ವೀರನಿಗೆ ಗೋಸಾಸ ಕಂಬ ನಿಲ್ಲಿಸಿದ ಸಂಗತಿ ತಿಳಿಯುತ್ತದೆ. ಕೊಡಗಿನ ಕೆಂಬಟ್ಟೆ ಹರಿಜನರಿಗೂ ಗೋಸಾಸದ ಒಂದು ರೂಪನಾವಾದ ಕಲ್ಲು ಬೋಟಿಗೂ (ಮೇಟಿಕಂಬ) ಸಂಬಂಧವೂ ಹುಟ್ಟಾಳಾಗಿ ಮನೆ ಮಗನಾಗಿ ಎಂಟು 'ಮಾದಿಗರ' ಒಂದು ಮಾದಿಗ ಜಾತಿಯ ಸೂಚಕ ಇರಬಹುದು. ಕ್ರಿ ಶ. ೮ನೇ ಶತಮಾನದ ಉತ್ತರಾರ್ಧದ ಧರೆಗೀಶ ಮತ್ತು ರಣಮಣ್ಣಿ ಅಂಜು ಪೆನಾರ ಪೊಲೆಗನ್ ಎಂಬಾತನು ಹೋರಾಟ ಮಾಡಿದ."[೩೧] ಈ ಶಾಸನದಿಂದ ಮಾದಿಗ ಎನ್ನುವುದನ್ನು ಜಾತಿ ಸೂಚಕ ಪದವಾಗಿ ಬಳಸಿದ್ದಾರೆ.

ವೀರಗಲ್ಲುಗಳಲ್ಲಿ ಈ ಸಮುದಾಯದ ಕೆಲವು ದಾಖಲೆಗಳಿವೆ. ಅರಿವರ್ಮನು ಗೋಗ್ರಹಣದಲ್ಲಿ ಸತ್ತಾಗ ಅವನಿಗಾಗಿ ಕನ್ನಯ್ಯನೆಂಬುವನು ವೀರಗಲ್ಲು ಕೆತ್ತಿಸಿ ನಿಲ್ಲಿಸುತ್ತಾನೆ. ಪೆರ್ಗಡೆಯಂತಹ ಅಧಿಕಾರಿಯ ಮಗ ಈ ವೀರಗಲ್ಲಿನ ಪಾಠವನ್ನು ಬರೆದಿರುವುದನ್ನು ನೋಡಿದರೆ ಮಾದಗ (ಮಾದಿಗರು) ಅರಿವರ್ಮನು ತುಂಬಾ ಗಣ್ಯಮಾನ್ಯ ವ್ಯಕ್ತಿಯೇ ಆಗಿದ್ದಿರಬಹುದೆನ್ನಿಸುತ್ತದೆ. ಮಾತ್ರವಲ್ಲದೆ 'ವರ್ಮ' ಎಂಬ ಪ್ರತ್ಯಯ ಅವನ ಹೆಸರಿನೊಂದಿಗಿರುವುದನ್ನು ಜಿಲ್ಲೆಗೆ ಸೇರಿದ ಜಗಳೂರು ತಾಲೂಕಿನ ಮೆದಕೇರನಹಳ್ಳಿ ಆಂಜನೇಯಸ್ವಾಮಿ ದೇವಸ್ಥಾನದಲ್ಲಿರುವ ಕ್ರಿ. ಶ. ೧೬೫೪ರ ಶಾಸನವು ಇಮ್ಮಡಿ ಮೆದಕೇರನಾಯಕನು ಮೆದಕೇರಿಪುರದ (ಮದಕೇರನಹಳ್ಳಿ) ತಳವಾರಿಕೆಯನ್ನು 'ಮಾದಿಗರ ಸಿದ್ದ' ಎಂಬುವವನಿಗೆ ನೀಡಿರುವ ಬಗ್ಗೆ ತಿಳಿಸುತ್ತದೆ."[೩೨]

ಲಕ್ಷ್ಮೇಶ್ವರದ ಸು ಕ್ರಿ. ಶ. ೭೫೩ರ ಶಾಸನವೇ ಆ ಬಗ್ಗೆ ಬಹುಶಃ ಮೊದಲ ಉಲ್ಲೇಖದಲ್ಲಿ ಕರ್ನಾಟಕದಲ್ಲಿ ಇರುವ ಹದಿನೆಂಟು ಜಾತಿಗಳ ಬಗ್ಗೆ ಮಾಹಿತಿಯನ್ನು ನೀಡುತ್ತದೆ. ಹದಿನೆಂಟು

ಜಾತಿಗಳಲ್ಲಿ ಬ್ರಾಹ್ಮಣರು, ವರ್ತಕರು ಸೇರಿಲ್ಲ. ವರ್ತಕ ಸಮೂಹದ ಬೇರೆ ಬೇರೆ ಘಟಕಗಳನ್ನು (ಉದಾ: ಕಂಚಗಾರರು ತೆಲ್ಲಿಗರು ಇತ್ಯಾದಿ) 'ಉತ್ತಮ' 'ಮಧ್ಯಮ', 'ಕನಿಷ್ಠ', ಕನೀಯಸ ಎಂಬ ಬೇರೆ ಬೇರೆ ವರ್ಗಗಳಾಗಿ ವಿಂಗಡಿಸಿದೆ. ನಮಗೆ ಈ ಶಾಸನದಲ್ಲಿ ಪ್ರಸ್ತುತವೆಂದರೆ 'ಪ್ರಕೃತಿ' ಎಂಬ ಶಬ್ದ 'ಪ್ರಜೆ', ಜಾತಿ ಎಂಬರ್ಥದಲ್ಲಿ ಬಳಕೆಯಾಗಿರುವುದು ಕಂಡುಬರುತ್ತದೆ. ಹದಿನೆಂಟು ಜಾತಿಗಳಲ್ಲಿ ಮೊದಲನೆಯದು ಬ್ರಾಹ್ಮಣ, ಕೊನೆಯದು 'ಅಂತ್ಯಜ' ಅಥವಾ ಮಾದಿಗ. ಜಾತಿಗಳಲ್ಲೆಲ್ಲ ಬ್ರಾಹ್ಮಣ ಶ್ರೇಷ್ಠ. ಹೊಲೆಯ, ಮಾದಿಗರು ಕನಿಷ್ಠ ಎಂಬುದು ಸಾರ್ವತ್ರಿಕವಾಗಿ ಒಪ್ಪಿತವಾಗಿದಿತು. ಜಾತಿಯೊಳೆಲ್ಲ ಉತ್ತಮದ ಜಾತಿಯ ವಿಪ್ರಕುಲ ಎಂಬ ಪಂಪನ ಮಾತಾಗಲಿ, ವಿಪು ಮೊದಲು ಅಂತ್ಯಜ ಕಡೆಯಾಗಿ."[೩೩] ಈ ಹದಿನೆಂಟು ಜಾತಿಗಳಲ್ಲಿ ಮಾದಿಗ ಸಮುದಾಯವು ಒಂದು. ಈ ಜಾತಿಗಳಲ್ಲಿ ಕೆಳಸ್ಥರದ ಸ್ಥಾನಮಾನವನ್ನು ಸಮಾಜದಲ್ಲಿ ಮಾದಿಗ ಸಮುದಾಯಕ್ಕೆ ಕೊಟ್ಟಿದ್ದಾರೆ.

"ಕಲ್ಯದಲ್ಲಿರುವ ಮೊದಲನೆಯ ಬುಕ್ಕರಾಯನ ಧರ್ಮ ಸಮನ್ವಯ ಶಾಸನದಲ್ಲಿರುವ ಜಾಂಬವ ಕುಲ ಇವರಿಗೆ ಅನ್ವಯಿಸಬಹುದು. ಇವರು ತಮ್ಮಲ್ಲಿರುವ 'ದಕ್ಕಲೊರ'ರನ್ನು ಕೀಳುಜಾತಿಯವರೆಂದು ಕರೆಯುತ್ತಾರೆ. ಎಡಗೈ ಜಾತಿಯವರು ಗುರುಗಳ ಸಮ್ಮುಖದಲ್ಲಿ ಕುಲಾಚಾಗ ಗೊತ್ತುಮಾಡಿಕೊಂಡಿರುವ ವಿಚಾರವಿದೆ. ಕಟ್ಟೆಮನೆ ಯಜಮಾನ ಸಾಂಪ್ರದಾಯಿಕ ನ್ಯಾಯಾಧೀಶನಾಗಿದ್ದನು. ಮೇಲ್ವರ್ಗದವರ ಸೇವಕರಂತೆ, ಕಷ್ಟಕರ ದುಡಿಮೆಗೆ ಹೆಸರಾಗಿದ್ದ ಇವರು ಊರುಗಳಲ್ಲಿ ತೋಟಿಗಳಾಗಿ, ಶವಸಂಸ್ಕಾರ ಮತ್ತು ದೇವರ ಉತ್ಸವಗಳಲ್ಲಿ ತಮಟೆ ಬಾರಿಸುವ ಸಾಂಪ್ರದಾಯಿಕ ಕಸುಬುಗಳಲ್ಲಿ ಬೆಸೆದು ಹೋಗಿದ್ದರು."[೩೪]

ಮಾದಿಗ ಸಮುದಾಯದ ಚರಿತ್ರೆಯ ಮೂಲ ಕುರಿತು ಶೋಧಿಸಿರುವುದು ಕಡಿಮೆ. ಆದರೆ ಈ ಸಮುದಾಯದ "ಚರಿತ್ರೆಯು ಇತ್ತ ಪೂರ್ತಿ ಪುರಾಣಗಳೂ ಅಲ್ಲದ, ಅತ್ತ ಐತಿಹ್ಯಗಳೂ ಅಲ್ಲದ, ಜಾನಪದವೂ ಅಲ್ಲದ, ಇತಿಹಾಸವೂ ಅಲ್ಲದ, ಪುರಾಣ ಚರಿತ್ರೆ, ಐತಿಹ್ಯ-ಸಾಹಿತ್ಯ ರಚನೆಗಳನ್ನು ಎರಕ ಹೊಯ್ದು ಅಕೃತಿಯಂತೆ ಕಾಣಿಸುತ್ತದೆ."[೩೫] ಈ ಸಮುದಾಯ ಬಹುದೊಡ್ಡ ಪುರಾಣ ಪರಂಪರೆಯನ್ನು ಹೊಂದಿದೆ. ದೊಡ್ಡ ಚರಿತ್ರೆದ್ದರೂ ಅಂತಹ ಚರಿತ್ರೆಯನ್ನು ದಾಖಲಿಸುವ ಹಾಗೂ ಅವರ ಬಗ್ಗೆ ತಿಳಿಸುವ ಪ್ರಯತ್ನ ಯಾವ ಶಾಸನಗಳಲ್ಲಿ ತಿಳಿಯುವುದಿಲ್ಲ. ಆದುದರಿಂದ ಇಂತಹ ಸಮಸ್ಯೆಗಳನ್ನು ಬಿಡಿಸಿಕೊಂಡು ನಿಜಗುರುತುಗಳನ್ನು ತಿಳಿಯಬೇಕಾಗಿದೆ. ಸಾಮಾಜಿಕವಾಗಿ, ಧಾರ್ಮಿಕವಾಗಿ, ಐತಿಹಾಸಿಕ ಸಂಗತಿಗಳ ಸತ್ಯಾಸತ್ಯತೆಗಳ ಬಗ್ಗೆ ಹೆಚ್ಚು ಅಧ್ಯಯನಗಳನ್ನು ಮಾಡುವುದರ ಮೂಲಕ ನಿಜಚರಿತ್ರೆಯನ್ನು ತಿಳಿಯಲು ಸಾಧ್ಯ.

೨.೩. ಜನಸಂಖ್ಯೆ

ಕರ್ನಾಟಕದಲ್ಲಿ ಪರಿಶಿಷ್ಟ ಜಾತಿಗಳಲ್ಲಿ ಮಾದಿಗ ಮತ್ತು ಹೊಲೆಯ ಸಮುದಾಯವು ಅತಿ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವುದು ಕಂಡುಬರುತ್ತದೆ. ಆದರೆ ಅಧ್ಯಯನಕ್ಕೆ ಚಿತ್ರದುರ್ಗ ಜಿಲ್ಲೆಯನ್ನು ಮಾತ್ರ ಆಯ್ಕೆ ಮಾಡಿಕೊಂಡಿರುವುದರಿಂದ ಚಿತ್ರದುರ್ಗ ಜಿಲ್ಲೆಯಲ್ಲಿ ಬರುವ ಆರು ತಾಲ್ಲೂಕುಗಳನ್ನು

ಆಯ್ಕೆ ಮಾಡಿಕೊಂಡಿದ್ದೇನೆ. ಈ ಆರು ತಾಲ್ಲೂಕಿನಲ್ಲಿ ಎರಡು ಗ್ರಾಮಗಳನ್ನು ಆಯ್ಕೆ ಮಾಡಿಕೊಂಡು ಒಟ್ಟು ೭೨೦ ಕುಟುಂಬಗಳನ್ನು ಸಂದರ್ಶನ ಮಾಡಿ ಮಾಹಿತಿಯನ್ನು ಕ್ರೋಢಿಕರಿಸಲಾಗಿದೆ.

"೨೦೧೧ರ ಜನಗಣತಿಯ ಪ್ರಕಾರ ಭಾರತವು ಒಟ್ಟು ೧,೨೧,೦೫,೬೯,೫೭೩ ಜನಸಂಖ್ಯೆಯನ್ನು ಹೊಂದಿದೆ. ಇದರಲ್ಲಿ ಪುರುಷರು ೬೨,೩೧,೨೧,೮೪೩ರಷ್ಟಿದ್ದರೆ, ಮಹಿಳೆಯರು ೫೮,೭೪,೪೭,೭೩೦ರಷ್ಟಿದ್ದಾರೆ. ಭಾರತದಲ್ಲಿ ಗ್ರಾಮೀಣ ಪ್ರದೇಶ ಒಟ್ಟು ೮೩,೩೪,೬೩,೪೪೮ ರಷ್ಟು ಜನಸಂಖ್ಯೆಯನ್ನು ಹೊಂದಿದೆ. ಇದರಲ್ಲಿ ಪುರುಷರು ೪೨,೭೬,೩೨,೬೪೩ ರಷ್ಟಿದ್ದರೆ, ಮಹಿಳೆಯರು ೪೦,೫೮,೩೦,೮೦೫ರಷ್ಟಿದ್ದಾರೆ. ಭಾರತದಲ್ಲಿ ನಗರ ಪ್ರದೇಶದಲ್ಲಿ ಒಟ್ಟು ೩೭,೭೧,೦೬,೧೨೫ ರಷ್ಟು ಜನಸಂಖ್ಯೆಯನ್ನು ಹೊಂದಿದೆ. ಇದರಲ್ಲಿ ಪುರುಷರು ೧೯,೫೪,೮೯,೨೦೦ ರಷ್ಟಿದ್ದರೆ, ಮಹಿಳೆಯರು ೧೮,೧೬,೧೬,೯೨೫ರಷ್ಟಿದ್ದಾರೆ. ಇದರಲ್ಲಿ ಪರಿಶಿಷ್ಟ ಜಾತಿಯ ಒಟ್ಟು ೨೦,೧೩,೭೮,೦೮೬ ಜನಸಂಖ್ಯೆಯನ್ನು ಹೊಂದಿದೆ. ಪುರುಷರು ೧೦,೩೫,೩೫,೧೬೫ರಷ್ಟಿದ್ದರೆ, ಮಹಿಳೆಯರು ೯,೭೮,೪೨,೯೨೧ರಷ್ಟಿದ್ದಾರೆ. ಭಾರತದಲ್ಲಿ ಗ್ರಾಮೀಣ ಪ್ರದೇಶ ಪರಿಶಿಷ್ಟ ಜಾತಿಯ ಒಟ್ಟು ೧೫,೩೮,೫೦,೫೬೨ರಷ್ಟು ಜನಸಂಖ್ಯೆಯನ್ನು ಹೊಂದಿದೆ. ಇದರಲ್ಲಿ ಪುರುಷರು ೭,೯೧,೧೮,೧೩೮ರಷ್ಟಿದ್ದರೆ, ಮಹಿಳೆಯರು ೭,೪೭,೩೨,೪೨೪ರಷ್ಟಿದ್ದಾರೆ. ಭಾರತದಲ್ಲಿ ನಗರ ಪ್ರದೇಶದಲ್ಲಿ ಪರಿಶಿಷ್ಟ ಜಾತಿಯ ಒಟ್ಟು ೪,೭೫,೨೭,೫೨೪ರಷ್ಟು ಜನಸಂಖ್ಯೆಯನ್ನು ಹೊಂದಿದೆ. ಇದರಲ್ಲಿ ಪುರುಷರು ೨,೪೪,೧೭,೦೨೭ರಷ್ಟಿದ್ದರೆ, ಮಹಿಳೆಯರು ೨,೩೧,೧೦,೪೯೭ರಷ್ಟಿದ್ದಾರೆ."[೩೬]

"೨೦೧೧ರ ಜನಗಣತಿ ಪ್ರಕಾರ ಕರ್ನಾಟಕವು ಒಟ್ಟು ೬,೧೦,೯೫,೨೯೭ ಜನಸಂಖ್ಯೆಯನ್ನು ಹೊಂದಿದೆ. ಇದರಲ್ಲಿ ಪುರುಷರು ೩,೦೯,೬೬,೬೫೭ರಷ್ಟಿದ್ದರೆ. ಮಹಿಳೆಯರು ೩,೦೧,೨೮,೬೪೦ರಷ್ಟಿದ್ದಾರೆ. ಕರ್ನಾಟಕದಲ್ಲಿ ಗ್ರಾಮೀಣ ಪ್ರದೇಶ ಒಟ್ಟು ೩,೭೪,೬೯,೩೩೫ ಜನಸಂಖ್ಯೆಯನ್ನು ಹೊಂದಿದೆ. ಇದರಲ್ಲಿ ಪುರುಷರು ೧,೮೯,೨೯,೩೫೪ರಷ್ಟಿದ್ದರೆ. ಮಹಿಳೆಯರು ೧,೮೫,೩೯,೯೮೧ರಷ್ಟಿದ್ದಾರೆ. ಕರ್ನಾಟಕದಲ್ಲಿ ನಗರ ಪ್ರದೇಶದಲ್ಲಿ ವಾಸಮಾಡುವ ಜನರ ಸಂಖ್ಯೆ ಒಟ್ಟು ೨,೩೬,೨೫,೯೬೨. ಇದರಲ್ಲಿ ಪುರುಷರು ೧,೨೦,೩೭,೩೦೩ರಷ್ಟಿದ್ದರೆ ಮಹಿಳೆಯರು ೧,೧೫,೮೮,೬೫೯ರಷ್ಟಿದ್ದಾರೆ.

ಕರ್ನಾಟಕದಲ್ಲಿ ಪರಿಶಿಷ್ಟ ಜಾತಿಯ (೨೦೧೧) ಒಟ್ಟು ಜನಸಂಖ್ಯೆಯು ೧,೦೪,೭೪,೯೯೨ರಷ್ಟಿದ್ದು ಪುರುಷರು ೫೨,೬೪,೫೪೫ ಹಾಗೂ ಮಹಿಳೆಯರು ೫೨,೧೦,೪೪೭ರಷ್ಟಿದ್ದಾರೆ. ಕರ್ನಾಟಕದಲ್ಲಿ ಗ್ರಾಮೀಣ ಪ್ರದೇಶ ಪರಿಶಿಷ್ಟ ಜಾತಿಯ ಒಟ್ಟು ೭೪,೯೫,೭೬೩ ಜನಸಂಖ್ಯೆಯನ್ನು ಹೊಂದಿದೆ. ಇದರಲ್ಲಿ ಪುರುಷರು ೩೭,೭೧,೫೦೬ರಷ್ಟಿದ್ದರೆ, ಮಹಿಳೆಯರು ೩೭,೨೪,೨೫೭ರಷ್ಟಿದ್ದಾರೆ. ಕರ್ನಾಟಕದಲ್ಲಿ ನಗರ ಪ್ರದೇಶದಲ್ಲಿ ವಾಸಮಾಡುವ ಪರಿಶಿಷ್ಟ ಜಾತಿಯವರು ಒಟ್ಟು ೨೯,೭೯,೨೨೯ ಇದ್ದಾರೆ. ಇದರಲ್ಲಿ ಪುರುಷರು ೧೪,೯೩,೦೩೯ರಷ್ಟಿದ್ದರೆ ಮಹಿಳೆಯರು ೧೪,೮೬,೧೯೦ರಷ್ಟಿದ್ದಾರೆ.

೨೦೧೧ರ ಜನಗಣತಿ ಪ್ರಕಾರ ಚಿತ್ರದುರ್ಗ ಜಿಲ್ಲೆಯ ಒಟ್ಟು ಜನಸಂಖ್ಯೆಯು ೧೬,೫೯,೪೫೬ರಷ್ಟಿದ್ದು. ಇದರಲ್ಲಿ ಪುರುಷರು ೮,೪೦,೮೪೩ ರಷ್ಟಿದ್ದಾರೆ. ಮಹಿಳೆಯರು ೮,೧೮,೬೧೩ರಷ್ಟಿದ್ದಾರೆ. ಚಿತ್ರದುರ್ಗ

ಜಿಲ್ಲೆಯ ಪರಿಶಿಷ್ಟ ಜಾತಿಯು ಜನಸಂಖ್ಯೆಯು ೩,೮೯,೧೧೭ರಷ್ಟಿದೆ. ಇದರಲ್ಲಿ ಪುರುಷರು ೧,೯೬,೮೧೯ ಹಾಗೂ ಮಹಿಳೆಯರು ೧,೯೨,೨೯೮ರಷ್ಟಿದ್ದಾರೆ. ಚಿತ್ರದುರ್ಗ ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ೩,೩೩,೫೭೧ ಜನಸಂಖ್ಯೆಯನ್ನು ಪರಿಶಿಷ್ಟ ಜಾತಿಯವರನ್ನು ಹೊಂದಿದೆ. ಇದರಲ್ಲಿ ಪುರುಷರು ೧,೬೯,೧೬೦ರಷ್ಟಿದ್ದಾರೆ ಹಾಗೂ ಮಹಿಳೆಯರು ೧,೬೪,೪೧೧ರಷ್ಟಿದ್ದಾರೆ. ಚಿತ್ರದುರ್ಗ ಜಿಲ್ಲೆಯ ನಗರ ಪ್ರದೇಶದಲ್ಲಿ ೫೫,೫೪೬ ಪರಿಶಿಷ್ಟ ಜಾತಿಯ ಜನಸಂಖ್ಯೆ. ಇದರಲ್ಲಿ ಪುರುಷರು ೨೭,೬೫೯ರಷ್ಟಿದ್ದಾರೆ ಹಾಗೂ ಮಹಿಳೆಯರು ೨೭,೮೮೭ರಷ್ಟಿದ್ದಾರೆ.

ಚಿತ್ರದುರ್ಗದಲ್ಲಿ ಪರಿಶಿಷ್ಟ ಜಾತಿಯ ಜನಸಂಖ್ಯೆಯಲ್ಲಿ ಮಾದಿಗ ಸಮುದಾಯದ ೩೮,೭೪,೮೫೫ರಷ್ಟಿದೆ. ಪುರುಷರು ೧೯,೩೮,೨೧೬ ಹಾಗೂ ಮಹಿಳೆಯರು ೧೯,೩೫,೬೫೯ರಷ್ಟಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಇವರು ಒಟ್ಟು ೭,೨೬,೪೦೧ರಷ್ಟಿದ್ದು ಇದರಲ್ಲಿ ಪುರುಷರು ೩,೬೩,೮೩೬ ಹಾಗೂ ಮಹಿಳೆಯರು ೩,೬೨,೫೬೫ರಷ್ಟಿದ್ದಾರೆ. ನಗರ ಪ್ರದೇಶದಲ್ಲಿ ಒಟ್ಟು ಜನಸಂಖ್ಯೆಯು ೨,೨೭,೫೧೨ ರಷ್ಟಿದ್ದು ಇದರಲ್ಲಿ ಪುರುಷರು ೧,೧೩,೪೬೩ರಷ್ಟಿದ್ದಾರೆ ಹಾಗೂ ಮಹಿಳೆಯರು ೧,೧೪,೦೪೯ರಷ್ಟಿದ್ದಾರೆ."[೩೭]

ಕೋಷ್ಟಕ: ೩.೧, ಸಮೀಕ್ಷೆಗೊಳಪಡಿಸಿದ ಚಿತ್ರದುರ್ಗ ಜಿಲ್ಲೆಯ ಮಾದಿಗ ಸಮುದಾಯದ ತಾಲೂಕುವಾರು, ನೆಲೆಗಳು ಮತ್ತು ಕುಟುಂಬವಾರು, ಲಿಂಗವಾರು ಜನಸಂಖ್ಯೆ, ಕುಟುಂಬಗಾತ್ರ ಪ್ರಮಾಣದ ಸಮಗ್ರ ಪಟ್ಟಿ.

ಕ್ರ.ಸಂ.	ತಾಲೂಕುಗಳು	ನೆಲೆಗಳು	ಕುಟುಂಬ	ಜನಸಂಖ್ಯೆ			ಕುಟುಂಬ
				ಗಂಡು	ಹೆಣ್ಣು	ಒಟ್ಟು	ಗಾತ್ರ
೧	ಚಳ್ಳಕೆರೆ	ಅಬ್ಬೇನಹಳ್ಳಿ	೬೦	೧೫೪	೧೨೫	೨೭೯	೪.೬೫
		ಹನುಮಂತನಹಳ್ಳಿ	೬೦	೧೫೩	೧೪೧	೨೯೪	೪.೯
		ಒಟ್ಟು	೧೨೦	೩೦೭	೨೬೬	೫೭೩	೪.೭೮
೨	ಚಿತ್ರದುರ್ಗ	ಚಿತ್ರದುರ್ಗ	೬೦	೧೬೧	೧೩೮	೨೯೯	೪.೯೮
		ರಂಗನಹಳ್ಳಿ	೬೦	೧೫೮	೧೪೫	೩೦೩	೫.೦೫
		ಒಟ್ಟು	೧೨೦	೩೧೯	೨೮೩	೬೦೨	೫.೦೨
೩	ಮೊಳಕಾಲ್ಮೂರು	ಕೋನಸಾಗರ	೬೦	೧೪೯	೧೬೯	೩೧೮	೫.೩
		ನೇರ್ಲಹಳ್ಳಿ	೬೦	೧೭೦	೧೭೦	೩೪೦	೫.೬೭
		ಒಟ್ಟು	೧೨೦	೩೧೯	೩೩೯	೬೫೮	೫.೪೮
೪	ಹಿರಿಯೂರು	ಬುರುಜನರೂಪ್ಪ	೬೦	೧೪೮	೧೩೨	೨೮೦	೪.೬೭
		ಹೇಮದಳ	೬೦	೧೨೫	೧೨೪	೨೪೯	೪.೧೫

		ಒಟ್ಟು	೧೨೦	೨೭೩	೨೫೬	೫೨೯	೪.೪೧
೫	ಹೊಳಲ್ಕೆರೆ	ಮುತ್ತುಗನೂರು	೬೦	೧೪೦	೧೨೧	೨೬೧	೪.೩೫
		ಹೊಳಲ್ಕೆರೆ	೬೦	೧೫೬	೧೩೩	೨೮೯	೪.೮೨
		ಒಟ್ಟು	೧೨೦	೨೯೬	೨೫೪	೫೫೦	೪.೫೮
೬	ಹೊಸದುರ್ಗ	ಕರಿದೊಡ್ಡಹಟ್ಟಿ	೬೦	೧೪೫	೧೪೯	೨೯೪	೪.೯
		ಗೂಳಿಹಟ್ಟಿ	೬೦	೧೬೯	೧೩೯	೩೦೮	೫.೧೩
		ಒಟ್ಟು	೧೨೦	೩೧೪	೨೮೮	೬೦೨	೫.೦೨
	ಒಟ್ಟಾರೆ ಚಿತ್ರದುರ್ಗ ಜಿಲ್ಲೆ		೭೨೦	೧೮೨೮	೧೬೮೬	೩೫೧೪	೪.೮೮

ಕೋಷ್ಟಕ ಸಂಖ್ಯೆ ೩.೧ರಲ್ಲಿ ಪ್ರಸ್ತುತ ಅಧ್ಯಯನದ ಪ್ರಕಾರ ಚಿತ್ರದುರ್ಗ ಜಿಲ್ಲೆಯ ಆರು ತಾಲೂಕುಗಳ ಹನ್ನೆರಡು ಗ್ರಾಮಗಳಲ್ಲಿ ಒಟ್ಟು ೭೨೦ ಕುಟುಂಬಗಳಲ್ಲಿ ವಾಸವಾಗಿರುವ ಮಾದಿಗ ಸಮುದಾಯದ ಲಿಂಗವಾರು ಜನಸಂಖ್ಯೆ ಹಾಗೂ ಕುಟುಂಬ ಗಾತ್ರ ಪ್ರಮಾಣವನ್ನು ತಿಳಿಸಲಾಗಿದೆ. ಇದರಲ್ಲಿ ಲಿಂಗವಾರು ಜನಸಂಖ್ಯೆ ಒಟ್ಟು ೩೫೧೪ರಷ್ಟಿದೆ. ಪುರುಷರ ಪ್ರಮಾಣವು ೧೮೨೮ರಷ್ಟಿದ್ದರೆ, ಮಹಿಳೆಯರ ಪ್ರಮಾಣ ೧೬೮೬ರಷ್ಟಿದೆ. ಕುಟುಂಬಗಾತ್ರ ಪ್ರಮಾಣವು ಶೇಕಡ ೪.೮೮ರಷ್ಟಿದೆ. ಇದರ ಪ್ರಕಾರ ಪ್ರತಿಯೊಂದು ತಾಲ್ಲೂಕಿನ ಲಿಂಗವಾರು ಜನಸಂಖ್ಯೆ, ಕುಟುಂಬ ಗಾತ್ರ ಪ್ರಮಾಣ ಈ ಕೆಳಗಿನಂತಿದೆ.

ಚಳ್ಳಕೆರೆ ತಾಲೂಕಿನ ಎರಡು ಗ್ರಾಮಗಳಾದ ಅಬ್ಬೇನಹಳ್ಳಿ, ಹನುಮಂತನಹಳ್ಳಿಯಲ್ಲಿ ಮಾದಿಗ ಸಮುದಾಯದ ಲಿಂಗವಾರು ಜನಸಂಖ್ಯೆ ಹಾಗೂ ಕುಟುಂಬ ಗಾತ್ರ ಪ್ರಮಾಣವನ್ನು ತಿಳಿಸಲಾಗಿದೆ. ಇದರಲ್ಲಿ ಲಿಂಗವಾರು ಜನಸಂಖ್ಯೆ ಒಟ್ಟು ೫೭೩ರಷ್ಟಿದೆ. ಪುರುಷರ ಪ್ರಮಾಣವು ೩೦೭ರಷ್ಟಿದ್ದರೆ, ಮಹಿಳೆಯರ ಪ್ರಮಾಣ ೨೬೬ರಷ್ಟಿದೆ. ಕುಟುಂಬ ಗಾತ್ರ ಪ್ರಮಾಣವು ಶೇಕಡ ೪.೭೮ರಷ್ಟಿದೆ.

ಚಿತ್ರದುರ್ಗ ತಾಲೂಕಿನ ಎರಡು ಗ್ರಾಮಗಳಾದ ಚಿತ್ರದುರ್ಗ, ರಂಗನಹಳ್ಳಿಯಲ್ಲಿ ಕಂಡುಬರುವ ಮಾದಿಗ ಸಮುದಾಯದ ಲಿಂಗವಾರು ಜನಸಂಖ್ಯೆ ಹಾಗೂ ಕುಟುಂಬ ಗಾತ್ರ ಪ್ರಮಾಣವನ್ನು ತಿಳಿಸಲಾಗಿದೆ. ಇದರಲ್ಲಿ ಲಿಂಗವಾರು ಜನಸಂಖ್ಯೆ ಒಟ್ಟು ೬೦೨ರಷ್ಟಿದೆ. ಪುರುಷರ ಪ್ರಮಾಣವು ೩೧೯ರಷ್ಟಿದ್ದರೆ, ಮಹಿಳೆಯರ ಪ್ರಮಾಣ ೨೮೩ರಷ್ಟಿದೆ. ಕುಟುಂಬ ಗಾತ್ರ ಪ್ರಮಾಣವು ಶೇಕಡ ೫.೦೨ರಷ್ಟಿದೆ. ಈ ತಾಲೂಕಿನಲ್ಲಿ ಕುಟುಂಬದ ಗಾತ್ರದಲ್ಲಿ ಹೆಚ್ಚು ಇರುವುದು ಕಂಡುಬರುತ್ತದೆ.

ಮೊಳಕಾಲ್ಮೂರು ತಾಲೂಕಿನ ಎರಡು ಗ್ರಾಮಗಳಾದ ಕೋನಸಾಗರ, ನೇರ್ಲಹಳ್ಳಿಯಲ್ಲಿ ಕಂಡುಬರುವ ಮಾದಿಗ ಸಮುದಾಯದ ಲಿಂಗವಾರು ಜನಸಂಖ್ಯೆ ಹಾಗೂ ಕುಟುಂಬ ಗಾತ್ರ ಪ್ರಮಾಣವನ್ನು ತಿಳಿಸಲಾಗಿದೆ. ಇದರಲ್ಲಿ ಲಿಂಗವಾರು ಜನಸಂಖ್ಯೆ ಒಟ್ಟು ೬೫೮ರಷ್ಟಿದೆ. ಪುರುಷರ ಪ್ರಮಾಣವು ೩೧೯ರಷ್ಟಿದ್ದರೆ, ಮಹಿಳೆಯರ ಪ್ರಮಾಣ ೩೩೯ರಷ್ಟಿದೆ. ಕುಟುಂಬ ಗಾತ್ರ ಪ್ರಮಾಣವು ಶೇಕಡ ೫.೪೮ರಷ್ಟಿದೆ. ಈ ತಾಲ್ಲೂಕಿನಲ್ಲಿ ಲಿಂಗವಾರು ಜನಸಂಖ್ಯೆಯಲ್ಲಿ ಮಹಿಳೆಯರೇ ಹೆಚ್ಚು ಹಾಗೂ

ಎಲ್ಲಾ ತಾಲೂಕುಗಳಿಗೆ ಹೋಲಿಕೆ ಮಾಡಿ ನೋಡಿದರೆ ಕುಟುಂಬದ ಗಾತ್ರ ಹೆಚ್ಚಾಗಿ ಇರುವುದು ನೋಡಬಹುದು.

ಹಿರಿಯೂರು ತಾಲೂಕಿನ ಎರಡು ಗ್ರಾಮಗಳಾದ ಬುರುಜನರೂಪ್ಪ, ಹೇಮದಳಗಳಲ್ಲಿ ಕಂಡುಬರುವ ಮಾದಿಗ ಸಮುದಾಯದ ಲಿಂಗವಾರು ಜನಸಂಖ್ಯೆ ಹಾಗೂ ಕುಟುಂಬ ಗಾತ್ರ ಪ್ರಮಾಣವನ್ನು ತಿಳಿಸಲಾಗಿದೆ. ಇದರಲ್ಲಿ ಲಿಂಗವಾರು ಜನಸಂಖ್ಯೆ ಒಟ್ಟು ೩೫೧೪ರಷ್ಟಿದೆ. ಪುರುಷರ ಪ್ರಮಾಣವು ೨೭೩ರಷ್ಟಿದ್ದರೆ, ಮಹಿಳೆಯರ ಪ್ರಮಾಣ ೨೫೬ರಷ್ಟಿದೆ. ಕುಟುಂಬ ಗಾತ್ರ ಪ್ರಮಾಣವು ಶೇಕಡ ೪.೪೧ರಷ್ಟಿದೆ. ಈ ತಾಲ್ಲೂಕಿನಲ್ಲಿ ಲಿಂಗವಾರು ಜನಸಂಖ್ಯೆಯಲ್ಲಿ ಪುರುಷರ ಸಂಖ್ಯೆ ಇರುವುದನ್ನು ಹೇಳಬಹುದು.

ಹೊಳಲ್ಕೆರೆ ತಾಲೂಕಿನ ಎರಡು ಗ್ರಾಮಗಳಾದ ಮುತ್ತುಗನೂರು, ಹೊಳಲ್ಕೆರೆಗಳಲ್ಲಿ ಕಂಡುಬರುವ ಮಾದಿಗ ಸಮುದಾಯದ ಲಿಂಗವಾರು ಜನಸಂಖ್ಯೆ ಹಾಗೂ ಕುಟುಂಬ ಗಾತ್ರ ಪ್ರಮಾಣ ಹೀಗಿದೆ. ಇದರಲ್ಲಿ ಲಿಂಗವಾರು ಜನಸಂಖ್ಯೆ ಒಟ್ಟು ೫೫೦ರಷ್ಟಿದೆ. ಪುರುಷರ ಪ್ರಮಾಣವು ೨೯೬ರಷ್ಟಿದ್ದರೆ, ಮಹಿಳೆಯರ ಪ್ರಮಾಣ ೨೫೪ರಷ್ಟಿದೆ. ಕುಟುಂಬ ಗಾತ್ರ ಪ್ರಮಾಣವು ಶೇಕಡ ೪.೫೮ರಷ್ಟಿದೆ. ಈ ತಾಲ್ಲೂಕಿನಲ್ಲಿ ಮುಖ್ಯವಾಗಿ ಲಿಂಗವಾರು ಜನಸಂಖ್ಯೆಯಲ್ಲಿ ಪುರುಷ ಮತ್ತು ಮಹಿಳೆಯರ ನಡುವೆ ಸ್ವಲ್ಪಭಿನ್ನವಾಗಿದೆ. ಲಿಂಗಾನುಪಾತದಲ್ಲಿ ಇನ್ನೂ ಸ್ವಲ್ಪ ಅಭಿವೃದ್ಧಿಯಾಗಬೇಕಾಗಿದೆ ಮತ್ತು ಕುಟುಂಬ ಗಾತ್ರದಲ್ಲಿ ಒಂದು ಕುಟುಂಬದಲ್ಲಿ ಶೇಕಡ ೪.೫೮ರಷ್ಟು ಪ್ರಮಾಣ ಇರುವುದು ಕಂಡುಬರುತ್ತದೆ.

ಹೊಸದುರ್ಗ ತಾಲೂಕಿನ ಎರಡು ಗ್ರಾಮಗಳಾದ ಕರಿದೊಡ್ಡಹಟ್ಟಿ, ಗೂಳಿಹಟ್ಟಿಗಳಲ್ಲಿ ಕಂಡುಬರುವ ಮಾದಿಗ ಸಮುದಾಯದ ಲಿಂಗವಾರು ಜನಸಂಖ್ಯೆ ಹಾಗೂ ಕುಟುಂಬಗಾತ್ರ ಪ್ರಮಾಣ ಹೀಗಿದೆ. ಲಿಂಗವಾರು ಜನಸಂಖ್ಯೆ ಒಟ್ಟು ೬೦೨ರಷ್ಟಿದೆ. ಪುರುಷರ ಪ್ರಮಾಣವು ಶೇಕಡ ೩೧೪ಷ್ಟಿದ್ದರೆ, ಮಹಿಳೆಯರ ಪ್ರಮಾಣ ಶೇಕಡ ೨೮೮ರಷ್ಟಿದೆ. ಕುಟುಂಬ ಗಾತ್ರ ಪ್ರಮಾಣವು ಶೇಕಡ ೫.೦೨ರಷ್ಟಿದೆ. ಈ ತಾಲ್ಲೂಕಿನಲ್ಲಿ ಲಿಂಗವಾರು ಜನಸಂಖ್ಯೆಯು ಪುರುಷರ ಪ್ರಮಾಣ ಹೆಚ್ಚಿದು ಮಹಿಳೆಯರ ಪ್ರಮಾಣ ಕಡಿಮೆಯಿದೆ ಹಾಗೂ ಕುಟುಂಬ ಗಾತ್ರ ಪ್ರಮಾಣವು ಶೇಕಡ ೫.೦೨ರಷ್ಟು ಪ್ರತಿಯೊಂದು ಕುಟುಂಬದಲ್ಲಿ ಐದು ಜನಕ್ಕಿಂತ ಹೆಚ್ಚಿನ ಜನರು ವಾಸ ಮಾಡುತ್ತಿದ್ದಾರೆ.


ಕೋಷ್ಟಕ: ೩.೨, ಸಮೀಕ್ಷೆಗೊಳಪಡಿಸಿದ ಚಿತ್ರದುರ್ಗ ಜಿಲ್ಲೆಯ ಮಾದಿಗ ಸಮುದಾಯದ ತಾಲೂಕುವಾರು ಲಿಂಗವಾರು ಜನಸಂಖ್ಯೆಯ ಹಾಗೂ ಕುಟುಂಬ ಗಾತ್ರ

ತಾಲೂಕುಗಳು	ಕುಟುಂಬ	ಜನಸಂಖ್ಯೆ			ಕುಟುಂಬ ಗಾತ್ರ
		ಗಂಡು	ಹೆಣ್ಣು	ಒಟ್ಟು	
ಚಳ್ಳಕೆರೆ	೧೨೦	೩೦೭	೨೬೬	೫೭೩	೪.೭೮
ಚಿತ್ರದುರ್ಗ	೧೨೦	೩೧೯	೨೮೩	೬೦೨	೫.೦೨

ಮೊಳಕಾಲ್ಮೂರು	೧೨೦	೩೧೯	೩೩೯	೬೫೮	೫.೪೮
ಹಿರಿಯೂರು	೧೨೦	೨೮೩	೨೫೬	೫೩೯	೪.೪೧
ಹೊಳಲ್ಕೆರೆ	೧೨೦	೨೯೬	೨೫೪	೫೫೦	೪.೫೮
ಹೊಸದುರ್ಗ	೧೨೦	೩೧೪	೨೮೮	೬೦೨	೫.೦೨
ಒಟ್ಟು	**೭೨೦**	**೧೮೨೮**	**೧೬೮೬**	**೩೫೧೪**	

ಕೋಷ್ಟಕ ೩.೨ರಲ್ಲಿ ಪ್ರಸ್ತುತ ಅಧ್ಯಯನದ ಪ್ರಕಾರ ಚಿತ್ರದುರ್ಗ ಜಿಲ್ಲೆಯ ಆರು ತಾಲ್ಲೂಕಿನ ಹನ್ನೆರಡು ಗ್ರಾಮಗಳಲ್ಲಿ ಒಟ್ಟು ೭೨೦ ಕುಟುಂಬಗಳನ್ನು ಸಮೀಕ್ಷೆಗೊಳಪಡಿಸಿದ ಚಿತ್ರದುರ್ಗ ಜಿಲ್ಲೆಯ ಮಾದಿಗ ಸಮುದಾಯದ ಲಿಂಗವಾರು ಜನಸಂಖ್ಯೆ ಹಾಗೂ ಕುಟುಂಬ ಗಾತ್ರ ಪ್ರಮಾಣವನ್ನು ತಿಳಿಯಲಾಗಿದೆ. ಇದರಲ್ಲಿ ಲಿಂಗವಾರು ಜನಸಂಖ್ಯೆ ಒಟ್ಟು ೩೫೧೪ರಷ್ಟಿದೆ. ಪುರುಷರ ಪ್ರಮಾಣವು ಶೇಕಡ ೧೮೨೮ರಷ್ಟಿದ್ದರೆ, ಮಹಿಳೆಯರ ಪ್ರಮಾಣ ಶೇಕಡ ೧೬೮೬ರಷ್ಟಿದೆ. ಹಾಗೂ ಕುಟುಂಬ ಗಾತ್ರ ಪ್ರಮಾಣವು ಶೇಕಡ ೪.೮೮ರಷ್ಟಿದೆ.

ವೃತ್ತಚಿತ್ರ: ೩.೧, ಸಮೀಕ್ಷೆಗೊಳಪಡಿಸಿದ ಚಿತ್ರದುರ್ಗ ಜಿಲ್ಲೆಯ ಮಾದಿಗ ಸಮುದಾಯದ ತಾಲೂಕುವಾರು ಜನಸಂಖ್ಯೆಯ ಪ್ರಮಾಣ



ವೃತ್ತಚಿತ್ರ ೩.೧ರಲ್ಲಿ ಪ್ರಸ್ತುತ ಅಧ್ಯಯನದ ಪ್ರಕಾರ ಚಿತ್ರದುರ್ಗ ಜಿಲ್ಲೆಯ ಆರು ತಾಲ್ಲೂಕಿನ ಹನ್ನೆರಡು ಗ್ರಾಮಗಳಲ್ಲಿ ಒಟ್ಟು ೭೨೦ ಕುಟುಂಬಗಳನ್ನು ಸಮೀಕ್ಷೆಗೊಳಪಡಿಸಿದ್ದು ಚಿತ್ರದುರ್ಗ ಜಿಲ್ಲೆಯ ಮಾದಿಗ ಸಮುದಾಯದ ಜನಸಂಖ್ಯೆ ಪ್ರಮಾಣವನ್ನು ತಿಳಿಸಲಾಗಿದೆ. ಇದರಲ್ಲಿ ಹೊಸದುರ್ಗ




ಪ್ರಮಾಣ ಶೇಕಡ ೧೭ರಷ್ಟಿದೆ. ಚಳ್ಳಕೆರೆ ತಾಲೂಕಿನ ಪ್ರಮಾಣವು ಶೇಕಡ ೧೬ರಷ್ಟಿದ್ದರೆ. ಚಿತ್ರದುರ್ಗ ತಾಲೂಕಿನ ಪ್ರಮಾಣ ಶೇಕಡ ೧೭ರಷ್ಟಿದೆ. ಮೊಳಕಾಲ್ಮೂರು ತಾಲೂಕಿನ ಪ್ರಮಾಣ ಶೇಕಡ ೧೯ರಷ್ಟಿದೆ. ಹಿರಿಯೂರು ತಾಲೂಕಿನ ಪ್ರಮಾಣ ಶೇಕಡ ೧೫ರಷ್ಟಿದೆ ಮತ್ತು ಹೊಳಲ್ಕೆರೆ ತಾಲೂಕಿನ ಪ್ರಮಾಣವು ಶೇಕಡ ೧೬ರಷ್ಟಿದೆ ಇರುವುದು ಅಧ್ಯಯನದಿಂದ ತಿಳಿದುಬರುತ್ತದೆ.

ಕೋಷ್ಟಕ: ೩.೩, ಸಮೀಕ್ಷೆಗೊಳಪಡಿಸಿದ ಚಿತ್ರದುರ್ಗ ಜಿಲ್ಲೆಯ ಮಾದಿಗ ಸಮುದಾಯದ ತಾಲೂಕುವಾರು ಲಿಂಗವಾರು ವಯೋಗುಂಪು.

ವಯೋಗುಂಪು	ಗಂಡು	ಹೆಣ್ಣು	ಒಟ್ಟು
೦–೫	೧೩೧	೧೧೯	೨೫೦
೬–೧೭	೪೦೨	೩೪೦	೭೪೨
೧೮–೪೦	೮೫೧	೮೪೬	೧೬೯೭
೪೧–೬೦	೩೧೧	೨೮೦	೫೯೧
೬೧+ರ ಮೇಲ್ಪಟ್ಟ	೧೩೩	೧೦೧	೨೩೪
ಒಟ್ಟು	**೧೮೨೮**	**೧೬೮೬**	**೩೫೧೪**

ಕೋಷ್ಟಕ ೩.೩ರಲ್ಲಿ ಪ್ರಸ್ತುತ ಅಧ್ಯಯನವು ಚಿತ್ರದುರ್ಗ ಜಿಲ್ಲೆಯ ಮಾದಿಗ ಸಮುದಾಯದ ಲಿಂಗವಾರು ವಯೋಗುಂಪು ಬಗ್ಗೆ ವಿಶ್ಲೇಷಿಸಲಾಗಿದೆ. ೦–೫ ಒಟ್ಟು ಗಂಡು ಮತ್ತು ಹೆಣ್ಣು ವಯೋಗುಂಪು ಪ್ರಮಾಣ ೭.೧೧ರಷ್ಟಿದೆ. ೬–೧೭ ಒಟ್ಟು ಗಂಡು ಮತ್ತು ಹೆಣ್ಣು ವಯೋಗುಂಪು ಪ್ರಮಾಣ ಶೇಕಡ ೨೧.೧೧ರಷ್ಟಿದೆ. ೧೮–೪೦ ಒಟ್ಟು ಗಂಡು ಮತ್ತು ಹೆಣ್ಣು ವಯೋಗುಂಪು ಪ್ರಮಾಣ ೪೮.೨೨ರಷ್ಟಿದೆ. ೪೧–೬೦ ಒಟ್ಟು ಗಂಡು ಮತ್ತು ಹೆಣ್ಣು ವಯೋಗುಂಪು ಪ್ರಮಾಣ ೧೬.೮೧ರಷ್ಟಿದೆ. ೬೧+ರ ಮೇಲ್ಪಟ್ಟ ಒಟ್ಟು ಗಂಡು ಮತ್ತು ಹೆಣ್ಣು ವಯೋಗುಂಪು ಪ್ರಮಾಣ ೬.೬೫ರಷ್ಟಿದೆ. ಇದರಲ್ಲಿ ೦–೫ರಿಂದ ೬೧+ರ ಮೇಲ್ಪಟ್ಟವರ ವಯೋಗುಂಪು ಗಂಡು ಒಟ್ಟು ಪ್ರಮಾಣ ೫೨.೦೨ರಷ್ಟಿದೆ. ೦–೫ರಿಂದ ೬೧+ರ ಮೇಲ್ಪಟ್ಟವರ ವಯೋಗುಂಪು ಹೆಣ್ಣು ಒಟ್ಟು ಪ್ರಮಾಣ ೪೭.೯೮ರಷ್ಟಿದೆ. ಇಲ್ಲಿ ಮುಖ್ಯವಾಗಿ ೧೮–೪೦ರ ವಯೋಗುಂಪಿನ ಗಂಡು ಮತ್ತು ಹೆಣ್ಣಿನ ಪ್ರಮಾಣ ಹೆಚ್ಚಿದೆ ಹಾಗೂ ಯುವಕರ ಪ್ರಮಾಣ ಹೆಚ್ಚಿದೆ ಎಂದು ಅಂಕಿಅಂಶಗಳ ಮೂಲಕ ತಿಳಿದುಬರುತ್ತದೆ.

ಲಂಬಚಿತ್ರ: ೩.೧, ಚಿತ್ರದುರ್ಗ ಜಿಲ್ಲೆಯ ತಾಲೂಕುವಾರು ಮಾದಿಗ ಸಮುದಾಯದ ತಾಲೂಕುವಾರು ಲಿಂಗವಾರು ವಯೋಗುಂಪು



	೦-೫	೬-೧೭	೧೮-೪೦	೪೧-೬೦	೬೧+ರ ಮೇಲಟ್ಟ
ಗಂಡು	೧೩೧	೪೦೨	೮೫೧	೩೧೧	೧೩೩
ಹೆಣ್ಣು	೧೧೯	೩೪೦	೮೪೬	೨೮೦	೧೦೧
ಒಟ್ಟು	೨೫೦	೭೪೨	೧೬೯೭	೫೯೧	೨೩೪

ಲಂಬಚಿತ್ರ ೩.೧ರಲ್ಲಿ ಚಿತ್ರದುರ್ಗ ಜಿಲ್ಲೆಯ ಮಾದಿಗ ಸಮುದಾಯದ ಲಿಂಗವಾರು ವಯೋಗುಂಪು ತಿಳಿಸಲಾಗಿದೆ. ಇದರ ಪ್ರಕಾರವಾಗಿ ೦-೫ ಗಂಡು ವಯೋಗುಂಪು ಪ್ರಮಾಣ ಶೇಕಡ ೫೨.೪ರಷ್ಟಿದೆ. ಹೆಣ್ಣು ವಯೋಗುಂಪು ಪ್ರಮಾಣ ಶೇಕಡ ೪೭.೬ರಷ್ಟಿದೆ. ೬-೧೭ ಗಂಡು ವಯೋಗುಂಪು ಪ್ರಮಾಣ ಶೇಕಡ ೫೪.೧೭ರಷ್ಟಿದೆ, ಹೆಣ್ಣು ವಯೋಗುಂಪು ಪ್ರಮಾಣ ಶೇಕಡ ೪೫.೮೩ರಷ್ಟಿದೆ. ೧೮-೪೦ ಗಂಡು ವಯೋಗುಂಪು ಪ್ರಮಾಣ ಶೇಕಡ ೫೦.೧೪ರಷ್ಟಿದೆ. ಹೆಣ್ಣು ವಯೋಗುಂಪು ಪ್ರಮಾಣ ಶೇಕಡ ೪೯.೮೬ರಷ್ಟಿದೆ. ೪೧-೬೦ ಗಂಡು ವಯೋಗುಂಪು ಪ್ರಮಾಣ ಶೇಕಡ ೫೨.೬೨ರಷ್ಟಿದ್ದರೆ. ಹೆಣ್ಣು ವಯೋಗುಂಪು ಪ್ರಮಾಣ ಶೇಕಡ ೪೭.೩೮ರಷ್ಟಿದೆ. ೬೧+ರ ಮೇಲ್ಪಟ್ಟ ಗಂಡು ವಯೋಗುಂಪು ಪ್ರಮಾಣ ಶೇಕಡ ೫೬.೫೯ರಷ್ಟಿದೆ. ಹೆಣ್ಣು ವಯೋಗುಂಪು ಪ್ರಮಾಣ ಶೇಕಡ ೪೩.೪೧ರಷ್ಟಿದೆ. ಇದರಲ್ಲಿ ೦-೫ರಿಂದ ೬೧+ರ ಮೇಲ್ಪಟ್ಟವರ ವಯೋಗುಂಪು ಗಂಡು ಪ್ರಮಾಣ ಶೇಕಡ ೫೨.೦೨ರಷ್ಟಿದೆ. ೦-೫ರಿಂದ ೬೧+ರ ಮೇಲ್ಪಟ್ಟವರ ವಯೋಗುಂಪು ಹೆಣ್ಣು ಒಟ್ಟು ಪ್ರಮಾಣ ಶೇಕಡ ೪೭.೯೮ರಷ್ಟಿದೆ. ಒಟ್ಟು ಗಂಡು ಮತ್ತು ಹೆಣ್ಣಿನ ಪ್ರಮಾಣ ಶೇಕಡ ೩೫೧೪ರಷ್ಟಿದೆ. ಇಲ್ಲಿ ಮುಖ್ಯವಾಗಿ ೧೮-೪೦ರ ವಯೋಗುಂಪಿನ ಗಂಡು ಮತ್ತು ಹೆಣ್ಣಿನ ಪ್ರಮಾಣ ಶೇಕಡವಾರು ಹೆಚ್ಚಿದೆ. ಸಮೀಕ್ಷೆಯ ಪ್ರಕಾರ ಯುವಕರ ಪ್ರಮಾಣ ಶೇಕಡವಾರು ಹೆಚ್ಚಿರುವುದು ಕಂಡುಬರುತ್ತದೆ.

ಕೋಷ್ಟಕ: ೩.೪, ಸಮೀಕ್ಷೆಗೊಳಪಡಿಸಿದ ಚಿತ್ರದುರ್ಗ ಜಿಲ್ಲೆಯ ತಾಲೂಕುವಾರು ಮಾದಿಗ ಸಮುದಾಯದ ಕುಟುಂಬವಾರು ಮನೆಗಳ ವಿವರ

ಕ್ರ.ಸಂ.	ತಾಲೂಕುಗಳು	ಕುಟುಂಬಗಳು	ಮನೆಗಳ ವಿವರ						
			ಗುಡಿಸಲು	ಟಿನ್	ಮಾಳಿಗೆ	ಆರ್‌ಸಿಸಿ	ಹೆಂಚಿನ	ಜನತಾ	ಬಾಡಿಗೆ
೧	ಚಳ್ಳಕೆರೆ	೧೨೦	೪	೩	೧	೫	೧೨	೯೧	೪
೨	ಚಿತ್ರದುರ್ಗ	೧೨೦	೩೪	೨	೬	೬೫	೧೧	೨	
೩	ಮೊಳಕಾಲ್ಮೂರು	೧೨೦	೨	೧		೧	೧೧೩	೩	
೪	ಹಿರಿಯೂರು	೧೨೦	೧	೫೪	೨	೩	೩	೫೫	೨
೫	ಹೊಳಲ್ಕೆರೆ	೧೨೦	೨	೬		೩	೮೧	೧೯	೯
೬	ಹೊಸದುರ್ಗ	೧೨೦	೭			೧೦೫	೮	೦	
	ಒಟ್ಟು	೭೨೦	೫೦	೬೩	೬	೧೭	೨೬೭	೨೯೭	೨೦

ಕೋಷ್ಟಕ ೩.೪ರಲ್ಲಿ ಸಮೀಕ್ಷೆಗೊಳಪಡಿಸಿದ ಚಿತ್ರದುರ್ಗ ಜಿಲ್ಲೆಯ ಮಾದಿಗ ಸಮುದಾಯದ ಕುಟುಂಬವಾರು ಮನೆಗಳ ಮಾದರಿಯನ್ನು ಈ ಕೋಷ್ಟಕದಲ್ಲಿ ವಿವರಿಸಲಾಗಿದೆ. ಒಟ್ಟು ೭೨೦ ಕುಟುಂಬಗಳನ್ನು ಸಮೀಕ್ಷೆಗೆ ಒಳಪಡಿಸಲಾಗಿದೆ. ಅದರಲ್ಲಿ ಸಮೀಕ್ಷೆಗೊಳಪಡಿಸಿದ ಚಳ್ಳಕೆರೆ ತಾಲೂಕಿನ ಮಾದಿಗ ಸಮುದಾಯದ ೧೨೦ ಕುಟುಂಬಗಳ ಪೈಕಿ ೫ ಕುಟುಂಬಗಳು ಸಣ್ಣ ಪ್ರಮಾಣದ ಕಾಂಕ್ರಿಟ್/ ಆರ್‌ಸಿಸಿ ಮನೆಗಳನ್ನು ಹೊಂದಿವೆ. ಇನ್ನುಳಿದ ೯೧ ಕುಟುಂಬಕ್ಕೆ ಪಿತ್ರಾರ್ಜಿತವಾಗಿ ಬಂದ ಸಣ್ಣ ಪ್ರಮಾಣದ ಮಣ್ಣಿನ ಜನತಾ ಮನೆಗಳಿವೆ. ಇನ್ನುಳಿದ ೪ ಕುಟುಂಬದವರು ಗುಡಿಸಲು ಮತ್ತು ಬಾಡಿಗೆ ಮನೆಗಳನ್ನು ಹೊಂದಿರುವುದಾಗಿ ತಿಳಿಸಿದ್ದಾರೆ. ಒಂದು ಕುಟುಂಬ ಮಾತ್ರ ಮಾಳಿಗೆ ಮನೆಯನ್ನು ಹೊಂದಿದೆ. ಇನ್ನುಳಿದ ೧೨ ಕುಟುಂಬಗಳು ಸರ್ಕಾರ ನೀಡುವ ಆಶ್ರಯ, ಅಂಬೇಡ್ಕರ್, ಇಂದಿರಾ ಆವಾಜ್ ಮುಂತಾದ ಯೋಜನೆಗಳ ಸಣ್ಣಮಟ್ಟ ಲಾಭ ಪಡೆದು ಮನೆಗಳನ್ನು ಹಂಚಿನ ನಿರ್ಮಿಸಿಕೊಂಡಿರುವುದು ಕಂಡುಬಂದಿದೆ.

ಚಿತ್ರದುರ್ಗ ತಾಲೂಕಿನ ಮಾದಿಗ ಸಮುದಾಯದ ೧೨೦ ಕುಟುಂಬಗಳ ಪೈಕಿ ೬ ಕುಟುಂಬಗಳು ಸಣ್ಣ ಪ್ರಮಾಣದ ಕಾಂಕ್ರಿಟ್/ ಆರ್‌ಸಿಸಿ ಮನೆಗಳನ್ನು ಹೊಂದಿವೆ. ಇನ್ನುಳಿದ ೧೧ ಕುಟುಂಬಕ್ಕೆ ಪಿತ್ರಾರ್ಜಿತವಾಗಿ ಬಂದ ಸಣ್ಣ ಪ್ರಮಾಣದ ಮಣ್ಣಿನ ಜನತಾ ಮನೆಗಳಿವೆ. ಇನ್ನುಳಿದ ೩೪ ಕುಟುಂಬದವರು ಗುಡಿಸಲು ಮತ್ತು ೨ ಬಾಡಿಗೆ ಮನೆಗಳನ್ನು ಹೊಂದಿದ್ದಾರೆ. ೨ ಕುಟುಂಬಗಳು ಮಾತ್ರ ಮಾಳಿಗೆ ಮನೆಯನ್ನು ಹೊಂದಿವೆ. ಇನ್ನುಳಿದ ೬೫ ಕುಟುಂಬಗಳು ಹಂಚಿನ ಮನೆಗಳನ್ನು ಸರ್ಕಾರ ನೀಡುವ ಆಶ್ರಯ, ಅಂಬೇಡ್ಕರ್, ಇಂದಿರಾ ಆವಾಜ್ ಮುಂತಾದ ಯೋಜನೆಗಳ ಲಾಭ ಪಡೆದು ನಿರ್ಮಿಸಿಕೊಂಡಿವೆ.

ಮೊಳಕಾಲ್ಮೂರು ತಾಲೂಕಿನ ಮಾದಿಗ ಸಮುದಾಯದ ೧೨೦ ಕುಟುಂಬಗಳ ಪೈಕಿ ೧ ಕುಟುಂಬ ಸಣ್ಣ ಪ್ರಮಾಣದ ಹೆಂಚಿನ ಮನೆಯನ್ನು ಹೊಂದಿದೆ. ಇನ್ನುಳಿದ ೧೧೩ ಕುಟುಂಬಗಳಿಗೆ ಪಿತ್ರಾರ್ಜಿತವಾಗಿ ಬಂದ ಸಣ್ಣ ಪ್ರಮಾಣದ ಮಣ್ಣಿನ ಜನತಾ ಮನೆಗಳಿವೆ. ಇನ್ನುಳಿದ ೨ ಕುಟುಂಬದವರು ಗುಡಿಸಲು ಮತ್ತು ಬಾಡಿಗೆ ೩ ಮನೆಗಳನ್ನು ಹೊಂದಿರುವುದಾಗಿ ತಿಳಿಸುತ್ತಾರೆ. ಒಂದು ಕುಟುಂಬ ಮಾತ್ರ ಮಾಳಿಗೆ ಮನೆಯನ್ನು ಹೊಂದಿದೆ. ಇನ್ನುಳಿದ ೧೧೩ ಕುಟುಂಬಗಳು ಸರ್ಕಾರ ನೀಡುವ ಆಶ್ರಯ, ಅಂಬೇಡ್ಕರ್, ಇಂದಿರಾ ಆವಾಜ್ ಯೋಜನೆಗಳ ಮೂಲಕ ಲಾಭ ಪಡೆದು ಮನೆಗಳನ್ನು ನಿರ್ಮಿಸಿಕೊಂಡಿರುವುದು ಕಂಡುಬರುತ್ತದೆ.

ಹಿರಿಯೂರು ತಾಲೂಕಿನ ಮಾದಿಗ ಸಮುದಾಯದ ೧೨೦ ಕುಟುಂಬಗಳ ಪೈಕಿ ೩ ಕುಟುಂಬಗಳು ಸಣ್ಣ ಪ್ರಮಾಣದ ಕಾಂಕ್ರಿಟ್/ ಆರ್‌ಸಿಸಿ ಮನೆಗಳನ್ನು ಹೊಂದಿವೆ. ಇನ್ನುಳಿದ ೫೫ ಕುಟುಂಬ ಪಿತ್ರಾರ್ಜಿತವಾಗಿ ಬಂದ ಸಣ್ಣ ಪ್ರಮಾಣದ ಮಣ್ಣಿನ ಜನತಾ ಮನೆಗಳಿವೆ. ಒಂದು ಕುಟುಂಬಕ್ಕೆ ಗುಡಿಸಲು ಮತ್ತು ಬಾಡಿಗೆ ಮನೆಗಳನ್ನು ಹೊಂದಿರುವುದನ್ನು ತಿಳಿಯಲಾಗಿದೆ. ೨ ಕುಟುಂಬಗಳು ಮಾತ್ರ ಮಾಳಿಗೆ ಮನೆಗಳನ್ನು ಹೊಂದಿವೆ. ಇನ್ನುಳಿದ ೫೪ ಟಿನ್ ಮನೆಗಳನ್ನು ಸರ್ಕಾರ ನೀಡುವ ಆಶ್ರಯ, ಅಂಬೇಡ್ಕರ್, ಇಂದಿರಾ ಆವಾಜ್ ಯೋಜನೆಗಳ ಲಾಭ ಪಡೆದು ಕುಟುಂಬಗಳು ನಿರ್ಮಿಸಿಕೊಂಡಿರುವುದು ಕಂಡುಬರುತ್ತದೆ.


ಹೊಳಲ್ಕೆರೆ ತಾಲೂಕಿನ ಮಾದಿಗ ಸಮುದಾಯದ ೧೨೦ ಕುಟುಂಬಗಳ ಪೈಕಿ ೩ ಕುಟುಂಬಗಳು ಸಣ್ಣ ಪ್ರಮಾಣದ ಕಾಂಕ್ರಿಟ್/ ಆರ್‌ಸಿಸಿ ಮನೆಗಳನ್ನು ಹೊಂದಿವೆ. ಇನ್ನುಳಿದ ೧೯ ಕುಟುಂಬಗಳಿಗೆ ಪಿತ್ರಾರ್ಜಿತವಾಗಿ ಬಂದ ಸಣ್ಣ ಪ್ರಮಾಣದ ಮಣ್ಣಿನ ಜನತಾ ಮನೆಗಳಿವೆ. ಇನ್ನುಳಿದ ೨ ಕುಟುಂಬದವರು ಗುಡಿಸಲು ಮತ್ತು ಬಾಡಿಗೆ ಮನೆಗಳನ್ನು ಹೊಂದಿರುವುದಾಗಿ ತಿಳಿಸುತ್ತಾರೆ. ಇನ್ನುಳಿದ ೮೧ ಹಂಚಿನ ಮನೆಗಳನ್ನು ಸರ್ಕಾರದ ಆಶ್ರಯ, ಅಂಬೇಡ್ಕರ್, ಇಂದಿರಾ ಆವಾಜ್ ಯೋಜನೆಗಳ ಕುಟುಂಬಗಳು ನಿರ್ಮಿಸಿಕೊಂಡಿದ್ದಾರೆ.

ಹೊಸದುರ್ಗ ತಾಲೂಕಿನ ಮಾದಿಗ ಸಮುದಾಯದ ೧೨೦ ಕುಟುಂಬಗಳಲ್ಲಿ ೮ ಕುಟುಂಬಗಳಿಗೆ ಪಿತ್ರಾರ್ಜಿತವಾಗಿ ಬಂದ ಸಣ್ಣ ಪ್ರಮಾಣದ ಮಣ್ಣಿನ ಜನತಾ ಮನೆಗಳಿವೆ. ಇನ್ನುಳಿದ ೭ ಕುಟುಂಬದವರು ಗುಡಿಸಲು ಮನೆಗಳನ್ನು ಹೊಂದಿರುವುದಾಗಿ ತಿಳಿಸಿದ್ದಾರೆ. ಇನ್ನುಳಿದ ೧೦೫ ಹಂಚಿನ ಮನೆಗಳನ್ನು ಕುಟುಂಬಗಳು ಸರ್ಕಾರ ನೀಡುವ ಆಶ್ರಯ, ಅಂಬೇಡ್ಕರ್, ಇಂದಿರಾ ಆವಾಜ್ ಯೋಜನೆಗಳ ಲಾಭ ಪಡೆದು ಮನೆಗಳನ್ನು ನಿರ್ಮಿಸಿಕೊಂಡಿರುವುದು ಕಂಡುಬರುತ್ತದೆ.

ಚಿತ್ರದುರ್ಗ ಜಿಲ್ಲೆಯ ಆರು ತಾಲೂಕಿನ ಸಮೀಕ್ಷೆಗೆ ಒಳಪಡಿಸಿದ ಮಾದಿಗ ಸಮುದಾಯದ ಒಟ್ಟು ೭೨೦ ಕುಟುಂಬಗಳ ಪೈಕಿ ೧೭ ಕುಟುಂಬಗಳು ಸಣ್ಣ ಪ್ರಮಾಣದ ಕಾಂಕ್ರಿಟ್ ಮನೆಗಳನ್ನು ಹೊಂದಿವೆ. ಇನ್ನುಳಿದ ೨೯೭ ಕುಟುಂಬಕ್ಕೆ ಪಿತ್ರಾರ್ಜಿತವಾಗಿ ಬಂದ ಸಣ್ಣ ಪ್ರಮಾಣದ ಮಣ್ಣಿನ ಜನತಾ ಮನೆಗಳಿವೆ. ಇನ್ನುಳಿದ ೬೩ ಟಿನ್ ಹಾಗೂ ಬಾಡಿಗೆ ಮನೆಗಳನ್ನು ೨೦ ಕುಟುಂಬಗಳು

ಹೊಂದಿರುವುದಾಗಿ ತಿಳಿಸುತ್ತಾರೆ. ೫೦ ಕುಟುಂಬಗಳು ಮಾತ್ರ ಗುಡಿಸಲನ್ನು ಹೊಂದಿವೆ. ಇನ್ನುಳಿದ ೨೬೭ ಕುಟುಂಬಗಳು ಹೆಂಚಿನ ಮನೆಗಳನ್ನು ಸರ್ಕಾರ ನೀಡುವ ಆಶ್ರಯ, ಅಂಬೇಡ್ಕರ್ ಯೋಜನೆಗಳ ಲಾಭ ಪಡೆದು ನಿರ್ಮಿಸಿಕೊಂಡಿವೆ.

ವೃತ್ತಚಿತ್ರ: ೩.೨, ಸಮೀಕ್ಷೆಗೊಳಪಡಿಸಿದ ಚಿತ್ರದುರ್ಗ ಜಿಲ್ಲೆಯ ತಾಲೂಕುವಾರು ಮಾದಿಗ ಸಮುದಾಯದ ಮನೆಗಳ ವಿವರ



ವೃತ್ತಚಿತ್ರ ೩.೨ರಲ್ಲಿ ಸಮೀಕ್ಷೆಗೊಳಪಡಿಸಿದ ಚಿತ್ರದುರ್ಗ ಜಿಲ್ಲೆಯ ಮಾದಿಗ ಸಮುದಾಯದ ಮನೆಗಳ ವಿವರಗಳು. ಆರ್‌ಸಿಸಿ ಮನೆ ಹೊಂದಿರುವ ಕುಟುಂಬಗಳ ಪ್ರಮಾಣ ಶೇಕಡ ೨ರಷ್ಟು, ಜನತಾ ಮನೆಗಳು ಹೊಂದಿರುವ ಕುಟುಂಬಗಳ ಪ್ರಮಾಣ ಶೇಕಡ ೪೧ರಷ್ಟು, ಹೆಂಚಿನ ಮನೆ ಹೊಂದಿರುವ ಕುಟುಂಬಗಳು ಪ್ರಮಾಣ ಶೇಕಡ ೩೭ರಷ್ಟು, ಟಿನ್ ಮನೆ ಹೊಂದಿರುವ ಕುಟುಂಬಗಳ ಪ್ರಮಾಣ ಶೇಕಡ ೯ ರಷ್ಟು, ಹಾಗೂ ಗುಡಿಸಲುಗಳನ್ನು ಹೊಂದಿರುವ ಕುಟುಂಬಗಳ ಪ್ರಮಾಣ ಶೇಕಡ ೭ರಷ್ಟು ಇವೆ. ಇನ್ನುಳಿದ ಪ್ರಮಾಣ ಶೇಕಡ ೩ ಕುಟುಂಬಗಳು ಬಾಡಿಗೆ ಮನೆಗಳನ್ನು ಉಪಯೋಗಿಸುತ್ತಿರುವುದು ಕಂಡುಬರುತ್ತದೆ.



ಕೋಷ್ಟಕ: ೩.೫, ಸಮೀಕ್ಷೆಗೊಳಪಡಿಸಿದ ಚಿತ್ರದುರ್ಗ ಜಿಲ್ಲೆಯ ತಾಲೂಕುವಾರು ಮಾದಿಗ ಸಮುದಾಯದ ಕುಟುಂಬವಾರು ಪಡಿತರ ಚೀಟಿ ಹೊಂದಿದ ಮತ್ತು ಹೊಂದಿರದ ಕುಟುಂಬಗಳು

ಕ್ರ.ಸಂ.	ತಾಲೂಕು	ಕುಟುಂಬ ಸಂಖ್ಯೆ	ಪಡಿತರ ಚೀಟಿ ಹೊಂದಿರುವ ಕುಟುಂಬಗಳು	ಪಡಿತರ ಚೀಟಿ ಹೊಂದಿರದ ಕುಟುಂಬಗಳು
೧	ಚಳ್ಳಕೆರೆ	೧೨೦	೧೧೫	೫
೨	ಚಿತ್ರದುರ್ಗ	೧೨೦	೧೦೦	೨೦
೩	ಮೊಳಕಾಲ್ಮೂರು	೧೨೦	೧೧೬	೪
೪	ಹಿರಿಯೂರು	೧೨೦	೧೧೪	೬
೫	ಹೊಳಲ್ಕೆರೆ	೧೨೦	೯೦	೩೦
೬	ಹೊಸದುರ್ಗ	೧೨೦	೧೧೨	೮
	ಒಟ್ಟು	**೭೨೦**	**೬೪೭**	**೭೩**

ಕೋಷ್ಟಕ ೩.೫ರಲ್ಲಿ ಸಮೀಕ್ಷೆಗೊಳಪಡಿಸಿದ ಚಿತ್ರದುರ್ಗ ಜಿಲ್ಲೆಯ ಮಾದಿಗ ಸಮುದಾಯದ ಕುಟುಂಬವಾರು ಪಡಿತರ ಚೀಟಿ ಹೊಂದಿದ ಮತ್ತು ಹೊಂದಿರದ ಕುಟುಂಬಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ ಬರುವ ಆರು ತಾಲೂಕುಗಳಲ್ಲಿ ಒಟ್ಟು ೭೨೦ ಕುಟುಂಬಗಳ ಆಯ್ಕೆ ಮಾಡಲಾಗಿದೆ. ಪಡಿತರ ಚೀಟಿ ಹೊಂದಿರುವ ಕುಟುಂಬಗಳ ಒಟ್ಟು ಪ್ರಮಾಣ ೬೪೭ ಹಾಗೂ ಪಡಿತರ ಚೀಟಿ ಹೊಂದಿರದ ಕುಟುಂಬಗಳ ಪ್ರಮಾಣ ಶೇಕಡ ೭೩ ಇದೆ.

ಇದರಲ್ಲಿ ಚಳ್ಳಕೆರೆ ತಾಲೂಕಿನಲ್ಲಿ ಪಡಿತರ ಚೀಟಿ ಹೊಂದಿರುವ ಕುಟುಂಬಗಳ ಒಟ್ಟು ಪ್ರಮಾಣ ೧೧೫ ಹಾಗೂ ಪಡಿತರ ಚೀಟಿ ಹೊಂದಿರದ ಕುಟುಂಬಗಳ ಪ್ರಮಾಣ ೫ ಹೊಂದಿದೆ, ಚಿತ್ರದುರ್ಗ ತಾಲೂಕಿನಲ್ಲಿ ಪಡಿತರ ಚೀಟಿ ಹೊಂದಿರುವ ಕುಟುಂಬಗಳ ಒಟ್ಟು ಪ್ರಮಾಣ ೧೦೦ ಹಾಗೂ ಪಡಿತರ ಚೀಟಿ ಹೊಂದಿರದ ಕುಟುಂಬಗಳ ಪ್ರಮಾಣ ೨೦ ಹೊಂದಿದೆ, ಮೊಳಕಾಲ್ಮೂರು ತಾಲೂಕಿನಲ್ಲಿ ಪಡಿತರ ಚೀಟಿ ಹೊಂದಿರುವ ಕುಟುಂಬಗಳ ಒಟ್ಟು ಪ್ರಮಾಣ ೧೧೬ ಹಾಗೂ ಪಡಿತರ ಚೀಟಿ ಹೊಂದಿರದ ಕುಟುಂಬಗಳ ಪ್ರಮಾಣ ೪ ಇದೆ. ಹಿರಿಯೂರು ತಾಲೂಕಿನಲ್ಲಿ ಪಡಿತರ ಚೀಟಿ ಹೊಂದಿರುವ ಕುಟುಂಬಗಳ ಒಟ್ಟು ಪ್ರಮಾಣ ೧೧೪ ಹಾಗೂ ಪಡಿತರ ಚೀಟಿ ಹೊಂದಿರದ ಕುಟುಂಬಗಳ ಪ್ರಮಾಣ ೬ ಇದ್ದರೆ, ಹೊಳಲ್ಕೆರೆ ತಾಲೂಕಿನಲ್ಲಿ ಪಡಿತರ ಚೀಟಿ ಹೊಂದಿರುವ ಕುಟುಂಬಗಳ ಒಟ್ಟು ಪ್ರಮಾಣ ೯೦ ಹಾಗೂ ಪಡಿತರ ಚೀಟಿ ಹೊಂದಿರದ ಕುಟುಂಬಗಳ ಪ್ರಮಾಣ ೩೦ ಇರುವುದು ಕಂಡುಬಂದಿದೆ. ಹೊಸದುರ್ಗ ತಾಲೂಕಿನಲ್ಲಿ ಪಡಿತರ ಚೀಟಿ ಹೊಂದಿರುವ ಕುಟುಂಬಗಳ ಒಟ್ಟು ಪ್ರಮಾಣ ೧೧೨ ಹಾಗೂ ಪಡಿತರ ಚೀಟಿ ಹೊಂದಿರದ ಕುಟುಂಬಗಳ ಪ್ರಮಾಣ ೮ ಇದೆ. ಹೊಳಲ್ಕೆರೆ ತಾಲೂಕಿನಲ್ಲಿ ಮಾತ್ರ ಇನ್ನೂ ಪಡಿತರ ಚೀಟಿಯನ್ನು ಹೊಂದಿರದ ಕುಟುಂಬಗಳು ಹೆಚ್ಚಿರುವುದನ್ನು ನೋಡಬಹುದು.

ಕೋಷ್ಟಕ: ೩.೬, ಸಮೀಕ್ಷೆಗೊಳ ಪಡಿಸಿದ ಚಿತ್ರದುರ್ಗ ಜಿಲ್ಲೆಯ ತಾಲೂಕುವಾರು ಮಾದಿಗ ಸಮುದಾಯದ ಲಿಂಗವಾರು, ಚುನಾವಣೆ ಗುರುತಿನ ಚೀಟಿ ಹೊಂದಿದ ಮತ್ತು ಹೊಂದಿರದ ಕುಟುಂಬಗಳು

ಕ್ರ.ಸಂ.	ತಾಲೂಕುಗಳು	ಕುಟುಂಬ ಸಂಖ್ಯೆ	ಚುನಾವಣೆ ಗುರುತಿನ ಚೀಟಿ ಪಡೆಯಲು ವಯೋಮಾನದವರು			ಚುನಾವಣೆ ಗುರುತಿನ ಚೀಟಿ ಹೊಂದಿರುವವರು			ಚುನಾವಣೆ ಗುರುತಿನ ಚೀಟಿ ಹೊಂದಿರದವರು		
			ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಚಳ್ಳಕೆರೆ	೧೨೦	೨೧೪	೨೦೨	೪೩೭	೧೯೨	೧೯೨	೩೬೯	೨೨	೨೬	೬೮
೨	ಚಿತ್ರದುರ್ಗ	೧೨೦	೨೧೨	೧೯೮	೪೧೦	೧೭೭	೧೬೪	೩೪೨	೩೫	೩೪	೬೮
೩	ಮೊಳಕಾಲ್ಮೂರು	೧೨೦	೨೨೦	೨೨೩	೪೪೩	೧೯೪	೧೯೫	೩೮೯	೨೬	೨೮	೫೪
೪	ಹಿರಿಯೂರು	೧೨೦	೨೨೩	೨೦೪	೪೨೫	೨೦೬	೧೯೪	೪೦೦	೧೭	೧೦	೨೫
೫	ಹೊಳಲ್ಕೆರೆ	೧೨೦	೧೯೮	೧೯೨	೩೮೮	೧೮೦	೧೭೦	೩೫೦	೧೮	೨೨	೩೮
೬	ಹೊಸದುರ್ಗ	೧೨೦	೨೩೦	೨೧೦	೪೩೭	೨೦೩	೧೯೫	೩೯೮	೨೭	೧೫	೩೯
	ಒಟ್ಟು	೭೨೦	೧೨೯೭	೧೨೨೯	೨೫೪೦	೧೧೫೨	೧೦೯೪	೨೨೪೮	೧೪೫	೧೩೫	೨೯೨

ಕೋಷ್ಟಕ ೩.೬ರಲ್ಲಿ ಸಮೀಕ್ಷೆಗೊಳಪಡಿಸಿದ ಚಿತ್ರದುರ್ಗ ಜಿಲ್ಲೆಯ ಮಾದಿಗ ಸಮುದಾಯದ ಲಿಂಗವಾರು, ಚುನಾವಣೆ ಗುರುತಿನ ಚೀಟಿ ಪಡೆಯಲು ವಯೋಮಾನದವರು, ಚುನಾವಣೆ ಗುರುತಿನ ಚೀಟಿ ಹೊಂದಿದ ಮತ್ತು ಹೊಂದಿರದ ಕುಟುಂಬಗಳನ್ನು ಗುರುತಿಸಲಾಗಿದೆ ಅವುಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

ಚಳ್ಳಕೆರೆ ತಾಲೂಕಿನಲ್ಲಿ ಮಾದಿಗ ಸಮುದಾಯದ ಲಿಂಗವಾರು ೧೨೦ ಕುಟುಂಬಗಳನ್ನು ಗುರುತಿಸಲಾಗಿದೆ. ಅದರಲ್ಲಿ ಚುನಾವಣೆ ಗುರುತಿನ ಚೀಟಿ ಪಡೆಯಲು ಅರ್ಹತೆ ಪಡೆದಿರುವ ವಯೋಮಾನದವರು ಒಟ್ಟು ಮಹಿಳೆಯರ ಮತ್ತು ಪುರುಷರ ಪ್ರಮಾಣ ಶೇಕಡ ೧೭.೨೦ರಷ್ಟು ಇದೆ. ಚುನಾವಣೆ ಗುರುತಿನ ಚೀಟಿ ಪಡೆದವರು ಒಟ್ಟು ಮಹಿಳೆಯರ ಮತ್ತು ಪುರುಷರ ಪ್ರಮಾಣ ಶೇಕಡ ೧೬.೪೧ರಷ್ಟು ಇದೆ. ಚುನಾವಣೆ ಗುರುತಿನ ಚೀಟಿ ಹೊಂದಿರದ ಕುಟುಂಬಗಳಲ್ಲಿ ಮಹಿಳೆಯರ ಮತ್ತು ಪುರುಷರ ಪ್ರಮಾಣ ಶೇಕಡ ೨೩.೨೮ರಷ್ಟು ಇರುವುದನ್ನು ನೋಡಬಹುದು.

ಚಿತ್ರದುರ್ಗ ತಾಲೂಕಿನಲ್ಲಿ ಮಾದಿಗ ಸಮುದಾಯದ ಲಿಂಗವಾರು ೧೨೦ ಕುಟುಂಬಗಳನ್ನು ಗುರುತಿಸಲಾಗಿದೆ. ಅದರಲ್ಲಿ ಚುನಾವಣೆ ಗುರುತಿನ ಚೀಟಿ ಪಡೆಯಲು ಅರ್ಹತೆ ಪಡೆದಿರುವ ವಯೋಮಾನದವರು ಒಟ್ಟು ಮಹಿಳೆಯರ ಮತ್ತು ಪುರುಷರ ಪ್ರಮಾಣ ಶೇಕಡ ೧೬.೧೪ರಷ್ಟು ಇದೆ. ಚುನಾವಣೆ ಗುರುತಿನ ಚೀಟಿ ಪಡೆದವರು ಒಟ್ಟು ಮಹಿಳೆಯರ ಮತ್ತು ಪುರುಷರ ಪ್ರಮಾಣ ಶೇಕಡ ೧೫.೨೧ರಷ್ಟು ಇದೆ. ಮತ್ತು ಚುನಾವಣೆ ಗುರುತಿನ ಚೀಟಿ ಹೊಂದಿರದ ಕುಟುಂಬಗಳ ಒಟ್ಟು ಮಹಿಳೆ ಮತ್ತು ಪುರುಷರ ಪ್ರಮಾಣ ಶೇಕಡ ೨೩.೨೮ರಷ್ಟು ಇರುವುದನ್ನು ನೋಡಬಹುದು.

ಮೊಳಕಾಲ್ಮೂರು ತಾಲೂಕಿನಲ್ಲಿ ಮಾದಿಗ ಸಮುದಾಯದ ಲಿಂಗವಾರು ೧೨೦ ಕುಟುಂಬಗಳನ್ನು ಗುರುತಿಸಲಾಗಿದೆ. ಅದರಲ್ಲಿ ಚುನಾವಣೆ ಗುರುತಿನ ಚೀಟಿ ಪಡೆಯಲು ಅರ್ಹತೆ ಪಡೆದಿರುವ ವಯೋಮಾನದವರು ಒಟ್ಟು ಮಹಿಳೆಯರ ಮತ್ತು ಪುರುಷರ ಪ್ರಮಾಣ ಶೇಕಡ ೧೭.೪೪ರಷ್ಟು ಇದೆ. ಚುನಾವಣೆ ಗುರುತಿನ ಚೀಟಿ ಪಡೆದ ಒಟ್ಟು ಮಹಿಳೆ ಮತ್ತು ಪುರುಷರ ಪ್ರಮಾಣ ಶೇಕಡ ೧೭.೩೦ರಷ್ಟಿದೆ. ಚುನಾವಣೆ ಗುರುತಿನ ಚೀಟಿ ಹೊಂದಿರದ ಕುಟುಂಬಗಳ ಒಟ್ಟು ಮಹಿಳೆ ಮತ್ತು ಪುರುಷರ ಪ್ರಮಾಣ ಶೇಕಡ ೧೮.೪೯ರಷ್ಟಿರುವುದನ್ನು ನೋಡಬಹುದು.

ಹಿರಿಯೂರು ತಾಲೂಕಿನಲ್ಲಿ ಮಾದಿಗ ಸಮುದಾಯದ ಲಿಂಗವಾರು ೧೨೦ ಕುಟುಂಬಗಳನ್ನು ಗುರುತಿಸಲಾಗಿದೆ. ಅದರಲ್ಲಿ ಚುನಾವಣೆ ಗುರುತಿನ ಚೀಟಿ ಪಡೆಯಲು ಅರ್ಹತೆ ಪಡೆದಿರುವ ವಯೋಮಾನದವರು ಒಟ್ಟು ಮಹಿಳೆಯರ ಮತ್ತು ಪುರುಷರ ಪ್ರಮಾಣ ಶೇಕಡ ೧೬.೭೩ರಷ್ಟು ಇದೆ. ಚುನಾವಣೆ ಗುರುತಿನ ಚೀಟಿ ಪಡೆದ ಒಟ್ಟು ಮಹಿಳೆಯರ ಮತ್ತು ಪುರುಷರ ಪ್ರಮಾಣ ಶೇಕಡ ೧೭.೭೯ರಷ್ಟು ಇದೆ. ಚುನಾವಣೆ ಗುರುತಿನ ಚೀಟಿ ಹೊಂದಿರದ ಕುಟುಂಬಗಳ ಒಟ್ಟು ಮಹಿಳೆ ಮತ್ತು ಪುರುಷರ ಪ್ರಮಾಣ ಶೇಕಡ ೮.೫೬ರಷ್ಟು ಇರುವುದನ್ನು ನೋಡಬಹುದು.

ಹೊಳಲ್ಕೆರೆ ತಾಲೂಕಿನಲ್ಲಿ ಮಾದಿಗ ಸಮುದಾಯದ ಲಿಂಗವಾರು ೧೨೦ ಕುಟುಂಬಗಳನ್ನು ಗುರುತಿಸಲಾಗಿದೆ. ಅದರಲ್ಲಿ ಚುನಾವಣೆ ಗುರುತಿನ ಚೀಟಿ ಪಡೆಯಲು ಅರ್ಹತೆ ಪಡೆದಿರುವ

ವಯೋಮಾನದವರು ಒಟ್ಟು ಮಹಿಳೆಯರ ಮತ್ತು ಪುರುಷರ ಪ್ರಮಾಣ ಶೇಕಡ ೧೫.೨೭ರಷ್ಟು ಇದೆ. ಚುನಾವಣೆ ಗುರುತಿನ ಚೀಟಿ ಪಡೆದ ಒಟ್ಟು ಮಹಿಳೆ ಮತ್ತು ಪುರುಷರ ಪ್ರಮಾಣ ಶೇಕಡ ೧೫.೫೬ರಷ್ಟಿದೆ. ಮತ್ತು ಚುನಾವಣೆ ಗುರುತಿನ ಚೀಟಿ ಹೊಂದಿರದ ಕುಟುಂಬಗಳ ಒಟ್ಟು ಮಹಿಳೆ ಮತ್ತು ಪುರುಷರ ಪ್ರಮಾಣ ಶೇಕಡ ೧೩.೦೧ರಷ್ಟು ಇರುವುದನ್ನು ನೋಡಬಹುದು.

ಹೊಸದುರ್ಗ ತಾಲೂಕಿನಲ್ಲಿ ಮಾದಿಗ ಸಮುದಾಯದ ಲಿಂಗವಾರು ೧೨೦ ಕುಟುಂಬಗಳನ್ನು ಗುರುತಿಸಲಾಗಿದೆ. ಅದರಲ್ಲಿ ಚುನಾವಣೆ ಗುರುತಿನ ಚೀಟಿ ಪಡೆಯಲು ಅರ್ಹತೆ ಪಡೆದಿರುವ ವಯೋಮಾನದವರು ಒಟ್ಟು ಮಹಿಳೆಯರ ಮತ್ತು ಪುರುಷರ ಪ್ರಮಾಣ ಶೇಕಡ ೧೭.೨೦ರಷ್ಟು ಇದೆ. ಚುನಾವಣೆ ಗುರುತಿನ ಚೀಟಿ ಪಡೆದ ಒಟ್ಟು ಮಹಿಳೆ ಮತ್ತು ಪುರುಷರ ಪ್ರಮಾಣ ಶೇಕಡ ೧೭.೭೦ರಷ್ಟು ಇದೆ. ಚುನಾವಣೆ ಗುರುತಿನ ಚೀಟಿ ಹೊಂದಿರದ ಕುಟುಂಬಗಳ ಒಟ್ಟು ಮಹಿಳೆ ಮತ್ತು ಪುರುಷರ ಪ್ರಮಾಣ ಶೇಕಡ ೧೩.೩೫ರಷ್ಟು ಇರುವುದನ್ನು ನೋಡಬಹುದು.

ಚಿತ್ರದುರ್ಗ ಜಿಲ್ಲೆಯಲ್ಲಿ ಆರು ತಾಲೂಕುಗಳಿದ್ದು. ಪ್ರತಿಯೊಂದು ತಾಲೂಕಿನ ಎರಡು ಗ್ರಾಮಗಳನ್ನು ಸಮೀಕ್ಷೆಗೆ ಒಳಪಡಿಸಿದ ಒಟ್ಟು ೭೨೦ ಮಾದಿಗ ಸಮುದಾಯದ ಒಟ್ಟು ಕುಟುಂಬಗಳ ಲಿಂಗವಾರು, ಚುನಾವಣೆ ಗುರುತಿನ ಚೀಟಿ ಪಡೆಯಲು ವಯೋಮಾನದವರು, ಗುರುತಿನ ಚೀಟಿ ಹೊಂದಿದ ಮತ್ತು ಹೊಂದಿರದ ಕುಟುಂಬಗಳನ್ನು ಗುರುತಿಸಲಾಗಿದೆ. ಅದರಲ್ಲಿ ಚುನಾವಣೆ ಗುರುತಿನ ಚೀಟಿ ಪಡೆಯಲು ಅರ್ಹತೆ ಪಡೆದಿರುವ ವಯೋಮಾನದವರು ಒಟ್ಟು ಮಹಿಳೆಯರ ಪ್ರಮಾಣ ಶೇಕಡ ೫೧.೦೬ರಷ್ಟು, ಪುರುಷರ ಪ್ರಮಾಣ ಶೇಕಡ ೪೮.೯೪ರಷ್ಟು ಇದೆ. ಚುನಾವಣೆ ಗುರುತಿನ ಚೀಟಿ ಹೊಂದಿದ ಒಟ್ಟು ಪುರುಷರ ಪ್ರಮಾಣ ಶೇಕಡ ೫೧.೨೪ರಷ್ಟು, ಮಹಿಳೆಯರ ಪ್ರಮಾಣ ಶೇಕಡ ೪೮.೭೬ರಷ್ಟು ಇದೆ. ಗುರುತಿನ ಚೀಟಿ ಹೊಂದಿರದ ಕುಟುಂಬಗಳ ಒಟ್ಟು ಪುರುಷರ ಪ್ರಮಾಣ ಶೇಕಡ ೪೯.೬೫ರಷ್ಟು, ಮಹಿಳೆಯರ ಪ್ರಮಾಣ ಶೇಕಡ ೫೦.೩೫ರಷ್ಟು ಇರುವುದನ್ನು ನೋಡಬಹುದು. ಹೊಳಲ್ಕೆರೆ ತಾಲೂಕಿನಲ್ಲಿ ಸರಿಸಮಾನವಾದ ಸೌಲಭ್ಯಗಳನ್ನು ಪಡೆದಿಕೊಂಡಿದ್ದಾರೆ. ಕೆಲವು ತಾಲೂಕುಗಳ ಚುನಾವಣೆ ಗುರುತಿನ ಚೀಟಿ ಪಡೆಯಲು ಇನ್ನೂ ಆಗಿಲ್ಲದಿರುವುದು ಅಧ್ಯಯನದಿಂದ ತಿಳಿದುಬರುತ್ತದೆ.

ಕೋಷ್ಟಕ: ೩.೭, ಸಮೀಕ್ಷೆಗೊಳಪಡಿಸಿದ ಚಿತ್ರದುರ್ಗ ಜಿಲ್ಲೆಯ ತಾಲೂಕುವಾರು ಮಾದಿಗ ಸಮುದಾಯದ ವಿಧವಾವೇತನ ವಿವರ

ಕ್ರ.ಸಂ.	ತಾಲೂಕುಗಳು	ಕುಟುಂಬಗಳ ಸಂಖ್ಯೆ	ವಿಧವೆಯರು		ವಿಧವಾ ವೇತನ		ವಿ.ವೇ. ಹೊಂದಿರದವರು	
			ಹೆಣ್ಣು	ಒಟ್ಟು	ಹೆಣ್ಣು	ಒಟ್ಟು	ಹೆಣ್ಣು	ಒಟ್ಟು
೧	ಚಳ್ಳಕೆರೆ	೧೨೦	೨೪	೨೪	೪	೪	೨೦	೨೦
೨	ಚಿತ್ರದುರ್ಗ	೧೨೦	೧೯	೧೯	೬	೬	೧೩	೧೩

೩	ಮೊಳಕಾಲ್ಮೂರು	೧೨೦	೩೬	೩೬	೮	೮	೨೮	೨೮
೪	ಹಿರಿಯೂರು	೧೨೦	೩೦	೩೦	೧೧	೧೧	೧೯	೧೯
೫	ಹೊಳಲ್ಕೆರೆ	೧೨೦	೨೬	೨೬	೯	೯	೧೭	೧೭
೬	ಹೊಸದುರ್ಗ	೧೨೦	೨೩	೨೩	೭	೭	೧೬	೧೬
	ಒಟ್ಟು	೭೨೦	೧೫೮	೧೫೮	೪೫	೪೫	೧೧೩	೧೧೩

ಕೋಷ್ಟಕ ೩.೭ರಲ್ಲಿ ಸಮೀಕ್ಷೆಗೊಳಪಡಿಸಿದ ಚಿತ್ರದುರ್ಗ ಜಿಲ್ಲೆಯ ಮಾದಿಗ ಸಮುದಾಯದಲ್ಲಿ ವಿಧವೆಯರು, ವಿಧವಾವೇತನ ಪಡೆಯುತ್ತಿರುವರ ಪ್ರಮಾಣ ಮತ್ತು ವಿಧವಾವೇತನ ಹೊಂದಿರದವರು ಕುಟುಂಬಗಳನ್ನು ಗುರುತಿಸಲಾಗಿದೆ. ಅವುಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

ಚಳ್ಳಕೆರೆ ತಾಲೂಕಿನಲ್ಲಿ ಮಾದಿಗ ಸಮುದಾಯದ ವಿಧವೆಯರು, ವಿಧವಾವೇತನ ಪಡೆಯುತ್ತಿರುವರ ಪ್ರಮಾಣ ಮತ್ತು ವಿಧವಾವೇತನ ಹೊಂದಿರದವರ ೧೨೦ ಕುಟುಂಬಗಳನ್ನು ಗುರುತಿಸಲಾಗಿದೆ. ಅದರಲ್ಲಿ ವಿಧವೆಯರ ಪ್ರಮಾಣ ಶೇಕಡ ೨೪ರಷ್ಟು ಇದ್ದಾರೆ. ವಿಧವಾವೇತನ ಪಡೆಯುತ್ತಿರುವರ ಪ್ರಮಾಣ ಶೇಕಡ ೪ರ ಇದೆ, ವಿಧವಾವೇತನ ಹೊಂದಿರದವರ ಪ್ರಮಾಣ ಶೇಕಡ ೨೦ರಷ್ಟು ಇರುವುದನ್ನು ನೋಡಬಹುದು.

ಚಿತ್ರದುರ್ಗ ತಾಲೂಕಿನಲ್ಲಿ ಮಾದಿಗ ಸಮುದಾಯದ ವಿಧವೆಯರು, ವಿಧವಾವೇತನ ಪಡೆಯುತ್ತಿರುವರ ಪ್ರಮಾಣ ಮತ್ತು ವಿಧವಾವೇತನ ಹೊಂದಿರದವರ ೧೨೦ ಕುಟುಂಬಗಳನ್ನು ಗುರುತಿಸಲಾಗಿದೆ. ಅದರಲ್ಲಿ ವಿಧವೆಯರ ಪ್ರಮಾಣ ಶೇಕಡ ೧೯ರಷ್ಟು ಇದ್ದರೆ. ವಿಧವಾವೇತನ ಪಡೆಯುತ್ತಿರುವರ ಪ್ರಮಾಣ ಶೇಕಡ ೬ರಷ್ಟು ಇದೆ. ವಿಧವಾವೇತನ ಹೊಂದಿರದವರ ಪ್ರಮಾಣ ಶೇಕಡ ೧೩ರಷ್ಟು ಇರುವುದನ್ನು ನೋಡಬಹುದು.

ಮೊಳಕಾಲ್ಮೂರು ತಾಲೂಕಿನಲ್ಲಿ ಮಾದಿಗ ಸಮುದಾಯದ ವಿಧವೆಯರು, ವಿಧವಾವೇತನ ಪಡೆಯುತ್ತಿರುವರ ಪ್ರಮಾಣ ಮತ್ತು ವಿಧವಾವೇತನ ಹೊಂದಿರದವರ ೧೨೦ ಕುಟುಂಬಗಳನ್ನು ಗುರುತಿಸಲಾಗಿದೆ. ಅದರಲ್ಲಿ ವಿಧವೆಯರ ಪ್ರಮಾಣ ಶೇಕಡ ೩೬ರಷ್ಟು ಇದೆ. ವಿಧವಾವೇತನ ಪಡೆಯುತ್ತಿರುವರ ಪ್ರಮಾಣ ಶೇಕಡ ೮ರಷ್ಟು ಇದೆ. ವಿಧವಾವೇತನ ಹೊಂದಿರದವರ ಪ್ರಮಾಣ ಶೇಕಡ ೨೮ರಷ್ಟು ಇರುವುದನ್ನು ನೋಡಬಹುದು.

ಹಿರಿಯೂರು ತಾಲೂಕಿನಲ್ಲಿ ಮಾದಿಗ ಸಮುದಾಯದ ವಿಧವೆಯರು, ವಿಧವಾವೇತನ ಪಡೆಯುತ್ತಿರುವರ ಪ್ರಮಾಣ ಮತ್ತು ವಿಧವಾವೇತನ ಹೊಂದಿರದವರ ೧೨೦ ಕುಟುಂಬಗಳನ್ನು ಗುರುತಿಸಲಾಗಿದೆ. ಅದರಲ್ಲಿ ವಿಧವೆಯರ ಪ್ರಮಾಣ ಶೇಕಡ ೩೦ರಷ್ಟು ಇದ್ದರೆ. ವಿಧವಾವೇತನ ಪಡೆಯುತ್ತಿರುವರ ಪ್ರಮಾಣ ಶೇಕಡ ೧೧ರಷ್ಟು ಇದೆ. ವಿಧವಾವೇತನ ಹೊಂದಿರದವರ ಪ್ರಮಾಣ ಶೇಕಡ ೧೯ರಷ್ಟು ಇರುವುದನ್ನು ನೋಡಬಹುದು.

ಹೊಳಲ್ಕೆರೆ ತಾಲೂಕಿನಲ್ಲಿ ಮಾದಿಗ ಸಮುದಾಯದ ವಿಧವೆಯರು, ವಿಧವಾವೇತನ ಪಡೆಯುತ್ತಿರುವರ ಪ್ರಮಾಣ ಮತ್ತು ವಿಧವಾವೇತನ ಹೊಂದಿರದವರ ೧೨೦ ಕುಟುಂಬಗಳನ್ನು ಗುರುತಿಸಲಾಗಿದೆ. ಅದರಲ್ಲಿ ವಿಧವೆಯರ ಪ್ರಮಾಣ ಶೇಕಡ ೨೬ರಷ್ಟು ಇದ್ದರೆ. ವಿಧವಾವೇತನ ಪಡೆಯುತ್ತಿರುವರ ಪ್ರಮಾಣ ಶೇಕಡ ೯ರಷ್ಟು ಇದೆ. ವಿಧವಾವೇತನ ಹೊಂದಿರದವರ ಪ್ರಮಾಣ ಶೇಕಡ ೧೭ರಷ್ಟು ಇರುವುದನ್ನು ಅಧ್ಯಯದಿಂದ ತಿಳಿಯಲಾಗಿದೆ.

ಹೊಸದುರ್ಗ ತಾಲೂಕಿನಲ್ಲಿ ಮಾದಿಗ ಸಮುದಾಯದ ವಿಧವೆಯರು, ವಿಧವಾವೇತನ ಪಡೆಯುತ್ತಿರುವರ ಪ್ರಮಾಣ ಮತ್ತು ವಿಧವಾವೇತನ ಹೊಂದಿರದವರ ೧೨೦ ಕುಟುಂಬಗಳನ್ನು ಗುರುತಿಸಲಾಗಿದೆ. ವಿಧವೆಯರ ಪ್ರಮಾಣ ಶೇಕಡ ೨೩ರಷ್ಟು ಇದೆ. ವಿಧವಾವೇತನ ಪಡೆಯುತ್ತಿರುವರ ಪ್ರಮಾಣ ಶೇಕಡ ೭ರಷ್ಟು ಇದೆ. ವಿಧವಾವೇತನ ಹೊಂದಿರದವರ ಪ್ರಮಾಣ ಶೇಕಡ ೧೬ರಷ್ಟು ಇರುವುದನ್ನು ನೋಡಬಹುದು.

ಕೋಷ್ಟಕ–೩.೭ರಲ್ಲಿ ಸಮೀಕ್ಷೆಗೊಳಪಡಿಸಿದ ಚಿತ್ರದುರ್ಗ ಜಿಲ್ಲೆಯ ಮಾದಿಗ ಸಮುದಾಯದ ವಿಧವೆಯರು, ವಿಧವಾವೇತನ ಪಡೆಯುತ್ತಿರುವರ ಪ್ರಮಾಣ ಮತ್ತು ವಿಧವಾವೇತನ ಹೊಂದಿರದವರ ೭೨೦ ಕುಟುಂಬಗಳನ್ನು ಅಧ್ಯಯನಕ್ಕೊಳಪಡಿಸಲಾಗಿದೆ. ಅದರಲ್ಲಿ ವಿಧವೆಯರ ಸಂಖ್ಯೆ ೧೫೮ ಇದೆ. ವಿಧವಾವೇತನ ಪಡೆಯುತ್ತಿರುವರ ಸಂಖ್ಯೆ ೪೫ ಇದೆ. ವಿಧವಾವೇತನ ಹೊಂದಿರದವರ ಒಟ್ಟು ಸಂಖ್ಯೆ ೧೧೩ ಅಧ್ಯಯನದಿಂದ ತಿಳಿಯಲಾಗಿದೆ.

ಕೋಷ್ಟಕ: ೩.೮, ಸಮೀಕ್ಷೆಗೊಳಪಡಿಸಿದ ಚಿತ್ರದುರ್ಗ ಜಿಲ್ಲೆಯ ತಾಲೂಕುವಾರು ಮಾದಿಗ ಸಮುದಾಯದ ಲಿಂಗವಾರು ಪಡೆಯುತ್ತಿರುವ ಸರ್ಕಾರಿ ಸೌಲಭ್ಯಗಳ ವಿವರ

ಕ್ರಸಂ.	ತಾಲೂಕುಗಳು	ಸರ್ಕಾರಿ ಸೌಲಭ್ಯಗಳು								
		ಅಂಗವಿಕಲ			ವೃದ್ಧಾಪ್ಯವೇತನ			ಶಿಷ್ಯವೇತನ		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಚಳ್ಳಕೆರೆ	೪	೫	೯	೪	೧೬	೨೦			
೨	ಚಿತ್ರದುರ್ಗ	೧	೩	೪		೧	೧		೨	೨
೩	ಮೊಳಕಾಲ್ಮೂರು	೨	೭	೯	೮	೨೮	೩೬		೧	೧
೪	ಹಿರಿಯೂರು	೪	೧	೫	೩	೨	೫	೦	೦	೦
೫	ಹೊಳಲ್ಕೆರೆ	೧	೦	೧	೦	೦	೦	೧	೦	೧
೬	ಹೊಸದುರ್ಗ	೩	೬	೯	೦	೦	೦	೦	೦	೦
	ಒಟ್ಟು	೧೫	೨೨	೩೭	೧೫	೪೭	೬೨	೧	೩	೪

ಕೋಷ್ಟಕ ೩.೮ರಲ್ಲಿ ಸಮೀಕ್ಷೆಗೊಳಪಡಿಸಿದ ಚಿತ್ರದುರ್ಗ ಜಿಲ್ಲೆಯ ಮಾದಿಗ ಸಮುದಾಯದ ಕುಟುಂಬವಾರು, ಲಿಂಗವಾರು ಪಡೆಯುತ್ತಿರುವ ಸರ್ಕಾರಿ ಸೌಲಭ್ಯಗಳು ವಿವರಗಳು ಹಾಗೂ ಚಿತ್ರದುರ್ಗ ಜಿಲ್ಲೆಯ ಆರು ತಾಲೂಕುಗಳ ಎರಡು ಹಳ್ಳಿಗಳನ್ನು ಸಮೀಕ್ಷೆ ಮಾಡಿದ್ದು, ಪ್ರತಿ ತಾಲೂಕುಗಳ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಚಳ್ಳಕೆರೆ, ಚಿತ್ರದುರ್ಗ, ಮೊಳಕಾಲ್ಮೂರು, ಹಿರಿಯೂರು, ಹೊಳಲ್ಕೆರೆ, ಹೊಸದುರ್ಗ ತಾಲೂಕುಗಳ ಅಂಗವಿಕಲರ ಹೆಣ್ಣು ಮತ್ತು ಗಂಡುಗಳ ಪ್ರಮಾಣ ಶೇಕಡ ೩೭ರಷ್ಟು, ವೃದ್ಧಾಪ್ಯ ವೇತನ ಪಡೆಯುತ್ತಿರುವರ ಹೆಣ್ಣು ಮತ್ತು ಗಂಡುಗಳ ಪ್ರಮಾಣ ಶೇಕಡ ೬೨ರಷ್ಟು, ಶಿಷ್ಯವೇತನ ಪಡೆಯುತ್ತಿರುವರ ಹೆಣ್ಣು ಮತ್ತು ಗಂಡುಗಳ ಪ್ರಮಾಣ ಶೇಕಡ ೪ರಷ್ಟು ಹೊಂದಿರುವುದು ಕಂಡುಬಂದಿದೆ.

ಮಾದಿಗ ಸಮುದಾಯದ ಪ್ರಸ್ತುತ ಸಾಮಾಜಿಕ ಸ್ಥಿತಿಗತಿಗಳನ್ನು ವೈಜ್ಞಾನಿಕ ತಳಹದಿಯನ್ನಾಧರಿಸಿ, ಅಧ್ಯಯನ ಮಾಡುವ ಹಾಗೂ ಅವರ ಸಾಮಾಜಿಕ ಬದಲಾವಣೆ ಕುರಿತು ಅಧ್ಯಯನ ಮಾಡುವ ತುರ್ತು ಅಗತ್ಯ ಈಗ ಮೊದಲಿಗಿಂತಲೂ ಹೆಚ್ಚಾಗಿದೆ. ಸಾವಿರಾರು ವರ್ಷಗಳಿಂದ ಎಲ್ಲ ಕ್ಷೇತ್ರಗಳಲ್ಲೂ ಹಿಂದುಳಿಯುತಬಂದ ಈ ಸಮುದಾಯವನ್ನು ಸ್ವಾತಂತ್ರ್ಯೋತ್ತರ ಕಾಲದಲ್ಲಿ, ಅಂಗೀಕರಿಸಿದ ಹೊಸ ಸಂವಿಧಾನವು ಹಲವು ವಿಶೇಷ ಕಾನೂನುಗಳಿಂದ ರಕ್ಷಿಸಲು ಪ್ರಯತ್ನಿಸಿತು. ಇವರ ಪ್ರಗತಿ ಕುರಿತಂತೆ ಸರ್ಕಾರಗಳು ಅನೇಕ ಯೋಜನೆಗಳನ್ನು ಜಾರಿಗೊಳಿಸತೊಡಗಿದವು. ಇಂಥ ಯೋಜನೆಗಳು ಈ ಸಮುದಾಯವನ್ನು ಎಷ್ಟರಮಟ್ಟಿಗೆ ಅಭಿವೃದ್ಧಿ ಹೊಂದಲು ಅನುವು ಮಾಡಿಕೊಟ್ಟಿವೆ ಎಂಬುದನ್ನು ನಿಖರವಾಗಿ ಅರಿಯುವ, ಅವುಗಳ ಮೌಲ್ಯಮಾಪನ ಮಾಡುವ ಅಗತ್ಯವಿದೆ.

ಟಿಪ್ಪಣಿಗಳು

೧. ಮೈಲಹಳ್ಳಿ ರೇವಣ್ಣ, ೨೦೦೪, ಮಾದಾರ ಸಂಸ್ಕೃತಿ ಮತ್ತು ಸಾಹಿತ್ಯ, ಪುಟ. ೧೨.

೨. ಗೊಳಸಂಗಿ ಅರ್ಜುನ, ೨೦೦೦, ದಲಿತ ಬದುಕು ಮತ್ತು ಸಂಸ್ಕೃತಿ ಜಾನಪದೀಯ ಅಧ್ಯಯನ, ಪುಟ. ೩೦೭.

೩. ಮೈಲಹಳ್ಳಿ ರೇವಣ್ಣ, ೨೦೦೪, ಮಾದಾರ ಸಂಸ್ಕೃತಿ ಮತ್ತು ಸಾಹಿತ್ಯ, ಪುಟ. ೧೩.

೪. Burrow T and Emenean MB,1896, A Dravidiam Etymological, Pp: ೧೨೫೮.

೫. ಗೊಳಸಂಗಿ ಅರ್ಜುನ, ೨೦೦೦, ದಲಿತ ಬದುಕು ಮತ್ತು ಸಂಸ್ಕೃತಿ ಜಾನಪದೀಯ ಅಧ್ಯಯನ, ಪುಟ. ೩೦೪.

೬. Kittel F, 1894, A Kannada-Enghish-Dictonary. Pp: ೧೨೩೩.

೭. Burrow T and Emenean MB,1896, A Dravidiam Etymological, Pp: ೧೨೫೯.

೮. Venkat Ratnam, ೧೯೮೦, Dictonary Telugu-Enghish. Pp:೧೨೮.

೯. ಮೈಲಹಳ್ಳಿ ರೇವಣ್ಣ, ೨೦೦೪, ಮಾದಾರ ಸಂಸ್ಕೃತಿ ಮತ್ತು ಸಾಹಿತ್ಯ, ಪುಟ. ೧೨.

೧೦. ಗೊಳಸಂಗಿ ಅರ್ಜುನ, ೨೦೦೦, ದಲಿತ ಬದುಕು ಮತ್ತು ಸಂಸ್ಕೃತಿ ಜಾನಪದೀಯ ಅಧ್ಯಯನ, ಪುಟ. ೨೦೪.

೧೧. ಮೈಲಹಳ್ಳಿ ರೇವಣ್ಣ, ೨೦೦೪, ಮಾದಾರ ಸಂಸ್ಕೃತಿ ಮತ್ತು ಸಾಹಿತ್ಯ, ಪುಟ. ೧೨.

೧೨. Thurston, ೧೯೦೯, Castes and Tribes of Southern India-vol. Pp: ೨೯೭.

೧೩. ಕೋಟಗಾನಹಳ್ಳಿ ರಾಮಯ್ಯ, ೧೯೯೩, ಸಿಂದ್ ಮಾದಿಗರ ಸಂಸ್ಕೃತಿ, ಪುಟ. ೧೧.

೧೪. ಅದೇ ಪುಟ. ೧೧.

೧೫. ಅದೇ ಪುಟ. ೧೨.

೧೬. ಜೋಗನ್ ಶಂಕರ್, ೧೯೯೩, ದೇವದಾಸಿ ಸಂಪ್ರದಾಯ, ಪುಟ. ೩೫

೧೭. ಅದೇ ಪುಟ. ೩೪.

೧೮. ಚಂದ್ರಶೇಖರ ಕಂಬಾರ, ೨೦೦೬, ಕನ್ನಡ ಜಾನಪದ ವಿಶ್ವಕೋಶ, (ಸಂಪುಟ ೧–೨), ಪುಟ. ೮೫೬.

೧೯. ವಡ್ಡಗೆರೆ ನಾಗರಾಜಯ್ಯ, ೨೦೧೪, ಕರ್ನಾಟಕದ ಆದಿಜಾಂಬನ ಮಾತಂಗ ಪರಂಪರೆ: ಸಾಂಸ್ಕೃತಿಕ ವಿಶ್ಲೇಷಣೆ, ಅಪ್ರಕಟಿತ ಪಿಎಚ್.ಡಿ ಮಹಾ ಪ್ರಬಂಧ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ. ಪುಟ. ೪೩.

೨೦. ಅದೇ ಪುಟ. ೪೫.

೨೧. ಶಿವಪ್ಪ ಕೆ, ೨೦೦೪, ಬಳ್ಳಾರಿ ಜಿಲ್ಲೆಯ ಹೊಲೆಯ ಮಾದಿಗರ ಸಂಸ್ಕೃತಿ, ಪುಟ. ೮.

೨೨. ಕೋಟಗಾನಹಳ್ಳಿ ರಾಮಯ್ಯ, ೧೯೯೩, ಸಿಂದ್ ಮಾದಿಗರ ಸಂಸ್ಕೃತಿ, ಪುಟ. ೧೮.

೨೩. ಸೋಸಲೆ ಚಿನ್ನಸ್ವಾಮಿ ಎನ್, ೨೦೦೪, ಸಾಮ್ರಾಜ್ಯ ಮತ್ತು ಸಂಸ್ಥಾನ, ಪುಟ. ೨೦೬.

೨೪. ಅದೇ ಪುಟ. ೨೦೭.

೨೫. ವಡ್ಡಗೆರೆ ನಾಗರಾಜಯ್ಯ, ೨೦೧೪, ಕರ್ನಾಟಕದ ಆದಿಜಾಂಬನ ಮಾತಂಗ ಪರಂಪರೆ: ಸಾಂಸ್ಕೃತಿಕ ವಿಶ್ಲೇಷಣೆ, ಅಪ್ರಕಟಿತ ಪಿಎಚ್.ಡಿ ಮಹಾ ಪ್ರಬಂಧ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ. ಪುಟ. ೧೦೫.

೨೬. ರಾಜಕುಮಾರ ಕೆ ಆರ್ ಜೆ, ೨೦೦೭, ಸ್ವಾತಂತ್ರ್ಯ ಪೂರ್ವದಲ್ಲಿ ಮಾದಿಗ ಸಮುದಾಯ, ಅಪ್ರಕಟಿತ ಪಿಎಚ್.ಡಿ ಮಹಾ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪುಟ. ೩೬.

೨೭. ಸೋಸಲೆ ಚಿನ್ನಸ್ವಾಮಿ ಎನ್, ೨೦೦೪, ಸಾಮ್ರಾಜ್ಯ ಮತ್ತು ಸಂಸ್ಥಾನ, ಪುಟ. ೧೭.

೨೮. ಪೂರ್ವಚಾರ್, ಹಂಪಿ ಶಾಸನಗಳು, ಕನ್ನಡ ವಿಶ್ವವಿದ್ಯಾಲಯ, ಸಂಪುಟ. ೩. ಪುಟ, ೯೯.

೨೯. ಅದೇ ಪುಟ, ೧೮೫.

೩೦. ಶಿವಪ್ಪ ಕೆ, ೨೦೦೪, ಬಳ್ಳಾರಿ ಜಿಲ್ಲೆಯ ಹೊಲೆಯ ಮಾದಿಗರ ಸಂಸ್ಕೃತಿ, ಪುಟ. ೧೦.

೩೧. ವಡ್ಡಗೆರೆ ನಾಗರಾಜಯ್ಯ, ೨೦೧೪, ಕರ್ನಾಟಕದ ಆದಿಜಾಂಬನ ಮಾತಂಗ ಪರಂಪರೆ: ಸಾಂಸ್ಕೃತಿಕ ವಿಶ್ಲೇಷಣೆ, ಅಪ್ರಕಟಿತ ಪಿಎಚ್.ಡಿ ಮಹಾ ಪ್ರಬಂಧ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ. ಪುಟ. ೧೦೪.

೩೨. ಅದೇ ಪುಟ, ೧೦೬.

೩೩. ಮುನಿವೆಂಕಟಪ್ಪ, ೧೯೯೬, ಮಾಗಡಿ ಸೀಮೆ ಇತಿಹಾಸ-ಸಂಸ್ಕೃತಿ, ಪುಟ. ೧೧೦.

೩೪. ವಡ್ಡಗೆರೆ ನಾಗರಾಜಯ್ಯ, ೨೦೧೪, ಕರ್ನಾಟಕದ ಆದಿಜಾಂಬನ ಮಾತಂಗ ಪರಂಪರೆ: ಸಾಂಸ್ಕೃತಿಕ ವಿಶ್ಲೇಷಣೆ, ಅಪ್ರಕಟಿತ ಪಿಎಚ್.ಡಿ ಮಹಾ ಪ್ರಬಂಧ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ. ಪುಟ. ೧೦೪.

೩೫. ಅದೇ ಪುಟ, ೧೧೬.

೩೬. A - 5 UNION, Primary Census Abstract – ೨೦೧೧. Pp: ೧.

೩೭. Data Provided by District Stascal O?ce, Chitradurga. (T:Total, R:Rural, U:Urban) As Per 2011 Censu.

ಅಧ್ಯಾಯ: ನಾಲ್ಕು
ಮಾದಿಗ ಸಮುದಾಯದ ಸಾಮಾಜಿಕ ಬದಲಾವಣೆ

೪.೧ ಜನನ

೪.೨ ನಾಮಕರಣ

೪.೩ ಜವುಳ

೪.೪ ಋತುಮತಿ

೪.೫ ವಿವಾಹ

೪.೬ ಸೀಮಂತ

೪.೭ ಶವಸಂಸ್ಕಾರ

೪.೮ ಕೌಟುಂಬಿಕ ವ್ಯವಸ್ಥೆ

೪.೯ ಉತ್ತರಾಧಿಕಾರತ್ವ

೪.೧೦ ಬಳಿಗಳು (ಕುಲ) ಮತ್ತು ಬಂಧುತ್ವ

೪.೧೧ ಸಮುದಾಯದ ಸಾಮಾಜಿಕ ಸಮಸ್ಯೆಗಳು ಮತ್ತು ಸವಾಲುಗಳು

೪.೧೨ ವರ್ತಮಾನದ ಸ್ಥಿತಿಗತಿಗಳು

ಅಧ್ಯಾಯ: ನಾಲ್ಕು

ಮಾದಿಗ ಸಮುದಾಯದ ಸಾಮಾಜಿಕ ಬದಲಾವಣೆ

ಪೀಠಿಕೆ

ಮಾನವ ಕುಲ ಮುಂದುವರಿಕೆಗೆ ಲೈಂಗಿಕತೆಯು ನೈಸರ್ಗಿಕವಾಗಿ ಬೆಳೆದುಕೊಂಡು ಬಂದಿರುವ ವೈಜ್ಞಾನಿಕ ವಿಧಾನವಾಗಿದೆ. ಮಾನವ ಹುಟ್ಟು-ಸಾವು ಪ್ರಕೃತಿದಾತವಾಗಿ ಕಂಡುಬಂದರೂ ನಮಗೆ ಗೊತ್ತಿಲ್ಲ ಹಾಗೆ ನಡೆದುಕೊಂಡು ಬಂದಿರುವ ವಿಶೇಷ ನಿಯಮವಾಗಿದೆ. ಅದರ ಮೂಲ ಸ್ವರೂಪವನ್ನು ಕಳೆದುಕೊಂಡಿಲ್ಲ. ಒಂದುವೇಳೆ ಕಳೆದು ಕೊಂಡರೆ ಇಡೀ ಮಾನವನ ಸಂಕುಲವೇ ನಾಶವಾಗಿ ತನ್ನ ರೂಪವನ್ನು ಬದಲಾವಣೆ ಮಾಡಿಕೊಳ್ಳುತ್ತಿತ್ತು. ಆದ್ದರಿಂದ ಪ್ರತಿಯೊಂದು ಪ್ರಾಣಿ ಸಂಕುಲವು ಅದರದೇಯಾದ ಸಂತತಿಯನ್ನು ಮುಂದುವರಿಸಿಕೊಂಡು ಬರುವ ಪ್ರಯತ್ನದಲ್ಲಿ ಸಾಗುತ್ತ ಬಂದಿವೆ. ಪ್ರತಿಯೊಂದು ಸಮುದಾಯಕ್ಕೆ ಅದರದೇಯಾದ ಮೂಲ ನೆಲೆ ಇದೆ. ಮಾದಿಗ ಸಮುದಾಯ ಈ ತೆರನಾದ ಸಂತತಿಯನ್ನು ಬೆಳೆಸುವ ಕಾರ್ಯಪ್ರವೃತ್ತಿಯನ್ನು ಮುಂದುವರಿಸಿಕೊಂಡು ಬಂದಿರುವ ಅಂಶವನ್ನು ಈ ಕೆಳಗಿನಂತೆ ವಿಶ್ಲೇಷಿಸಲಾಗಿದೆ.

ಸಮಾಜ ವಿಶಾಲವಾದುದು, ಅದು ವಿವಿಧ ಪ್ರಕಾರಗಳನ್ನು ಹೊಂದಿದೆ. ಮನುಷ್ಯನು ಪ್ರಧಾನವಾಗಿ ಸಮಾಜ ಜೀವಿ, ಆತನ ಹಿತ ಸಾಧನೆಗೆ ಸಮಾಜದಲ್ಲಿ ಜೀವಿಸುವುದು ಅಗತ್ಯ. ಸಮಾಜದ ಸಂಬಂಧವೇ ಇಲ್ಲದ ವ್ಯಕ್ತಿಯಿಲ್ಲ, ಕುಟುಂಬ, ವಿವಾಹ, ಆರ್ಥಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಸಂಸ್ಥೆಗಳೆಲ್ಲವೂ ಸಮಾಜನಿಷ್ಠವಾಗಿವೆ. ವ್ಯಕ್ತಿ ಸಮಾಜದ ಅಂಗವೂ ಹೌದು ಮತ್ತು ಸಮಾಜದ ಕಾರ್ಯ ಕಲಾಪಗಳ ಗುರಿಯೂ ಹೌದು. ವ್ಯಕ್ತಿಯು ಸಮಾಜದಲ್ಲಿ ಜೀವಿಸುವುದರಿಂದ ತನ್ನ ಜೀವನದ ಮುಖ್ಯೋದ್ದೇಶಗಳನ್ನು ಸಾಧಿಸುತ್ತಾನೆ. ತನ್ನ ಜೀವನಕ್ಕೆ ಬೇಕಾದ ಸೌಲಭ್ಯಗಳನ್ನು ಹೊಂದಿ, ತನ್ನ ಧ್ಯೇಯಗಳ ಸಾಧನೆಗೆ ನಿರಂತರವಾಗಿ ಶ್ರಮಿಸುತ್ತಾನೆ. "ಅದರಲ್ಲಿ ಉಂಟಾಗುವ ಬದಲಾವಣೆಗಳನ್ನು ಗುರುತಿಸುವುದು ಸುಲಭವೇನಲ್ಲ, ಮಾನವ ಸಮಾಜದ ಪ್ರಾರಂಭದಿಂದ ಇಂದಿನವರೆಗೆ ಈ ಬದಲಾವಣೆಯ ಗತಿ

ಒಂದೇ ಸಮನಾಗಿಲ್ಲ. ವ್ಯವಸಾಯ ಪೂರ್ವ ಸಮಾಜಗಳಲ್ಲಿ ಸಾಮಾಜಿಕ ಬದಲಾವಣೆ ಮಂದಗತಿಯಲ್ಲಿ ನಡೆದಿತ್ತು. ಮಾನವ ತನ್ನ ಅಸ್ತಿತ್ವಕ್ಕಾಗಿ ಪ್ರಕೃತಿ ಮತ್ತು ಇತರ ಜೀವಿಗಳ ಜೊತೆಯಲ್ಲಿ ಹೋರಾಟ ನಡೆಸುತ್ತಿದ್ದ. ಪ್ರಾಣಿಗಳ ಜೊತೆಯಲ್ಲಿ ಪ್ರಾಣಿಯಾಗಿ ಆತನ ಜೀವನ ಸಾಗಿತ್ತು. ವ್ಯವಸಾಯವು ಮಾನವನ ಜೀವನಕ್ಕೆ ಹೊಸ ತಿರುವನ್ನು ಕೊಟ್ಟಿತು. ಅವನ ಬದುಕಿನಲ್ಲಿ ಹೊಸ ಆಸೆ ಆಕಾಂಕ್ಷೆಗಳು ಮೂಡಿದವು. ಸಾಮಾಜಿಕ ಜೀವನಕ್ಕೆ ಅವಶ್ಯಕವಾದ ಹಲವಾರು ಸಂಸ್ಥೆಗಳು ಹುಟ್ಟಿಕೊಂಡವು. ವಿವಾಹ ಕುಟುಂಬ ಮುಂತಾದ ಸಂಸ್ಥೆಗಳು ಹುಟ್ಟಿ ಮಾನವನು ಬಂದಿಸಲ್ಪಟ್ಟನು. ಈ ಎಲ್ಲ ಸಂಸ್ಥೆಗಳು ಮಾನವನ ಸಾಮಾಜಿಕ ಅವಶ್ಯಕತೆಗಳಿಗೆ ಅನುಸಾರವಾಗಿ ತಮ್ಮ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದವು. ಕೈಗಾರಿಕಾ ಕಾಂತ್ರಿಯಿಂದ ಸಮಾಜದ ಮೂಲ ಸ್ವರೂಪವೇ ಬದಲಾಯಿತು ಹೊಸ ಸಾಮಾಜಿಕ ಕ್ರಮ ವ್ಯವಸ್ಥೆ ಹುಟ್ಟಿಕೊಂಡವು."೧ ಈ ರೀತಿಯ ಪರಿವರ್ತನೆಗಳು ಸಮಾಜದಲ್ಲಿ ಇಂದಿಗೂ ಮುಂದುವರಿದುಕೊಂಡು ಬರುತ್ತಿರುವುದನ್ನು ನಾವು ಕಾಣುತ್ತೇವೆ.

ಚಿತ್ರದುರ್ಗ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಬಹುತೇಕ ಮಾದಿಗರು ಗ್ರಾಮೀಣ ಪ್ರದೇಶದಲ್ಲಿ ವಾಸ ಮಾಡುತ್ತಾರೆ. ಇವರು ತಮ್ಮ ತಮ್ಮ ಸಾಮಾಜಿಕ ವ್ಯವಸ್ಥೆಯನ್ನು ಪ್ರತ್ಯೇಕವಾಗಿಯೇ ರೂಪಿಸಿಕೊಂಡಿದ್ದಾರೆ. ಜನನ, ನಾಮಕರಣ, ಜವುಳ, ಋತುಮತಿ, ವಿವಾಹ, ಸೀಮಂತ, ಶವಸಂಸ್ಕಾರ, ಕೌಟುಂಬಿಕ ವ್ಯವಸ್ಥೆ ಹೀಗೆ ಅನೇಕ ಆಚರಣೆಗಳಲ್ಲಿ ಆಯಾ ಜಾತಿಯ ಜನರು ಮಾತ್ರ ಅಧಿಕೃತವಾಗಿ ಭಾಗವಹಿಸುವ ಪದ್ಧತಿಯಿದೆ. ಪ್ರತಿಯೊಂದು ಊರಿನಲ್ಲಿ ಊರ ಗೌಡ ಇರುತ್ತಾನೆ. ಅದೇ ರೀತಿ ಮಾದಿಗೇರಿಯಲ್ಲಿ ಐದು ಅಥವಾ ಎಂಟು ಜನ ಹಿರಿಯ ಯಜಮಾನರು ಇರುತ್ತಾರೆ. ಈ ಯಜಮಾನರಿಗೆ ವಿಶೇಷವಾದ ಗೌರವವನ್ನು ಸೂಚಿಸುತ್ತಾರೆ. ಯಾವುದೇ ಮಹತ್ವದ ಕಾರ್ಯಕ್ರಮಗಳು ನಡೆದರೆ ಇವರು ಮುಂದಾಳುಗಳಾಗಿ ಕಾರ್ಯ ನಿರ್ವಹಿಸುತ್ತಾರೆ. ಇದಕ್ಕೆ ಕೇರಿಯ ಎಲ್ಲಾ ಜನರು ಬದ್ಧರಾಗಿರಬೇಕು. ಈ ಒಂದು ರೀತಿಯಲ್ಲಿ ಮಾದಿಗರು ಸಾಮಾಜಿಕ ಕ್ಷೇತ್ರದಲ್ಲಿ ಯಜಮಾನರ ಪಾತ್ರ ಬಹಳ ಪ್ರಮುಖವಾಗಿರುತ್ತದೆ. ಈ ಸಮುದಾಯದಲ್ಲಿ ಹಿರಿಯರಿಗೆ ಗೌರವ ಇದೆ ನಿಜ. ಆದರೆ ಸಮಾಜದಲ್ಲಿ ಅಸ್ಪೃಶ್ಯರಾಗಿದ್ದರೂ ಇವರ ಆಚರಣೆ ಸಂಪ್ರದಾಯಗಳಲ್ಲಿ ಅತ್ಯಂತ ಶ್ರೀಮಂತಿಕೆ ಮೌಲ್ಯಗಳಿವೆ. ಸಮಾಜವನ್ನು ಗೌರವಯುತವಾಗಿ ಕಾಣುವ ಬಹುದೊಡ್ಡ ಸಾಂಸ್ಕೃತಿಕ ಅನನ್ಯತೆಯನ್ನು ಈ ಸಮುದಾಯವು ಬೆಳೆಸಿಕೊಂಡು ಬಂದಿದೆ. ಹುಟ್ಟಿನಿಂದ ಸಾವಿನವರೆಗಿನ ಆಚರಣೆಗಳಲ್ಲಿ ಎಲ್ಲರು ಸಕ್ರಿಯವಾಗಿ ಪಾಲ್ಗೊಳ್ಳುವ, ಸಂಬಂಧವನ್ನು ಗಟ್ಟಿಯಾಗಿ ಉಳಿಸಿಕೊಂಡು ಬಂದಿರುವುದರಲ್ಲಿ ಎರಡು ಮಾತಿಲ್ಲ.

೪.೧ ಜನನ

ಪ್ರತಿಯೊಂದು ಜೀವಿಗಳಂತೆ ಮನುಷ್ಯನೂ ಒಂದು ಜೀವಿ. ಪ್ರತಿಯೊಂದು ಜೀವಿಗೂ ಜೀವವಿರುವಂತೆ. ಹಸಿವು, ಬಾಯಾರಿಕೆ, ನಿದ್ರೆ, ಸಂತಾನ ಪಡೆಯುವ ಶಕ್ತಿ ಸಹಜವಾಗಿ ಇರುತ್ತದೆ. ಇದು ಪ್ರತಿಯೊಂದು ಜೀವಿಗಳಿಗೂ ಇರುವ ಗುಣ ಲಕ್ಷಣ. ಪ್ರಾಣಿ, ಪಕ್ಷಿ, ಕ್ರಿಮಿ, ಕೀಟ ಇರಬಹುದು. ನಮ್ಮ ತಲೆಯಲ್ಲಿ

ಇರುವ ಹೇನಿನಿಂದ ಹಿಡಿದು ಸಮುದ್ರದಲ್ಲಿ ಇರುವ ತಿಮಿಂಗಿಲವೂ ಸೇರಿದಂತೆ ಜೀವನ ಚಕ್ರವೇ ಬೇರೆಯಿದೆ. ಅದನ್ನು ಹೊರತುಪಡಿಸಿ ಮಾದಿಗ ಸಮುದಾಯವೇನೂ ಬೇರೆಯಿಲ್ಲ. ಆದರೂ ಇವರು ವಾಸಿಸುವ ಪ್ರದೇಶಗಳಲ್ಲಿ ವಿಭಿನ್ನವಾಗಿ ಆಚರಣೆಗಳು, ಸಂಪ್ರದಾಯ, ಆಚಾರ-ವಿಚಾರ, ವಿವಿಧ ನಡವಳಿಕೆಗಳು ಪಾರಂಪರಿಕವಾಗಿ ಮೈಗೂಡಿಸಿಕೊಂಡು ಬಂದಿದ್ದಾರೆ. ಇಂತಹ ಭಿನ್ನತೆಯನ್ನು ಜನನ ಸಂಸ್ಕಾರದಲ್ಲೂ ಕಾಣಬಹುದಾಗಿದೆ. ಜನನಕ್ಕೆ ಸಂಬಂಧಿಸಿದಂತೆ ಮಾದಿಗ ಸಮುದಾಯದ ಆಚರಣೆಯನ್ನು ಈ ಕೆಳಗಿನಂತೆ ವಿಶ್ಲೇಷಿಸಲಾಗಿದೆ.

ಮಾದಿಗ ಸಮುದಾಯದಲ್ಲಿ ಚೊಚ್ಚಲು ಹೆರಿಗೆ ತವರುಮನೆಯಲ್ಲಿ ಆಗುತ್ತದೆ. ಗರ್ಭಿಣಿಗೆ ಐದು ತಿಂಗಳು ತುಂಬಿದ ಮೇಲೆ ತವರ ಮನೆಗೆ ಕರೆದುಕೊಂಡು ಬರುತ್ತಾರೆ. ಗರ್ಭಿಣಿಗೆ ಸಣ್ಣಪುಟ್ಟ ಕೆಲಸ ಮಾಡಿಸುತ್ತಾರೆ. ಕೆಲವರು ಯಾವುದೇ ಕೆಲಸವನ್ನು ಹೆರಿಗೆಯಾಗುವವರೆಗೆ ಮಾಡಿಸುವುದಿಲ್ಲ. ಕೆಲವರು ಆರೋಗ್ಯ ದೃಷ್ಟಿಯಿಂದ ಕೆಲಸವನ್ನು ಮಾಡಿಸುತ್ತಾರೆ. ಒಂಬತ್ತು ತಿಂಗಳು ತುಂಬಿದ ನಂತರವಾಗಿ ಹೆರಿಗೆ ನೋವು ಪ್ರಾರಂಭವಾಗುತ್ತದೆ. ಕೂಡಲೇ ಈ ಸಮುದಾಯದ ಹಿರಿಯ ಮಹಿಳೆಯರನ್ನು ಗ್ರಾಮೀಣ ಪ್ರದೇಶದಲ್ಲಿ ಇವರನ್ನು ಸೂಲಗಿತ್ತಿ ಎಂದು ಕರೆಯುತ್ತಾರೆ. ಗರ್ಭಿಣಿಗೆ ಜೀರಿಗೆ ಕಷಾಯ ಮಾಡಿ ಕುಡಿಸುವುದರಿಂದ ಹೆರಿಗೆ ಆಗುತ್ತದೆ ಎಂಬ ಬಲವಾದ ನಂಬಿಕೆಯನ್ನು ಇಟ್ಟಿಕೊಂಡಿದ್ದಾರೆ. ಆನಂತರ ಬೇಗ ಹೆರಿಗೆಯಾದರೆ ಯಾವುದೇ ಸಮಸ್ಯೆ ಬರುವುದಿಲ್ಲ. ಒಂದುವೇಳೆ ಸಮಸ್ಯೆ ಕಂಡು ಬಂದರೆ ಹಗ್ಗವನ್ನು ಮನೆಯ ಮರದ ತೊಲೆಗೆ ಕಟ್ಟಿ ಅದನ್ನು ಜಗ್ಗಿಸುತ್ತಾರೆ. ಇದರಿಂದ ಪ್ರಯೋಜನವಾಗಿಲ್ಲವೆಂದರೆ ಚಪ್ಪಟೆ ಕಲ್ಲು ಮೇಲೆ ಕುರಿಸಿ ಉಸಿರು ಮೇಲಕ್ಕೆ ಎಳಕೋಬ್ಯಾಡ ಒತ್ತಿ ಒತ್ತಿಯಾಗಿ ಉಸಿರಾಡು ಎಂದು ಹೇಳುತ್ತಾರೆ.

ಹೆರಿಗೆಯಾದ ಮಗುವನ್ನು ಮೃದುವಾದ ಬಟ್ಟೆಯಿಂದ ಒರೆಸಿ ಅಥವಾ ಉಗುರು ಬೆಚ್ಚನೆಯ ನೀರು ಕಾಯಿಸಿ ತೊಳೆಯುತ್ತಾರೆ. ಚೂಪಾದ ಕುಡುಗೋಲಿನಿಂದ ಮಗುವಿನ ಹೊಕ್ಕಳ ಬಳ್ಳಿಯನ್ನು ಕೊಯ್ದು ಗಂಟು ಹಾಕುತ್ತಾರೆ. ಬೇವಿನ ಮರದ ಕಡ್ಡಿಯಿಂದ ಮಗುವಿನ ಕೈಗೆ, ಕಾಲಿಗೆ, ಹಣೆಗೆ, ಸೊಂಟಕ್ಕೆ ಸುಟಗಿಯನ್ನು ಹಾಕುವರು. ನಂತರ ಉಳಿದ ಮಾಸವನ್ನು ಸ್ವರೆ (ಮಡಿಕೆ)ಯಲ್ಲಿ ಹಾಕಿ ತಿಪ್ಪೆಯಲ್ಲಿ ತಗ್ಗು ತೋಡಿ ಸ್ವರೆಯನ್ನು ಅದರಲ್ಲಿ ಹಿರಿಸಿ ಅದಕ್ಕೆ ಅಗರಬತ್ತಿಯನ್ನು ಹಚ್ಚಿ ತಗ್ಗನ್ನು ಕಲ್ಲು ಇಟ್ಟು ಮುಚ್ಚುತ್ತಾರೆ. ನಂತರ ಮಗುವನ್ನು ಮೊರದಲ್ಲಿ ಹಾಕುತ್ತಾರೆ.

ಮೊದಲನೆಯ ಎದೆ ಹಾಲು ಕುಡಿಸುವುದಿಲ್ಲ ಕೆಳಕ್ಕೆ ಬಿಡುತ್ತಾಳೆ. ಸೂಲಗಿತ್ತಿಯರಿಗೆ ಸ್ನಾನಮಾಡಿಸಿ ಸೀರೆ, ಕುಪ್ಪಸವನ್ನು ಉಡಿಸಿ ಕಳುಹಿಸುತ್ತಾರೆ. ಆನಂತರ ಸೊರೆಯಲ್ಲಿ ಬೇವಿನ ಸೊಪ್ಪು ಹಾಕಿ ನೀರು ಕಾಯಿಸಿ ಬಾಣಂತಿಗೆ ಸ್ನಾನ ಮಾಡಿಸುವರು. ಹೀಗೆ ಮೂರು ದಿನಗಳವರೆಗೆ ಸ್ನಾನ ಮಾಡಿಸುವರು. ಬೇವಿನ ಸೊಪ್ಪನ್ನು ಬಾಣಂತಿ ಕೈಗೆ ಕೊಟ್ಟು ಸೂರ್ಯನಿಗೆ ನಮಸ್ಕಾರ ಮಾಡಿಸುವರು. ಹೊಟ್ಟೆ ಸುಕ್ಕು ಬಾರದಂತೆ ಹಾಗೂ ಬೊಜ್ಜು ಬರದಂತೆ ಸೊಂಟಕ್ಕೆ ಬಟ್ಟೆಯನ್ನು ಕಟ್ಟುವರು. ಬೇವಿನಸೊಪ್ಪಿನಲ್ಲಿ ಔಷಧಿಯ ಗುಣ ಇರುವುದರಿಂದ ಚರ್ಮದ ಮೇಲೆ ಇರುವ ಕಲೆಗಳು ಹಾಗೂ ಹೆರಿಗೆಯಾದ

ಸಮಯದಲ್ಲಿ ರಕ್ತದ ಕಣಗಳು ಇರುತ್ತವೆ. ಅವುಗಳನ್ನು ಸ್ವಚ್ಛಗೊಳಿಸುವ ಸಲುವಾಗಿ ಬಿಸಿ ನೀರಿನಲ್ಲಿ ಬೇವಿನಸೊಪ್ಪು ಹಾಕಿ ಬೇಯಿಸಿ ನೀರು ಹಾಕುತ್ತಿತ್ತಾರೆ. ಇದರ ಜೊತೆಗೆ ಬಾಣಂತಿಗೆ ತಲೆಗೆ ತಲೆಬಟ್ಟೆ, ಕಿವಿಗೆ ಅರಳೆ ಮತ್ತು ಬೆಳ್ಳುಳ್ಳಿಯನ್ನು ಇಡುತ್ತಾರೆ. ಮೂರನೇ ದಿನ ಸೂಲಗಿತ್ತಿಯರನ್ನು ಕರೆಯಿಸಿ ಸ್ಥಳೀಯವಾಗಿ ಸಿಗುವಂಥ ಮದ್ಯ ಹಾಗೂ ಮಾಂಸದ ಊಟವನ್ನು ಮಾಡಿಸಿ ಅವರಿಗೆ ಒಂದು ಕುಪ್ಪಸವನ್ನು ಕಾಣಿಕೆಯಾಗಿ ನೀಡಿ ಕಳುಹಿಸುತ್ತಾರೆ. ಅದೇ ದಿನ ಪತಿಯ ತಂದೆ-ತಾಯಿ ಮಗು ಮತ್ತು ಬಾಣಂತಿಯನ್ನು ನೋಡಲು ಬರುತ್ತಾರೆ.

ಮಾದಿಗ ಸಮುದಾಯದಲ್ಲಿ ಅಥವಾ ಬೇರೆ ಸಮುದಾಯದಲ್ಲಿ ಮಕ್ಕಳು ಆಗದೆ ಇದ್ದ ಸಂದರ್ಭದಲ್ಲಿ ಹೆಣ್ಣುಮಕ್ಕಳು ಹಸು ಮಕ್ಕಳ ಕೊರಳ ಬಳ್ಳಿಯನ್ನು ಸೇವಿಸುತ್ತಾರೆ. ಬಾಣಂತಿಗೆ ಪ್ರತಿದಿನ ಸ್ನಾನ ಮಾಡಿಸಿ ಬೆಂಕಿಯಲ್ಲಿ ಲೋಭನವನ್ನು ಹಾಕಿ ತಾಯಿ ಮತ್ತು ಮಗುವಿಗೆ ಕೂದಲನ್ನು ಒಣಗಿಸುತ್ತಾರೆ. ಮಗುವಿಗೆ ಪ್ರತಿದಿನ ಸುಳಿಯ ಮೇಲೆ ಹರಳೆಣ್ಣೆಯನ್ನು ಹಾಕುತ್ತಾರೆ. ಬಾಣಂತಿಗೆ ಮೂರು ದಿನದ ನಂತರ ಎದೆಹಾಲು ಹೆಚ್ಚಿಸುವ ಸಲುವಾಗಿ ದನಮಾಂಸದಲ್ಲಿ ಕೆಲವು ಭಾಗಗಳಾದ "ಈರಿ," "ಗುಂಡಿಗೆ," "ಮೃದುವಾದ ಮಾಂಸದ ತುಂಡು"ಗಳನ್ನು ಮಾಡಿಕೊಡಲಾಗುತ್ತದೆ. ತಾಯಿಗೆ ಎದೆ ಹಾಲು ಇಲ್ಲದಂಥ ಸಂದರ್ಭದಲ್ಲಿ ಮಗುವಿಗೆ ಹಸುವಿನ ಹಾಲು ಹಾಗೂ ರಾಗಿಯ ಅಂಬಲಿಯನ್ನು ಕೊಡುತ್ತಾರೆ.

ಮಗುವಿಗೆ ಶೀತ, ಜ್ವರ, ಕಫ, ವಾಂತಿ, ಭೇದಿ ಮುಂತಾದ ರೋಗ ಬಂದರೆ ಸ್ಥಳೀಯವಾಗಿ ಸಿಗುವ ಬೇವಿನ ಮರದ ಚಕ್ಕೆ ತಂದು ಕಬ್ಬಿಣದ ಕುರ್ಜಿಯನ್ನು ಬೆಂಕಿಯಲ್ಲಿ ಕಾಯಿಸಿ ಬೇವಿನ ಮರದ ಚಕ್ಕೆಯನ್ನು ಸಣ್ಣಗೆ ತೇದಿ ಅದರ ರಸ, ಕಲ್ಲು ಸಕ್ಕರೆ, ಒಲೆಯಲ್ಲಿ ಕಾಯಿಸಿದ ಕಬ್ಬಿಣದ ಕುರ್ಜಿಗೆಯನ್ನು ನೀರಿನಲ್ಲಿ ಹಾಕುತ್ತಾರೆ. ಅದರಿಂದ ಬಂದಿರುವ ರಸವನ್ನು ಕಷಾಯ ಮಾಡಿ ಕುಡಿಸುತ್ತಾರೆ. ಮಕ್ಕಳಿಗೆ ಜ್ವರ ಬಂದರೆ ಬೇವಿನ ಕಡ್ಡಿಯನ್ನು ಬೆಂಕಿಯಲ್ಲಿ ಕಾಯಿಸಿ ಸುಟಿಗೆ ದೇವರ ಹೆಸರಿನಲ್ಲಿ ಹಾಕುತ್ತಾರೆ. ದೇವರಿಗೆ ನಮಸ್ಕರಿಸುತ್ತಾರೆ.

ಪ್ರಸ್ತುತ ದಿನಮಾನಗಳಲ್ಲಿ ಸೂಲಗಿತ್ತಿಯರಿಂದ ಹೆರಿಗೆ ಮಾಡಿಸುವುದು ಕಡಿಮೆಯಾಗಿದೆ. ಕಾರಣ ಜನರಲ್ಲಿ ಜಾಗೃತಿಯಿಂದ ಹಾಗೂ ಪ್ರತಿಯೊಂದು ಗ್ರಾಮೀಣ ಪ್ರದೇಶದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ, ಅಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು ಮತ್ತು ಪ್ರತಿ ಗುರುವಾರ ತಾಲೂಕು ಸರ್ಕಾರಿ ಅಸ್ಪತ್ರೆಯಲ್ಲಿ ಗರ್ಭಿಣಿಯರಿಗೆ ಪ್ರತಿ ತಿಂಗಳು ಅವರ ಆರೋಗ್ಯದ ಬಗೆಗೆ ಅಸ್ಪತ್ರೆಯಲ್ಲಿ ಪರೀಕ್ಷೆಯನ್ನು ಮಾಡುತ್ತಾರೆ. ಯಾವುದೇ ತೊಂದರೆ ಬಂದರೆ ಆರೋಗ್ಯ ಕವಚವು ಅವರನ್ನು ಕರೆದುಕೊಂಡು ಹೋಗಿ ಹೆರಿಗೆಯನ್ನು ಮಾಡಿಸುತ್ತಾರೆ. ಅಲ್ಲೇ ಮೂರು ದಿನಗಳ ಕಾಲ ಇರಿಸಿಕೊಂಡು ಕಳುಹಿಸುತ್ತಾರೆ. ಸರ್ಕಾರದ ಯೋಜನೆಗಳಾದ ಹೆರಿಗೆ ಸುರಕ್ಷ ಯೋಜನೆ, ಮಡಿಲು ಕಿಟ್ಟು, ಸುರಕ್ಷಿತವಾದ ಔಷಧಿಗಳನ್ನು ಕೊಡುವಂಥ ವ್ಯವಸ್ಥೆಯನ್ನು ಸದುಪಯೋಗ ಪಡಿಸಿಕೊಂಡಿದ್ದಾರೆ.

೪.೨ ನಾಮಕರಣ

ಮಾದಿಗ ಸಮುದಾಯದಲ್ಲಿ ನಾಮಕರಣವನ್ನು ಅವರ ಅನುಕೂಲಕ್ಕೆ ಅನುಸಾರವಾಗಿ ಮಾಡಿಕೊಳ್ಳುತ್ತಾರೆ. ಕೆಲವರು ಮೂರು ತಿಂಗಳಲ್ಲಿ, ಇನ್ನು ಕೆಲವರು ಐದು, ಆರು ತಿಂಗಳಲ್ಲಿ

ಮಾಡುತ್ತಾರೆ. ಆದರೆ ಸಮುದಾಯದ ಹಿರಿಯರು ಹೇಳುವ ಪ್ರಕಾರ ಒಂದು ವರ್ಷ ತುಂಬುವ ಒಳಗೆ ಈ ಕಾರ್ಯವನ್ನು ಮಾಡಿ ಮುಗಿಸಬೇಕು. ಈ ಉದ್ದೇಶದಿಂದ ಒಂದು ವರ್ಷದ ಒಳಗೆ ಮಾಡುತ್ತಾರೆ. ನಾಮಕರಣವೆಂದರೆ ಹೆಸರನ್ನು ಇಡುವುದಕ್ಕೆ 'ನಾಮಕರಣ" ಅಥವಾ 'ತೊಟ್ಟಿಲುಶಾಸ್ತ್ರ' ಎಂದು ಕರೆಯುತ್ತಾರೆ. ಇವರಲ್ಲಿ ತೊಟ್ಟಿಲು ಇಡುವಂತಹ ಸಮಯದಲ್ಲಿ ಹೊಸ ತೊಟ್ಟಿಲು ಮಾಡಿಸುತ್ತಾರೆ. ಈ ಸಮುದಾಯದ ಹಿರಿಯ ಯಜಮಾನ ಹತ್ತಿರ ಯಾವ ಹೆಸರು ಇಡಬೇಕು. ಎಂದು ಕೇಳಿಸಿ ಗಂಡ ಮನೆಯರಿಗೆ ಹಾಗೂ ಸೋದರಮಾವನಿಗೆ ಕಾರ್ಯಕ್ರಮವಿರುವ ದಿನವನ್ನು ತಿಳಿಸುತ್ತಾರೆ. ನಂತರ ಎಲ್ಲ ಸಂಬಂಧಿಕರಿಗೆ ಮಾಹಿತಿ ಮುಟ್ಟಿಸುತ್ತಾರೆ. ನಾಮಕರಣ ದಿವಸ ಸೋದರಮಾವನಿಗೆ ಹೊಸ ಬಟ್ಟೆಯನ್ನು ತರುತ್ತಾರೆ. ತಾಯಿಯ ತವರುಮನೆಯವರು ಮೊಮ್ಮಗುವಿಗೆ ಬೆಳ್ಳಿ ಉಡುದಾರ, ಕಾಲುಗೆಜ್ಜೆ, ಚೈನು, ಕಿವಿ ಓಲೆ, ಲಿಂಗದ ಕಾಯಿ ಮುಂತಾದ ವಸ್ತುಗಳನ್ನು ತರುವ ಸಂಪ್ರದಾಯವಿದೆ.

ಸೋದರಮಾವ ಮಗುವಿನ ತಂದೆ ತಾಯಿಗೆ ಹೊಸ ಬಟ್ಟೆಯನ್ನು ತರುತ್ತಾರೆ. ನಾಮಕರಣ ದಿವಸ ತೊಟ್ಟಿಲನ್ನು ಹೂವಿನಿಂದ ಸಿಂಗರಿಸುತ್ತಾರೆ. ಹುರಳಿ, ತೊಗರಿ, ಕಡಲೆ ಧಾನ್ಯಗಳನ್ನು ಒಟ್ಟಿಗೆ ಬೇಯಿಸಿ ಬಿಳಿ ಬಟ್ಟೆಯಲ್ಲಿ ಮೂರು ಗಂಟು ಕಟ್ಟಿ ಮಗುವಿನ ಕಾಲಿನ ಬಳಿ ಇಡುವರು. ಮಗುವಿನ ತಂದೆ ತಾಯಿ ಸ್ನಾನ ಮಾಡಿಕೊಂಡು ಹೊಸ ಬಟ್ಟೆಯನ್ನು ಧರಿಸಿಕೊಂಡು ಈ ಸಮುದಾಯದ ಹಿರಿಯರು ಹೇಳಿದ ಸಮಯಕ್ಕೆ ಎಲ್ಲರು ಸೇರುತ್ತಾರೆ.

ಮೊದಲು ತೊಟ್ಟಲಿಗೆ ತಂದೆ ತಾಯಿ ಪೂಜೆ ಮಾಡಿ. ಹಿರಿಯರು ಹೇಳಿದ ಹೆಸರನ್ನು ಸೋದರಮಾವನ ಹತ್ತಿರ ಮೂರು ಸಾರಿ ಮಗುವಿನ ಕಿವಿಯಲ್ಲಿ ಹೆಸರು ಹೇಳಿ. ಮಗುವಿನ ಕಾಲ ಬಳಿಯಿರುವ ಒಂದು ಗುಗ್ಗರಿಯ ಗಂಟನ್ನು ಬಾಯಿಯಲ್ಲಿ ಕಚ್ಚಿಕೊಂಡು ಬರುತ್ತನೆ. ಆಗ ಬಾಗಿಲಲ್ಲಿ ಇರುವ ಸೋದರಮಾವನಿಗೆ ಅತ್ತೆ ಮಾವಂದಿರು ತಮಾಷೆಗೆ ಪೊರಕೆ, ಮುದ್ದೆ ಕೋಲುಗಳಿಂದ ನಾಯಿ ಬಂದಿದೆ ಹೊಡೆಯಿರಿ ಎಂದು ಮೂರು ಬಾರಿ ಹೇಳುವುದುಂಟು. ಬಂದಿರುವ ಎಲ್ಲಾ ಸಂಬಂಧಿಕರು ಮಗುವಿಗೆ ಉಡುಗೊರೆಯನ್ನು ಕೊಡುತ್ತಾರೆ. ಕೆಲವರು ಮಗುವಿನ ತಾಯಿಗೆ ಸೀರೆ ಕುಪ್ಪಸವನ್ನು ಉಡುಗೊರೆಯಾಗಿ ನೋಡುತ್ತಾರೆ. ಇವರಲ್ಲಿ ಕರೆಯುವಂಥ ಹೆಸರುಗಳೆಂದರೆ ಹೆಚ್ಚಿನದಾಗಿ ಸ್ತ್ರೀ ದೇವತೆಯ ಹೆಸರುಗಳೇ ಆಗಿರುತ್ತಿದ್ದವು. ಉದಾಹರಣೆಗೆ ದುರುಗಮ್ಮ-ದುರುಗಪ್ಪ, ಮಾರಕ್ಕ-ಮಾರಯ್ಯ, ಕೆಂಚಮ್ಮ-ಕೆಂಚಪ್ಪ, ಚೌಡಮ್ಮ-ಚೌಡಪ್ಪ, ಪೆನ್ನಮ್ಮ-ಪೆನ್ನಯ್ಯ, ತಿಪ್ಪಮ್ಮ-ತಿಪ್ಪಯ್ಯ, ಹಿರಿಯಮ್ಮ-ಹಿರಿಯಪ್ಪ ಹುಲುಗಮ್ಮ-ಹುಲುಗಪ್ಪ ಈ ಎಲ್ಲಾ ಹೆಸರುಗಳು ಸ್ತ್ರೀ ಪ್ರಧಾನ ದೇವತೆಗಳು ಹೆಸರುಗಳನ್ನೇ ಪುರುಷವಾಚಿಯಾಗಿಸಿ ಇಟ್ಟಿರುವುದು ಕಾಣುತ್ತದೆ. ಕಾರಣ ದೇವತೆಗಳ ಹೆಸರುಗಳು ಇಟ್ಟರೆ ಯಾವುದೇ ತೊಂದರೆಗಳು ಬರುವುದಿಲ್ಲ ಎಂಬ ನಂಬಿಕೆ.

ಇತ್ತೀಚೆಗೆ ಮಾದಿಗರಲ್ಲೂ ಸುಶಿಕ್ಷಿತರು, ನೌಕರ ವರ್ಗದವರು, ಮೇಲ್ಜಾತಿ ಜನಗಳ ಹೆಸರುಗಳನ್ನು ಹಾಗೂ ಆಧುನಿಕ ಹೆಸರುಗಳನ್ನು ತಮ್ಮ ಮಕ್ಕಳಿಗೆ ಇಡುವ ಪದ್ಧತಿ ಅನುಸರಿಸಿರುವುದು ಕಂಡುಬಂದಿದೆ. ಕೆಲವರು ನಾವು ಹಿಂದಿನ ಕಾಲದ ಹೆಸರುಗಳನ್ನು ಇಟ್ಟಿಕೊಂಡರೆ ಇವನು ಅಸ್ಪೃಶ್ಯ ಜಾತಿಯವನು

ಎಂದು ಗುರುತಿಸಲು ಸಾಧ್ಯವಾಗುತ್ತದೆ. ಆದ್ದರಿಂದ ಬದಲಾವಣೆಗೆ ಹೊಂದಿಕೊಂಡಿರುವದರಿಂದ ಬೇರೆ ಯಾವುದೇ ಸಮುದಾಯದವರು ಗುರುತಿಸಬಾರದು ಎನ್ನುವ ಕಾರಣ. ಹೀಗೆ ಅನೇಕ ಅಂಶದಿಂದಾಗಿ ಇಂತಹ ಹೆಸರುಗಳನ್ನು ಇಡಲಾಗಿದೆ. ಉದಾಹರಣೆಗೆ ಬಸಪ್ಪ-ಬಸಮ್ಮ, ರುದ್ರಪ್ಪ-ರುದ್ರಮ್ಮ, ಲಿಂಗಪ್ಪ-ಲಿಂಗಮ್ಮ, ತಿಪ್ಪಣ್ಣ-ತಿಪ್ಪಮ್ಮ, ರಾಜಪ್ಪ-ರಾಜಮ್ಮ, ರಾಧ-ಕೃಷ್ಣ.

೪.೩ ಜವಳ ಅಥವಾ ತಲೆ ಕೂದಲು ತೆಗೆಯುವ ಶಾಸ್ತ್ರ

ಹುಟ್ಟಿದ ಒಂದು ವರ್ಷದೊಳಗೆ ಮಗುವಿನ ತಲೆ ಕೂದಲನ್ನು ತೆಗೆಯುವ ಶಾಸ್ತ್ರಕ್ಕೆ ಅಥವಾ ಜವುಳ ಎಂದು ಕರೆಯುತ್ತಾರೆ. ಒಂದು ವರ್ಷದೊಳಗೆ ಈ ಶಾಸ್ತ್ರವನ್ನು ಮಾಡದಿದ್ದರೆ ಮೂರು ಅಥವಾ ಐದು ವರ್ಷದವರೆಗೂ ತಲೆ ಕೂದಲನ್ನು ತೆಗೆಸುವಂತಿಲ್ಲ. ಹೆಣ್ಣು ಮಗುವಾದರೆ ಎರಡು ಅಥವಾ ನಾಲ್ಕು ವರ್ಷದೊಳಗೆ ಕೂದಲನ್ನು ತೆಗೆಸಬೇಕು.

ತಲೆ ಕೂದಲನ್ನು ಮೊದಲ ಬಾರಿಗೆ ತೆಗೆಯುವಂಥ ಸಮಯದಲ್ಲಿ ಅವರಿಗೆ ಸಂಬಂಧಿಸಿದ ದೇವರಿಗೆ ಅಥವಾ ಯಾವುದೇ ಪುಣ್ಯಕ್ಷೇತ್ರಕ್ಕೆ ಹೋಗಿ ತೆಗೆಯುತ್ತಾರೆ. ಅಂತವುಗಳೆಂದರೆ ಚಿತ್ರದುರ್ಗ ಜಿಲ್ಲೆಯ ನಾಯಕನಹಟ್ಟಿಯ ತಿಪ್ಪೇರುದ್ರಸ್ವಾಮಿ, ಕೊಂಡ್ಲಹಳ್ಳಿ ಬೀಳಿ ನೀರು ಚೆಲುಮೆ, ನುಂಕೆ ಭೈರವ, ಜಗಳೂರಿನ ಜಗಳೂರಜ್ಜ, ಚಳ್ಳಕೇರಿಯ ಈರಣ್ಣದೇವರು, ಪಾವಗಡ ಶನಿಶ್ವೇರ ದೇವರು, ಧರ್ಮಸ್ಥಳ ಮಂಜುನಾಥ ಸ್ವಾಮಿ ದೇವರು ಹೀಗೆ ಪ್ರಸಿದ್ಧ ದೇವರುಗಳಿಗೆ ಮುಡಿಯನ್ನು ಅರ್ಪಿಸುತ್ತಾರೆ. ಮಗುವಿನ ತಂದೆ-ತಾಯಿಗೆ ಸೋದರಮಾವ ಹೊಸ ಬಟ್ಟೆಯನ್ನು ತಂದಿರುತ್ತಾನೆ.

ತಲೆ ಕೂದಲನ್ನು ತೆಗೆಯುವ ಸಂದರ್ಭದಲ್ಲಿ ವಿಶೇಷವಾಗಿ ಸೋದರಮಾವನ ಪಾತ್ರ ಬಹಳ ಮುಖ್ಯವಾಗಿರುತ್ತದೆ. ಮೊದಲು ಹೊಳೆ ಅಥವಾ ನದಿ ನೀರಿನಲ್ಲಿ ಮಗು ತಾಯಿ ತಂದೆ ಸ್ನಾನ ಮಾಡಿ ದೇವರಿಗೆ ಹಣ್ಣು ಕಾಯಿ, ಅಗರಬತ್ತಿ, ಎಲೆ, ಅಡಿಕೆ, ಹೂ ಕೊಟ್ಟು ಪೂಜೆ ಮಾಡಿಸಿಕೊಂಡು ಬರುತ್ತಾರೆ. ಸಾಂಪ್ರದಾಯಿಕವಾಗಿ ವೀಳ್ಯೆದೆಲೆಯನ್ನು ಕತ್ತರಿ ರೂಪದಲ್ಲಿ ಮಾಡಿಕೊಂಡು ಸೋದರಮಾವ ಮಗುವಿನ ಕೂದಲನ್ನು ಬಲದಿಂದ ಎಡಕ್ಕೆ ಎಡದಿಂದ ಬಲಕ್ಕೆ, ಮಧ್ಯಕ್ಕೆ ಒಂದು ಬಾರಿ ನಟನೆಯ ಮೂಲಕ ಕತ್ತರಿಸುವನು. ಸಂಪ್ರದಾಯದ ಪ್ರಕಾರ ಸಣ್ಣ ಕತ್ತರಿಯಿಂದ ನೆತ್ತಿಯ ಮೇಲೆ ಸಾಂಕೇತಿಕವಾಗಿ ಐದಾರು ಕೂದಲನ್ನು ಕತ್ತರಿಸಿ ಅವುಗಳನ್ನು ಊರಿಗೆ ತಂದು ಊರಿನಲ್ಲಿ ತಲೆಯ ಎಲ್ಲಾ ಕೂದಲನ್ನು ತೆಗೆದು ಬಿಳಿ ಬಟ್ಟೆ ಎಲ್ಲವನ್ನು ಗಂಟುಕಟ್ಟಿ ಯಾವುದಾದರೂ ಹಳ್ಳಕ್ಕೋ, ಹೊಳೆಗೋ ಅಥವಾ ಬಾವಿಗೆ ಎಸೆಯುವನು. ಈ ಸಂದರ್ಭದಲ್ಲಿ ನೆಂಟರು ಮಗು, ತಂದೆ, ತಾಯಿಗೆ ಹೊಸ ಬಟ್ಟೆಯನ್ನು ಮುಯ್ಯವಾಗಿ ಅರ್ಪಿಸುವರು.

ಇಂತಹ ಆಚರಣೆಯು ಇವತ್ತಿನ ದಿನಮಾನಗಳಲ್ಲಿ ಕಡಿಮೆ ಪ್ರಮಾಣದಲ್ಲಿದೆ. ಶಿಕ್ಷಣವನ್ನು ಪಡೆದುಕೊಂಡಿರುವ ತಂದೆ-ತಾಯಿಯರು ಸಮಾಜಕ್ಕೆ ಹೊಂದಿಕೊಂಡು ಹೋಗುವಂತಹ ಪರಿಸ್ಥಿತಿ ಇರುವುದರಿಂದ ಇಂತಹ ಆಚರಣೆಗಳು ಮರೆಮಾಚುವಂಥ ವಾತಾವರಣವನ್ನು ನಿರ್ಮಾಣ

ಮಾಡಿಕೊಂಡಿದ್ದಾರೆ. ಆಚರಣೆಯಲ್ಲಿ ಯಾವುದೇ ಸಂಬಂಧಿಕರು ಭಾಗವಹಿಸುವುದು ಕಡಿಮೆ ಆದರೂ ಸಹ ಕೆಲವು ಗ್ರಾಮೀಣ ಭಾಗದಲ್ಲಿ ಅಲ್ಲಲ್ಲಿ ಕಂಡುಬರುತ್ತದೆ

೪.೪ ಋತುಮತಿ ಅಥವಾ ಮೈನೆರೆದ ಆಚರಣೆ

ಪ್ರತಿಯೊಂದು ಸಮುದಾಯದ ಹೆಣ್ಣುಮಕ್ಕಳಿಗೆ ಋತುಚಕ್ರ ಎನ್ನುವಂಥ ಆಯಾ ವಯಸ್ಸುಗಳ ಅನುಗುಣವಾಗಿ ಪ್ರಾರಂಭವಾಗುತ್ತದೆ. ಸುಮಾರು ೧೩ರಿಂದ ೧೫ ವರ್ಷದ ಪ್ರತಿಯೊಂದು ಹೆಣ್ಣುಮಕ್ಕಳಲ್ಲಿ ನಡೆಯುವಂತಹ ಒಂದು ಪ್ರಕೃತಿದತ್ತವಾದ ಪ್ರಕ್ರಿಯೆ. ಹೆಣ್ಣು ಮಕ್ಕಳ ದೇಹದಲ್ಲಿ ಬದಲಾವಣೆಗಳ ಪರ್ವವಾಗುತ್ತದೆ. ಮಾದಿಗ ಸಮುದಾಯದಲ್ಲಿ ಋತುಮತಿಯಾದಂತಹ ಸಮಯದಲ್ಲಿ ಯಾವುದಾದರೂ ಹೊಲದಲ್ಲಿ ಅಥವಾ ಕೂಲಿ ಕೆಲಸದಲ್ಲಿ ಹೋಗಿದ್ದರೆ ಕೆಲಸವನ್ನು ಬಿಟ್ಟು ಮನೆಗೆ ಕರೆದುಕೊಂಡು ಬರುತ್ತಾರೆ. ಚಿತ್ರದುರ್ಗದ ಕಡೆ 'ಮೈನೆರೆದಳು' ಎಂಬುದಕ್ಕೆ ದೊಡ್ಡವಳಾದಳು, ಋತುಮತಿಯಾದಳು, 'ರಜಸ್ವಲೆ' ಆದಳು ಎಂದು ಹೇಳುವರು. ಸೋದರ ಅತ್ತೆ ಋತುಮತಿಯಾದ ಹೆಣ್ಣು ಮಗುವಿಗೆ ಸ್ನಾನ ಮಾಡಿಸಿ ಒಡಲಿಗೆ ತುಂಬಿದ ಕಾಯಿ ಎಲೆ, ಅಡಿಕೆ, ಒಣಕೊಬ್ಬರಿ, ಉತ್ತತ್ತಿ, ಕಲ್ಲು ಸಕ್ಕರೆ, ಬೆಲ್ಲ ಅಕ್ಕಿಯನ್ನು ಒಡಲು ತುಂಬಿ ಬಾಗಿಲಿಗೆ ಪೂಜೆ ಮಾಡಿ ಒಳಗಡೆ ಕರೆದುಕೊಳ್ಳುತ್ತಾರೆ. ಅಂದಿನಿಂದ ಅದು ಮುಟ್ಟಿನ ಮನೆಯೆಂದು ಪರಿಗಣಿಸುವರು. ಕೇವಲ ಹದಿನಾರನೆಯ ದಿನದವರೆಗೆ ಮಾತ್ರ ಆವತ್ತಿನಿಂದ ಅವಳಿಗೆ ಪ್ರತ್ಯೆ ತಟ್ಟೆ, ಚಾಪೆ, ರಗ್ಗು ಕೊಡುತ್ತಾರೆ. ಪ್ರತಿದಿನ ಎಣ್ಣೆ ನೀರಿನಲ್ಲಿ ಸ್ನಾನ ಮಾಡಿಸುತ್ತಾರೆ. ಪ್ರತಿದಿನ ಒಂದೊಂದು ಮನೆಯವರು ಅಡುಗೆಯನ್ನು ಮಾಡಿ ಹಾಕುತ್ತಾರೆ. ಇದು ಎಲ್ಲರೂ ಹೊಂದಾಣಿಕೆಯಿಂದಿರುವ ಹಳ್ಳಿಗಳಲ್ಲಿ ಮಾತ್ರ ನಡೆಯುತ್ತದೆ.

ಹದಿನಾರನೆಯ ದಿನ ವಿಶೇಷವಾದ ಕಾರ್ಯಕ್ರಮವನ್ನು ನಡೆಸುವರು. ಇದಕ್ಕೂ ಮುಂಚೆಸೋದರ ಮಾವ ಎಲ್ಲಾ ಸಂಬಂಧಿಕರಿಗೆ ವಿಷಯವನ್ನು ಮುಟ್ಟಿಸಬೇಕು. ಹದಿನಾರನೆಯ ದಿನ ಹೆಣ್ಣನ್ನು ಕುಳ್ಳಿರಿಸುವ ಶಾಸ್ತ್ರ ಉಡಿ ತುಂಬಿಸುವ ಪದ್ಧತಿಯನ್ನು ಮಾಡುತ್ತಾರೆ. ಅಂದು ಸೋದರಮಾವ ಹುಡುಗಿಯ ನಾಲಿಗೆ ಸುಡುವನು. ನಾಲಿಗೆ ಸುಡುವುದು ಎಂದರೆ ಬೇವಿನ ಕಡ್ಡಿಯಿಂದ ಬೆಂಕಿಯಲ್ಲಿ ಸುಟ್ಟು ಹುಡುಗಿಯ ನಾಲಿಗೆ ಮುಟ್ಟಿಸುವುದು. ಕುರಿಪಿಚ್ಚಿಗೆಯ ಮೇಲೆ ಹುಡಿಗಿಯ ಸೋದರ ಅತ್ತೆ ಅರಿಶಿಣ ನೀರು ಹಾಕುತ್ತಾಳೆ. ಅವಳಿಗೆ ಹೋಕಳಿ ನೀರು ನಿಂಬೆಹಣ್ಣು ನೀವಾಳಿಸಿ ಮನೆಯ ಬಾಗಿಲ ಬಳಿ ಕರೆದುಕೊಂಡು ಬಂದು ಬಾಗಿಲಿಗೆ ಪೂಜೆ ಮಾಡಿಸಿ ಬಲಗಾಲು ಇರಿಸಿ ಒಳಕ್ಕೆ ಕರೆದುಕೊಳ್ಳುತ್ತಾರೆ. ನಂತರ ಅವಳನ್ನು ಸೋದರಮಾವ ತಂದಿರುವ ಸೂಸುಗ, ಕೇಳಿನಹಾರ, ಸೀರೆ ಕುಪ್ಪಸದಿಂದ ಸಿಂಗರಿಸುತ್ತಾರೆ. ಬಂದಿರುವ ಸಂಬಂಧಿಕರಿಗೆ ಹಾಗೂ ಊರಿನ ಮಾದಿಗ ಸಮುದಾಯದ ಜನರಿಗೆ ಸಿಹಿ ಊಟವನ್ನು ಮಾಡಿಸುತ್ತಾರೆ. ಮನೆಯ ಹೊರಗೆ ಸುಂದರವಾದ ಮಂಟಪವನ್ನು ನಿರ್ಮಿಸುತ್ತಾರೆ. ಅಲ್ಲಿ ಎರಡು ಕುರ್ಚಿ ಇರಿಸುತ್ತಾರೆ ಒಂದು ಋತುಮತಿಯಾದ ಹೆಣ್ಣು ಇನ್ನೊಂದು ಹುಡುಗಿಗೆ ಹುಡುಗನ ವೇಷವನ್ನು ಹಾಕಿ ಪಕ್ಕದಲ್ಲಿ ಕೂರಿಸಿರುತ್ತಾರೆ.

ಮೊದಲ ಒಸಗೆಯನ್ನು ಸೋದರ ಅತ್ತೆ ಎಲೆ, ಅಡಿಕೆ, ಉತ್ತತ್ತಿ, ಹಣ್ಣು, ಒಣಕೊಬ್ಬರಿ, ಖಾರ ಮಂಡಕ್ಕಿ, ಕರ್ಜಿಕಾಯಿ ಮಡಿಲುಗೆ ತುಂಬಿ ಸಾಸೇವು ಇಟ್ಟು ಕಳಸವನ್ನು ಬೆಳಗುವಳು. ನಂತರ ಎಲ್ಲಾ ಸಂಬಂಧಿಕರು ಸೀರೆ, ಕುಪ್ಪಸ, ಕಾಲುಚೈನ್, ಕಿವಿಓಲೆ, ತಟ್ಟೆ, ಕಳಸ, ಹೀಗೆ ಅವರಿಗೆ ಸರಿ ಹೊಂದುವ ವಸ್ತುಗಳ ಒಸಗೆಯನ್ನು ಮಾಡುವರು. ಇದರ ಜೊತೆಗೆ ಸೋಬನೆ ಪದವನ್ನು ಹಾಡಿಸುತ್ತಾರೆ. ರಾತ್ರಿ ಸುಮಾರು ೧೨ ಗಂಟೆಯವರೆಗೆ ನಡೆಯುತ್ತದೆ. ಮಂಗಳಾರತಿ ಮಾಡಿ ಒಳಗಡೆ ಕರೆದುಕೊಳ್ಳುವರು. ಮರುದಿನ ಗಂಗಮ್ಮನ ಪೂಜೆಯನ್ನು ಮಾಡಿಸುತ್ತಾರೆ. ಮಧ್ಯಾಹ್ನ ಎಲ್ಲ ಸಂಬಂಧಿಕರಿಗೆ ಮಾಂಸದ ಊಟವನ್ನು ಮಾಡಿಸುತ್ತಾರೆ.

ಒಸಗೆ: ಈ ಸಮಾರಂಭವನ್ನು ಋತುಮತಿಯಾದ ಹೆಣ್ಣು ಮಕ್ಕಳಿಗೆ ಮಾಡುವ ಕಾರ್ಯಕ್ರಮವಾಗಿರುತ್ತದೆ. ಬಹುತೇಕ ಹಳ್ಳಿಗಳಲ್ಲಿ ಆಚರಿಸುತ್ತಾರೆ. ಬಹುತೇಕ ಋತಿಮತಿಯಾದ ವಿಷಯವನ್ನು ಗೌಣವಾಗಿಸುವ ಉದ್ದೇಶವಾಗಿರುತ್ತದೆ. ಒಸಗೆ ಕಾರ್ಯಕ್ಕೆ ತಮ್ಮ ಬಂಧು ಬಳಗವನ್ನು ಆಹ್ವಾನಿಸುವರು. ಈ ಆಚರಣೆಯನ್ನು ಐದು ದಿನಗಳ ಕಾಲ ನಡೆಸುವರು. ಪ್ರತಿ ದಿನವೂ ವಿಭಿನ್ನ ವೇಷ ಭೂಷಣ ತೊಡಿಸಿ ಹೂ ಮುಡಿಸುವರು. ಅಜ್ಜಿಯರು ಒಸಗೆಯ ಪದಗಳನ್ನು ಹಾಡಿ ಎಲೆ ಅಡಿಕೆ ಪಡೆಯುವರು. ಅಲ್ಲದೆ ನೆರೆಹೊರೆಯುವರು ಸಹ ಇದರಲ್ಲಿ ಪಾಲ್ಗೊಳ್ಳುವುದು ಸಾಮಾನ್ಯ. ಒಂಬತ್ತು ದಿನವಗಳವರೆಗೆ ಮನೆಲ್ಲಿಟ್ಟು ಕೊಂಡು ನಂತರ ಅವರವರ ಕೆಲಸ ಕಾರ್ಯಗಳಲ್ಲಿ ತೊಡಗಿಸುತ್ತಾರೆ. ಋತುಮತಿಯಾದ ಹುಡುಗಿಗೆ ಕಾರಕೊಬ್ಬರಿ, ಎಳ್ಳು ಚಿಗಳಿ ಇತರ ಆಧುನಿಕ ಸಹಿ ತಿನಿಸುಗಳನ್ನು ತರುವುದು ಹಾಗೂ ಮಾಡಿ ಇಡುವುದು ಪದ್ದತಿ. ಇದು ಆಕೆಯ ಶರೀರದ ಬೆಳವಣಿಗೆಗೆ ಹಾಗೂ ಎಲ್ಲ ಕೆಲಸದಲ್ಲಿ ಕಷ್ಟಪಡುವ ಹೆಣ್ಣಿನ ಸೊಂಟದ ಭದ್ರತೆಗೆ ಸಹಾಯವಾಗುತ್ತದೆ. ಈ ಆಚರಣೆಯಲ್ಲಿ ಎಲ್ಲಾ ಜನವರ್ಗಗಳು ಸಹ ಬದ್ದವಾಗಿವೆ.

ಈ ಆಚರಣೆಯು ಸ್ವಲ್ಪಮಟ್ಟಿಗೆ ಬೇರೆ ರೂಪ ಪಡೆದುಕೊಂಡಿದೆ. ಋತುಮತಿಯಾಗಿರುವ ಹೆಣ್ಣುಮಕ್ಕಳನ್ನು ಕೆಲವರು ಮುಟ್ಟನ್ನು ತೆಗೆಯುವ ಸಲುವಾಗಿ ಸ್ನಾನ ಮಾಡಿಸಿ ದೇವರಿಗೆ ಕೈಮುಗಿಸಿ ಒಳಗಡೆ ಕರೆದುಕೊಳ್ಳುವ ಆಚರಣೆ ಹೆಚ್ಚು ನಗರ ಪ್ರದೇಶದಲ್ಲಿ ಕಂಡು ಬರುತ್ತದೆ. ಕೆಲವರು ಗ್ರಾಮೀಣ ಭಾಗದಲ್ಲಿ ಕೈ ಮುಗಿಸಿ ಒಳಗಡೆ ಕರೆದುಕೊಳ್ಳುತ್ತಾರೆ. ಆದರೆ ಗ್ರಾಮೀಣ ಪ್ರದೇಶದಲ್ಲಿ ಅತ್ಯಂತ ಸಾಂಪ್ರದಾಯಿಕ ಕಾರ್ಯಕ್ರಮವನ್ನು ಮಾಡಿಸುತ್ತಾರೆ. ಹದಿನಾರನೆಯ ದಿವಾಸ ಬಡವರು, ಶ್ರೀಮಂತರು ಎನ್ನದೇ ಶ್ಯಾಮಿಯಾನ, ಹೂವಿನ ಅಲಂಕಾರ ವಸ್ತುಗಳಿಂದ ಸಿಂಗರಿಸುವರು. ಎಲ್ಲಾ ಸಂಬಂಧಿಕರಿಗೆ ಊಟ ಹಾಕುತ್ತಾರೆ.

೪.೫ ವಿವಾಹ

ವಿವಾಹವು ಸಾಮಾಜಿಕ ಸಂಬಂಧವನ್ನು ವೃದ್ಧಿಸುವ ಮತ್ತು ಸಂತಾನೋತ್ಪತ್ತಿ ಮಾಡುವ ಕಾರ್ಯವನ್ನು ಪ್ರತಿಯೊಂದು ಸಮಾಜದಲ್ಲಿ ಮಾಡಿಕೊಂಡು ಬಂದಿದೆ. ಪ್ರಕೃತಿದತ್ತವಾಗಿ ಮುಂದುವರೆದುಕೊಂಡು ಬಂದಿರುವ ಆಚರಣೆಯಾಗಿದೆ. ಇದರ ಪ್ರಬುದ್ಧತೆಯನ್ನು ಕಾಪಾಡುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತಿಯನ್ನು ಮಾಡಿಕೊಂಡು ಬಂದಿದೆ.

ಮಾದಿಗರಲ್ಲಿ ವೈವಾಹಿಕ ಸಂಬಂಧವನ್ನು ಸೋದರಮಾವನ ಮಗಳು, ಸೋದರ ಅತ್ತೆಯ ಮಗಳು ಅಥವಾ ಅಕ್ಕನ ಮಗಳನ್ನು ಮದುವೆಯಾಗುವ ರೂಢಿಯನ್ನು ರೂಪಿಸಿಕೊಂಡು ಬಂದಿದ್ದಾರೆ. ಇವರ ಸಂಬಂಧಿಕರಲ್ಲಿ ಯಾವುದೇ ಹೆಣ್ಣು ಇಲ್ಲದಿದ್ದರೆ ಇವರಿಗೆ ಸರಿಹೊಂದುವ ಹೊಸ ಸಂಬಂಧಿಕರನ್ನು ಹುಡುಕುವರು ಹಾಗೂ ಕುಲ (ಗೋತ್ರ) ಇತರೆ ವಿಚಾರವನ್ನು ತಿಳಿದು ಮದುವೆ ಕಾರ್ಯಕ್ಕೆ ಮುಂದಾಗುತ್ತಾರೆ.

ಚಿತ್ರದುರ್ಗ ಜಿಲ್ಲೆಯ ಮಾದಿಗರ ಕುಲಗಳು

ಕ್ರ. ಸಂ	ಕುಲಗಳು	ಕ್ರ. ಸಂ	ಕುಲಗಳು	ಕ್ರ. ಸಂ	ಕುಲಗಳು
೧	ಅರ್ತೇರು	೨೪	ಜ್ಯೊಟೇಲರು	೪೬	ಮಣ್ಣೇರು
೨	ಅನೇರು	೨೫	ಛತ್ರೇರು	೪೭	ಮಲ್ಲೇಲರು
೩	ಅಸೆಲಾರು	೨೬	ಛಿಮಿಲರು ಅಥವಾ ಇರುವೆ	೪೮	ಮಲೋರು
೪	ಉಂಡಿಗನೋರು	೨೭	ದೋಸೇಲರು	೪೯	ಮಾಗ್ಲೇರು
೫	ಎನುಮ್ನರು	೨೮	ಪರೆಣೆಯರು	೫೦	ಮೀನಿಗ್ಲರು
೬	ಎಡುಗತ್ಲರು	೨೯	ಪೋತುಗಳಿಯರು	೫೧	ಮುತ್ತಿನಪೆಂಡೇರ್
೭	ಎಲಿಯರು	೩೦	ಪೂಲೋರು	೫೨	ಮುಚ್ಚಳರು
೮	ಎಲ್ಡುಕೆರೇರು	೩೧	ಬಡಗೇಲರು	೫೩	ಮುಮ್ಮಂಡರ್
೯	ಐವೊಳ್ಳೇರು	೩೨	ಬಂಡಾರ್ಡೋರು	೫೪	ಮೋಚಿಗರು
೧೦	ಕಡ್ಲೇಳೇರು	೩೩	ಬಸವ್ಲರು	೫೫	ಲಷ್ಮೆಲ್ಲರು
೧೧	ಕಾರುಪುರುಷಿ	೩೪	ಬದುಕ್ಲರ್	೫೬	ವೆಲ್ಲಗೋತ್ಲರ್
೧೨	ಕಾಮಗೊತರು	೩೪	ಬಸವ್ಲೇರ್	೫೭	ಶೆಟ್ಟೇಲರು
೧೩	ಕೀನೂರಿ	೩೫	ಬಾಚಣಿಗೇರು	೫೮	ಸತ್ತಿಗೇಲರು
೧೪	ಕುರಿಯರು (ಜೇವೆದ್ದಾರು)	೩೬	ಬಾರಿಣೇಗೇರು	೫೯	ಸಂಪಿಗೆಯವರು
೧೫	ಕುಂಬಕಾಯೋರು	೩೭	ಬಾಣಿಗ್ಲರು	೬೦	ಸಣ್ಣಕ್ಕೇರು
೧೬	ಕೆಂಗಾರು	೩೮	ಬುಟುಗ್ಲರು	೬೧	ಸಾಕೇಲರು

೧೭	ಗುಜ್ಜುಲರು	೩೯	ಬೋಗೇಲರು	೬೨	ಸಾಸಂಮ್ಲರ್
೧೮	ಗೋಣೀಲೋರು	೪೦	ಬ್ಯಾರೇ ಉಂಗ್ಲೋರು	೬೩	ಸೀರಣಿಗೇರು
೧೯	ಚತ್ರೇರು	೪೧	ಭೂಮಲೊರು	೬೨	ಸಿನ್ ಮೋಗ್ಲರ್
೨೦	ಚಿನ್ಮೂಲಾದ್ರರು (ಸಿನ್ಮಾದ್ಲರು)	೪೨	ಮಲ್ಲಿಗೆ ಹೂವಿನವರು	೬೩	ಸೆಡಪೊತ್ಲರ್
೨೧	ಚಿತ್ರದೋರು	೪೩	ಮಂತೋಜಲೋರು	೬೪	ಹಾನಿನೋರು
೨೨	ಚಿಬ್ಲುರು	೪೪	ಮಣೀಲರು	೬೫	ಹೆಗ್ಡೇರು
೨೩	ಜಡಗ್ಲರು	೪೫	ಮತೊಜಲ್ಲೇರು		

ಚಿತ್ರದುರ್ಗ ಜಿಲ್ಲೆಯ ಮಾದಿಗರ ಸೋದರಿಕೆ ಕುಲಗಳು ಮತ್ತು ವೈವಾಹಿಕ ಸಂಬಂಧಗಳು

ಕ್ರ ಸಂ	ಕುಲಗಳು	ಸೋದರಿಕೆ ಕುಲಗಳು	ವೈವಾಹಿಕ ಕುಲಗಳು
೧	ಐವೊಳ್ಳೇರು	ಶಡಪೋತ್ಲರು, ಸೆಟ್ಟೇಲರು, ಬೋಗೇಲರು, ಪೋತುಗುಳಿಯರು, ಮುತ್ತಿನ ಪೆಂಡೇರು.	ಹೆಗ್ಡೇರು, ಎನುಮ್ಲರು, ಕುರಿಯರು, ಏಡುಗತ್ಲರ್, ಮುಚ್ಚಳೇರು, ಛತ್ರೇರು, ಗಾಣಿಗ್ಲಾರು, ಸಣ್ಣಕ್ಕೇರು, ಕೆಂಗಾರು,
೨	ಹೆಗ್ಡೇರು	ವಡಗತ್ಲರು, ಸಾಕೇಲರು.	(ಸೋದರಿಕೆಯ ಸಂಬಂಧದ ಕುಲಗಳನ್ನು ಹೊರತುಪಡಿಸಿ ಉಳಿದ ಕುಲಗಳ ಜೊತೆಗೆ ವೈವಾಹಿಕ ಸಂಬಂಧಗಳು ನಡೆಯುತ್ತವೆ.)
೩	ಕುರಿಯರು (ಜೇವೆದ್ದಾರು)	ಮಂದ್ಲರ್, ಮಾಗೇರು.	(ಮಂದ್ಲರ್ ಮತ್ತು ಮಾಗೇರು ಹೊರತುಪಡಿಸಿ ಉಳಿದ ಕುಲಗಳೊಂದಿಗೆ ವೈವಾಹಿಕ ಸಂಬಂಧ ನಡೆಯುತ್ತವೆ.)
೪	ಎನುಮ್ಲರು	---	ಇವರನ್ನು ಏಳುಮನೆ ಬೀಗರು ಎಂದು ಕೆರೆಯುತ್ತಾರೆ ಅದ್ದರಿಂದ

			ಎಲ್ಲಾ ಕುಲಗಳ ಜೊತೆಗೆ ವೈವಾಹಿಕ ಸಂಬಂಧಗಳು ಮುಂದುವರಿಸಿಕೊಂಡು ಬಂದಿದ್ದಾರೆ.
೫	ಛತ್ರೇರು	---	ಐವೋಳ್ಳೇರು, ಕುರಿಯರು, ಹೆಗ್ಡೇರು, ಎನುಮ್ಲರು.
೬	ಎಡುಗತ್ಲರು, ಮುಚ್ಚಳರು, ಕಡ್ಲೇಳೇರ್, ಬಸವ್ಲೇರ್, ಕೀನೂರಿ, ಕಾರುಪುರುಷಿ, ಸೆಡಪೊತ್ಲರ್, ಬೋಗೇಲರು, ಮಲ್ಲೇಲರು, ಬಡಗೇಲರು, ಮೀನಿಗ್ಲರು, ಮುಮ್ಮಂಡರ್, ಬಂಡಾರ್ದ್ದೋರು, ಕುಂಬಕಾಯೋರು, ಸೀರಣಿಗೇರು, ಶೆಟ್ಟೇಲರು, ಜ್ಯೋಟೇಲರು, ದೋಸೇಲರು, ಲಕ್ಷ್ಮೇಲ್ಲರು, ವೆಲ್ಲಗೋತ್ಲರ್, ಮತೊಜಲ್ಲೇರು, ಪರೆಣೆಯರು.	---	ತಮ್ಮ ಕುಲವನ್ನು ಬಿಟ್ಟು ಇನ್ನೆಲ್ಲ ಕುಲದಲ್ಲಿ ಮದುವೆಯಾಗುತ್ತವೆ.
೭	ಸಾಕೇಲರು	ಹೆಗ್ಡೇರು	ಹೆಗ್ಡೇರನ್ನು ಹೊರತುಪಡಿಸಿ ಉಳಿದ ಕುಲಗಳ ಜೊತೆಗೆ ವಿವಾಹ ನಡೆಯುತ್ತವೆ.
೮	ಸಾಸಂಮ್ಲರ್	ಹೆಗ್ಡೇರು, ಐವೊಳ್ಳೇರು, ಸಾಕೆಲರು ಹೊರತು ಪಡಿಸಿ ಉಳಿದ ಎಲ್ಲಾ ಕುಲಗಳು ಸೊದರಿಕೆಯ ಕುಲಗಳು,	ಹೆಗ್ಡೇರು, ಐವೊಳ್ಳೇರು, ಸಾಕೆಲರು.
೯	ಸಣ್ಣಕ್ಕೇರು	ಎನುಮ್ಲರು, ಸಾಕೇಲರು.	ಎನುಮ್ಲರು, ಸಾಕೇಲರು ಈ ಎರಡು ಕುಲಗಳನ್ನು ಹೊರತು ಪಡಿಸಿ ಉಳಿದ ಕುಲಗಳ ಜೊತೆಗೆ ವಿವಾಹವಾಗುತ್ತಾರೆ.

ಚಿತ್ರದುರ್ಗ ಜಿಲ್ಲೆಯ ಮಾದಿಗರು ಅವರದೇಯಾದ ಪರಂಪರಾಗತವಾದ ಸಂಪ್ರದಾಯ ಮತ್ತು ಆಚರಣೆಗಳನ್ನು ಮದುವೆ ಸಮಯದಲ್ಲಿ ಅನುಸರಿಸಿಕೊಂಡು ಬಂದಿದ್ದಾರೆ.

೪.೫.೧. ಹೆಣ್ಣು ತೆಗೆಯುವುದು

ಪರಂಪರಾಗತವಾದ ಕುಟುಂಬದಲ್ಲಿ ವಿವಾಹವೆಂದರೆ ಹಿರಿಯರಿಂದ ಪೂರ್ಣ ನಿರ್ಧಾರಿತ ಹಾಗೂ ವ್ಯವಸ್ಥಿತ ವಿವಾಹವೇ ಆಗಿತ್ತು. ಸಂಗಾತಿಗಳ ಆಯ್ಕೆಯಲ್ಲಿ ಹುಡುಗಿಗೆ ಹುಡುಗನಿಗೆ ಸ್ವಾತಂತ್ರ್ಯವೇ ಇರಲಿಲ್ಲ. ವಿವಾಹವೆಂದರೆ ಅದು ತಂದೆ ತಾಯಿಯರ ಹೊಣೆಗಾರಿಕೆ ಎಂಬ ಭಾವನೆಯಿತ್ತು. ವಿವಾಹದ ವಯಸ್ಸು ಕೂಡ ತೀರಾ ಕಡಿಮೆಯಿತ್ತು. ಆದರೂ ವಯಸ್ಸಿಗೆ ಬಂದಿರುವ ಹೆಣ್ಣಿಗೆ ಗಂಡು ಹುಡುಕುವುದು, ಗಂಡಿಗೆ ಹೆಣ್ಣು ಹುಡುಕುವ ಹೊಣೆಗಾರಿಕೆ ತಾಯಿ-ತಂದೆಯ ಜವಾಬ್ದಾರಿಯಾಗಿತ್ತು.

ಹೆಣ್ಣು ಅಥವಾ ಗಂಡನ್ನು ಪಕ್ಕದ ಊರಿನಲ್ಲಿ ಇರುವ ಇವರ ಕುಲ (ಗೋತ್ರ)ಕ್ಕೆ ಸರಿ ಹೊಲಾವ ಸಂಬಂಧಿಕರನ್ನು ಹುಡುಕುವ ಪ್ರಯತ್ನ ಮಾಡುತ್ತಾರೆ. ಒಂದುವೇಳೆ ಇವರಿಗೆ ಸಿಗದಿದ್ದ ಸಮಯದಲ್ಲಿ ಮಧ್ಯವರ್ತಿಗಳ ಮುಖಾಂತರ ಹೆಣ್ಣು ಹುಡುಕುತ್ತಾರೆ. ಬಹುತೇಕ ಹಳೆಯ ಬೀಗಸ್ತನದಲ್ಲಿ ಹೆಣ್ಣು ಕೊಡುವುದುಂಟು. ಇದು ಹಳೆಯ ಬೀಗಸ್ತನದ ಮುಂದುವರಿಕೆಗೆ ಪೂರಕವಾಗುತ್ತದೆ. ಹೆಣ್ಣು ಗೊತ್ತುಪಡಿಸಿದ ನಂತರ ಐವರು ಹಿರಿಯರ ಹತ್ತಿರ ಒಳ್ಳೆಯ ದಿನವನ್ನು ಗೊತ್ತುಪಡಿಸಿಕೊಂಡು ಗಂಡಿನ ಬಳಗದಿಂದ ಐದು ಮಂದಿ ಅಥವಾ ಒಂಬತ್ತು ಮಂದಿ ಹಟ್ಟಿಯ ಯಜಮಾನರನ್ನೊಳಗೊಂಡು ಹೆಣ್ಣು ನೋಡಲು ಹೊರಡುತ್ತಾರೆ.

ಹೆಣ್ಣು ನೋಡಲು ಬರುವ ದಿನವನ್ನು ಗಂಡಿನ ಕಡೆಯವರು ಹೆಣ್ಣಿನ ಮನೆಯವರಿಗೆ ಮುಟ್ಟಿಸುತ್ತಾರೆ. ಅವರು ಬರುವ ದಿನ ಸಿಹಿ ಅಡುಗೆಯನ್ನು ಮಾಡಿರುತ್ತಾರೆ. ಬಂದಿರುವ ಜನರಿಗೆ ನೀರು ಕೊಟ್ಟು ಔಪಚಾರಿಕವಾಗಿ ಮನೆಗೆ ಬರಮಾಡಿಕೊಳ್ಳುತ್ತಾರೆ. ಈ ಕಾರ್ಯವನ್ನು ರಾತ್ರಿ ವೇಳೆ ಮಾಡುತ್ತಿದ್ದರು. ಬಂದಿರುವ ಸಂಬಂಧಿಕರು ಹಾಗೂ ಹೆಣ್ಣಿನ ಕಡೆಯವರ ಸಂಬಂಧಿಕರು ಸೇರಿ ಮಾತುಕತೆಗೆ ಕುಳಿತುಕೊಳ್ಳುತ್ತಾರೆ. ಇಂತಹ ಸಂದರ್ಭದಲ್ಲಿ 'ನಿಮ್ಮ ಮಾವ, ಅತ್ತೆ, ಬಂಡಿಯನ್ನು ಕಟ್ಟಿಕೊಂಡು ಬಂದಿದ್ದಾರೆ' ನೋಡಿ ಎಂದು ಹುಡುಗನ ಚಿಕ್ಕಪ್ಪ ಅಥವಾ ದೊಡ್ಡಪ್ಪ ಹೆಣ್ಣಿನ ಸಂಬಂಧಿಕರಿಗೆ ತಿಳಿಸುತ್ತಾರೆ. ಆಗ ಹೆಣ್ಣಿನ ಕಡೆಯವರು ಬಂಡಿ ಎಂದು ತಕ್ಷಣ ನಮ್ಮ ಮನೆಯ ಹೆಣ್ಣನ್ನು ಕೇಳಲು ಬಂದಿದ್ದಾರೆ ಎಂದು ತಿಳಿದುಕೊಂಡು ಹೆಣ್ಣನ್ನು ಸಂಬಂಧಿಕರಿಗೆ ತೋರಿಸುತ್ತಾರೆ. ಗಂಡಿನ ಮನೆಯವರಿಗೆ ಹೆಣ್ಣಿನ ಒಪ್ಪಿಗೆಯಾದರೆ ಮಾತುಕತೆಗೆ ಆಮೇಲೆ ಬರುವುದಾಗಿ ಹೇಳುವರು. ಹೆಣ್ಣು ಕಡೆಯವರು ಒಂದು ಬಾರಿ ಹುಡುಗನನ್ನು ಕಳುಹಿಸಿ ನಮ್ಮ ಸಂಬಂಧಿಕರು ನೋಡುತ್ತಾರೆ ಎಂದು ಹೇಳುತ್ತಾರೆ. ಯಾವುದಾದರೂ ಒಳ್ಳೆಯ ದಿನ ಹುಡುಗನ್ನು ಕಳುಹಿಸುತ್ತಾರೆ. ಹೆಣ್ಣಿನ ಕಡೆಯವರಿಗೆ ಹುಡುಗ ಒಪ್ಪಿಗೆಯಾದರೆ ನಿಮ್ಮ ಸಂಬಂಧಿಕರನ್ನು ಕಳುಹಿಸಿ ಎಂದು ಸೂಕ್ಷ್ಮವಾಗಿ ಹೇಳುವರು, ಗಂಡಿನವರು ಮನೆ ನೋಡುವ ಶಾಸ್ತ್ರವನ್ನು ಮಾಡುತ್ತಾರೆ.

೪.೫.೨ ಮನೆ ನೋಡುವ ಶಾಸ್ತ್ರ

ಗಂಡಿನ ಕಡೆಯವರು ಮತ್ತು ಹೆಣ್ಣಿನ ಕಡೆಯವರು ಇಬ್ಬರು ಮನೆ ನೋಡುವ ಕಾರ್ಯವನ್ನು ಮಾಡುತ್ತಾರೆ. ಮಗಳು ಅಥವಾ ಮಗನು ಈ ಮನೆಗೆ ಮದುವೆಯಾಗಿ ಬಂದರೆ. ಸುಖವಾಗಿ

ಇರಬಹುದೇ ಎನ್ನುವಂಥ ಕಾರಣಕ್ಕೆ ಗಂಡಿನ ಮನೆತನ, ಅವರ ನಡವಳಿಕೆ, ವಂಶವಳಿ, ಆಸ್ತಿ, ಹುಡುಗನ ನಡವಳಿಕೆಗಳು ಅಥವಾ ಹೆಣ್ಣಿನ ನಡವಳಿಗಳು ಯಾವ ರೀತಿಯಲ್ಲಿವೆ. ಹಾಗೇ ಸುತ್ತಮುತ್ತಲಿನ ಪರಿಸರ ಬಗ್ಗೆ ಬೇರೆಯವರ ಹತ್ತಿರ ಮಾಹಿತಿಯನ್ನು ತಿಳಿದುಕೊಂಡು ರಾತ್ರಿ ವೇಳೆ ಮಾತುಕತೆಗೆ ಕುಳಿತುಕೊಳ್ಳುತ್ತಾರೆ. ಹೆಣ್ಣು ಒಪ್ಪಿಗೆಯಾದರೆ 'ನಿಶ್ಚಿತಾರ್ಥ' ಅಥವಾ 'ಅಡಿಕೆಲೆ' ಶಾಸ್ತ್ರಕ್ಕೆ ಯಾವಾಗ ಬರಬೇಕು ಎಂದು ಹೇಳುತ್ತಾರೆ.

೪.೫.೩ ನಿಶ್ಚಿತಾರ್ಥ ಅಥವಾ ಅಡಿಕೆಲೆ ಶಾಸ್ತ್ರ

ಗಂಡಿನ ಕಡೆಯವರು ಮತ್ತು ಹೆಣ್ಣಿನ ಕಡೆಯವರ ಸ್ಥಿತಿ-ಗತಿಗೆ ಅನುಸಾರವಾಗಿ ನಿಶ್ಚಿತಾರ್ಥ ಅಥವಾ ಅಡಿಕೆಲೆ ಶಾಸ್ತ್ರವನ್ನು ನಿಗದಿ ಮಾಡುತ್ತಾರೆ. ಗಂಡಿನ ಕಡೆಯವರು ಕೆಲವು ಸಂಬಂಧಿಕರು ಕೇರಿಯ ಐದು ಅಥವಾ ಎಂಟು ಜನ ಯಜಮಾನರ ಸಮ್ಮುಖದಲ್ಲಿ ಗಂಡಿನ ಮತ್ತು ಹೆಣ್ಣಿನ ಹೆಸರಿನ ಮೇಲೆ ಜೋಯಿಸರ ಹತ್ತಿರ ಜಾತಕವನ್ನು ಕೇಳಿ ಒಂದು ದಿನ ನಿಶ್ಚಿತಾರ್ಥವನ್ನು ಹೆಣ್ಣಿನ ಮನೆಯರಿಗೆ ವಿಷಯವನ್ನು ತಿಳಿಸುತ್ತಾರೆ. ನಂತರ ಒಳ್ಳೆಯ ದಿನ ಕೇರಿಯ ಯಜಮಾನರು ಹಾಗೂ ಸಂಬಂಧಿಕರು ಸೇರಿ ಹೆಣ್ಣಿನ ಮನೆಗೆ ಹೋಗುತ್ತಾರೆ.

ನಿಶ್ಚಿತಾರ್ಥಕ್ಕೆ ಹೋದಂತಹ ಸಂದರ್ಭದಲ್ಲಿ ಮೂರು ಜನ ಮುತ್ತೈದೆಯರು ಸೋದರಮಾವ, ಸೋದರಅತ್ತೆ ಕಡ್ಡಾಯವಾಗಿ ಇರಬೇಕೆಂಬುದು ನಿಯಮ. ಮೂರು ಜನ ಮತ್ತೈದೆಯರು ಹೆಣ್ಣಿನ ಸುಳಿ ಸೂತ್ರ, ವಾರೆಗಣ್ಣು, ನಡಿಗೆ ಇವುಗಳನ್ನು ಪರೀಕ್ಷಿಸುತ್ತಾರೆ. ಒಂದುವೇಳೆ ಇವುಗಳು ಹೆಣ್ಣಿನಲ್ಲಿ ಕಂಡುಬಂದರೆ ಸರಿ ಇಲ್ಲವೆಂದು ವಾಪಾಸು ಬರುವುದುಂಟು. ಹೆಣ್ಣಿನ ಕಡೆಯವರು ಕೂಡ ನಿಶ್ಚಿತಾರ್ಥ ದಿನ ಹುಡುಗನನ್ನು ಜೊತೆಗೆ ಕರೆದುಕೊಂಡು ಬನ್ನಿ ಎಂದು ಹೇಳುತ್ತಾರೆ. ಇವರಿಗೆ ಸರಿಹೊಂದಲಿಲ್ಲವೆಂದರೆ ವಾಪಾಸು ಕಳುಹಿಸುತ್ತಾರೆ. ಎಲ್ಲ ಸರಿ ಇದ್ದರೆ ಮುಂದಿನ ಕಾರ್ಯವು ಆರಂಭವಾಗುತ್ತವೆ. ಇದೆಲ್ಲ ಸಾಮಾನ್ಯವಾಗಿ ನಿಶ್ಚಿತಾರ್ಥಕ್ಕೆ ಮುಂದೆಯೇ ನಡೆಯುತ್ತದೆ.

ರಾತ್ರಿಯ ವೇಳೆ ಎಲ್ಲರಿಗೆ ಒಪ್ಪಿಗೆ ಇದ್ದರೂ ಕೂಡ ಹೆಣ್ಣಿನ ತಾಯಿ ಮತ್ತು ತಂದೆಯ ಒಪ್ಪಿಗೆಯನ್ನು ಪಡೆದುಕೊಳ್ಳುತ್ತಾರೆ. ಹೆಣ್ಣಿನ ದೊಡ್ಡಪ್ಪ, ಚಿಕ್ಕಪ್ಪ, ಅಜ್ಜ, ಅಜ್ಜಿಯ ಒಪ್ಪಿಗೆಯನ್ನು ಪಡೆಯುತ್ತಾರೆ. ಆನಂತರ ಗಂಡಿನ ಕಡೆಯವರು ಹುಡುಗಿಯ ಕಡೆಯವರು ಹುಡುಗಿ ಸೋದರಮಾವನನ್ನು ಕರೆಸುತ್ತಾರೆ. ಸೋದರಮಾವನನ್ನು ಕುರಿತು "ಹುಡುಗಿ ನಿನ್ನ ಕಡೆಯವಳು, ಅವಳ ಮೇಲೆ ನಿನಗೆ ಹಕ್ಕುಂಟು; ನಿನ್ನ ಮಗನಿಗೇನಾದರೂ ಮದುವೆ ಮಾಡಿಕೊಳ್ಳುವುದಿದ್ದರೆ ನಮ್ಮ ಅಭ್ಯಂತರವೇನಿರುವುದಿಲ್ಲ" ಎಂದು ಕೇಳಿದಾಗ ಸೋದರಮಾವ ಹೆಣ್ಣಿನ ತಾಯಿ ಒಪ್ಪಿದರೆ ನನ್ನದೇನೂ ಅಭ್ಯಂತರವಿಲ್ಲ ಎಂದು ಮಾತನ್ನು ಆಡಲೇಬೇಕು. ಇದು ಮುಗಿದ ಮೇಲೆ ಮುಂದಿನ ಹಂತಕ್ಕೆ ಹೋಗುತ್ತಾರೆ.

ಐದು ಅಥವಾ ಎಂಟು ಜನ ಕೇರಿಯ ಯಜಮಾನರು ಹಾಗೂ ಹೆಣ್ಣಿನ ಕಡೆಯ ಸಂಬಂಧಿಕರು ಗಂಡಿನ ಕಡೆಯ ಸಂಬಂಧಿಕರು ಸೇರಿ ಕರೆ ಕಂಬಳಿಯನ್ನು ನಾಲ್ಕು ಭಾಗಗಳಾಗಿ ಮಾಡಿ ಗದ್ದುಗೆಯನ್ನು

ಹಾಕುತ್ತಾರೆ. ಗದ್ದುಗೆ ಆಚರಣೆಯನ್ನು ಮೂರು ಬಾರಿ ನಡೆಸುತ್ತಾರೆ. ಮೊದಲನೆ ಗದ್ದುಗೆಗೆ ತುಪ್ಪಬಾನದ ಗದ್ದುಗೆ, ಇದ್ದನ್ನು ಹೆಣ್ಣನ್ನು ನಿಶ್ಚಯ ಮಾಡಿಕೊಳ್ಳುವ ದಿನ ಹಾಕುವರು. ಇದನ್ನು ಕೆಲವು ಕಡೆ ಜಾಂಬುವಯ್ಯ ಗದ್ದುಗೆ, ಹರಳಯ್ಯನ ಗದ್ದುಗೆ, ಸಿಂಹಾಸನದ ಗದ್ದುಗೆ ಎಂತಲೂ ಕರೆಯುವರು. ಗದ್ದುಗೆಯ ಸುತ್ತಲು ವಿಭೂತಿಯಿಂದ ಮೂರು ನಾಮ ಹಾಗೂ ಓಂ ತ್ರಿಶೂಲ ಬರೆಯುತ್ತಾರೆ. ಅಕ್ಕಿಯಿಂದ ಸೂರ್ಯ–ಚಂದ್ರನನ್ನು ಬರೆಯುತ್ತಾರೆ. ಗದ್ದುಗೆ ಮಧ್ಯೆ ಅಕ್ಕಿಯನ್ನು ರಾಶಿಹಾಕಿ ಅದರ ಎಲ್ಲಾ ಭಾಗಕ್ಕೆ ವೀಳ್ಯೆದೆಲೆ ಜೋಡಿಸುತ್ತಾರೆ. ಮಧ್ಯಕ್ಕೆ ಅರಿಶಿಣ ಕೊಂಬು, ಘಟಿಕಂಕರಣ, ಹೂವನ್ನು ವೀಳ್ಯೆದೆಲೆ ಕಂಕಣಕ್ಕೆ ಇರಿಸುತ್ತಾರೆ. ನಂತರ ಹೆಣ್ಣಿನ ಕಡೆಯವರಿಗೆ ೧೦೧ ರೂಪಾಯಿ ನಗದು ಹಾಗೂ ಎರಡು ಭತ್ತದ ಚೀಲ ತೆರೆಯ ರೂಪದಲ್ಲಿ ಕೊಡುವರು ಹಿಂದೆ ಹೆಣ್ಣಿನ ಕಡೆಯವರಿಗೆ ವಸ್ತು ಅಥವಾ ಧಾನ್ಯದ ರೂಪದಲ್ಲಿ ಕೊಡುತ್ತಿದ್ದರು ಎಂದು ಹಿರಿಯರೊಬ್ಬರು ಹೇಳಿದ್ದಾರೆ. ಅಗರಬತ್ತಿ, ಕುಂಕುಮ ಇಟ್ಟು ತೆಂಗಿನ ಕಾಯಿ ಹೊಡೆದು ಪೂಜೆ ಮಾಡುತ್ತಾನೆ (ನೇರ್ಲಹಳ್ಳಿ ಕೊಲ್ಲಾರಪ್ಪ).

ನಿಶ್ಚಿತಾರ್ಥದ ದಿನ ಹುಡುಗನ ಕಡೆಯವರು ರೇಷ್ಮೆ ಸೀರೆ, ಎರಡು ಕುಪ್ಪಸ, ಸುಸೂಗ, ಕೊಳಹಾರಗಳ ಮೂಲಕ ಹೆಣ್ಣನ್ನು ಸಿಂಗರಿಸಿ ತಲೆಯ ಮೇಲೆ ಟವಲನ್ನು ಧರಿಸಿಕೊಂಡು ಗದ್ದುಗೆಯ ಹತ್ತಿರ ಕರೆದುಕೊಂಡು ಬರುತ್ತಾರೆ. ಕೇರಿಯ ಹಿರಿಯರು ಹೆಣ್ಣಿನ ಮಡಲಿಗೆ ಎರಡು ತೆಂಗಿನಕಾಯಿ, ಹಣ್ಣು, ಕಾಯಿ, ಉಂಗುರ, ತಾಳಿ, ಎಲೆ ಅಡಿಕೆ ಇಟ್ಟು "ಉಡಿ ತುಂಬಿ" ಗದ್ದಿಗೆಯ ಎದುರಿನಲ್ಲಿ ಕೂರಿಸುತ್ತಾರೆ. ಈ ಶಾಸ್ತ್ರವನ್ನು ಉಡಿತುಂಬುವ ಶಾಸ್ತ್ರವೆಂದು ಕರೆಯುತ್ತಾರೆ.

ಉಡಿ ತುಂಬಿದ ಮೇಲೆಯೇ ಹೆಣ್ಣು ಒಪ್ಪಿಗೆಯಾಗಿದೆ ಎಂದು ತಿಳಿದು ಗದ್ದುಗೆ ಮೂರು ಜನ ಮುತ್ತೈದೆಯರು ಪೂಜೆ ಮಾಡುತ್ತಾರೆ. ಅವರಿಗೆ ಎಲೆ ಅಡಿಕೆ ಉಡಿ ತುಂಬುತ್ತಾರೆ. ನಂತರ ಇಬ್ಬರು ಗಂಡು ಮಕ್ಕಳು ಗದ್ದುಗೆ ಪೂಜೆಯನ್ನು ಮಾಡುತ್ತಾರೆ. ಅವರಿಗೆ ಎಲೆ ಅಡಿಕೆ ಕೊಡುತ್ತಾರೆ. ಕೊನೆಯದಾಗಿ ಗದ್ದುಗೆ ಹಿರಿಯ ವ್ಯಕ್ತಿ ಪೂಜೆ ಮಾಡಿ ತೆಂಗಿನಕಾಯಿ ಹೊಡೆದು. ಯಜಮಾನರು ಗದ್ದುಗೆ ಎತ್ತುವಾಗ ಕುಲದ ಗೋಚಿಗಾರೇ, ಗೌಡರೇ, ಅಣ್ಣತಮ್ಮಂದಿರೆ ಗದ್ದುಗೆ ಎತ್ತುವುದಕ್ಕೆ ಅಪ್ಪಣೆಯೇನಪ್ಪ ಎಂದಾಗ ಎಲ್ಲರೂ ಸಮರ್ಪಣೆ ಎಂದು ಹೇಳುವರು. ಆಗ ಕುಲಕ್ಕೆ ಒಂದು ಭಾಗವನ್ನು ಸಂಬಂಧಿಕರಿಗೆ ಹಂಚುವರು. ಬಂದಿರುವ ಸಂಬಂಧಿಕರಿಗೆ ವೀಳ್ಯದೆಲೆ ಕೊಡುವರು. ತೆರ ಹಣವನ್ನು ಕೇರಿಯ ಎಂಟು ಜನ ಯಜಮಾನರು ತೆಗೆದುಕೊಳ್ಳುತ್ತಾರೆ. ಸೊಬನೆ ಪದ ಹೇಳಿದ ಮಹಿಳೆಯರಿಗೆ ಎಲೆ ಅಡಿಕೆ, ತೆಂಗಿನಕಾಯಿ, ಕೊಬ್ಬರಿ ಕೊಟ್ಟು ಸಿಹಿ ಊಟ ಮಾಡಿ ಕಳುಹಿಸುತ್ತಾರೆ. ಬೆಳಗ್ಗೆ ಸುಮಾರು ೯ ಗಂಟೆಗೆ ಪ್ರತಿಯೊಂದು ಮನೆಗೆ ವೀಳ್ಯದೆಲೆ ಹಂಚುವ ಕಾರ್ಯ ಮಾಡುತ್ತಾರೆ.

• ಲಗ್ನ ಪತ್ರಿಕೆ

ಹಿಂದೆ ಈಗಿನ ರೀತಿಯಲ್ಲಿ ಕೆಳವರ್ಗದವರಲ್ಲಿ ಲಗ್ನ ಪತ್ರಿಕೆಯ ಪದ್ಧತಿ ಅವರಲ್ಲಿ ಇರಲಿಲ್ಲ. ಅದರ ಬದಲಾಗಿ ತಾಂಬೂಲವನ್ನು ನೀಡಿ ಮದುವೆಗೆ ಆಹ್ವಾನಿಸುತ್ತಿದ್ದರು. ನಂತರ ಉನ್ನತ ವರ್ಗದವರ ಪ್ರಭಾವದಿಂದಾಗಿ ಲಗ್ನಪತ್ರಿಕೆಯನ್ನು ಮುದ್ರಿಸಿ ಬಂಧುಗಳನ್ನು ಆಹ್ವಾನಿಸುವ ಪದ್ಧತಿ ರೂಢಿಗೆ ಬಂದಿದೆ.

ಲಗ್ನ ಪತ್ರಿಕೆ ಬರೆಸುವ ಕಾಲದಲ್ಲಿ ವಧು–ವರನ ಕಡೆಯವರಿಬ್ಬರ ಬಂಧುಗಳು, ದೈವದವರು, ಹಾಜರಿರುತ್ತಾರೆ.

೪.೫.೪ ದೇವರ ನೀರುಶಾಸ್ತ್ರ

ಮಾದಿಗರಲ್ಲಿ ಮದುವೆ ಅಧಿಕೃತವಾಗಿ ಮದಲಿಂಗ ಕಾರ್ಯ ಮಾಡುವುದು ಮುಂಜಾನೆ ಪ್ರಾರಂಭವಾಗುತ್ತವೆ. ಮದಲಿಂಗ ಎಂದರೆ ಅವರವರ ಕುಲಕ್ಕೆ ಸಂಬಂಧಿಸಿದ ಜನರು ದೇವರ ನೀರನ್ನು ಕಟ್ಟೆಮನೆಯಲ್ಲಿ ದೇವರ ಹೆಸರಿನ ಮೇಲೆ ಯಜಮಾನರು ಹಾಕುವುದಕ್ಕೆ ದೇವರ ನೀರು ಎಂದು ಕರೆಯುತ್ತಾರೆ. ತಾಳಿ ಕಟ್ಟುವ ಹಿಂದಿನ ದಿನ ದೇವರ ನೀರು ಹಾಕಿಸಿಕೊಳ್ಳುವ ಮೊದಲು ತಾಯಿ ತಂದೆಗೆ ಹಾಗೂ ಕೇರಿಯ ಹಿರಿಯ ಯಜಮಾನರ ಪಾದಕ್ಕೆ ನಮಸ್ಕರಿಸಿ ಹುಡುಗನ ಜೊತೆ ಐದು ಸೇರು ಅಕ್ಕಿ, ಎರಡು ಕೆ.ಜಿ. ಬೆಲ್ಲ, ತೊಗರಿಬೇಳೆ, ಮೂರು ತೆಂಗಿನಕಾಯಿ ತೆಗೆದುಕೊಂಡು ಹಿರಿಯರ ಜೊತೆಗೆ ಕಟ್ಟೆಮನೆಗೆ ಹೋಗುತ್ತಾರೆ. ಕಟ್ಟೆಮನೆಯಲ್ಲಿ ಇವರಿಗೆ ಸಂಬಂಧಿಸಿದ ದೇವರ ಗುಡಿಯಿರುತ್ತದೆ. ಅವರ ಅಣ್ಣತಮ್ಮಂದಿರು ದೇವರನ್ನು ಪೂಜೆ ಮಾಡುತ್ತಾರೆ. ಇವರ ಗುಡಿಕಟ್ಟೆಯವರು ಹುಡುಗನಿಗೆ ಬಿಸಿನೀರು ಮತ್ತು ಅರಿಸಿಣ ಎಣ್ಣೆಸ್ನಾನ ಮಾಡಿಸುತ್ತಾರೆ. ದೇವರಿಗೆ ಪೂಜೆ ಮಾಡಿ ತಂದಿರುವಂಥ ವಸ್ತುಗಳಿಂದ ಅಡುಗೆ ತಯಾರು ಮಾಡಿ ಎಲ್ಲ ಅಣ್ಣತಮ್ಮಂದಿರು ಊಟ ಮಾಡುತ್ತಾರೆ.

ಹುಡುಗನನ್ನು ದೇವರ ಗುಡಿಯ ಮಧ್ಯಭಾಗದಲ್ಲಿ ಕೆಳ ಭಾಗಕ್ಕೆ ಅಕ್ಕಿಹಾಕಿ ಕೂರಿಸುತ್ತಾರೆ. ಮದಲಿಂಗನನ್ನು ಮಾಡುವ ಕಾರ್ಯವನ್ನು ಪ್ರಾರಂಭಿಸುತ್ತಾರೆ. ಹೂವಿನ ಹಾರ ಹಾಕಿ ಐದು ಜನ ಮುತ್ತೈದೆಯರು ಸಾಸವೆ (ಅಕ್ಕಿಕಾಳು) ಇಟ್ಟು, ವೀಳ್ಯದಲೆ ಕೈಯಿಗೆ ಕೊಟ್ಟು ಕಳಸವನ್ನು ಬೆಳಗುತ್ತಾರೆ. ಪೂಜಾರಿ ದೇವರ ನೀರುಹಾಕಿ ಮದಲಿಂಗನನ್ನು ಮಾಡುತ್ತಾರೆ. ಮದುಮಗ ದೇವರಿಗೆ ಕೈ ಮುಗಿದು ಬರುತ್ತನೆ. ಮಾದಿಗರು ಮದುವೆ ಮಾಡಿಕೊಳ್ಳುವ ಸಂದರ್ಭದಲ್ಲಿ ಪ್ರತಿಯೊಬ್ಬರು 'ದೇವರ ನೀರನ್ನು' ಹಾಕಿಸಿಕೊಳ್ಳಬೇಕು.

೪.೫.೫ ಅಕ್ಕಿ ಹಸನು ಮಾಡುವ ಶಾಸ್ತ್ರ

ಮುಹೂರ್ತಕ್ಕಿಂತ ಎರಡು ದಿನ ಮುಂಚೆ ಮದುವೆ ಮನೆಯವರ ಸಂಬಂಧಿಕರು ವಿಶೇಷವಾಗಿ ಮುತ್ತೈದೆಯರು ಅಕ್ಕಿಯನ್ನು ರಾಶಿಹಾಕಿ ರಾಶಿಯ ಮೇಲೆ ಹೂವು ಹಾಕುತ್ತಾರೆ. ರಾಶಿಯ ಸುತ್ತಲು ಐದು ಮೊರ, ಎಲೆ ಅಡಿಕೆ, ಬಾಳೆಹಣ್ಣು ಹಾಗೂ ಅಗರಬತ್ತಿ, ತೆಂಗಿನಕಾಯಿ ಹೊಡೆದು ಪೂಜೆಯನ್ನು ಮಾಡುತ್ತಾರೆ. ಸೋಬನ ಪದಗಳನ್ನು ಹಾಡಿಕೊಂಡು ಅಕ್ಕಿ ಹಸನು ಮಾಡಿ ಅವುಗಳನ್ನು ಬೇರೆ ಬೇರೆ ವಿಂಗಡಿಸಿ ಚೀಲಕ್ಕೆ ತುಂಬುತ್ತಾರೆ. ಸಿಹಿ ಊಟವನ್ನು ಮಾಡಿಸಿ ಮುತ್ತೈದೆಯರಿಗೆ ಕುಪ್ಪಸದ ಬಟ್ಟೆಯನ್ನು ಕಾಣಿಕೆಯಾಗಿ ನೀಡುತ್ತಾರೆ. ಈ ಆಚರಣೆಯು ನಿಂತೇಹೋಗಿದೆ ಎಂದು ಹೇಳಬಹುದು. ಕಾರಣ ಸಮುದಾಯದಲ್ಲಿ ಹೊಂದಾಣಿಕೆಯ ಸಮಸ್ಯೆ ಮತ್ತು ರಾಜಕೀಯ ಪ್ರವೇಶ.

೪.೫.೬ ಬಳೆಶಾಸ್ತ್ರ

ಮದಲಗಿತ್ತಿ ಮಾಡುವುದಕ್ಕಿಂತ ಮುಂಚೆ ಪಕ್ಕದ ಊರಿನಲ್ಲಿರುವ ಬಳೆಗಾರನನ್ನು ಕರೆಯಿಸಿ ಬಳೆಗಳಿಗೆ ಪೂಜೆಯನ್ನು ಮಾಡುತ್ತಾರೆ. ಪೂಜೆಗೆ ಅಕ್ಕಿ, ಬೆಳೆ, ಬೆಲ್ಲ, ಉತ್ತತ್ತಿ, ಒಣಗೊಬ್ಬರಿ, ಎಲೆ ಅಡಿಕೆ,

ಹನ್ನೊಂದು ರೂಪಾಯಿಗಳನ್ನು ಇಡುತ್ತಾರೆ. ಮೊದಲಿಗೆ ಬಳೆಗಳಿಗೆ ಮದಲಗಿತ್ತಿ ಕೈ ಮುಗಿದು ಬಳೆಗಾರ ಮದಲಗಿತ್ತಿಯ ಬಲಗೈಗೆ ಬಳೆಯನ್ನು ಹಾಗೂ ಐದು ಜನ ಮುತ್ತೈದೆಯರಿಗೆ ಬಳೆಯನ್ನು ತೊಡಿಸುತ್ತಾರೆ. ಒಂದು ಡಜನ್ ಬಳೆಗೆ ೩೦ ರಿಂದ ೪೦ ರೂಪಾಯಿಗಳನ್ನು ನೀಡುತ್ತಾರೆ.

ಪ್ರಸ್ತುತ ಸಂದರ್ಭದಲ್ಲಿ ಬಳೆಶಾಸ್ತ್ರವು ಇದೆ. ಆದರೆ ಇದರ ರೂಪ ಬದಲಾಗಿದೆ. ಬ್ಯೂಟಿಪಾರ್ಲರ್ ಹೆಚ್ಚು ಹೆಚ್ಚು ಪ್ರಚಲಿತವಾಗಿರುವುದರಿಂದ ಕೇವಲ ಒಂದು ಬಳೆ ಅಥವಾ ಪ್ಲಾಸ್ಟಿಕ್, ಸ್ಟೀಲ್ ಬಳೆಯನ್ನು ತೊಡಿಸುವಂಥ ವ್ಯವಸ್ಥೆಯನ್ನು ನೋಡಬಹುದಾಗಿದೆ.

೪.೫.೭ ಮದುವೆ ಹಂದರ ಅಥವಾ ಚಪ್ಪರ ಹಾಕುವ ಶಾಸ್ತ್ರ

ಮಾದಿಗರಲ್ಲಿ ವಿಶೇಷವಾಗಿ ಮದುವೆ ಚಪ್ಪರ ಅಥವಾ ಹಂದರ ಹಾಕುತ್ತಾರೆ. ಮದುವೆಗಿಂತ ಮೂರು ದಿನ ಮುಂಚೆ ಚಪ್ಪರವನ್ನು ಹಾಕುವಂಥ ಸಂಪ್ರದಾಯವನ್ನು ರೂಢಿಸಿಕೊಂಡು ಬಂದಿದ್ದಾರೆ. ಈ ಚಪ್ಪರಕ್ಕೆ ಸ್ಥಳೀಯವಾಗಿ ಸಿಗುವಂತ ಕತ್ತಳೆ ಬೊಂಬು ಅಥವಾ ನೀಲಗಿರಿ ಮರದ ಕಟ್ಟಿಗೆ ಬಳಸುತ್ತಾರೆ. ವಿಶೇಷವಾಗಿ ೧೨ ಕಂಬಗಳ ಚಪ್ಪರವನ್ನು ಕೆಲವು ಕುಲದವರು, ಇನ್ನು ಬೇರೆ ಕುಲದವರು ೯ ಕಂಬಗಳ ಚಪ್ಪರವನ್ನು ಹಾಕುತ್ತಾರೆ. ಕಂಬಗಳನ್ನು ನೆಡುವುದಕ್ಕಿಂತ ಮುಂಚಿತವಾಗಿ ಒಂದು ಕಂಬಕ್ಕೆ ಪೂಜೆಯನ್ನು ಮಾಡುತ್ತಾರೆ. ಚಿತ್ರದುರ್ಗ ಭಾಗದಲ್ಲಿ ಹೆಚ್ಚಿನದಾಗಿ ೧೨ ಕಂಬಗಳ ಚಪ್ಪರವನ್ನು ಹಾಕುವುದು ಕಂಡುಬರುತ್ತದೆ.

ಮೊದಲು ದೊಡ್ಡ ಚಪ್ಪರ ಹಾಕುವಾಗ ೧೨ ಕಂಬಗಳನ್ನು ಮನೆ ಮುಂದೆ ನಡುತ್ತಾರೆ. ಮೇಲ್ಭಾಗಕ್ಕೆ ತೆಂಗಿನ ಗರಿ, ಹೊಂಗೆ ಸೊಪ್ಪು ಹಾಕುತ್ತಾರೆ. ಚಪ್ಪರದ ಸುತ್ತಲು ಮಾವಿನ ತೋರಣ, ಬಣ್ಣ ಬಣ್ಣದ ಕಾಗದ, ಬಾಳೆ ಕಂಬಗಳಿಂದ ಅಲಂಕಾರವನ್ನು ಮಾಡುತ್ತಾರೆ.

ಕ್ಷೇತ್ರಕಾರ್ಯ ಮಾಡಿದ ಸಂದರ್ಭದಲ್ಲಿ ಚಪ್ಪರ ಹಾಕುವ ಶಾಸ್ತ್ರವು ಆಧುನಿಕತೆಯ ಪ್ರಭಾವದಿಂದ ಚಪ್ಪರವನ್ನು ಕೇವಲ ಸಾಂಪ್ರದಾಯಿಕವಾಗಿ ಮಾತ್ರ ಹಾಕುವುದು ಕಂಡುಬರುತ್ತದೆ. ಚಪ್ಪರದ ಬದಲಾಗಿ ಆಧುನಿಕವಾಗಿ ಸಿಗುವ ಶ್ಯಾಮಿಯನ, ವಿದ್ಯುತ್ ದ್ವೀಪಗಳ ಬಳಕೆ ಹೆಚ್ಚು ಕಂಡುಬರುವುದು ನೋಡಬಹುದು.

೪.೫.೮ ಹಾಲು ಹಂದರ

ದೊಡ್ಡ ಚಪ್ಪರದ ಕೆಳಭಾಗದಲ್ಲಿ ಆರು ದೊಡ್ಡ ಕಳ್ಳಿ ಕಂಬ ಇದರ ಜೊತೆಗೆ ಸಣ್ಣ ಕಂಬ ಅಂದರೆ ಸುಮಾರು ೧೨ ಕಂಬಗಳ ರೀತಿಯಲ್ಲಿ ಹಸಿರು ಹಂದರವನ್ನು ನೆಂಟಸ್ಥರು ಹಾಕುವ ಚಪ್ಪರಕ್ಕೆ ಹಾಲಹಂದರ ಎಂದು ಕರೆಯುತ್ತಾರೆ. ಸಾಮಾನ್ಯವಾಗಿ ಇದರ ಹೆಸರೇ ಸೂಚಿಸುವಂತೆ ಕಳ್ಳಿ ಕಂಬದಲ್ಲಿ ಹಾಲು ಬರುವುದಿರಂದ ಹಾಲು ಹಂದರ ಎಂದು ಕರೆದಿದ್ದಾರೆ. ಇದನ್ನು ನಿರ್ಮಾಣ ಮಾಡುವ ಸಂದರ್ಭದಲ್ಲಿ ನಾಲ್ಕು ಜನ ನೆಂಟಸ್ಥರು ಹುಡುಗರನ್ನು ಕರೆಯಿಸಿ ಅವರಿಗೆ ಸಾಂಪ್ರದಾಯಿಕವಾಗಿ ತುಂಬಿದ ಚೆಂಬಿನಿಂದ ಕೈಕಾಲು ತೊಳೆದುಕೊಳ್ಳುವುದಕ್ಕೆ ನೀರನ್ನು ಕೊಟ್ಟು ಬರಮಾಡಿಕೊಳ್ಳುತ್ತಾರೆ.

ಮಚ್ಚು, ಕೊಡಲಿ, ಆರೆಗಳಿಗೆ ಪೂಜೆಯನ್ನು ಮಾಡಿಸಿ ಅವರಿಗೆ ಊಟ ಮಾಡಿಸಿ ಕಳ್ಳಿ ಕಟ್ಟಿಗೆ ಮತ್ತು ಹೊಂಗೆ ಸೊಪ್ಪನ್ನು ತರಲು ಕಳುಹಿಸುತ್ತಾರೆ. ತಂದ ನಂತರ ಮನೆಯ ಬಾಗಿಲ ಮುಂಭಾಗದಲ್ಲಿ ಆರು ಕಂಬಗಳ ಜೊತೆಗೆ ಇನ್ನೊಂದು ಚಿಕ್ಕ ತುಂಡು ಇಟ್ಟು ನೆಡುತ್ತಾರೆ. ಆದರೆ ಮೇಲ್ಭಾಗದಲ್ಲಿ ಹೊಂಗೆ ಸೊಪ್ಪು ಹಾಕಿ ಈ ರೀತಿ ನಿರ್ಮಾಣ ಮಾಡಿದ ಚಪ್ಪರವನ್ನು ಹಸಿರು ಹಂದರ ಅಥವಾ ಹಾಲು ಹಂದರ ಚಪ್ಪರ ಎನ್ನುವರು. ಹಾಗೇ ಚಪ್ಪರ ಕಾರ್ಯವು ಹೆಣ್ಣಿನ, ಗಂಡಿನ ಮನೆಗಳಲ್ಲಿ ಏಕಕಾಲದಲ್ಲಿ ನಡೆಯುವುದು. ಈ ಆಚರಣೆಯು ಗ್ರಾಮೀಣ ಭಾಗದಲ್ಲಿ ಕಂಡುಬರುತ್ತದೆ. ಆದರೆ ನಗರ ಪ್ರದೇಶದಲ್ಲಿ ಚಪ್ಪರ ಹಾಕುವ ಪದ್ಧತಿಯು ಕಣ್ಮರೆಯಾಗುತ್ತಿದೆ.

೪.೫.೯ ಅರಿವೇಣಿಗಳನ್ನು ತರುವಶಾಸ್ತ್ರ

ಹೆಣ್ಣಿನ ಹಾಗೂ ಗಂಡಿನ ಮನೆಯಲ್ಲಿ ಏಕಕಾಲದಲ್ಲಿ ನಡೆಯುವ ಶಾಸ್ತ್ರ. ಆರಣಿ ಸ್ವಾರೇ ಎಂದರೆ ಕುಂಬಾರ ಮನೆಯಲ್ಲಿ ಮಡಿಕೆಯನ್ನು ಮಾಡಿಸಿಕೊಂಡು ತರುವುದಕ್ಕೆ ಅರಿವೇಣಿ ತರುವುದು ಎಂದು ಕರೆಯುತ್ತಾರೆ. ಅರಿವೇಣಿ ತರುವುದಕ್ಕಿಂತ ಒಂದು ದಿನ ಮುಂಚೆ ಕುಂಬಾರನಿಗೆ ಹೇಳಬೇಕು. ನಾಲ್ಕು ದೊಡ್ಡ ಸ್ವಾರೆ, ಆರು ಆರವಿ, ಸುರಿಗೆ ಮಗಿ, ಇವುಗಳಿಗೆ ಬಣ್ಣ ಹಚ್ಚಿ ತಯಾರು ಮಾಡಿರುತ್ತಾನೆ. ಈ ಸಮುದಾಯದ ಹಿರಿಯ ಯಜಮಾನರು ಐದು ಸೇರು ಅಕ್ಕಿ, ಒಂದು ಬಟ್ಟಲು ಒಣಕೊಬ್ಬರಿ, ಉತ್ತುತ್ತಿ, ಬೆಲ್ಲಗಳನ್ನು ತೆಗೆದುಕೊಂಡು ಗಾಡಿಯಲ್ಲಿ ಕುಂಬಾರನ ಮನೆಗೆ ಹೋಗಿ ಮಾಡಿದ ಸೊರೆಗಳಿಗೆ ಕುಂಬಾರನು ಪೂಜೆ ಮಾಡಿ ರಗ್ಗುನಲ್ಲಿ ಅವುಗಳನ್ನು ಕಟ್ಟಿಕೊಂಡು ಊರಿಗೆ ತೆಗೆದುಕೊಂಡು ಬಂದು ದೇವರ ಗುಡಿಯಲ್ಲಿ ಇಡುತ್ತಾರೆ.

ರಾತ್ರಿ ಸಮಾರು ೭ರಿಂದ ೮ ಗಂಟೆಯೊಳಗೆ ಕೇರಿಯ ಹಿರಿಯರು ಯಜಮಾನರು ಊರಿನ ದೇವಸ್ಥಾನದಲ್ಲಿ ಸೇರುತ್ತಾರೆ. ದೇವರ ಗುಡಿಯಲ್ಲಿ ಕರೆಕಂಬಳಿ ಗದ್ದುಗೆ ಹಾಕಿ ಅದರ ಮೇಲೆ ಅಕ್ಕಿಹಾಕಿ ಅರಿವೇಣಿಗಳನ್ನು ಇಡುತ್ತಾರೆ. ಅದರಲ್ಲಿ ಎರಡು ವಿಶೇಷ, ಒಂದು ತಾಯಿ ಸ್ವಾರೇ, ಇನ್ನೊಂದು ಗಂಡು ಸ್ವಾರೇ. ಎರಡು ಗದ್ದುಗೆಯ ಮುಂಭಾಗದಲ್ಲಿ ಇಡುತ್ತಾರೆ. ಬಂದಿರುವ ಜನರಿಗೆ ಕಂಕಣವನ್ನು ಕಟ್ಟಿ, ಆನಂತರ ನೆಂಟಸ್ಥರ ಹುಡುಗನ ಕೈಗೆ ಅತ್ತಿ ಆಲದ ಕೊನೆಯನ್ನು ಕೊಡುತ್ತಾರೆ. ಹಾಲುಗಂಭಕ್ಕೆ ಕಂಕಣ, ಒಣಕೊಬ್ಬರಿ, ಬೆಲ್ಲ, ಐದು ಅಥವಾ ಹತ್ತು ರೂಪಾಯಿಯನ್ನು ಕಟ್ಟುತ್ತಾರೆ. ಅದನ್ನು ಆ ಹುಡುಗ ತೆಗೆದುಕೊಳ್ಳುವನು. ಅರಿವೇಣಿಗಳಿಗೆ ಮೂರು ಜನ ಮುತ್ತೈದೆಯರು ಸಾಸೆವೇಯನ್ನು ಇಟ್ಟು ಕಳಸ ಬೆಳೆಗುವರು ಅದೇ ರೀತಿ ಎರಡು ಜನ ಯಜಮಾನರು ಈ ಕಾರ್ಯ ಮಾಡುತ್ತಾರೆ. ನಂತರ ತಮಟೆ ಹೊಡೆಯುವುದರ ಮೂಲಕ ಅವುಗಳನ್ನು ತೆಗೆದುಕೊಂಡು ಹೋಗುತ್ತಾರೆ.

ಮನೆಯ ಹತ್ತಿರ ಹೋದಂತಹ ಸಮಯದಲ್ಲಿ ಓಕಲಿ, ಪೊರಕೆಯ ಮೇಲೆ ಅನ್ನದಿಂದ ಮಾಡಿದ ದೀಪ, ಮುದ್ದೇ ಕೋಲಿನ ಮೇಲೆ ದೀಪಗಳನ್ನು ನೀವಾಳಿಸಿ ಅವುಗಳನ್ನು ತೆಗೆದು ಹಾಕುವರು. ನಾಲ್ಕು ಸ್ವಾರೇ ಹಿಡಿದು ಬಂದಿರುವ ವ್ಯಕ್ತಿಗಳನ್ನು ಬಲಗಾಲು ಇಟ್ಟು ಒಳಗಡೆ ಬರಲು ಹೇಳುತ್ತಾರೆ. ಮನೆಯಲ್ಲಿ ಪೂರ್ವ ಅಭಿಮುಖವಾಗಿ ಭತ್ತದ ಹೊಟ್ಟಿನಿಂದ ಗದ್ದುಗೆ ರೂಪದಲ್ಲಿ ಚೌಕಾಕಾರವಾಗಿ

ನಿರ್ಮಾಣ ಮಾಡಿ ಅರಿವೇಣಿಯನ್ನು ಅದರ ಮೇಲೆ ಇಡುತ್ತಾರೆ. ಹಣತೆಗೆ ಅನ್ನ, ಸುಣ್ಣ, ಬೆಲ್ಲ, ಸರಿಯಾಗಿ ಮಿದ್ದಿಸಿ ಹರಳೆ ಎಣ್ಣೆ ಹಾಕಿ ದೀಪವನ್ನು ಹಚ್ಚುತ್ತಾರೆ. ಮನೆಯ ಮೇಲು ಚಾವಣಿಗೆ ಒಂದು ಕಟ್ಟಿಗೆ ಕಟ್ಟಿ ಅದಕ್ಕೆ ಉತ್ತತ್ತಿ ಒಣಕೊಬ್ಬರಿ, ತಾಳೆಗರಿ, ಅರಿಶಿಣ, ಕಂಕಣಗಳನ್ನು ಫಲವತ್ತತ್ತೆಯ ಸಾಂಕೇತವಾಗಿ ಕಟ್ಟುತ್ತಾರೆ. ನಂತರ ಕಳಸ ಹೂಡಿ ಅನ್ನ ಪಾಯಸ ಎಡೆಹಾಕಿ ಅಗರ ಬತ್ತಿಹಚ್ಚಿ ತೆಂಗಿನಕಾಯಿ ಒಡೆಯುವರು. ಹಚ್ಚಿದ ದೀಪವು ತಾಳಿ ಕಟ್ಟುವರೆಗೆ ಉರಿಯಬೇಕು ಎಂದು ಹೇಳುತ್ತಾರೆ. ಆದ್ದರಿಂದ ಮುಹೂರ್ತವಾಗುವವರೆಗೆ ಹಚ್ಚಿರುತ್ತಾರೆ.

೪.೫.೧೦ ಎಲೆಬುಟ್ಟಿ ಹೊರುವ ಶಾಸ್ತ್ರ

ಮದುವೆ ಸಮಯದಲ್ಲಿ ಬುಟ್ಟಿ ಹೊರುವ ಶಾಸ್ತ್ರವನ್ನು ವಿಶೇಷವಾಗಿ ಮಾದಿಗ ಸಮುದಾಯದಲ್ಲಿ ಮಾಡುತ್ತಾರೆ. ಮದಲಿಂಗನ ಸೋದರಿ ಅಥವಾ ಅಕ್ಕಂದಿರು ಹೊರುತ್ತಾರೆ. ಸೋದರ ಅತ್ತೆ ಹಣೆಗೆ ವಿಭೂತಿ, ಕುಂಕುಮ ಇಟ್ಟು ಹಣ್ಣು, ಕಾಯಿ, ಅಕ್ಕಿ, ಬೇಳೆ ಮಡಿಲು ತುಂಬುತ್ತಾರೆ. ಬುಟ್ಟಿಯನ್ನು ಮೇದರ ಮನೆಯಲ್ಲಿ ಬಿದಿರಿನ ಬುಟ್ಟಿಯನ್ನು ತೆಗೆದುಕೊಂಡು ಬರುತ್ತಾರೆ. ಬುಟ್ಟಿಯಲ್ಲಿ ಮದಲಿಂಗನ ಪಂಚೆ, ಪೇಟ, ಕೊಳಹಾರ, ಕಳಸ, ತೆಂಗಿನಕಾಯಿ, ಐದು ನಿಂಬೆಹಣ್ಣು, ಬುತ್ತಿಬಟ್ಟೆ ಇಡುತ್ತಾರೆ. ಮದಲಿಂಗಶಾಸ್ತ್ರ ಮಾಡುವುದರಿಂದ ಹಿಡಿದು ಮುಹೂರ್ತದವರೆಗೆ ಬುಟ್ಟಿಯನ್ನು ಸೋದರಯೂ ಹೊರಬೇಕಾಗುತ್ತದೆ. ಈ ಸಂಪ್ರದಾಯವು ಪ್ರಸ್ತುತ ದಿನಮಾನಗಳಲ್ಲಿ ಅಷ್ಟು ನಿಷ್ಠೆಯಿಂದ ಪಾಲಿಸುವುದಿಲ್ಲ. ಮುಖ್ಯವಾಗಿ ಮದಲಿಂಗನ ಸ್ವಂತ ತಂಗಿಯೇ ಹೊರಬೇಕಾಗಿತ್ತು ಆದರೆ ಇವತ್ತು ಯಾರಾದರೂ ಸಣ್ಣ ಹೆಣ್ಣುಮಕ್ಕಳಿಗೆ ಹೊರುತ್ತಾರೆ.

೪.೫.೧೧ ತಲೆಗೆ ಹಾಲೋತ್ತುವ ಶಾಸ್ತ್ರ

ಮಾದಿಗ ಸಮುದಾಯದಲ್ಲಿ ಮದುವೆ ಮಾಡುವಾಗ ಮದುವೆಯಾಗುವ ಗಂಡು ಮಗನಿಗೆ ತಲೆಗೆ ಹಾಲೋತ್ತುವ ಶಾಸ್ತ್ರ ಕಾರ್ಯ ಮಾಡುತ್ತಾರೆ. ತಮ್ಮ ಮನೆ ದೇವರ ಗುಡಿಯ ಹತ್ತಿರ ಹೋಗಿ ಈ ಶಾಸ್ತ್ರವನ್ನು ಮಾಡುತ್ತಾರೆ. ದೇವರ ಗುಡಿಯಲ್ಲಿ ಕರಿ ಕಂಬಳಿಯನ್ನು ಗದ್ದಿಗೆ ಹಾಕಿ ಗದ್ದಿಗೆ ಮೇಲೆ ಕಾಯಿ, ತಮಟ ಸಿಗಲೆಯನ್ನು ಇಟ್ಟು ಅದಕ್ಕೆ ಮದಲಿಂಗನಿಂದ ಪೂಜೆ ಮಾಡಿಸಿ, ಆರತಿ ಬೆಳಗಿ ಗದ್ದಿಗೆ ಮೇಲೆ ಕುಳ್ಳಿರಿಸುತ್ತಾರೆ. ಕಂಚಿನ ಗಂಗಳದಲ್ಲಿ ಹಸುವಿನ ಹಾಲು ಹಾಗೂ ವೀಳ್ಯದೆಲೆಯಿಂದ ದೇವಸ್ಥಾನದ ಪೂಜಾರಿ ಮದಲಿಂಗನ ತಲೆಯ ಮೇಲೆ ಮೂರು ಬಾರಿ ಹಾಲು ತೆಲೆಗೆ ಸವರುತ್ತಾನೆ. ಈ ರೀತಿ ಮಾಡುವ ಶಾಸ್ತಕ್ಕೆ ತಲೆಗೆ ಹಾಲೋತ್ತುವ ಶಾಸ್ತ್ರ ಎಂದು ಕರೆಯುತ್ತಾರೆ.

೪.೫.೧೨ ನೆಲ್ಲು ಕುಟ್ಟುವ ಶಾಸ್ತ್ರ

ತಲೆಗೆ ಹಾಲೋತ್ತುವ ಶಾಸ್ತ್ರ ಮುಗಿದ ನಂತರ ಮನೆಯ ಅಂಗಳದಲ್ಲಿ ನೆಲ್ಲು ಕುಟ್ಟುವ (ನೆಲ್ಲು ಎಂದರೆ ಭತ್ತ) ಶಾಸ್ತ್ರವನ್ನು ಮಾಡುತ್ತಾರೆ. ಅಂಗಳವನ್ನು ಸಗಣಿ ಅಥವಾ ತೆಪ್ಪೆಯಿಂದ ಸಾರಿಸಿ ಎರಡು ಗುಣಿಯನ್ನು ವೃತ್ತಾಕಾರವಾಗಿ ತೋಡಿ ಉರುಮಂಜು ಮತ್ತು ಸುಣ್ಣದಿಂದ ವೃತ್ತಗಳನ್ನು

ಚಿಕ್ಕದಾಗಿ ಹಾಕುತ್ತಾರೆ. ಮದಲಿಂಗನ ಸೋದರ ಮಾವ ಒನಕೆಯಿಂದ ನೆಲ್ಲನ್ನು ಕುಟ್ಟುತ್ತಾನೆ. ಇದನ್ನು ನೆಲ್ಲು ಕುಟ್ಟುವಶಾಸ್ತ್ರ ಎಂದು ಕರೆಯುತ್ತಾರೆ.

ಕುಟ್ಟಿದ ಭತ್ತದಿಂದ ಅಕ್ಕಿ ಮತ್ತು ಭತ್ತದ ಹೊಟ್ಟನ್ನು ಮೊರದಿಂದ ಬೇರ್ಪಡಿಸಿ ಬಂದಿರುವ ಹೊಟ್ಟಿನಿಂದ ಮದಲಿಂಗನಿಗೆ ಸ್ನಾನ ಮಾಡಲು ನಾಲ್ಕುಮೂಲೆಗೆ ನಾಲ್ಕು ಮಗ್ಗಿಯ ಕೆಳಗೆ ಈ ಭತ್ತದ ಹೊಟ್ಟನ್ನು ಹಾಕುತ್ತಾರೆ. ಬಿಳಿ ದಾರದಿಂದ ನಾಲ್ಕು ಮಗ್ಗಿ ಅಥವಾ ಕುಂಬಗಳಿಗೆ ದಾರವನ್ನು ಸುತ್ತುತ್ತಾರೆ. ಮಧ್ಯದಲ್ಲಿ ಎರಡು ಒನಕೆಯನ್ನು ಇಟ್ಟು ಮದಲಿಂಗನ ಸೋದರಮಾವ ಹಾಗೂ ಸೋದರ ಅತ್ತೆ ಸ್ನಾನವನ್ನು ಮಾಡಿಸುತ್ತಾರೆ. ಇದನ್ನು ಸುರಿಗೆ ನೀರು ಹಾಕುವುದು ಎನ್ನುತ್ತಾರೆ. ಈ ಸಂಪ್ರದಾಯವು ವರ್ತಮಾನದಲ್ಲಿ ಕುಟುಂಬ ಮತ್ತು ಸಮುದಾಯಗಳೊಂದಿಗೆ ಭಾವನಾತ್ಮಕ ಹಾಗೂ ಸಾಂಸ್ಕೃತಿಕ ಸಂಬಂಧಗಳನ್ನೇ ಕಡಿದುಕೊಳ್ಳುವಂತಹ ಸ್ಥಿತಿಗೆ ಬಂದಿದೆ. ಆಧುನಿಕತೆಯ ಭರಟೆಯಲ್ಲಿ ಸಮುದಾಯಗಳು ತಮ್ಮ ಪ್ರಜ್ಞೆನೆಯನ್ನು ಮರೆತು ನಿರರ್ಥಕ ಹುಡುಕಾಟದಲ್ಲಿ ನಡೆಯುತ್ತಿವೆ. ಈ ಕಾರಣದಿಂದಾಗಿ ಇಂತಹ ಭಾವನಾತ್ಮಕವಾದ, ಮೌಲ್ಯವಾದ ಆಚರಣೆಗಳು ನಾಶವಾಗುತ್ತವೆ ಎಂದು ಹೇಳಬಹುದು.

೪.೫.೧೩ ಮದಲಿಂಗ ಮತ್ತು ಮದಲಗಿತ್ತಿ ಮಾಡುವ ಶಾಸ್ತ್ರ

ಮದಲಿಂಗ ಹಾಗೂ ಮದಲಗಿತ್ತಿ ಮಾಡುವಾಗ ಮದಲಗಿತ್ತಿಯನ್ನು ಹೆಣ್ಣಿನ ಮನೆಯಲ್ಲಿ ಎರಡು ದಿನಕ್ಕಿಂತ ಮುಂಚೆ ನಡೆಯುತ್ತದೆ. ಈ ಆಚರಣೆ ಮಾಡುವಾಗ ಸ್ವಲ್ಪ ವ್ಯತ್ಯಾಸಗಳು ಕಂಡು ಬರುತ್ತದೆ. ಮದಲಿಂಗನಿಗೆ ದೇವರ ಮನೆಯಲ್ಲಿ ದೇವರ ನೀರು ಹಾಕಿಸಿಕೊಂಡು ಬರುತ್ತಾರೆ. ಆದರೆ ಮದಲಗಿತ್ತಿಗೆ ದೇವರ ಗುಡಿಯಿಂದ ಪೂಜೆ ಮಾಡಿಸಿದಂತಹ ನೀರನ್ನು ಹಾಕಿ ಮದಲಗಿತ್ತಿಯನ್ನು ಮಾಡುತ್ತಾರೆ. ದೇವರ ನೀರು ಹಾಕಿಸಿಕೊಂಡ ಮದಲಿಂಗ ಮತ್ತು ಮದಲಗಿತ್ತಿಗೆ ಎಣ್ಣೆ ಹಾಗೂ ಅರಿಶಿಣ ಹಚ್ಚಿ ಕುಂಬಾರ ಮನೆಯಿಂದ ತಂದಿರುವ ನಾಲ್ಕು ಮಗ್ಗಿಯನ್ನು ಚೌಕಾಕಾರವಾಗಿ ಇಟ್ಟು ಅದರಲ್ಲಿ ವೀಳ್ಯದೆಲೆ ಅಡಿಕೆ ಇಡುತ್ತಾರೆ. ಅದರ ಸುತ್ತಲು ದಾರವನ್ನು ಸುತ್ತುತ್ತಾರೆ ಮತ್ತೆ ಅದರ ಮಧ್ಯ ತಿಪ್ಪೆಯಿಂದ ತಂದಿರುವಂತಹ ಕುರಿಪಿಚ್ಚಿಗೆ (ಗೊಬ್ಬರ)ಯನ್ನು ಹಾಕಿ ಅದರ ಮೇಲೆ ಮದಲಿಂಗ ಹಾಗೂ ಮದಲಗಿತ್ತಿಯನ್ನು ಕೂರಿಸಿ ಬಿಸಿ ನೀರಿನಿಂದ ಸ್ನಾನ ಮಾಡಿಸುತ್ತಾರೆ.

ಸೋದರಮಾವ, ಸೋದರ ಅತ್ತೆ ಎರಡು ಕೈಯಿಂದ ಮಗಿಯನ್ನು ಕತ್ತರಿಯಾಗಿ ಹಿಡಿದುಕೊಂಡು ಕಂಚಿನ ತಟ್ಟೆ, ತಾಳಿಯಿಂದ ವಧು-ವರ ಮೂಗಿಗೆ ಮುಟ್ಟಿಸುತ್ತಾರೆ. ಅವರು ಮಗ್ಗಿಯಲ್ಲಿ ಇದ್ದ ನೀರನ್ನು ತಟ್ಟೆಗೆ ಹಾಕುತ್ತಾರೆ. ನಂತರ ಆ ನೀರನ್ನು ಬಲಭಾಗಕ್ಕೆ ಎಡಭಾಗಕ್ಕೆ, ಹಿಂದಕ್ಕೆ ಹಾಗೂ ಮುಂದಕ್ಕೆ ಚೆಲ್ಲುತ್ತಾರೆ. ಬಲಗಾಲು ಇಟ್ಟು ಹೊರ ಬರುತ್ತಾರೆ ಇದಕ್ಕೆ "ಸುರಿಗೆ ನೀರು" ಎಂದು ಕರೆಯುತ್ತಾರೆ. ತಿಪ್ಪೆಯಿಂದ ತಂದ ಕುರಿ ಪಿಚ್ಚಿಗೆ ಗೊಬ್ಬರದ ಮೇಲೆ ಮದಲಿಂಗ ಮದಲಗಿತ್ತಿಯನ್ನು ಕುಕ್ಕರಗಾಲಲ್ಲಿ ಕೂರಿಸಿ ಕೈಗಳನ್ನು ಜೋಡಿಸಿರುವಂತೆ ತಿಳಿಸುವರು. ಮದಲಗಿತ್ತಿಗೆ ಸೋದರ ಮಾವ ಜೋಡು ಕೈಗಳಿಗೆ ದಾರವನ್ನು ಸುತ್ತಿ ಆನಂತರ ಅವಳ ಬೆನ್ನು ಬಳಸಿ ಒಂದು ಸುತ್ತು ಬರುವುದು. ರೆಂಪಿಗೆ (ಚರ್ಮವನ್ನು ಕೊಯ್ಯುವ ಸಾಧನ)ಯಿಂದ ಉಬ್ಬುಕೂದಲು, ಕಣ್ಣಿನ ರೆಪ್ಪೆ ಕೂದಲು,

ಕಾಲು ಉಗುರು, ಕೈ ಉಗುರುಗಳನ್ನು ತೆಗೆದು ಊರಿನಿಂದ ದೂರ ಹಾಕಿ ಬರುತ್ತಾರೆ. ಮದಲಿಂಗನ ಮನೆಯಲ್ಲು ಅವನ ಸೋದರಮಾವ ಈ ಕಾರ್ಯವನ್ನು ನಿರ್ವಹಿಸುವನು; ಇದನ್ನು 'ಸನಿ' ತೆಗೆಯುವ ಕಾರ್ಯ ಎನ್ನುವರು.

ಮದಲಿಂಗನಿಗೆ ಹಾಗೂ ಮದಲಗಿತ್ತಿಗೆ ಒಕಲಿ, ನಿಂಬೆಹಣ್ಣು, ಈರುಳ್ಳಿಯನ್ನು ನೀವಾಳಿಸಿ ತೆಗೆದು ಹಾಕುವರು. ಮನೆಯ ಬಾಗಿಲಿಗೆ ಪೂಜೆ ಮಾಡಿ ಬಲಗಾಲು ಇಟ್ಟು ಒಳಕ್ಕೆ ಕರೆದುಕೊಳ್ಳುತ್ತಾರೆ. ಅನಂತರ ಹೊಸ ಬಟ್ಟೆಯನ್ನು ಉಡಿಸಿ ಕರಿ ಕಂಬಳಿಯ ಮೇಲೆ ಅಕ್ಕಿ ಹಾಕಿ ಕೂರಿಸಿ ಮುಂದೆ ಸಾಸೆ ಇಡಲು ಮೂರು ಕುಪ್ಪೆ ಅಕ್ಕಿ, ಕಳಸ ಇಡುವರು, ಮೂರು ಜನ ಮುತ್ತೈದೆ ಹಾಗೂ ಎರಡು ಜನ ಗಂಡು ಮಕ್ಕಳಿಂದ ಅರಿಶಣವನ್ನು ಕೈಯಿಗೆ, ಕಾಲಿಗೆ ಹಚ್ಚಿ ಸಾಸೆ ಇಟ್ಟು ಕೈಯಿಗೆ ಒಂದು ಎಲೆ ಅಡಿಕೆ ಕೊಟ್ಟು ಕಳಸವನ್ನು ಬೆಳಗುವರು. ನಂತರ ತಲೆಯನ್ನು ಸ್ಪರ್ಶಿಸಿ ಕೈಮುಗಿಯುವರು. ಮದುಮಗನಿಗೆ ಕಿರುಗತ್ತಿ ಕೊಟ್ಟು ಅದರ ತುದಿಗೆ ವೀಳ್ಯದೆಲೆ ಹಾಗೂ ಲಿಂಬೆಹಣ್ಣು ಚುಚ್ಚಿ ಮದುಗಮನನ್ನು ಮಾಡಲಾಗುತ್ತದೆ. ನಂತರ ಬಂದಿರುವ ಕೇರಿಯ ಹಿರಿಯ ಹೆಣ್ಣುಮಕ್ಕಳು ಸೋಬಾನೆ ಹಾಡುಗಳನ್ನು ಹಾಡುತ್ತಾರೆ.

೪.೫.೧೪ ಲಗ್ನದ ಅಕ್ಕಿ ಒಯುವ ಶಾಸ್ತ್ರ

ಮದಲಿಂಗನನ್ನು ಮಾಡಿದ ನಂತರ ಈ ಕಾರ್ಯವನ್ನು ಮಾಡುತ್ತಾರೆ. ಕೇರಿಯ ಹಿರಿಯ ಯಜಮಾನರು ಹಾಗೂ ಹುಡುಗನ ಸಂಬಂಧಿಕರು ಸೇರಿ ನಿಶ್ಚಿತಾರ್ಥ ಮಾಡುವ ಸಂದರ್ಭದಲ್ಲಿ, ಮದಲಗಿತ್ತಿಗೆ ಏನು ಕೊಡಬೇಕು ಎಂದು ತಿರ್ಮಾನ ಮಾಡಿರುತ್ತಾರೆಯೋ, ಅದನ್ನು ಹಾಗೂ ೨೧ ಸೇರು ಅಕ್ಕಿ, ೬ ಸೇರು ಜೋಳ, ದೇವರ ಮನೆಯಲ್ಲಿ ಕಟ್ಟಿಸಿಕೊಂಡು ಬಂದಿರುವ ಲಗ್ನದ ಅಕ್ಕಿ, ಕಾಲುಂಗುರ, ಘಟಿ ಕಂಕಣ, ತಾಳಿ ಕರಿಮಣಿ ಇವುಗಳನ್ನು ರಗ್ಗಿನಲ್ಲಿ ತೆಗೆದುಕೊಂಡು ಮದಲಗಿತ್ತಿಯ ಮನೆಗೆ ಹಿರಿಯ ಯಜಮಾನರು ಹೋಗುತ್ತಾರೆ. ಅವರಿಗೆ ಸಾಂಪ್ರದಾಯಿಕವಾಗಿ ನೀರು ಕೊಟ್ಟು ಬರಮಾಡಿಕೊಳ್ಳುತ್ತಾರೆ. ಮದಲಗಿತ್ತಿಯ ಊರಿನ ಯಜಮಾನರು ಎಲ್ಲವನ್ನು ಪರಿಶೀಲಿಸಿ ಮುಹೂರ್ತದ ಸಂದರ್ಭದಲ್ಲಿ ಅವುಗಳನ್ನು ಇಡುತ್ತಾರೆ. ಮದಲಿಂಗನನ್ನು ಮಾಡಿಕೊಂಡು ಮನೆಯಲ್ಲಿ ತಂದೆ–ತಾಯಿಯ ಕಾಲಿಗೆ ನಮಸ್ಕರಿಸಿ ಹಾಗೂ ಹಿರಿಯರಿಗೆ ನಮಸ್ಕರಿಸಿ, ಮೆರವಣಿಗೆಯನ್ನು ತಮಟೆ (ತಪ್ಪದೆ) ಅಥವಾ ಬ್ಯಾಂಡ್ ಸೆಟ್‌ಗಳ ಮೂಲಕ ಹೊರಡುವವರು. ಊರಿನ ಬುಡ್ಡೆಕಲ್ಲಿಗೆ, ಹೊಕಲಿ, ನಿಂಬೆಹಣ್ಣು, ನೀವಾಳಸಿ, ತೆಂಗಿನ ಕಾಯಿ ಒಡೆಯುವರು ಪ್ರತಿಯೊಂದು ದೇವರಿಗೆ ಹಣ್ಣು, ಕಾಯಿ ಮಾಡಿಸಿ ಮದಲಿಂಗನ ಕೈಯಿಗೆ ವೀಳ್ಯದೆಲೆ ಅದಕ್ಕೆ ಓಕುಲಿ ಹಾಕಿ ನೆಲಕ್ಕೆ ಬಿಟ್ಟು ದೇವರಿಗೆ ನಮಸ್ಕರಿಸಿ ಬರುತ್ತಾರೆ.

ರಾತ್ರಿ ೮ ಗಂಟೆಗೆ ಮದಲಿಂಗನ ದಿಬ್ಬಣ ಹೊರಡಿಸಿ ತರುತ್ತಾರೆ. ಹೆಣ್ಣಿನ ಮನೆ ದೂರದೂ ಆದರೆ ಬೇಗ ಬಿಡುತ್ತಾರೆ. ಸ್ವಲ್ಪ ಹತ್ತಿರ ಇದ್ದರೆ ಸುಮಾರು ೮ ಗಂಟೆಗೆ ಬಿಡುತ್ತಾರೆ. ಊರಿನ ಮುಂದಿನ ಶಾಲೆಯಲ್ಲಿ ಉಳಿದು ಕೊಳ್ಳುತ್ತಾರೆ. ಗಂಡಿನವರು ಬಂದಾಕೂಡಲೇ ತಮಟೆ ಅಥವಾ

ಬ್ಯಾಂಡ್ ಬಾರಿಸುತ್ತಾರೆ. ತಕ್ಷಣ ಹೆಣ್ಣಿನ ಕಡೆಯವರು ಕಾಲು ತೊಳೆಯಲು ಒಂದು ಬಿಂದಿಗೆ ನೀರು ಚಪ್ಪೆ ತೆಗೆದುಕೊಂಡು ಕೊಡುತ್ತಾರೆ.

ಮಾದಿಗ ಸಮುದಾಯದಲ್ಲಿ ಮದುವೆಯ ಮುಂದಿನ ಕಾರ್ಯನಡೆಯಬೇಕಾದರೆ. ಮದುಮಗನ ಕಡೆಯವರು ಲಗ್ನದ ಅಕ್ಕಿಯನ್ನು ತರಬೇಕು. ಇಲ್ಲವೆಂದರೆ ಮದುವೆ ನಿಲ್ಲುವ ಸಾಧ್ಯತೆ ಕೂಡ ಇರುತ್ತದೆ. ಆದ್ದರಿಂದ ಈ ಆಚರಣೆಯು ಬಹುಮುಖ್ಯವಾಗಿತ್ತು. ಇವತ್ತಿನ ಬದಲಾದ ಸಂದರ್ಭದಲ್ಲಿ ಒಂದು ಕಡೆ ಸೇರಿಸುವುದು ಕಷ್ಟದ ಕೆಲಸವಾಗಿದೆ. ಕಾರಣ ಹಿಂದೆ ಯಾರೇ ಮನೆಯಲ್ಲಿ ಸಣ್ಣಪುಟ್ಟ ಆಚರಣೆ ಮಾಡಿದರೆ ಒಂದೆಡೆ ಸೇರಿ ಆಚರಣೆಯನ್ನು ಮಾಡಿ, ಅಲ್ಲಿ ಬರುವ ಕಷ್ಟವಾಗವನ್ನಾಗಲೀ, ಸುಖ ಹಂಚಿಕೊಂಡು ಬಾಳುತ್ತಿದ್ದರು. ಆದರೆ ಇವತ್ತಿನ ಪರಿಸ್ಥಿತಿ ಬದಲಾಗಿದೆ. ಇಂದಿನ ಮನೆಯಲ್ಲಿ ಇಂತಹ ಆಚರಣೆಗಳನ್ನು ಆ ಕುಟುಂಬದವರು ಮಾತ್ರ ಮಾಡುತ್ತಾರೆ. ಆದ್ದರಿಂದ ಪಾರಂಪರಿಕವಾದ ಸಾಮಾಜಿಕ ಸಂಬಂಧಗಳು ಕಳಚಿಬಿದ್ದಿವೆ.

೪.೩.೧೫ ಕಾಲು ತೊಳೆಯುವ ಶಾಸ್ತ್ರ

ಮದಲಿಂಗನ ದಿಬ್ಬಣ ಬಂದನಂತರ ಊರಿನ ದೇವರ ಗುಡಿ, ಬಿಡದಿಮನೆ, ಅಥವಾ ಶಾಲೆಯನ್ನು ಕೊಡುತ್ತಾರೆ. ಗಂಡಿನ ಕಡೆಯವರು ಕಳಸವನ್ನು ಹಿಡಿದುಕೊಂಡು ಹೆಣ್ಣಿನ ಮನೆಗೆ ಹೋಗಿ ಬಂದ ನಂತರ ಮದಲಿಂಗನಿಗೆ ಅತ್ತೆಯಾಗುವವರು ಕಂಚಿನ ತಟ್ಟೆ, ಚೊಂಬು ನೀರು ಎಲೆ, ಅಡಿಕೆಯನ್ನು ತೆಗೆದುಕೊಂಡು ದಿಬ್ಬಣವನ್ನು ಎದುರುಗೊಳ್ಳುವುದುಂಟು. ಆಗ ಜರೆಯುವ ಹಾಡುಗಳನ್ನು ಹೇಳಿ, ಆಯಾಸಗೊಂಡು ಬಂದ ಬೀಗರನ್ನು ರಂಜಿಸುವರು. ತಂದಿರುವ ತಟ್ಟೆಯಲ್ಲಿ ಹುಡುಗನ ಕಾಲುಗಳನ್ನು ಇಡಲು ಹೇಳುತ್ತಾರೆ. ಕಾಲಿಗೆ ನೀರು ಹಾಕಿ ತೊಳೆದು ಕಾಲಿಗೆ ವಿಭೂತಿ, ಕುಂಕುಮ ವೀಳ್ಯದೆಲೆ ಇಟ್ಟು ಪೂಜೆಯನ್ನು ಮಾಡುತ್ತ ಸೋಬಾನೆ ಹಾಡುಗಳನ್ನು ಹೇಳುತ್ತಾರೆ. ಎಲ್ಲರನ್ನು ಬಿಡಿದಿಮನೆ, ದೇವರ ಗುಡಿ ಅಥವಾ ಶಾಲೆಯಲ್ಲಿ ಬಿಡುತ್ತಾರೆ. ಬಂದಿರುವ ಸಂಬಂಧಿಕರಿಗೆ ಸಿಹಿ ಊಟವನ್ನು ಮಾಡಿಸುತ್ತಾರೆ. ಮತ್ತೆ ಆ ರಾತ್ರಿ ಯಾವುದೇ ಕಾರ್ಯಗಳು ನಡೆಯುವುದಿಲ್ಲ.

೪.೩.೧೬ ಮುಹೂರ್ತ ಅಥವಾ ತಾಳಿ ಕಟ್ಟುವ ಶಾಸ್ತ್ರ

ದೇವರ ಗುಡಿಯ ಹತ್ತಿರ ಗಂಡಿಗೆ ಪ್ರತ್ಯೇಕವಾಗಿ ಸುರಗಿಯ ನೀರು ಹಾಕಲಾಗುತ್ತದೆ. ಹೆಣ್ಣಿನ ಮನೆಯಲ್ಲಿ ಮದಲಗಿತ್ತಿಗೆ ಸುರಗಿಯ ನೀರು ಹಾಕುತ್ತಾರೆ. ಗಂಡಿನವರು ಹೆಣ್ಣಿಗಾಗಿ ತಂದ ಒಡವೆ, ಹೊಸಬಟ್ಟೆ, ಸೂಸುಗ, ಕೊಳಹಾರಗಳಿಂದ ಮದಲಗಿತ್ತಿಯಾಗಿ ಸಿಂಗರಿಸುವರು. ಜೊತೆಗೆ ಎಲೆ ಅಡಿಕೆಯನ್ನು ಹೆಣ್ಣಿನ ಮನೆಗೆ ಕಳುಹಿಸುತ್ತಾರೆ. ಗದ್ದುಗೆಯ ಶಾಸ್ತ್ರ ಮುಗಿಯುತ್ತಿದ್ದಂತೆ ಧಾರೆ ಮುಹೂರ್ತಕ್ಕೆ ಎರಡು ಕಡೆಯಲ್ಲಿ ಸಿದ್ಧತೆಗಳು ನಡೆಯುತ್ತವೆ.

ಹುಡುಗನ್ನು ಮುಹೂರ್ತಕ್ಕೆ ಬರುವುದಕ್ಕಿಂತ ಮುಂಚೆ ಬುಡ್ಡೆಕಲ್ಲಿಗೆ ನೀವಾಳಿಕಾಯಿ ಒಡೆದು ಪ್ರತಿಯೊಂದು ದೇವರಿಗೆ ಹೋಗಿ ಹಣ್ಣುಕಾಯಿ, ನೈವೇದ್ಯ ಮಾಡಿಸಿ, ಹೆಣ್ಣಿನ ಮನೆಗೆ ಬರುತ್ತಿರುವಾಗ

ಸೋದರಮಾವ ಹುಡುಗನ್ನು ಹೆಗಲ ಮೇಲೆ ಎತ್ತಿಕೊಂಡು ಕರೆತರುತ್ತಾನೆ. ಒಂದಲೆಯಿಂದ "ಇಳೆ" ತೆಗೆಯುವರು. ಮದಲಗಿತ್ತಿಯನ್ನು ಮಾಡುವ ಸಮಯದಲ್ಲಿ ಹೆಣ್ಣಿನ ಸಂಬಂಧಿಕರು "ಅಳುವರು". ನಂತರ ಆರತಿ ಬೆಳಗಿ, ಹಂದರದ ಒಳಗೆ ಬರಮಾಡುವ ಸಂದರ್ಭದಲ್ಲಿ ಹೆಣ್ಣಿನ ಸೋದರಮಾವ ಹಂದರದ ಒಳಕ್ಕೆ ಮದಲಿಗಿತ್ತಿಯನ್ನು ಹೆಗಲ ಮೇಲೆ ಹೊತ್ತುಕೊಂಡು ಬರುತ್ತಾನೆ. 'ಬಸವನಾರತಿ' ಎತ್ತಿ ಓಕುಳಿ ನೀರು ಚೆಲ್ಲಿ, ವೀಳ್ಯದೆಲೆಯಲ್ಲಿ ನೀವಾಳಿಸಿ ತೆಗೆಯುತ್ತಾರೆ. ಹೆಣ್ಣು ಮಕ್ಕಳು ಮಂಗಳಾರತಿ ಹಾಡುಗಳನ್ನು ಹಾಡುತ್ತಾರೆ.

ಕಡಲೀಯ ಕಾಳೋಟು ಕಟದು ಬಾತಾದು ನಾಕಿ

ಕಟದು ಬಾತೀಯನಾಕಿ ಕಟನುಳ್ಳ ಜ್ಯೋತಿ ಉರಿಯಮ್ಮ"

ಕಟದು ಬಾತಾಯ ನಾಕಿ– ಈ ಮನೆಯ

ದೇವರಿಗೆ ಆರುತಿ ಬೆಳಗಮ್ಮ."[೨]

ಮದಲಿಂಗನ ಜೊತೆಗೆ ತನ್ನ ಸೋದರಿ 'ಲಗ್ನದ ಪುಟ್ಟಿ'ಯನ್ನು ಹೊತ್ತುಕೊಂಡು ಕಳಸ ಹಿಡಿದ ಮುತ್ತೈದೆಯರು 'ತಳಿ' ಹಿಡಿದವರು (ಮದಲಿಂಗನ ತಲೆಯ ಮೇಲೆ ಬಳಿಯ ಬಟ್ಟೆಯನ್ನು ಹಿಂದೊಬ್ಬ ಮುಂದೊಬ್ಬ ಬಟ್ಟೆಯನ್ನು ಹಿಡಿದಿರುತ್ತಾರೆ. ಮಧ್ಯ ಇನ್ನೊಬ್ಬ ನೆಡಗೋಲು ಹಿಡಿದುಕೊಂಡು ಬರುವುದಕ್ಕೆ ತಳಿ ಎನ್ನುತ್ತಾರೆ) ಸೂರ್ಯ ಕಿರಣಗಳು ಮೈಮೇಲೆ ಬೀಳಬಾರದು ಎನ್ನುವ ಉದ್ಧೇಶದಿಂದ ಹಿಡಿದುಕೊಂಡು ಬರುತ್ತಾರೆ. ಕಟ್ಟೆಮನೆಯಿಂದ ಲಗ್ನದ ಅಕ್ಕಿ, ಅರಿಸಿಣ, ಕುಂಕುಮ ಹಾಗೂ ಹೆಣ್ಣಿನ–ಗಂಡಿನ ಮನೆಯವರು ಕೊಟ್ಟು ಅಕ್ಕಿ, ಜೋಳವನ್ನು ಬೆರೆಸಿ ಅಕ್ಷತೆ ಮಾಡಿ ಕೊಳ್ಳುವರು ಹಂದರದಲ್ಲಿ ಎರಡು ಕುರ್ಚಿ ಹಾಕಿಸಿ ವಧು–ವರರವನ್ನು ಕೂರಿಸುತ್ತಾರೆ. ಹೆಣ್ಣಿನ ಮತ್ತು ಗಂಡಿನ ಸೋದರಮಾವಂದಿರು ಮುಹೂರ್ತದ ಸಂದರ್ಭದಲ್ಲಿ ವಧು–ವರರ ಹತ್ತಿರ ನಿಲ್ಲಬೇಕು. ಅನುಭವಿ ಯಜಮಾನ ಪುರೋಹಿತ ಕೆಲಸವನ್ನು ನಿಭಾಯಿಸುತ್ತಾನೆ.

ಹೆಣ್ಣು ಮತ್ತು ಗಂಡಿನ ಮಧ್ಯೆ ಬಿಳಿಪಂಚೆಯನ್ನು ಅಡ್ಡ ಹಿಡಿಯುತ್ತಾರೆ. ಹಿರಿಯ ಯಜಮಾನ ಕಂಚಿನ ಗಂಗಾಳದಲ್ಲಿ ಎರಡು ಜೋಡು ತೆಂಗಿನಕಾಯಿ ಮೇಲೆ 'ಮಾಂಗಲ್ಯ ಸೂತ್ರವಿಟ್ಟು, ಅದಕ್ಕೆ ವಿಭೂತಿ, ಕುಂಕುಮ ಇಟ್ಟು ಬಂದಿರುವ ಮುತ್ತೈದೆಯರು, ಹಿರಿಯರ ಹತ್ತಿರ ಮಾಂಗಲ್ಯ ಸೂತ್ರವನ್ನು ಮುಟ್ಟಿಸುತ್ತಾರೆ. ನಂತರ ಶಾಸ್ತ್ರಬದ್ಧವಾಗಿ ಎಲ್ಲರಿಂದ ಒಪ್ಪಿಗೆ ಪಡೆಯುತ್ತಾನೆ. ಗೌಡ್ರು, ಗೊಂಚೆಗಾರರು, ತೋಟಿ ತಳವಾರರು, ಕುಲಸ್ಥರು, ಮಠಾಧಿಪತಿಗಳು, ದೈವಸ್ಥರು, ೧೨ ಜನ ಆಯಗಾರರು, ಸೂರ್ಯ ಚಂದ್ರರ ಸಾಕ್ಷಿ ಮತ್ತು ಇಲ್ಲಿ ನೆರೆದಿರುವಂಥ ಗುರು ಹಿರಿಯರ ಸಾಕ್ಷಿಯಾಗಿ ಮಾಂಗಲ್ಯ ಕಟ್ಟುವುದಕ್ಕೆ ಅಪ್ಪಣೆ ಕೊಟ್ರೇನಪ್ಪ ಎಂದು ವರನ ಬಾಯಿಯಿಂದ ಮೂರು ಬಾರಿ ಹೇಳಿಸಿ ಅದಕ್ಕೆ ಎಲ್ಲರು 'ನಮ್ಮ ಅಪ್ಪಣೆ' ಎಂಬ ಒಪ್ಪಿಗೆಯನ್ನು ಪಡೆದುಕೊಂಡು ಮಾಂಗಲ್ಯವನ್ನು ತೋರಿಸಿ ತಾಳಿಯನ್ನು ಕೆಲವರ ಕೈಯಿಂದ ಮುಟ್ಟಿಸಿ ಎಲ್ಲರು ಅದಕ್ಕೆ ನಮಸ್ಕರಿಸಿ ವರನು ವಧುವಿನ ಕೊರಳಿಗೆ 'ಮೂರು ಗಟ್ಟುಹಾಕಿ' ತಾಳಿ ಕಟ್ಟುವನು.

ತಾಳಿ ಕಟ್ಟಿಸಿದ ಮೇಲೆ ಎದುರುಬದುರಿಗೆ ಕುರ್ಚಿಯಲ್ಲಿ ಕೂರಿಸಿ ಕಂಚಿನ ಗಂಗಾಳವೊಂದರಲ್ಲಿ ಹೆಣ್ಣು ಮತ್ತು ಗಂಡಿನ ಕೈಗಳನ್ನು ಹಿಡಿಸಿ, ತಾಯಿ–ತಂದೆ, ಸೋದರ ಸಂಬಂಧಿ ಹಾಗೂ ಬಂಧು ಬಳಗದಿಂದ ವಧು–ವರರ ಕೈಗಳನ್ನು ಜೋಡಿಸಿ ಅದರಲ್ಲಿ ಒಂದು ವೀಳ್ಯದೆಲೆ ಒಂದು ರೂಪಾಯಿ ನಾಣ್ಯ ಇಟ್ಟು ಎಲ್ಲರು ಹಾಲನ್ನು ಎರೆಯುವರು ಹಾಲು ಫಲವತ್ತತ್ತೆಯ ಸಂಕೇತ. ಹಣ ಸವೃದ್ಧಿಯ ಸಂಕೇತ ನಮ್ಮ ಮನೆ ಬೆಳಗುವ ಲಕ್ಷ್ಮೀ ಎನ್ನುವ ಕಾರಣಕ್ಕೆ ಹಾಲು ಮತ್ತು ಒಂದು ನಾಣ್ಯವನ್ನು ಹಾಕುತ್ತಾರೆ. ಆನಂತರ ತುಂಬಿದ ಹಾಲಿನ ಗಂಗಾಳದಲ್ಲಿ ಬಂಗಾರದ ಉಂಗುರವನ್ನು ಹಾಕಿ, ಹುಡುಕಿಸುವಾಗ ಮೊದಲು ಯಾರ ಕೈಯಿಗೆ ಸಿಗುತ್ತದೋ ಅಂತಹವರ ಕೈಯನ್ನು ಮೇಲಕ್ಕೆ ಎತ್ತಿ ಹೆಗ್ಗೇರು ಹುಡುಗ ಗೆದ್ದ ಎಂದು ಘೋಷಿಸುತ್ತಾರೆ. ನಂತರ ಮತ್ತೆ ಹುಡುಕಿಸುತ್ತಾರೆ ಆಗ ಹುಡುಗಿಗೆ ಸಿಗುತ್ತದೆ. ಐವೊಳೇರು ಹುಡುಗಿ ಗೆದ್ದಳು ಎಂದು ಹೀಗೆ ಮೂರು ಬಾರಿ ಮಾಡಿಸುತ್ತಾರೆ.

ಮುಹೂರ್ತ ಮುಗಿದ ನಂತರ ವಧು–ವರರನ್ನು "ಸೂರ್ಯ ನಮಸ್ಕಾರ" ಅಥವಾ 'ಆರುಂಧತಿ ದರ್ಶನ' ಮಾಡಿಸುತ್ತಾರೆ. ಅನುಭವಿ ಹಿರಿಯ ಯಜಮಾನ ವರ ಶಲ್ಯ ವಧುವಿನ ಸೀರೆಗೆ 'ಬ್ರಹ್ಮಗಂಟು' ಹಾಕುತ್ತಾನೆ, ಆದರೆ ಇದರ ಉದ್ದೇಶ ನೂರು ವರ್ಷ ಜೊತೆಯಾಗಿ ಬಾಳಲಿ ಎನ್ನುವ ಒಂದು ನಂಬಿಕೆ. ಚಪ್ಪರದಿಂದ ಪೂರ್ವ ಅಭಿಮುಖವಾಗಿ ಸ್ವಲ್ಪ ದೂರ ಬಂದು ಗಂಡು ಬಲಗಡೆ ಹೆಣ್ಣು ಎಡಗಡೆಯಲ್ಲೂ ನಿಲ್ಲಿಸುವವರು. ಹೆಣ್ಣಿನ–ಗಂಡಿನ ಸೋದರಮಾವಂದಿರು ಇಬ್ಬರಿಗೆ ಪಾದರಕ್ಷೆಯನ್ನು ಕಾಲಿಗೆ ಹಾಕುವ ಸಂಪ್ರದಾಯವಿದೆ. ಗಂಡಿನ–ಹೆಣ್ಣಿನ ಕಾಲಿಗೆ ಮುಂಭಾಗದಲ್ಲಿ ಮೊರದಲ್ಲಿ, ಅಕ್ಕಿ, ಒಣಕೊಬ್ಬರಿ, ಬೆಲ್ಲ ಎಲೆ ಅಡಿಕೆ, ಉತ್ತತ್ತಿ, ವಧು–ವರರು ಕಾಣಿಕೆಯಾಗಿ ೧೦೧ ರೂಪಯಿಗಳನ್ನು ಮೊರದಲ್ಲಿ ಇಡಬೇಕು, ಸೋದರಮಾವಂದಿರು ವಧು–ವರರ ಪಾದಗಳನ್ನು ತೊಳೆದು, ವಿಭೂತಿ, ಕುಂಕುಮ ಇಟ್ಟು ಪೂಜೆ ಮಾಡುತ್ತಾರೆ. ನಂತರ ಚಪ್ಪಲಿಯನ್ನು ಕಾಲಿಗೆ ಹಾಕುತ್ತಾರೆ. ಆಗ ಹಿರಿಯ ಗಂಡಿನ ಬಲಗೈಯಿಂದ ಹೆಣ್ಣಿನ ಬಲಗೈ ಇರಿಸಿ ಸೂರ್ಯನನ್ನು ತೋರಿಸುತ್ತಾರೆ. "ಆರುಂದತಿ ನಕ್ಷತ್ರ ದರ್ಶನ" ಮಾಡಿಸಿ ಅಗರ ಬತ್ತಿಯಿಂದ ಸೂರ್ಯನಿಗೆ ಬೆಳಗಿಸಿ, ಎರಡು ಕೈಯಿಂದ ಸೂರ್ಯನಿಗೆ ನಮಸ್ಕರಿಸಿ ಮನೆಯ ಬಾಗಿಲ ಬಳಿ ಕರೆದುಕೊಂಡು ಬರುತ್ತಾರೆ.

೪.೫.೧೭ ಮದುವಣಗಿತ್ತಿಗೆ ಕಾಲುಂಗುರು ತೊಡಿಸು ಶಾಸ್ತ್ರ

ಭಾರತೀಯ ಸಂಸ್ಕೃತಿಯ ಪರಂಪರೆಯನ್ನು ಗಮನದಲ್ಲಿಟ್ಟುಕೊಂಡು ನೋಡುವ ಸಂದರ್ಭದಲ್ಲಿ ಕಾಲುಂಗುರ ಸಂಪ್ರದಾಯವಿದ್ದು ವಿವಾಹದ ವೇಳೆಯಲ್ಲಿ ಮದುವಣಗಿತ್ತಿಗೆ ಕಾಲುಂಗುರವನ್ನು ತೊಡಿಸುತ್ತಾರೆ. ಕಾಲುಂಗುರ ಹಾಕುವ ಉದ್ದೇಶವೆಂದರೆ ಹುಡುಗಿಯಾದವಳು ಶ್ರೀವಾತವನ್ನು ಪಡೆಯುತ್ತಾಳೆ. ಮದುವೆಯಾದ ಗಂಡು ತಾಳಿ ಕಟ್ಟಿದ ನಂತರ ಸೂರ್ಯನಿಗೆ ನಮಸ್ಕರಿಸಿ ತನ್ನ ಹೆಂಡತಿಯ ಎರಡು ಕಾಲುಗಳಿಗೆ ಉಂಗುರವನ್ನು ತೊಡಿಸುತ್ತಾನೆ. ವೈಜ್ಞಾನಿಕವಾಗಿ ನೋಡಿದಾಗ ಬೆರಳಿಗೆ ಹಾಗೂ ಗರ್ಭಕೋಶಕ್ಕೆ ನೇರವಾದ ಸಂಬಂಧವಿದೆ. ಎಚ್ಚರ ನೀಡುವ ಸಲುವಾಗಿ ಕಾಲುಂಗುರವನ್ನು ಹಾಕುತ್ತಾರೆ. ಇವತ್ತಿನ ದಿನಮಾನಗಳಲ್ಲಿ ನಗರ ಪ್ರದೇಶದಲ್ಲಿ ಐಟಿ ಬಿಟಿ ಕಂಪನಿಗಳಲ್ಲಿ

ಕೆಲಸ ಮಾಡುವ ಮಹಿಳೆಯರು ಅಥವಾ ಅವಿವಾಹಿತ ಹುಡುಗಿಯರು ತಮ್ಮ ರಕ್ಷಣೆಗೋಸ್ಕರ ಕಾಲುಂಗುರವನ್ನು ಹಾಕಿಕೊಳ್ಳುವುದು ವಿಪರ್ಯಾಸದ ಸಂಗತಿಯಾಗಿದೆ.

೪.೫.೧೮ ಕಾಲು ತೊಳೆಯುವ ಶಾಸ್ತ್ರ

ಹೆಣ್ಣಿನ ಮುತ್ತೈದೆತನದ ಒಂದು ಭಾಗವಾಗಿ ಕಾಲು ತೊಳೆಯುವ ಶಾಸ್ತ್ರ ಎರಡು ಬಾರಿ ಮಾಡಿಸುತ್ತಾರೆ. ಮೊದಲು ವರನು ವಧುವಿನ ಮನೆಗೆ ಬಂದಂತಹ ಸಂದರ್ಭದಲ್ಲಿ, ಆನಂತರ ಮುಹೂರ್ತ ಮುಗಿದು ಸೂರ್ಯ ನಮಸ್ಕಾರ ಮಾಡಿತ ನಂತರ ಕಾಲು ತೊಳೆಯುವ ಶಾಸ್ತ್ರ ಮಾಡಿಸುತ್ತಾರೆ. ವಧು–ವರರನ್ನು ಸೂರ್ಯ ನಮಸ್ಕಾರ ನಂತರ ಬಾಗಿಲ ಬಳಿ ನಿಲ್ಲಿಸುತ್ತಾರೆ. ಹೆಣ್ಣಿನ ತಮ್ಮ ಅಥವಾ ಅಣ್ಣನಿಂದಾದರೂ ಸರಿ ವಧು–ವರರ ಪಾದಗಳನ್ನು ಕಂಚಿನ ಗಂಗಾಳದಲ್ಲಿಡಿಸಿ ತೊಳೆದು ವಿಭೂತಿ, ಕುಂಕುಮ ಹಚ್ಚಿ ಪೂಜೆ ಮಾಡಿ, ಎರಡು ಕಾಲುಗಳನ್ನು ಹಿಡಿದುಕೊಂಡು "ಅಕ್ಕ ನನಗೆ ನಿನ್ನ ಮಗಳು ಕೊಡೆಂದು" ಕೇಳುವನು ಆಗ ಅವಳು ನಿಮ್ಮ ಮಾವನನ್ನು ಕೇಳು ಎಂದು ಹೇಳುತ್ತಾಳೆ. ಮಾವ ನಿನ್ನ ಮಗಳನ್ನು ಕೊಡು ಎಂದು ಕೇಳುತ್ತಾನೆ, ಹೀಗೆ ಮೂರು ಬಾರಿ ಅವನಿಂದ ಹಿರಿಯರು ಹೇಳಿಸುತ್ತಾರೆ. ಇಬ್ಬರು ಒಪ್ಪಿಕೊಂಡು ಕೊಡುತ್ತೇವೆ ಎಂದು ಒಪ್ಪಿಗೆ ನೀಡುತ್ತಾರೆ. ಆಗ ಅವನು ಪಾದಗಳನ್ನು ಬಿಡುವನು. ಆನಂತರ ಗಂಡು–ಹೆಣ್ಣಿನ ಪಾದಗಳನ್ನು ಮನೆಯ ಬಾಗಿಲ ಹೊಸ್ತಿಲ ಮೇಲಿರಿಸಿ ಅವರ ಹೆಬ್ಬೆರಳಿನ ಮಧ್ಯದಿಂದ ಹತ್ತು ಅಥವಾ ಇಪ್ಪತ್ತು ಪೈಸೆಗೆ ಒಂದು ಮೊಳೆಯನ್ನು ಹೊಡೆಯುವರು. ಇಬ್ಬರು ಬಲಗಾಲು ಇರಿಸಿ ಒಳಗೆ ಕರೆದುಕೊಳ್ಳುತ್ತಾರೆ.

೪.೫.೧೯ ಹಾಲುಶೆಟ್ಟೆ ಬಡಿಯುವ ಶಾಸ್ತ್ರ

ಕಾಲು ತೊಳೆಯುವ ಕಾರ್ಯ ಮುಗಿದ ನಂತರ ಅಡುಗೆ ಕೋಣೆಯಲ್ಲಿರುವ ಹರನಿ (ಐರಣಿ) ಹತ್ತಿರ ವಧು–ವರರನ್ನು ಬಿಡುತ್ತಾರೆ. ಬುಮುಲು ಶಾಸ್ತ್ರ ಮುಗಿಯವರೆಗೆ ಬಾಸಿಂಗ, ಕಚ್ಚೆಪಂಚೆ, ಹೂವಿನಹಾರ ಬಿಚ್ಚುವಾಗಿಲ್ಲ ಹಾಗೂ ಮನೆಯಿಂದ ಹೊರಗಡೆ ಬರುವಾಗಿಲ್ಲ. ಆದ್ದರಿಂದ ಈ ಶಾಸ್ತ್ರವನ್ನು ಮುಹೂರ್ತದ ಸಂದರ್ಭದಲ್ಲಿ ಎರೆದ ಹಾಲನ್ನು ಗಂಗಳದಲ್ಲಿರಿಸಿ ಹರನಿ ಗಡಿಗೆಗಳನ್ನು ಇಟ್ಟಿರುವರು. ವಧು–ವರರ ಎರಡು ಕೈಗಳನ್ನು ಹಾಲಿನಲ್ಲಿ ಅದ್ದಿಸಿ ಅದೇ ಗೋಡೆಗೆ ಹೆಣ್ಣಿನ ಎಡಗೈ ಗಂಡಿನ ಬಲಗೈಯಿಂದ ಮೂರು ಬಾರಿ ಬಡಿಸುವರು. ಹರಣಿ ಸೊರೆಗೆ ಮಣ್ಣಿನ ಹರಳೆ ಎಣ್ಣೆಯನ್ನು ಹಾಕಿ ದೀಪ ಹಚ್ಚಿ ತಾಯಿ ಗುಡಿಯ ಮೇಲೆ ಇಟ್ಟು ತೆಂಗಿನಕಾಯಿ ಒಡೆದು ಪೂಜೆ ಮಾಡಿಸಿ ಅಲ್ಲೇ ಕೂರಿಸುವರು.

೪.೫.೨೦ ಬುಮುಲು / ಬುವ್ವದ ಸಂಪ್ರದಾಯ / ಬುವ್ವಸದ್ವ ಶಾಸ್ತ್ರ

ಮಾದಿಗರಲ್ಲಿ ಬುಮುಲು ಶಾಸ್ತ್ರ ವಿಶೇಷವಾದ ಇದೆ. ಇದನ್ನು ಪ್ರಾದೇಶಿಕವಾಗಿ ಬುಮುಲುಶಾಸ್ತ್ರ, ಬುವ್ವದ ಸಂಪ್ರದಾಯ, ಬುವ್ವಸದ್ವು ಶಾಸ್ತ್ರ ಎಂದು ಕರೆಯುತ್ತರೆ. ಪ್ರತಿಯೊಂದು ಕುಲದವರು ಬೇರೆ ಬೇರೆ ರೀತಿಯ ಸಾಂಪ್ರದಾಯಿಕ ಆಚರಣೆಗಳನ್ನು ಮಾಡಿಕೊಂಡು ಬಂದಿದ್ದಾರೆ. ಎರಡು ಹೊಸ

ಮೊರಗಳನ್ನು ತರುತ್ತಾರೆ ಹೆಣ್ಣು–ಗಂಡಿನ ಸಂಕೇತಿಕವಾಗಿ ತರುತ್ತಾರೆ. ಪ್ರಧಾನವಾಗಿ ಇದರಲ್ಲಿ ಬುಮುಲದಲ್ಲಿ ಐದು ಪ್ರಕಾರಗಳು ಕಂಡುಬರುತ್ತವೆ. ಮೊರದ ಬುವ, ತಣಿಗೆ ಬುವ್ವ, ಹೋಳಿಗೆ ಬುವ್ವ, ಹೆಣದ ಬುವ್ವ, ಹಾಲು ಬುವ್ವ, ಐದು ಪಡಿ ಬೂಮ ಎಂದು ಕರೆಯುತ್ತಾರೆ. ಈ ಶಬ್ದಗಳು ಹೆಚ್ಚು ಕಡಿಮೆ ತೆಲುಗು ಪದಗಳಿಂದ ಸೂಚಿಸುತ್ತವೆ. "ಬುವ್ವ" ಎಂದರೆ ಅನ್ನ ಅಥವಾ ಆಹಾರ. ಈ ಬುಮುಲುದ ಖರ್ಚನ್ನು ವಧುವಿನ ಕಡೆಯವರು ಭರಿಸುವರು. ಕಡಿಮೆ ಬಿದ್ದರೆ ಗಂಡಿನವರು ಭರಿಸುವರು.

ಮುಹೂರ್ತ ಮುಗಿದ ನಂತರ ಮಧ್ಯಾಹ್ನ ಎರಡು ಅಥವಾ ಮೂರು ಗಂಟೆಗೆ ಈ ಕಾರ್ಯಕ್ರಮವನ್ನು ಮಾಡುತ್ತಾರೆ. ಎರಡು ಮೊರ, ಒಂದು ಸ್ವಾರೆ ತಂದು ಹಂದರದ ಮಧ್ಯೆದಲ್ಲಿ ಮೂರು ಕಲ್ಲುಗಳನ್ನು ಇಟ್ಟು ಒಲೆಯನ್ನು ಹೂಡಿ ಪೂಜಿಸಿ ಸುತ್ತಲು ಪರದೆಯನ್ನು ಕಟ್ಟುತ್ತಾರೆ. ನಂತರ ಐದು ಪಡಿ (ಬುಮುಲುದವರಾದರೆ) ಐದು ಸೇರು ಅಕ್ಕಿಯನ್ನು ಉಳಿದವರು ೯ ಸೇರಿನ ಅಕ್ಕಿಯನ್ನು ಹಾಕುತ್ತಾರೆ. ಗುಂಪುಗಳ ಆಧಾರದ ಮೇಲೆ ಅಕ್ಕಿಯ ಅನ್ನವನ್ನು ಮಾಡುತ್ತಾರೆ. ಕರಿ ಕಂಬಳಿಯ ಗದ್ದುಗೆ ಮೇಲೆ ಎದುರುಬದುರಾಗಿ ಮೊರವನ್ನು ಇಟ್ಟು ಹಿಂದೆ ಮೊರದಲ್ಲಿ ಅನ್ನ ಹಾಗೂ ತುಪ್ಪದಿಂದ ಮಿದಿಯುತ್ತಾರೆ. ಇವರಲ್ಲಿ ಸ್ವಲ್ಪ ಕಾಲಲಾನಂತರ ಪಶುಗಳ ಅಭಾವದಿಂದ ತುಪ್ಪದ ಪ್ರಮಾಣ ಕಡಿಮೆಮಾಡಿ ಇದರ ಬದಲಾಗಿ ಬೆಲ್ಲದ ಪಾನಕವನ್ನು ಉಪಯೋಗಿಸುತ್ತಾರೆ. ಎರಡು ಮೊರಕ್ಕೆ ವಿಭೂತಿ, ಕುಂಕುಮ ಇಟ್ಟು ಪೂಜೆಮಾಡಿ ಬುಮುಲುದ ಹಕ್ಕುಳ್ಳವರು ತಿನ್ನಬಹುದೆಂದು ಮೂರು ಬಾರಿ ಪರದೆಯಿಂದ ಹೊರ ಬಂದು ಕೂಗುವರು. ಬುಮುಲನ್ನು ಎಲ್ಲರೂ ತಿನ್ನುವಂತಿಲ್ಲ ಅಣ್ಣ–ತಮ್ಮಂದಿರಾಗಬೇಕು ಅಥವಾ ಹಕ್ಕುದಾರರಾಗಿರಬೇಕು. ಬುಮುಲನ್ನು ಸೇವಿಸುವಾಗ ಒಂದು ಮಂತ್ರ ಹೇಳಿಕೊಡುತ್ತಾರೆ.

ಬಾರಪ್ಪ ಮದಲಿಂದ ಬಲಗಾಲು ಮುಂದಿಟ್ಟು ।
ಬಲಕೇನು ತಂದಿಯಾ ಎಡಕೇನು ತಂದಿಯಾ ।
ಎಡಕೇನು ಕಂಡೇ ಹಳೇನಾಗರ ಕಂಡೆ ।
ಬಲಕೇನು ಕಂಡೇ ಮುತ್ತಿನ ಪೇಂಡೆ ಕಂಡೆ ।
ಕತ್ತಂಡೆ ಕಾಮಣ್ಣ, ಬಿತ್ತಂಡೆ ಬೀಮಣ್ಣ ॥

ಬುಲುವು ತಿನ್ನಲು ಎಲ್ಲರ ಹತ್ತಿರ ಅಪ್ಪಣೆ ಕೇಳುತ್ತಾರೆ. ಒಪ್ಪಿಗೆ ಸೂಚಿಸಿದ ನಂತರ ಮೊದಲು ವಧು–ವರರನ್ನು ಎದುರುಬದುರು ಕೂರಿಸಿ. ಒಂದೇ ಗಂಗಳದಲ್ಲಿ ಬುಮುಲನ್ನು ಊಟ ಮಾಡಿಸುವುದು ವಿಶೇಷವಾಗಿದೆ. ಗಂಡಿಗೆ ಬಲಗೈ ಮುಷ್ಟಿಯನ್ನು ಮೇಲು ಮುಖವಾಗಿ ಮಾಡಿಸಿ ಹೇಗ್ಡೇರು ಹುಡುಗ ಗೆದ್ದ ಎಂದು ಹೇಳಿಸುತ್ತಾರೆ. ಇದೇ ರೀತಿ ಹೆಣ್ಣಿಗೂ ಮಾಡಿಸುತ್ತಾರೆ. ನಂತರ ಗಂಡು ಅದನ್ನು ನಾಲಿಗೆಯಿಂದ ಮುಟ್ಟಿಸುವನು ನಂತರ ಹೆಣ್ಣಿನ ನಾಲಿಗೆಯಿಂದ ಮುಟ್ಟಿಸುತ್ತಾರೆ. ಹೀಗೆ ಮೂರು ಬಾರಿ ಮುಟ್ಟಿದ ಮೇಲೆ ಹುಡುಗ ಬುಮುಲವನ್ನು ಹುಡುಗಿಗೆ ಊಟ ಮಾಡಿಸುವರು,

ಮಧುಮಗಳು ಗಂಡಿಗೆ ಊಟ ಮಾಡಿಸುತ್ತಾರೆ. ಅವರು ಸಾಕಾಗುವಷ್ಟು ಬುಮುಲನ್ನು ತಿನ್ನಿಸುವರು. ಅಂದಿನಿಂದ ಗಂಡಿನ ಕುಲಕ್ಕೆ ವಧು ಸೇರುತ್ತಾಳೆ. ನಂತರ ಸೋದರ ಸಂಬಂಧಿಕರು ಬಂದು ತಿನ್ನುವರು. "ತಣಿಗೆ ಬುಮುಲುದ" ಆಚರಣೆಯನ್ನು ಮುಚ್ಚಲದ ಕುಲದವರು ಮಾಡಿದರೆ ಹೆಣ್ಣೀಗರು "ಹೋಳಿಗೆ ಬುಮುಲು"ವನ್ನು ಐವೊಳ್ಳೇರು ಹೆಣದ ಬುಮುಲುವನ್ನು ಆಚರಿಸುವರು. ಭೂಮದ ಕಾರ್ಯಕ್ರಮ ಆಗುವವರೆಗೂ ವಧು-ವರರು ಬಾಸಿಂಗವನ್ನು ಬಿಚ್ಚುವಂತಿಲ್ಲ. ಹೊರಗಡೆ ಬರುವಂತಿಲ್ಲ. ಈ ಬುಮುಲು ಕೊಡುವ ಉದ್ದೇಶವೆಂದರೆ ಹಾಲು-ತುಪ್ಪ ಒಂದಾದಂತೆ ಹೆಣ್ಣು-ಗಂಡು ಸೇರಿ ಒಂದೇ ಕುಲ ಸಂಬಂಧಿಯನ್ನು ಅನುಸರಿಸಲಿ ಎನ್ನುವುದಿರಬಹುದು.

ಬುಮುಲು ಕಾರ್ಯದ ನಂತರ ಹಂದರ ಕೆಳಭಾಗದಲ್ಲಿ ಕರಿ ಕಂಬಳಿಯ ಮೇಲೆ ಎರಡು ಕುರ್ಚಿಯನ್ನು ಹಾಕಿ ಕೂರಿಸುವರು. ಇಬ್ಬರು ಗಂಡು-ಹೆಣ್ಣಿಗೆ ಸಾಸವೆ ಹಾಕುವ ಕಾರ್ಯವನ್ನು ಮಾಡಿಸಿ. ಅವರ ಇಬ್ಬರ ಹೆಸರುಗಳನ್ನು ಅಕ್ಕಿಯನ್ನು ಇನ್ನೊಬ್ಬರ ಕೈಗೆ ಕೊಡುವುದರ ಮೂಲಕವಾಗಿ ಹೆಸರುಗಳನ್ನು ಹೇಳಿಸುತ್ತಾರೆ. ಕುರ್ಚಿಯನ್ನು ಬದಲಾವಣೆ ಮಾಡುವಂತಹ ಸಂದರ್ಭದಲ್ಲಿ ಮಾತಿನ ಸಂಭಾಷಣೆ ನಡೆಯುತ್ತದೆ.

ಗಂಡ- ನನ್ನ ಚದರಬಿಟ್ಟು ನಿನ್ನ

ಚದರಿಗೆ ಹೋಗು ಮಾಮಾ ॥

ಹೆಂಡತಿ- ನನ್ನ ಚದರ ಬಿಟ್ಟು ನಿನ್ನ ಚದರಿಗೆ ಹೋಗು ಎಂದು ಹೆಸರಿನಿಂದ ಕರೆಯುತ್ತಾನೆ. ಈ ರೀತಿಯಾಗಿ ಮೂರು ಬಾರಿ ಇಬ್ಬರಿಂದ ಹೇಳಿಸುತ್ತಾರೆ. ಬಂದಿರುವ ಸಂಬಂಧಿಕರು ಉಡುಗೊರೆಯನ್ನು ಹಣ ಅಥವಾ ವಸ್ತುವಿನ ರೂಪದಲ್ಲಿ ಮುಯ್ಯಿ ಹಿರಿಯ ಯಜಮಾನ ಮಾಡುತ್ತಾರೆ. ಅವುಗಳನ್ನು ಇಂಥವರು ಇಷ್ಟು ರೂಪಾಯಿಯನ್ನು ಮತ್ತು ವಸ್ತುವನ್ನು ಕೊಟ್ಟಿದ್ದಾರೆ ಎಂದು ತಿಳಿಸುತ್ತಾರೆ. ಅದನ್ನು ಪುಸ್ತಕದಲ್ಲಿ ದಾಖಲೆ ಮಾಡಿಟ್ಟುಕೊಳ್ಳುತ್ತಾರೆ.

೪.೫.೨೧ ನಾಗೋತ್ತಿಶಾಸ್ತ್ರ

ಮುಹೂರ್ತ ಮುಗಿದ ಸಂಜೆ ಸರಿಸುಮಾರು ೪ ಗಂಟೆ ವೇಳೆಗೆ. ಹಸಿರು ಹಂದರದಲ್ಲಿ ಎರಡು ಆಲ ಹಂದರದ ಕಂಬಕ್ಕೆ ತೊಟ್ಟಿಲು ಕಟ್ಟಿ ಅದರಲ್ಲಿ ಬೀಸುವ ಕಲ್ಲಿನ ಗೂಟ ಅಥವಾ ಒಂದು ಗೊಂಬೆ ಹಾಕಿ ತೊಟ್ಟಿಲು ಸಿದ್ಧಪಡಿಸುತ್ತಾರೆ. ಈ ಕಾರ್ಯ ಆರಂಭವಾಗುವುದಕ್ಕಿಂತ ಮುಂಚೆ ಗೋಧಿಹಿಟ್ಟು ಅಥವಾ ಜೋಳದ ಹಿಟ್ಟು, ಈರುಳ್ಳಿ, ಬೆಳ್ಳುಳ್ಳಿ, ಅರಿಶಿಣ ಎಲ್ಲವನ್ನು ಸೇರಿಸಿ "ಕೊಂತಿರೊಟ್ಟಿ"ಯನ್ನು ಸುಡುತ್ತಾರೆ. ಐದು ಸುರಿಗೆ ಮನೆಗಳಿಗೆ ನೀರು ತುಂಬಿ ಅದರ ಮೇಲೆ ಕೊಂತಿ ರೊಟ್ಟಿಯನ್ನು ಇಡುತ್ತಾರೆ. ಐವರು ಮುತ್ತೈದೆಯರು ಹಾಗೂ ಸಂಬಂಧಿಕರು ಭಾಗವಹಿಸುವರು, ಕಂಬದ ಸುತ್ತಲು ಕಂಬಳಿಯಿಂದ ತೆರೆ ಕಟ್ಟುವರು. ನಂತರ ಅನ್ನ, ಪಾಯಸ, ರೊಟ್ಟಿ, ಎಡೆ ಇಟ್ಟು ಅದಕ್ಕೆ ಪೂಜೆ ಮಾಡಿ ಕೊಬ್ಬರಿ, ಒಂದು ಎಡೆಯನ್ನು ಮದಲಗಿತ್ತಿಯ ಉಡಿ ತುಂಬುತ್ತಾರೆ.

ಕಂಬಕ್ಕೆ ಕಟ್ಟಿದ ತೊಟ್ಟಿಲಿನಲ್ಲಿ ಹಾಕಿದ ಮಗುವನ್ನು ನಾಟಕೀಯವಾಗಿ ತೂಗಿಸುತ್ತಾರೆ. ದೊಡ್ಡ ಗಂಗಳದಲ್ಲಿ ಅರಿಶಿಣ, ಕುಂಕುಮ, ನೀರುಹಾಕಿ, ಓಕಳಿಯನ್ನು ಸಿದ್ಧಪಡಿಸಿಕೊಳ್ಳುತ್ತಾರೆ. ಮದಲಿಂಗ, ಮದಲಗಿತ್ತಿ ತೊಟ್ಟಿಲು ತೂಗುತ್ತ ನಡೆಸುವ ಮಾತುಕತೆ.

ಇವನು– "ತಗೊಳ್ಳಿ ಪಿಳ್ಳೆ ಅಳುತ್ತೆ" ಅಂತ ಹೇಳ್ತಾನೆ

ಇವಳು– "ನೀನೇ ಎತ್ತಿಗೋ" ಅಂತ ಹೇಳ್ತಾಳೆ

"ಗೌಡರು ಕರೆತಾರೆ ಬದುಕಿಗೆ ಹೋಗಬೇಕು" ಅಂತಾನೆ

"ನನಗೂ ಬದುಕು ಐತಿ ನೀನೆ ಎತ್ತಿಕೋ" ಅಂತಳೆ

"ಚರ್ಮ ಹದಮಾಡ್ಬೇಕು ಗೂಸು ತಗೋ" ಅಂತಾನೆ

ಅವಳು "ಹೋಗೋ ಮಾರಾಯ ನನಗೆ ಬೇಕಾದಷ್ಟು ಕೆಲಸ ಐತಿ" ಅಂತಾಳೆ."[೩]

ಈ ರೀತಿಯಾಗಿ ಸಂಭಾಷಣೆ ಮುಗಿದ ನಂತರ ಹಂದರದ ಮೇಲಿನಿಂದ ಮಳೆ ಸ್ವರೂಪದಲ್ಲಿ ನಾಲ್ಕು ಬಿಂದಿಗೆ ನೀರನ್ನು ಎರಚುತ್ತಾರೆ. ಎಲ್ಲರು ಚೆಲ್ಲಾಪಿಲ್ಲಿಯಾಗಿ ಓಡಿ ಹೋಗುತ್ತಾರೆ. ಓಕುಲಿಯನ್ನು ನೆರೆದಿದ್ದ ನೆಂಟಸ್ಥರು ಹಾಗೂ ಸೊಸೆ, ಮಾವನಿಗೆ ಅತ್ತೆ ಅಳಿಯನಿಗೆ ಹೀಗೆ ಒಬ್ಬರಿಗೊಬ್ಬರು ಹಚ್ಚಿಕೊಂಡು ಸಂತೋಷವನ್ನು ವ್ಯಕ್ತಪಡಿಸುತ್ತಾರೆ. ಇದರ ಉದ್ದೇಶವೆಂದರೆ ಗಂಡನ ಮನೆಯಲ್ಲಿ ನಂದದೀಪವಾಗಿ ಇಡೀ ಸಂಸಾರವನ್ನು ನಡೆಸಲಿ ಹಾಗೂ ಬಲಿಷ್ಠ ಮಕ್ಕಳನ್ನು ಹೆರುವುದರ ಮೂಲಕ ಮಳೆಯಂತೆ ದಾರಿದೀಪವಾಗಲಿ ಎನ್ನುವಂತ ಉದ್ದೇಶಕ್ಕೆ ಈ ಆಚರಣೆಯನ್ನು ಮಾಡುತ್ತಾರೆ (ಮಾಹಿತಿಯನ್ನು ನೀಡಿದವರು ನೇರ್ಲಹಳ್ಳಿ ಕೊಲ್ಲಾರಪ್ಪ).

ಸಾಮಾಜಿಕ ಸಂಬಂಧವನ್ನು ವೃದ್ಧಿಸುವ ಪ್ರಮುಖ ಘಟಕವಾಗಿ ಸಮಾಜದಲ್ಲಿ ಕಾರ್ಯನಿರ್ವಹಿಸುವಂಥ ವ್ಯವಸ್ಥೆ ವಿವಾಹ ಶಿಕ್ಷಣವು ಸಾಮಾಜಿಕ ಬದಲಾವಣೆಯ ವೇಗವನ್ನು ಹೆಚ್ಚಿಸುವುದರ. ಜೊತೆಗೆ ಮಾದಿಗ ಸಮುದಾಯದ ಜನರ ಬದುಕಿನ ಜೀವನ ಕ್ರಮ ಬದಲಾವಣೆಯಾಗಿರುವುದರಿಂದ ನಾಗೋತ್ತಿ ಶಾಸ್ತ್ರದಂತಹ ಆಚರಣೆಗಳು ಬದಲಾವಣೆಯ ರೂಪವನ್ನು ಪಡೆದುಕೊಂಡಿವೆ.

೪.೫.೨೨ ಮೆರವಣಿಗೆ

ಸಂಜೆ ೬ ಅಥವಾ ೭ ಗಂಟೆಗೆ ವಧು-ವರರನ್ನು ಎತ್ತಿನ ಗಾಡಿಯಲ್ಲಿ ಕೂಡಿಸಿಕೊಂಡು ಅಥವಾ ನೆಲದ ಮೇಲೆ ನಡೆಸಿಕೊಂಡು ದೇವರಿಗೆ ಪೂಜೆ ಮಾಡಿಸಿ ಊರಿನ ಜನರಿಗೆ ಪರಿಚಯ ಮಾಡುವುದು ಮೆರವಣಿಗೆಯ ಉದ್ದೇಶವಾಗಿದೆ.

ಸುರಿಗೆ ನೀರು ಹಾಕಿ ಹೊಸ ಬಟ್ಟೆಯನ್ನು ಉಡಿಸಿಕೊಂಡು ತಂದೆ ತಾಯಿಯ ಪಾದಕ್ಕೆ ನಮಸ್ಕರಿಸಿ ಸಿಂಗರಿಸಿದ ಎತ್ತಿನ ಗಾಡಿಯಲ್ಲಿ ಅಥವಾ ನಡೆಸಿಕೊಂಡೇ "ತಮಟೆ ಅಥವಾ ಬ್ಯಾಂಡಿನ" ಮೂಲಕ

ಹೆಜ್ಜೆ ಹೆಜ್ಜೆಗೆ ಓಕುಳಿಯನ್ನು, ಒಂದು ನಿಂಬೆಹಣ್ಣು, ಈರುಳ್ಳಿಯನ್ನು ನೀವಾಳಿಸಿ ಎಸೆಯುತ್ತ ಕರೆದುಕೊಂಡು ದಿಬ್ಬಣವನ್ನು ಹೊರಡಿಸುತ್ತಾರೆ. ಬುಡ್ಡೆಕಲ್ಲಿಗೆ ನೀವಾಳಿಕಾಯಿ, ಹಾಕಿ ಒಂದಲೆಯನ್ನು ಗಂಡಿಗೆ ಹೆಣ್ಣಿಗೆ ಕೊಟ್ಟು ಅದರಲ್ಲಿ ಓಕುಳಿ ನೀರು ಹಾಕಿ ಕೈಮುಗಿಸಿ ಬಲಗಾಲು ಇರಿಸಿ ಬುಡ್ಡೆಕಲ್ಲು ದಾಟಿ ಹೋಗುವರು. ಪ್ರತಿಯೊಂದು ದೇವರಿಗೆ ಹಣ್ಣು ಕಾಯಿ ನೈವೇದ್ಯ ಮಾಡಿಸಿ ಕರೆದುಕೊಂಡು ಬರುತ್ತಾರೆ. ವಿಶೇಷವಾಗಿ ಹಿರಿಯರಿಗೆ ಮತ್ತು ಯುವಕರಿಗೆ ಮದ್ಯ ಕುಡಿಸಿ ಮೆರವಣಿಗೆಯಲ್ಲಿ ಕುಣಿಸುತ್ತಾರೆ.

೪.೫.೨೩ ಮರುಮದುವೆ (ಮಾಮನೆ) ಆಚರಣೆ

ಮೆರವಣಿಗೆ ಮುಗಿದ ಮೇಲೆ ಮನೆಯ ಹತ್ತಿರ ಬರುತ್ತಿರುವಾಗ ಹುಡುಗನ ಹೆಗಲ ಮೇಲೆ ಬಾರುಕೋಲು, ಆಕಾಡಿ ಕೊಳವೇ (ಬೀಜ ಬಿತ್ತುವ ಬಿದಿರ ಕಟ್ಟಿಗೆ) ಹಾಕುತ್ತಾರೆ. ಹುಡುಗಿಯ ಹೆಗಲಮೇಲೆ 'ಮಜ್ಜಿಗೆ ಕಡೆ' ಇಡುತ್ತಾರೆ. ಹೆಣ್ಣಿನ-ಗಂಡಿನ ಸೋದರಮಾವಂದಿರು ಹೆಗಲಮೇಲೆ ಹೊತ್ತುಕೊಂಡು ಎರಡು ಹೆಜ್ಜೆ ಬರುತ್ತಾರೆ. ಇಬ್ಬರು ನಟನೆಯ ಮೂಲಕ ಎತ್ತುಗಳ ರೂಪದಲ್ಲಿ ಪಾತ್ರವನ್ನು ನಿರ್ವಹಿಸುತ್ತಾರೆ. ಆಗ ಆಲದ ಕೊನೆ ಮಜ್ಜಿಗೆ ಸ್ವಾರೆ ಕಟ್ಟಿರುತ್ತಾರೆ. "ಹೋಗಿ ಮಜ್ಜಿಗೆ ಕಡೆ" ಎಂದು ಹೇಳುತ್ತಾರೆ. ಹಾಗೆ ಮಾಡುವಳು ಹಟ್ಟಿಯ ಹಿರಿಯ ಮಹಿಳೆಯರು ತಮಾಷೆಗಾಗಿ "ಏನಮ್ಮ ಬೆಣ್ಣೆ ಬಂತ ಅಂತ ಕೇಳ್ತಾರೆ" ಆಕೆ ಬಂದಿಲ್ಲ ಅಂತಾಳೆ ಹೀಗೆ ಮೂರು ಬಾರಿ ಹೇಳಿ ಕೊನೆಯಲ್ಲಿ ಬಂತು ಎನ್ನಬೇಕು. ಆನಂತರ ಆಕೆಯ ಕಾಲು ತೊಳಸಿ ಒಳಗೆ ಬರುವಾಗ ಬಾಗಿಲ ಹೊಸ್ತಿಲ ಬಳಿ ಬಂದು ಸೇರಿನಲ್ಲಿ ಅಕ್ಕಿ, ಕೊಬ್ಬರಿ ಹಾಗೂ ಬೆಲ್ಲವನ್ನು ಇಟ್ಟು ಅದನ್ನು ಬಲಗಾಲಿನಿಂದ ಹೊದಿಸುತ್ತಾರೆ. ಮನೆ ತುಂಬ ಮಕ್ಕಳನ್ನು, ಲಕ್ಷ್ಮಿಯನ್ನು ಹಾಗೂ ಆಹಾರ ಧಾನ್ಯವನ್ನು ತರುವಂತಳಾಗಬೇಕೆಂಬ ಎನ್ನವ ಉದ್ದೇಶದಿಂದ ಬಲಗಾಲಿನಿಂದ ಹೊದಿಸುತ್ತಾರೆ. ಒಳಗೆ ಕರ್‍ಕೊಂಡು ಹೋಗಿ ಅಡಕಲು (ಸಾಲು ಸ್ವಾರೆ) ಹತ್ತಿರ ಎನ್ನೈತಿ ಹುಡುಕು ಅಂತ ಅನ್ನುವರು ಆಕೆ ಹುಡುಕುವಂತೆ ನಟಿಸಿ ಅದರಲ್ಲಿ 'ಮುತ್ತು ರತ್ನವಿದೆ' ಅಂತ ಹೇಳ್ತಾಳೆ ವರನ ಮನೆಯಲ್ಲಿ ಮಾಡಿದ ರೀತಿಯಲ್ಲಿ ವಧುವಿನ ಮನೆಯಲ್ಲಿ ಸಹ ಮಾಡಿಸುತ್ತಾರೆ.

ಮರು ಮದುವೆ / ಮಾಮನೆ ಆಚರಣೆಯು ನಿಂತುಹೋಗಿದೆ. ಸಂದರ್ಭದಲ್ಲಿ ಗುರುತಿಸಿದಂತೆ ಜಾಗೃತಿ ಬಂದಿರುವುದರಿಂದ ಇಂತಹ ಆಚರಣೆಗಳಿಗೆ ಹೆಚ್ಚು ಹಣ ವ್ಯಯವಾಗುತ್ತದೆ, ಶಿಕ್ಷಣದ ಬೆಳವಣಿಗೆ, ಆಧುನೀಕರಣದ ಪ್ರಭಾವ ಮತ್ತು ಜಾಗತಿಕರಣ ಪ್ರಭಾವ ಇಂತಹ ಆಚರಣೆಗಳು ಮೇಲೆ ಪ್ರಭಾವ ಬೀರಿರುವುದನ್ನು ಕಾಣಬಹುದು.

೪.೫.೨೪ ಗಂಗಮ್ಮನ ಶಾಸ್ತ್ರ

ಗಂಗಮ್ಮನ ಶಾಸ್ತ್ರ ಮಾಡುವುದಕ್ಕಿಂತ ಮುಂಚೆ ಸತಿ-ಪತಿಯನ್ನು ಜೊತೆಗೆ ಬಿಡುವುದಿಲ್ಲ. ಗಂಡನ ಮನೆಗೆ ಹೋಗಬೇಕೆಂದರೆ ಗಂಗಮ್ಮನ ಶಾಸ್ತ್ರ ಮಾಡಿಕೊಂಡು ಹೋಗಬೇಕು. ಪುರುಷರು ಇದರಲ್ಲಿ ಭಾಗವಹಿಸುವಂತಿಲ್ಲ. ಐದು ಜನ ಮುತ್ತೈದೆಯರು, ಮದಲಗಿತ್ತಿಯನ್ನು ಸಿಂಗರಿಸಿ, ಮಣ್ಣಿನ ಕೊಡ ಮತ್ತು ನಾಲ್ಕು ಚೊಂಬುಗಳನ್ನು ತೆಗೆದುಕೊಂಡು ಹೋಗುತ್ತಾರೆ. ಪೂಜೆ ಮಾಡುವ ಸಮಯದಲ್ಲಿ

ಬಳಸುವಂತಹ ವಸ್ತುಗಳೆಂದರೆ ವೀಳ್ಯದೆಲೆ, ಅಡಿಕೆ, ಕುಂಕುಮ, ತೆಂಗಿನಕಾಯಿ, ನೆನೆಯಕ್ಕಿ, ತಮ್ಮಟ, ನೆನೆಗಡಲೆ, ಹಣ್ಣು ಅಗರಬತ್ತಿ, ಕರ್ಪೂರ ಹೊಳೆ ಅಥವಾ ಬಾವಿಯ ಹತ್ತಿರ ಹೋಗಿ ಮೂರು ಸಣ್ಣ ಕಲ್ಲುಗಳನ್ನು ತೆಗೆದುಕೊಂಡು ಬೆನಕನನ್ನು ಮಾಡುವರು. ಹಸಿ ಮಣ್ಣಿನಲ್ಲಿ ಚಿಕ್ಕ ಕಟ್ಟೆ ಮಾಡಿ ಬೆನಕನನ್ನು ಕೂರಿಸಿ ಹುಲ್ಲನ್ನು(ಗರಿಕೆ) ನೆಟ್ಟು ಅನ್ನ, ಪಾಯಸ, ನೆನೆಯಕ್ಕಿಯಿಂದ ಮಾಡಿದ ತಮುಟ, ಕರೆಎಳ್ಳು ಮತ್ತು ಬಿಳಿಎಳ್ಳಿನಿಂದ ಮಾಡಿದ ತಮುಟ ನೆನಗಡಲೆಯಿಂದ ಬಾಳೆ ಎಲೆಯ ಮೇಲೆ ಒಂದು ಎಲೆ ಅಡಿಕೆಯಲ್ಲಿ ಎಡೆಹಾಕಿ ಐದು ಜನ ಮುತ್ತೈದೆಯರಿಗೆ ಕಂಕಣ ಕಟ್ಟಿ ಮದಲಗಿತ್ತಿಗೆ ಕಂಕಣ ಕಟ್ಟಿ ಮದಲಗಿತ್ತಿಗೆ ಉಡಿ ತುಂಬುತ್ತಾರೆ. ನಂತರ ಎಡೆಗೆ ಪೂಜೆ ಮಾಡಿ ಇನ್ನೊಂದು ಎಡೆಯನ್ನು ಬಾವಿ ಅಥವಾ ಹೊಳೆಗೆ ಬಿಟ್ಟು ಬರುತ್ತಾರೆ. ತಾತ್ಕಾಲಿಕವಾಗಿ ಮಾಡಿದ ಬೆನಕನನ್ನು ಎರಡು ಕೈಯಿಂದ ಬಾಚಿ ಬಾವಿಗೆ ಬಿಡುವರು.

ಮದಲಗಿತ್ತಿಗೆ ನೀರು ತುಂಬಿದ ಕೊಡವನ್ನು ತಲೆಯ ಮೇಲೆ ಹೊರಿಸಿಕೊಂಡು ನಂತರ ಉಳಿದ ಚೊಂಬುಗಳನ್ನು ಉಳಿದ ಮಹಿಳೆಯರು ಹೊತ್ತುಕೊಂಡು ಮನೆಗೆ ಬರುತ್ತಾರೆ. ಮನೆಯ ಬಾಗಿಲ ಬಳಿಯಲ್ಲಿ ಮದಲಿಂಗನನ್ನು ನಿಲ್ಲಿಸುತ್ತಾರೆ. ಗಂಗೆಯನ್ನು ಹೊತ್ತು ಬಂದಿರುವ ಮದಲಗಿತ್ತಿಯನ್ನು ತಡೆದು. ಕೊಡದಲ್ಲಿ ಉಂಗುರ ಅಥವಾ ಒಂದು ರೂಪಾಯಿ ನಾಣ್ಯವನ್ನು ಹಾಕುವನು. ನಂತರ ಮದುವಣಗಿತ್ತಿ ಹೊತ್ತು ತಂದಿರುವ ಕೊಡವನ್ನು ಇರಿಸಿಕೊಳ್ಳುವ ಸಮಯದಲ್ಲಿ ನಡೆಯುವ ಸಂಭಾಷಣೆ

"ಯಾರ್‍ಯಾರು ಬಂದ್ರಿ" ಅಂತ ಹೇಳ್ತಾನೆ

ಆಗ "ನಾನು ಗಂಗಮ್ಮ ಬಂದೀವಿ" ಅಂತಾಳೆ

ಹೀಗೆ ಮೂರು ಬಾರಿ ಕೇಳುತ್ತಾನೆ ಇಲ್ಲಿಗೆ ಗಂಗಮ್ಮನ ಶಾಸ್ತ್ರ ಮುಗಿಯುತ್ತದೆ.

ಬದಲಾದ ಕಾಲಘಟ್ಟದಲ್ಲಿ ಮಾದಿಗ ಸಮುದಾಯದಲ್ಲಿ ಗಂಗಮ್ಮನ ಶಾಸ್ತ್ರಲ್ಲಿಯೂ ಬದಲಾವಣೆಯಾಗಿದೆ. ಹಿರಿಯ ಯಜಮಾನಿಯರು ಇಲ್ಲದ ಕಾರಣ ಇಂತಹ ಅಚರಣೆಗಳು ದೂರ ಸರಿಯುತ್ತಿವೆ.

೪.೫.೨೫ ಹಬ್ಬದ ಊಟ ಶಾಸ್ತ್ರ

ಹೆಣ್ಣಿನ ಕಡೆಯವರು ಅಳಿಯನಿಗೆ ವಿಶೇಷವಾದ ಊಟವನ್ನು ಸುಮಾರು ಹದಿನೈದು ಮತ್ತು ಹದಿನಾರು ದಿನದವರೆಗೆ ಮಾಡಿ ಬಡಿಸುವ ಆಚರಣೆಗೆ ಹಬ್ಬದ ಊಟ ಆಥವಾ ಅಳಿಯೂಟ ಎನ್ನುವರು. ಗಂಡು ಹೆಣ್ಣನ್ನು ಹಸಿ ಮೈ ಎನ್ನುವ ಕಾರಣಕ್ಕೆ ಹೊರಗಡೆ ಬಿಡುವುದಿಲ್ಲ ಗ್ರಹಗಳು, ಪೀಡೆ, ದೆವ್ವಗಳು ಬರುತ್ತವೆ ಎನ್ನುವ ಉದ್ದೇಶದಿಂದ ಯಾವಾಗಲೂ ನಿಂಬೆಹಣ್ಣನ್ನು ಕೈಗೆ ಕೊಟ್ಟಿರುತ್ತಾರೆ. ಪ್ರತಿದಿನ ಬೆಳಗಿನ ಜಾವ ಹುಡುಗ-ಹುಡುಗಿಗೆ ಸ್ನಾನ ಮಾಡಿಸಿ ಉಪಹಾರ ಮಧ್ಯಹ್ನದ ಮತ್ತು ರಾತ್ರಿ ಉಟವನ್ನು ಮಾಡಿಸುವ ಸಂಪ್ರದಾಯ ಬೆಳೆದುಕೊಂಡು ಬಂದಿದೆ. ಹದಿನಾರು ದಿನ ಮುಗಿದ

ನಂತರ ಗಂಜಿ ಬಟ್ಟೆಯನ್ನು ಹುಡುಗಿ ಮನೆಯಲ್ಲಿ ಬಿಡುತ್ತಾನೆ. ಸೋದರಮಾವ ಹಾಕಿದ ಚಪ್ಪಲಿಯನ್ನು ನೆಂಟಸ್ಥರಾಗುವವರಿಗೆ ಕೊಡುವ ಆಚರಣೆಯನ್ನು ರೂಢಿಸಿಕೊಂಡು ಬಂದಿದ್ದಾರೆ.

೪.೫.೨೬ ಮದುವೆ ಚಪ್ಪರ ತೆಗೆಯುವ ಶಾಸ್ತ್ರ

ಮದುವೆ ಮುಗಿದ ಐದು ಅಥವಾ ಒಂಬತ್ತು ದಿನದಲ್ಲಿ ನೆಂಟಸ್ಥರಾಗುವ ವ್ಯಕ್ತಿಯಿಂದ ಚಪ್ಪರದ ಮೇಲೆ ಇರುವ ತೆಂಗಿನ ಗರಿಯನ್ನು ತಿರುವಿ ಹಾಕುತ್ತಾರೆ. ಪೂರ್ಣ ಚಪ್ಪರವನ್ನು ಹದಿನಾರು ಅಥವಾ ಇಪ್ಪತ್ತೊಂದು ದಿನದಲ್ಲಿ ಬಲಭಾಗದಲ್ಲಿ ಇರುವ ಕಂಬಕ್ಕೆ ತೆಂಗಿನಕಾಯಿ ಗಂಧದ ಕಡ್ಡಿ ಹಚ್ಚಿ ಪೂಜೆ ಮಾಡಿ ಚಪ್ಪರವನ್ನು ತೆಗೆಯುತ್ತಾರೆ.

೪.೫.೨೭ ಶೋಭನ/ ಪ್ರಸ್ತ/ ಹೂವು ಮುಡಿಸುವ ಶಾಸ್ತ್ರ


ಶೋಭನ ಆಚರಣೆಯನ್ನು ಹೆಣ್ಣಿನ ಮನೆಯಲ್ಲಿ ನಡೆಸುತ್ತಾರೆ. ಶೋಭನ ದಿನವನ್ನು ಹೆಣ್ಣಿನ ಮನೆಯವರಿಗೆ ಸರಿಹೊಂದುವ, ಸಮಯಕ್ಕೆ ದಿನವನ್ನು ನಿಗದಿ ಮಾಡಿಕೊಂಡು ಗಂಡಿನ ಮನೆಯವರಿಗೆ ವಿಷಯ ಮುಟ್ಟಿಸುತ್ತಾರೆ. ಆಗ ಗಂಡಿನ ಅಣ್ಣ ತಮ್ಮಂದಿರು ಹಾಗೂ ಅವರ ಹೆಂಡತಿಯರು ಎರಡು ಕುಪ್ಪಸ ಎರಡು ಕೊಳದಾರ, ಹಣ್ಣು, ಕಾಯಿ, ಒಣಕೊಬ್ಬರಿ, ಬೆಲ್ಲ, ಉತ್ತತ್ತಿ, ಹೂವುಗಳನ್ನು ತೆಗೆದುಕೊಂಡು ಹೊರಡುತ್ತಾರೆ. ಅವರನ್ನು ನೀರು ಕೊಡುವುದರ ಮೂಲಕ ಬರಮಾಡಿಕೊಳ್ಳುತ್ತಾರೆ. ರಾತ್ರಿ ೮ ಗಂಟೆಗೆ ಎರಡು ಕುರ್ಚಿಗಳಲ್ಲಿ ಕೂರಿಸಿ ಮದಲಿಂಗ–ಮದಲಗಿತ್ತಿ ಮಾಡುತ್ತಾರೆ. ತಂದಿರುವ ಹಣ್ಣು–ಕಾಯಿಗಳನ್ನು ಉಡಿ ತುಂಬಿ ಸಾಸೆ ಇಟ್ಟು ಆರತಿ ಬೆಳಗಿ ಮದಲಗಿತ್ತಿಗೆ ಹೂವನ್ನು ಮುಡಿಸುತ್ತಾರೆ. ಈ ಕಾರ್ಯಕ್ರಮದಲ್ಲಿ ಬಹುತೇಕ ಹೆಣ್ಣು ಮಕ್ಕಳೇ ಭಾಗಿಯಾಗಿರುತ್ತಾರೆ. ರಾತ್ರಿ ೧೧ ಗಂಟೆಯ ಸುಮಾರಿಗೆ ಪ್ರತ್ಯೇಕ ಕೋಣೆಯಲ್ಲಿ ಬಿಡುತ್ತಾರೆ. ಸಂಪ್ರದಾಯದಂತೆ ಬೆಳಗಿನ ಜಾವ ಚಾಪೆ ತೆಗೆಯುವುದಕ್ಕೆ ಅತ್ತೆ ಬರುತ್ತಾಳೆ. ಆಗ ಅಳಿಯ ಬೆಳಗಿನ ಜಾವ ಹಾಸಿಗೆ ಕೆಳಗೆ ೧೦ ರಿಂದ ೫೦ ರೂಪಾಯಿಯನ್ನು ಇಟ್ಟು ಬರುತ್ತಾನೆ. ಆಗ ಅತ್ತೆ ಅದನ್ನು ತೆಗೆದುಕೊಳ್ಳುತ್ತಾಳೆ. ಇಲ್ಲಿಗೆ ಶೋಭನದ ಕಾರ್ಯ ಮುಗಿಯುತ್ತದೆ.

ಕೋಷ್ಟಕ: ೪.೧, ಸಮೀಕ್ಷೆಗೊಳಪಡಿಸಿದ ಚಿತ್ರದುರ್ಗ ಜಿಲ್ಲೆಯ ತಾಲೂಕುವಾರು ಮಾದಿಗ ಸಮುದಾಯದ ಲಿಂಗವಾರು ವೈವಾಹಿಕ ಸ್ಥಾನಮಾನ

ವೈವಾಹಿಕ ಸ್ಥಾನಮಾನಗಳು	ಲಿಂಗವಾರು ಜನಸಂಖ್ಯೆ		
	ಗಂಡು	ಹೆಣ್ಣು	ಒಟ್ಟು
ಅವಿವಾಹಿತ	೯೮೧	೨೨೧	೧೭೦೨
ವಿವಾಹಿತ	೮೦೨	೮೦೭	೧೬೦೯
ವಿಧುರ/ವಿಧವೆಯರು	೪೫	೧೫೮	೨೦೩
ಒಟ್ಟು	೧೮೨೮	೧೬೮೬	೩೫೧೪

ಕೋಷ್ಟಕ ಸಂಖ್ಯೆ ೪.೧ರಲ್ಲಿ ಸಮೀಕ್ಷೆಗೊಳಪಡಿಸಿದ ಚಿತ್ರದುರ್ಗ ಜಿಲ್ಲೆಯ ಮಾದಿಗ ಸಮುದಾಯದ ಲಿಂಗವಾರು ವೈವಾಹಿಕ ಸ್ಥಾನಮಾನ ಸಂಬಂಧಿಸಿದಂತೆ ಜಿಲ್ಲೆಯ ಆರು ತಾಲ್ಲೂಕುಗಳ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಅದರ ಅನ್ವಯ ಚಿತ್ರದುರ್ಗ ಜಿಲ್ಲೆಯಲ್ಲಿ ಆರು ತಾಲ್ಲೂಕುಗಳಿಂದ ಲಿಂಗವಾರು ವೈವಾಹಿಕ ಸ್ಥಾನಮಾನ. ಅವಿವಾಹಿತ ಎನ್ನುವುದರ ಹೆಣ್ಣು ಮತ್ತು ಗಂಡು ಒಟ್ಟು ಪ್ರಮಾಣ ೧೭೦೨ರಷ್ಟು, ಗಂಡು ಪ್ರಮಾಣ ೯೮೧ ರಷ್ಟು ಹೆಣ್ಣು ಪ್ರಮಾಣ ೭೨೧ ರಷ್ಟು ಕಂಡುಬರುವುದು. ವಿವಾಹಿತ ಹೆಣ್ಣು ಮತ್ತು ಗಂಡು ಒಟ್ಟು ಪ್ರಮಾಣ ೧೬೮೯ರಷ್ಟು, ಗಂಡು ಪ್ರಮಾಣ ಶೇಕಡ ೮೦೨ರಷ್ಟು, ಹೆಣ್ಣು ಪ್ರಮಾಣ ೮೦೭ರಷ್ಟು ಕಂಡುಬರುವುದು. ವಿಧುರ/ವಿಧವೆಯರು ಹೆಣ್ಣು ಮತ್ತು ಗಂಡು ಒಟ್ಟು ಪ್ರಮಾಣ ೨೦೩ರಷ್ಟು, ಗಂಡು ಪ್ರಮಾಣ ೪೫ರಷ್ಟು ಹೆಣ್ಣು ಪ್ರಮಾಣ ೧೫೮ರಷ್ಟು ಕಂಡುಬರುವುದು. ಈ ಕೋಷ್ಟಕದ ಒಟ್ಟಾರೆ ಅವಿವಾಹಿತರ ಪ್ರಮಾಣ ಹೆಚ್ಚಗಿರುವುದು ಕಂಡುಬರುತ್ತದೆ ಹಾಗೂ ಅವಿವಾಹಿತರ ಪ್ರಮಾಣ ಸ್ವಲ್ಪ ಮಟ್ಟಿಗೆ ವ್ಯತ್ಯಾಸ ಇರುವುದು ನೋಡಬಹುದು. ಜೊತೆಗೆ ವಿಧುರ/ ವಿಧವೆಯರ ಪ್ರಮಾಣದಲ್ಲಿ ಹೆಣ್ಣಿನ ಪ್ರಮಾಣವು ಹೆಚ್ಚನಾದಗಿ ಇರುವುದು ನೋಡಬಹುದು.

ವೃತ್ತಚಿತ್ರ: ೩.೧, ಚಿತ್ರದುರ್ಗ ಜಿಲ್ಲೆಯ ತಾಲೂಕುವಾರು ಮಾದಿಗ ಸಮುದಾಯದ ವೈವಾಹಿಕ ಸ್ಥಾನಮಾನಗಳ ಪ್ರಮಾಣ



ವೃತ್ತಚಿತ್ರ ಸಂಖ್ಯೆ ೪.೧ರಲ್ಲಿ ಸಮೀಕ್ಷೆಗೊಳಪಡಿಸಿದ ಚಿತ್ರದುರ್ಗ ಜಿಲ್ಲೆಯ ಮಾದಿಗ ಸಮುದಾಯದ ಲಿಂಗವಾರು ವೈವಾಹಿಕ ಸ್ಥಾನಮಾನ ಸಂಬಂಧಿಸಿದಂತೆ ಚಿತ್ರದುರ್ಗ ಜಿಲ್ಲೆಯ ಆರು ತಾಲ್ಲೂಕುಗಳ



ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಚಿತ್ರದುರ್ಗ ಲಿಂಗವಾರು ವೈವಾಹಿಕ ಸ್ಥಾನಮಾನ ಬಯಸುವ ವಿಧಾನ ಅವಿವಾಹಿತ ಎನ್ನುವುದರ ಪ್ರಮಾಣ ಶೇಕಡ ೪೮ರಷ್ಟು ಕಂಡುಬರುವುದು. ವಿವಾಹಿತ ಪ್ರಮಾಣ ಶೇಕಡ ೪೬ರಷ್ಟು ಕಂಡುಬರುವುದು. ಒಟ್ಟಾರೆ ವಿಧುರ/ವಿಧವೆಯರು ಪ್ರಮಾಣ ಶೇಕಡ ೬ರಷ್ಟು ಕಂಡುಬರುವುದು. ಈ ಕೋಷ್ಟಕದ ಒಟ್ಟಾರೆ ಅವಿವಾಹಿತರ ಪ್ರಮಾಣ ಹೆಚ್ಚಗಿರುವುದು ಕಂಡುಬರುತ್ತದೆ ಹಾಗೂ ಅವಿವಾಹಿತರ ಪ್ರಮಾಣ ಸ್ವಲ್ಪ ಮಟ್ಟಿಗೆ ವ್ಯತ್ಯಸ ಇರುವುದು ನೋಡಬಹುದು.

೪.೫.೨೮ ವಿವಾಹದಲ್ಲಿ ಬದಲಾವಣೆ

ಕೋಷ್ಟಕ: ೪.೨, ಚಿತ್ರದುರ್ಗ ಜಿಲ್ಲೆಯ ಮೊದಲ ತಲೆಮಾರಿನ, ಎರಡನೆಯ ತಲೆಮಾರಿನ, ಮೂರನೆಯ ತಲೆಮಾರಿನವರ ವಿವಾಹಕ್ಕೆ ಸಂಬಂಧಿಸಿದ ಮಾಹಿತಿ ಈ ಕೆಳಗಿನಂತಿವೆ.

ಕ್ರ.ಸಂ	ವಿವಾಹದ ಪ್ರಕಾರಗಳು	ವೃದ್ಧರು ೭೦+			ಮಧ್ಯವಯಸ್ಕರು			ಯುವಕರು		
೧		ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು
೨	ಸಂಪ್ರದಾಯಕವಾಗಿ	೨೯೫	೨೯೮	೫೯೩	೧೨೭	೧೬೩	೨೯೦	೫೭	೭೧	೧೨೮
೩	ಆಧುನಿಕವಾಗಿ	೦೫	೦೨	೦೭	೧೪೭	೧೨೩	೨೭೦	೨೧೨	೨೦೧	೪೧೩
೪	ನೋಂದಾಯಿತ ವಿವಾಹ	–	–	–	೧೮	೧೦	೨೮	೧೭	೧೫	೩೨
೫	ಅಂತರ್ಜಾತಿ ವಿವಾಹ	–	–	–	೧೦	೦೩	೧೩	೧೪	೧೩	೨೭
೬	ಒಟ್ಟು	೩೦೦	೩೦೦	೬೦೦	೩೦೦	೩೦೦	೬೦೦	೩೦೦	೩೦೦	೬೦೦

ಕೋಷ್ಟಕ ಸಂಖ್ಯೆ ೪.೨ರಲ್ಲಿ ವ್ಯಕ್ತವಾಗುವ ಅಂಶವೆಂದರೆ ಮೊದಲ ತಲೆಮಾರಿನವರು ವಿವಾಹ ಬಯಸುವ ವಿಧಾನಕ್ಕೆ ಸಂಬಂಧಿಸಿದಂತೆ ಚಿತ್ರದುರ್ಗ ಜಿಲ್ಲೆಯ ಆರು ತಾಲೂಕುಗಳಲ್ಲಿ ಬರುವ ಸಾಂಸ್ಕೃತಿಕವಾಗಿ ಶ್ರೀಮಂತಿಕೆ ಹೊಂದಿರುವ ಹಾಗೂ ಸಾಂಸ್ಕೃತಿಕವಾಗಿ ಭಿನ್ನವಾಗಿರುವ ಎರಡು ಗ್ರಾಮಗಳಲ್ಲಿ ಇಪ್ಪತ್ತೈದು ಪುರುಷರು ಮತ್ತು ಇಪ್ಪತ್ತೈದು ಮಹಿಳೆಯರನ್ನು ಆಯ್ಕೆ ಮಾಡಿಕೊಂಡು ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಅದರ ಅನ್ವಯ ಮೇಲಿನ ಮೊದಲ ತಲೆಮಾರಿನವರು ವಿವಾಹ ಬಯಸುವ ವಿಧಾನ ಸಾಂಪ್ರದಾಯಿಕವಾಗಿ ಎನ್ನುವುದರ ಪ್ರಮಾಣ ಪುರುಷರು ೨೯೫ರಷ್ಟು ಹಾಗೂ ಮಹಿಳೆಯರ ಪ್ರಮಾಣ ೨೯೮ರಷ್ಟು ಕಂಡುಬರುವುದು. ಮಾದಿಗ ಸಮುದಾಯದಲ್ಲಿ ಸಾಂಪ್ರದಾಯಿಕವಾಗಿ ವಿವಾಹಕ್ಕೆ ಹೆಚ್ಚಿನದಾ ಇತ್ತು ಎನ್ನುವುದು ಕಂಡುಬರುವುದು. ಆದರೆ ಆಧುನಿಕ ವಿವಾಹ, ನೋಂದಾಯಿತ ವಿವಾಹ ಮತ್ತು ಅಂತರ್ಜಾತಿ ವಿವಾಹ ಇವುಗಳು ಅವರ ಕಲ್ಪನೆಯಲ್ಲೇ ಇರಲಿಲ್ಲ ಎನ್ನುವಂಹ ಮಾಹಿತಿ ಕ್ಷೇತ್ರಕಾರ್ಯ ಸಮಯದಲ್ಲಿ ಕಂಡುಬಂದಿದೆ. ಒಟ್ಟಾರೆ ಆರು ತಾಲೂಕುಗಳಲ್ಲಿ ಸಾಂಪ್ರದಾಯಿಕ ವಿವಾಹಕ್ಕೆ ಹೆಚ್ಚು ಆದ್ಯತೆ ಇತ್ತೆಂದು ಮೊದಲ ತಲೆಮಾರಿನವರು ಹೇಳುವುದು ಕಂಡುಬರುವುದು.

ಹಾಗೆಯೇ ಎರಡನೇ ತಲೆಮಾರಿನವರು ವಿವಾಹ ಬಯಸುವ ವಿಧಾನಕ್ಕೆ ಸಂಬಂಧಿಸಿದಂತೆ ಚಿತ್ರದುರ್ಗ ಜಿಲ್ಲೆಯ ಆರು ತಾಲೂಕುಗಳಲ್ಲಿ ಬರುವ ಸಾಂಸ್ಕೃತಿಕವಾಗಿ ಶ್ರೀಮಂತಿಕೆ ಹೊಂದಿರುವ ಹಾಗೂ ಸಂಸ್ಕೃತಿಕವಾಗಿ ಭಿನ್ನವಾಗಿರುವ ಎರಡು ಗ್ರಾಮಗಳಲ್ಲಿನ ಇಪ್ಪತ್ತೈದು ಪುರುಷರು ಮತ್ತು ಇಪ್ಪತ್ತೈದು ಮಹಿಳೆಯರನ್ನು ಆಯ್ಕೆ ಮಾಡಿಕೊಂಡು ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಅದರ ಅನ್ವಯ ಮೇಲಿನ ಎರಡನೇ ತಲೆಮಾರಿನವರು ವಿವಾಹ ಬಯಸುವ ವಿಧಾನ ಸಾಂಪ್ರದಾಯಿಕವಾಗಿ ಎನ್ನುವುದರ ಪ್ರಮಾಣ ಪುರುಷರು ೧೨೦ರಷ್ಟು ಹಾಗೂ ಮಹಿಳೆಯರ ಪ್ರಮಾಣ ೧೬೩ರಷ್ಟು ಕಂಡುಬಂದಿದ್ದಾರೆ. ಆಧುನಿಕ ವಿವಾಹ ವಿಧಾನ ಬಯಸುವರು ಪುರುಷರು ೧೪೦ರಷ್ಟು, ಮಹಿಳೆಯರು ೧೨೩ರಷ್ಟು, ನೋಂದಾಯಿತ ವಿವಾಹ ಬಯಸುವವ ಪುರುಷರು ೧೮ರಷ್ಟು, ಮಹಿಳೆಯರು ೧೦ರಷ್ಟು ಅಂತರ್ಜಾತಿ ವಿವಾಹ ಬಯಸುವ ಪುರುಷರು ೧೦ರಷ್ಟು, ಮಹಿಳೆಯರು ೦೩ರಷ್ಟು ಕಂಡು ಬಂದಿದ್ದಾರೆ. ಮಾದಿಗ ಸಮುದಾಯದಲ್ಲಿ ಎರಡನೇ ತಲೆಮಾರಿನವರು ವಿವಾಹ ಬಯಸುವ ವಿಧಾನಕ್ಕೆ ಸಂಬಂಧಿಸಿದಂತೆ ಸಾಂಪ್ರದಾಯಿಕವಾಗಿ ವಿವಾಹಕ್ಕೆ ಮತ್ತು ಆಧುನಿಕ ವಿವಾಹ ಎರಡಕ್ಕೂ ಹೆಚ್ಚಿನದಾ ಇತ್ತು ಎನ್ನುವುದು ಕಂಡುಬರುವುದು. ಆದರೆ, ನೋಂದಾಯಿತ ವಿವಾಹ ಮತ್ತು ಅಂತರ್ಜಾತಿ ವಿವಾಹ ಅಲ್ಪ ಪ್ರಮಾಣದಲ್ಲಿ ಕೆಲವರು ಆಗಿರುತ್ತಾರೆ. ನೋಂದಾಯಿತ ವಿವಾಹ ಮಾಡಿಕೊಂಡರೆ ಕಾರಣ ಸರ್ಕಾರದ ಸೌಲಭ್ಯಗಳು ಸಿಗುತ್ತವೆ ಎನ್ನುವ ಕಾರಣಕ್ಕೆ ಇಂತಹ ವಿವಾಹವನ್ನು ಅಗುತ್ತಾರೆ. ಅಂತರ್ಜಾತಿ ವಿವಾಹ ಪೂರ್ವಪರಿಕಲ್ಪನೆ ಇಲ್ಲದೆಯಾಗಿರುವುದಾಗಿ, ಹೇಳಿದಂಥ ಮಾಹಿತಿಯನ್ನು ಕ್ಷೇತ್ರಕಾರ್ಯ ಸಮಯದಲ್ಲಿ ನೀಡಿದ್ದಾರೆ. ಒಟ್ಟಾರೆ ಆರು ತಾಲೂಕುಗಳಲ್ಲಿ ಸಾಂಪ್ರದಾಯಿಕ ಮತ್ತು ಆಧುನಿಕ ವಿವಾಹಕ್ಕೆ ಹೆಚ್ಚು ಆದ್ಯತೆ ಇತ್ತೆಂದು ಎರಡನೆ ತಲೆಮಾರಿನವರು ಹೇಳುವುದು ಕಂಡುಬಂದಿದೆ.

ಮೂರನೇ ತಲೆಮಾರಿನವರು ವಿವಾಹ ಬಯಸುವ ವಿಧಾನಕ್ಕೆ ಸಂಬಂಧಿಸಿದಂತೆ ಚಿತ್ರದುರ್ಗ ಜಿಲ್ಲೆಯ ಆರು ತಾಲೂಕುಗಳಲ್ಲಿ ಬರುವ ಸಾಂಸ್ಕೃತಿಕವಾಗಿ ಶ್ರೀಮಂತಿಕೆ ಹೊಂದಿರುವ ಹಾಗೂ ಸಂಸ್ಕೃತಿಕವಾಗಿ ಭಿನ್ನವಾಗಿರುವ ಎರಡು ಗ್ರಾಮಗಳಲ್ಲಿನ ಇಪ್ಪತ್ತೈದು ಪುರುಷರು ಮತ್ತು ಇಪ್ಪತ್ತೈದು ಮಹಿಳೆಯರನ್ನು ಆಯ್ಕೆ ಮಾಡಿಕೊಂಡು ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಅದರ ಅನ್ವಯ ಮೂರನೇ ತಲೆಮಾರಿನವರು ವಿವಾಹ ಬಯಸುವ ವಿಧಾನ ಸಾಂಪ್ರದಾಯಿಕವಾಗಿ ಎನ್ನುವ ಪುರುಷರ ಪ್ರಮಾಣ ೫೦ರಷ್ಟು ಹಾಗೂ ಮಹಿಳೆಯರ ಪ್ರಮಾಣ ೭೧ರಷ್ಟು ಕಂಡುಬರುವುದು. ಆಧುನಿಕ ವಿವಾಹ ವಿಧಾನ ಬಯಸುವ ಪುರುಷರು ೨೧೨ರಷ್ಟು, ಮಹಿಳೆಯರು ೨೦೧ರಷ್ಟು, ನೋಂದಾಯಿತ ವಿವಾಹ ಬಯಸುವ ಪುರುಷರು ೧೭ರಷ್ಟು, ಮಹಿಳೆಯರು ೧೫ರಷ್ಟು, ಅಂತರ್ಜಾತಿ ವಿವಾಹ ಬಯಸುವ ಪುರುಷರು ೧೪ರಷ್ಟು, ಮಹಿಳೆಯರು ೧೩ರಷ್ಟು ಕಂಡುಬಂದಿದ್ದಾರೆ. ಮಾದಿಗ ಸಮುದಾಯದಲ್ಲಿ ಮೂರನೇ ತಲೆಮಾರಿನವರು ಸಾಂಪ್ರದಾಯಿಕ ವಿವಾಹಕ್ಕೆ ಹೆಚ್ಚು ಆದ್ಯತೆಕೊಡುತ್ತಿಲ್ಲ ಕಾರಣ ಆಧುನಿಕರಣ ಆದರೆ, ನೋಂದಾಯಿತ ವಿವಾಹ ಮತ್ತು ಅಂತರ್ಜಾತಿ ವಿವಾಹಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಆಗಿರುತ್ತಾರೆ. ಮೊದಲನೆಯ, ಎರಡನೆಯ ತಲೆಮಾರಿಗೆ ಹೋಲಿಕೆ ಮಾಡಿದ್ದರೆ, ಸಾಕಷ್ಟು ಬದಲಾವಣೆಯಾಗಿವೆ ಎಂಬ ಮಾಹಿತಿ ಕ್ಷೇತ್ರಕಾರ್ಯದಲ್ಲಿ ಕಂಡುಬಂದಿದೆ.

ಮಾದಿಗ ಸಮುದಾಯದಲ್ಲಿ ವಿವಾಹವು ಹಿಂದೆ ಅತ್ಯಂತ ವೈಭವದ ಆಚರಣೆಯಾಗಿ ಕಂಡುಬರುತ್ತಿತ್ತು. ಸುಮಾರು ೮ರಿಂದ ೧೦ ದಿನಗಳ ಕಾಲದವರೆಗೆ ವಿವಾಹವು ನಡೆಯುತ್ತಿತ್ತು. ಇದರಲ್ಲಿ ಎಲ್ಲರು ಸಕ್ರಿಯವಾಗಿ ರಕ್ತ ಸಂಬಂಧಿಗಳು ಕೇರಿಯ ಎಲ್ಲ ಹಿರಿಯರು ಮಹಿಳೆಯರು ಭಾಗಿಯಾಗುತ್ತಿದ್ದರು. ಎಲ್ಲ ಕಾರ್ಯಗಳನ್ನು ವ್ಯವಸ್ಥಿತವಾಗಿ ನಡೆಸಿಕೊಂಡು ಹೋಗುತ್ತಿದ್ದರು. ಮಾತು ಹೆಣ್ಣಿನ ಆಯ್ಕೆಯಲ್ಲಿ ಅಂತಿಮವಾಗಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ವಿವಾಹವೆಂಬುದು ಒಂದು ಪವಿತ್ರ ಬಂಧವಾಗಿ ಉಳಿದಿಲ್ಲ. ಹಿರಿಯರೇ ಸಂಗಾತಿಗಳ ಆಯ್ಕೆಯಲ್ಲಿ ಮುಂದಾದರೂ ಕೂಡ ಹುಡುಗ-ಹುಡುಗಿಯನ್ನು ಕೇಳದೇ ನಿರ್ಣಯ ತೆಗೆದುಕೊಳ್ಳುವಂತಿಲ್ಲ.

ವರ ಹಾಗೂ ಕನ್ಯೆಯ ಶಿಕ್ಷಣ, ಉದ್ಯೋಗ, ಸೌಂದರ್ಯ ಮುಂತಾದವುಗಳ ಅಯ್ಕೆಯಲ್ಲಿ ಇಂದು ಹುಡುಗ-ಹುಡುಗಿಗೆ ಸ್ವಾತಂತ್ರ್ಯವಿದೆ. ಹಿಂದಿನಂತೆ ಎರಡು ಮೂರು ದಿನಗಳ ಸಮಾರಂಭವಾಗಿ ಉಳಿದಿಲ್ಲ. ಹಾಗೆಯೇ ವಿವಾಹದಲ್ಲಿ ಜರುಗುತ್ತಿದ್ದ ಅನೇಕ ಸಂಸ್ಕಾರಗಳ ಸಂಖ್ಯೆಯೂ ಇಂದು ಕಡಿಮೆಯಾಗುತ್ತಿದೆ. ಹಾಗೆಯೇ ಮುಂಚೆ ಮೇಲಿಂದ ಮೇಲೆ ಜರುಗುತ್ತಿದ್ದ ಬಾಲ್ಯ ವಿವಾಹಗಳ ಸಂಖ್ಯೆ ಇಂದು ತುಂಬಾ ಕಡಿಮೆಯಾಗಿದೆ. ಹಿಂದೆ ಸತಿ-ಪತ್ನಿಯರು ಯಾವುದೇ ಸಮಸ್ಯೆ ಬಂದರೂ ಜೀವನವನ್ನು ನಡೆಸುತ್ತಿದ್ದರು. ಆದರೆ ಇಂದು ಕಾನೂನಿನ ಮೂಲಕ ವಿವಾಹ ವಿಚ್ಛೇದನವನ್ನು ಪಡೆದುಕೊಂಡು ಬೇರೆ ಬೇರೆಯಾಗಿ ವಾಸಿಸುವಂಥ ಪರಿಸರವನ್ನು ನೋಡಬಹುದು. ಇವತ್ತು ಅಂತರ್ಜಾತಿಯ ವಿವಾಹಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತಿರುವುದವನ್ನು ಗಮನಿಸಬಹುದು.

೪.೬ ಸೀಮಂತ ಕಾರ್ಯ

ಸಮೃದ್ಧಿಯ ಸಂಕೇತ ಹಸಿರು. ಅದೇ ತರಹ ಹೆಣ್ಣು ಗಂಡಿನ ಸಂಗಮವೇ ಫಲವಂತಿಗೆಯ ಸಂಕೇತ. ವಿವಾಹವಾಗಿ ಪ್ರಸ್ತ ಮುಗಿದ ನಂತರ ಗಂಡ-ಹೆಂಡತಿಯರನ್ನು ಸಮಾಗಮಕ್ಕೆ ಬಿಡುತ್ತಾರೆ. ಆಗ ಸಂತಾನೋತ್ಪತ್ತಿಯ ಕಾರ್ಯ ಶುರುವಾಗುತ್ತದೆ. ಮೂರರಿಂದ ನಾಲ್ಕು ತಿಂಗಳಿನಲ್ಲಿ ದಾರಿ ಬುತ್ತಿಯನ್ನು ನೀಡಲಾಗುತ್ತದೆ. ಇದನ್ನು ಕಳ್ಳಬುತ್ತಿ ಎಂತಲೂ ಕರೆಯುತ್ತಾರೆ. ಈ ಸಂದರ್ಭದಲ್ಲಿ ಹೊಳೆ ಮತ್ತು ಹಳ್ಳವನ್ನು ದಾಟುವುದಕ್ಕೆ ಬಿಡುವುದಿಲ್ಲ. ಗರ್ಭಿಣಿಯಾದಾಗ ಐದು ಅಥವಾ ಏಳನೆ ತಿಂಗಳಲ್ಲಿ ಈ ಕಾರ್ಯವನ್ನು ಮಾಡುತ್ತಾರೆ. ಈ ಕಾರ್ಯವನ್ನು ಹೆಣ್ಣಿನ ಮನೆಯಲ್ಲಿ ನಡೆಸುತ್ತಾರೆ. ಜೋಯಿಸರ ಹತ್ತಿರ ಒಳ್ಳೆಯ ದಿನವನ್ನು ನಿಗದಿಪಡಿಸಿದ ಮೇಲೆ ಗಂಡನ ಮನೆಯವರಿಗೆ ತಿಳಿಸುತ್ತಾರೆ. ಈ ಸಂಧರ್ಭದಲ್ಲಿ ಬರುವ ಎಲ್ಲ ಖರ್ಚುವೆಚ್ಚಗಳನ್ನು ಹೆಣ್ಣಿನ ಮನೆಯವರೇ ಭರಿಸಬೇಕಾಗುತ್ತದೆ. ತ್ವರುಮನೆಯವರು ಮಗಳಿಗೆ ಮತ್ತು ಅಳಿಯನಿಗೆ ಹೊಸ ಬಟ್ಟೆಯನ್ನು ತರುತ್ತಾರೆ.

ಹುಡುಗನ ಸಂಬಂಧಿಕರು ಹಾಗೂ ಹೆಣ್ಣಿನ ಕಡೆಯವರು ಅನೇಕ ಬಸಿರು ಬಯಕೆ ತೀರಿಸುವ ಸಲುವಾಗಿ ತಿನಿಸುಗಳನ್ನು ತೆಗೆದುಕೊಂಡು ಬರುತ್ತಾರೆ. ಸೀಮಂತ ಕಾರ್ಯ ಮಾಡುವ ದಿವಸ ಕುರ್ಚಿಯ ಮೇಲೆ ಗರ್ಭಿಣಿಯನ್ನು ಕೂರಿಸಿ ತವರುಮನೆಯವರು ತಂದಿರುವ ಸೀರೆ ಹೂವು, ಹಣ್ಣುಗಳನ್ನು ಉಡಿತುಂಬಿ ಆರತಿ ಬೆಳಗುತ್ತಾರೆ. ಸ್ವಲ್ಪ ಅನುಕೂಲಸ್ಥರಾಗಿದ್ದರೆ ಮಗಳಿಗೆ ಮತ್ತು

ಅಳಿಯನಿಗೆ ಬಂಗಾರ ತರುತ್ತಾರೆ. ಕಾರಣ ತಾತ-ಅಜ್ಜಿಯಾಗುವ ಖುಷಿಗೆ ಬಂಗಾರವನ್ನು ನೀಡುವುದು ಕಂಡುಬರುತ್ತದೆ. ಈ ಕಾರ್ಯದ ದಿನ ಬಂದಿರುವ ಎಲ್ಲ ಸಂಬಂಧಿಕರಿಗೆ ಸಿಹಿ ಊಟವನ್ನು ಮಾಡಿಸುತ್ತಾರೆ. ಕೂರಿಸಿದ ಸಮಯದಲ್ಲಿ ಕೇರಿಯ ಮಹಿಳೆಯರು ಸೋಬಾನ ಹಾಡುಗಳನ್ನು ಹಾಡುತ್ತಾರೆ.

ಚೊಚ್ಚಲ ಹೆರಿಗೆಯನ್ನು ತ್ವರು ಮನೆಯಲ್ಲಿ ಮಾಡುತ್ತಾರೆ. ಆಗ ಗರ್ಭಿಣಿ ಹೆಣ್ಣು ಮಗಳ ಸ್ಥಿತಿಗತಿಯನ್ನು ನೋಡಿಕೊಳ್ಳುವಂತಥ ಜವಾಬ್ದಾರಿ ಇರುತ್ತದೆ. ಪ್ರತಿ ತಿಂಗಳು ಪರೀಕ್ಷೆಗಾಗಿ ಆಸ್ಪತ್ರೆಗೆ ಕಳುಹಿಸುತ್ತಾರೆ, ಅವಳಿಗೆ ಇಷ್ಟ ಪಡುವ ತಿಂಡಿ ತಿನಿಸುಗಳನ್ನು ಕೊಡುತ್ತಾರೆ. ಹೆರಿಗೆಯಾಗುವರೆಗೆ ದಿನಾಲು ಸ್ನಾನ ಮಾಡಿಸುವುದರ ಜೊತೆಗೆ ಸ್ವಚ್ಛತೆಯನ್ನು ಕಾಪಾಡಿಕೊಳ್ಳಬೇಕು. ಒಂಬತ್ತು ತಿಂಗಳು ತುಂಬಿದ ನಂತರ ಆಸ್ಪತ್ರೆಯಲ್ಲಿ ಹೆರಿಗೆಯಾದರೆ ಅಲ್ಲೇ ಹೆರಿಗೆಯನ್ನು ಮಾಡಿಸುತ್ತಾರೆ. ಇಲ್ಲವೆಂದದರೆ ಸೂಲಗಿತ್ತಿಯರು ಹೆರಿಗೆಯನ್ನು ಮಾಡಿಸುತ್ತಾರೆ.

ಸೀಮಂತ ಕಾರ್ಯದಲ್ಲಿ ಅನೇಕ ಬದಲಾವಣೆಗಳು ಕಂಡುಬಂದಿವೆ. ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿ ಕಡಿಮೆಯಾಗುತ್ತಿದೆ ಎಂದು ಹೇಳಬಹುದು. ಸೀಮಂತ ಕಾರ್ಯವನ್ನು ಪ್ರಸ್ತುತ ದಿನಮಾನದಲ್ಲಿ ಕೇವಲ ಶ್ರೀಮಂತರು ಮಾತ್ರ ಮಾಡುತ್ತಾರೆ.

೪.೭ ಶವ ಸಂಸ್ಕಾರ

ಮಾನವ ಹುಟ್ಟು ಎಷ್ಟು ನಿಜವೋ ಸಾವು ಅಷ್ಟೇ ಖಚಿತ. ಆದ್ದರಿಂದ ಪ್ರತಿಯೊಬ್ಬರು ಹುಟ್ಟಿದ ಮೇಲೆ ಸಾಯಲೇಬೇಕು. ಸತ್ತ ನಂತರ ಸಮುದಾಯದ ನಂಬಿಕೆಯಂತೆ ಅನೇಕ ಸಂಸ್ಕಾರಗಳಿಗೆ ಒಳಪಡುತ್ತಾರೆ. ಸತ್ತ ಸಂದರ್ಭದಲ್ಲಿ ಪ್ರಾದೇಶಿಕವಾಗಿ ಪ್ರತಿಯೊಂದು ಪ್ರದೇಶದಲ್ಲಿ ಭಿನ್ನತೆ ಇದ್ದರೂ ಅದು ಸೂತಕದ ಮನೆಯಾಗಿರುತ್ತದೆ. ಅವರ ಸಂಪ್ರದಾಯದಂತೆ ಕಾರ್ಯ ವಿಧಾನವನ್ನು ನಡೆಸಿಕೊಂಡು ತಮ್ಮ ಮೂಲ ಪರಂಪರೆಯನ್ನು ಮುಂದುವರಿಸಿಕೊಂಡು ಬಂದಿದ್ದಾರೆ.

ಮಾದಿಗರಲ್ಲಿ ಶವ ಸಂಸ್ಕಾರ ಪದ್ಧತಿಯೂ ವಿಶಿಷ್ಟ ರೀತಿಯಲ್ಲಿದೆ. ಸತ್ತ ಶವವನ್ನು ಉಗುರು ಬೆಚ್ಚಗಿನ ನೀರಿನಲ್ಲಿ ಸ್ನಾನ ಮಾಡಿಸಿ, ಬಿಳಿ ಬಟ್ಟೆಯನ್ನು ತೊಡಿಸುತ್ತಾರೆ. ದಕ್ಷಿಣಾಭಿಮುಖವಾಗಿ ತಲೆ ಇಡಿಸಿ ಮಲಗಿಸುತ್ತಾರೆ. ಎರಡು ಕಾಲುಗಳನ್ನು ಜೋಡಿಸಿ ಎರಡು ಹೆಬ್ಬೆರಳನ್ನು ಸೇರಿಸಿ ಹಳೆ ಬಟ್ಟೆಯ ತುಂಡಿನಿಂದ ಬಿಗಿಯಾಗಿ ಕಟ್ಟಿ ಶವದ ಮೇಲೆ ಬಿಳಿಯ ಬಟ್ಟೆಯನ್ನು ಹಾಕುತ್ತಾರೆ. ಶವದ ಬಳಿ ಹಣತೆ ಹಾಗೂ ತೆಂಗಿನಕಾಯಿ ಇಟ್ಟು ಕೇರಿಯ ಯಜಮಾನರಿಗೆ ವಿಷಯವನ್ನು ತಿಳಿಸುತ್ತಾರೆ. ಮನೆಯ ಮುಂದೆ ದನದ ಕುಳುನ್ನು ಬೆಂಕಿ ಹಾಕುವರು, ಮನೆಯ ಮುಂದೆ ಬೆಂಕಿ ಹಾಕಿದ್ದರೆ ಎಂದರೆ ಸಾವು ಸಂಭವಿಸಿದೆ ಎಂಬ ಸಂಕೇತವಾಗಿ ಬಳಸುತ್ತಾರೆ. ವ್ಯಕ್ತಿ ಸತ್ತಿರುವ ಸುದ್ದಿ ಮುಟ್ಟಿಸಲು ಹೋಗಿರುವಂಥ ವ್ಯಕ್ತಿಗಳು ಊರಿನ ಆಚೆ ನಿಂತುಕೊಂಡು ಈ ನಿಧನದ ವಿಷಯವನ್ನು ತಿಳಿಸುತ್ತಾರೆ. ಆಗ ಅವರು ಊಟ ಹತ್ತು ರೂಪಾಯಿ ದುಡ್ಡು, ಜೋಳ ಅಥವಾ ರಾಗಿಯನ್ನು ಕೊಟ್ಟು ಕಳುಹಿಸುತ್ತಾರೆ.

ಕೇರಿಯ ಯಜಮಾನರು ಸತ್ತಿರುವ ಮನೆಯ ಸಂಬಂಧಿಕರನ್ನು ಕೇಳಿ 'ಸಿದಿಗೆ'(ಚಟ್ಟ)ಯನ್ನು ಕಟ್ಟಲು ಪ್ರಾರಂಭಿಸುತ್ತಾರೆ. ದನದ ಕುರುಳಿನ ಮೇಲೆ 'ಹಿಂಡೆಕೊಳು' ಮಗ್ಗಿಯಲ್ಲಿ ಬೇಯಿಸುತ್ತಾರೆ.

ಕೇರಿಯ ಹಿರಿಯರು ನಾಲ್ಕು ಜನರನ್ನು ಗುಂಡಿ ತೆಗೆಯಲು ಮೊದಲೇ ಕಳುಹಿಸುತ್ತಾರೆ. ಅವರು ಕಾಲಿನಿಂದ ಏಳು ಹೆಜ್ಜೆಗಳನ್ನು ಅಳತೆ ಮಾಡಿಕೊಂಡು ಮೂರು ಅಡಿ ಅಗಲ, ಆರು ಅಡಿ ಉದ್ದ ಅಳೆದು ಗುಂಡಿಯನ್ನು ದಕ್ಷಿಣೋತ್ತರವಾಗಿ ತೊಡುತ್ತಾರೆ. ಅನಂತರ ಕಳ್ಳಿ ಗಿಡದ ಕೊಂಬೆ ಅಥವಾ ಬಿದಿರಿನ ಕಟ್ಟಿಗೆಯಿಂದ ಹಾಗೂ ತೆಂಗಿನ ಗರಿಯಿಂದ ಹೆಣೆದು ಸಿದಿಗೆಯನ್ನು ತಯಾರು ಮಾಡುತ್ತಾರೆ. ಹೆಣದ ಬಾಯಿಗೆ ಎಲೆ, ಅಡಿಕೆಯನ್ನು ಕುಟ್ಟಿ ಪುಡಿ ಮಾಡಿ ಹಾಕುವರು. ಕಣ್ಣುಗಳಿಗೆ ಅರಿಶಿಣದ ಪುಡಿಯನ್ನೋ, ಅಕ್ಕಿಯ ಕಾಳನ್ನೋ ಹಾಕಿ ಹಿರಿಯರು ತಂದಿರುವ ಹೂವುಗಳಿಂದ ಅಲಂಕರಿಸಿ ಸಿದಿಗೆಯ ಮೇಲೆ ಮಲಗಿಸುವರು.

ಸಿದಿಗೆಗೆ ಗಂಡಸತ್ತರೆ ಹೆಂಡತಿಯಿಂದ ಹೆಂಡತಿ ಸತ್ತರೇ ಗಂಡನಿಂದ ಪಾದಕ್ಕೆ ವಿಭೂತಿ, ಕುಂಕುಮ, ತೆಂಗಿನಕಾಯಿ ಒಡೆದು ಪೂಜಿಸಿ, ಬಂದಿರುವ ಸಂಬಂಧಿಕರು ಕೊಳಹಾರ, ಅಗರಬತ್ತಿಯನ್ನು ಹಚ್ಚಿ ಪೂಜೆ ಮಾಡುತ್ತಾರೆ. ನಂತರ ಮೊದಲು ಮಕ್ಕಳು ಹಾಗೂ ಮೊಮ್ಮಕ್ಕಳು ಹೆಣವನ್ನು ಹೆಗಲ ಮೇಲೆ ಹೊರಬೇಕು. ನಂತರ ಹಿತೈಷಿಗಳು ಹೆಗಲ ಮೇಲೆ ಹೊತ್ತುಕೊಳ್ಳುತ್ತಾರೆ. ಶವದ ಮುಂದೆ "ಹಿಂಡೆ ಕೊಳು" ಹಿಡಿದು ಹೋಗುವರು. ದಾರಿಯುದ್ದಕ್ಕೂ ಮಂಡಕ್ಕಿಯೊಂದಿಗೆ ಎಲೆ ಅಡಿಕೆ ಹಾಗೂ ಚಿಲ್ಲರೆ ಕಾಸನ್ನು ಮಿಶ್ರಣ ಮಾಡಿ ಹೆಣದ ಮೇಲೆ ಹಿರಿಯ ಯಜಮಾನ ತೂರುತ್ತ ಹೋಗುತ್ತಾನೆ. ಹೆಣದ ಹಿಂದೆ ನವಣೆ ಅಥವಾ ರಾಗಿಯನ್ನು ಬಿತ್ತನೆ ಮಾಡುತ್ತಾರೆ. ಶವ ಹೊತ್ತ ನಾಲ್ಕು ಜನರು ಆಗಾಗ್ಗೆ ಬೇರೆಯವರು ಹೆಗಲನ್ನು ಬದಲಾಯಿಸಿಕೊಳ್ಳುತ್ತಾರೆ. ಸಿದಿಗೆಯನ್ನು ಸ್ವಲ್ಪ ದೂರ ಹೋದ ನಂತರ ಹೆಣವನ್ನು ತಂಗಡಿ ಗಿಡದ ಹತ್ತಿರ ಇಳಿಸಿ ತಂಗಡಿ ಗಿಡದ ಮೇಲೆ ಹಿಂಡೆ ಕೂಳು ಹಾಕಿ ಗಂಡ ಸತ್ತಿದ್ದಾರೆ ಹೆಣ್ಣನ್ನೂ ಮದಲಗಿತ್ತಿ ತರಹದಲ್ಲಿ ಅಲಂಕಾರ ಮಾಡಿ ತಂಗಡಿ ಗಿಡಕ್ಕೆ ಬಳೆ, ತಾಳಿಯನ್ನು ತೆಗೆದು ಹಾಕುತ್ತಾರೆ. ಅಂದಿನಿಂದ ಆಕೆಯ ಮುತ್ತೈದೆತನ ಕೊನೆಗೊಂಡಿತೆಂಬ ಸಂಕೇತವಿದೆ. ನೇರವಾಗಿ ಸ್ಮಶಾನಕ್ಕೆ ಶವವನ್ನು ತೆಗೆದುಕೊಂಡು ಹೋಗುತ್ತಾರೆ.

ಸಿದಿಗೆಯನ್ನು ಕುಣಿಯ ಬಳಿ ಇಳಿಸಿ ಕುಣಿಗೆ ನೀರು ಚಿಮುಕಿಸಿ, ಅರಿಶಿಣ, ಕುಂಕುಮ, ವಿಭೂತಿದಬ್ಬೆ, ಗಂಧದ ಕಡ್ಡಿಯಿಂದ ಪೂಜಿಸಿ ಹಣ್ಣುಗಳನ್ನು ನೈವೇದ್ಯ ಮಾಡಿ ತಂಗಡಿ ಗಿಡದ ಸೊಪ್ಪನ್ನು ಹಾಕಿ ಹೆಣವನ್ನು ಗುಂಡಿಯಲ್ಲಿ ಇಬ್ಬರನ್ನು ಇಳಿಸಿಕೊಳ್ಳುತ್ತಾರೆ. ಶವದಲ್ಲಿ ಇರುವ ಉಡುದಾರ, ಕೊರಳಲ್ಲಿ ಇರುವ ದಾರ ಕೈಯಲ್ಲಿರುವ ದಾರ, ಬಟ್ಟೆಯನ್ನು ತೆಗೆದು ಹಾಕುತ್ತಾರೆ. ಮತ್ತೆ ತಂಗಡಿ ಸೊಪ್ಪು ಹಾಕಿ ತಲೆ ಭಾಗಕ್ಕೆ ತುಂಬಿದ ತೆಂಗಿನಕಾಯಿ ಇಡುತ್ತಾರೆ. ಬಂದವರು ಮೂರು ಹಿಡಿ ಎಡಗೈಯಿಂದ ಮಣ್ಣನ್ನು ಹಾಕುತ್ತಾರೆ. ಚಲಿಕೆಯಿಂದ ಸಂಪೂರ್ಣವಾಗಿ ಗುಂಡಿಯನ್ನು ಮುಚ್ಚುತ್ತಾರೆ. ಸಿದಿಗಿಯನ್ನು ಗುಟ್ಟೆಯ ಬಲಭಾಗಕ್ಕೆ ಹೊಗೆದು ಬೆಂಕಿಯಿಂದ ಸುಡುತ್ತಾರೆ. ಗುಟ್ಟೆಯ ಸುತ್ತಲು ಕಲ್ಲುಗಳನ್ನು ಮತ್ತು ಹಿಂದಕ್ಕೆ ಮುಂದಕ್ಕೆ ಕಲ್ಲನ್ನು ನೆಡುತ್ತಾರೆ. ಗುಟ್ಟೆಗೆ ಹಿರಿಯ ಮಗನಿಂದ ಪೂಜೆ ಮಾಡಿಸಿ, ಮಗನಿಂದ ತಲೆಗರವು ತಿವಿಸುತ್ತಾರೆ. ತಲೆಯ ಮೇಲೆ ಕಂಬಳಿ ಹಾಕಿ ಹಿಂದಕ್ಕೆ ತಿರುಗಿ ನೋಡದಂತೆ ಕಳುಹಿಸುತ್ತಾರೆ.

ಕುಣಿಯನ್ನು ತೆಗೆದಿರುವಂತಹ ನಾಲ್ಕು ಜನರು ಸ್ಮಶಾನದಿಂದ ಸ್ವಲ್ಪ ದೂರ ಬಂದು ಟವಲು ಹಾಕಿಕೊಂಡು ಚಲಿಕೆ ಹಿಡಿದು ಬಾರಿಸುತ್ತಾರೆ. ಬಂದಿರುವ ಸಂಬಂಧಿಕರು ಟವಲು ಮೇಲೆ ಒಂದು

ರೂಪಾಯಿ ಅಥವಾ ಹತ್ತು ರೂಪಾಯಿವರೆಗೆ ಹಾಕುತ್ತಾರೆ. ಇದನ್ನು "ಜಾಗಟೆ" ಬಾರಿಸುವುದು ಎಂದು ಕರೆಯುತ್ತಾರೆ. ಈ ಹಣವನ್ನು ಕುಣಿ ತೋಡಿದ ವ್ಯಕ್ತಿಗಳು ತೆಗೆದುಕೊಳ್ಳುತ್ತಾರೆ. ಮಣ್ಣು ಮಾಡಿ ಮನೆಗೆ ಹಿಂದಿರುವಾಗ ಹಳ್ಳದಲ್ಲೋ ಅಥವಾ ಕೆರೆಯಲ್ಲೋ ಕೈಕಾಲು ತೊಳೆದು ಗುಡಿಗೆ ಹೋಗಿ ದೀಪ ಹಚ್ಚಿ ಕೈ ಮುಗಿಯುತ್ತಾರೆ. ಸತ್ತ ವ್ಯಕ್ತಿಯ ಮನೆಯ ಬಾಗಿಲ ಬಳಿ ತೊಂಬಿನ ನೀರು ಮತ್ತು ಹಸುವಿನ ಗೋಮೂತ್ರ (ಗೋಮೂತ್ರ, ಗೊಗಂಜು) ಹಾಕಿ ಬಾಗಿಲ ಬಳಿ ಇಟ್ಟಿರುತ್ತಾರೆ. ಗರಿಕೆ ಹುಲ್ಲಿನಿಂದ ಚಿನ್ನ ಮೇಲೆ ಎಡಕ್ಕೆ ಬಲಕ್ಕೆ ಚಿಮುಕಿಸಿಕೊಂಡು ಜೀವ ಹೋಗಿದ ಸ್ಥಳದಲ್ಲಿ ದನದ ಸಗಣಿಯ ಮೇಲೆ ಹಣತಿಯನ್ನು ಹಚ್ಚಿ ಬಂದಿರುವ ಸಂಬಂಧಿಕರು ಹಣತೆಯನ್ನು ದರ್ಶನ ಮಾಡಿ ಊರಿನ ಜನರು ಹೆಣ ಸ್ಮಶಾನಕ್ಕೆ ಹೋಗಿ ಬರುವ ವೇಳೆಗೆ ಮನೆ ಮುಂದೆ ಇರುವ ಹಾಗೂ ಹಿತ್ತಲಿನ ಕಸವನ್ನು ಗುಡಿಸಿ ತಿಪ್ಪೆಗೆ ಹಾಕಿ ಬರುತ್ತಾರೆ ಕಾರಣ ಸೂತಕ ಹೋಗಲಿ ಎನ್ನುವ ಕಾರಣಕ್ಕೆ.

ಸತ್ತ ವ್ಯಕ್ತಿಗೆ ನೆಂಟಸ್ಥರು ಆಗುವ ಜನರು ಹಣವನ್ನು ಸೇರಿಸಿ ಪ್ರತಿಯೊಂದು ಮನೆಗೆ ಒಂದು ಎಲೆ, ಅಡಿಕೆ ಕೊಟ್ಟು ಬರುತ್ತಾರೆ. ರಾತ್ರಿ ವೇಳೆ "ವಿಷದ ಬಾಯಿ" ತೊಳೆಸುತ್ತಾರೆ. 'ವಿಷದ ಬಾಯಿ' ಎಂದರೆ ಸತ್ತಿರುವ ಮನೆಯವರಿಗೆ ಹಾಗೂ ಸಂಬಂಧಿಕರಿಗೆ ಸರಾಯಿ ಅಥವಾ ಮದ್ಯಪಾನವನ್ನು ಕೂಡಿಸುವುದಕ್ಕೆ ವಿಷದ ಬಾಯಿ ತೊಳೆಸುವುದು ಎಂದು ಕರೆಯುತ್ತಾರೆ. ಸಂಜೆ ಸತ್ತಿರುವ ವ್ಯಕ್ತಿಯ ಸೋದರ ಸಂಬಂಧಿಗರು ತಿಥಿ ಕಾರ್ಯದ ಬಗೆಗೆ ಮಾತುಕತೆಯನ್ನು ಮಾಡುತ್ತಾರೆ. ಇವರಲ್ಲಿ ಎರಡು ತಿಥಿಕಾರ್ಯ ಮಾಡುತ್ತಾರೆ. ೧. ಸಣ್ಣ ದಿವಸ ಅಥವಾ ಮೂರು ದಿನದ ತಿಥಿಕಾರ್ಯ ೨. ದೊಡ್ಡದಿವಸ ಅಥವಾ ಹದಿನಾರು ದಿನದ ತಿಥಿಕಾರ್ಯ ಇದನ್ನು ನಿಗದಿ ಮಾಡಿ ಕೆಲವರು ತಮ್ಮ ತಮ್ಮ ಊರಿಗೆ ತೆರಳುತ್ತಾರೆ. ಕೆಲವರು ಇಲ್ಲೇ ಉಳಿಯುತ್ತಾರೆ.

೪.೭.೧ ಮಕ್ಕಳು ಸತ್ತ ಸಂದರ್ಭದ ಕಾರ್ಯ

ಮಾದಿಗರಲ್ಲಿ ವಿಶೇಷವಾಗಿ ಹುಟ್ಟಿನಿಂದ ಹಿಡಿದು ೧೨ ವರ್ಷದ ಹುಡುಗ ಅಥವಾ ಹುಡುಗಿಯರು ಆಕಸ್ಮಿಕವಾಗಿ ಮರಣ ಹೊಂದಿದರೆ ಇಡೀ ಕೇರಿಯೇ ದುಃಖದ ವಾತಾವರಣದಿಂದ ಕೂಡಿರುತ್ತದೆ. ಸತ್ತ ಮಗುವನ್ನು ಬಟ್ಟೆಯಲ್ಲಿ ಸುತ್ತಿಕೊಂಡು ಸ್ಮಶಾನ ಅಥವಾ ಹೊಲದಲ್ಲಿ ಮಣ್ಣು ಮಾಡಲು ಹೋಗುತ್ತಾರೆ. ಹೋಗುವ ಸಮಯದಲ್ಲಿ ಹಾರೆ, ಗುದ್ದಲಿ, ಚಲಿಕೆಯನ್ನು ತೆಗೆದುಕೊಂಡು ಹೋಗಿ. ಕುಣಿ ತೋಡಿ ಮಣ್ಣು ಮಾಡಿ ನೇರವಾಗಿ ಮನೆಗೆ ಬಂದು. ದೀಪವನ್ನು ನೋಡಿ ದೇವಸ್ಥಾನಕ್ಕೆ ಹೋಗಿ ದೀಪ ಹಚ್ಚಿ ಕೈಮುಗಿದು ಬರುತ್ತಾರೆ. ನಂತರ ಸಾವಿನ ಮನೆಗೆ ಬಂದು ತಂದೆ-ತಾಯಿಗೆ ಎಲೆ ಅಡಿಕೆ ಕೊಟ್ಟು ಇಡೀ ಕೇರಿಗೆ ಎಲೆ ಅಡಿಕೆಯನ್ನು ನೀಡುತ್ತಾರೆ. ಮೂರು ದಿನದ ತಿಥಿಕಾರ್ಯವನ್ನು ತಾಯಿ ಎದೆಹಾಲು ಹಾಗೂ ಮಗು ಉಪಯೋಗಿಸಿದ ವಸ್ತುಗಳನ್ನು ಗುಟ್ಟೆಯ ಮೇಲೆ ಹಾಕಿ ಮೂರು ಹನಿ ತಾಯಿಹಾಲು ಬಿಟ್ಟು ಮನೆಗೆ ವಾಪಸ್ಸು ತೆರಳುತ್ತಾರೆ.

೪.೭.೨ ಅವಿವಾಹಿತರು ಸತ್ತ ಸಂದರ್ಭದ ಕಾರ್ಯ

ಮಾದಿಗ ಸಮುದಾಯದಲ್ಲಿ ಅವಿವಾಹಿತರು ಸತ್ತರೆ ಸಿದಿಗೆ ಅಥವಾ ಚಟ್ಟವನ್ನು ಕಟ್ಟುವುದಿಲ್ಲ, ಅದರ ಬದಲಾಗಿ ಗೋಣಿಚೀಲದಲ್ಲಿ ತೆಗೆದುಕೊಂಡು ಹೋಗಿ ಸ್ಮಶಾನದಲ್ಲಿ ಬೆಂಕಿಯಲ್ಲಿ ಸುಡುತ್ತಾರೆ.

ಇವರನ್ನು ಮಣ್ಣಿನಲ್ಲಿ ಹೂಳುವುದಿಲ್ಲ, ಭೂತ, ದೆವ್ವವಾಗುತ್ತಾರೆ ಎನ್ನುವ ಕಾರಣಕ್ಕೆ ಕೆಲವರು ಕುಣಿಯಲ್ಲಿ ಊಳುವಾಗ ಮಾಕಡೆ (ಮುಖ ಕೆಳಗೆ) ಮಾಡಿ ಮಣ್ಣು ಮಾಡುವ ಆಚರಣೆಯಿದೆ. ಮದುವೆಯಾಗದೇ ಸತ್ತರೇ ಸ್ವರ್ಗ ಪ್ರಾಪ್ತಿಯಾಗುವುದಿಲ್ಲವೆಂಬ ನಂಬಿಕೆ ಇವರಲ್ಲಿದೆ. ಅಂಥವರಿಗೆ ಮೋಕ್ಷ ದೊರಕಲಿ ಎಂಬ ಕಾರಣಕ್ಕೆ ಸತ್ತ ವ್ಯಕ್ತಿಯನ್ನು ಎಕ್ಕದ ಗಿಡದೊಡನೆ ಮದುವೆ ಮಾಡುವ ಸಂಪ್ರದಾಯವಿದೆ. ತಿಥಿಕಾರ್ಯವನ್ನು ಮೂರು ದಿನದಲ್ಲಿ ಹಾಲು, ಬಾಳೆಹಣ್ಣು ಇವರು ಸೇವಿಸುವ ತಿಂಡಿ ತಿನಿಸುಗಳನ್ನು ತೆಗೆದುಕೊಂಡು ಹೋಗಿ ಗುಟ್ಟೆಯ ಮೇಲೆ ಇಟ್ಟು ಬರುವಂತಹ ಆಚರಣೆಯನ್ನು 'ಹಿಂಡೆಕೊಳು' ಎಂದು ಕರೆಯುತ್ತಾರೆ.

೪.೭.೩ ಗರ್ಭಿಣಿ ಮಹಿಳೆಯರು ಸತ್ತ ಸಂದರ್ಭದ ಕಾರ್ಯ

ಮಾದಿಗ ಸಮುದಾಯದಲ್ಲಿ ಗರ್ಭಿಣಿ ಮಹಿಳೆಯರು ಹೆರಿಗೆ ಸಂದರ್ಭದಲ್ಲಿ ಹಾಗೂ ಬೆಂಕಿ ಸುಟ್ಟ ಮಹಿಳೆಯನ್ನು ಸಿದಿಗೆ ಅಥವಾ ಚಟ್ಟದಲ್ಲಿ ಸ್ಮಶಾನಕ್ಕೆ ತೆಗೆದುಕೊಂಡು ಹೋಗುವುದಕ್ಕಿಂತ ಮುಂಚೆ ನಾಲ್ಕು ಜನ ಕೇರಿಯ ಗಂಡಸರನ್ನು ಕಳುಹಿಸುತ್ತಾರೆ. ಅವರು ಕಟ್ಟಿಗೆ ಕಡೆದು ಚಿತೆಯನ್ನು ತಯಾರು ಮಾಡುವರು. ಚಿತೆಯ ಮೇಲೆ ಇರಿಸಿ ಬೆಂಕಿಯನ್ನು ಗಂಧದಿಂದ ಹಚ್ಚಿಸುತ್ತಾರೆ.

೪.೭.೪ ತಿಥಿ ಆಚರಣೆಗಳು

ಹಿರಿಯರ ಆತ್ಮಕ್ಕೆ ಶಾಂತಿ ಸಿಗಲಿ ಎನ್ನುವ ಉದ್ದೇಶಕ್ಕೆ ಹಾಗೂ ಸತ್ತ ವ್ಯಕ್ತಿಗಳು ಭೂತವಾಗಿ, ದೆವ್ವವಾಗಿ ನಮ್ಮನ್ನು ಕಾಡದಿರಲಿ ಎಂಬ ಕಾರಣಕ್ಕೆ ಹಿರಿಯರನ್ನು ಗೌರವ ಪೂರ್ವಕವಾಗಿ ತಿಥಿ ಕಾರ್ಯವನ್ನು ಆಚರಣೆ ಮಾಡುತ್ತಾರೆ. ತಿಥಿಕಾರ್ಯವನ್ನು ಎರಡು ಬಾರಿ ಆಚರಣೆ ಮಾಡುತ್ತಾರೆ. ಮೊದಲನೆಯ ತಿಥಿಯನ್ನು ಮೂರು ದಿನದ ತಿಥಿಕಾರ್ಯ ಅಥವಾ ಸಣ್ಣ ದಿವಸ ಎರಡನೆಯ ತಿಥಿಕಾರ್ಯವನ್ನು ಹದಿನಾರು ದಿನದ ತಿಥಿಕಾರ್ಯ ಅಥವಾ ದೊಡ್ಡ ದಿವಸ ಎಂದು ಕರೆಯುತ್ತಾರೆ.

೪.೭.೫ ಮೂರು ದಿವಸದ ತಿಥಿ ಕಾರ್ಯ / ಸಣ್ಣ ದಿವಸ

ವ್ಯಕ್ತಿ ಸತ್ತ ಮೂರು ದಿನದಲ್ಲಿ ತಿಥಿ ಕಾರ್ಯವನ್ನು ಮಾಡುತ್ತಾರೆ. 'ತಲೆಗಾರವು' ತಿವಿದಿರುವ ವ್ಯಕ್ತಿಯನ್ನು ತಲೆಕೂದಲನ್ನು ತೆಗೆಸಿ ಸ್ನಾನ ಮಾಡಿಸಿ ಹೊಸ ಬಟ್ಟೆಯನ್ನು ತೊಡಿಸುತ್ತಾರೆ. ಇದರಲ್ಲಿ ಈ ವ್ಯಕ್ತಿಯ ತಿಥಿ ಕಾರ್ಯದ ಖರ್ಚುವೆಚ್ಚವನ್ನು ಸೋದರಿಯ ಸಂಬಂಧಿಗಳು ಸಮಾನವಾಗಿ ಹಂಚಿಕೊಳ್ಳುತ್ತಾರೆ. ಹೀಗೆ ಮಾಡುವುದರಿಂದ ಒಗ್ಗಟ್ಟನ್ನು ತೋರಿಸುತ್ತಾರೆ. ತಲೆಗೆ ಐದು ಸೇರು ರಾಗಿ ಅಥವಾ ಜೋಳ ಏಳು ಸೇರು ಅಕ್ಕಿ ಹಾಗೂ ಕೋಣಕ್ಕೆ ತಗಲುವ ವೆಚ್ಚವನ್ನು ವಿಭಾಗ ಮಾಡಿಕೊಂಡು ಸಂಜೆ ಸುಮಾರು ೪ ಅಥವಾ ೫ ಗಂಟೆಗೆ ಅಂದರೆ ಸೂರ್ಯ ಇಳೆ ಹೊತ್ತಿನಲ್ಲಿ 'ಹಿಂಡೆಕೊಳ'ನ್ನು ಸ್ಮಶಾನಕ್ಕೆ ತೆಗೆದುಕೊಂಡು ಹೋಗುತ್ತಾರೆ. 'ಹಿಂಡೆಕೂಳು' ಎಂದರೆ ಕೋಳಿ ಮಾಂಸವನ್ನು ಬೆಂಕಿಯ ಕೆಂಡದಲ್ಲಿ ಸುಟ್ಟು, ಕೋಣದ ಮಾಂಸ, ಬೀಡಿ, ಬೆಂಕಿಪೊಟ್ಟಣ, ಮದ್ಯಪಾನ, ಹಣತೆಯನ್ನು ಹಚ್ಚಿ ಜೊತೆಯಲ್ಲಿ ತೆಗೆದುಕೊಂಡು ಹೋದ ಪದಾರ್ಥಗಳನ್ನೇ ಎಡೆ ಹಾಕುತ್ತಾರೆ. ವ್ಯಕ್ತಿ ಸೇವಿಸುವ ಪ್ರಿಯವಾದ ತಿಂಡಿ ತಿನಿಸುಗಳನ್ನು ಸಮಾಧಿಯ ಬಳಿ ಎಡೆ ಇಡುತ್ತಾರೆ.

ಪೂಜೆ ಮಾಡಿ ಸಮಾಧಿಯ ಎಡೆಯನ್ನು ಬಿಟ್ಟು, ಬೆಂಕಿಯ ಹೊಗೆ ಬರುವಂತೆ ಮಾಡುವರು. ಅಡುಗೆಯ ವಾಸನೆ ಮತ್ತು ದನದ ಸಗಣಿಯ ಕುರುಳಿನ ಹೊಗೆಯನ್ನು ಕಂಡು ಕಾಗೆಗಳು ಬಂದು ಅವುಗಳನ್ನು ಮುಟ್ಟುವವರೆಗೂ ಗಮನಿಸುತ್ತಿರುತ್ತಾರೆ. ಹಾಗೇನಾದರೂ ಕಾಗೆಗಳು ಮುಟ್ಟಲ್ಲವೆಂದರೆ ಹಸುವಿನ ಕರುವನ್ನಾದರೂ ಹಿಡಿದು ತಂದು ಎಡೆಯನ್ನು ತಿನ್ನಿಸುವರು. ಉಳಿದ ಮಾಂಸ ಮತ್ತು ಅನ್ನವನ್ನು ಅಣ್ಣತಮ್ಮಂದಿರ ಬಳಗದವರು ಸಮಾಧಿಯ ಬಳಿ ಸೇವಿಸಿ ಬರುತ್ತಾರೆ. ಹೀಗೆ ಹಿಂಡೆಕೂಳು ಶಾಸ್ತ್ರ ಮಾಡಿಕೊಂಡು ಬಂದಾಗ ಹೆಣ ಹೊತ್ತ ನಾಲ್ಕು ಜನರನ್ನು ಒನಕೆಯ ಮೇಲೆ ನಿಲ್ಲಿಸಿ ಭುಜಗಳಿಗೆ ಎಣ್ಣೆಯನ್ನು ಸವರಿ ಗರಿಕೆ ಹುಲ್ಲಿನಿಂದ ಎಣ್ಣೆ ನೀರನ್ನು ಚಿಮುಕಿಸಿ ಹೆಗಲ ಭಾರ ಇಳಿಸುತ್ತಾರೆ.

ಮನೆಯಲ್ಲಿ ವ್ಯಕ್ತಿ ಸತ್ತ ಸ್ಥಳದಲ್ಲಿ ಎಡೆಯನ್ನು ಹಾಕುತ್ತಾರೆ. ಗದ್ದುಗೆಯನ್ನು ತಯಾರು ಮಾಡುವ ಸಮಯದಲ್ಲಿ ತಳಭಾಗಕ್ಕೆ ಅಕ್ಕಿ ಅಥವಾ ಜೋಳ ಹಾಕಿ ಅದರ ಮೇಲೆ ಕಂಚಿನ ಚೊಂಬು ಇಟ್ಟು ಮೇಲೆ ತುಂಬಿದ ಕಾಯಿ, ಹೊಸ ಲುಂಗಿ, ಅಂಗಿ, ಟವಲ್ ಮತ್ತು ಅವನು ಸೇವಿಸುವಂತಹ ತಿಂಡಿ ತಿನಿಸುಗಳನ್ನು ಇಟ್ಟು ಬಾಳೆ ಎಲೆಯ ಮೇಲೆ ಮಾಂಸದ ಸಂಬಾರ್, ಅನ್ನ, ಬಾಳೆಹಣ್ಣು, ಬೀಡಿ, ಬೆಂಕಿಪೊಟ್ಟಣ ಇವುಗಳನ್ನು ಇಟ್ಟು ಎಡೆ ಹಾಕುತ್ತಿದ್ದಾರೆ. ಹಿರಿಯ ಮಗನಿಂದ ಪೂಜೆಯನ್ನು ಮಾಡಿಸುತ್ತಾರೆ.

ರಾತ್ರಿವೇಳೆ ಚೌಡಕಿಯರನ್ನು ಹಾಗೂ ಅಸದಿಪ್ಪ ಅಥವಾ ದಾಸಯ್ಯರನ್ನು ಕರಿಸಿ 'ತಲೆಗಾರವು' ತೀರಿದ ಹುಡುಗನ ಹೆಸರನ್ನು ಕರೆಯದೆ ಸತ್ತ ವ್ಯಕ್ತಿಯ ಹೆಸರಿಡಿದು 'ಏನು ಊಟ ಮಾಡ್ತಿಯ' ಎಂದು ಕೇಳುವನು. ಆಗ ಹುಡುಗ 'ಹಾಲು ತುಪ್ಪ ಉಣ್ತೇನಿ' ಎನ್ನುವರು. ಹೀಗೆ ಮೂರು ಬಾರಿ ಕೇಳಿ ಆನಂತರ 'ನೀನು ಯಾರಿಗೂ ತೊಂದರೆ ಕೊಡಬೇಡ' ನೀನು ಯಾರ ಮೈಮೇಲೆ ಬರಬೇಡ, ಮಕ್ಕಳು ಮರಿಗೆ ಏನು ತೊಂದರೆ ಮಾಡಬೇಡ. ಹೊಲ ಐತಿ, ಮನೆ ಐತಿ ಎಂದು ಹೇಳಿ ಹುಡುಗನನ್ನು ಒಳಗೆ ಕರೆಯುವನು. ಹೀಗೆ ಇಡೀ ರಾತ್ರಿ ಎಲ್ಲಮ್ಮನ ಹಾಡುಗಳನ್ನು ಹಾಡಿಸುತ್ತಾರೆ. ಬೆಳಗಿನ ಜಾವ ನೆಂಟಸ್ಥರು ಎಡೆಗೆ ತೆಂಗಿನಕಾಯಿ ಒಡೆದು ಪೂಜೆ ಮಾಡಿ ಉಳಿದ ಮಾಂಸವನ್ನು ನೆಂಟಸ್ಥರು ಸೇವಿಸುತ್ತಾರೆ. ಉಳಿದ ಎಡೆಯ ಅನ್ನ, ಸಾಂಬಾರ್, ಚೊಂಬಿನಲ್ಲಿರುವ ನೀರನ್ನು ಊರಮ್ಮನ ದೇವರ ಕಟ್ಟೆಗೆ ಹಾಕುತ್ತಾರೆ. ಹೀಗೆ ಮೂರು ದಿನದ ತಿಥಿ ಕಾರ್ಯವನ್ನು ಮಾಡುತ್ತಾರೆ.

೪.೭.೬ ಹದಿನಾರು ದಿನದ ತಿಥಿಕಾರ್ಯ / ದೊಡ್ಡ ದಿವಸ

ಸತ್ತ ವ್ಯಕ್ತಿಯ ಉಳಿದ ಒಂಬತ್ತು ಅಥವಾ ಹದಿನಾರು ದಿನದಲ್ಲಿ ದೊಡ್ಡ ದಿವಸ ಅಥವಾ ಕೈಲಾಸ ಸಮಾರಾಧನೆ ಎಂದು ಕರೆಯುತ್ತಾರೆ. ಈ ಕಾರ್ಯವನ್ನು ಸತ್ತಿರುವ ವ್ಯಕ್ತಿಯ ಮನೆಯವರೇ ಮಾಡುತ್ತಾರೆ. ಇಲ್ಲಿ ಬರುವ ಖರ್ಚುವೆಚ್ಚವನ್ನು ಇವರೇ ಭರಿಸುತ್ತಾರೆ. ಈ ಕಾರ್ಯದಲ್ಲಿ ಎಲ್ಲ ಬಂಧುಗಳು ಹಾಗೂ ಸೋದರಿಯ ಸಂಬಂಧಿಕರು ಭಾಗವಹಿಸುತ್ತಾರೆ. ಇಂತಹ ಆಚರಣೆಯಲ್ಲಿ ಹೆಚ್ಚಿನದಾಗಿ ಮದ್ಯ, ಮಾಂಸದ ನೈವೇದ್ಯಗಳ ಸಹಜ. ಹಾಗಾಗಿ ದೊಡ್ಡ ದಿವಸದಲ್ಲಿ ಮಾಂಸದ ಊಟವನ್ನು ಮಾಡಿಸುತ್ತಾರೆ.

ಮಾಂಸದ ಅಡುಗೆಯನ್ನು ಸಿದ್ಧಪಡಿಸಿದ ಮೇಲೆ ಎಡೆಹಾಕಲು ಸಮಾಧಿಗೆ ಹೋಗುವರು. ಮೂರು ಜನ ಮುತ್ತೈದೆಯರನ್ನು ಗಂಗಮ್ಮನ ಪೂಜೆ ಮಾಡಲು ಮೂರು ಬಿಂದಿಗೆಗಳನ್ನು ಪೂಜೆಗೆ ಬೇಕಾಗುವ ಸಾಮಗ್ರಿಗಳನ್ನು ತೆಗೆದುಕೊಂಡು ಹೋಗಿ ಬಾವಿ ಹತ್ತಿರ ಹೋಗಿ ಬಿಂದಿಗೆಯಲ್ಲಿ ನೀರು ತುಂಬಿಟ್ಟು ಎಲೆಯಿಂದ ಮಾಡಿದ ಕಂಕಣ ಮತ್ತು ಅಂಗನೂಲನ್ನು ಕಟ್ಟಿಕೊಂಡು ಗರಿಕೆ ಪೂಜೆ ಮಾಡಿ ಬಿಂದಿಗೆಯನ್ನು ಹೊತ್ತುಕೊಂಡು ಮನೆಗೆ ಬರುವರು. ಹೊಸ್ತಿಲ ದಾಟಿ ಬಳಗೆ ಬರುವ ಮೊದಲು ಯಾರಾದರೊಬ್ಬರು ತಲೆಯ ಮೇಲೆ ಇರುವ ಬಿಂದಿಗೆಯನ್ನು ಇಳಿಸಿ ಅವರನ್ನು ಕೇಳುತ್ತಾರೆ ಯಾರ್‍ಯಾರು ಬಂದಿರಿ ಎಂದಾಗ ಅದಕ್ಕೆ ತುಂಬಿದ ಕೊಡಹೊತ್ತವರು "ನಾನು ಮತ್ತು ಗಂಗಮ್ಮ ಬಂದೀವಿ" ಎನ್ನುವರು.

ಪ್ರಾಣ ಬಿಟ್ಟ ಜಾಗದಲ್ಲಿ ಸ್ವಲ್ಪ ಅಕ್ಕಿ, ತುಂಬಿದ ಕೊಡವನ್ನು ಅದರ ಮೇಲೆ ಇಟ್ಟು ಸತ್ತ ವ್ಯಕ್ತಿಗಾಗಿ ತಂದ ಹೊಸ ಬಟ್ಟೆಗಳನ್ನು ಕೊಡದ ಬಳಿ ಇಟ್ಟು, ಕೊಡದ ಮುಂದೆ ಬಾಳೆ ಎಲೆಯ ಮೇಲೆ ಮಾಂಸದ ತುಂಡು, ಅನ್ನ, ಬಾಳೆಹಣ್ಣು, ಮದ್ಯ, ಬೀಡಿ, ಬೆಂಕಿಪೊಟ್ಟಣ ಇಟ್ಟು ಪೂಜಿಸಿ ಆತ ಬದುಕಿದ್ದಾಗ ಇಷ್ಟಪಡುವ ತಿಂಡಿ ತಿನಿಸುಗಳನ್ನು ಇಟ್ಟು ನೈವೇದ್ಯ ಮಾಡುತ್ತಾರೆ. ತಿಥಿ ಕಾರ್ಯಕ್ಕೆ ಬಂದಿರುವ ನೆಂಟಸ್ಥರು ಹಣ್ಣು, ಕಾಯಿ ತಂದು ನೈವೇದ್ಯ ಮಾಡಿ ಅವರಿಗೆ ಗೌರವವನ್ನು ಸೂಚಿಸುತ್ತಾರೆ. ಬಂದಿರುವ ಎಲ್ಲ ಸಂಬಂಧಿಕರಿಗೆ ಮಾಂಸದ ಊಟವನ್ನು ಮಾಡಿಸಿ ರಾತ್ರಿ ಚೌಡಕಿಯರಿಂದ ಎಲ್ಲಮ್ಮ ಕಥೆಗಳು ಮತ್ತು ಹಾಡುಗಳನ್ನು ಹಾಡಿಸುತ್ತಾರೆ.

೪.೭.೭ ಬಟ್ಟೆ ಕೊಡುವ ಶಾಸ್ತ್ರ

ಸತ್ತ ವ್ಯಕ್ತಿಯ ಹೆಂಡತಿಗೆ ಅಥವಾ ಸತ್ತ ಹೆಂಡತಿಯ ಗಂಡನಿಗೆ ಇಪ್ಪತ್ತೊಂದು ದಿನದಲ್ಲಿ ತ್ವರುಮನೆಯವರೇ ಹೊಸ ಬಟ್ಟೆಯನ್ನು ತರಬೇಕೆಂಬ ಸಂಪ್ರದಾಯವಿದೆ. ಬಟ್ಟೆಯನ್ನು ಉಡಿಸುವುದಕ್ಕೆ 'ಬಟ್ಟೆ ಕೊಡುವ ಶಾಸ್ತ್ರ' ಎಂದು ಕರೆಯುತ್ತಾರೆ. ತ್ವರುಮನೆಯವರು ಇಂತಹ ದಿನ ಬಟ್ಟೆಯನ್ನು ಕೊಡುತ್ತೇವೆ ಎಂದು ವಿಷಯ ತಿಳಿಸಿದ ಮೇಲೆ ಒಂದು ಶುಭದಿನ ನೋಡಿ ಕರೆದುಕೊಂಡು ಬರುತ್ತಾರೆ. ಬಂದಿರುವ ವ್ಯಕ್ತಿಗಳನ್ನು ನೇರವಾಗಿ ಮನೆಗೆ ಕರೆದುಕೊಂಡು ಹೋಗುವುದಿಲ್ಲ. ಅದರ ಬದಲಾಗಿ ದೇವರ ಗುಡಿಯಲ್ಲಿ ಬಿಡುತ್ತಾರೆ. ತ್ವರುಮನೆಯವರು ದೇವರಿಗೆ ಪೂಜೆ ಮಾಡಿ ವ್ಯಕ್ತಿಯನ್ನು ದೇವರ ಮಧ್ಯಭಾಗದಲ್ಲಿ ನಿಲ್ಲಿಸಿ ತೆರೆಯನ್ನು ಕಟ್ಟುತ್ತಾರೆ. ಯಾರು ಇವರ ಮುಖವನ್ನು ನೋಡುತ್ತಾರೆ ಇಡೀ ಕೇರಿಯ ಜನ ಒಂದು ಎಲೆ ಅಡಿಕೆ ಕೊಟ್ಟು ಮುಖವನ್ನು ನೋಡುತ್ತಾರೆ. ವಿಧವೆಯರು ಯಾರನ್ನು ಮನೆಯ ಒಳಗೆ ಬಿಟ್ಟುಕೊಳ್ಳುವುದಿಲ್ಲ. ಒಂದು ವೇಳೆ ಕರೆದುಕೊಂಡರೆ ಒಂದು ಕುಪ್ಪಸವನ್ನು ಕೊಟ್ಟು ಒಳಗಡೆ ಕರೆದುಕೊಳ್ಳುತ್ತಾರೆ.

ಇವರಲ್ಲಿ ವಿಧವಾ ವಿವಾಹ ಇಲ್ಲ. ಚಿಕ್ಕವಯಸ್ಸಿನಲ್ಲಿ ಗಂಡ ಸತ್ತುಹೋದರೆ ಆ ಹುಡುಗಿಯನ್ನು ಮದುವೆಯಾಗುವುದಕ್ಕೆ ಯಾರಾದರೂ ಬಯಸಿದರೆ ಅಂಥವರಿಗೆ ಕೊಡವಳಿ ಶಾಸ್ತ್ರ ಮಾಡಿ ಇಬ್ಬರು ಒಟ್ಟಿಗೆ ಇರಲು ಅನುಮತಿ ಕೊಡುವರು. ಇದಕ್ಕೆ ಕೊಡವಳಿ ಎಂದು ಕರೆಯುವರು. ಕೆಲವು ಕಡೆ

ಕೂಡಿಕೆ, ಕೂಟಿಕೆ ಇತ್ಯಾದಿ ಹೆಸರುಗಳಿಂದಲೂ ಕರೆಯುವರು. ಕೆಲವೊಂದು ವಿಧಿಗಳಿಗೆ ಬದ್ಧವಾಗಿ ನಡೆಯುವ ಕೂಡಾವಳಿಗೆ ತಂದೆತಾಯಿಯರು ಮತ್ತು ಕುಲದವರು ಮತ್ತೈದೆಯರಿಂದ ಸೇಸೆ ಇಡಿಸಿ ಹರಸುವರು ಅನುಕೂಲಸ್ಥರು ಕುಲಸ್ಥರಿಗೆ ಊಟ ಹಾಕಿಸುವುದು ಉಂಟು. ಈ ಸಂಪ್ರದಾಯವು ಮಾಡುವುದರಿಂದ ಸತ್ತ ವ್ಯಕ್ತಿಯ ಹೆಂಡತಿಗೆ ಅನುಕೂಲವಾಗುತ್ತದೆ. ಇಡೀ ಅವರ ಕುಟುಂಬವನ್ನು ಸುಧಾರಿಸುವಂತಹ ಪ್ರಯತ್ನ ಸಾಗುತ್ತದೆ. ಯಾವುದೇ ನಿಂದನೆ ಮಾತುಗಳು ಬರುವುದರ ಪ್ರಮಾಣ ಕಡಿಮೆಯಾಗುತ್ತದೆ ಎಂದು ಹೇಳಬಹುದು. ಹೀಗೆ ಮಾಡುವುದರ ಫಲವಾಗಿ ಸಾಮಾಜಿಕ ಪರಿಸ್ಥಿತಿಯಲ್ಲಿ ಸಿಲುಕಿಕೊಂಡು ಮಾನವ ಭವಿಷ್ಯವನ್ನು ರೂಪಿಸಲು ಸಾಧ್ಯವಾಗುವುದು.

ಮಾದಿಗ ಸಮುದಾಯದಲ್ಲಿ ಹುಟ್ಟಿನಿಂದ ಸಾವಿನವರೆಗೂ ನಡೆಸುವ ಸಂಪ್ರದಾಯಗಳಲ್ಲಿ ಪ್ರಾದೇಶಿಕವಾಗಿ ಅಲ್ಪ ಸ್ವಲ್ಪ ಬದಲಾವಣೆ ಕಂಡುಬರುತ್ತದೆ. ಇತ್ತೀಚಿನ ದಿನಮಾನಗಳಲ್ಲಿ ಈ ಸಮುದಾಯದ ಜನರು ಆಧುನಿಕತೆಯ ಕಡೆಗೆ ಮುಖ ಮಾಡಿದಂತೆಲ್ಲ ಅನೇಕ ಆಚರಣೆಗಳಲ್ಲಿ ಹೊಸತನ ಕಂಡುಬರುತ್ತಿದೆ. ಶವ ಸಂಸ್ಕಾರದ ಆಚರಣೆಯಲ್ಲಿ ಬದಲಾವಣೆಯನ್ನು ಗಮನಿಸಬಹುದಾಗಿದೆ. ಮೊದಲಿಗೆ ಮಣ್ಣು ಮಾಡುವ ಸಂದರ್ಭದಲ್ಲಿ ಎಲ್ಲ ಸಂಬಂಧಿಕರು ಬರುವವರೆಗೆ ಮಣ್ಣು ಮಾಡುತ್ತಿತಲಿಲ್ಲ. ಆದರೆ ಇವತ್ತು ದೂರವಾಣಿ ಮೂಲಕ ವಿಷಯ ತಿಳಿಸಿ ಸೂರ್ಯ ಮುಳುಗುವ ಸಮಯದ ಮೊದಲು ಮಣ್ಣು ಮಾಡುತ್ತಾರೆ. ತಿಥಿ ಕಾರ್ಯವು ಕೇವಲ ಸಾಂಕೇತಿಕವಾಗಿ ಮಾಡುತ್ತಾರೆ. ಕಟ್ಟುನಿಟ್ಟಿನ ಆಚರಣೆಗಳು ಜನ ಜಗತ್ತು ಬೆಳೆದಂತೆಲ್ಲ ತನ್ನ ಮೂಲ ಪರಂಪರೆಯನ್ನು ಮರೆಮಾಚುವ ಪ್ರವೃತ್ತಿಯನ್ನು ಮೈಗೂಡಿಸಿಕೊಂಡಿದೆ ಎನ್ನುವುದು ಕ್ಷೇತ್ರಕಾರ್ಯದ ಮೂಲಕ ತಿಳಿದಿರುವ ಮಾಹಿತಿಯಾಗಿದೆ.

೪.೭.೮ ಮಾದಿಗ ಸಮುದಾಯದ ಆಹಾರ ಪದ್ಧತಿ

ಜೈವಿಕ ಪರಂಪರೆಯು ನಿರಂತರವಾಗಿ ಚಲನಶೀಲವಾಗಿದೆ. ಎಲ್ಲ ಜೀವಿಗಳೂ ಕಾರ್ಯಶೀಲವಾಗಿರುವುದೇ ಆಹಾರನಿರತ ಹುಡುಕಾಟದಿಂದ, ಆಹಾರದ ತಲುಪುವಿಕೆ ಏಕಮಾತ್ರ ಕಡ್ಡಾಯ ಕಾರ್ಯಯೋಜನೆಯಾಗಿದೆ. ಆಹಾರಕ್ಕಾಗಿ ವಿವಿಧ ಅವಲಂಬನೆಗಳು ನಿಸರ್ಗದಲ್ಲಿ ಕಾಣಬರುತ್ತದೆ. ಸಸ್ಯಗಳಲ್ಲಿ ಪ್ರಾಣಿಗಳಲ್ಲಿ ಒಂದನ್ನೊಂದು ಅವಲಂಬನೆಗಳ ಪ್ರಕ್ರಿಯೆ ಆಹಾರದ ಬಲೆಗೆ ಕಾರಣವಾಗಿದೆ. ಹಲವಾರು ಮೇಲುವರ್ಗದ ಜೀವಿಗಳು ಇತರೆ ಜೀವಿಗಳ ಪೋಷಕರನ್ನು ಅವಲಂಬಿಸಿವೆ. ಹಲವು ಸ್ವತಂತ್ರವಾಗಿರುವ ಜೀವಿಗಳ ಮೂಲಭೂತ ಅವಶ್ಯಕತೆಗಳಲ್ಲಿ ಆಹಾರವನ್ನು ಪಡೆಯಲು ಸಾಕಷ್ಟು ಕಾರ್ಯತಂತ್ರಗಳು ವಿಕಾಸಗೊಂಡಿದೆ.

ಪ್ರತಿಯೊಂದು ಪ್ರಾಣಿಸಂಕುಲಕ್ಕೆ ಆಹಾರವೆಂದರೆ ಮೂಲಭೂತವಾದ ಅಂಶವಾಗಿದೆ. ಚಿತ್ರದುರ್ಗ ಜಿಲ್ಲೆ ಎಂದಾಕ್ಷಣ ನಮಗೆ ನೆನಪು ಆಗುವುದು ಅಲ್ಲಿರುವ ಪರಿಸರ. ಹೆಚ್ಚಿನದಾಗಿ ಮಳೆ ಆಶ್ರಿತ ಭೂಮಿಯಾಗಿರುವುದರಿಂದ ಯಾವುದೇ ತಂಪಾದ ಬೆಳೆಗಳನ್ನು ಬೆಳೆಯುವುದಿಲ್ಲ ನೀರಿನ ಅಭಾವವಿರುವುದರಿಂದ ಇಲ್ಲಿ ಸಿಗುವ ಆಹಾರ ಅಷ್ಟೊಂದು ಗುಣಮಟ್ಟದ್ದಾಗಿರುವುದಿಲ್ಲ.

ಇಂತಹ ಸಂದರ್ಭದಲ್ಲಿ ಆರ್ಥಿಕವಾಗಿ, ರಾಜಕೀಯವಾಗಿ, ಶೈಕ್ಷಣಿಕವಾಗಿ ಅತ್ಯಂತ ಕೆಲಸ್ಥರ ಜೀವನವನ್ನು ನಡೆಸುವಂಥ ಮಾದಿಗ ಸಮುದಾಯವು ಒಂದು ಹೊತ್ತಿಗೂ ಊಟಯಿಲ್ಲದಂತಹ

ಪರಿಸ್ಥಿತಿಯಲ್ಲಿ ಜೀವನ ನಡೆಸಿರುವಂಥ ಅನೇಕ ಸಂದರ್ಭಗಳು ನಮಗೆ ಕಾಣಸಿಗುತ್ತದೆ. ಹಿಂದೆ ಮತ್ತು ಇಂದು ಬೇರೆ ಸಮುದಾಯದ ಮದುವೆ ಮತ್ತು ಹಬ್ಬ ಹರಿದಿನಗಳಲ್ಲಿ ರಾತ್ರಿ ವೇಳೆ ಮಾಡಿದ ಊಟವನ್ನು ಸಂಗ್ರಹಿಸಿಕೊಂಡು ಬಂದು ಸೇವಿಸುವಂಥ ಪರಿಸ್ಥಿತಿ ಇನ್ನು ತಪ್ಪಿಲ್ಲ. ಕಾರಣ ಕೇಳಿದರೆ ಹಿಂದಿನಿಂದ ನಡೆದುಕೊಂಡು ಬಂದಿರುವ ಸಂಪ್ರದಾಯ ಎಂದು ಹೇಳುತ್ತಾರೆ. ಬೇರೆ ಸಮುದಾಯದ ಊಟವನ್ನು ತೆಗೆದುಕೊಂಡು ಬಂದು ಸೇವಿಸಿದ್ದಾರೆ. ನಮಗೆ ಒಳ್ಳೆದು ಆಗುತ್ತದೆ ಎನ್ನುವಂತಹ ಬಲವಾದ ನಂಬಿಕೆಯನ್ನು ಹೊಂದಿದ್ದಾರೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಬರುವ ಮಾದಿಗರು ಬಹುತೇಕ ಜನರು ಇಷ್ಟಪಟ್ಟು ಸೇವಿಸುವ ಆಹಾರಗಳಲ್ಲಿ ಕೋಣದ ಮಾಂಸಹಾರ ಕೂಡ ಒಂದು. ಸಾಕು ಪ್ರಾಣಿಗಳನ್ನಾಗಲಿ ಅಥವಾ ವನ್ಯ ಪ್ರಾಣಿಗಳನ್ನಾಗಲಿ ಲಭ್ಯತೆಯ ಮೇರೆಗೆ ಸೇವಿಸುವುದನ್ನು ರೂಢಿಸಿಕೊಂಡಿದ್ದಾರೆ. ವಿಶೇಷ ಸಂದರ್ಭಗಳಲ್ಲಿ ಕೋಣ, ಕೋಳಿ ಮುಂತಾದವುಗಳನ್ನು ದೇವರಿಗಾಗಿ ಬಲಿ ಕೊಡುವ ಹಾಗೂ ಬಲಿ ಕೊಟ್ಟ ನಂತರ ಮಾಂಸದ ಊಟವನ್ನು ಹಳ್ಳಿಯ ಎಲ್ಲರೂ ಸೇವಿಸುವ ಪದ್ಧತಿ ಅನೇಕ ಸಮುದಾಯಗಳಲ್ಲಿ ರೂಢಿಯಲ್ಲಿದೆ.

೪.೭.೮.೧ ಋತುಮತಿ ಸಂದರ್ಭದಲ್ಲಿನ ಆಹಾರ ಪದ್ಧತಿ

ಹೆಣ್ಣುಮಕ್ಕಳ ಜೀವನ ಚಕ್ರದಲ್ಲಿ ಪ್ರಮುಖ ಘಟ್ಟ. ಹದಿಹರೆಯದ ಈ ಅವಧಿಯಲ್ಲಿ ಆಹಾರದ ಬೇಡಿಕೆಯು ಹೆಚ್ಚಾಗಿರುತ್ತದೆ. ಮಾದಿಗ ಸಮುದಾಯದಲ್ಲಿ ಋತುಮತಿ ಸಮಯದಲ್ಲಿ ಹೆಣ್ಣುಮಕ್ಕಳಿಗೆ ಒಣಕೊಬ್ಬರಿ, ಉತ್ತತ್ತಿ, ಕಲ್ಲು ಸಕ್ಕರೆ ವಿವಿಧ ಹಣ್ಣುಗಳು ನೀಡುತ್ತಾರೆ. ಮಾದಿಗ ಸಮುದಾಯದಲ್ಲಿ ವಿಶೇಷತೆ ಎಂದರೆ ಒಂದು ಗ್ರಾಮದಲ್ಲಿ ಹೆಣ್ಣು ಮಗಳು ಋತುಮತಿಯಾಗಿದ್ದಾಳೆ ಎಂದರೆ ಗ್ರಾಮದಲ್ಲಿ ಬರುವ ಇಡೀ ಮಾದಿಗ ಸಮುದಾಯದ ಜನರು ಪ್ರತಿದಿನ ಒಂದೊದು ಮನೆಯವರು ಒಂದೊದು ವಿಶೇಷವಾದ ಆಹಾರ ತಂದು ನೀಡುತ್ತಾರೆ. ಪ್ರಮುಖವಾಗಿ ಎಲ್ಲರು ಸಿಹಿ ತಿಂಡಿಗಳನ್ನು ನೀಡುತ್ತಾರೆ. ಕೊನೆಯ ದಿನ ಋತುಮತಿಯಾದ ಹೆಣ್ಣುಮಗಳ ಮನೆಯವರು ಕಾರ್ಯಕ್ರಮವನ್ನು ಮಾಡುತ್ತಾರೆ. ಅವತ್ತು ರಾತ್ರಿ ಸಿಹಿ ಮಾಡಿಸಿರುತ್ತಾರೆ. ಊರಿನ ಎಲ್ಲ ಜನರಿಗೆ ಮತ್ತು ಸಂಬಂಧಿಕರಿಗೆ ಊಟವನ್ನು ಮಾಡಿಸುತ್ತಾರೆ. ನಂತರ ಎಲ್ಲ ಸಂಬಂಧಿಕರು ಋತುಮತಿಯಾದ ಹೆಣ್ಣುಮಗಳಿಗೆ ಸಿಹಿ ತಿಂಡಿಗಳು ಹಾಗೂ ಹಣ್ಣು ಹಂಪಲುಗಳನ್ನು, ಸೀರೆ-ಕುಬಸವನ್ನು ನೀಡುವಂತಹ ಪದ್ಧತಿ ಇದೆ. ಮರುದಿನ ಎಲ್ಲರಿಗೂ ಮಾಂಸಹಾರ ಊಟವನ್ನು ಮಾಡಿಸುವಂತಹ ಕಾರ್ಯವನ್ನು ಮಾಡುತ್ತಾರೆ.

೪.೭.೮.೨ ಮದುವೆ ಸಂದರ್ಭದಲ್ಲಿ ಮಾದಿಗರ ಆಹಾರ ಪದ್ಧತಿ

ಮಾದಿಗ ಸಮುದಾಯದಲ್ಲಿ ಸುಮಾರು ೪ರಿಂದ ೫ ದಿನಗಳವರೆಗೆ ಮದುವೆ ಆಚರಣೆಯನ್ನು ಮಾಡುತ್ತಾರೆ. ಮೊದಲನೇ ದಿನ 'ಅರಣಿ' ಆಚರಣೆ ಮಾಡುತ್ತಾರೆ, ಅಂದು ಗೋದಿಪಾಯಸ, ಬದನೆಕಾಯಿ ಪಲ್ಯ, ಅನ್ನ, ಸಾಂಬಾರ್ ಊಟ ಮಾಡಿಸುತ್ತಾರೆ. ಎರಡನೇ ದಿನ ಮದುವೆ ಗಂಡು ಮದುವೆ ಹೆಣ್ಣಿನ ಮನೆಗೆ ಹೋಗುವಂತಹ ಸಂದರ್ಭದಲ್ಲಿ ಅನ್ನ, ಸಾಂಬಾರ್ ಮಾಡುತ್ತಾರೆ. ಆದರೆ ಹಿಂದೆ ಹುರುಳಿ ಮುದ್ದೆ, ನವಣೆ ಅನ್ನ, ಹುರುಳಿ ಸಾಂಬಾರ್ ಮದುವೆ ಮನೆಯಲ್ಲಿ ಮಾಡುತ್ತಿದ್ದರು.

ಇತ್ತೀಚಿನ ದಿನಗಳಲ್ಲಿ ಲಡ್ಡು, ಖಾರ, ಪಲಾವ್, ಬದನೆಕಾಯಿ ಪಲ್ಯ, ಅನ್ನ ಸಾಂಬಾರ್ ಇನ್ನು ಅನೇಕ ರೀತಿಯ ಆಹಾರವನ್ನು ಮಾಡುತ್ತಾರೆ. ತಾಳಿ ಕಟ್ಟಿದ ನಂತರವಾಗಿ ಬುಮಲು ಎನ್ನುವಂತಹ ಆಚರಣೆಯನ್ನು ಮಾಡುತ್ತಾರೆ. ಇಲ್ಲಿ ಎಂಟು ಸೇರು ಅಕ್ಕಿಯ ಅನ್ನ ಇದಕ್ಕೆ ಸರಿಹೊಂದುವ ರೀತಿಯಲ್ಲಿ ಬೆಲ್ಲದ ಪಾನಕ ಮಾಡಿ ಅವು ಎರಡನ್ನು ಮಿಶ್ರಣ ಮಾಡಿ ಬಂದಿರುವ ಸಂಬಂಧಿಕರಿಗೆ ನೀಡುವಂತಹ ಆಚರಣೆ. ಕೊನೆಯ ದಿನ ಬೀಗರ ಊಟ ಮಾಡುತ್ತಾರೆ. ಬಂದಿರುವಂತಹ ಸಂಬಂಧಿಕರಿಗೆ ಹಾಗೂ ಊರಿನ ಮಾದಿಗ ಸಮುದಾಯದ ಜನರಿಗೆ ಮಾಂಸದ ಊಟವನ್ನು ಹಾಕುವಂತಹ ಪದ್ಧತಿ ಈ ಸಮುದಾಯದಲ್ಲಿ ಸಾಂಪ್ರದಾಯಿಕವಾಗಿ ರೂಢಿಸಿಕೊಂಡಿದ್ದಾರೆ.

೪.೭.೮.೩ ಗರ್ಭಿಣಿ ಸ್ತ್ರೀಯರಿಗೆ ಕೊಡುವ ಕೆಲವು ಆಹಾರಗಳು

ಸ್ತ್ರೀ ಗರ್ಭಿಣಿಯಾದಾಗ ಪೋಷಕಾಂಶಗಳ ಬೇಡಿಕೆ ಹೆಚ್ಚಾಗುವುದು ಸಹಜ. ಈ ಸಮಯದಲ್ಲಿ ಗರ್ಭದಲ್ಲಿರುವ ಮಗುವಿನ ಬೆಳವಣಿಗೆ ಹಾಗೂ ತಾಯ್ತನದ ತಯಾರಿಗಾಗಿ ಹೆಚ್ಚಿನದಾಗಿ ಪೋಷಕಾಂಶಗಳ ಅವಶ್ಯಕತೆ ಇರುತ್ತದೆ. ಈ ಅವಶ್ಯಕತೆಯನ್ನು ನೀಗಿಸಲು ನಮ್ಮ ಪರಂಪರೆಯಲ್ಲಿ ಹಲವು ಬಗೆಯ ಸಂಪ್ರದಾಯಗಳು ಹುಟ್ಟಿಕೊಂಡು ರೂಢಿಗತವಾಗಿರುವುದನ್ನು ಕಾಣುತ್ತೇವೆ. ಸ್ತ್ರೀ ಗರ್ಭಿಣಿ ಎಂದು ತಿಳಿದಾಗ ಸಾಮಾನ್ಯವಾಗಿ ಗರ್ಭಿಣಿ ಸ್ತ್ರೀಯ ತವರು ಮನೆಯವರು, ಪರಿಚಯಸ್ಥರು, ನೆರೆಹೊರೆಯವರು ವಿಶೇಷವಾಗಿ ವಿವಿಧ ಬಗೆಯ ಆಹಾರ ಪದಾರ್ಥಗಳನ್ನು ತಯಾರಿಸಿಕೊಡುವುದುಂಟು. ಅದಕ್ಕೆಂದೇ ವಿಶೇಷ ಆಹಾರಗಳನ್ನು ರೂಢಿಸಿಕೊಂಡಿರುವುದುಂಟು.

- **ಪುಂಡಿ ಸೊಪ್ಪು**

ಮಾದಿಗರಲ್ಲಿ ಗರ್ಭಿಣಿ ಸ್ತ್ರೀಯರಿಗೆ ಪುಂಡಿ ಸೊಪ್ಪಿನ ಸಾಂಬಾರು ಮತ್ತು ರಾಗಿ ಮುದ್ದೆಯನ್ನು ಕೊಡುತ್ತಾರೆ. ಇದರಲ್ಲಿ ವಿಶೇಷತೆ ಎಂದರೆ ಎಲೆಗಳಲ್ಲಿ ಮುಖ್ಯವಾಗಿ ಸಾರಜನಕ, ಶರ್ಕರ ಪಿಷ್ಟಗಳು, ಖನಿಜಾಂಶಗಳು, ಸಿ–ಜೀವಸತ್ವ, ಬೀಟಾ ಸೋಟೋಸ್ಥಿರಾಲ್ ರಾಸಾಯನಿಕ ವಸ್ತುಗಳಿರುತ್ತವೆ. ಎಲೆ ಮತ್ತು ತೊಟ್ಟನ್ನು ಬೇಯಿಸದೆಯೇ ಅಥವಾ ಬೇಯಿಸಿ ಸೊಪ್ಪು ತರಕಾರಿಯಾಗಿ ಬಳಸುತ್ತಾರೆ. ಜೊತೆಗೆ ಚಟ್ನಿ, ಸೂಪ್, ಸಾಸ್ ಮುಂತಾದವನ್ನು ಎಲೆಗಳಿಂದ ತಯಾರುಮಾಡಿ ಗರ್ಭಿಣಿ ಸ್ತ್ರೀಯರಿಗೆ ನೀಡಲಾಗುತ್ತದೆ. ಇದರಿಂದ ಮೂತ್ರಸ್ರಾವ ಉತ್ತೇಜಕ, ಶಾಮಕ ಶೀತಕವಾಗಿ ಬಳಸಲಾಗುತ್ತದೆ.

- **ನುಗ್ಗೆ ಸೊಪ್ಪು ಮತ್ತು ರಾಗಿ ಮುದ್ದೆ**

ಮಾದಿಗರು ಗರ್ಭಿಣಿ ಸ್ತ್ರೀಯರಿಗೆ ನುಗ್ಗೆ ಸೊಪ್ಪು ಮತ್ತು ರಾಗಿ ಮುದ್ದೆಯನ್ನು ನೀಡುತ್ತಾರೆ. ಬೇಳೆಯನ್ನು ನುಗ್ಗೆ ಸೊಪ್ಪು ಹಾಕಿ ಬೇಯಿಸಿ ಅದರಿಂದ ಬಂದಂತಹ ರಸವನ್ನು ಸಾಂಬಾರಿಗೆ ಬಳಸುತ್ತಾರೆ. ಈ ಸಾಂಬಾರ ಜೊತೆಗೆ ಬಹುತೇಕ ಗರ್ಭಿಣಿ ಸ್ತ್ರೀಯರಿಗೆ ರಾಗಿ ಮುದ್ದೆಯನ್ನು ನೀಡುತ್ತಾರೆ. ಜೊತೆಗೆ ಬೇಳೆ ಮತ್ತು ಸೊಪ್ಪುಗಳನ್ನು ಆಹಾರದ ಜೊತೆಗೆ ಸೇವನೆ ಮಾಡುವಂಥ ರೂಢಿ ಮಾದಿಗರಲ್ಲಿದೆ. ಸೊಪ್ಪು ರಾಗಿ ಮುದ್ದೆ ದೇಹಕ್ಕೆ ತಂಪು, ಶಕ್ತಿಯನ್ನು ನೀಡುತ್ತದೆ. ನುಗ್ಗೆಸೊಪ್ಪಿನಲ್ಲಿ

ಕಬ್ಬಿಣದ ಅಂಶವಿರುವುದರಿಂದ ಗರ್ಭಿಣಿ ಸ್ತ್ರೀಯರಿಗೆ ಕೊಡುತ್ತಾರೆ. ಇದರ ಜೊತೆಗೆ ಸಾಮಾನ್ಯವಾಗಿ ಸಿಗುವಂತಹ ಆಹಾರವನ್ನು ಬಳಸುತ್ತಾರೆ.

೪.೭.೮.೪ ಬಾಣಂತಿಗೆ ನೀಡುವ ಆಹಾರ ಪದ್ಧತಿ

• ದನದ ಮಾಂಸ ಮತ್ತು ರಾಗಿ ಮುದ್ದೆ

ಗ್ರಾಮೀಣ ಪ್ರದೇಶದ ಮಾದಿಗ ಸಮುದಾಯದಲ್ಲಿ ಬಾಣಂತಿ ಮಹಿಳೆಯರಿಗೆ ಹೆರಿಗೆಯಾದ ಮೂರು ದಿನದಲ್ಲಿ ತಾಯಿಯ ಎದೆಹಾಲನ್ನು ಹೆಚ್ಚಿಸುವ ಸಲುವಾಗಿ ತಿನ್ನಲು ಹಸುವಿನ ಅಥವಾ ದನ ಮಾಂಸವನ್ನು ನೀಡುತ್ತಾರೆ. ಈ ಸಮುದಾಯದ ಹಿರಿಯ ಮಹಿಳೆಯರು ಹೇಳುವ ಪ್ರಕಾರ ಮಗು ದಷ್ಟಪುಷ್ಟವಾಗಿ ಬೆಳೆಯಲು ಮತ್ತು ಯಾವುದೇ ರೋಗ ಬರುವುದಿಲ್ಲ ಎನ್ನುವ ಉದ್ದೇಶಕ್ಕಾಗಿ ಈ ಮಾಂಸವನ್ನು ತಿನ್ನಿಸುತ್ತಾರೆ. ಇದರ ಜೊತೆಗೆ ಒಣಗಿಸಿದ ಮೀನು, ಹಾಗಲಕಾಯಿ, ಪಡುವಲಕಾಯಿ, ಮೊಟ್ಟೆ, ಹೆಸರುಕಾಳು, ಹುರುಳಿಕಾಳು, ಬೇಳೆಕಾಳು ಮತ್ತು ಮದ್ಯವನ್ನು ಗರ್ಭಿಣಿ ಹಾಗೂ ಬಾಣಂತಿಯರಿಗೆ ಆರೋಗ್ಯಕ್ಕೆ ಒಳ್ಳೆಯದು ಎನ್ನುವಂಥ ದೃಷ್ಟಿಯಿಂದ ಸೇವಿಸಲು ಕೊಡುತ್ತಾರೆ.

• ಮಕ್ಕಳಿಗೆ ನೀಡುವ ಆಹಾರ ಪದ್ಧತಿ

ಮಾದಿಗ ಸಮುದಾಯದಲ್ಲಿ ಹುಟ್ಟಿನಿಂದ ಹಿಡಿದು ಸುಮಾರು ಎರಡು ವರ್ಷಗಳವರೆಗೆ ತಾಯಿಯ ಎದೆಹಾಲು ಕುಡಿಸುತ್ತಾರೆ. ತಾಯಿ ಎದೆಹಾಲು ಇಲ್ಲದ ಸಂದರ್ಭದಲ್ಲಿ ರಾಗಿಯ 'ಅಂಬಲಿ' ಕೊಡುತ್ತಾರೆ. ರಾಗಿಯ ಅಂಬಲಿ ತಾಯಿ ಎದೆಹಾಲಿನಷ್ಟೇ ಶ್ರೇಷ್ಠತೆಯನ್ನು ಹೊಂದಿದೆ ಎನ್ನುವುದು ಇವರ ನಂಬಿಕೆ. ರಾಗಿಯನ್ನು ೨ ಗಂಟೆಗಳ ಕಾಲ ನೆನೆಸಿ ಮೊಳಕೆ ಬರಿಸಿ ನಂತರ ಸಣ್ಣಉರಿಯಲ್ಲಿ ಘಂ ಎನ್ನುವಂತೆ ಹುರಿದು ಪುಡಿಮಾಡಿ ಬಟ್ಟೆಯಲ್ಲಿ ಶೋಧಿಸಿ ಹಿಟ್ಟು ತೆಗೆದುಕೊಂಡು ಜೀರಿಗೆ, ಲವಂಗವನ್ನು ಬೆಚ್ಚಗೆ ಮಾಡಿ ಆರಿದ ನಂತರ ಪುಡಿ ಮಾಡಿ ಬಿಸಿನೀರಿನಲ್ಲಿ ಕುದಿಸಿ ಅದನ್ನು ಆರಿಸಿ ಮಗುವಿಗೆ ನೀಡುತ್ತಾರೆ. ಇದರಲ್ಲಿ ಪ್ರೋಟಿನ್ ಮಿಟಮಿನ್‌ಗಳು ಇರುವುದರಿಂದ ಮಕ್ಕಳಿಗೆ ಆರೋಗ್ಯಕ್ಕೆ ಉತ್ತಮ, ಜೀರ್ಣವೂ ಸುಲಭ.

• ಹಸು ಅಥವಾ ಎಮ್ಮೆಯ ಹಾಲು

ಮಾದಿಗ ಸಮುದಾಯದಲ್ಲಿ ಹುಟ್ಟಿದ ಮೂರು ದಿನದಲ್ಲಿ ತಾಯಿಯ ಎದೆಹಾಲು ಇಲ್ಲದಂತಹ ಸಮಯದಲ್ಲಿ ಹಸುವಿನ ಹಾಗೂ ಎಮ್ಮೆ ಹಾಲು ಕುಡಿಸುತ್ತಾರೆ. ಇನ್ನೊಂದು ವಿಶೇಷವೆಂದರೆ ಹುಟ್ಟಿದ ಮೂರು ದಿನದಲ್ಲಿ ಮಗುವಿಗೆ ಕತ್ತೆ ಹಾಲು ಕುಡಿಸುತ್ತಾರೆ. ಇದರಲ್ಲಿ ರೋಗ ನಿರೋಧಕ ಶಕ್ತಿ ಜಾಸ್ತಿಯಿದೆ ಎನ್ನುವ ಕಾರಣಕ್ಕೆ ಈ ಹಾಲನ್ನು ಹಾಕುತ್ತಾರೆ. ಹುಟ್ಟಿದ ಮೂರು ದಿನದಲ್ಲಿ ಬೇರೆ ಯಾವುದೇ ಹಾಲನ್ನು ಕೊಡುವುದಿಲ್ಲ. ನಿರಂತರವಾಗಿ ಹಸುವಿನ ಅಥವಾ ಎಮ್ಮೆ ಹಾಲು ಕೊಡುತ್ತಾರೆ.

ಇದರ ಜೊತೆಗೆ ನಿಂಬೆ, ಎಲೆ, ಜೀರಿಗೆ ಮತ್ತು ಅರಿಶಿಣ ಮಿಶ್ರಣವನ್ನು ಚಿಕ್ಕ ಮಕ್ಕಳಿಗೆ ನೆಕ್ಕಿಸುವುದರಿಂದ ಜೀರ್ಣಕ್ರಿಯೆ ಸರಾಗವಾಗಲು ಸಹಾಯಕಾರಿಯಾಗುತ್ತದೆ ಎಂದು ನಂಬಿದ್ದಾರೆ.

ಜೇನಿನೊಂದಿಗೆ ಉಪ್ಪನ್ನು ಬೆರೆಸಿ ಕೊಡುವುದರಿಂದ ಮಕ್ಕಳ ಚರ್ಮ ಕಾಂತಿಯುಕ್ತವಾಗುತ್ತದೆಂದು ಇವರ ನಂಬಿಕೆ.

೪.೭.೮.೫ ಆರೋಗ್ಯಕ್ಕೆ ಸಂಬಂಧಿಸಿದ ಕೆಲವು ಗಿಡಮೂಲಿಕೆ

• ಬಜೆ

ಬಾಣಂತಿಯಾದ ಸಂದರ್ಭದಲ್ಲಿ ತಾಯಿ ಕೊರಳಿಗೆ ಬಜೆಯನ್ನು ಕಟ್ಟುತ್ತಾರೆ. ಮಕ್ಕಳಲ್ಲಿ ಕಫ, ದಮ್ಮು, ಉಬ್ಬಸರೋಗ, ಭೇದಿ, ಹಸಿವು, ಮೂರ್ಛೆರೋಗ ಮತ್ತು ಜ್ಞಾಪಕಶಕ್ತಿಯನ್ನು ಹೆಚ್ಚಿಸಲು ರೋಗವನ್ನು ನಿಯಂತ್ರಣ ಮಾಡಲು ಉಪಯೋಗಿಸುತ್ತಾರೆ. "ಬಜೆಯು ಒಂದು ಸುಗಂಧ ಸಸ್ಯವೂ ಸಹ ಹೌದು" ಅಲ್ಲದೆ ಕಹಿಯಾಗಿರುವ ಬೇರು ಕಾಂಡಗಳನ್ನು ಯುನಾನಿ ಔಷಧಿ ಪದ್ಧತಿಯಲ್ಲಿ ಮೆದುಳಿನ ಶಕ್ತಿವರ್ಧಕವಾಗಿ ಉಪಯೋಗಿಸುವ ಬಗ್ಗೆ ಉಲ್ಲೇಖವಿದೆ. ಒಣಗಿದ ಬೇರು ಕಾಂಡವನ್ನು ನೀರಿನಲ್ಲಿ ತೇದಿ ತಾಯಿಯ ಎದೆಹಾಲಿನಲ್ಲಿ ಮಿಶ್ರಣ ಮಾಡಿ ಮಗುವಿಗೆ ಲಸಿಕೆಯ ರೀತಿಯಲ್ಲಿ ಹಾಕುತ್ತಾರೆ.

ಮಾನವ ಇತಿಹಾಸದಲ್ಲಿ ಪ್ರತಿಯೊಬ್ಬರು ಆಹಾರದ ಬಗೆಗೆ ಮಹತ್ವವನ್ನು ನೀಡುತ್ತಾ ಬಂದಿದ್ದಾರೆ. ಮಾದಿಗ ಸಮುದಾಯದ ಜನರು ಮಾಂಸಹಾರಿಗಳು ಹೌದು, ಸಸ್ಯಹಾರಿಗಳು ಹೌದು. ಇವರಿಗೆ ಮಾಂಸಹಾರ ಅಂದರೆ ಪಂಚಪ್ರಾಣ. ಆದ್ದರಿಂದ ಹೆಚ್ಚಿನದಾಗಿ ಮಾಂಸಹಾರವನ್ನು ಸೇವನೆ ಮಾಡುತ್ತಾರೆ. ಮತ್ತೊಂದು ಅಂಶವೆಂದರೆ ಬೇರೆ ಸಮುದಾಯದ ಮತ್ತು ಇವರ ಹಸುಗಳು ಸತ್ತರೆ ಅವುಗಳನ್ನು ಊರಿನಿಂದ ಹೊರಗೆ ಹಾಕುವ ಮತ್ತು ಅದರ ಚರ್ಮ ಸುಲಿಯುವ, ಅದರ ಮಾಂಸ ತಿನ್ನುವ ಮಾದಿಗರು ಉಳಿದ ಮಾಂಸವನ್ನು ಒಣಗಿಸಿ ಅದನ್ನು ದಿನ ನಿತ್ಯದ ಬಳಕೆಗೆ ಉಪಯೋಗಿಸುತ್ತಾರೆ. ಇತ್ತೀಚಿನ ದಿನಮಾನಗಳಲ್ಲಿ ಕೆಲವರು ನಗರ ಪ್ರದೇಶಗಳಿಗೆ ವಲಸೆ ಹೋಗಿರುವುದರಿಂದ ಅವರ ಆಹಾರಗಳಲ್ಲಿ ಕೆಲವು ಬದಲಾವಣೆಯನ್ನು ನೋಡಬಹುದು.

೪.೮ ಕೌಟುಂಬಿಕ ವ್ಯವಸ್ಥೆ

ಸಮಾಜ ನಿರ್ಮಾಣ ಮಾಡುವಲ್ಲಿ ಸಮಾಜವನ್ನು ಜೀವಂತವಾಗಿ ಇಡಲು ಹಾಗೂ ಜೀವ ಜಗತ್ತನ್ನು ಒಂದುಗೂಡಿಸುವ ಪ್ರಕ್ರಿಯೆ ಪ್ರಾರಂಭವಾಗುವುದೇ ಕುಟುಂಬದಿಂದಲೇ ಎಂದು ಹೇಳಬಹುದು. ಮಾಂಸದ ಮುದ್ದೆಯಂತೆ ಇರುವ ಮಗುವನ್ನು ಸಾಮಾಜಿಕರಣಗೊಳಿಸಿ ಉತ್ತಮ ನಡವಳಿಕೆಯನ್ನು ಬೆಳೆಸಿಕೊಳ್ಳಲು ಸಹಕಾರಿಯಾಗಿದೆ. ಮಾನವನು ಒಂದು ಕಡೆ ನೆಲೆ ನಿಂತುಕೊಳ್ಳಲು ಕುಟುಂಬವು ಬಹಳ ಮಹತ್ವರವಾದ ಪಾತ್ರವನ್ನು ನಿಭಾಯಿಸುತ್ತದೆ. ಕುಟುಂಬವು ಬಹುಕಾಲ ಬಾಳುವಂತಹ, ಸಹಜೀವನ ನಡೆಸುವಂತಹ ಸಾಮಾಜಿಕ ಸಂಸ್ಥೆಯಾಗಿದೆ. "ಸಾಮಾಜಿಕ ವ್ಯವಸ್ಥೆಯ ರಚನೆಯನ್ನು ಕುಟುಂಬದ ಮೂಲ ತತ್ವಗಳನ್ನಾದರಿಸಿ ರಚಿಸಲಾಗಿದೆ. ಒಂದು ಸಾಮಾಜಿಕ ವ್ಯವಸ್ಥೆಯ ಮುನ್ನಡೆಗೆ ಅಥವಾ ಹಿನ್ನೆಡೆಗೆ ಕುಟುಂಬದ ಮೂಲ ತತ್ವಗಳು ಸಹಾಯಕವಾಗಿರುತ್ತದೆ. ಸಾಮಾಜಿಕ

ವ್ಯವಸ್ಥೆಯಂಟಾದುದು ಕುಟುಂಬ ರಚಿತವಾದ ಮೇಲೆ ಹೇಳಬಹುದು. ಎಲ್ಲ ಸಾಮಾಜಿಕ ವ್ಯವಸ್ಥೆ ಹದಗೆಟ್ಟಿದೆಯೋ ಅಲ್ಲಿ ಕುಟುಂಬ ವ್ಯವಸ್ಥೆ ಕುಸಿದು ಬಿದ್ದಿದೆ ಎಂದು ನಿರ್ವಿವಾದವಾಗಿ ಹೇಳಬಹುದು."[೪]

ಸಾಮಾಜಿಕ ವ್ಯವಸ್ಥೆಯ ಸುಗಮವಾದ ಮುನ್ನಡೆಗೆ ಕುಟುಂಬ ನಿರ್ದೇಶನವನ್ನೊದಗಿಸುತ್ತದೆ. ಕುಟುಂಬವು ಸಾಮಾಜಿಕ ಪ್ರಕ್ರಿಯೆಯನ್ನು ಮಾತ್ರವಲ್ಲದೆ ಸಾಮಾಜಿಕ ವ್ಯವಸ್ಥೆಯನ್ನು ಕಾಪಾಡಿಕೊಂಡು ಬರಲು ಅವಶ್ಯಕವಾದ ನಿಯಮಗಳನ್ನು ರಚಿಸುವಲ್ಲಿ ಕುಟುಂಬದ ಪಾತ್ರ ಹಿರಿದು. ಶಾಂತಿಪಾಲನೆ, ನಿಯಮ ಬದ್ಧತೆ, ಪ್ರಾಮಾಣಿಕತೆ, ಸಭ್ಯತೆ ಮುಂತಾದವುಗಳು ವ್ಯಕ್ತಿ ಮತ್ತು ಸಮಾಜವನ್ನು ವ್ಯವಸ್ಥಿತವಾಗಿ ಕಾಯ್ದುಕೊಳ್ಳುವ ಮೂಲ ಪರಿಕಲ್ಪನೆ. "ಕುಟುಂಬವು ಭಾವನಾತ್ಮಕ ಅವಶ್ಯಕತೆಗಳನ್ನು ಪೂರೈಸುವ ಒಂದು ಮುಖ್ಯ ನೆಲೆ. ಮಾನವನ ಪ್ರೇಮ, ಕಾಮ, ಸ್ವಾರ್ಥ, ತ್ಯಾಗ, ಸ್ನೇಹ, ದ್ವೇಷ ಮುಂತಾದ ಭಾವನಾತ್ಮಕ ಅವಶ್ಯಕತೆಗಳ ಪೂರೈಕೆಯೇ ಕಾರಣವೆಂದು ಹೇಳಬಹುದು. ಎಲ್ಲಿ ಅವಶ್ಯಕತೆಗಳನ್ನು ಹಣಕೊಟ್ಟರೆ ಪೂರೈಸಬಲ್ಲ ಅನೇಕ ವ್ಯವಸ್ಥೆಗಳಿದ್ದರೂ ಪ್ರೀತಿ, ಪ್ರೇಮ ಇವುಗಳನ್ನು ನೀಡುವುದಕ್ಕೆ ವ್ಯವಸ್ಥೆ ಎಂದರೆ ಕುಟುಂಬ. ತಾಯಿ, ಮಕ್ಕಳ ನಿರ್ವಾಜ್ಯ ಪ್ರೇಮ, ಗಂಡ, ಹೆಂಡತಿ ಆಕರ್ಷಣೆ ಮತ್ತು ಜವಾಬ್ದಾರಿ ಇವುಗಳನ್ನು ಕುಟುಂಬದಲ್ಲದೆ ಬೇರೆಲ್ಲಿ ಕಾಣಲು ಸಾಧ್ಯವಿಲ್ಲ."[೫]

ಕುಟುಂಬದ ಪ್ರತಿಯೊಂದು ಸದಸ್ಯನೂ ಕುಟುಂಬದ ಒಟ್ಟು ಹಿತಾಸಕ್ತಿಗಳಿಗೆ ಪೂರಕವಾಗಿ ನಡೆದುಕೊಳ್ಳುವ ಹೊಣೆಯುಳ್ಳವನಾಗಿರುತ್ತಾನೆ. ಕುಟುಂಬದ ಕಲ್ಯಾಣಕ್ಕಾಗಿ ಶ್ರಮಿಸುವುದು ಆತನ ಕರ್ತವ್ಯ ಕುಟುಂಬದ ಘನತೆ, ಗೌರವ ಹಾಗೂ ಮನೆತನದ ಮರ್ಯಾದೆ ಮತ್ತು ಪರಂಪರಾಗತ ಪದ್ಧತಿಗಳನ್ನು ಸಂಕ್ಷಿಸುವ ಕಾರ್ಯಕ್ಕೆ ಪ್ರತಿಯೊಬ್ಬನೂ ಬದ್ಧನಾಗಿರುತ್ತಾನೆ. ಅಂತೆಯೇ ಕುಟುಂಬದ ಪ್ರತಿಯೊಬ್ಬ ಸದಸ್ಯನ ರಕ್ಷಣೆ, ಪೋಷಣೆ ಹಾಗೂ ಯೋಗಕ್ಷೇಮವು ನೋಡಿಕೊಳ್ಳುವ ಹೊಣೆಯಾಗಿರುತ್ತದೆ. ಕುಟುಂಬದ ಹಿರಿಯ ಯಜಮಾನ ಸಾಮಾನ್ಯವಾಗಿ ಎಲ್ಲ ಕಾರ್ಯಗಳ ಬಗ್ಗೆ ವಿಶೇಷ ಗಮನಹರಿಸುವವನಾಗಿದ್ದು, ಎಲ್ಲ ವಿಷಯಗಳಲ್ಲೂ ಉಳಿದವರಿಗೆ ಮಾದರಿಯಾಗಿ, ಮಾರ್ಗದರ್ಶಕನೂ ಆಗಿರುತ್ತಾನೆ.

ಪರಂಪರಾಗತವಾದ ಮಾದಿಗ ಸಮುದಾಯದ ಕುಟುಂಬವು ಹೆಚ್ಚಿನ ಎಲ್ಲ ವಿಷಯಗಳಲ್ಲಿ ಶಿಸ್ತಿಗೆ ಹಾಗೂ ಸಂಪ್ರದಾಯಕ್ಕೆ ಒಳಗಾಗಿದ್ದರೂ ಎಲ್ಲವನ್ನು ವ್ಯವಸ್ಥಿತವಾಗಿ ನಿಗದಿತ ರೀತಿಯಂತೆ ಸಾಂಪ್ರದಾಯಿಕ ಮಾದರಿಯಲ್ಲಿಯೇ ತಮ್ಮ ಜೀವನ ಕ್ರಮವನ್ನು ನಡೆಸುವ ಹಾಗೂ ವ್ಯವಹಾರದಿಂದ ಹಿಡಿದು ಆಸ್ತಿಯನ್ನು ಕೊಡುವ, ಕೊಳ್ಳುವ ಹಾಗೂ ಮಕ್ಕಳಿಗೆ ಶಿಕ್ಷಣ ನೀಡಿವ ಇಲ್ಲವೇ ವಿವಾಹ ಮಾಡುವಂತಹ ಮುಖ್ಯ ವಿಷಯಗಳವರೆಗೆ ಸಂಬಂಧಿಸಿದಂತೆ ಅನೇಕ ವಿಚಾರಗಳಿಗೆ ಕುಟುಂಬದ ಪಾತ್ರ ಮುಖ್ಯ. ಅತಿಥಿ ಸತ್ಕಾರ, ಹಿರಿಯರಿಗೆ ನೀಡುವ ಗೌರವ, ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸುವ ಹಾಗೂ ಅವುಗಳಲ್ಲಿ ಭಾಗಿಗಳಾಗುವ ಶ್ರದ್ಧಾತ್ಮಕ ರೀತಿ, ಮಕ್ಕಳನ್ನು ಬೆಳೆಸುವ ರೀತಿ, ಹಣಕಾಸಿನ ವಿಚಾರಕ್ಕೆ ಸಂಬಂಧಿಸಿದ ವರ್ತನೆ ಇವೆಲ್ಲವುಗಳಿಗೆ ಸಂಬಂದಿಸಿದಂತೆ ಹಿಂದಿನ ಬಿಗುವು, ಜಿಗುಟುತನ ಕಟ್ಟುನಿಟ್ಟಾಗಿ ಎಲ್ಲ ಸದಸ್ಯರು ಅನುಸರಿಸಿಕೊಂಡು ಬಂದಿರುವಂಥ ವ್ಯವಸ್ಥೆಯನ್ನು ನೋಡಬಹುದು."[೬]

ಕುಟುಂಬವನ್ನು ಮುನ್ನಡೆಸಲು ಮುಖ್ಯವಾಗಿ ಕುಟುಂಬದಲ್ಲಿ ಸ್ತ್ರೀ ಪುರುಷರು ಸಮಾನರು. ಕುಟುಂಬವನ್ನು ಸಾಮಾನ್ಯವಾಗಿ ಎರಡು ರೀತಿಯಾಗಿ ವರ್ಗೀಕರಿಸಲಾಗಿದೆ. ಅವುಗಳೆಂದರೆ ಪಿತೃ ಪ್ರಧಾನ ಕುಟುಂಬ, ಮಾತೃ ಪ್ರಧಾನ ಕುಟುಂಬ ವ್ಯವಸ್ಥೆ. ಪಿತೃ ಪ್ರಧಾನ ಕುಟುಂಬ ಎಂದಕ್ಷಣ ಸ್ತ್ರೀಯರನ್ನು ಕಡೆಗಾಣಿಸುತ್ತಾರೆ ಎಂದು ಅರ್ಥವಲ್ಲ. ಕುಟುಂಬಕ್ಕೆ ಗಂಡ-ಹೆಂಡತಿ ಬಂಡಿಗೆ ಎರಡು ಚಕ್ರಯಿದ್ದ ಹಾಗೆ. ಆದಕಾರಣ ದಿನದ ಕೂಲಿಯನ್ನು ನೆಚ್ಚಿಕೊಂಡು ಜೀವನ ನಡೆಸುವ ಪರಿಸ್ಥಿತಿಯಿದೆ. ಕುಟುಂಬದಲ್ಲಿನ ಸ್ತ್ರೀ-ಪುರುಷರಿಬ್ಬರೂ ಕೂಲಿ ಮಾಡಿ ಜೀವನ ನಡೆಸುವ ಕ್ರಮವಿತ್ತು. ಕುಟುಂಬದ ಬೇಕು-ಬೇಡಗಳನ್ನ ಜವಾಬ್ದಾರಿ ಇಬ್ಬರು ಮೇಲೂ ಇರುವುದರಿಂದ ಸ್ತ್ರೀ-ಪುರುಷರು ಸಮಾನರು ಎಂದು ಹೇಳಬಹುದು.

ಮಾದಿಗ ಸಮುದಾಯದಲ್ಲಿ ಅವಿಭಕ್ತ ಕುಟುಂಬಗಳು ಹೆಚ್ಚಿನ ಪ್ರಮಾಣದಲ್ಲಿ ಇರುವುದು ಕಂಡು ಬರುತ್ತಿದ್ದವು. ಎಲ್ಲರ ಜೊತೆ ಕೂಡಿ ಬಾಳವ ಮನೋಧೋರಣೆಯನ್ನು ಹೊಂದಿದ್ದರು. ಈ ಕಾರಣಕ್ಕೆ ಅವಿಭಕ್ತ ಕುಟುಂಬಗಳು ಅಷ್ಟು ಪ್ರಚಲಿತವಾಗಿತ್ತು. ಇದರಲ್ಲಿ ಪಿತೃ ಅಥವಾ ತಂದೆಯ ಬಳಿಯಿಂದಲೇ ಗುರುತಿಸಲ್ಪಡುತ್ತಾರೆ. ವಿವಾಹ ಸಂದರ್ಭದಲ್ಲಿ ತಂದೆಯ ಬಳಿಯಿಂದ ವೈವಾಹಿಕ ಸಂಬಂಧವನ್ನು ಸೂಚಿಸಲಾಗಿದೆ. ಕುಟುಂಬದ ಜವಾಬ್ದಾರಿಯನ್ನು ಕುಟುಂಬದ ಹಿರಿಯ ಯಜಮಾನ ನಿರ್ವಹಿಸುತ್ತನೆ. ತಂದೆ ಸತ್ತ ನಂತರ ಹಿರಿಯ ಮಗ ಅಥವಾ ಕೊನೆಯ ಮಗ ಅಧಿಕಾರವನ್ನು ಚಲಾಯಿಸುವಂಥ ವ್ಯವಸ್ಥೆಯನ್ನು ನೋಡಬಹುದು. ಆದರೆ ಕೆಲವು ಸಂದರ್ಭಗಳಲ್ಲಿ ಕುಟುಂಬದ ಇತರೆ ಸದಸ್ಯರ ಅಭಿಪ್ರಾಯಗಳು ಮನ್ನಣೆಯನ್ನು ಪಡೆಯುತ್ತವೆ. ಕೆಲವು ಮುಖ್ಯವಾದ ಸಂದರ್ಭಗಳಲ್ಲಿ ಬೇಕು-ಬೇಡಗಳನ್ನು ಕುಟುಂಬದ ಎಲ್ಲ ಸದಸ್ಯರು ಸೇರಿ ತೀರ್ಮಾನ ತೆಗೆದುಕೊಳ್ಳುತ್ತಾರೆ. ಆದರೆ ಅಂತಿಮ ತೀರ್ಮ ಯಜಮಾನದ್ದೆ ಆಗಿರುತ್ತಾದೆ. ಹಬ್ಬ, ಜಾತ್ರೆ, ಉತ್ಸವದ ಸಮಯದಲ್ಲಿ ಕುಟುಂಬದ ಯಜಮಾನ ಅಪ್ಪಣೆಯ ಮೇರೆಗೆ ಎಲ್ಲವೂ ನಿರ್ಧರಿತವಾಗುವುದು ಕಂಡುಬರುತ್ತದೆ.

ಮದುವೆಯಾದ ನಂತರ ನವ ವಧು-ವರರಿಗೆ ಕುಟುಂಬದಲ್ಲಿ ಎಲ್ಲರ ಒಟ್ಟಿಗೆ ಜೀವನವನ್ನು ನಡೆಸುವಂತಹ ಸ್ವಾತಂತ್ರ್ಯವನ್ನು ಕೊಟ್ಟಿದ್ದಾರೆ. ಜವಾಬ್ದಾರಿಗಳು ಹೊರಿಸುವುದರ ಜೊತೆಗೆ ಕುಟುಂಬದ ವ್ಯವಸ್ಥೆಯನ್ನು ನಿರ್ವಹಿಸಿಕೊಂಡು ಹೋಗಬೇಕು. ತಂದೆ-ತಾಯಿಗಳ ಸಾಕುವ, ಸೋದರ-ಸೋದರಿಯರ ಮದುವೆ ಮಾಡುವ, ಮೂಲ ಮನೆಯಲ್ಲಿ ಯಾವುದಾದರೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದರೆ ಅವುಗಳನ್ನು ಮುಂದುವರಿಸಿಕೊಂಡು ಹೋಗಬೇಕು. ನಂತರ ಕುಟುಂಬದ ಕಾರ್ಯಕ್ರಮಗಳಿಗೆ ತಪ್ಪದೇ ಹಾಜರಾಗುತ್ತಾರೆ. ಕುಟುಂಬದಲ್ಲಿ ಎಲ್ಲ ಸದಸ್ಯರು ಹಿರಿಯರಿಗೆ ಪೂಜೆಯನ್ನು ಮಾಡುತ್ತಾರೆ. ಮೂಲ ಕುಟುಂಬದಲ್ಲಿ ಹಿರಿಯರ ಆಚರಣೆಯಿರುವುದರಿಂದ ಯಾವುದೇ ರೀತಿಯ ಮೈಲಿಗೆಯಾಗದಂತೆ ಎಚ್ಚರಿಕೆ ವಹಿಸಬೇಕು. ಕುಟುಂಬದ ಪ್ರತಿಯೊಬ್ಬ ಸದಸ್ಯರೂ ಕುಟುಂಬದ ಉಳಿಗೆಗಾಗಿ ಶ್ರಮಿಸುತ್ತಾರೆ. ಅಲ್ಲದೆ ಹಿರಿಯರಿಗೆ ಯಾವ ಅಪಚಾರವಾಗದಂತೆ ಮುಂಜಾಗ್ರತೆಯನ್ನು ವಹಿಸುತ್ತಾರೆ. ಪ್ರತಿವರ್ಷಕ್ಕೆ ಒಂದು ಬಾರಿ ಗೌರಿ ಗಣೇಶ ಹಬ್ಬದ ದಿನ ಹೆಣ್ಣುಮಕ್ಕಳಿಗೆ ಸೀರೆ ಕುಪ್ಪಸಗಳನ್ನು ಉಡಿಸಿ ಎಳ್ಳು

ಉಂಡೆ, ಹಣ್ಣು, ಅಕ್ಕಿ, ಎಲೆ ಅಡಿಕೆ ಉಡಿ ತುಂಬಿ ಕಳುಹಿಸಬೇಕು. ಇಂತಹ ಅನೇಕ ಆಚರಣೆಗಳನ್ನು ಕುಟುಂಬದ ಹಿರಿಯ ವ್ಯಕ್ತಿ ನಿಭಾಯಿಸುತ್ತಾನೆ.

ಮಾದಿಗ ಸಮುದಾಯದಲ್ಲಿ ಹಿಂದೆ ಅನನ್ಯವಾದ ಸಾಮಾಜಿಕ ಸಂಬಂಧಗಳ ಜೊತೆಗೆ ಎಲ್ಲ ಸದಸ್ಯರು ಸೇರಿ ಜೀವನವನ್ನು ಸಾಗಿಸುತ್ತಿದ್ದರು. ಯಾವುದೇ ಸಮಾರಂಭದಲ್ಲಿ ಅಥವಾ ಕೃಷಿಕಾರ್ಯ ಚಟುವಟಿಕೆಗಳಲ್ಲಿ ಸಹ ಎಲ್ಲ ಸದಸ್ಯರು ಒಟ್ಟಿಗೆ ಸೇರಿ ದುಡಿಯುವಂಥ ಕಾರ್ಯಪ್ರವೃತ್ತಿಯನ್ನು ನಡೆಸುತ್ತಿದ್ದರು. ಮತ್ತೆ ಹಿರಿಯನ ಮಾತನ್ನು ಎಲ್ಲರೂ ಪರಿಪಾಲಿಸುತ್ತಿದ್ದರು. ಈಗ ಹಾಗಲ್ಲ, ಬೇರೆ ಬೇರೆ ಕಡೆ ವಲಸೆ ಹೋಗುವ ಅನಿವಾರ್ಯತೆ ಇರುವುದರಿಂದಾಗಿ ಇಂದು ಕುಟುಂಬಗಳು ಒಡೆಯುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಅದೇ ವೇಳೆಗೆ ಹಿಂದಿನಂತೆ ಕುಟುಂಬ ಇಂದು ತನ್ನ ಸದಸ್ಯರ ವರ್ತನೆಗಳ ಮೇಲೆ ನಿಯಂತ್ರಣ ಹೇರಲಾರದು. ಆಹಾರ ವಿಹಾರ, ವೇಷಭೂಷಣ, ಸಂಗಾತಿಗಳ ಆಯ್ಕೆ ಮುಂತಾದ ವಿಷಯಗಳಿಗೆ ಸಂಬಂಧಿಸಿದ ಹಾಗೆ ಬದಲಾವಣೆಗಳು ಸಂಭವಿಸಿದೆ. ಕುಟುಂಬ ಎಂಬುದು ಈ ಕೇವಲ ಗಂಡ-ಹೆಂಡತಿ ತಿಂದುಂಡು ಮಲಗುವ ತಾಣವಾಗಿ ಪರಿಣಮಿಸಿದೆ. ಅವು ಹಿಂದಿನಂತೆ ಉತ್ಪಾದನೆ ಹಾಗೂ ಉಪಭೋಗದ ಘಟಕವಾಗಿ ಉಳಿದಿಲ್ಲ. ಕೇವಲ ಉಪಯೋಗದ ಘಟಕವಾಗಿದೆ. ಈ ಅಂಶಗಳನ್ನು ಪರಿಶೀಲಿಸಿದ ಮಾದಿಗ ಸಮುದಾಯದ ಕುಟುಂಬಗಳಲ್ಲಿ ಹೇಳಿಕೊಳ್ಳುವಂತಹ ಕೇಲವು ಬದಲಾವಣೆಗಳೇನೂ ಕಂಡುಬರುವುದಿಲ್ಲ. ಕುಟುಂಬದಲ್ಲಿ ಪ್ರತಿಯೊಬ್ಬರು ಮಕ್ಕಳನ್ನು ಶಾಲೆಗೆ ಕಳುಹಿಸುವಂಥ ವ್ಯವಸ್ಥೆ ಕಂಡುಬಂದಿದೆ. ಆದರೂ ಪ್ರಗತಿಪರ ಬದಲಾವಣೆಗಳು ಹೆಚ್ಚಿನ ಸುಧಾರಣೆಯಾಗಬೇಕಿದೆ.

೪.೯ ಉತ್ತರಾಧಿಕಾರತ್ವ

ಮಾನವ ಸಮಾಜ ಅತಿ ಮುಖ್ಯವಾದ ಪ್ರಾಥಮಿಕ ಘಟಕ. ಕುಟುಂಬವು ವಿಶಿಷ್ಟ ಬಗೆಯಲ್ಲಿ ತನ್ನ ಕಾರ್ಯ ವೈಖರಿಯನ್ನು ಪ್ರತಿನಿಧಿಸುತ್ತಿದೆ. ಆಯಾ ಸಮುದಾಯಗಳಿಗೆ ಅನುಸಾರವಾಗಿ ಕೆಲವು ಕಾರ್ಯವಿಧಾನಗಳು ಬದಲಾದರೂ ಅದು ಇಂದಿಗೂ ತನ್ನತನವನ್ನು ಉಳಿಸಿಕೊಂಡಿರುವ ವೈಶಿಷ್ಟ್ಯಪೂರ್ಣ ಸಂಸ್ಥೆಯಾಗಿದೆ. ಹಿಂದೆ ಮಾದಿಗ ಸಮುದಾಯದ ಕುಟುಂಬವು ಸಾಮಾನ್ಯವಾಗಿ ಪುರುಷ ಪ್ರಧಾನವಾಗಿದೆ. ಕುಟುಂಬದ ಹಿರಿಯ ಪುರುಷ ಯಜಮಾನನೆಂದು ಕರೆಸಿಕೊಳ್ಳುವವನು ಕುಟುಂಬದ ಅಧಿಕಾರವನ್ನು ಚಲಾಯಿಸುತಿದ್ದ. ಉಳಿದ ಸದಸ್ಯರುಗಳು ಸಾಮಾನ್ಯವಾಗಿ ಒಪ್ಪಿಕೊಂಡು ನಡೆಯುವರು. ಆತನ ಮಾತುಗಳನ್ನು ಧಿಕ್ಕರಿಸಿ ಅಥವಾ ವಿರುದ್ಧ ಮಾತನಾಡುವ ಪ್ರಮಾಣ ಬಹಳ ಅಪರೂಪ. ಕುಟುಂಬದ ವ್ಯವಹಾರಗಳಲ್ಲಿ ಕೊಡುವ-ತೆಗೆದುಕೊಳ್ಳುವ ವಿಚಾರಗಳಲ್ಲಿ ಮಕ್ಕಳ ವಿದ್ಯಾಭ್ಯಾಸ, ಉದ್ಯೋಗ ಹಾಗೂ ವಿವಾಹದ ವಿಷಯಗಳಲ್ಲಿ ಆತನ ಅಭಿಪ್ರಾಯವೇ ಅಂತಿಮವಾಗಿರುತ್ತದೆ. ಕುಟುಂಬದ ಹಿತದೃಷ್ಟಿಯಿಂದ ಹಾಗೂ ಕುಟುಂಬದ ಸದಸ್ಯರು ತನ್ನ ಬಗ್ಗೆ ಹೊಂದಿರುವ ಗೌರವಾದರ ಹಾಗೂ ವಿಶ್ವಾಸ ಭರವಸೆಗಳನ್ನು ಕಾಯ್ದುಕೊಳ್ಳುವ ದೃಷ್ಟಿಯಿಂದ ಯಜಮಾನನು ಅಧಿಕಾರವನ್ನು ದುರುಪಯೋಗ ಮಾಡುವುದು ಕಡಿಮೆ. ಇಂತಹ ಜವಾಬ್ದಾರಿಯುತ ಕೆಲಸಗಳಲ್ಲಿ ಯಜಮಾನನ

ಪಾತ್ರ ಗಣ್ಯವಾದದ್ದು ಎಂದು ಹೇಳಬಹುದು. ಬಹುತೇಕ ಮಾದಿಗ ಸಮುದಾಯದಲ್ಲಿ ಈ ತೆರನಾದ ಹಿರಿಯ ಯಜಮಾನ ಅಧಿಕಾರವನ್ನು ನಿಭಾಯಿಸುತ್ತಾನೆ ಎಂದು ಹೇಳಬಹುದು.

ಕುಟುಂಬದಲ್ಲಿ ಹಿರಿಯ ಯಜಮಾನ ಒಂದು ವೇಳೆ ಕಾರಣಾಂತರದಿಂದ ಸಾವನ್ನಪ್ಪಿದರೆ ಅಥವಾ ವೃದ್ಧಾಪ್ಯದಿಂದ ಸಾವಿಗೀಡಾದರೆ. ಅವನ ಉತ್ತರಾಧಿಕಾರತ್ವವನ್ನು ತಾಯಿ ಸಲಹೆ ಮೇರೆಗೆ ಹಿರಿಯ ಮಗ ಅಥವಾ ಕಿರಿಯಮಗ ಅಧಿಕಾರವನ್ನು ನಿಭಯಿಸುತ್ತಾನೆ. ಕುಟುಂಬದಲ್ಲಿ ವೈಮನಸ್ಸು ಅಥವಾ ಕೌಟುಂಬಿಕ ಜಗಳವುಂಟಾದರೆ ಮೂಲ ಮನೆಯಿಂದ ಹೊರಗೆ ಹೋಗಬೇಕಾಗುತ್ತದೆ. ತನ್ನ ಪಾಲಿಗೆ ಬಂದಿರುವ ತುಂಡು ಭೂಮಿ, ಮನೆ ಬಳಕೆ ವಸ್ತುಗಳನ್ನು ತೆಗೆದುಕೊಂಡು ಹೋಗುತ್ತಾನೆ. ಅಂದಿನಿಂದ ಮೂಲ ಕುಟುಂಬದ ಜವಾಬ್ದಾರಿಯಿಂದ ಕಳಚಿಕೊಂಡಂತಾಗುತ್ತದೆ. ಮನೆಯಲ್ಲಿ ಮಕ್ಕಳು ಇಲ್ಲದಿದ್ದರೆ ಅಥವಾ ವಯಸ್ಕರಾಗಿದ್ದರೆ ಮದುವೆ ಮಾಡುವ ಕೆಲವರು ಮರುಮದುವೆಗೆ ಇಷ್ಟಪಡುವುದಿಲ್ಲ. ಮರುಮದುವೆ ಪುರುಷರಿಗೆ ಮಾತ್ರ ಅವಕಾಶವನ್ನು ಈ ಸಮುದಾಯದಲ್ಲಿ ನೀಡುತ್ತಾರೆ. ಒಂದು ವೇಳೆ ಯಜಮಾನ ಸತ್ತರೇ ಹೆಂಡತಿಯು ಯಜಮಾನಿಕೆಯನ್ನು ವಹಿಸಿಕೊಳ್ಳುತ್ತಾನೆ. ಕೊನೆಯಲ್ಲಿ ಚಿಕ್ಕ ಮಗನು ವಿವಾಹವಾಗಿ ಮೂಲ ಕುಟುಂಬದಲ್ಲಿ ಉಳಿಯುವುದರಿಂದ ತಂದೆ ಸತ್ತ ನಂತರ ಯಜಮಾನಿಕೆ ಅವನ ಪಾಲಿಗೆ ಬರುತ್ತದೆ.

ಈಗಿನ ಬದಲಾದ ಪರಿಸ್ಥಿತಿಯಲ್ಲಿಯೂ ಮಾದಿಗ ಸಮುದಾಯದಲ್ಲಿ ಪುರುಷನಿಗೆ ಪ್ರಾಶಸ್ತ್ಯವಿದೆ. ಆದಾಗ್ಯೂ ಈಗಿನ ಕುಟುಂಬವನ್ನು ಪಿತೃ ಪ್ರಧಾನವಾದುದೆನ್ನುವಂತಿಲ್ಲ. ಅದು ಉಭಯ ಪ್ರಧಾನ ಅಥವಾ ಉಭಯಪಕ್ಷೀಯ ಕುಟುಂಬವೆಂದರೇನೇ ಸರಿಹೋದಿತು. ಅಂದರೆ ಈ ಕೌಟುಂಬಿಕ ವಿಚಾರಗಳಲ್ಲಿ ಸ್ತ್ರೀಯರಿಗೆ ಸ್ತ್ರೀಯರ ಅಭಿಪ್ರಾಯಗಳಿಗೆ ಬಹಳಷ್ಟು ಮಹತ್ವ ಬಂದಿದೆ ಸ್ತ್ರೀಯರು ಕುಟುಂಬದಿಂದ ಹೊರಗಡೆ ಬಂದು ದುಡಿಮೆಯಲ್ಲಿ ಅಥವಾ ಉದ್ಯೋಗದಲ್ಲಿರುವುದರಂತೂ ಅವರ ಮಾತಿಗೆ ಇನ್ನಷ್ಟು ಪ್ರಾಮುಖ್ಯವಿದೆ. ಹಿರಿಯ ಯಜಮಾನಿಕೆಯನ್ನು ಸಂಪೂರ್ಣ ತಿರಸ್ಕರಿಸಿದೆ ಎಂದು ಅರ್ಥವಲ್ಲ. ಕುಟುಂಬವು ಸಮಾಜದಲ್ಲಿ ಸರಾಗವಾಗಿ ನಡೆಯಬೇಕಾದರೆ ಇಲ್ಲಿ ಹಿರಿಯ-ಕಿರಿಯ ಮುಖ್ಯವೆನಿಸುವುದಿಲ್ಲ. ಆದ್ದರಿಂದ ವ್ಯಕ್ತಿವಾದದ ಪ್ರಭಾವದಿಂದಾಗಿ ಆತನ ಸಾಮರ್ಥ್ಯ ಹಾಗೂ ಸಾಧನೆಗಳಿಗೆ ಮಹತ್ವ ಲಭಿಸುವ ಸ್ಥಿತಿ ಕುಟುಂಬದಲ್ಲಿ ಇರುವುದರಿಂದ ಮುಖ್ಯವಾದ ತೀರ್ಮಾನಗಳನ್ನು ತೆಗೆದುಕೊಳ್ಳುವ ತಮ್ಮ ಪತ್ನಿಯರ ಹಾಗೂ ಸೋದರಿಯರ ಅಭಿಪ್ರಾಯವನ್ನು ಪರಿಗಣನೆಗೆ ತೆಗೆದುಕೊಳ್ಳುವರು. ಇಂತಹ ಕೆಲವು ಈ ಸಮುದಾಯದಲ್ಲಿ ಬದಲಾವಣೆಯನ್ನು ಹೊಂದಿರುವಂಥ ಅಂಶವನ್ನು ನೋಡಬಹುದು.

೪.೧೦ ಬಳಿಗಳು (ಕುಲ) ಮತ್ತು ಬಂಧುತ್ವ

ಪ್ರತಿಯೊಂದು ಸಮುದಾಯದ ಸಾಮಾಜಿಕ ಸಂಬಂಧವನ್ನು ಗುರುತಿಸುವಾಗ ಬಳಿಯ ಅಥವಾ ಕುಲದ ಪಾತ್ರ ಬಹಳ ಮುಖ್ಯವಾಗಿ ಗುರುತಿಸಿಕೊಳ್ಳುತ್ತದೆ. ಬಳಿಯನ್ನು ವಿವಿಧ ಪದಗಳಿಂದ ಪ್ರಾದೇಶಿಕವಾಗಿ ಹಲವಾರು ಅರ್ಥವನ್ನು ಕೊಡುವಂಥ ಪದಗಳನ್ನು ನೋಡಬಹುದು. ಬಳಿ, ಕುಲ,

ಬೆಡಗು ಇವುಗಳ ಹಿನ್ನೆಲೆಯಿಂದ ಮೂಲ ನೆಲೆಗಳ ಸಂಬಂಧವನ್ನು ತಿಳಿಯಲು ಸಹಕಾರಿಯಾಗುತ್ತದೆ. ಆದ್ದರಿಂದ ಪ್ರತಿಯೊಂದು ಮನೆತನಗಳು ಒಂದೊಂದು ಬಳಿ ಅಥವಾ ಕುಲಗಳನ್ನು ಹೊಂದಿರುತ್ತವೆ. ಬಳಿ ಅಥವಾ ಕುಲಗಳ ಆಧಾರದ ಮೇಲೆ ಮನೆದೇವರು, ವಿವಾಹ, ವೃತ್ತಿ, ಮೂಲಪುರುಷ, ಆಚಾರ-ವಿಚಾರ, ಸಂಸ್ಕೃತಿ, ಇತಿಹಾಸ, ಸಂಪ್ರದಾಯಗಳು ಬೆಳೆದುಕೊಂಡು ಬಂದಿರುತ್ತವೆ. ಬಳಿ ಅಥವಾ ಕುಲಗಳು ಪುರಾತನ ಕಾಲದಿಂದ ರೂಢಿಗತವಾಗಿ ರೂಪುಗೊಂಡಿರುವಂಥದ್ದು, ಮಾನವ ಸಮಾಜದಲ್ಲಿ ಸಂಸ್ಕೃತಿಯು ಮುಂದುವರಿಕೆಗೆ ಹಾಗೂ ಅನುಕರಣೆ ಮಾಡಿಕೊಂಡು ಬಂದಿರುವ ವ್ಯವಸ್ಥೆಯನ್ನು ನೋಡಬಹುದು. ಇವರ ಪ್ರಭಾವ ಮತ್ತಷ್ಟು ಪ್ರಮುಖವಾದ ಪಾತ್ರವನ್ನು ನಿರ್ವಹಿಸುತ್ತದೆ.

ಮಾದಿಗರಲ್ಲಿ ಕುಲ-ಬಳಿಗಳು ಅದರದೇಯಾದ ಕಾರ್ಯವಿಧಾನವನ್ನು ನಿಭಾಯಿಸಿಕೊಂಡು ಬಂದಿದೆ. ಮಾದಿಗರಲ್ಲಿ ಒಳ ಗುಂಪುಗಳಿದ್ದು ಅವುಗಳನ್ನು ಗೋತ್ರ ಕುಲಗಳೆಂದೂ ಕರೆಯುವರು. ಬೆಡಗುಗಳಿಗೆ ಚಿತ್ರದುರ್ಗ ಜಿಲ್ಲೆಯಲ್ಲಿ ಕುಲ ಅಥವಾ ಬೆಡಗು ಎಂಬ ಪದವನ್ನು ಬಳಸುವರು. ವೈವಾಹಿಕ ಸಂಬಂಧ ಬೆಳೆಸುವಾಗ "ನೀವು ಯಾವ ಕುಲದವರು ಎಂಬುದು ಇವರ ಸಿದ್ಧಾಂತ. ಚಿತ್ರದುರ್ಗ ಜಿಲ್ಲೆಯಲ್ಲಿ ಸುಮಾರು ೧೦೧ ಕುಲಗಳನ್ನು ನೋಡಬಹುದು ಎಂದು ಕಟ್ಟೆಮನೆಯ ಪೂಜಾರಿಗಳು ಹಾಗೂ ಮಾದಿಗರ ಹಿರಿಯ ಯಜಮಾನರು ಹೇಳುತ್ತಾರೆ. ಪ್ರಚಲಿತವಾಗಿ ಇರುವಂಥ ಕುಲಗಳು ಐವತ್ತೈದು ಇವೆ ಎಂದು ಡಾ. ಮೈಲಹಳ್ಳಿ ರೇವಣ್ಣ ಅವರು ನಡೆಸಿರುವ ಅಧ್ಯಯನದಲ್ಲಿ ನಮಗೆ ಕಂಡು ಬರುತ್ತದೆ.

೪.೧೦.೧ ಬಂಧುತ್ವ / ರಕ್ತಸಂಬಂಧ

ಮಾನವ ಸಾಮೂಹಿಕ ಜೀವನದಲ್ಲಿ ಒಬ್ಬ ವ್ಯಕ್ತಿ ಅನೇಕ ವ್ಯಕ್ತಿಗಳೊಡನೆ ಸಮೂಹಗಳಲ್ಲಿ ವಿವಿಧ ರೀತಿಯ ಬಂಧಗಳಿಂದ ಬಂಧಿಸಲ್ಪಟ್ಟಿದ್ದಾನೆ. ಮಾನವನನ್ನು ಬಿಟ್ಟು ಬೇರೆ ಯಾವುದೇ ಜೀವಿಗೂ ಸಂಬಂಧಗಳನ್ನು ಗುರುತಿಸಿಕೊಳ್ಳಲು ಹಾಗೂ ತನ್ನ ಬುದ್ಧಿಶಕ್ತಿ, ಭಾಷೆ ಬೆಳವಣಿಗೆಯಿಂದಾಗಿ ತನ್ನ ಮೂಲಭೂತ ಬಂಧಗಳನ್ನು ಬಂಧುತ್ವದೊಡನೆ ಸೇರಿಹೋಗುತ್ತವೆ. ಆದ್ದರಿಂದ ಮಾದಿಗ ಸಮುದಾಯವು ಪಿತೃಪ್ರಧಾನ ಕೌಟುಂಬಿಕ ವ್ಯವಸ್ಥೆಯಿಂದ ಕೂಡಿದೆ. ಪಿತೃವನ್ನು ಪ್ರಧಾನವಾಗಿ ಇಟ್ಟುಕೊಂಡು ಗುರುತಿಸಿಕೊಂಡಿರುವ ಸಂಬಂಧಕ್ಕೆ ಪ್ರಾಥಮಿಕ ಸಂಬಂಧ ಎಂಬುದಾಗಿ ಕರೆಯುತ್ತವೆ. ಇಂತಹ ಸಂಬಂಧವನ್ನು ಹುಟ್ಟಿನಿಂದ ಸಾಯುವವರೆಗೆ ತಳಹದಿಯಾಗಿದೆ. ಪಿತೃವಿನ ಸಂತತಿಯ ಆಧಾರದ ಮೇಲೆ ಕುಲ, ಬೆಡಗು, ಬಳಿ, ಮನೆತನ, ಸಂಬಂಧ, ಅಣ್ಣ-ತಂಗಿ, ಅಕ್ಕ-ತಮ್ಮ, ತಂದೆ-ತಾಯಿ, ದೊಡ್ಡಪ್ಪ-ಚಿಕ್ಕಪ್ಪ, ಅಜ್ಜಿ-ಅಜ್ಜ ಮೊದಲಾದವು ರಕ್ತಸಂಬಂಧವನ್ನು ಹೊಂದಿರುವವರನ್ನು ರಕ್ತಸಂಬಂಧಿಗಳು ಎನ್ನಲಾಗುವುದು.

ಕುಟುಂಬವನ್ನು ರಕ್ಷಣೆ ಮಾಡುವಲ್ಲಿ ಹಾಗೂ ವ್ಯಕ್ತಿ-ವ್ಯಕ್ತಿಗಳ ನಡುವಣ ಸಂಬಂಧಗಳು ವಿವಿಧ ರೂಪಗಳಲ್ಲಿ ಕೊಂಡೊಯ್ಯಲು ಬಂಧುತ್ವವು ಸಹಕಾರಿಯಾಗಿದೆ. ಈ ಸಮುದಾಯದ ಜನರು ಒಂದೇ ಕಡೇ ವಾಸ ಮಾಡುವುದರಿಂದ ಪ್ರೀತಿ, ವಿಶ್ವಾಸ, ಸಹಬಾಳ್ವೆ, ಸಹಕಾರ, ಹೊಂದಾಣಿಕೆ

ಮನೋಭಾವನೆಯಿಂದ ಕೂಡಿದ ವ್ಯವಸ್ಥೆಯನ್ನು ನಿರ್ಮಾಣ ಮಾಡುವಲ್ಲಿ ಸಹಕಾರಿಯಾಗಿದೆ. ವಿವಾಹ ಮಾಡುವ ಸಮಯದಲ್ಲಿ ಈ ಸಮುದಾಯದಲ್ಲಿ ಒಳ ಬಾಂಧವ್ಯ ಮತ್ತು ವಿವಾಹಕ್ಕೆ ಹೆಚ್ಚು ಮಹತ್ವ ಕೊಡುತ್ತಿದ್ದರು. ಒಂದೇ ಕುಲ, ಬಳಿಯಲ್ಲಿ ವಿವಾಹ ನಿಷಿದ್ಧವಾಗಿದೆ ಒಂದು ವೇಳೆ ಪ್ರೇಮ ವಿವಾಹವಾದರೆ ಊರಿನಿಂದ ಹೊರಹಾಕುತ್ತಿದ್ದರು. ಅಣ್ಣನ ಮಗನಿಗೆ ಅಕ್ಕ ಅಥವಾ ತಂಗಿಯ ಮಗಳನ್ನು ಹಾಗೂ ಅಕ್ಕನ ಮಗನಿಗೆ ಅಣ್ಣ ಅಥವಾ ತಮ್ಮನ ಮಗಳನ್ನು ವಿವಾಹವಾಗುವ ರೂಢಿಯನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ಇದರಿಂದ ರಕ್ತ ಸಂಬಂಧಗಳು ಗಟ್ಟಿಯಾಗುತ್ತವೆ, ಕುಟುಂಬದಲ್ಲಿ ಜಗಳಗಳು ಬರುವುದಿಲ್ಲ, ತಮ್ಮ ಆಸ್ತಿಯನ್ನು ನಮ್ಮವರೇ ಅನುಭೋಗಿಸಬಹುದು ಎನ್ನುವ ನಂಬಿಕೆ. ಬಹುತೇಕ ಮಾದಿಗರಲ್ಲಿರುವುದನ್ನು ಅಧ್ಯಯನದಿಂದ ತಿಳಿಯಲಾಗಿದೆ.

ಏಕಪತ್ನಿತ್ವ ವಿವಾಹಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡುತ್ತಾರೆ. ಒಂದುವೇಳೆ ಹೆಂಡತಿ ತೀರಿಕೊಂಡರೆ ಹಾಗೂ ಮಕ್ಕಳು ಆಗದಿದ್ದ ಸಂದರ್ಭದಲ್ಲಿ ನಾದಿನಿಯನ್ನು ವಿವಾಹವಾಗುವುದು ಕಂಡುಬರುತ್ತದೆ. ಕೆಲವರು ಬಹುಪತ್ನಿತ್ವವನ್ನು ಹೊಂದಿದ್ದಾರೆ.

ಆಧುನಿಕ ಸಂದರ್ಭದಲ್ಲಿ ಮಾದಿಗ ಸಮುದಾಯದಲ್ಲಿ ರಕ್ತಸಂಬಂಧಗಳ ಆಧಾರ ಮೇಲೆ ತಮ್ಮ ಕುಲ ಮೂಲವನ್ನು ಗುರುತಿಸಿಕೊಂಡು. ಕುಟುಂಬವನ್ನು ನಿರ್ವಹಣೆ ಮಾಡುವುದರಿಂದ ಹಿಡಿದು ಸಾವಿನ ತನಕ ಆಚರಣೆಗಳನ್ನು ತನ್ನದೇಯಾದ ರೀತಿಯಲ್ಲಿ ಆಚರಿಸಿಕೊಂಡು ಬರುತ್ತಿದ್ದಾರೆ.

೪.೧೧ ಸಮುದಾಯದ ಸಾಮಾಜಿಕ ಸಮಸ್ಯೆಗಳು

ಭಾರತದಲ್ಲಿ ಮಾತ್ರ ಕಂಡುಬರುವ ಪರಿಶಿಷ್ಟ ಜಾತಿಗಳ ಸಮಸ್ಯೆ ವಿಶಿಷ್ಟಪೂರ್ಣವಾದುದೆನ್ನಬಹುದು. ಸಾಮಾಜಿಕ ಅಸಮಾನತಗೆ ಬಲಿಯಾದ ಈ ಸಮುದಾಯದ ಜನರು ಭಾರತದ ಉದ್ದಗಲಕ್ಕೂ ಅನೇಕ ಬಗೆಯ ದೌರ್ಜನ್ಯಗಳನ್ನು ಎದುರಿಸುತ್ತಿದ್ದಾರೆ. ಈಗಲೂ ಕೂಡ ದಲಿತರು ಗ್ರಾಮಗಳ ಹಾಗೂ ಪಟ್ಟಣಗಳ ಹೊರವಲಯಗಳಲ್ಲಿ ವಾಸಿಸಬೇಕಾಗಿದೆ. ದಲಿತರು ಸಾಮಾಜಿಕವಾಗಿ ತುಳಿತಕ್ಕೆ ಒಳಗಾಗಿರುವಂಥ ಸಮುದಾಯವಾಗಿದೆ. ಸಾಮಾಜಿಕ ಸ್ಥಾನಮಾನ ಮತ್ತು ಅವಕಾಶವನ್ನು ಕಿತ್ತುಕೊಂಡು ಅವರನ್ನು ಹೀನಾಯ ಸ್ಥಿತಿಗೆ ತಳ್ಳಲಾಯಿತು. ಅನೇಕ ಅವಾಚ್ಯ ಶಬ್ದಗಳ ಮೂಲಕ ಬಯ್ಯುತ್ತಿದ್ದರು. ಯಾವುದೇ ದೇವಸ್ಥಾನಗಳಿಗೆ, ಕೆರೆ ಬಾವಿಗಳಿಗೆ, ಸಾರ್ವಜನಿಕ ಸ್ಥಳಗಳಿಗೆ ದಲಿತರನ್ನು ಹೋಗಲು ಬಿಡುತ್ತಿರಲಿಲ್ಲ. ಹೀಗೆ ಮೂಲಭೂತ ಸೌಕರ್ಯಗಳನ್ನು ಕಿತ್ತುಕೊಂಡಿದ್ದರು. ಭೂ ಒಡೆತನದ ಹಕ್ಕುಕೂಡ ಅಸ್ಪೃಶ್ಯರಿಗೆ ಇರಲೇ ಇಲ್ಲ, ಹೀಗೆ ನಿರಂತರವಾದ ಬಡತನದಲ್ಲಿ ಜೀವನವನ್ನು ನಡೆಸಬೇಕಾಗಿತ್ತು.

ಅಸ್ಪೃಶ್ಯರಲ್ಲಿ ಒಬ್ಬರಾದಂತಹ ಮಾದಿಗ ಸಮುದಾಯ ಅನೇಕ ಸಾಮಾಜಿಕ ಸಮಸ್ಯೆಯನ್ನು ಅನುಭೋಗಿಸುವಂಥ ನಿಟ್ಟಿನಲ್ಲಿ ಬೆಳೆದುಬಂದಿದೆ. ಈ ಸಮುದಾಯ ವಾಸಮಾಡುವ ಪ್ರದೇಶದಲ್ಲಿ ಸರಿಯಾದ ನೀರಿನ ವ್ಯವಸ್ಥೆಯಾಗಲಿ, ವಾಸ ಮಾಡಲು ವಸತಿ, ದಿನನಿತ್ಯದ ಭವಿಷ್ಯದಲ್ಲಿ ಕಾಡುವಂತಹ ಸಮಸ್ಯೆಗಳಾಗಿವೆ. ತಮ್ಮ ಉಪಜೀವನಕ್ಕಾಗಿ, ಕೃಷಿಕೂಲಿ, ಭೂಮಾಲೀಕರ ಮನೆಯಲ್ಲಿ ಸಂಬಳ, (ಜೀತದಾಳು), ಭವಿಷ್ಯದ ಜೀವನಕ್ಕಾಗಿ ಸಂಗ್ರಹಿಸುವಂಥ, ರಕ್ಷಣೆ ಮಾಡಿಕೊಳ್ಳುವಂಥದ್ದು ಇವರಿಗೆ

ತಿಳಿರಲಿಲ್ಲ. ಹೊತ್ತಿಗೆ ಊಟ ಸಿಕ್ಕರೆ ಸಾಕು ಮುಂದಿನ ಭವಿಷ್ಯದ ಬಗೆಗೆ ಚಿಂತೆ ಮಾಡುವಂಥ ಕೆಲಸಕ್ಕೆ ಹೋಗುತ್ತಿರಲಿಲ್ಲ. ಜೀವನ ನಿರ್ವಹಣೆಗೆ ಜಮೀನುದಾರರಲ್ಲಿ ಸಾಲ ಮಾಡುತ್ತಿದ್ದರು. ಜಾತ್ರೆ, ಹಬ್ಬ, ಮದುವೆ, ಮರಣ ಮುಂತಾದ ಶುಭ ಸಮಾರಂಭಗಳಿಗೆ ಖರ್ಚು ಮಾಡಲು ಇವರಿಗೆ ಹಣವಿರುತ್ತಿರಲಿಲ್ಲ. ಅಂತಹ ಸಂದರ್ಭದಲ್ಲಿ ಭೂಮಾಲೀಕರಲ್ಲಿ ಸಾಲ ಮಾಡುತ್ತಿದ್ದರು. ಆ ಸಾಲ ತಿರುವವರೆಗೆ ದುಡಿಯುತ್ತಿದ್ದರು. ತಂದೆ ತೀರಿಕೊಂಡರೆ ಮಕ್ಕಳು ದುಡುಮೆಯಲ್ಲಿ ಮುಂದುವರಿಯಬೇಕು. ಆದರೆ ಆಸ್ತಿಯನ್ನು ಹಣವಂತರಿಗೆ ಕೇವಲ ೨೦೦ ರೂಪಾಯಿಗಳಿಗೆ ಮಾರಿಕೊಂಡಿರುವ ದುರಂತದ ಸಂಗತಿಯನ್ನು ಕ್ಷೇತ್ರಕಾರ್ಯಕ್ಕೆ ಸಂದರ್ಭದಲ್ಲಿ ತಿಳಿದುಬಂತು. (ಸಣ್ಣ ಓಬ್ಬಯ್ಯ, ದೊಡ್ಡ ದುರುಗಪ್ಪ, ಗೌರಸಮುದ್ರ).

ಮಾದಿಗ ಸಮುದಾಯದಲ್ಲಿ ಬಡತನ ಜೊತೆಗೆ ನಿರುದ್ಯೋಗ ಪ್ರಮುಖವಾಗಿ ಕಾಡುತ್ತಿತ್ತು. ಕೃಷಿಕೂಲಿಯ ಕೆಲಸ ಇವರಿಗೆ ತೃಪ್ತಿ ನೀಡಿಲ್ಲವಾದರೂ ಅನಿವಾರ್ಯವಾಗಿದೆ. ಇವರನ್ನು ಹೀನಾಯವಾಗಿ ಕಾಣುವುದರ ಜೊತೆಗೆ ಕೂಲಿ ಕೆಲಸದಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳ ನೀಡುತ್ತಿರುವುದು ಸರ್ವೇಸಾಮಾನ್ಯವಾಗಿ ಕಂಡುಬರುವಂತಹ ಅಂಶವಾಗಿದೆ. ಬಾಲ್ಯವಿವಾಹ ಹೆಚ್ಚಾಗಿ ಕಂಡು ಬರುತ್ತಿತ್ತು. ಇಂದಿಗೂ ಗ್ರಾಮೀಣ ಪ್ರದೇಶದಲ್ಲಿ ಬಾಲ್ಯ ವಿವಾಹಗಳ ಅಲ್ಪ ಪ್ರಮಾಣ ನಡೆಯುತ್ತವೆ. ಇಂತಹ ಸಮಯದಲ್ಲಿ ಇವರು ತಮ್ಮ ಜೀವನಕ್ಕಾಗಿ ಕೃಷಿಕೂಲಿ ಮತ್ತು ವ್ಯವಸಾಯವನ್ನು ಅವಲಂಬಿಸಿದ್ದಾರೆ. ಸುಮಾರು ಐದು ವರ್ಷಗಳ ಕಾಲ ಸರಿಯಾದ ರೀತಿಯಲ್ಲಿ ಮಳೆಯಿಲ್ಲದ ಕಾರಣ ಗ್ರಾಮೀಣ ಪ್ರದೇಶದ ಜನರು ನಗರ ಪ್ರದೇಶಗಳಿಗೆ ಹಾಗೂ ಕಾಫಿ ತೋಟಗಳಿಗೆ ಕೂಲಿ ಕೆಲಸಕ್ಕಾಗಿ ವಲಸೆ ಹೋಗುವ ಪರಿಸ್ಥಿತಿ ನಿರ್ಮಾಣವಾಗಿದೆ. ಇನ್ನೂ ಕೆಲವರು ಶ್ರೀಮಂತ ಮನೆಯಲ್ಲಿ ಕೆಲಸ, ಚರಂಡಿ, ಕಟ್ಟಡ ಕಾರ್ಮಿಕ ಕೆಲಸ ಹೀಗೆ ತಮ್ಮ ಜೀವನವನ್ನು ನಡೆಸುವ ಪರಿ ಕಂಡುಬರುತ್ತದೆ.

ಬದಲಾಗುತ್ತಿರುವ ಸಮಾಜದಲ್ಲಿ ಆರ್ಥಿಕ ಮತ್ತು ರಾಜಕೀಯ ಸನ್ನಿವೇಶಗಳಿಗೆ ತಕ್ಕಂತೆ ಮಾದಿಗ ಸಮುದಾಯದ ಸಮಸ್ಯೆಗಳನ್ನು ಗುರುತಿಸಿ ಸರ್ಕಾರದ ಯೋಜನೆ ಸರಿಯಾದ ರೀತಿಯಲ್ಲಿ ಅನುಷ್ಠಾನಗೊಳ್ಳುವಂತೆ ಮಾಡಬೇಕಾಗಿದೆ.

೪.೧೨ ವರ್ತಮಾನದ ಸ್ಥಿತಿಗತಿಗಳು

ಮಾದಿಗ ಸಮುದಾಯ ಬಡತನ ಬೇಗೆಯಲ್ಲಿ ನರಳುತ್ತಿದೆ. ಮೂಲಭೂತ ಸೌಕರ್ಯಗಳೇ ಇವರಿಗೆ ಇನ್ನೂ ತಲುಪಿಲ್ಲ. ಈ ಸಮುದಾಯವಕ್ಕೆ ಸಾರ್ವಜನಿಕ ಸ್ಥಳಗಳಲ್ಲಿ ಪ್ರವೇಶವಿರಲಿಲ್ಲ. ಈ ಸಮುದಾಯವು ಜಮೀನುದಾರ ಮನೆಯಲ್ಲಿ ಕೂಲಿ ಕಾರ್ಮಿಕರಾಗಿ ಹಾಗೂ ಚರ್ಮವನ್ನು ಹದ ಮಾಡುವ, ಪಾದರಕ್ಷೆಯನ್ನು ಮಾಡುವ ಮೂಲ ಕಾಯಕಲ್ಲಿ. ಇವುಗಳ ಆಧಾರದ ಮೇಲೆ ಜೀವನ ನಡೆಸುತ್ತಿದ್ದರು ಬಲಾಢ್ಯ ಶರೀರವನ್ನು ಹೊಂದಿದ್ದರೂ ಸೂಕ್ತವಾದ ಕೆಲಸವಿಲ್ಲದಂತಾಗಿತ್ತು. ಬಹುತೇಕ ಭೂಮಾಲೀಕರು ಇವರ ಶ್ರಮವನ್ನು ಬಳಸಿಕೊಳ್ಳುತ್ತಿದ್ದರು. ಸಮಾಜದಲ್ಲಿ ಕೃಷಿಯಲ್ಲಿ ಕಾರ್ಮಿಕರಾಗಿ ಹಾಗೂ ಜಾತ್ರೆ, ಹಬ್ಬ, ವಿಶೇಷ ಸಭೆ ಸಮಾರಂಭಗಳಲ್ಲಿ ಬೀದಿ ಕಸ ಗುಡಿಸುವ ವೃತ್ತಿಯನ್ನು ಮಾಡಿಸಿಕೊಳ್ಳುತ್ತಿದ್ದರು.

ಇವತ್ತಿಗದ್ದಿ ಇಂತಹ ಕೆಲಸಗಳು ನಿಂತಿಲ್ಲ. ಈ ಸಮುದಾಯದವರ ತಲೆಗೂದಲನ್ನು ಕ್ಷೌರಿಕರಿಗೂ ತೆಗೆಯಲು ಬಿಡುವುದಿಲ್ಲ. ಹೋಟೆಲ್ ಹಾಗೂ ದೇವಾಲಯಗಳ ಪ್ರದೇಶವನ್ನು ರದ್ದುಕೊಗೊಳಿಸಿದ್ದರು. ದಿನ ಬೆಳಗಾದರೆ ಪತ್ರಿಕೆಗಳಲ್ಲಿ ಅತ್ಯಾಚಾರ, ಕೊಲೆ, ಅಸ್ಪೃಶ್ಯರ ಮೇಲಿನ ಹಲ್ಲೆ ಹೀಗೆ ಕೆಳವರ್ಗದ ಜನಸಮುದಾಯದವರ ಮೇಲೆ ನಡೆಯುವ ದೌರ್ಜನ್ಯಗಳ ಸರಮಾಲೆಯೇ ಕಂಡುಬರುತ್ತದೆ.

ಈ ಸಮುದಾಯದಲ್ಲಿ ಅನಕ್ಷರಸ್ಥರ ಸಂಖ್ಯೆ ಹೆಚ್ಚಿನ ಪ್ರಮಾಣದಲ್ಲಿದೆ. ಶಿಕ್ಷಣ ಪಡೆದು ಸರ್ಕಾರಿ ಹುದ್ದೆ ಗಿಟ್ಟಿಸಿಕೊಂಡವರು ಅತ್ಯಂತ ವಿರಳ. ಇವರಲ್ಲಿ ಕೆಲವು ಬೆರಳೆಣಿಕೆಯಷ್ಟು ಜನ ಮಾತ್ರ ಸರ್ಕಾರಿ ಹುದ್ದೆಯನ್ನು ಗಿಟ್ಟಿಸಿಕೊಂಡಿದ್ದಾರೆ. ಅಕ್ಷರ ಜ್ಞಾನವಿಲ್ಲದ ಕಾರಣಕ್ಕಾಗಿ ನಿರುದ್ಯೋಗ ಸಮಸ್ಯೆ ಇವರಲ್ಲಿ ಎದ್ದು ಕಾಣುತ್ತದೆ. ಇತ್ತೀಚಿನ ದಿನಗಳಲ್ಲಿ ಬೇರೆ ಸಮುದಾಯದ ಸಂಪರ್ಕದ ಮೂಲಕ ಸಮಾಜದಲ್ಲಿ ಸ್ವಲ್ಪಮಟ್ಟಿಗೆ ಮುಕ್ತವಾಗಿ ಬೆರೆಯುತ್ತಿರುವುದರಿಂದ ಕೆಲವು ಕೆಳಸ್ಥಾನದ ವೃತ್ತಿಗಳನ್ನು ಬಿಟ್ಟು ಉನ್ನತ ಶಿಕ್ಷಣವನ್ನು ಪಡೆಯುತ್ತಿರುವಾಗ ಕೆಲವು ಉನ್ನತ ಹುದ್ದೆಗೆ ಅಂಬೆಗಾಲು ಇಡುತ್ತಿರುವುದು ಸಂತೋಷದಾಯಕವಾದುದು. ಕೆಲವರು ಸರ್ಕಾರೇತರ ಸ್ವಯಂ ಸಂಸ್ಥೆಗಳಲ್ಲಿ ಹುದ್ದೆಗಳನ್ನು ಇನ್ನು ಕೆಲವರು ವ್ಯಾಪಾರಸ್ಥರಾಗಿ, ಚಾಲಕ, ನಿರ್ವಾಹಕರಾಗಿ, ಕೃಷಿ ಕ್ಷೇತ್ರದಲ್ಲಿ ತಮ್ಮ ವೃತ್ತಿಜೀವನವನ್ನು ನಿರ್ವಹಿಸುತ್ತ ಆರ್ಥಿಕವಾಗಿ ತಕ್ಕಮಟ್ಟಿಗೆ ಭದ್ರತೆಯನ್ನು ಪಡೆಯುವ ನಿಟ್ಟಿನಲ್ಲಿ ಸಾಗುವ ಪ್ರಯತ್ನ ಮಾಡುತ್ತಾರೆ.

ಹಿಂದಿನಿಂದಲೂ ಸಮಾಜದಲ್ಲಿ ಅತ್ಯಂತ ಹೀನಾಯವಾದ ಅಸ್ಪೃಶ್ಯತೆಯನ್ನು ಅನುಭವಿಸಿರುವ ಸಮುದಾಯಗಳಾದ ಮಾದಿಗ ಮತ್ತು ಚಲುವಾದಿಗಳಿಗೆ ಸರ್ಕಾರದಿಂದ ಸಿಗುವ ಸೌಲಭ್ಯಗಳು ಸಿಗದ ಕಾರಣ ಜನಸಂಖ್ಯೆ ಅಧಾರದ ಮೇಲೆ ಮೀಸಲಾತಿ ವರ್ಗೀಕರಣ ಮಾಡಲು ಆಯೋಗವನ್ನು ಸ್ಥಾಪನೆಯಾಗಿದೆ. ನ್ಯಾಯಮೂರ್ತಿ ಸದಾಶಿವ ಆಯೋಗವು ಒಳ ಮೀಸಲಾತಿಯನ್ನು ನೀಡಬೇಕೆಂದು ತಿಳಿಸಿದೆ. ಈ ಹಿನ್ನೆಲೆಯಲ್ಲಿ ಸದೃಢರನ್ನಾಗಿ ಮಾಡಲು ಪ್ರಯತ್ನ ಸರ್ಕಾರಗಳು ಅತಿ ತ್ವರಿತಗತಿಯಲ್ಲಿ ಮೀಸಲಾತಿಯನ್ನು ಜಾರಿಗೆ ತರುವುದರ ಮೂಲಕ ಸಮಾಜದಲ್ಲಿ ಸಮಾನತೆಯನ್ನು ಪಡೆಯುವಂತಗುತ್ತದೆ ಎನ್ನುವಂಥ ಅಂಶವನ್ನು ಗಮನಿಸಬೇಕಾಗಿದೆ. ಇಂದಿಗೂ ಪೂರ್ಣ ಪ್ರಮಾಣದ ಅಸ್ತಿತ್ವವನ್ನು ಕಂಡುಕೊಳ್ಳಲು ಸಾಧ್ಯವಾಗಿಲ್ಲ. ಈ ಸಮುದಾಯಕ್ಕೆ ಉದ್ಯೋಗದ ಭದ್ರತೆ ದೊರೆಯಬೇಕಾಗಿದೆ. ಅಗತ್ಯಕ್ಕೆ ತಕ್ಕಂತೆ ಉದ್ಯೋಗವನ್ನು ನೀಡಿದ್ದಾರೆ. ಜೊತೆಗೆ ಶ್ರಮಜೀವಿಗಳಾದ ಈ ಸಮುದಾಯಕ್ಕೆ ಸಮರ್ಪಕವಾದ ಕೆಲಸ ನೀಡುವ ಅಗತ್ಯವಿದೆ. ಇವುಗಳಲ್ಲಿ ಈಡೇರಿದಾಗ ಮಾತ್ರ ಬೇರೆ ಸಮುದಾಯಗಳ ರೀತಿಯಲ್ಲಿ ಮುಂದುವರೆಯಲು ಸಾಧ್ಯವಾಗುತ್ತದೆ.

ಚಿತ್ರದುರ್ಗ ಜಿಲ್ಲೆಯ ಮಾದಿಗ ಸಮುದಾಯದವರು ರಾಜಕೀಯ-ಆಡಳಿತ ಕ್ಷೇತ್ರದಲ್ಲಿ ಮೀಸಲಾತಿಗನುಗುಣವಾಗಿ ಅಲ್ಪಸ್ವಲ್ಪ ಅಧಿಕಾರವನ್ನು ಪಡೆದುಕೊಂಡಿದ್ದಾರೆ. ಆದರೆ ಅದನ್ನು ಸಂತೋಷಪಡುವ, ಹೆಮ್ಮೆ ಪಡುವ ವಿಚಾರವೆಂದು ತಿಳಿಯುವುದು ಕಷ್ಟಸಾಧ್ಯ. ಕಾರಣ ಅನೇಕ ಗ್ರಾಮ ಪಂಚಾಯತ್, ತಾಲೂಕು ಪಂಚಾಯತ್, ಜಿಲ್ಲಾ ಪಂಚಾಯತ್ ಸದಸ್ಯರಾಗಿ ಆಯ್ಕೆಯಾದವರಿಗೆ

ಶಿಕ್ಷಣವಿಲ್ಲ. ಅವರ ಹೆಸರಿನಲ್ಲಿ ಇತರೆ ಮೇಲ್ವರ್ಗದ ಸದಸ್ಯರು ಅಧಿಕಾರ ಚಲಾಯಿಸುತ್ತಾರೆ. ಕೂಲಿನಾಲಿ ಮಾಡಿಕೊಂಡು ಜೀವನ ಮಾಡುತ್ತಿರುವ ಓರ್ವ ಮಾದಿಗ ಸಮುದಾಯದ ವ್ಯಕ್ತಿ ಮೀಸಲಾತಿಯಂತೆ ಸದಸ್ಯ, ಅಧ್ಯಕ್ಷ ಅಥವಾ ಇತರೆ ಹುದ್ದೆಯಲ್ಲಿದ್ದರೂ ಕೂಲಿ ಕೆಲಸ ಮಾಡಲೇ ಬೇಕಾಗುತ್ತದೆ. ಹಾಗೇಯೇ ರಾಜಕೀಯದ ಒಳವರ್ಮನನ್ನು ಅರಿಯಲು ಅವರಿಂದ ಸಾಧ್ಯವಾಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ಈ ಸಮುದಾಯದವರು ಉನ್ನತ ಶಿಕ್ಷಣ, ರಾಜಕೀಯ ಕ್ಷೇತ್ರದ ಪರಿಣತಿ ಪಡೆದರೆ ಮಾತ್ರ ಬದಲಾವಣೆಯನ್ನು ತರಲು ಸಾಧ್ಯ ಎಂದರೆ ತಪ್ಪಾಗಲಾರದು.

ಈ ಸಮುದಾಯದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಶಿಕ್ಷಣವನ್ನು ಅರ್ಧಕ್ಕೆ ಮೊಟಕುಗೊಳಿಸಿ ನಗರಕ್ಕೆ ಕೂಲಿ ಕೆಲಸಕ್ಕೆ ವಲಸೆ ಹೋಗುವುದು ಸರ್ವೇಸಾಮಾನ್ಯ. ಮಕ್ಕಳ ಮದುವೆಗೆ ಹಾಗೂ ಜೀವನ ನಿರ್ವಹಣೆಗೆ ಸ್ವಲ್ಪ ಹಣ ಸಂಪಾದಿಸಬಹುದೆಂಬ ಉತ್ತಮ ಯೋಚನೆ ಮಾಡುತ್ತಾರೆ. ಶಾಲೆ ಬಿಡಿಸಿ ಕೂಲಿಗೆ ಕರೆದುಕೊಂಡು ಹೋಗುವ ಪರಿವಾರವನ್ನು ನೋಡಬಹುದು. ಇವರು ಅಭಿವೃದ್ಧಿ ಹೊಂದಬೇಕಾದರೆ ಇವರಿಗೆ ಶಿಕ್ಷಣದ ಬಗೆಗೆ ಅರಿವು ಮೂಡಿಸಬೇಕಾಗಿದೆ. ಪೋಷಕರಿಗೆ ಶಿಕ್ಷಣಕ್ಕೆ ಸಂಬಂಧಿಸಿದಂತೆ ತಿಳುವಳಿಕೆ ನೀಡಬೇಕು. ಕೇಂದ್ರ ಸರ್ಕಾರ ಅನುಸರಿಸುವ ಶಿಕ್ಷಣಕ್ಕೆ ಸಂಬಂಧಿಸಿದಂತೆ ತಿಳುವಳಿಕೆ ನೀಡಬೇಕು. ಕೇಂದ್ರ ಸರ್ಕಾರ ಅನುಸರಿಸುವ ಶಿಕ್ಷಣವನ್ನು ಪ್ರತಿಯೊಂದು ಗ್ರಾಮಕ್ಕೆ ತಲುಪುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕು. ಉನ್ನತ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವ ಹಣವನ್ನು ನೇರವಾಗಿ ವಿದ್ಯಾರ್ಥಿಗಳಿಗೆ ತಲುಪುವಂತೆ ಮಾಡಬೇಕು. ಕೃಷಿಯನ್ನು ಆಶ್ರಯಿಸಿ ಬದುಕುವ ಈ ಸಮುದಾಯಕ್ಕೆ ಕೃಷಿ ಭೂಮಿಯನ್ನು ಒದಗಿಸಬೇಕು. ತನ್ನ ಬದುಕಿಗಾಗಿ ಕೃಷಿಗೆ ಪೂರಕವಾಗುವಂತಹ ಹಲವಾರು ಸೌಲಭ್ಯಗಳನ್ನು ಸರ್ಕಾರ ಒದಗಿಸಬೇಕು.

ಸರ್ಕಾರ ವರ್ಷಕ್ಕೆ ಸಾವಿರಗಟ್ಟಲೆ ಆಶ್ರಯ ಮನೆಗಳು ನೀಡುತ್ತದೆ. ಆದರೆ ಗ್ರಾಮ ಪಂಚಾಯಿತಿಯ ಸದಸ್ಯರು ತಮಗೆ ಬಂದಿರುವ ಮನೆಗಳನ್ನು ಜನರಿಗೆ ಇಪ್ಪತ್ತು ಸಾವಿರಕ್ಕೆ ಮಾರಿಕೊಳ್ಳುತ್ತಾರೆ. ಇವುಗಳ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಬೇಕು ಎಲ್ಲರಿಗೆ ಸೂಕ್ತವಾದ ನ್ಯಾಯವನ್ನು ಒದಗಿಸಬೇಕು. ಈ ಸಮುದಾಯದಲ್ಲಿ ಅತ್ಯಂತ ಬಡತನದಲ್ಲಿರುವ ಕುಟುಂಬಗಳಿಗೆ ಉಚಿತ ವಿದ್ಯುತ್ ಯೋಜನೆ ನೀಡಬೇಕು. ನೀರಿನ ಅಂತರ್ಜಲ ಕಡಿಮೆಯಾಗಿದ್ದು ಕೆರೆಗಳನ್ನು ಚಿಕ್ಕ ಡ್ಯಾಮ್‌ಗಳನ್ನು ನಿರ್ಮಾಣ ಮಾಡುವುದರ ಮೂಲಕ ಮಳೆ ನೀರನ್ನು ಸಂಗ್ರಹಿಸಬಹುದು. ಚಿತ್ರದುರ್ಗ ಅತಿ ಕಡಿಮೆ ಮಳೆ ಬೀಳುವ ಪ್ರದೇಶವಾಗಿರುವುದರಿಂದ ಭದ್ರ ಮೇಲ್ದಂಡೆ ಯೋಜನೆಯನ್ನು ಅನುಷ್ಠಾನ ಮಾಡುವುದರ ಮೂಲಕ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡವ ಅನುವಾರ್ಯತೆಯಿದೆ. ಆದ್ದರಿಂದ ಸರ್ಕಾರ ಅತಿ ಶೀಘ್ರದಲ್ಲಿ ಯೋಜನೆ ಜಾರಿಗೆ ತರಬೇಕು.

ಸರ್ಕಾರ ಸುಮಾರು ವರ್ಷಗಳ ಕಾಲ ಮೀಸಲಾತಿ ಅನುಗುಣವಾಗಿ ಸೌಲಭ್ಯಗಳನ್ನು ನೀಡುತ್ತ ಬಂದಿದೆ. ಆದರೆ ಈ ಸಮುದಾಯ ಮಾತ್ರ ಅಭಿವೃದ್ಧಿಯಾಗಿಲ್ಲ. ಆದ್ದರಿಂದ ಇವುಗಳನ್ನು ಗಮನದಲ್ಲಿ ಇಟ್ಟುಕೊಂಡು ಪರಿಶಿಷ್ಟ ಜಾತಿಯಲ್ಲಿ ಸಿಗುವ ಸೌಲಭ್ಯಗಳು ನೇರವಾಗಿ ಸಿಗುವಂತೆ ಮಾಡಿದ್ದಾರೆ.

ಈ ಸಮುದಾಯದವರು ಸರ್ವಾಂಗೀಣ ಪ್ರಗತಿ ಸಾಧ್ಯವಾಗಬೇಕಾದರೆ ಸರ್ಕಾರ ಇವರ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಆರ್ಥಿಕ, ಶೈಕ್ಷಣಿಕ, ಧಾರ್ಮಿಕ ಸ್ಥಿತಿಗತಿಗಳನ್ನು ಅರಿತುಕೊಂಡು ಇವರ ಬಗೆಗೆ ಅಧ್ಯಯನ ಮಾಡಿ ಅದಕ್ಕೆ ಸರಿಹೊಂದುವ ರೀತಿಯಲ್ಲಿ ಮಾರ್ಗೋಪಾಯಗಳು ಮತ್ತು ಸೌಲಭ್ಯಗಳನ್ನು ಕಲ್ಪಿಸಬೇಕಾಗಿದೆ. ಈ ತೆರನಾದ ಅಭಿವೃದ್ಧಿ ಯೋಜನೆ ಮೂಲಕವಾಗಿ ಈ ಸಮುದಾಯದಲ್ಲಿ ಅಭಿವೃದ್ಧಿ ಹೊಂದಲು ಹಾಗೂ ಬದಲಾವಣೆ ಕಾಣಲು ಸಾಧ್ಯವಾಗುತ್ತದೆ.

ಟಿಪ್ಪಣಿಗಳು

೧. ಕೃಷ್ಣ ಬಿ ಆರ್, ೨೦೦೮, ಸಮಾಜಶಾಸ್ತ್ರ (ಭಾಗ–೧), ಪುಟ, ೦೩.

೨. ಮೈಲಹಳ್ಳಿ ರೇವಣ್ಣ, ೧೯೯೬, ಮಾದಾರ ಜನಪದ ಒಂದು ಅಧ್ಯಯನ, ಪುಟ, ೬೭.

೩. ಅದೇ ಪುಟ, ೬೯.

೪. ಈಶ್ವರಪ್ಪ(ಸಂ), ೨೦೧೩, ಕೃಷಿ ಭಾರತ್, ಮಾಸ ಪತ್ರಿಕೆ, ತಂಟ–೧ ಂಡಿಡುಟ, ಬೆಂಗಳೂರು. ಪುಟ, ೩೬.

೫. ಶಂಕರರಾವ್ ಚ ನ, ೨೦೦೩, ಸಮಾಜಶಾಸ್ತ್ರ(ಸಂಪುಟ–೧), ಪುಟ, ೫೨.

೬. ಕೃಷ್ಣ ಬಿ ಆರ್, ೨೦೦೮, ಸಮಾಜಶಾಸ್ತ್ರ (ಭಾಗ–೧), ಪುಟ, ೬೫.

ಅಧ್ಯಾಯ: ಐದು
ಮಾದಿಗ ಸಮುದಾಯದ ಧಾರ್ಮಿಕ ಬದಲಾವಣೆ

೫.೧ ದೈವಾರಾಧನೆ

೫.೨ ಧಾರ್ಮಿಕ ನಂಬಿಕೆಗಳು

೫.೩ ವಾರ್ಷಿಕಾವರ್ತನ ಆಚರಣೆಗಳು

೫.೩.೧ ಹಬ್ಬಗಳು

೫.೩.೨ ಜಾತ್ರೆಗಳು

೫.೩.೩ ಕೌಟುಂಬಿಕ ಆಚರಣೆಗಳು

೫.೪ ಮತಾಂತರ

ಅಧ್ಯಾಯ: ಐದು

ಮಾದಿಗ ಸಮುದಾಯದ ಧಾರ್ಮಿಕ ಬದಲಾವಣೆ

ಪೀಠಿಕೆ

ಭಾರತದಲ್ಲಿ ಧರ್ಮಕ್ಕೆ ಪ್ರತಿಯೊಬ್ಬರು ಕಟ್ಟುಬಿದ್ದಿದ್ದಾರೆ. ಪ್ರತಿಯೊಂದು ಸಮುದಾಯದ ಜನರು ತಮ್ಮ ಧರ್ಮಗಳಿಗೆ ಅನುಗುಣವಾಗಿ ನಿಯಂತ್ರಣಕ್ಕೆ ಒಳಪಟ್ಟಿರುತ್ತಾರೆ. ಧರ್ಮವೇ ಭಾರತದ ಜೀವನದ ಕೇಂದ್ರ. 'ಜನರ ಧಾರ್ಮಿಕ ಪ್ರಜ್ಞೆಯನ್ನು ಎತ್ತಿ ಹಿಡಿಯುವಲ್ಲಿ ಹಾಗೂ ಜಾಗೃತಗೊಳಿಸುವಲ್ಲಿ ದೇವಾಲಯಗಳು ಮಹತ್ತರವಾದ ಪಾತ್ರವನ್ನು ವಹಿಸಿದ್ದವು ಎಂಬ ಅಂಶವನ್ನು ಜಿ ಎಸ್. ಘುರ್ಯೆಯವರು ತಿಳಿಸುತ್ತಾರೆ'. ಹಾಗೇ ಸ್ವಾಮಿ ವಿವೇಕಾನಂದರು "ಧರ್ಮವೊಂದೇ ಭರತ ಖಂಡದ ಪ್ರಾಣ, ಅದು ಹೋದರೆ ಈ ದೇಶ ನಾಶವಾಗುವುದು" ಎನ್ನುವಂಥ ವಿಚಾರವನ್ನು ತಿಳಿಸಿದ್ದಾರೆ. ಭಾರತೀಯ ಧಾರ್ಮಿಕ ಕಟ್ಟುಪಾಡುಗಳಿಗೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಡಲಾಗಿದೆ. "ಧರ್ಮವನ್ನು ಮೀರಿ ನಡೆದವನನ್ನು ಸಮಾಜ ಶಿಕ್ಷಿಸುತ್ತದೆ. ಧರ್ಮವು ವ್ಯಕ್ತಿಯನ್ನು ನಿಯಂತ್ರಿಸುವುದರ ಮೂಲಕ ಸಮಾಜ ನಿಯಂತ್ರಣ ಮಾಡುತ್ತದೆ. ಸಮಾಜದಲ್ಲಿ ನಡೆಯುವ ಪ್ರತಿಯೊಂದು ಘಟನೆಗೂ ಯಾವುದೋ ಒಂದು ಅಗೋಚರ ಶಕ್ತಿಯ ಕೈವಾಡವಿದೆ ಎಂದು ನಂಬಲಾಗುತ್ತದೆ. ಈ ಘಟನೆಗಳನ್ನು ಪ್ರತಿಯೊಂದು ಧರ್ಮದವರು ತಮ್ಮ ದೈವದ ಮುಖಾಂತರ ನಡೆಯುತ್ತಿದೆ ಎನ್ನುವುದಾಗಿ ನಂಬುತ್ತಾರೆ."[೧] ಆದ್ದರಿಂದ ಬಲಪಂಥೀಯ ಚಿಂತಕರು ಹೆಚ್ಚು ಧರ್ಮ ಪ್ರಚಾರದ ಜೊತೆಗೆ ತಳ ಸಮುದಾಯದ ಜನರನ್ನು ಒಗ್ಗೂಡಿಸುವಲ್ಲಿ ಸಫಲರಾಗಿದ್ದಾರೆ. ಹಿಂದಿನ ದಿನಮಾನಗಳಲ್ಲಿ ಗ್ರಾಮೀಣ ಪ್ರದೇಶದಲ್ಲಿ ದೇವಾಲಯಗಳನ್ನು ತಳ ಸಮುದಾಯದ ಜನರಿಗೆ ಪ್ರವೇಶವಿರಲಿಲ್ಲ. ಒಂದುವೇಳೆ ಪ್ರವೇಶಿಸಿದರೆ ದೇವರು ನಿಮಗೆ ಶಾಪ ಕೊಡುತ್ತಾನೆ. ದೇವರು ನಿಮಗೆ ಒಳ್ಳೆಯದನ್ನು ಮಾಡುವುದಿಲ್ಲ, ನಿಮ್ಮ ಕಾಲುಗಳನ್ನು ದೇವರು ಮುರಿಯುತ್ತಾನೆ ಎನ್ನುವ ಬಲವಾದ ನಂಬಿಕೆಗಳನ್ನು ಈ ಸಮುದಾಯದ ಜನರು ನಂಬುವಂತೆ ಮಾಡಲಾಗಿತ್ತು.

ಭಾರತದಲ್ಲಿ ಜನಾಂಗೀಯ ಭಿನ್ನತೆಯಿಂದಾಗಿ ಹಾಗೂ ಮಾಡುವ ಕೆಲಸಗಳ ಆಧಾರದ ಮೇಲೆ ಇವತ್ತಿಗೂ ಅವರ ಕಸುಬುಗಳನ್ನು ಮಾಡುತ್ತ ಹೀನಾಯವಾದ ಜೀವನ ವಿಧಾನವನ್ನು ನಡೆಸುತ್ತಾರೆ. ಕುಲಕಸುಬುಗಳ ಮೂಲಕ ಧರ್ಮವನ್ನು ಗುರುತಿಸಲಾಗುತ್ತದೆ. ಆಧುನಿಕ ಭಾರತದ ಇತಿಹಾಸದಲ್ಲಿಯೂ ಕೂಡ ದೇವ-ದೇವತೆಗಳನ್ನು ಆಧಾರವಾಗಿಸಿಕೊಂಡು ಜನ ಸಂಘಟನೆ ಮಾಡುವ ಪ್ರಯತ್ನ ನಡೆದಿರುವುದನ್ನು ನಾವು ಗಮನಿಸಬಹುದು.

೫.೧ ದೈವಾರಾಧನೆ

ಮಾನವ ಆದಿಕಾಲದಿಂದಲೂ ಪ್ರಕೃತಿ ಮಡಿಲಲ್ಲಿ ಬದುಕಿ ಪ್ರಕೃತಿಯನ್ನು ದೇವರನ್ನಾಗಿ ಮಾಡಿಕೊಂಡು ಬಂದಿದ್ದಾನೆ. ಪ್ರಕೃತಿಯನ್ನು ಪೂಜೆ ಮಾಡಿ ಅದರ ಮೂಲನೆಲೆಯಲ್ಲಿ ತನ್ನ ಬದುಕನ್ನು ಕಟ್ಟಿರುವ ಪ್ರಸಂಗವನ್ನು ಹಿಂದಿನಿಂದಲೂ ನಾವು ಗಮನಿಸಬಹುದು. ಆದ್ದರಿಂದ ನಿಸರ್ಗದಲ್ಲಿ ನಡೆಯುವ ಪ್ರತಿಯೊಂದು ವಿದ್ಯಮಾನಕ್ಕೂ ಮಾನವನಿಗೂ ನೇರವಾದ ಸಂಬಂಧವಿದೆ. ಪ್ರಕೃತಿಯಲ್ಲಿ ನಡೆಯುವ ಪ್ರತಿಯೊಂದು ಘಟನೆಗಳ ಹಿಂದೆ ನಮ್ಮ ಕಣ್ಣಿಗೆ ಕಾಣದ ಅಗೋಚರವಾದ ಶಕ್ತಿಯ ಕೈವಾಡದಿದೆಯೆಂದು ನಂಬಲಾಗಿದೆ. ಇಂತಹ ಪ್ರಕೃತಿಯಲ್ಲಿ ಜನಿಸಿದ ಪ್ರತಿಯೊಂದು ಜನ ಸಮುದಾಯವು ಒಂದನ್ನು ಬಿಟ್ಟು ಮತ್ತೊಂದು ಇರುವುದಿಲ್ಲ. ಕಾಲ ಕಳೆದಂದತೆ ದೈವ ಆಚರಣೆಗಳು ಮಾನವನ ಜೀವನದ ಭಾಗಗಳೇ ಆಗಿ ಬೆಳೆದುಕೊಂಡು ಬಂದಿವೆ. ಹೀಗೆ ಕಾಲಾನುಕ್ರಮದಲ್ಲಿ ದೇವ-ದೇವತೆಗಳ ಮೂರ್ತಿಗಳನ್ನು ಮಾಡಿಕೊಂಡು ಆರಾಧಿಸತೊಡಗಿದ್ದರಿಂದ ದೇವಾಲಯಗಳಲ್ಲಿ ಮೂರ್ತಿಗಳನ್ನು ಪ್ರತಿಸ್ಥಾಪಿಸಿ ಆರಾಧಿಸುವ ಪದ್ಧತಿ ಬದಲಾವಣೆಗೆ ಬಂದಿತು. ಇದರ ಮೂಲಕ ಜನರಲ್ಲಿ ಭಯವನ್ನು ಹುಟ್ಟಿಸುವ, ಅದರ ಬಗ್ಗೆ ಹೆಚ್ಚು ಜನಪ್ರಿಯಗೊಳಿಸುವ ಪ್ರಯತ್ನವನ್ನು ಮಾಡಲಾಯಿತು. ಜೊತೆಗೆ ಜನರಲ್ಲಿ ಧಾರ್ಮಿಕ ಪ್ರಜ್ಞೆಯನ್ನು ಪ್ರತಿಬಿಂಬಿಸುವ ಕೇಂದ್ರಗಳಾಗಿ ಮಾಡಿಕೊಂಡರು. ಆ ಎಲ್ಲ ವಿದ್ಯಮಾನಕ್ಕೆ ತಮ್ಮ ಧರ್ಮದ ದೇವರೇ ಕಾರಣವೆಂದು ಆರಾದಿಸುವ ಸಂಪ್ರದಾಯವನ್ನು ರೂಢಿಸಿಕೊಂಡು ಬರಲಾಯಿತು.

ಮಾದಿಗ ಸಮುದಾಯವರು ತಮ್ಮ ಪೂರ್ವಜರ, ಹಿರಿಯರ ಮೇಲೆ ಅಗಾಧವಾದ ನಂಬಿಕೆಯನ್ನು ಇಟ್ಟಿರುತ್ತಾರೆ ಅವರನ್ನು ದೇವರೆಂದು ಪೂಜಿಸುತ್ತಾರೆ. ತಮ್ಮ ಕುಟುಂಬ, ಕುಲದ ಆಧಾರದ ಮೇಲೆ ಪೂರ್ವಿಕರನ್ನು ಪೂಜಿಸುವ ಕ್ರಮ ಅವರಲ್ಲಿ ಆಚರಣೆಯಲ್ಲಿದೆ. ಸತ್ತ ಹಿರಿಯರನ್ನು ದೇವರೆಂದು ಭಾವಿಸಿ ಹಿರಿಯರಹಬ್ಬದ ಮೂಲಕ ನೆನಪಿಸುವ ಮತ್ತು ಆರಾಧಿಸುವ ಸಲುವಾಗಿ ಆಚರಿಸುವ ಕ್ರಮ ರೂಪಿಸಿಕೊಂಡಿರುತ್ತಾರೆ.

ಮಾದಿಗರು ತಮ್ಮ ನಂಬಿಕೆಯನ್ನು ಆಧರಿಸಿ ತಮ್ಮ ತಮ್ಮ ಧರ್ಮಕ್ಕನುಗುಣವಾಗಿ ದೇವರುಗಳನ್ನು ಆರಾಧಿಸುತ್ತಾರೆ. ಇವರು ಕೇವಲ ತಳಸಮುದಾಯದ ದೇವರುಗಳಿಗೆ ಪೂಜೆ ಮಾಡುವುದು ಮತ್ತು ಆ ದೇವಾಲಯಗಳಿಗೆ ಪ್ರವೇಶಿಸುತ್ತಿದ್ದರು. ಆದರೆ ಮೇಲ್ಜಾತಿಯವರು ದೇವಸ್ಥಾನಗಳನ್ನು ಸ್ವಚ್ಚಗೊಳಿಸುವ ಸೇವೆಯನ್ನು ಮಾಡಲು ಬಳಸಿಕೊಳ್ಳುತ್ತಿದ್ದರು. ಮಾತಂಗಿ, ಎಲ್ಲಮ್ಮ, ದುರುಗಮ್ಮ, ಸುಂಕಲಮ್ಮ,

ಗಾಳೆಮ್ಮ, ಮಾರೆಮ್ಮ, ಕೊಲ್ಲಾರಮ್ಮ, ಚೌಡಮ್ಮ, ಗುಲುಕಮ್ಮ ಇತ್ಯಾದಿ ದೇವತೆಗಳನ್ನು ಮಾದಿಗರು ಪೂಜಿಸುತ್ತಾರೆ. ಹರಳಯ್ಯ, ಆಂಜನೇಯ ಸ್ವಾಮಿ, ಪೆನ್ನೊಬಳೇಶ್ವರ ಸ್ವಾಮಿ, ನುಂಕೆಮಲಿ ಸಿದ್ದೇಶ್ವರ, ಮೈಲಾರ, ನಾಯಕಹಟ್ಟಿ ತಿಪ್ಪೇಸ್ವಾಮಿ ಮುಂತಾದ ಪುರುಷ ದೇವರಗಳನ್ನು ಪೂಜಿಸುತ್ತರೆ. ಮಹಿಳಾ ಪ್ರಧಾನ ಹಾಗೂ ಪುರುಷ ಶಕ್ತಿ ದೇವತೆಗಳನ್ನು ಪೂಜಿಸುವ ಮಾದಿಗರು ಜಾತಿ ಶ್ರೇಣೀಕರಣದ ಸಾಮಾಜಿಕ ಆಚರಣೆಗಳನ್ನು ಧಿಕ್ಕರಿಸುವಂತಾಗಬೇಕು. ಮಾದಿಗರ ಸಾಮಾಜಿಕ ದುಸ್ಥಿತಿಗೆ ಕಾರಣವಾಗಿರುವ ಶ್ರೇಣೀಕರಣವನ್ನು ಸಮರ್ಥಿಸುವ ಎಲ್ಲ ಆಚರಣೆಗಳನ್ನು ಗಾಳಿಗೆ ತೂರಿ ಎಲ್ಲರಂತೆ ಮುಕ್ತವಾಗಿ ದೇವರ ಗುಡಿಗಳಲ್ಲಿ ಪೂಜೆ ಮಾಡುವಂತೆ ಆಗಬೇಕಾಗಿದೆ. ಆ ಮೂಲಕ ಸಾಮಾಜಿಕ ಬದಲಾವಣೆಯನ್ನು ಕಾಣಲು ಸಾಧ್ಯವಾಗುತ್ತದೆ.

೫.೨ ಮಾದಿಗ ಸಮುದಾಯದ ಕುಲಮೂಲ ಕಸುಬುಗಳಲ್ಲಿ ಧಾರ್ಮಿಕ ಆಚರಣೆಗಳು

ಮಾದಿಗರು ಮೂಲತಃ ಅಲೆಮಾರಿಗಳಾಗಿದ್ದವರು. ತಮ್ಮ ಕುಲ ಹಕ್ಕುದಾರಿಕೆಯಾಗಿ ಬಂದಂತಹ ಆರಂಜ್ಯೋತಿ ಕಥೆ, ತಂಗಡಿದ್ಯಾವು ಮತ್ತು ಜಾಂಬವ ಪುರಾಣಗಳಿಂದ ಕೂಡಿದಂತಹ ಮೌಖಿಕ ಕಥೆಗಳನ್ನು ಹಾಡುತ್ತ ಕುಣಿಯುತ್ತ ಊರೂರು ತಿರುಗುತ್ತಿದ್ದರು. ತಮ್ಮ ಮೌಖಿಕ ಗೀತೆಗಳಿಂದ ಹೊಟ್ಟೆ ತುಂಬದೆ ಹೋದಾಗ ಚರ್ಮಗಾರಿಕೆ ಕೆಲಸವನ್ನು ಮುಂದುವರಿಸಿದರು. ಅದರ ಹಿನ್ನೆಲೆಯಲ್ಲಿಯೇ ಒಂದೆಡೆ ನೆಲೆ ನಿಲ್ಲಬೇಕಾದಂತಹ ಅನಿವಾರ್ಯತೆ ಏರ್ಪಟ್ಟಿತ್ತು. ಚಿತ್ರದುರ್ಗ ಜಿಲ್ಲೆಯ ಮಾದಿಗರ ಅತ್ಯಂತ ಕೆಳಮಟ್ಟದ ಜೀವನವನ್ನು ಮಾಡುತ್ತಿದ್ದಾರೆ. ಸತ್ತ ದನಗಳ ಚರ್ಮ ಸುಲಿಯುವುದು, ಚರ್ಮ ಹದ ಮಾಡುವುದು ಹಾಗೂ ಹದ ಮಾಡಿದ ಚರ್ಮದಿಂದ ವಿವಿಧ ವಸ್ತುಗಳನ್ನು ಸಿದ್ಧಪಡಿಸುವರ ಕಾಯಕದಲ್ಲಿ ನಿರತರಾದರೂ. ಉಪಕಸುಬುಗಳಾಗಿ ಮಲ ಹೊರುವುದು, ಶವದ ಮೆರವಣಿಗೆಗಳಲ್ಲಿ ತಮಟೆ ಬಾರಿಸುವುದು ಮತ್ತು ಸ್ಮಶಾನದಲ್ಲಿ ಹೆಣ ಹೂಳಲು ಗುಂಡಿ ಅಗೆಯುವ ಕೆಲಸವನ್ನು ಮಾಡಿದರು. ಪ್ರತಿಯೊಂದು ಹಳ್ಳಿಯಲ್ಲಿ ಮಾದಿಗರು ಉತ್ಸವ ಅಥವಾ ಜಾತ್ರೆಗಳ ಸಂದರ್ಭದಲ್ಲಿ ಗ್ರಾಮವನ್ನು ಸ್ವಚ್ಚಗೊಳಿಸುವುದು, ನೀರನ್ನು ಸಿಂಪಡಿಸುವುದು, ತೋರಣ ಕಟ್ಟುವುದು ಇತ್ಯಾದಿ 'ಬಿಟ್ಟಿ' ಕೆಲಸಗಳನ್ನು ಮಾಡುತ್ತ ಬಂದವರು. ಇಂದಿಗೂ ಕೆಲ ಹಳ್ಳಿಗಳಲ್ಲಿ ಶ್ರೀಮಂತ ಜಮೀನುದಾರುಗಳಿಗೆ ಒಂದೊಂದು ಮಾದಿಗರ ಕುಟುಂಬವು ಅವರ ಸೇವೆ ಮಾಡಲೆಂದೇ ಮೀಸಲಾಗಿರುತ್ತವೆ. ಇವರನ್ನು 'ಹರಿಜನ' ಎಂತಲು ಸಹ ಸಂಬೋಧಿಸುತ್ತಾರೆ. ಆ ಮನೆಯ 'ಗಂಡಾಗಲಿ' ಅಥವಾ 'ಹೆಣ್ಣಾಗಲಿ' ಜಮೀನುದಾರರು ಹೇಳಿಕಳುಹಿಸಿದಾಗಲೆಲ್ಲ ಕೆಲಸಕ್ಕೆ ಹೋಗಬೇಕು. ಆ ಆಳುಗಳಿಗೆ ಬೇರೆ ಕಡೆ ಕೆಲಸಕ್ಕೆ ಹೋದರೆ ಕೇವಲ ಐದಾರು ರೂಪಾಯಿ ಮಾತ್ರ ಕೊಡುತ್ತಾರೆ. ಆದ್ದರಿಂದ ಜಮೀನುದಾರರ ಮನೆಯಲ್ಲಿ ಕೆಲಸ ಮಾಡಿದರೆ ವರ್ಷಕ್ಕೊಮ್ಮೆ ಜಮೀನುದಾರನಿಂದ ಅವರಿಗೆ 'ಆಯ' ಸಿಗುತ್ತದೆ. ಆದ್ದರಿಂದ ಜಮೀನುದ್ದಾರ ಮನೆಯಲ್ಲಿ ಕೆಲಸ ಮಾಡುತ್ತಾರೆ. ಇದರ ಜೊತೆಗೆ ಆಯಾ ಮಾದಿಗ ಆ ಜಮೀನುದಾರನಿಗೆ ಪಾದರಕ್ಷೆ ಮಿಣಿ ಮಾಡಿಕೊಡಬೇಕು.

ಇವರನ್ನು ಹೊರತುಪಡಿಸಿ ಬೇರೆ ಯಾವುದೇ ಸಮುದಾಯದ ಜನರು ಸಾವಿಗೀಡಾದರೆ ಸುದ್ದಿ ಮುಟ್ಟಿಸುವ ಕೆಲಸವು ಇವರದು. ಒಂದುವೇಳೆ ಬೇರೆ ಜಾತಿಯ ಕೇರಿಗೆ ಅಥವಾ ಓಣಿಗೆ ಹೋದರೆ

ಯಾವುದೋ ಸಾವಿನ ಸುದ್ದಿ ಬಂದಿದೆ ಎನ್ನುವ ಸಂಕೇತವಾಗಿ ಇವರನ್ನು ಗುರುತಿಸುತ್ತಿದ್ದರು. ಈ ತೆರನಾದ ಜೀವನ ವಿಧಾನದ ಜೊತೆ-ಜೊತೆಗೆ ಅವರದೇಯಾದ ಆಚರಣೆಗಳನ್ನು ಮೈಗೋಡಿಸಿಕೊಂಡು ತಮ್ಮತನವನ್ನು ಉಳಿಸಿಕೊಳ್ಳುವ ಪ್ರಯತ್ನ ಇಂದಿಗೂ ಮುಂದುವರಿಸಿಕೊಂಡು ಬಂದಿದ್ದಾರೆ. ಹೀಗೆ ಜೀವನಾವರ್ತನ ಮತ್ತು ವಾರ್ಷಿಕಾವರ್ತನ ಆಚರಣೆಗಳಲ್ಲಿ ತಮ್ಮ ಮೂಲ ಕುಲಕಸುಬುಗಳಲ್ಲಿ ದೇವರನ್ನು ಮಾದಿಗ ಸಮುದಾಯದವರು ಕಾಣುತ್ತ ಬಂದಿದ್ದಾರೆ. ಈ ಕೆಳಗಿನಂತೆ ವಿವರಿಸಲಾಗಿದೆ.

೫.೨.೧ ಪವಿತ್ರವಾದ ಗಲ್ಲಿನೀರು ಅಥವಾ ಗಂಗೋದಕ

ಮಾದಿಗ ಸಮುದಾಯದ ಗಲ್ಲಿನೀರು ಆಚರಣೆ ಪುರಾತನವಾದ ಪಾರಂಪರಿಕ ಕುಲ ಕಸುಬುಗಳಲ್ಲಿ ಒಂದು. ತಮ್ಮ ಜೀವನ ನಿರ್ವಹಣೆಗೆ ಹಾಗೂ ದೇವರ ರೂಪದಲ್ಲಿ ಕಾಣುವ ವೃತ್ತಿಯೂ ಹೌದು, ಹಾಗೆಯೇ ದೇವರು ಹೌದು. ಈ ಸಮುದಾಯದವರು ಚರ್ಮ ಹದ ಮಾಡುವುದನ್ನು ಮೂಲ ವೃತ್ತಿಯನ್ನಾಗಿಸಿ ಕೊಂಡಿದ್ದಾರೆ. ಪ್ರತಿಯೊಬ್ಬರು ಚರ್ಮ ಹದ ಮಾಡುವ ವೃತ್ತಿಯಲ್ಲಿ ನಿರತರಾಗುತ್ತಿದ್ದರು. 'ಸಮಗಾರ ಮಾದಿಗರು ಚಮ್ಮಾರಿಕೆ ಕಸುಬನ್ನು ನಿರ್ವಹಿಸುತ್ತಾರಾದರೂ ತಂಗಡಿ ಮಾದಿಗರಂತೆ ಸತ್ತ ದನಗಳನ್ನು ಊರಾಚೆಗೆ ಹೊತ್ತೊಯ್ಯುವುದು, ತೊಗಲು ಸುಲಿಯುವ ಕೆಲಸ ಮಾಡುವುದಿಲ್ಲ. ಆದರೂ ಕುಲವಾಡಿಕೆಯ ಪದ್ಧತಿಯಂತೆ ಊರಿನ ಮೇಲ್ಜಾತಿ ಜನರಿಗೆ ನಿಗದಿಯಾದಂತೆ ವರ್ಷಕ್ಕೆ ಇಂತಿಷ್ಟು ಜೊತೆಯೆಂದು ಜೋಡು ಹೊಲಿದು ಕೊಡುತ್ತಾರೆ."[೨] ಆದ್ದರಿಂದ ಮಾದಿಗರನ್ನು 'ತಂಗಡಿ ಮಾದಿಗ'ರು ಎಂದು ಕರೆಯುತ್ತಿದ್ದರು. ಈ ಸಮುದಾಯವು ಚರ್ಮ ಹದ ಮಾಡುವ ಸಮಯದಲ್ಲಿ ಕೈಗೊಳ್ಳುವಂಥ ಮುಖ್ಯ ಕಾರ್ಯಗಳೆಂದರೆ, ನೀರು ಹೇರಳವಾಗಿ ದೊರೆಯುವಂಥ ಸ್ಥಳವನ್ನು ಆಯ್ಕೆ ಮಾಡಿಕೊಂಡು ಭೂಮಿಗೆ ಪೂಜೆ ಮಾಡಿ ಚೌಕಾಕಾರವಾಗಿ ಮೂರು ಅಡಿ ಅಗಲ, ಆರು ಅಡಿ ಆಳವಾದ ಗುಂಡಿಯನ್ನು ತೆಗೆದು ಸುತ್ತಲು ಬಂಡೆ ಅಥವಾ ವಾಡೆಯನ್ನು ಇಡುತ್ತಾರೆ. ಸುತ್ತಲು ನೀರು ಸೋರದ ರೀತಿಯಲ್ಲಿ ಗಾರೆಯಿಂದ ಮುಚ್ಚುತ್ತಾರೆ. ಇದನ್ನು ನಿರ್ಮಾಣ ಮಾಡುವ ವಿಧಾನದಲ್ಲಿ ಪ್ರಾದೇಶಿಕವಾಗಿ ವ್ಯತ್ಯಾಸಗಳನ್ನು ನೋಡಬಹುದು.

ಮಹಿಳೆಯರು ಕಾಡಿನಿಂದ ತಂದಿರುವ ತಂಗಡಿ ಕಟ್ಟಿಗೆಯ ಸಿಪ್ಪೆ ಸುಲಿದು, ಒಣಗಿಸಿ ಪುಡಿಮಾಡಿ, ನೀರು, ಸುಣ್ಣ, ಅಮೃತಬಳ್ಳಿಯನ್ನು ಹಾಕುತ್ತಾರೆ. ಸುಮಾರು ೧೦ರಿಂದ ೧೫ ದಿನಗಳ ಕಾಲ ಹದ ಮಾಡಿ ಇಟ್ಟುಕೊಳ್ಳುತ್ತಾರೆ. ನಂತರ ಸತ್ತಿರುವ ಅಥವಾ ವಧಿಸಿರುವ ಎತ್ತು, ಹಸು, ಎಮ್ಮೆ, ಕೋಣ, ಮೇಕೆ, ಜಿಂಕೆ ಚರ್ಮವನ್ನು ಹಾಕುತ್ತಾರೆ. ಸುಮಾರು ನಾಲ್ಕರಿಂದ ಐದು ದಿನಗಳ ಕಾಲ ನೀರಿನಲ್ಲಿ ಕೊಳೆಯಲು ಬಿಡುತ್ತಾರೆ. ಈ ರೀತಿಯಾಗಿ ನಿರ್ಮಾಣ ಮಾಡಿದ ದೋಣಿಯನ್ನು ಗಲ್ಲಿ, ಎಲ್ಲಮ್ಮ, ಗಾಳೆದಮ್ಮ ಹೀಗೆ ಅನೇಕ ಹೆಸರುಗಳಿಂದ ಕರೆಯುತ್ತರೆ.

ಮೊದಲನೆಯದಾಗಿ ಚರ್ಮದಲ್ಲಿಯಿದ ಮಾಂಸ(ಕಂಡ)ವನ್ನು ಸ್ವಚ್ಛಗೊಳಿಸಿ ಚರ್ಮಕ್ಕೆ ಸುಣ್ಣ ಅಥವಾ ಬೂದಿಯನ್ನು ಹಾಕಿ ದುಂಡಕಾರವಾಗಿ ಸುತ್ತಿ ಗಲ್ಲಿಯಲ್ಲಿ ಸುಮಾರು ಮೂರುರಿಂದ ನಾಲ್ಕು ದಿನಗಳವರಗೆ ಇಡುತ್ತಾರೆ. ಚರ್ಮದಲ್ಲಿ ಸುಣ್ಣ ಅಥವಾ ಬೂದಿಯನ್ನು ಹಾಕುವುದರಿಂದ ಚರ್ಮವು

ತೆಳುವಾಗುತ್ತದೆ. ನಂತರ ಚರ್ಮವನ್ನು ಹೊರ ತೆಗೆದು ಅದನ್ನು ಹಾಸು ಕಲ್ಲುಬಂಡೆ ಮೇಲೆ ಹಾಕಿಕೊಂಡು ಚರ್ಮದಲ್ಲಿನ ಕೂದಲುಗಳನ್ನು ಚೂರಿ(ಚಾಕು)ಯಿಂದ ಸ್ವಚ್ಛಗೊಳಿಸುತ್ತಾರೆ. ಹೀಗೆ ಮಾಡಿದ ಚರ್ಮವನ್ನು ಬಿಸಿಲಿಗೆ ಒಣಗಿಸಿ ತಪ್ಪಡೆ(ತಮಟೆ), ಡೋಲು, ಡಕ್ಕೆ, ಉರುಮೆ ಮುಂತಾದ ಚರ್ಮವಾದ್ಯಗಳಿಗೆ ಬಳಸುವರು. ಉಳಿದ ಚರ್ಮವನ್ನು ಚಪ್ಪಲಿ, ಹಗ್ಗ ಮತ್ತು ಕೆಲವು ವ್ಯವಸಾಯಕ್ಕೆ ಉಪಯೋಗಿಸುವ ವಸ್ತುಗಳಿಗೆ ಬಳಸುತ್ತಾರೆ.

ಎರಡನೇಯದಾಗಿ ಚರ್ಮಕ್ಕೆ ಉಪ್ಪನ್ನು ಹಾಕುತ್ತಾರೆ. ಉಪ್ಪು ಹಾಕುವುದರಿಂದ ಚರ್ಮವ ದಪ್ಪವಾಗುತ್ತದೆ. ಉಪ್ಪು ಹಾಕಿದ ಚರ್ಮವನ್ನು ಸುಮಾರು ನಾಲ್ಕರಿಂದ ಐದು ದಿನಗಳ ಕಾಲ ಗಲ್ಲಿಯಲ್ಲಿ ಬಿಡುತ್ತಾರೆ. ನಂತರ ಅದನ್ನು ತೆಗೆದು ಸುತ್ತಲು ತಂಗಡಿ ಕಟ್ಟಿಗೆಯನ್ನು ಬಡಿಯುತ್ತಾರೆ. ನಾಲ್ಕು ರಿಂದ ಐದು ದಿನಗಳ ಕಾಲ ಒಣಗಿಸಿ ಚರ್ಮವನ್ನು ಹದ ಮಾಡುತ್ತಾರೆ. ಈ ಚರ್ಮವನ್ನು ಚಪ್ಪಲಿ, ಚೀಲ, ಬ್ಯಾಗ್, ನೀರಬಾನಿ (ಗಾಣ ಸುತ್ತಲು ಹಗ್ಗ), ಕಪಿಲೆ ಬಾನಿ (ಗಾಣದಿಂದ ನೀರು ತೆಗೆಯಲು ಚೀಲ), ಚಕ್ರ ತಮಟೆ, ಡೋಲು ಹಾಗೂ ವ್ಯವಸಾಯಕ್ಕೆ ಬೇಕಾಗುವ ವಸ್ತುಗಳನ್ನು ತಯಾರು ಮಾಡಲು ಉಪಯೋಗಿಸುತ್ತಾರೆ. ಉಳಿದ ಚರ್ಮವನ್ನು ಪಕ್ಕದ ಪಟ್ಟಣಕ್ಕೆ ಹೋಗಿ ಒಂದು ಗೇಣಿಗೆ ೧೦೦೦ ಸಾವಿರ ರೂಪಾಯಿಗಳಿಗೆ ವ್ಯಾಪಾರ ಮಾಡಿಕೊಂಡು ಬರುತ್ತಿದ್ದರು.

ಮೇಲಿನ ಎಲ್ಲ ಅಂಶಗಳನ್ನು ಗಮನಿಸಿದಾಗ ಅದರ ಉಪಯೋಗ ಹಾಗೂ ಬಳಸುವ ವಿಧಾನ ಕುರಿತು ಚರ್ಚೆ ಮಾಡಲಾಗಿತ್ತು. ಆದರೆ ಮುಖ್ಯವಾಗಿ ಇದರ ನೀರು ಬಹಳ ಮಹತ್ವವಾದ ಕೆಲಸಕ್ಕೆ ಬಳಸುತ್ತಾರೆ ಹಾಗೂ 'ಈ ನೀರಿಗೆ ಔಷಧಿಯ ಗುಣವಿದೆಯೆಂಬುದು ೧೨ನೇ ಶತಮಾನದ ಶರಣರ ನಂಬಿಕೆಯು ತಿಳಿಸುತ್ತದೆ."[೩] ಅದರ ನೀರು ಔಷಧಿಯ ಗುಣವುಳ್ಳ ಪವಿತ್ರ ಜಲವೆಂಬುದು ಮಾದಿಗ ಸಮುದಾಯದಲ್ಲಿ ಲಾಗಾಯ್ತಿನಿಂದ ಬಂದ ನಂಬಿಕೆ. ಇಂತಹ ಗಲ್ಲೆಬಾನಿಯ ಔಷಧಿಯುಕ್ತ ನೀರನ್ನು ಕುಡಿಯಲು ಬ್ರಾಹ್ಮಣ ಮಹರ್ಷಿ ವಸಿಷ್ಠನು ಗಂಗಸ್ಥಳದ ಮಾತಂಗಿಪುರದ ಗೋಸಂಗಿ ಕುಲದ ಮಾದಿಗರ ಆರಂಜ್ಯೋತಿಯ ಮನಗೆ ಬರುತ್ತಾನೆ. ಆರಂಜ್ಯೋತಿಯು ಹಾರುವ ಯುವಕನೊಬ್ಬ ಗಲ್ಲೆಬಾನಿಯ ನೀರು ಕುಡಿದಂತೆ ಕಲ್ಪಿಸಿಕೊಂಡು ಅವಳ ಕಣ್ಣೆದುರಿಗೇ ನಿಜದ ಘಟನೆಯಾಗಿ ಸಂಭವಿಸುವ ಬಗೆಯನ್ನು 'ಆರಂಜ್ಯೋತಿ ಕಲ್ಯಾಣದ ಕತೆ' ತಿಳಿಸುತ್ತದೆ."[೪]

ಗಲ್ಲಿಯನ್ನು ಇಂದಿಗೂ ಈ ಸಮುದಾಯದವರು ದೇವರ ರೂಪದಲ್ಲಿ ಕಾಣುತ್ತಾರೆ. ಆದ್ದರಿಂದ ಅದನ್ನು ಎಲ್ಲಮ್ಮ, ಗಲ್ಲೆಬಾನಿ, ಗಂಗೋದಕ, ಗಾಳೆದೆಮ್ಮ ಎಂದು ಕರೆಯುತ್ತಾರೆ. ಗಲ್ಲಿಯ ನೀರನ್ನು ಶುಭ ಹಾಗೂ ಅಶುಭ ಕಾರ್ಯಗಳಿಗೂ ಬಳಸುತ್ತಾರೆ. ನೀರನ್ನು ತುಂಬಲು ಕುಂಬಾರ ಮನೆಯಿಂದ ತಂದ ಮಡಿಕೆಗೆ ಗಲ್ಲಿನೀರು ಹಾಕಿ ಮಡಿಕೆಗೆ ಪೂಜೆಯನ್ನು ಮಾಡುವರು. ಆ ಸಂದರ್ಭದಲ್ಲಿ ತೆಂಗಿನಕಾಯಿ, ವಿಭೂತಿ, ಕುಂಕುಮ, ಬಾಳೆಹಣ್ಣು, ವೀಳ್ಯದೆಲೆ, ಅಡಿಕೆ, ಅಗರಬತ್ತಿ ಇತ್ಯಾದಿ ವಸ್ತುಗಳನ್ನು ಪೂಜೆಗಾಗಿ ಬಳಸುತ್ತಿದ್ದರು. ಈ ಗಲ್ಲಿನೀರನ್ನು ದಲಿತರ ಮನೆಗಳಿಗೆ ಹಾಗೂ ದಲಿತೇತರ ಮನೆಗಳಿಗೆ ಪವಿತ್ರಕಾರ್ಯಗಳಿಗಾಗಿ ತೆಗೆದುಕೊಂಡು ಹೋಗುತ್ತಾರೆ. ಅಲ್ಲದೆ ಈ ನೀರನ್ನು ಮಾಟ-ಮಂತ್ರ,

ಹೊಲಗದ್ದೆಗಳಲ್ಲಿ ರೋಗ ಬಂದರೆ, ಕುಟುಂಬದಲ್ಲಿ ಕಲಹ ಹಾಗೂ ಹಬ್ಬ ಹರಿದಿನಗಳ ಸಂದರ್ಭದಲ್ಲಿ ಈ ನೀರನ್ನು ಬಳಸುತ್ತಾರೆ.

• ದೇವದಾಸಿ ಪದ್ಧತಿಯಲ್ಲಿ ಗಲ್ಲಿನೀರಿನ ಮಹತ್ವ

ದೇವದಾಸಿಯರು ಮುತ್ತು ಕಟ್ಟಿಸಿಕೊಂಡು ಮನೆಗೆ ಬಂದಂತಹ ಸಂದರ್ಭದಲ್ಲಿ ಪೂಜೆ ಮಾಡುವರು. ಮೂಲಕ ದೇವರನ್ನು ಹಿಂದಕ್ಕೆ ಕಳುಹಿಸುತ್ತಾರೆ. ಮನೆಗಳಲ್ಲಿ ಗದ್ದಿಗೆ ಪೂಜೆಯನ್ನು ಮಾಡುವರು. ಗದ್ದಿಗೆ ಮೇಲೆ ಜೋಗತಿಯನ್ನು ಕೂರಿಸಿ ಉಡಿತುಂಬಿ ಮೂರುಬಾರಿ ಗಲ್ಲಿನೀರು ತಲೆಯ ಮೇಲೆ ಗರಿಕೆಯಿಂದ(ಹುಲ್ಲು) ಚಿಮ್ಮುವರು. ಗಲ್ಲಿನೀರು ಎಲ್ಲಮ್ಮ ದೇವಿಯ ಪ್ರತಿರೂಪವಾಗಿರುವುದೇ ಇದಕ್ಕೆ ಕಾರಣವಾಗಿದೆ. ಪೂಜೆ ನಂತರ ಮನೆಯಿಂದ ಹೊರ ಬಂದು ದೇವರಿಗೆ ನಮಸ್ಕರಿಸಿ ಒಳಗೆ ಹೋಗುವಳು.

• ಹೊಲಗದ್ದೆಗಳಲ್ಲಿ ಗಲ್ಲಿನೀರಿನ ಮಹತ್ವ

ಊರಿನ ಎಲ್ಲ ಸಮುದಾಯದವರು ತಮ್ಮ ಹೊಲಗದ್ದೆಯಲ್ಲಿ ಗಲ್ಲಿ ನೀರನ್ನು ಇಂದಿಗೂ ಬಳಸುವುದನ್ನು ಕಾಣುತ್ತೇವೆ. ಹೊಲದಲ್ಲಿನ ಬೆಳೆಗಳಿಗೆ ರೋಗ ಬಂದರೆ ತಡೆಯಲು ಗಲ್ಲಿನೀರನ್ನು ತಂದು ಬೆಳೆಯ ಸುತ್ತಲು ಚೆಲ್ಲುವರು. ಮೇಲ್ವರ್ಗದವರಿಗೆ ಗಲ್ಲಿನೀರು ಅಗತ್ಯವಿದ್ದಾಗ ಮಾದಿಗ ಸಮುದಾಯದ ಹಿರಿಯ ಮುಖಂಡನಿಂದ ತರಿಸಿಕೊಂಡು ಹೊಲದಲ್ಲಿ ರೋಗ ಬಂದ ಬೆಳೆಗಳಿಗೆ ಬಳಸುವರು. ಮಡಿಕೆಯಲ್ಲಿ ತಂದ ಗಲ್ಲಿನೀರಿಗೆ ಪೂಜೆ ಮಾಡಿ ಹೊಲಗದ್ದೆಯ ಸುತ್ತಲೂ ಚೆಲ್ಲುತ್ತಾರೆ. ನಂತರ ಕೊನೆಯದಾಗಿ ಮೂರು ಬಾರಿ ಹೊಲಕ್ಕೆ ಕೈಮುಗಿದು ಮನೆಗೆ ಬರುವರು. ಹೀಗೆ ಮಡುವುದರಿಂದ ರೋಗವು ಬೆಳೆಗಳಿಗೆ ಬರುವುದಿಲ್ಲ ಎಂಬುದು ಹಿರಿಯರ ನಂಬಿಕೆ.

• ಕೌಟುಂಬಿಕ ಕಲಹದಲ್ಲಿ ಗಲ್ಲಿನೀರಿನ ಪಾತ್ರ

ಮಾದಿಗ ಸಮುದಾಯದವರ ನಂಬಿಕೆಯಂತೆ ಕುಟುಂಬದಲ್ಲಿ ಉಂಟಾಗುವ ವೈಮನಸ್ಸು, ಜಗಳ, ಸಂದರ್ಭಗಳಲ್ಲಿ ಗಲ್ಲಿನೀರನ್ನು ತಂದು ಮನೆಯ ಬಾಗಿಲ ಮೇಲೆ ಇರುವ ತೊಲೆಗೆ ಕಟ್ಟಿ ಮನೆಯ ಸುತ್ತಲು ಚೆಲ್ಲುವರು. ಈ ರೀತಿ ಮಾಡುವುದರಿಂದ ಕುಟುಂಬದಲ್ಲಿ ಉಂಟಾದ ಸಮಸ್ಯೆಗಳು ನಿವಾರಣೆಯಾಗುತ್ತವೆ ಎಂಬುದು ಈ ಸಮುದಾಯದವರ ನಂಬಿಕೆ. ಇದೇ ರೀತಿಯ ಆಚರಣೆಯನ್ನು ಇತರೆ ಮೇಲ್ವರ್ಗದವರೂ ಸಹ ತಮ್ಮ ಕೌಟುಂಬಿಕ ಕಲಹಗಳಾದಾಗ ಅನುಸರಿಸುವುದನ್ನು ಕಾಣುತ್ತೇವೆ.

ಇಂತಹ ಪವಿತ್ರವಾದ ವೃತ್ತಿಯನ್ನು ಬೇರೆ ಯಾವುದೇ ಸಮುದಾಯದವರು ಮಾಡುವುದಿಲ್ಲ ಹಾಗೂ ಮುಟ್ಟುವುದಿಲ್ಲ. ಈ ವೃತ್ತಿ ಮಾಡಿದರೆ ಬೆಳೆದಂತಹ ಬೆಳೆಯಲ್ಲಿ ಸ್ವಲ್ಪ ಪ್ರಮಾಣದಲ್ಲಿ ಪಾಲು ಕೊಡುವಂತಹ ವಾಡಿಕೆ ಬೆಳೆದುಕೊಂಡು ಬಂದಿದೆ. ಇತ್ತೀಚಿನ ದಿನಗಳಲ್ಲಿ ಕಾರ್ಖಾನೆಗಳಲ್ಲಿ ತಯಾರಾದ ವಿನೂತನ ವಿನ್ಯಾಸಗಳ ಪಾದರಕ್ಷೆಗಳ ಮಹಾಪೂರವೇ ಹಳ್ಳಿಗಳಿಗೆ ಹರಿದು ಬರುತ್ತಿರುವುದರಿಂದ ಹಳ್ಳಿಯ ಚಮ್ಮಾರ ಪೈಪೋಟಿ ಮಾಡಲಾರ. ಹಳ್ಳಿಗಳಲ್ಲಿ ಸಾಮಾನ್ಯವಾದ ಒಂದು ಪಾದರಕ್ಷೆಯ

ತಯಾರಿಗೆ ಒಬ್ಬ ಮಾದಿಗರಿಗೆ ಮೂರು ದಿನಗಳು ಬೇಕಾಗುತ್ತದೆ. ಇಷ್ಟೊಂದು ಸಮಯವನ್ನು ಒಂದು ಜೊತೆ ಪಾದರಕ್ಷೆ ತಯಾರಿಕೆಗೆ ವ್ಯಯಿಸುವುದು ಲಾಭದಾಯಕ ಖಂಡಿತಾ ಅಲ್ಲ. ಆದ್ದರಿಂದ ವೃತ್ತಿಯು ನೂರಕ್ಕೆ ಎಂಬತ್ತು ಭಾಗ ಕಡಿಮೆಯಾಗಿದೆ. ಇಂದಿನ ಕಂಪ್ಯೂಟರ್ ಯುಗದಲ್ಲಿ ಯುವಕರು ಈ ವೃತ್ತಿಯನ್ನು ಮಾಡಲು ಇಷ್ಟ ಪಡುವುದಿಲ್ಲ. ಕುಟುಂಬಗಳಲ್ಲಿ ಉನ್ನತವಾದ ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಮತ್ತೆ ನಗರದ ಕಡೆಗೆ ವಲಸೆ ಹೋಗುವುದರಿಂದ ಹೆಚ್ಚು ಹಣ ಸಂಪಾದನೆ ಮಾಡಿಕೊಂಡು ಜೀವನವನ್ನು ನಡೆಸುವಂತಹ ಪ್ರಯತ್ನದಲ್ಲಿದ್ದಾರೆ ಮಾದಿಗ ಸಮುದಾಯದವರು.

೫.೨.೨ ತಂಗಡಿ ಗಿಡದ ಮೇಲೆ ಇರುವ ನಂಬಿಕೆ

ಮಾದಿಗ ಸಮುದಾಯದವರು ತಂಗಡಿ ಗಿಡದ ಮೇಲೆ ಅಪಾರ ನಂಬಿಕೆಯನ್ನಿಟ್ಟುಕೊಂಡಿದ್ದಾರೆ. ಜಂಬುನೇರಳೆ, ಅತ್ತಿಮರ, ಅರಳಿಮರ ಹಾಗೂ ತಂಗಡಿ ಗಿಡವನ್ನು ಮಾದಿಗ ಸಮುದಾಯದ ಉಪಜಾತಿಯಾಗಿರುವ ಮಾಸ್ತೀಕರು, ಸಿಂದ್ ಮಾದಿಗರು, ದಕ್ಕಲರು, ಗೋಸಂಗಿಗಳು, ಅಸಾದಿಗಳು, ಬಾಲಬಸವರು, ಸಿಂದೋಳ್ಳರು, ಸಮಗಾರ ಮಾದಿಗರು ದೇವರಂತೆ ಕಾಣುತ್ತಾರೆ. 'ಆದಿಜಾಂಬ ಪರಂಪರೆಯ ಸಿಂದ್ ಮಾದಿಗರ ಮೂಲನೆಲೆ ಆಂಧ್ರಪ್ರದೇಶದ ತೆಲಂಗಾಣ ಪ್ರಾಂತ್ಯ. ಭೋಗಂ ಮಾದಿಗವಾರು ಅಥವಾ ಭೋಗಾಲು ಎಂದು ಕರೆಯಲಾಗುವ ಸಿಂದ್ ಮಾದಿಗರು ಪ್ರದರ್ಶಿಸುವ 'ತಂಗಡಿದ್ಯಾವ್ರ' ಆಚರಣೆಯು ಜಾಂಬುಕುಲ ಚರಿತ್ರೆಯನ್ನು ನಾಟ್ಯರೂಪದಲ್ಲಿ ಸಾರುತ್ತದೆ. ಸಿಂದ್ ಕಾವ್ಯ ಹಾಡುತ್ತಾ ತಂಗಡಿಗಿಡದ ಮುಂದೆ ಕುಣಿದು ಆಚರಿಸುವ 'ತಂಗಡಿದ್ಯಾವ್ರ', ಮಾದಿಗ ಕುಲಗಳು ಮದುವೆಯ ಮರುದಿನ ಅಂದರೆ ನಾಗೋಲಿಶಾಸ್ತ್ರದ ದಿನ, ಊರ ಹೊರಗೆ ತಂಗಡಿ ಗಿಡದ ಬಳಿ ಆಚರಿಸುವ ವಿಶಿಷ್ಟ ಆಚರಣೆ."೫ ತಂಗಡಿ ಗಿಡವನ್ನು ಪ್ರಾದೇಶಿಕವಾಗಿ ಹಲವಾರು ಪದಗಳಿಂದ ಕರೆಯಲಾಗುತ್ತದೆ. ತಂಕಟಗಿಡ, ಬಂಗಾರದ ಗಿಡ, ಹೊನ್ನಂಬಾರಿ ಹೀಗೆ ಅನೇಕ ಹೆಸರುಗಳಿಂದ ಕರೆಯುತ್ತಾರೆ. ಈ ಸಮುದಾಯದಲ್ಲಿ ಹುಟ್ಟಿನಿಂದ ಸಾವಿನವರೆಗೆ ಹಾಗೂ ಜಾತ್ರೆ-ಹಬ್ಬಗಳ ಸಮಯದಲ್ಲಿ ಇದರ ಸೊಪ್ಪು ಮತ್ತು ಹೂವುಗಳು ಅತ್ಯಂತ ಮಹತ್ವವಾದ ಪಾತ್ರವನ್ನು ನಿಭಾಯಿಸುತ್ತವೆ.

- **ಜನನದ ಸಂದರ್ಭದಲ್ಲಿ ತಂಗಡಿದ ಪಾತ್ರ**

ಮಾದಿಗರ ಮನೆಯಲ್ಲಿ ಹುಟ್ಟಿದ ಮಕ್ಕಳಿಗೆ ವಾಡಿಕೆಯಂತೆ ಬೆಳಗಿನ ಜಾವ, ಸಂಜೆ ವೇಳೆ ಉಗುರು ಬೆಚ್ಚನೆಯ ನೀರು ಹಾಕುವುದು ವಾಡಿಕೆ. ಸ್ನಾನ ಮಾಡಿಸಿದ ನಂತರ ತಾಯಿ ಮತ್ತು ಮಗುವಿಗೆ ತಂಗಡಿ ಕಟ್ಟಿಗೆಯ ಬೆಂಕಿಕೆಂಡದಲ್ಲಿ ತಲೆಕೂದಲನ್ನು ಆರಿಸುವರು ಮತ್ತು ಆ ಬೆಂಕಿ ಕೆಂಡದಿಂದ ಮನೆಯಲ್ಲಿ ಲೋಬಾನ ಹಾಕುವರು. ಹುಟ್ಟಿದ ಮಗುವಿಗೆ ೧೫ ದಿನದಲ್ಲಿ ಕರಳುಬಳ್ಳಿ ವಾಸಿಯಾಗದಿದ್ದರೆ ಅದು ನಂಜು ಆಗಿದೆ ಎಂದು ತಿಳಿದು ತಂಗಡಿ ಹೂವನ್ನು ಒಣಗಿಸಿ ಅದರ ಪುಡಿಗೆ ಕೊಬ್ಬರಿ ಎಣ್ಣೆಯನ್ನು ಮಿಶ್ರಣಮಾಡಿ ಕರಳು ಬಳ್ಳಿಗೆ ಹಚ್ಚುವರು. ಈ ರೀತಿ ಮಾಡುವುದರಿಂದ ಅದು ವಾಸಿಯಾಗುತ್ತದೆ ಎಂದು ಅವರು ಹೇಳುತ್ತಾರೆ.

- **ಋತುಮತಿಯಾದ ವೇಳೆ ತಂಗಡಿ ಗಿಡದ ಮಹತ್ವ**

ಚಿತ್ರದುರ್ಗ ಜಿಲ್ಲೆಯ ಮಾದಿಗ ಸಮುದಾಯದ ಯುವತಿಯರು ಋತುಮತಿಯಾಗಿ ೧೬ ದಿನದಲ್ಲಿ ಋತುಮತಿ ಕಾರ್ಯವನ್ನು ಮಾಡುತ್ತಾರೆ. ಅಂತಹ ಸಮಯದಲ್ಲಿ ಯುವತಿಗೆ ಹೊಸ ಸೀರೆ,

ಹೂವುಗಳಿಂದ ಶೃಂಗರಿಸಿ ತಮಟೆಯ ಮೂಲಕ ಊರಿನ ಆಚೆಯಿರುವ ತಂಗಡಿ ಗಿಡದ ಹತ್ತಿರ ಕರೆದುಕೊಂಡು ಬರುವರು. ತಂಗಡಿ ಗಿಡಕ್ಕೆ ಬಾಳೆದೆಲೆಯ ಮೇಲೆ ಉತ್ತತ್ತಿ(ಖರ್ಜೂರ), ಬಾಳೆಹಣ್ಣು, ವೀಳ್ಯೆದಲೆ, ಅಡಿಕೆ, ಸಿಗಳೆ, ತೊಮಟ(ಸಜ್ಜೆ ಇಟ್ಟಿನಿಂದ ಮಾಡಿರುವುದು) ಇಟ್ಟು ಋತುಮತಿಯಾದ ಹುಡುಗಿಯಿಂದ ಪೂಜೆ ಮಾಡಿಸಿ. ಮೂರು ಬಾರಿ ತಂಗಡಿ ಗಿಡ ದಾಟಿಸುತ್ತಾರೆ. ತಲೆಯ ಮೇಲೆ ಇರುವ ಕರಿ ಕಂಬಳಿಯನ್ನು ತೆಗೆದುಹಾಕಿ ತಮಟೆ ಬಾರಿಸುವುದರ ಮೂಲಕ ಮನೆಗೆ ಕರೆದುಕೊಂಡು ಬರುವರು.

• ಸಾವಿನ ಸಂದರ್ಭದಲ್ಲಿ ತಂಗಡಿ ಗಿಡದ ಪಾತ್ರ

ಮಾದಿಗ ಸಮುದಾಯದಲ್ಲಿ ಯಾರಾದರೂ ಸತ್ತರೆ ಈ ಗಿಡದ ಉಪಯೋಗವಿದೆ. ಇದು ಇಲ್ಲದೆ ಯಾವುದೇ ಕಾರ್ಯಗಳು ನಡೆಯುವುದೇ ಇಲ್ಲ. ಸತ್ತ ವ್ಯಕ್ತಿಯ "ಚಟ್ಟವನ್ನು" ಸಮಾಧಿ ಮಾಡುವ ಸ್ಥಳಕ್ಕೆ ತರುವ ಮಧ್ಯ ಎಲ್ಲಿಯಾದರೂ ತಂಗಡಿ ಗಿಡ ಸಿಕ್ಕರೆ ಅದಕ್ಕೆ ಹಿಂಡೆಕೂಳು ಹಾಕಿ ಸತ್ತಿರುವ ವ್ಯಕ್ತಿಯ ಹೆಂಡತಿಯ ತಾಳಿಯನ್ನು ಆ ಗಿಡಕ್ಕೆ ಹಾಕುತ್ತಾರೆ. ಹಾಗೂ ಶವ ಮಣ್ಣು ಮಾಡಲು ಬಂದ ಎಲ್ಲರೂ ಎಡಗೈಯಿಂದ ಹಿಂಡಿಕೂಳಿಗೆ ಕಲ್ಲು ಹೊಡೆಯುತ್ತಾರೆ. ಅನಂತರ ಸ್ಮಶಾನದಲ್ಲಿ ಶವವನ್ನು ಹಾಕುವುದಕ್ಕಿಂತ ಮೊದಲು ತಂಗಡಿ ಸೊಪ್ಪು ಹಾಕುವುದು ವಾಡಿಕೆ. ಇಲ್ಲಿಯೂ ಬಂದಿರುವ ಸಂಬಂಧಿಕರು ಎಡಗೈಯಿಂದ ತಂಗಡಿಯ ಸೊಪ್ಪು ಮತ್ತು ಮೂರು ಬಾರಿ ಮಣ್ಣು ಹಾಕಿ ಕುಣಿ ಮುಚ್ಚುತ್ತಾರೆ.

• ದೇವರ ಪೂಜೆ ಮಾಡುವಲ್ಲಿ ತಂಗಡಿ ಹೂವಿನ ಪಾತ್ರ

ಮಾದಿಗರ ಆರಾಧ್ಯ ದೇವರುಗಳಾದ ಮಾತಂಗಿ, ಕೊಲ್ಲಾರಮ್ಮ, ದೊಡ್ಡಹಿರಿಯಮ್ಮ, ಸಣ್ಣ ಹಿರಿಯಮ್ಮ, ದುರುಗಮ್ಮ, ಕೇರಿಮಾರಮ್ಮ, ಗೌರಸಮುದ್ರ ಮಾರಮ್ಮ, ಎಲ್ಲಮ್ಮ, ಪೆನ್ನೊಬಳೇಶ್ವರ, ನುಂಕೆಮಲೇಶ್ವರ, ಹರಳಯ್ಯ ಇತ್ಯಾದಿ ದೇವರುಗಳ ಪೂಜೆಯಲ್ಲಿ ತಂಗಡಿ ಹೂವಿನಿಂದ ಅಲಂಕರಿಸುತ್ತರೆ. ಪೂಜೆಗೆ ಬಂದಿರುವ ಭಕ್ತರಿಗೆ ಒಂದು ಹೂವನ್ನು ಕೊಡುವ ಸಂಪ್ರದಾಯವಿದೆ. ಹೀಗಾಗಿ ಭಕ್ತಿಪೂರ್ವಕವಾಗಿ ದೇವರಿಗೆ ಅರ್ಪಿಸುವಲ್ಲಿಯೂ ತಂಗಡಿ ಹೂವು ತನ್ನ ಶ್ರೇಷ್ಠತೆಯನ್ನು ಪಡೆದುಕೊಂಡಿದೆ.

• ಸಿಡಿಮರದ ಆಚರಣೆ ವೇಳೆ ತಂಗಡಿ ಗಿಡದ ಪಾತ್ರ

ಜಾತ್ರೆಯಲ್ಲಿ ಸಿಡಿಮರವನ್ನು ಸುತ್ತತ್ತಾರೆ. ಸಿಡಿ ಸುತ್ತುವ ಮರಕ್ಕೆ ತಂಗಡಿ ಗಿಡವನ್ನು ಆಯ್ಕೆ ಮಾಡುತ್ತಾರೆ. ಮಂಗಳವಾರ ಅಥವಾ ಶುಕ್ರವಾರ ತಮಟೆ ಉರುಮೆ ಬಾರಿಸುವುದರ ಮುಲಕ ದೇವರು ಬರುವಂತೆ ಮಾಡುತ್ತಾರೆ. ಊರಿನ ಪ್ರಮುಖರು ಊರಿನ ಒಳಿತಿಗಾಗಿ ದೇವರ ಜಾತ್ರೆ ಮಾಡಬೇಕು. ಆದ್ದರಿಂದ ಸಿಡಿ ಮರವನ್ನು ಆಯ್ಕೆ ಮಾಡಬೇಕು ಎಂದು ಕೇಳುತ್ತಾರೆ. ಪೂಜಾರಿ ಕಾಡಿನಲ್ಲಿ ಹೋಗಿ ತಂಗಡಿ ಗಿಡವನ್ನು ಗುರುತಿಸುತ್ತಾನೆ. ಆ ಗಿಡಕ್ಕೆ ಕೆಂಪು ಸೀರೆ ಕಟ್ಟಿ, ತೆಂಗಿನಕಾಯಿ ಒಡೆದು ಹಾರ ಹಾಕಿ ಪೂಜೆ ಮಾಡಿ ಹಿರಿಯರು ಗ್ರಾಮಸ್ಥರಿಗೆ ಈ ಗಿಡವನ್ನು ಯಾರು ಕಡಿಯಬಾರದು ಎಂದು ಆದೇಶವನ್ನು ಮಾಡುತ್ತಾರೆ.

ಅಂದಿನಿಂದ ಆ ಗಿಡವನ್ನು ಯಾರು ಮುಕ್ಕು ಮಾಡುವುದಿಲ್ಲ. ಸುಮಾರು ಹತ್ತು ಅಥವಾ ಹದಿನೈದು ವರ್ಷಗಳು ಬಿಟ್ಟು ಮತ್ತೆ ಆ ಕಾಲ ಅವಧಿ ಮುಗಿದ ಮೇಲೆ ಪೂಜಾರಿ ಊರಿನ ಗ್ರಾಮಸ್ಥರ ಸಮ್ಮುಖದಲ್ಲಿ ಬಡಿಗೇರನಿಂದ ಮರಕ್ಕೆ ಪೂಜೆ ಮಾಡಿಸಿ ಕಡಿಯುತ್ತಾರೆ. ಮೂರು ಅಥವಾ ನಾಲ್ಕು ತಿಂಗಳು ಒಣಗಿಸಿ ಬಡಿಗಿ ಸಿಡಿ ಮರವನ್ನು ಸಿದ್ಧಪಡಿಸುತ್ತಾರೆ. ಸಿಡಿ ಮರಕ್ಕೆ ಔಡಲದ ಎಣ್ಣೆಯನ್ನು ಲೇಪಿಸುತ್ತಾರೆ. ಜಾತ್ರೆಯ ಸಂದರ್ಭದಲ್ಲಿ ಮರದ ತುಂಬ ಹೂವಿನಿಂದ ಅಲಂಕಾರ ಮಾಡಿ ಸಿಡಿಮರ ಸುತ್ತಲು ಆಯ್ಕೆ ಮಾಡಿದ ವ್ಯಕ್ತಿಯಿಂದ ಸುತ್ತಿಸುತ್ತಾರೆ.

• ಚರ್ಮ ಹದ ಮಾಡುವ ಸಂದರ್ಭದಲ್ಲಿ ತಂಗಡಿ ಗಿಡದ ಪಾತ್ರ

ಮಾದಿಗ ಸಮುದಾಯದ ಪಾರಂಪರಿಕ ವೃತ್ತಿಯಾದ ಚಮ್ಮಾರಿಕೆ ವೃತ್ತಿಯಲ್ಲಿ ತಂಗಡಿ ಗಿಡದ ಪಾತ್ರ ಬಹಳ ಮಹತ್ವವಾದುದು. ತಂಗಡಿ ಗಿಡ ಚರ್ಮವು ವಾಸನೆ ಬಾರದಂತೆ ಮಾಡುವ ಶಕ್ತಿಯನ್ನು ಹೊಂದಿದೆ. ಅಲ್ಲದೆ ಚರ್ಮವನ್ನು ದಪ್ಪವಾಗಿಸುವಲ್ಲಿಯೂ ಸಹಕಾರಿಯಾಗಿದೆ. ಚರ್ಮವನ್ನು ಹಿಗ್ಗಿಸಲು ಇದರ ಕಟ್ಟಿಗೆಯನ್ನು ಬಳಸುತ್ತಾರೆ. ಮತ್ತು ಚರ್ಮವನ್ನು ಹದ ಮಾಡುವಾಗ ತಂಗಡಿ ಪುಡಿ ಬಳಕೆ ಅತಿ ಅವಶ್ಯಕ. ಈ ಪುಡಿಯನ್ನು ಲೇಪಿಸದಿದ್ದರೆ ಕೆಟ್ಟ ವಾಸನೆ ಬರುವ ಸಾದ್ಯತೆಯೇ ಹೆಚ್ಚು. ಹೀಗೆ ಹದ ಮಾಡುವಲ್ಲಿಯೂ ತಂಗಡಿ ಗಿಡ ತನ್ನ ಶ್ರೇಷ್ಠತೆಯನ್ನು ಪಡೆದುಕೊಂಡಿದೆ.

• ತಂಗಡಿ ಗಿಡದ ಇತರೆ ವಿಶೇಷತೆಗಳು

• ಸಿಡಿಲು ಹೆಚ್ಚಿನದಾಗಿ ತಂಗಡಿ ಗಿಡಕ್ಕೆ ಹೊಡೆಯುತ್ತದೆ. ಕಾರಣ ಅದು ಗಟ್ಟಿಮುಟ್ಟದ ಗಿಡ.

• ಮಳೆ ಬರುವಾಗ ದನಗಳ ಕಾಲ ಕೆಳಗೆ ತಂಗಡಿ ಸೊಪ್ಪು ಬಳಸುತ್ತಾರೆ. ದನಗಳನ್ನು ಚಳಿಯಿಂದ ತಂಗಡಿ ಸೊಪ್ಪು ರಕ್ಷಿಸುತ್ತದೆ.

• ನಾಟಿ ಕೋಳಿಯು ಮೊಟ್ಟೆ ಮರಿ ಮಾಡಿಸಲು ತಂಗಡಿ ಸೊಪ್ಪು ಬಳಸುತ್ತಾರೆ. ಕಾರಣ ತಂಗಡಿ ಸೊಪ್ಪಿನಲ್ಲಿ ಹೆಚ್ಚು ಉಷ್ಣಾಂಶ ಇರುವುದು ಹಾಗೂ ಮೊಟ್ಟೆ ಕೆಡುವುದನ್ನು ತಡೆಯುತ್ತದೆ.

◆ ತಂಗಡಿ ಹೂವಿನ ಚಹಾ

ಮಾದಿಗ ಸಮುದಾಯದಲ್ಲಿ ಪ್ರತಿದಿನ ಬೆಳಗಿನ ಜಾವ ತಂಗಡಿ ಹೂವಿನ ಚಹಾವನ್ನು ಬಳಸುತ್ತಾರೆ. ತಂಗಡಿ ಹೂವನ್ನು ಕಿತ್ತು ಒಂದು ವಾರ ಒಣಗಿಸಿ ಪುಡಿ ಮಾಡಿ ಬಿಸಿನೀರಿನಲ್ಲಿ ಸಕ್ಕರೆ ಹಾಗೂ ತಂಗಡಿ ಹೂವಿನ ಪುಡಿ ಹಾಕಿ ಕುದಿಸಿ ಸೋಸಿ ಕುಡಿಯುತ್ತಾರೆ. ಇದನ್ನು ಕುಡಿಯುವುದರಿಂದ ರೋಗ ನಿರೋಧಕ ಶಕ್ತಿ ಜಾಸ್ತಿಯಾಗುತ್ತದೆ. ಕಫ, ಕೆಮ್ಮು, ನೆಗಡಿ, ಜ್ವರ, ಭೇದಿ ಇನ್ನು ಮುಂತಾದ ರೋಗಗಳು ಬರುವುದಿಲ್ಲ ಎಂದು ಹೇಳುತ್ತಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಬಂಡವಾಳಶಾಹಿಗಳ ಕಾಫಿ ಪುಡಿ ಹಾಗೂ ಚಹಾ ಬಂದಿರುವುದರಿಂದ ಇದರ ಬಹಳ ಪ್ರಮಾಣ ಕಡಿಮೆಯಾಗಿದೆ.

೫.೨.೩ ಮಳೆಗಾಗಿ ಪೂಜಿಸುವ ಮಾದಿಗರ ದೇವತೆ ಗುಲುಕಮ್ಮ

ಪ್ರತಿಯೊಂದು ಪ್ರಾಣಿ ಸಂಕುಲವು ಪ್ರಕೃತಿಯನ್ನು ಅವಲಂಬಿಸಿ ಜೀವನವನ್ನು ನಡೆಸುತ್ತವೆ. ಪ್ರಕೃತಿ ಮುನಿಸಿಕೊಂಡರೆ ಮಾನವ ಯಾವ ಲೆಕ್ಕಕ್ಕೂ ಇಲ್ಲ. ಆದ್ದರಿಂದ ಎಲ್ಲ ಜೀವಿಗಳಿಗೂ ಗಾಳಿ, ನೀರು,

ಬೆಳಕು ಅತ್ಯವಶ್ಯ ಒಂದುವೇಳೆ ವ್ಯತ್ಯಾಸವಾದರೆ ಪರಿಹರಿಸುವಂತೆ ಪೂಜೆಗಳನ್ನು ಮಾಡುತ್ತಾರೆ. ಆಗ ಶಿವನಲ್ಲಿ ಮಳೆಯನ್ನು ಬೇಡುವ ಸಲುವಾಗಿ ಈ ಸಮುದಾಯದವರು ವಿಶೇಷವಾದ ಆಚರಣೆಯನ್ನು ಮಾಡುತ್ತಾರೆ. ಸಮುದಾಯದ ಹಿರಿಯ ಯಜಮಾನರ ಸಮ್ಮುಖದಲ್ಲಿ ಐದು ಜನ ಕೊರಿ(ತರುಣ) ಹುಡುಗರಿಗೆ ಗುಲುಕಮ್ಮ ಮಾಡುತ್ತಾರೆ. ಹುಡುಗರು ಜೇಡಿಮಣ್ಣಿನಿಂದ ದೇವರ ರೂಪದ ಗುಲುಕಮ್ಮನ್ನು ತಯಾರು ಮಾಡುತ್ತಾರೆ. ನಂತರ ಕಾಳು ಹಸನಮಾಡುವ ಜರಡಿಯಲ್ಲಿ ಗುಲುಕಮ್ಮನನ್ನು ಇಟ್ಟು ಅದಕ್ಕೆ ಬೇವಿನಸೊಪ್ಪು, ಎಕ್ಕೆಹೂವೂ, ತಂಗಡಿ ಹೂ, ಕುಂಕುಮ, ತೆಂಗಿನಕಾಯಿ ಒಡೆದು ಪೂಜೆ ಮಾಡಿ ಅರೆಬೆತ್ತಲೆಗೊಳಿಸಿದ ಕೊರಿ ಹುಡುಗನ ತಲೆಯ ಮೇಲೆ ಗುಲುಕಮ್ಮನನ್ನು ಹೊರಿಸುತ್ತಾರೆ. ಕೆಲವು ಹುಡುಗರು ಕೊಡದಿಂದ ಕಾಲಿಗೆ ಹಾಗೂ ಗುಲುಕಮ್ಮನಿಗೆ ನೀರು ಹಾಕುತ್ತಾರೆ. ಹಾಕಿದ ನೀರು ಜರಡಿಯಿಂದ ಮಳೆ ರೂಪದಲ್ಲಿ ಬರುತ್ತದೆ. ಆಗ ಊರಿನ ಮನೆ ಮನೆಗಳಿಗೆ ಭಿಕ್ಷೆಯನ್ನು ಬೇಡಲು ಹೊರಡುವಾಗ ಹೇಳುವ ಜನಪದ ಹಾಡು.

'ಗುಲುಕಮ್ಮ.......ಗುಲುಕಮ್ಮ
ಎಲ್ಲಾಡಿ ಬಂದೆ
ನೀರಿದ್ದುತ್ತಾಗೆ ಈ ಜಾಡಿ ಬಂದೆ
ಕೆಸರಿದ್ದುತ್ತಾಗೆ ಕೊಸರಾಡಿ ಬಂದೆ
ಸುರಿಯೋ ಸುರಿಯೋ ಮಳೆರಾಯ ॥ ಪ ॥

ಆಡೋ ಮಕ್ಕಳ್ನ ಅಡವೀಗೆ ಕಳ್ಸಿದೆ
ಉಂಬೋ ಮಕ್ಕಳ್ನ ಊರೇ ಬಿಡ್ಸಿದೆ
ಸುರಿಯೋ ಸುರಿಯೋ ಮಳೆರಾಯ ॥ ಪ ॥

ಹೀಗೆ ಹಾಡುತ್ತಾ ಮನೆ ಮನೆಗೆ ಹೋಗುವರು. ಮನೆಯವರು ಕಾಲಿಗೆ ಚೊಂಬುನೀರು ಹಾಕಿ, ಜೋಳದ ಅಥವಾ ರಾಗಿ ಹಿಟ್ಟು ನೀಡುವರು. ಹೀಗೆ ಸುಮಾರು ಮೂರರಿಂದ ಐದು ದಿನದವರೆಗೆ ಈ ತೆರನಾದ ಆಚರಣೆಯನ್ನು ಮಾಡುತ್ತಾರೆ. ಕೊನೆಯ ದಿನ ಬುಡ್ಡೆಕಲ್ಲಿಗೆ ತೆಂಗಿನಕಾಯಿ ಒಡೆದು ಪೂಜೆ ಮಾಡಿ ನೀರು ಹಾಗೂ ಹಾಲು ಹಾಕಿ ಬರುತ್ತಾರೆ. ಸಂಗ್ರಹಿಸಿದ ಹಿಟ್ಟಿನಿಂದ ಊರಿನ ಜನರು ಸೇರಿ 'ಕಡುಬು' ಮಾಡುತ್ತಾರೆ.

ಗುಲುಕಮ್ಮಗೆ ಬಾಳೆಎಲೆಯಲ್ಲಿ ಕಡುಬು, ಅನ್ನ, ಸಾಂಬಾರು ಎಡೆಹಾಕಿ ಪೂಜೆ ಮಾಡಿ, ಗುಲುಕಮ್ಮನನ್ನು ಹೊತ್ತಿರುವ ಹುಡುಗನಿಗೆ ಊರಿನ ಹಿರಿಯರು ಹೊಸ ಬಟ್ಟೆಯನ್ನು ಕೊಡುತ್ತಾರೆ. ಹುಡುಗನ ಹತ್ತಿರ ಪ್ರಸಾದವನ್ನು ತಿನ್ನಿಸುತ್ತಾರೆ. ಬಂದಿರುವ ಮಕ್ಕಳು ಮತ್ತು ಊರಿನ ಹಿರಿಯರು ಪ್ರಸಾದವನ್ನು ಸ್ವೀಕರಿಸುತ್ತಾರೆ. ನಂತರ ಕೆರೆ ಅಥವಾ ಹೊಳೆಯಲ್ಲಿ ಪ್ರತ್ಯೇಕವಾಗಿ ಮಾಡಿದ ಗುಲುಕಮ್ಮನ ಗುಂಡಿಗೆ ಪೂಜೆ ಮಾಡಿ ಗುಲುಕಮ್ಮನನ್ನು ಗುಲುಕಮ್ಮನ ಗುಂಡಿನ ಹತ್ತಿರ ಬಿಟ್ಟು ದೇವರಿಗೆ ಮತ್ತೆ ಪೂಜೆ ಮಾಡಿ ಬರುತ್ತಾರೆ.

೫.೨.೪ ಬುಡ್ಡೆ (ಮುದ್ರೆ) ಕಲ್ಲು

ಪ್ರತಿಯೊಬ್ಬರು ತಮ್ಮನ್ನು ತಾವು ಗುರುತಿಸಿಕೊಳ್ಳಲು ಸಮಾಜದಲ್ಲಿ ನಿರಂತರವಾದ ಪ್ರಯತ್ನ ಮಾಡುತ್ತಲೇ ಬಂದಿದ್ದಾರೆ. ಪ್ರತಿಯೊಂದು ಗ್ರಾಮೀಣ ಪ್ರದೇಶ ಅಥವಾ ನಗರ ಪ್ರದೇಶದಲ್ಲಿ ಊರಿನ ಪ್ರವೇಶ ದ್ವಾರ ಬಳಿ ಬುಡ್ಡೆಕಲ್ಲನ್ನು ನೆಟ್ಟಿರುತ್ತಾರೆ. ಜನಪದರ ಐತಿಹ್ಯದ ಪ್ರಕಾರ ಮಾದಿಗರ ಮೂಲ ಪುರುಷ ಭೂಮಿಗೆ ಆರು ತಿಂಗಳು ಮೊದಲೇ ಹುಟ್ಟಿದವ. ಭಾರತದ ಮೂಲನಿವಾಸಿಗಳಾದ ಇವರು ಜಂಬೂದ್ವೀಪದ ಪ್ರದೇಶದಲ್ಲಿ ವಾಸವಾಗಿದ್ದವರು. ದ್ರವರೂಪದಲ್ಲಿ ಭೂಮಿಗೆ ಜಾಂಬವನು ಮಕ್ಕಳನ್ನು ಬಲಿ ಕೊಟ್ಟಿದ್ದರಿಂದ ಭೂಮಿ ಹೆಪ್ಪಾಯಿತು ಎಂಬುದು ಇವರ ನಂಬಿಕೆ. ಹೀಗೆ ಜಾಂಬವಂತ ಮಾದರ ಭಕ್ತಿ ಹಾಗೂ ಗೌರವಕ್ಕೆ ಪಾತ್ರನಾಗಿದ್ದಾನೆ. ಇದರಲ್ಲಿ ಪ್ರಮುಖವಾದ ಅಂಶವೆಂದರೆ ಆದಿಜಾಂಬವನಿಗೆ ಇಬ್ಬರು ಮಕ್ಕಳು, ಮೊದಲನೆಯವನು ಯುಗಮುನಿ, ಎರಡನೆಯವನು ಹೆಪ್ಪುಮುನಿ. ಭೂಮಿ ಘನರೂಪಕ್ಕೆ ಬಂದ ಹೊರತು ಅವನ ಸಂತಾನವಾಗಲಿ ಇತರೆ ಸಸ್ಯ ಅಥವಾ ಪ್ರಾಣಿ ವರ್ಗಗಳು ವೃದ್ಧಿಯಾಗಲಾರದೆಂದು ಯೋಚಿಸುತ್ತಿರುವಾಗ ಯಾರದಾದರೂ ಒಬ್ಬರ ರಕ್ತವನ್ನು ಭೂಮಿಯಲ್ಲಿ ಬೆರೆಸಿದರೆ ಭೂಮಿ ಗಟ್ಟಿಯಾಗುವುದೆಂದು ದೇವರ ಪ್ರೇರಣೆಯಾಯಿತು. ತನ್ನ ಮಕ್ಕಳಲ್ಲಿ ಒಬ್ಬನ ಬಲಿದಾನಕ್ಕೆ ಜಾಂಬವ ಋಷಿ ಸಿದ್ಧನಾದ. ಮತ್ತೊಂದು ಪುರಾಣದ ಪ್ರಕಾರ ಈತ ಕರಡಿಗಳ ರಾಜ, ಬ್ರಹ್ಮನ ಬಾಯಿಂದ ಹೊರಬಂದವನು. ಕ್ಷೀರ ಸಾಗರದ ಮಥನದ ಮೊದಲೇ ಇದ್ದವ. ಇವನೂ ದೇವತೆಗಳೊಡನೆ ಅಮೃತಪಾನ ಮಾಡಿ ಅಮರತ್ವ ಪಡೆದವನು. ಯೌವನದಲ್ಲಿ ಹಲವು ಬಾರಿ ಈತನು ಔಷಧಿಗಳ ಮೇಲ್ವಿಚಾರಕನಾಗಿದ್ದ. ಇಡೀ ಭೂಮಂಡಲವೇ ಈ ರೀತಿಯಾಗಿ ಇರುವುದನ್ನು ಕಂಡು ಜಾಂಬವ ತನ್ನ ಎರಡನೆಯ ಮಗನನ್ನು ಬಲಿ ಕೊಡುತ್ತಾನೆ. ಆಗ ದ್ರವರೂಪದಲ್ಲಿ ಇದ್ದಂತಹ ಭೂಮಿ ಘನರೂಪಕ್ಕೆ ಬರುತ್ತದೆ ಇದನ್ನು ಕಂಡ ಶಿವ ಜಾಂಬವ ಮುನಿಗೆ ವರವನ್ನು ಕೇಳು ಎಂದು ಹೇಳುತ್ತಾನೆ. ಆಗ ಪ್ರತಿಯೊಂದು ಊರೂ ತನ್ನ ಮಗನನ್ನು ಆರಾಧನೆ ಮಾಡಬೇಕು ಎಂದು ಕೇಳಿದಾಗ ಶಿವ ತನ್ನ ಮಗನನ್ನು ಬದುಕಿಸುತ್ತಾನೆ. ಅದರ ಒಂದು ನೆನಪಿಗಾಗಿ ಪ್ರತಿಯೊಂದು ಹಳ್ಳಿ ದ್ವಾರಬಾಗಿಲು ಬಳಿ ಅಥವಾ ಹೊಸದಾಗಿ ಹಳ್ಳಿಗಳನ್ನು ಸ್ಥಾಪನೆಯಾಗುವ ಮುಂಚೆ ಈ ಕಲ್ಲನ್ನು ಶಿವಲಿಂಗ ರೂಪದ ಆಕಾರದಲ್ಲಿ ಕಪ್ಪು ಕಲ್ಲುನಿಂದ ಭೋವಿ ಸಮುದಾಯದ ನುರಿತ ವ್ಯಕ್ತಿಯಿಂದ ಆ ಕಲ್ಲಿಗೆ ಪೂಜೆ ಮಾಡಿಸಿ ಕೆತ್ತಿಸುತ್ತಾರೆ. ಮಾದಿಗ ಸಮುದಾಯದ ಎಂಟು ಜನ ಯಜಮಾನರ ಸಮ್ಮುಖದಲ್ಲಿ ಹೊಸ ಹಳ್ಳಿಯನ್ನು ನಿರ್ಮಿಸುವ ಮೊದಲು ಒಳ್ಳೆಯ ನಿವೇಶನವನ್ನು ಶೋಧಿಸಿ ಊರಿನ ಮುಖ್ಯದ್ವಾರ ಬಾಗಿಲ ಮಧ್ಯದಲ್ಲಿ ತಗ್ಗು ತೆಗೆದು ಕೊರಿ ಹುಡುಗನ ಹತ್ತಿರ ಕುಣಿಯಲ್ಲಿ ರಂಗವಲ್ಲಿ ಹಾಕಿಸಿ. ಅದರ ಮೇಲೆ ಧಾನ್ಯ, ಬಂಗಾರ, ಬೆಳ್ಳಿ, ತಾಮ್ರ, ಕಬ್ಬಿಣ, ಸೀಸಗಳನ್ನು ಹಾಕಿ ಅಮಾವಾಸ್ಯೆ ದಿನ ರಾತ್ರಿ ೧೨ ಗಂಟೆಗೆ ಸರಿಯಾಗಿ ಪೂಜೆಯನ್ನು ಮಾಡಿ ಕರಿಗಲ್ಲನ್ನು ನಿಲ್ಲಿಸುತ್ತಿದ್ದರು. ನಂತರ ಎಲ್ಲ ಮಾದಿಗ ಸಮುದಾಯದ ಹಿರಿಯರು ಅದನ್ನು ಪ್ರತಿಷ್ಠಾಪಿಸುತ್ತಾರೆ.

ಪ್ರಾದೇಶಿಕವಾಗಿ ಇದನ್ನು ಅನೇಕ ಹೆಸರುಗಳಿಂದ ಕರೆಯುತ್ತಿದ್ದರು. 'ನಟ್ಟನೆಕಲ್' ತಮಿಳುನಾಡಿನ ಹಳ್ಳಿಗಳಲ್ಲಿರುವ 'ಕರಗಲ್ಲು', ತೆಲುಗುನಾಡಿನಲ್ಲಿ ಇದು 'ಬೊಡ್ಡುರಾಯಿ' ಮುದ್ರೆಕಲ್ಲು ಹಳ್ಳಿಯನ್ನು

ಕಟ್ಟಿದ ಪ್ರಥಮರಲ್ಲಿ ನೆಲದ ಶಕ್ತಿಯನ್ನು ಇವು ಸಂಕೇತಿಸುವುವು ಕನ್ನಡದ 'ಕರಿ' ಇತರೆಡೆಗಳಲ್ಲಿ ಪ್ರಸ್ತಾಪವಾಗಿ 'ಪೋಲಿ'ಯ ಅರ್ಥವನ್ನು ಒಳಗೊಡಿಂದೆ. ಮತ್ತೆ ಊರ ದನಗಳು ಹೋಗಿ ಬರುವ ಅಗಸಿ ಬಾಗಿಲಲ್ಲಿ ಕರಗಲ್ಲು ಇರುತ್ತದೆ. ಜೀವಂತ ಹಂದಿಯನ್ನು ಹುಗಿದು (ಮಕ್ಕಳನ್ನು ಹುಗಿವ ಪದ್ಧತಿ ಮೊದಲಿನದು) ದನಗಳನ್ನು ಅದರ ಮೇಲೆ ಓಡಿಸುವುದರ ಮೂಲಕ ಕೃಷಿ ಜನ ದನಗಳಿಗೆ ಹಂದಿಯ ಬಲವು ಬರುವುದೆಂದು ನಂಬುತ್ತಿದ್ದರು. ಹೊಸಕೆರೆ, ಮನೆಗಳ ನಿರ್ಮಾಣದಲ್ಲಿ ಮಾನವ ಬಲಿಯ ಅಗತ್ಯವನ್ನು ನಮ್ಮ ಪೂರ್ವಜರು ಕಂಡಿದ್ದರು. ಹೊಸ ಕೆರೆ, ಮನೆ ಉಪಕರಣಗಳು ಸಾವನ್ನು ತರಬಲ್ಲವು ಎಂಬ ಭಯದಿಂದ ಮೊದಲೇ ಅದಕ್ಕೆ ಬಲಿಕೊಟ್ಟು ರಕ್ತವನ್ನು ಸಿಂಪಡಿಸಿ ಅವುಗಳಲ್ಲಿಯ ಶಕ್ತಿಯನ್ನು ತೃಪ್ತಿಪಡಿಸಲಾಗುತ್ತಿತ್ತು."[೬]

ಪ್ರತಿಯೊಂದು ಶುಭಸಮಾರಂಭದ ಸಮಯದಲ್ಲಿ ಬುಡ್ಡೆಕಲ್ಲಿಗೆ ಪೂಜೆ, ಪ್ರಾರ್ಥನೆಗಳ ಸಲ್ಲುತ್ತವೆ. ಮಾದಿಗ ಸಮುದಾಯದ ಮದುಮಗ ತಾಳಿ ಕಟ್ಟುವುದಕ್ಕೆ ಮುಂಚೆ ತನ್ನ ಊರಿನ ದೇವರುಗಳಿಗೆ ಮತ್ತು ಬುಡ್ಡೆಕಲ್ಲುಗೆ ಪೂಜೆ ಬರುತ್ತಾನೆ. ಪೂಜೆ ಮಾಡಿಕೊಂಡು ಬಂದ ಸಲ್ಲಿಸಿ ನಂತರ ತಾಳಿ ಕಟ್ಟುವ ಕಾರ್ಯ ನಡೆಯುತ್ತದೆ. ತಾಳಿ ಕಟ್ಟಿದ ನಂತರ ಇಬ್ಬರು ಹೆಣ್ಣು ಮತ್ತು ಗಂಡನ್ನು ಸಂಜೆಯ ಸಮಯದಲ್ಲಿ ಮೆರವಣಿಗೆ ಕರೆದುಕೊಂಡು ಬರುತ್ತಾರೆ. ಊರಿನ ಒಳಗೆ ಪ್ರವೇಶ ಮಾಡುವ ಸಂದರ್ಭದಲ್ಲಿ ಎಲೆ ಅಡಿಕೆ, ನೀರು ಓಕುಳಿ ಇವುಗಳನ್ನು ಇಬ್ಬರು ಹಾಕಿ ಕೈ ಮುಗಿದು ಬುಡ್ಡೆಕಲ್ಲಿಗೆ ಬಿಡುತ್ತಾರೆ. ತೆಂಗಿನಕಾಯಿಯನ್ನು ಇಬ್ಬರಿಗೆ ನೀವಾಳಿಸಿ ಅದಕ್ಕೆ ಒಡೆಯುತ್ತಾರೆ. ಆಗ ಗಂಡ ಹೆಂಡತಿ ಮತ್ತೆ ಕೈಮುಗಿದು ಬಲಗಾಲು ಇರಿಸಿ ಊರಿನ ಒಳಗಡೆ ಪ್ರವೇಶ ಮಾಡುತ್ತಾರೆ. ನಮ್ಮ ಮೂಲ ಪುರುಷ ಇಲ್ಲಿ ಬರುವನೆಂದು ನಂಬಿಕೆ ಮೇಲೆ ಇದಕ್ಕೆ ಮೊದಲನೆ ಪೂಜೆ ಮಾಡಿ ನಂತರ ಎಲ್ಲ ದೇವರಿಗೆ ಪೂಜೆಯನ್ನು ಮಾಡಿಸುತ್ತಾರೆ.

• ಊರಮ್ಮನ ಜಾತ್ರೆ ಸಮಯದಲ್ಲಿ ಬುಡ್ಡೆಕಲ್ಲಿನ ಪ್ರಾಮುಖ್ಯತೆ

ಸುಮಾರು ಐದು ಅಥವಾ ಹತ್ತು ವರ್ಷಕ್ಕೆ ಒಂದು ಬಾರಿ ದುರುಗಮ್ಮನ ಜಾತ್ರೆಯನ್ನು ಮಾಡುತ್ತಾರೆ. ಊರಿನ ಹಿರಿಯರು ಜಾತ್ರೆ ಮಾಡುವ ಬಗ್ಗೆ ತೀರ್ಮಾನ ತೆಗೆದುಕೊಂಡ ಮೇಲೆ ಮಾದಿಗ ಸಮುದಾಯದವರು ಊರಿಗೆ ಮಾಹಿತಿಯನ್ನು ಮುಟ್ಟಿಸಬೇಕಾಗಿರುತ್ತದೆ. ತಮಟೆ ಬಾರಿಸುವ (ಸಾರುವ) ಮೂಲಕ ಯಾವ ದಿನ ಜಾತ್ರೆಯನ್ನು ಮಾಡಬೇಕು ಎನ್ನುವಂತಹ ವಿಚಾರವನ್ನು ತಿಳಿಸುತ್ತಾರೆ. ಅದರ ನಂತರ ದುರುಗಮ್ಮನನ್ನು ಬಣ್ಣಕ್ಕೆ ಕಳುಹಿಸುತ್ತಾರೆ. ಇಲ್ಲದಿದ್ದರೆ ಹೊಸ ದೇವರ ಮೂರ್ತಿ ತಯಾರು ಮಾಡಿಸುತ್ತಾರೆ. ದೇವರು ತಂದ ನಂತರ ದೇವರನ್ನು ಗಂಗಮ್ಮನ ಪೂಜೆಗೆ ಕರೆದುಕೊಂಡು ಹೋಗಿ ಪೂಜೆಯನ್ನು ಮಾಡಿಸುತ್ತಾರೆ. ಊರಿನ ಹೊರಭಾಗದಲ್ಲಿ ದೇವರಿಗೆ ಜೀವಕಾಳನ್ನು ತುಂಬುತ್ತಾರೆ. ಜೀವಕಾಳು ತುಂಬುವಂತಹ ಸಮಯದಲ್ಲಿ ದೇವರನ್ನು ತಯಾರು ಮಾಡಿದ ಪೂಜಾರಿ ಬಂದು ಮೇಕೆ ಮರಿ, ಐದು ನಿಂಬೆಹಣ್ಣು, ಒಂಬತ್ತು ತುಂಬಿದ ತೆಂಗಿನಕಾಯಿ, ಒಂಬತ್ತು ಸೀರೆ, ಒಂಬತ್ತು ಬಣ್ಣ ಬಣ್ಣದ ಕುಬಸಗಳನ್ನು ಬಳಸುತ್ತಾರೆ. ನಂತರ ಬೇಳೆ ಮತ್ತು ಅಕ್ಕಿ, ಎಲೆ ಅಡಿಕೆ, ಉತ್ತತ್ತಿ,

ಒಣಕೊಬ್ಬರಿ, ಹೊಡ್ಲಅಕ್ಕಿ ಹಾಕಿ ದೇವರನ್ನು ಊರಿನ ಒಳಗಡೆ ಕರೆದುಕೊಂಡು ಬರುತ್ತಾರೆ. ಬುಡೆಕಲ್ಲಿಗೆ ಮಾವಿನ ಹಾಗೂ ಬೇವಿನ ಸೊಪ್ಪು ತೆಂಗಿನ ಗರಿಯಿಂದ ಅಲಂಕರಿಸಿ ನಿಂಬೆಹಣ್ಣು ತೆಂಗಿನಕಾಯಿ ಇರಿಸಿ ಮರಿಯನ್ನು ಬಲಿಕೊಟ್ಟು ಪೂಜೆ ಮಾಡುತ್ತಾರೆ.

ಮತ್ತೆ ಮಧ್ಯರಾತ್ರಿ ಸಮಯದಲ್ಲಿ ದೇವರಿಗೆ ಕೋಣವನ್ನು ಬಲಿ ಕೊಡುತ್ತಾರೆ. ಅದೇ ಸಮಯದಲ್ಲಿ ಮಾತಂಗಿಗೆ ಪೂಜೆ ಮಾಡುವಂತಿರುವ ಕೋಣವನ್ನು ಬಗೆದು ಹೊಟ್ಟೆಯಲ್ಲಿ ಇರುವ ಕಬ್ಬು ತೆಗೆದು ಕೋಣದ ತಲೆ ಮತ್ತು ಹಣತಿತೆ ಹಚ್ಚುತ್ತಾರೆ. ನಂತರ ಮಾದಿಗ ಸಮುದಾಯದವರು ಚರಗ ಸುತ್ತುವರು. ಅವರು ಕೋಣದ ರಕ್ತ, ಅನ್ನ, ಭಂಡಾರ, ಕೋಣದ ಕರಸ ಎಲ್ಲವನ್ನು ಮಿಶ್ರಣ ಮಾಡಿ ಇಡೀ ಊರಿನ ಸುತ್ತ ಬೆತ್ತಲೆಯಾಗಿ ಚರಗ ಚೆಲ್ಲುತ್ತಾರೆ. ಉಳಿದ ರಕ್ತವನ್ನು ಬುಡ್ಡೆಕಲ್ಲು ಹತ್ತಿರ ಒಂದು ಕುಣಿಯನ್ನು ಮಾಡಿ ಅದರಲ್ಲಿ ಹಾಕುತ್ತಾರೆ. ಆ ರಕ್ತವನ್ನು ಬೇರೆ ಯಾವುದೇ ಊರಿನವರು ಅಥವಾ ಪಕ್ಕದ ಊರಿನವರು ತೆಗೆದುಕೊಂಡು ಹೋಗಬಾರದು. ಒಂದುವೇಳೆ ಅದನ್ನು ತೆಗೆದುಕೊಂಡು ಹೋದರೆ ಆ ಊರಿನ ಹುಲುಸು (ಹುಲುಸು ಎಂದರೆ ಫಲವತ್ತೆ) ಹೋಗುತ್ತದೆ ಎನ್ನುವಂತಹ ನಂಬಿಕೆ ಇದೆ. ತೆಗೆದುಕೊಂಡು ಹೋಗಿರುವ ವ್ಯಕ್ತಿ ಏನಾದರೂ ಸಿಕ್ಕರೆ ಅವನನ್ನು ಕೊಂದುಬಿಡುತ್ತಾರೆ. ಆದ್ದರಿಂದ ಈ ಆಚರಣೆಯಾಗುವವರೆಗೆ ಯಾರನ್ನು ಊರಿನ ಒಳಗಡೆ ಬಿಟ್ಟುಕೊಳ್ಳುವುದಿಲ್ಲ. ಬಹಳ ಕಟ್ಟುನಿಟ್ಟಿನಿಂದ ಆಚರಣೆಯನ್ನು ಮಾಡುತ್ತಾರೆ. ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡುತ್ತಾರೆ. ಆಗ ಪ್ರತಿಯೊಂದು ಮೂಲೆಗೆ ಒಂದು ಮೇಕೆ ಅಥವಾ ಕುರಿಮರಿಯನ್ನು ಬಲಿಕೊಟ್ಟು, ಒಂದು ನಿಂಬೆಹಣ್ಣು, ತೆಂಗಿನಕಾಯಿ ಒಡೆಯುತ್ತಾರೆ. ನಂತರ ಗುಡಿ ತುಂಬಿಸುವಾಗ ಕರೆಕಂಬಳಿ ಗದ್ದಿಗೆ ಹಾಕಿ ದೇವರನ್ನು ಕೂರಿಸಿ ಪೂಜೆ ಮಾಡಿ ದೇವರನ್ನು ಒಳಗಡೆ ಕೂರಿಸುತ್ತಾರೆ.

• ಕುಂಭ ಹೊರುವ ಆಚರಣೆ

ಕುಂಭ ಹೊರುವ ಆಚರಣೆಯನ್ನು ಮಾದಿಗ ಸಮುದಾಯದವರು ಮಾತ್ರ ಮಾಡುತ್ತಾರೆ. ಇದನ್ನು ಜಾತ್ರೆ ಸಂದರ್ಭದಲ್ಲಿ ಮಾಡುತ್ತಾರೆ. ಕೋಣ ಕಡಿದ ಮರುದಿನ ಮಾದಿಗ ಸಮುದಾಯದವರು ಪ್ರತಿಯೊಂದು ಮನೆಯಿಂದ ಕುಂಭ ಹೊರುತ್ತಾರೆ. ಕುಂಬಾರ ಮನೆಯಿಂದ ಮಡಿಕೆಯನ್ನು ಮಾಡಿಸಿಕೊಂಡು ತಂದು ಅದನ್ನು ಸ್ವಚ್ಛಗೊಳಿಸುತ್ತಾರೆ. ಕುಂಭವನ್ನು ಯಾರು ಮುಟ್ಟುವಂತಿಲ್ಲ. ಉಪವಾಸದಿಂದ ಅದರಲ್ಲಿ ಅನ್ನ ಬೇಯಿಸಬೇಕು ನಂತರ ಸಂಜೆ ಅದಕ್ಕೆ ಪೂಜೆಯನ್ನು ಮಾಡುತ್ತಾರೆ. ಇದ್ದ ಒಂದೊಂದು ಕುಲದವರು ಒಂದೊಂದು ಕುಂಭವನ್ನು ಹೊರಬೇಕಾಗುತ್ತದೆ. ದೊಡ್ಡ ಮನೆಯವರು ತಾನುದ ಅರವಿ, ಗೊಲ್ಲೊಓಬಯ್ಯನವರು ಸರಿಗೆ ಮಗ್ಗಿ, ದಸಿಜ್ಜರು ಎಲ್ಲಮ್ಮನ ಪೂಜೆ ಮತ್ತು ಸಜ್ಜಿ ಮಗ್ಗಿ, ಕೂನ್ನೇಪ್ಪನವರು ಕಳಸವನ್ನು ತರುತ್ತಾರೆ. ಈ ಕುಂಭವನ್ನು ಮನೆಯ ಹಿರಿಯ ಮಗನ ಇಲ್ಲವೇ ಕೊನೆಯ ಮಗ ಹೊರಬೇಕು. ಕುಂಭ ಹೊತ್ತುಕೊಂಡು ಬಂದಿರುವ ಎಲ್ಲರಿಗೆ ಓಕುಳಿ ಮತ್ತು ನಿಂಬೆಹಣ್ಣು ನೀವಾಳಿಸಿ ಬಿಸಾಕುತ್ತಾರೆ. ನಂತರ ಬುಡ್ಡೆಕಲ್ಲಿಗೆ ಬಂದಾಗ ಮತ್ತೆ ಓಕುಳಿ ನಿಂಬೆಹಣ್ಣು ತೆಂಗಿನಕಾಯಿ ನೀವಾಳಿಸುತ್ತಾರೆ. ಎಲ್ಲರು ಸಾಲಾಗಿ ಮಾತಂಗಿ ದೇವರ ಹತ್ತಿರ ಬಂದು ದೇವರಿಗೆ

ಪೂಜೆ ಮಾಡಿ ಎಲ್ಲರು ಬಂದು ಕುಳಿತುಕೊಳ್ಳುತ್ತಾರೆ. ಅವರವರ ಸಂಬಂಧಿಕರು ಪೂಜೆ ಮಾಡಿ ಕಾಣಿಕೆಯನ್ನು ಕೊಡುವಂತಹ ಆಚರಣೆ, ಇನ್ನೂ ಕೇಲವರು ಹೊಸ ಬಟ್ಟೆಯನ್ನು ಮುಯ್ಯವಾಗಿ ಅರ್ಪಿಸುವರು.

• ಯುಗಾದಿ ಹಬ್ಬದಲ್ಲಿ ಬುಡ್ಡೆಕಲ್ಲಿನ ಪ್ರಾಮುಖ್ಯತೆ

ಯುಗಾದಿ ಹಬ್ಬವನ್ನು ಪ್ರತಿಯೊಂದು ಸಮುದಾಯದವರು ಅತ್ಯಂತ ಸಂಭ್ರಮದಿಂದ ಆಚರಿಸುತ್ತರೆ. ಈ ಸಂದರ್ಭದಲ್ಲಿ ಅಮವಾಸ್ಯೆ ದಿವಸ ಹಂದಿ ಬೇಟೆಗೆ ಊರಿನ ಬೇಡ ಸಮುದಾಯ ಮತ್ತು ಮಾದಿಗ ಸಮುದಾಯದವರು ಸೇರಿ ಹೋಗುತ್ತಾರೆ. ಹೋಗುವಂತಹ ಸಮುದಾಯಗಳಿಗೆ ಬೇಟೆಯಾಡುವ ವಿಷಯವನ್ನು ದುರುಗಮ್ಮ ದೇವಿಯನ್ನು ಕರೆಸಲು ಮಾದಿಗ ಸಮುದಾಯದವರು ತಮಟೆಯನ್ನು ಬಾರಿಸಿ ದೇವರನ್ನು ಕರಿಸಿ ದೇವರ ಅಪ್ಪಣೆಯನ್ನು ಪಡೆದುಕೊಂಡು ಮತ್ತು ದೇವರಿಗೆ ಪೂಜೆ ಮಾಡಿ ಹಂದಿ ಬೇಟೆಗೆ ಹೊರಡುತ್ತಾರೆ. ಸ್ವಲ್ಪ ದೂರ ತಮಟೆ ಬಾರಿಸುವುದರ ಮೂಲಕ ಅವರನ್ನು ಕಳುಹಿಸಿ ಕೊಡುತ್ತಾರೆ.

ಬಂದೂಕು, ಭರ್ಚಿ, ಕೊಡಲಿ, ಗಂಡುಕೊಡಲಿ ಮುಂತಾದ ಆಯುಧಗಳನ್ನು ತೆಗೆದುಕೊಂಡು ದಟ್ಟವಾದ ಕಾಡಿಗೆ ಹೋಗಿರುತ್ತಾರೆ. ಜನಪದರು ಹೇಳುವ ಪ್ರಕಾರ ಅಮವಾಸ್ಯೆಯ ದಿವಸ ಹಂದಿಯು ಬಾದೆ ಕಡ್ಡಿಯನ್ನು ಕಡೆಯುತ್ತಂತೆ. ಅದು ಒಂದು ಸಾರಿ ಕಡಿದರೆ ಅದಕ್ಕೆ ಸಾವು ಇಲ್ಲವೆಂದು ಅರ್ಥ. ಇಲ್ಲದಿದ್ದರೆ ಸಾವು ಕಂಡಿತ ಬರುತ್ತದೆ ಎಂದು ಹೇಳುತ್ತಾರೆ. ಆದರೆ ಎಲ್ಲರು ಸೇರಿ ಹಂದಿ ಬೇಟೆ ಆಡಿ ಬೇಟೆಯನ್ನು ತರುತ್ತಾರೆ. ತಂದನಂತರ ಹಂದಿಯನ್ನು ತೊಳೆದು ಅರಳಿಎಣ್ಣೆ ಮತ್ತು ಕುಂಕುಮ ಹಚ್ಚುತ್ತಾರೆ. ಬಾಯಿಗೆ ಕಟ್ಟಿಗೆಯನ್ನು ಇಟ್ಟು ಊರಿನ ಎಲ್ಲರೂ ಗಾಡಿಯನ್ನು ಊರಿನ ಪ್ರಮುಖ ಬೀದಿಯಲ್ಲಿ ಮೆರವಣಿಗೆ ಮಾಡಿ. ಹಂದಿಯನ್ನು ತಂದು ಊರಿನ ಬುಡ್ಡೆಕಲ್ಲಿಗೆ ಹಂದಿಯ ಕಿವಿ, ಬಾಲ, ಮೂರು ಕೊಯ್ದು ಅದನ್ನು ಹೂಳುತ್ತಾರೆ. ಊರಿಗೆ ಒಳ್ಳೆದು ಆಗಲಿ ಮತ್ತು ಹುಲುಸು (ಫಲವತ್ತೆ) ಹೋಗದಿರಲಿ ಎಂಬ ಕಾರಣಕ್ಕೆ ಬುಡ್ಡೆಕಲ್ಲಿಗೆ ಹೂಳುತ್ತಾರೆ. ನಂತರ ಆ ಹಂದಿಯನ್ನು ಮಾದಿಗ ಸಮುದಾಯದವರಿಗೆ ಕೊಡುತ್ತಾರೆ. ಅದನ್ನು ಊರಿನ ಪ್ರಮುಖರು ಹಿರಿಯರು ಹಾಗೂ ಯಜಮಾನರು ಅದನ್ನು ಸುಟ್ಟು ಕ್ಯೊದು ಕುಲಕ್ಕೆ ಒದೊಂದು ಪಾಲುಗಳನ್ನು ಹಾಕಿ ಹಂಚಿಕೊಳ್ಳುತ್ತಾರೆ. ಇದರ ಮಾಂಸವನ್ನು ಬಂಗಾರ ಎಂತಲು ಕರೆಯುತ್ತಾರೆ. ಇದರ ಮಾಂಸ ತಿನ್ನುವುದರಿಂದ ಮೈಯಲ್ಲಿರುವ ಎಲ್ಲಾ ರೋಗಗಳನ್ನು ವಾಸಿಯಾಗುತ್ತವೆ ಎಂಬ ನಂಬಿಕೆ ಇದೆ.

೫.೩ ವಾರ್ಷಿಕಾವರ್ತನ ಆಚರಣೆಗಳು

ಸಾಮಾಜಿಕ ಬದುಕಿನಲ್ಲಿ ಹೊಸ ನಡಿಗೆಯನ್ನು ರೂಢಿಸಿಕೊಳ್ಳಬೇಕಾದರೆ ಮೊದಲು ಸಾಮಾಜಿಕ ಸಂಕೋಲೆಯಿಂದ ಕಳಚಿಕೊಳ್ಳಬೇಕು. ಧಾರ್ಮಿಕವಾಗಿ ಸಮಾಜದ ಹೊಸ ವೈರುದ್ಯಗಳನ್ನು ಎದುರಿಸಿ ಅವುಗಳ ವಿರುದ್ಧ ಹೊಸ ಬದುಕನ್ನು ಕಟ್ಟಿಕೊಳ್ಳುವ ಪರಿಸ್ಥಿತಿ ಇವತ್ತು ತಳ ಸಮುದಾಯಗಳಿಗೆ ಎದುರಾಗಿದೆ. ಕುರೂಪಗೊಂಡ ಸಾಮಾಜಿಕ ರಚನೆಗಳನ್ನು ಸ್ಫೋಟಗೊಳಿಸುವ ಹೊರತು ಹಾಗೂ

ಇಂತಹ ರಚನೆಗಳಿಗೆ ಕಾರಣವಾದ ಜಾತಿ ವ್ಯವಸ್ಥೆಯನ್ನು ನಾಶಮಾಡದ ಹೊರತು ಈ ದೇಶದ ದಲಿತರಿಗೆ ಬಿಡುಗಡೆ ಎಂಬುದು ಸಾಧ್ಯವಾಗದ ಮಾತು. ಅನೇಕ ಧಾರ್ಮಿಕ ಸಮಸ್ಯೆಗಳಿಂದ ಪ್ರತಿದಿನ ಗ್ರಾಮೀಣ ಪ್ರದೇಶದಲ್ಲಿ ಸಿಲುಕಿ ನರಳುತ್ತಿರುವ ಪರಿಸ್ಥಿತಿಯಿದೆ. ಇವುಗಳ ಮಧ್ಯೆವೂ ಈ ಸಮುದಾಯದ ಯುಗಾದಿಯಿಂದ ಯುಗಾದಿಯವರೆಗೆ ಹಲವಾರು ಹಬ್ಬ, ಜಾತ್ರೆ, ಉತ್ಸವ, ಕುಟುಂಬಕ್ಕೆ ಸಂಬಂಧಿಸಿದಂತೆ ಕೆಲವು ಆಚರಣೆಗಳನ್ನು ಆಚರಿಸುತ್ತಾರೆ.

ಮಾದಿಗರು ಆಚರಿಸುವ ಹಬ್ಬಗಳನ್ನು, ನಾಡಹಬ್ಬಗಳು ಹಾಗೂ ಗ್ರಾಮದೇವತೆಯ ಹಬ್ಬಗಳೆಂದು ಎರಡು ಭಾಗಗಳಾಗಿ ವರ್ಗೀಕರಣ ಮಾಡಲಾಗಿದೆ. ಕಾರು ಹುಣ್ಣಿಮೆ ಹೋಳಿಹುಣ್ಣಿಮೆ, ಯುಗಾದಿ, ನಾಗರ ಪಂಚಮಿ, ದಸರಾ, ದೀಪಾವಳಿ ಮುಂತಾದವು ಈ ಸಮುದಾಯವು ಆಚರಿಸುವ ನಾಡಹಬ್ಬಗಳಾದರೆ, ದುರುಗಮ್ಮ, ಮಾತಂಗಿ, ಗೌರಸಮುದ್ರದ ಮಾರಮ್ಮ, ಚೌಡಮ್ಮ, ಯಲ್ಲಮ್ಮ, ಸುಂಕಮ್ಮ, ಕೊಲ್ಲಾರಮ್ಮ, ಮೈಲಾರಲಿಂಗೇಶ್ವರ, ಪೆನ್ನೊಬಳೇಶ್ವರ ಇನ್ನೂ ಮುಂತಾದವು ಗ್ರಾಮದೇವತೆಗಳ ಹಬ್ಬಗಳಾಗಿವೆ. ಇವರಲ್ಲಿ ಹೆಚ್ಚಿನದಾಗಿ ಮಾತೃದೇವತಾ ಆರಾಧಕರಾದ ಮಾದಿಗರು ಮಾತೃದೇವತೆಗಳನ್ನೇ ಯಾಕೆ ಹೆಚ್ಚಾಗಿ ಆರಾಧಿಸುತ್ತಿದ್ದರೆಂಬುದರ ಕುರಿತು ಅನುಮಾನಗಳಿವೆ. ಆದರೂ ಬಹುತೇಕವಾಗಿ ಇವರು ಶಾಕ್ತ ಪರಂಪರೆಯನ್ನು ಅನುಸರಿಸಿಕೊಂಡು ಬಂದವರು ಹಾಗೂ ಹೆಣ್ಣನ್ನು ಪವಿತ್ರೀಕರಿಸುವ ಉದ್ದೇಶದಿಂದಲೋ ತನ್ನ ಕುಲದ ಹೆಣ್ಣನ್ನು ಅಪಹರಿಸಿಕೊಂಡು ಹೋದ ವಶಿಷ್ಠನ ಕಪಟ ಶಕ್ತಿಯಿಂದಲೋ ಏನೋ ಹೆಣ್ಣನ್ನೂ ವಿಶೇಷವಾಗಿ ಪೂಜಿಸುತ್ತಾರೆ. ಇವರ ಹತ್ತಾರು ದೇವಾಲಯಗಳಲ್ಲಿ ದುರುಗಮ್ಮ, ಕರಿಯಮ್ಮ, ಎಲ್ಲಮ್ಮನ ಹೆಸರುಗಳಿರುವುದು ಇದಕ್ಕೆ ಸಾಕ್ಷಿ. ಮಾದಿಗ ಸಮುದಾಯದಲ್ಲಿ ಹೆಣ್ಣು ದೇವರುಗಳಿಗೆ ಹೆಚ್ಚಾಗಿ ಪೂಜೆ ಮಾಡುತ್ತಾರೆ. ಧಾರ್ಮಿಕ ಆಚರಣೆಯಲ್ಲಿ ತಮ್ಮದೇಯಾದ ನಂಬಿಕೆಯನ್ನು ಇಟ್ಟುಕೊಂಡಿದ್ದಾರೆ. ಅವರದೇಯಾದ ಭಕ್ತಿಗಳಿಗೆ ಅನುಗುಣವಾಗಿ ದೇವರುಗಳನ್ನು ಪೂಜೆ ಮಾಡುತ್ತಾರೆ. ಕೆಲವರು ತಮ್ಮ ಕುಲಕ್ಕೆ ಸಂಬಂಧಿಸಿದ ದೇವರುಗಳನ್ನು ವಿಂಗಡನೆ ಮಾಡಿಕೊಂಡು ಪೂಜೆ ಮಾಡುವ ವೈವಿಧ್ಯತೆಯನ್ನು ಇವರಲ್ಲಿ ಕಾಣಬಹುದು. ಇಂತಹ ಮಾದಿಗರ ದೇವಾಲಯದ ಆಂತರಿಕ ಮೇಲ್ವಿಚಾರಣೆಯನ್ನು ಆ ಕುಲದ ಸ್ತ್ರೀಯರೇ ವಹಿಸಿಕೊಂಡಿರುತ್ತಾರೆ. ದೇವಾಲಯಗಳನ್ನು ಗಂಜಲದಿಂದ ತೊಳೆದು ಸಗಣಿಯಿಂದ ಸಾರಿಸಿ ರಂಗೋಲಿಯಿಟ್ಟು, ದೇವರನ್ನು ಅಲಂಕರಿಸುವಂತಹ ಪವಿತ್ರ ಕಾರ್ಯಗಳಿಗೆ ಇವರನ್ನು ಬಿಟ್ಟು ಪುರುಷರಿಗೆ ಇಲ್ಲ ಪ್ರವೇಶವಿಲ್ಲ. ನಂತರ ಆ ಗುಡಿಯನ್ನು ಸಾರ್ವಜನಿಕರಿಗೆ ದರ್ಶಿಸಲು ಅನುವು ಮಾಡಿಕೊಟ್ಟು ಆ ಕುಲದ ಯಾರಾದರೂ ಹಿರಿಯ ವ್ಯಕ್ತಿಯ ಮಗನು ಆ ಗುಡಿಗೆ ಪೂಜಾರಿಯಾಗಿ ನೇಮಕವಾಗುತ್ತಾನೆ. ಇನ್ನುಳಿದಂತೆ ಪ್ರಮುಖ ದೇವರುಗಳನ್ನು ಎಲ್ಲರು ಸೇರಿ ಆರಾಧಿಸುತ್ತಾರೆ. ಅವರ ಭಕ್ತಿಗೆ ಅನುಗುಣವಾಗಿ ನಡೆದುಕೊಂಡರೆ ದೇವರು ಪ್ರಸನ್ನರಾಗಿ ತಮಗೆ ಒಳ್ಳೆಯದು ಮಾಡುತ್ತಾರೆ ಎನ್ನುವ ನಂಬಿಕೆ ಈ ಸಮುದಾಯದವರದ್ದು ನಂಬಿದ್ದಾರೆ. ನಮ್ಮ ಹಿರಿಯರೇ ದೇವರುಗಳೇ ಆಗಿದ್ದಾರೆ ಎನ್ನುವ ನಂಬಿಕೆ ಮಾದಿಗ ಸಮುದಾಯದಲ್ಲಿದೆ. ತಮ್ಮ ದೈವದಿಂದಲೇ ಸೃಷ್ಟಿಯ ಎಲ್ಲ ಕಾರ್ಯಗಳು ನೆರವೇರಲ್ಪಡುತ್ತಿವೆ ಎನ್ನುವ ಪರಿಕಲ್ಪನೆಯಿದೆ. ಒಟ್ಟಾರೆಯಾಗಿ ವಾರ್ಷಿಕಾವರ್ತಾನಾ ಆಚರಣೆಗಳನ್ನು ಪ್ರತಿವರ್ಷವು ತಪ್ಪದೇ ಆಚರಿಸಿಕೊಂಡು ಬರುತ್ತಾರೆ.

೫.೩.೧ ಹಬ್ಬಗಳು

ಹಬ್ಬ ಎನ್ನುವ ಪದ ಸಂಸ್ಕೃತದ ಪರ್ವನ್ ಪದದ ತದ್ಭವವಾಗಿದೆ. ಪರ್ವ ಎಂಬ ಪದಕ್ಕೆ ಒಂದು ಇನ್ನೊಂದಕ್ಕೆ ಸೇರಿಕೊಳ್ಳುವುದು ಎನ್ನುವ ಅರ್ಥವಿದೆ. ಚಂದ್ರ-ಸೂರ್ಯರು ತನ್ನ ಗತಿಯನ್ನು ಬದಲಾವಣೆ ಮಾಡುವ ಒಂದು ಕ್ರಿಯೆಗೆ ಪರ್ವ ಎನ್ನಲಾಗುತ್ತದೆ. ಅವು ಋತುಗಳ ಗತಿಯನ್ನು ಸೂರ್ಯಚಂದ್ರರ ಚಲನೆಯನ್ನು ಅವಲಂಬಿಸಿದೆ. ಇವು ತಮ್ಮ ಬದಲಾವಣೆಗಳಿಗೆ ಒಳಗೊಂಡು ಹಬ್ಬಗಳಾಗಿ ರೂಪ ಪಡೆದುಕೊಂಡಿದೆ.

"ಈ ಜಗತ್ತು ಮಾನವನ ಧರ್ಮಕ್ಷೇತ್ರವೂ ಕರ್ಮಕ್ಷೇತ್ರವೂ ಆಗಿದೆ. ಇಲ್ಲಿ ನಮ್ಮ ಒಳಿತಿಗಾಗಿ ಸುಖ ಸಂತೋಷಗಳಿಗೆ ಬಾಳಿನಲ್ಲಿ ಬದಲಾವಣೆಗಾಗಿ ಸಾಧನೆ ಸಿದ್ಧತೆಗಾಗಿ ಸಮಾಜ ಸಂಘಟನೆಗಾಗಿ ಆತ್ಮೀಯರೊಂದಿಗೆ ಬೆರೆಯಲು ಹಬ್ಬಹರಿದಿನಗಳನ್ನು ಆಚರಿಸುತ್ತ ಬರಲಾಗಿದೆ."[೭] ಇಂತಹ ಧಾರ್ಮಿಕ ಪರಂಪರೆಯಲ್ಲಿ ಬಹುದೊಡ್ಡ ಆಚರಣೆಗಳನ್ನು ಮೈಗೂಡಿಸಿಕೊಂಡು ಬಂದಿರುವ ಹಬ್ಬಗಳನ್ನು ಈ ಸಮುದಾಯ ಹಾಗೂ ತಮ್ಮ ಕುಟುಂಬದಲ್ಲಿ ಸಂತೋಷವನ್ನು ಪಡೆಯುವ ಹಾಗೂ ಕೆಲಸದ ಬಿಡುವಿನ ವೇಳೆಯಲ್ಲಿ ಎಲ್ಲರೂ ಸೇರಿ ಸಂತೋಷವನ್ನು ಹಂಚಿಕೊಂಡು ಬಂದಿದ್ದಾರೆ. ಈ ಸಮುದಾಯ ನಿಸರ್ಗದ ಜೊತೆಗೆ ಜೀವನ ನಡೆಯುವಂತಹ ಸಮುದಾಯವಾಗಿರುವುದರಿಂದ ಪ್ರತಿಯೊಂದು ಕಾಲಮಾನಕ್ಕೆ ತಕ್ಕಂತೆ ತಮ್ಮ ಧಾರ್ಮಿಕ ಕ್ರಿಯಾ ವಿಧಿ ಹಾಗೂ ಫಲೋತ್ಪತ್ತಿ ಸಂಬಂಧಗಳಲ್ಲಿ ನಿರಂತರವಾಗಿ ಬೆಳೆಸಿಕೊಂಡು ಬಂದಿದ್ದಾರೆ.

ಚಿತ್ರದುರ್ಗ ಜಿಲ್ಲೆಯ ಮಾದಿಗ ಸಮುದಾದಯವು ಮೂಲತಃ ಕೃಷಿಯನ್ನು ಅವಂಬಿತವಾಗಿರುವುದರಿಂದ ಕಾಲಕ್ಕೆ ಅನುಗುಣವಾಗಿ ಧಾರ್ಮಿಕಾಚರಣೆಗಳನ್ನು ಪ್ರಮುಖ ಭಾಗವಾಗಿ ರೂಢಿಸಿಕೊಂಡು ಬಂದಿದ್ದಾರೆ. "ಕಾಲಗಣನೆಗೆ ಸರಿಯಾಗಿ ಬಾರದವರು ತಮ್ಮ ಬೆಳೆಯ ಬಿತ್ತನೆ, ಆರೈಕೆ ಬೆಳೆ ಕಟಾವು ಮುಂತಾದುಗಳನ್ನು ಹಬ್ಬಗಳಿಗೆ ಅನುಗುಣವಾಗಿ ಹೇಳುವುದನ್ನು ಈಗಲೂ ಕಾಣಬಹುದುದಾಗಿದೆ. ವರುಷದ ಮೊದಲ ಬೇಸಾಯವನ್ನು ಉಗಾದಿಯೆಂದು ಆರಂಭಿಸಿದರೆ, ಬೇಸಾಯಕ್ಕೆ ಬೇಕಾಗುವ ಎತ್ತುಗಳ ಪೂಜೆ ಬಸವನ ಹಬ್ಬದಂದು ನಡೆಯುತ್ತದೆ. ಬಿತ್ತನೆ ಬೀಜಗಳ ಭವಿಷ್ಯವನ್ನು ಕಾರಹಬ್ಬದಲ್ಲಿ ಕಂಡುಕೊಂಡರೆ ಮಳೆಗಾಲದಲ್ಲಿ ಎಲ್ಲಿ ಬೇಕಾದಲ್ಲಿ ಹರಿದಾಡುವ."[೮] ಹಾವುಗಳ ಪೂಜೆ ಮತ್ತು ಬೆಳೆಯುತ್ತಿರುವ ಬೆಳೆಗಳ ಸಂಭ್ರಮವನ್ನು ನಾಗರ ಪಂಚಮಿಯಲ್ಲಿ ಅನುಭವಿಸುತ್ತಾರೆ. ಮಳೆ ತರುವ ಜೋಕುಮಾರನನ್ನು ಮತ್ತು ಆತನ ತಾಯಿ ಎಲೆಗೌರಿಯನ್ನು ಗೌರಿಹಬ್ಬದಲ್ಲಿ ಪೂಜಿಸಿದರೆ ಬೆಳೆಗಳ ವಿಜಯವನ್ನು ಮನೋರ್ಮಿಯಲ್ಲಿ ಕಂಡುಕೊಳ್ಳುತ್ತಾರೆ. "ಕೊಯ್ಲು ನಡೆಸಲು ಸುರುವಾಗುವ ಸಂದರ್ಭದಲ್ಲಿ ದನಕರುಗಳನ್ನು, ತಿಪ್ಪೆಯನ್ನು, ಲಕ್ಕವ್ವನನ್ನು, ಹಟ್ಟಿ ಹಬ್ಬದಲ್ಲಿ ಪೂಜಿಸಿದರೆ ದವಸ ದಾನ್ಯಗಳು ಮನೆಗೆ ಬಂದ ಸಂದರ್ಭವನ್ನು ದೀಪ ಹಚ್ಚಿಡುವುದರ ಮೂಲಕ ಕಾರ್ತೀಕ ಆಚರಿಸುತ್ತಾರೆ. ಭೂಮಿ ತಾಯಿಗೆ ಪುನಃ ಫಲವಂತಿಕೆ ಬರಲೆಂದು ಚರಗದ ಜಾತ್ರೆ ಮಾಡಿ ಕೋಣ, ಕುರಿ, ಕೋಳಿ ಮುಂತಾದ ಪ್ರಾಣಿಗಳ ಬಲಿ ಕೊಡುತ್ತಾರೆ.

ಸಂಕ್ರಾತಿಯಂದು ದನಕರುಗಳಿಗೆ ರೋಗ ಬರುವ ಕಾಲವಾದುದರಿಂದ ಅವುಗಳಿಗೆ ಸ್ನಾನ ಮಾಡಿಸಿ 'ಬರೆ' ಹಾಕುತ್ತಾರೆ, ಈಡು ಸುತ್ತಿಸುತ್ತಾರೆ. ಮುಂದಿನ ಹಂಗಾಮಿಗೆ ಬೇಕಾಗುವ ಬಿತ್ತನೆ ಬೀಜಗಳ ಆಯ್ಕೆಯನ್ನು ಕಾಳಮ್ಮನ ಹಬ್ಬದಲ್ಲಿ ಮಾಡಿಕೊಂಡು ಬಿಡುವಿನ ಹಂಗಾಮಿನ ಶಿವರಾತ್ರಿಯಲ್ಲಿ ದೇವರ ಭಜನೆ ಮಾಡಿ ಪುರಾಣ ಶ್ರವಣದೊಂದಿಗೆ ಕೃತ ಕೃತರಾಗುತ್ತಾರೆ."[೯] ಹೀಗೆ ಇಡೀ ವರ್ಷ ಕಾಲಮಾನಕ್ಕೆ ಅನುಗುಣವಾಗಿ ಹಬ್ಬಗಳನ್ನು ಆಚರಿಸುತ್ತಾ ಬಂದಿದ್ದಾರೆ. ಆದರೆ ಆಧುನಿಕ ವಿದ್ಯೆ, ರಾಜಕೀಯ ಮುಂದಾಳುತನದಿಂದಾಗಲೂ ಹಬ್ಬದಾಚರಣೆಯಲ್ಲಿ ಬದಲಾವಣೆಗಳು ಆಗಿವೆ. ಗ್ರಾಮೀಣರಲ್ಲಿ ಜಾನಪದ ಸಂಸ್ಕೃತಿ ಇನ್ನೂ ಹೆಚ್ಚಾಗಿದ್ದಾಗ ಅವರು ಅತ್ಯಂತ ಭಯ-ಭಕ್ತಿ ಮತ್ತು ಸಡಗರದಿಂದ ಹಬ್ಬಗಳನ್ನು ಆಚರಿಸುತ್ತಿದ್ದರು. ಇಂದು ಆಧುನಿಕತೆಯ ಸೋಂಕಿನಿಂದಾಗಿ ಪದ್ಧತಿಗಳು ಬೆರಕೆಯಾಗಿವೆ, ಬದಲಾಗಿವೆ. ಹಿಂದೆ ವಿಜ್ಞಾನ ಮತ್ತು ತಂತ್ರಜ್ಞಾನ ಕಡಿಮೆ ಇದ್ದಾಗ ಅಂದರೆ ಸಾಂಪ್ರದಾಯಕತೆ ಹೆಚ್ಚಾಗಿದ್ದಾಗ ಗ್ರಾಮದ ಫಲಶಕ್ತಿಗೆ ರಕ್ಷಣೆಗೆ ದೈವಗಳ ಶಕ್ತಿಗಳ ನೆರವು ಪಡೆಯುತ್ತಿದ್ದರು, ಈ ಶಕ್ತಿಗಳನ್ನು ಎಲ್ಲರೂ ಬಟ್ಟಾಗಿ ಪೂಜಿಸುತ್ತಿದ್ದರು ಮತ್ತು ಬೇಡುತ್ತಿದ್ದರು. ಆದರೆ ಈಗ ಪರಿಸ್ಥಿತಿ ಬದಲಾಗಿದೆ.

ಕೆಲವೆಡೆ ಹಬ್ಬದಾಚಾರಣೆ ನಿಂತೇಹೋಗಿದೆ. ಇಂದು ವಿಜ್ಞಾನ ಮತ್ತು ಆಧುನಿಕ ತಿಳುವಳಿಕೆಯಿಂದಾಗಿ ಹೈಬ್ರಿಡ್ ಬೀಜಗಳು, ರಸಗೊಬ್ಬರ ಮತ್ತು ಕಳೆನಾಶಕಗಳನ್ನೂ ಬಳಸಲಾಗುತ್ತಿದೆ. ಜೊತೆಗೆ ದೈವಗಳ ಮೇಲಿನ ಮೂಢನಂಬಿಕೆಗಳು ಮತ್ತು ಭಯ ಕಳೆದುಹೋಗಿದೆ. ಫಲಶಕ್ತಿಗೆ ಆಚರಿಸಲಾಗುತ್ತಿದ್ದ ಹಬ್ಬದಾಚರಣೆಗಳು ಸಡಿಲವಾಗಿ ಕೇವಲ ಸಾಂಕೇತಿಕವಾಗಿ ಆಚರಿಸಲಾಗುತ್ತಿದೆ. ಇಂದರಿಂದಾಗಿಯೂ ಹಬ್ಬದ ಪೂರ್ವದ ಕಾರ್ಯಗಳು ಮರೆಯಾಗಿದೆ. ಸಂಸ್ಕೃತೀಕರಣದಿಂದಾಗಿಯೂ ಹಿಂದಿನಿಂದಲೂ ಈ ಬದಲಾವಣೆ ಬರಲು ಪ್ರಾರಂಭಿಸಿವೆ ಎಂದರೂ ಸರಿ. ಜೊತೆಗೆ ಸರಿಯಾಗಿ ಮಳೆಯಾಗದ ಕಾರಣ ಸರಿಯಾದ ರೀತಿಯಲ್ಲಿ ಹಬ್ಬಗಳನ್ನು ಆಚರಿಸುವುದು ಕಡಿಮೆಯಾಗಿದೆ. ಗ್ರಾಮೀಣ ಪ್ರದೇಶದಲ್ಲಿ ರಾಜಕೀಯ ಪ್ರವೇಶ ಪಡೆದಿರುವುದರಿಂದ ಒಗ್ಗಟ್ಟು ಬಿರುಕು ಬಿಟ್ಟು ಸಾಂಪ್ರದಾಯಿಕ ಆಚರಣೆಗಳು ಬೇರೆ ಬೇರೆ ರೂಪವನ್ನು ಪಡೆದುಕೊಂಡಿವೆ.

೫.೩.೧.೧ ಹೋಳಿ ಹಬ್ಬ

ಮಾದಿಗ ಸಮುದಾಯದಲ್ಲಿ ಹೆಚ್ಚಿನದಾಗಿ ಈ ಹಬ್ಬವನ್ನು ಆಚರಿಸುವ ಪ್ರಮಾಣ ಕಡಿಮೆ ಆಗಿದ್ದರೂ ಕೂಡ ಚಿತ್ರದುರ್ಗ ಭಾಗದಲ್ಲಿ ಕೆಲವು ಕಡೆ ಹೋಳಿ ಹಬ್ಬವನ್ನು ಆಚರಿಸುತ್ತಾರೆ. ಹೋಳಿ ಹಬ್ಬದ ದಿನ ಬಣ್ಣವನ್ನು ಅಳಿಯ ಹಾಗೂ ಸೋದರಮಾವಂದಿರು ಮತ್ತೆ ಸೋದರಅತ್ತೆ ಮತ್ತು ಹುಡುಗಿಯರು ಬಣ್ಣವನ್ನು ಒಬ್ಬರಿಗೊಬ್ಬರು ಹಚ್ಚುತ್ತಾ ಹಲಗೆಯನ್ನು ಬಾರಿಸುತ್ತಾ ಹೊಯ್ಕೊಳ್ಳತ್ತಾ ತಿರುಗಾಡುವರು. ಬಣ್ಣ ಹಾಕುವ ದಿನ ಮುಂಚಿನ ದಿನದ ರಾತ್ರಿ ಕಾಮ ರತಿ ದೇವಿಯ ಮೂರ್ತಿಯನ್ನು ತಲೆಮೇಲೆ ಹೊತ್ತುಕೊಂಡು ಕೂಡಿಸಿಟ್ಟು ಸಗಣಿ ಕುಳ್ಳು ಕಟ್ಟಿಗೆಗಳಿಗೆ ಎರಡು ಸುತ್ತು ಪ್ರದಕ್ಷಿಣೆ ಹಾಕಿ ಮೂರ್ತಿಯನ್ನು ಇಟ್ಟು ಬೆಂಕಿ ಹಚ್ಚುವರು.

ಹೋಳಿ ಹಬ್ಬದ ದಿನ ಯುವಕರು ಹಾಗೂ ಹಿರಿಯರು ಮನೆ ಮನೆಗೆ ತೆರಳಿ ಹೊಯ್ಕೊಳ್ಳುತ್ತ ಕೆಲವರು ಹಿರಿಯರು ಹಾಸ್ಯಭರಿತ ವೇಷಗಳನ್ನು ಹಾಕಿಕೊಂಡು ಹಲಗೆಯನ್ನು ಬಾರಿಸುತ್ತಾ ಕುಣಿಯುತ್ತಾ

ಮತ್ತೆ ಮನೆ ಮನೆಗೆ ಹೋಗಿ ಹಣವನ್ನು ಸಂಗ್ರಹಿಸುತ್ತಾರೆ. ವಯಸ್ಸಾದ ಹಿರಿಯರು ಮನರಂಜನೆಗಾಗಿ ಅವಾಚ್ಯ ಶಬ್ದಗಳಿಂದ ಕೂಡಿದ ಪದಗಳನ್ನು ಹಾಡುತ್ತಾರೆ.

ಇಂತಹ ಮನರಂಜನೆಯ ಹಬ್ಬವನ್ನು ಎಲ್ಲರು ಕೂಡಿ ಸಂತೋಷವನ್ನು ಹಂಚಿಕೊಳ್ಳುವ ಒಂದು ಕಾಲ ಇತ್ತು. ಇವತ್ತು ಕೇವಲ ಮನೆ ಮನೆಗೆ ಸೀಮಿತವಾಗಿದೆ. ಹಿಂದೆ ಪ್ರಕೃತಿಯಲ್ಲಿ ದೊರೆಯುವ ಹೂವುಗಳನ್ನು ಒಣಗಿಸಿ ಬಣ್ಣ ಮಾಡಿ ಹಚ್ಚಿಕೊಳ್ಳುತ್ತಿದ್ದರು. ಆದರೆ ಇವತ್ತು ರಾಸಾಯನಿಕ ವಸ್ತುಗಳ ಮಿಶ್ರಣದಿಂದ ತಯಾರಿಸಿದ ಬಣ್ಣವನ್ನು ಹಚ್ಚಿಕೊಳ್ಳುವುದರಿಂದ ಚರ್ಮರೋಗಗಳು ಬರುವಂತಹ ವಿಷಮ ಸ್ಥಿತಿಯಿದೆ. ಇಂತಹ ಅವೈಜ್ಞಾನಿಕ ಕಾರ್ಯದಲ್ಲಿ ನಾವು ಜೀವನವನ್ನು ಸಾಗಿಸುತ್ತಿದ್ದೇವೆ ಎಂದು ಕ್ಷೇತ್ರಕಾರ್ಯದಲ್ಲಿ ಹಿರಿಯರು ವಿಷಧಿಸುತ್ತಾರೆ.

೫.೩.೧.೨ ಯುಗಾದಿ ಹಬ್ಬ

ಯುಗಾದಿ ಹಬ್ಬವು ತುಂಬಾ ವಿಶೇಷವಾದ ಹಬ್ಬವಾಗಿದೆ. ಇಡೀ ಮಾದಿಗ ಸಮುದಾಯಗಳಿಗೆ ನವವಸಂತ ಆರಂಭವಾಗುವ ಕಾಲ ಹಾಗೂ "ನೂತನ ಸಂವತ್ಸರಾರಂಭ ದಿನವಾದ ಚೈತ್ರ, ಶುಕ್ಲ ಪುತಿಪತ್ (ಪಾಡ್ಯ) ದಿನ ಯುಗಾದಿ ಹಬ್ಬವನ್ನು ಆಚರಿಸಲಾಗುತ್ತದೆ. ಇಡೀ ಸಂವತ್ಸರಕ್ಕೆ ಪೀಠಿಕೆಯ ರೂಪದಲ್ಲಿರುವ ಪರ್ವ ಇದಾಗಿದೆ. ಈ ಹಬ್ಬವನ್ನು ಚಾಂದ್ರಮಾನ ಮತ್ತು ಸೌರಮಾನ ರೀತಿಯಾಗಿ ಆಚರಿಸುವ ಎರಡು ಪದ್ಧತಿಗಳು ಇವೆ. ಸಂವತ್ಸರ ಎಂದರೆ ವರ್ಷ ಋತುಗಳು ಪರಿವರ್ತನೆ ಹೊಂದುವ ಕಾಲ ಯುಗಾದಿ ಎಂದರೆ ಯುಗದ ಪ್ರಾರಂಭ ಯುಗಸ್ಯ ಆದಿ ಈ ದಿನ ಒಳ್ಳೆಯ ಅಥವಾ ಕೆಟ್ಟ ಘಟನೆಯಾಗುವುದು ಒದಗಿದರೂ ಇಡೀ ವರ್ಷದಲ್ಲಿ ಅದರ ಪರಂಪರೆ ಮುಂದುವರಿಯುತ್ತದೆ ಎಂದು ಕೆಲವರು ತಿಳಿಯುತ್ತಾರೆ. ಇದು ಹೇಗೆ ಇರಲಿ ಯುಗಾದಿಯ ದಿನ ಒಳ್ಳೆಯ ಯೋಚನೆ ಒಳ್ಳೆಯ ಕೆಲಸ ಇಡೀ ವರ್ಷದಲ್ಲಿ ಅಂತಹ ಉತ್ತಮ ಫಲಗಳನ್ನು ಹೊಂದುವ ಸ್ಫೂರ್ತಿ ಉಂಟಾಗುವುದಂತೂ ನಿಜ."[೧೦]

ಯುಗಾದಿ ಈ ಸಮುದಾಯದ ದೊಡ್ಡ ಹಬ್ಬಗಳಲ್ಲೊಂದು. ಆ ವೇಳೆಗೆ ಪ್ರಕೃತಿಯಲ್ಲಿ ಆಗುವ ಬದಲಾವಣೆ ಗಮನ ಸೆಳೆಯುತ್ತದೆ. ಗಿಡಮರಗಳು ತಮ್ಮ ಎಲೆಗಳನ್ನು ಕಳಚಿ ಹೊಸ ಚಿಗುರು ಕಾಣಲು ಸಿದ್ಧವಾಗುತ್ತವೆ. ರೈತರಿಗೆ ಆಗ ಬಿಡುವು. ಆದರೆ ಯುಗಾದಿಯಲ್ಲಿ ಈ ಸಮುದಾಯದವರು ಊರಿನ ಮುಖ್ಯ ರಸ್ತೆಗಳನ್ನು ಹಾಗೂ ದೇವಸ್ಥಾನದ ಸುತ್ತಮುತ್ತಲು ಸ್ವಚ್ಚಗೊಳಿಸುತ್ತಾರೆ. ದ್ವಾರ ಬಾಗಿಲಿಗಳಿಗೆ ಮಾವಿನ ತೋರಣಗಳನ್ನು ಮನೆಗಳಿಗೆ ಸುಣ್ಣಬಣ್ಣ ಹಚ್ಚಿ ಅಲಂಕಾರ ಮಾಡಿ ಸಿಂಗರಿಸುತ್ತಾರೆ. ಮನೆ ಮಂದಿಗೆಲ್ಲ ಹೊಸ ಬಟ್ಟೆ ತರುತ್ತಾರೆ. ಇದು ಎಲ್ಲರ ಮನೆಯಲ್ಲೂ ನಡೆಯುತ್ತವೆ.

ಹೊಸ ವರ್ಷದ ಆರಂಭದ ದಿನವನ್ನು ಅಮಾವಾಸ್ಯೆಯಿಂದ ಪ್ರಾರಂಭ ಮಾಡುತ್ತಾರೆ. ಪ್ರತಿಯೊಬ್ಬರ ಮನೆಯ ಅಂಗಳಕ್ಕೆ ಸೆಗಣಿನೀರು, ರಂಗೋಲಿ, ಬಾಗಿಲುಗಳಿಗೆ ಮಾವಿನ, ಬೇವಿನ ತೋರಣ ಕಟ್ಟುತ್ತಾರೆ. ಅಮವಾಸ್ಯೆ ದಿನ ದೇವರನ್ನು ಕರೆಸಿ ದೇವರ ಮೂಲಕ ಹಂದಿ ಬೇಟೆ ಹೋಗುವುದನ್ನು ಕೇಳಿಕೊಂಡು ಮತ್ತೆ ದೇವರಿಗೆ ಪೂಜೆ ಮಾಡಿ ಬೇಡ ಸಮುದಾಯ ಮತ್ತು ಈ ಸಮುದಾಯದ ಯುವಕರು

ಆಯುಧಗಳನ್ನು ತೆಗೆದುಕೊಂಡು ಹೋಗುತ್ತಾರೆ. ಮಧ್ಯಾಹ್ನ ಮನೆಯಲ್ಲಿ ನೀರು ದೋಸೆ ಮತ್ತು ಕಾಯಿ ಹಾಲನ್ನು ಹಂದಿ ಬೇಟೆಗೆ ಹೋಗಿರುವವರಿಗೆ ಮತ್ತೆ ಮನೆಯವರಿಗೆ ಊಟ ತಯಾರಿಸುತ್ತಾರೆ. ನಂತರ ಮನೆಯಲ್ಲಿ ಬೇವು ಬೆಲ್ಲವನ್ನು ಸಿದ್ಧಪಡಿಸುತ್ತಾರೆ. "ಬೇವು ಬೆಲ್ಲ ಬದುಕಿನ ಸಿಹಿ–ಕಹಿ, ಸುಖ–ದುಃಖ ಇವುಗಳ ಪ್ರತೀಕ ನೋವು ನಲಿವನ್ನು ಸಮಚಿತ್ತದಿಂದ ಸ್ವೀಕರಿಸಬೇಕೆಂಬ ಭಾವ ಇಲ್ಲಿ ಗೋಚರವಾಗುತ್ತದೆ. ಬೇವು ರೋಗ ನಿವಾರಕವೂ ಹೌದು. ಬೆಲ್ಲ ಜೀರ್ಣಕಾರಕ, ಹೇಗೆ ಭಾವನಾತ್ಮಕವಾಗಿ ಬೇವುಬೆಲ್ಲ ಸ್ವೀಕರಿಸುತ್ತೇವೆಯೋ ಆರೋಗ್ಯ ದೃಷ್ಟಿಯಿಂದಲೂ ಅದು ಸ್ವೀಕಾರಾರ್ಹ ಈ ಬೇವು ಬೆಲ್ಲ ಇಡೀ ಸಂವತ್ಸರಗಳಲ್ಲಿ ಹಾಗೂ ಇಡೀ ಜೀವನದಲ್ಲಿ ಸುಖದುಃಖಗಳನ್ನು ಸಮನಾಗಿ ಸ್ವೀಕರಿಸಬೇಕೆಂಬ ಸಮಸ್ಥಿತಿಯನ್ನು ತಂದುಕೊಳ್ಳುವುದಕ್ಕೆ ಸ್ಫೂರ್ತಿಯನ್ನು ತಂದುಕೊಡಬೇಕು."[೧೧] ಎಂಬ ಉದ್ದೇಶದಿಂದಾಗಿ ಬೇವು ಬೆಲ್ಲವನ್ನು ಯುಗಾದಿ ಅಮಾವಾಸ್ಯೆ ದಿವಸ ಈ ರೀತಿಯಾದ ಆಚರಣೆಯನ್ನು ಮುಂದುವರಿಸಿಕೊಂಡು ಬಂದಿದ್ದಾರೆ.

ಮರುದಿನ ಸಂಜೆ "ಹಿರಿಯರ ಹಬ್ಬ"ವನ್ನು ಮಾಡುತ್ತಾರೆ. ಪ್ರತಿ ಯುಗಾದಿಯಲ್ಲಿ ಹಿರಿಯರನ್ನು ನೆನಪು ಮಾಡಿಕೊಳ್ಳುವ ಉದ್ದೇಶದಿಂದಾಗಿ ಅಥವಾ ಅವರ ಆದರ್ಶಗಳನ್ನು ಮೈಗೂಡಿಸಿಕೊಳ್ಳುವ ಸಲುವಾಗಿಯೋ, ಹಿರಿಯರನ್ನು ಗೌರವಿಸುವ ಸಲುವಾಗಿ ಗುರುವಾರ ಸಂಜೆ ಮನೆಯಲ್ಲಿ ಅವರು ಸೇವಿಸುವ ಆಹಾರ ಪದಾರ್ಥಗಳು, ಅವರು ಹಾಕಿಕೊಳ್ಳುವ ಬಟ್ಟೆಗಳನ್ನು ತಂದು ಎಡೆ ಹಾಕಿ ಮನೆಯ ಹಿರಿಯ ಮಗ ಅಥವಾ ಕೊನೆಯ ಮಗನು ಪೂಜೆ ಮಾಡುತ್ತಾನೆ. ಮತ್ತೊಂದು ದಿನ ಅಂದರೆ ಶುಕ್ರವಾರ ಅಥವಾ ಮಂಗಳವಾರ ದಿವಸ ದುರುಗಮ್ಮ ದೇವತೆಯನ್ನು ಊರು ಹಾಡಲು ಪ್ರತಿಯೊಂದು ಬೀದಿಗಳಿಗೆ ಹೋಗುತ್ತಾರೆ. ದೇವರಿಗೆ ಹೂ, ಹಣ್ಣು, ಕಾಯಿ ಕೊಡುವುದರ ಮೂಲಕ ಇಡೀ ಊರೇ ಯಾವುದೇ ಭೇದ ಭಾವವಿಲ್ಲದೆ ನೀರು ಮತ್ತು ಓಕುಳಿಯನ್ನು ಎರಚುವುದರ ಮೂಲಕ ಸಂತೋಷವನ್ನು ಹಂಚಿಕೊಳ್ಳುತ್ತಾರೆ. ಅಂದಿನ ದಿನ ಹೋಳಿಗೆ ಹಪ್ಪಳ, ಸಂಡಿಗೆ, ಅನ್ನ ಸಾಂಬಾರಗಳನ್ನು ಆಹಾರವಾಗಿ ಸೇವಿಸುತ್ತಾರೆ. ಹಬ್ಬದ ಕೊನೆಯ ದಿನ 'ಕರಿ'ಯನ್ನು ಮಾಡುತ್ತಾರೆ. ಕರಿ ಎಂದರೆ ಮಾಂಸಹಾರದ ಊಟ.

ಯುಗಾದಿ ಇತರೆ ಹಬ್ಬಗಳಂತೆ ಯಾಂತ್ರಿಕ ಆಚರಣೆಯಾಗದೇ ಬದುಕಿನ ಹಲವು ಬದಲಾವಣೆಗಳಿಗೂ ನಾಂದಿಯಾಗಿದೆ. ಕಾರಣ ಪ್ರತಿಯೊಂದು ಗ್ರಾಮೀಣ ಪ್ರದೇಶದಲ್ಲಿ ಹಿಂದೆ ನವ ವಸಂತವನ್ನು ಎಲ್ಲರೂ ಒಟ್ಟಾಗಿ ಸೇರಿ ಆಚರಣೆ ಮಾಡುತ್ತಿದ್ದರು. ಚಿತ್ರದುರ್ಗದ ಭಾಗದಲ್ಲಿ ಮಾದಿಗ ಸಮುದಾಯವು ಮಲೆನಾಡು ಪ್ರದೇಶಗಳಿಗೆ ವಲಸೆ ಹೋಗಿ ಪ್ರತಿ ಯುಗಾದಿಗೆ ಊರನ್ನು ಸೇರಿಕೊಂಡು ಒಂದು ದಿನ ಅಥವಾ ಯಾಂತ್ರಿಕವಾಗಿ ಈ ಹಬ್ಬವನ್ನು ಆಚರಿಸುವಂಥದ್ದು ನೋಡಬಹುದು. ಹಿಂದೆ ಯುಗಾದಿ ಹಬ್ಬದ ಸಂದರ್ಭದಲ್ಲಿ ನಡೆಯುತ್ತಿದ್ದ ಹಲವಾರು ಕ್ರೀಡೆಗಳು, ಹಾಸ್ಯ ಚಟುವಟಿಕೆಗಳು ಭಜನೆ ಇವು ಎಲ್ಲವೂ ಕಣ್ಮರೆಯಾಗಿವೆ.

೫.೩.೧.೩ ಸಂಕ್ರಾಂತಿ ಹಬ್ಬ

ಸೂರ್ಯನ ಚಲನೆಯ ಹಬ್ಬ ಸಂಕ್ರಮಣ ಅಥವಾ ಸಂಕ್ರಾಂತಿ. ಸಂಸ್ಕೃತದಲ್ಲಿ 'ಕ್ರಮೇಣ' ಎಂದರೆ 'ಹೆಜ್ಜೆ ಇಡುವಿಕೆ' 'ಸಂಕ್ರಮಣ' ಎಂದರೆ ಚೆನ್ನಾಗಿ ಹೆಜ್ಜೆ ಇಡುವಿಕೆ. ಸೂರ್ಯನು ಒಂದು ರಾಶಿಯಿಂದ

ತನ್ನ ಇರುವನ್ನು ಮುಗಿಸಿ ಇನ್ನೊಂದು ರಾಶಿಗೆ ಹೆಜ್ಜೆ ಇಡುವುದೇ ಸಂಕ್ರಮಣ ಅಥವಾ ಸಂಕ್ರಾಂತಿ."[೧೨] ಕಾಲಗಣನೆಯ ಪ್ರಕಾರ ಮಿಥುನ ರಾಶಿಯನ್ನು ಬಿಟ್ಟು ಕರ್ಕಾಟಕ ರಾಶಿಯನ್ನು ಪ್ರವೇಶಿಸುವ ಕರ್ಕಾಟಕ ಸಂಕ್ರಮಣ ಮತ್ತು ಧನುರಾಶಿಯನ್ನು ಬಿಟ್ಟು ಮಕರರಾಶಿಯನ್ನು ಸಂಕ್ರಮಿಸುವ ಮಕರ ಸಂಕ್ರಮಣ ಎಂದು ಕರೆಯುತ್ತಾರೆ.

ಪ್ರತಿವರ್ಷವು ಜನವರಿ ೧೪ ಅಥವಾ ೧೫ನೇ ತಾರೀಖಿನಂದು ಸಂಕ್ರಾಂತಿ ಹಬ್ಬ ಬರುತ್ತದೆ. ಹೊಲ-ಗದ್ದೆಗಳಲ್ಲಿ ಬೆಳೆದಿರುವ ಬೆಳೆಗಳನ್ನು ಹಂಚುವ ಸಂಪ್ರದಾಯದ ಒಂದು ಭಾಗವಾಗಿ ಈ ಆಚರಣೆಯನ್ನು ಮಾಡುತ್ತಾರೆ. ಬೆಳಗಿನ ಜಾವ ಮನೆಯ ಮುಂದಿನ ಅಂಗಳವನ್ನು ಸ್ವಚ್ಛಗೊಳಿಸಿ ಸಗಣಿ ನೀರಿನಿಂದ ಸಾರಿಸಿ, ರಂಗೋಲಿ ಹಾಕಿ, ಸಗಣಿಯಿಂದ ದೇವರ ಮೂರ್ತಿ ಮಾಡಿ ಸಂಕ್ರಮಣನನ್ನು ಮಾಡಿ ಪೂಜೆ ಮಾಡಿ ಎಳ್ಳು, ಬೆಲ್ಲ ಹಾಗೂ ನೆಲಗಡಲೆ (ಶೇಂಗ ಬೀಜ)ವನ್ನು, ಮಾದ್ಲಿ ಪುಡಿ ಮಾಡಿ, ರೊಟ್ಟಿಯ ಜೊತೆಗೆ ಆಹಾರವಾಗಿ ಸೇವನೆ ಮಾಡುತ್ತಾರೆ. ಎಳ್ಳು ಯಾವಾಗಲೂ ಪಾಪಗಳನ್ನು ಪರಿಹರಿಸುವುದು. ದೇಹದ ಬಲ ಮತ್ತು ಪುಷ್ಟಿ ಬೆಳೆಸುವುದು ಆದ್ದರಿಂದ ಅದನ್ನು ಈಗ ದಾನ ಮಾಡುತ್ತಿರುವೆನು. ಇದರಿಂದ ನನಗೆ ಶಾಂತಿಯನ್ನು ಕೊಡು ಎಂಬುದಾಗಿ ಎಳ್ಳು ದಾನ ಮಾಡುವ ಸಂದರ್ಭದಲ್ಲಿ ಹೇಳುವ ಶ್ಲೋಕದ ಸಾರ, ಬರಿಯ ಎಳ್ಳನ್ನು ಮಾತ್ರ ಕೊಡುವುದು ಅಷ್ಟು ಪ್ರಶಸ್ತವಲ್ಲವೆಂದು ಜೊತೆಗೆ ಬೆಲ್ಲವನ್ನು ಸೇರಿಸಲಾಗುವುದು. ಎಳ್ಳು ಬೆಲ್ಲ ತಿಂದು ಒಳ್ಳೆಯ ಮಾತಾಡು ಎಂಬುದು ಈ ಸಂದರ್ಭದ ಹಾರೈಕೆಯಾಗಿದೆ."[೧೩]

ಚಳಿಗಾಲದಲ್ಲಿ ನಮ್ಮ ದೇಹದಲ್ಲಿರುವ ತೈಲ ಅಂಶವು ಶಾಖಕ್ಕಾಗಿ ಖರ್ಚಾಗಿ ಕೊರತೆಯುಂಟಾಗುವುದು. ಇದರ ಜೊತೆಗೆ ಶೀತ-ವಾತ ಸಂಬಂಧಿ ರೋಗಗಳು ಈ ಕಾಲದಲ್ಲಿ ಕಾಣಿಸುವ ಸಾಧ್ಯತೆಗಳಿವೆ. ಎಳ್ಳಿನ ಸೇವನೆ ಕೊರತೆಯನ್ನು ತುಂಬಿ ಈ ರೋಗಗಳನ್ನು ದೂರ ಮಾಡಬಲ್ಲದು. ವೈದ್ಯಕೀಯ ಹಿನ್ನೆಲೆಯಲ್ಲಿ ಎಣ್ಣೆಯ ಅಂಶ ಹೆಚ್ಚಾಗಿರುವ ಒಣಕೊಬ್ಬರಿ, ನೆಲಗಡಲೆ ಬೀಜಗಳನ್ನು ಎಳ್ಳಿನ ಜೊತೆಗೆ ಸೇರಿಸಲಾಗುವುದು. ಬೆಲ್ಲದ ಬದಲು ಸಕ್ಕರೆ, ಹೆಸರುಕಾಳು, ಹಣ್ಣುಗಳು ಕಬ್ಬಿನ ತುಂಡು ಹೀಗೆ ಸಮತೋಲನ ಆಹಾರಗಳಾಗಿವೆ. ಇವುಗಳನ್ನು ಮನೆ ಮನೆಗೆ ಕೊಂಡ್ಯೆದು ಇಷ್ಟ ಮಿತ್ರರಿಗೆ ವಿತರಿಸುವುದು, ಎಳ್ಳು ಬೀರುವುದು ಈ ಹಬ್ಬದ ವಿಶೇಷ.

ಪ್ರಸ್ತುತ ಸಂಕ್ರಾಂತಿಯ ಹಬ್ಬದಲ್ಲಿ ಮಾಡುವ ಆಚರಣೆಗಳು ನಿಂತುಹೋಗಿದೆ. ಹಿಂದೆ ಗ್ರಾಮಗಳಲ್ಲಿ ಆಚರಣೆಯಲ್ಲಿದ್ದ ಪದ್ಧತಿಗಳು ಇಂದು ಅನೇಕ ಆಚರಣೆಯಲಿಲ್ಲ. ಬಹುಶಃ ಇದರ ಅವಶ್ಯಕತೆ ಸಮಾಜಕ್ಕೆ ಅಥವಾ ಸಮುದಾಯಗಳಿಗೆ ಇಲ್ಲದಿರುವುದೇ ಇದಕ್ಕೆ ಕಾರಣವಿರಬಹುದು. ಹೀಗೆ ಉಪಯೊಗವಿಲ್ಲದ್ದನ್ನು ಕೈಬಿಡುತ್ತಾ ಹೋಗುವುದು ಮಾನವ ಸಹಜ ಗುಣ. ಉತ್ತಮ ಬೀಜಗಳು ಅಥವಾ ವಸ್ತುಗಳನ್ನು ಬದಲಾವಣೆ ಮಾಡಿಕೊಳ್ಳಲು ಯಾವ ಕುಟುಂಬದಲ್ಲಿ ದೊರೆಯುತ್ತವೆ ಎಂಬುದನ್ನು ತಿಳಿಯಲು ಹಿಂದಿನ ಕಾಲದಲ್ಲಿ ಸಂಕ್ರಾಂತಿ ಹಬ್ಬವಲ್ಲದೆ ಬೇರಾವ ಮಾರ್ಗವೂ ಇರಲಿಲ್ಲ. ಹಿಂದಕ್ಕೆ ಗ್ರಾಮಸ್ಥರಲ್ಲಿ ಏನೇ ಭಿನ್ನತೆ ಇದ್ದರೂ ಹಬ್ಬಗಳ ಆಚರಣೆಗೆ ಒಗ್ಗಟ್ಟು ಬೇಕಾಗುತ್ತಿದ್ದುದರಿಂದ ಅವರನ್ನು

ಒಂದುಗೂಡಿಸುತ್ತಿದ್ದವು. ಇಂದು ಈ ಕ್ರಮ ತಪ್ಪಿಹೋಗಿರುವುದರಿಂದ ಅವರನ್ನು ಒಗ್ಗೂಡಿಸುವ ಮಾರ್ಗ ಹಬ್ಬಗಳಿಂದ ಸಾಧ್ಯವಿಲ್ಲ. ಇದರಿಂದ ಗ್ರಾಮೀಣ ಸಮುದಾಯದಲ್ಲಿ ಸಾಮರಸ್ಯತೆ ಕುಸಿದು ಹೋದಂತೆ ಕಾಣುವುದು ಸಹಜ. ಸಾಂಪ್ರದಾಯಿಕ ಮೌಲ್ಯಗಳ ಮಡಿಲಲ್ಲಿ ಬೆಳೆದವರು ಗ್ರಾಮೀಣ ಜೀವನವು ಅದೋಗತಿಗೆ ಇಳಿದಿದೆ. ಇಂದು ಈ ಭಾವನೆ ತರಲು ಮತ್ತಾವುದಾದರೂ ಆಧುನಿಕ ಚಟುವಟಿಕೆಯನ್ನು ಹುಡುಕುವುದು, ರೂಪಿಸುವುದು ಅವಶ್ಯಕ. ಇಲ್ಲದಿದ್ದರೆ ರಾಜಕೀಯ ಮತ್ತು ಗುಂಪುಗಾರಿಕೆ ಗ್ರಾಮದಲ್ಲಿ ದ್ವೇಷ ಅಸೂಯೆಯನ್ನು ಬಿತ್ತುತ್ತಾ ಹೋಗಬಹುದು. ಇದು ಹೆಚ್ಚುತ್ತಾ ಹೋದಂತೆ ಕೌಟುಂಬಿಕ ಜೀವನ ಜಿಗುಪ್ಸೆ ತರುತ್ತದೆ. ಇದರಿಂದ ಗ್ರಾಮೀಣ ಅಭಿವೃದ್ಧಿ ಕುಂಠಿತವಾಗುತ್ತದೆ.

೫.೩.೧.೪ ನಾಗರ ಪಂಚಮಿ ಹಬ್ಬ

"ಶ್ರಾವಣ ಮಾಸದ ಶುಕ್ಲಪಕ್ಷದ ಪಂಚಮಿ ತಿಥಿಯಲ್ಲಿ ಈ ಹಬ್ಬವನ್ನು ಆಚರಿಸುವರು. ದೇಶದ ಎಲ್ಲ ಭಾಗಗಲ್ಲೂ ಎಲ್ಲ ಮತ ಪಂಥಗಳಲ್ಲೂ ಈ ಹಬ್ಬವನ್ನು ಆಚರಿಸುವ ಜನ ಇದ್ದಾರೆ. ಭಕ್ತಿ, ಭಯ, ಶ್ರದ್ಧೆಯಿಂದ ನಾಗರ ಪಂಚಮಿ ಆಚರಿಸುವರು."[೧೪] ಮಾದಿಗ ಸಮುದಾಯದಲ್ಲಿ ನಾಗರ ಪಂಚಮಿಯನ್ನು ಬಹಳ ವಿಶೇಷವಾಗಿ ಆಚರಿಸುತ್ತಾರೆ. ಊರಿನ ಹೊರಭಾಗದಲ್ಲಿ ಕಲ್ಲಿನಲ್ಲಿ ಮೂರು ನಾಗರ ಹಾವಿನ ಚಿತ್ರವನ್ನು ಕೆತ್ತಿಸಿ, ಮಣ್ಣಿನ ಹುತ್ತದ ಹತ್ತಿರ ಅಥವಾ ಬನ್ನಿಮರದ ಹತ್ತಿರ, ಪತ್ರಿ ಮರದ ಬಳಿ ನೆಡುತ್ತಾರೆ. ಶ್ರಾವಣ ಮಾಸದ ದಿನವ ಮನೆಯಲ್ಲಿ ದೊಡ್ಡ ಮಕ್ಕಳು ಅಥವಾ ಕೊನೆಯ ಮಕ್ಕಳು ಒಂದು ಹೊತ್ತು (ಉಪವಾಸ) ವತ್ರವನ್ನು ಮಾಡುತ್ತಾರೆ. ಸಂಜೆ ಸುಮಾರಿಗೆ ಅಕ್ಕಿ ಹಿಟ್ಟಿನಿಂದ ಚೆಗಳಿ, ಎಳ್ಳು ಚಿಗಳಿ, ಕಡಲೆಕಾಯಿ ಸಿಹಿ ಕಡುಬು ಮಾಡಿ ಹುತ್ತಕ್ಕೆ ಅಥವಾ ನಾಗರ ಕಲ್ಲಿಗೆ ಅಗರಬತ್ತಿ, ಬಾಳೆಹಣ್ಣು, ತೆಂಗಿನಕಾಯಿ ಒಡೆದು ಪೂಜೆ ಮಾಡಿ ಹಾಲೆರೆದು ಬರುವರು. ನಂತರ ಮಾಡಿದ ಆಹಾರವನ್ನು ನೈವೇದ್ಯ ಅರ್ಪಿಸುವರು.

ನಾಗದೇವತೆ ಮೂಲತಃ ದ್ರಾವಿಡ ಸಂಸ್ಕೃತಿಯಲ್ಲಿ ಬಹು ಮುಖ್ಯವಾದ ಆರಾಧನೆಯಾಗಿದೆ. ಮಾದಿಗ ಸಮುದಾಯದಲ್ಲಿ ಹಾವುಗಳು ಕಚ್ಚದಿರಲು, ವಿಷಬಾಧೆ ಪರಿಹಾರವಾಗಲು, ಸಂತಾನಭಾಗ್ಯ, ಧನಪ್ರಾಪ್ತಿ ಉಂಟಾಗಲು, ಚರ್ಮರೋಗಗಳು ಹೋಗಲು, ಸ್ವರ್ಗ ಪ್ರಾಪ್ತಿಯಾಗಲು ನಾಗದೇವತೆಯನ್ನು ಪೂಜಿಸಬೇಕೆಂಬ ನಂಬಿಕೆಯಿದೆ.

ಈ ಆಚರಣೆಯನ್ನು ಇವತ್ತು ಕಟ್ಟುನಿಟ್ಟಾಗಿ ಯಾರು ಆಚರಣೆ ಮಾಡುತ್ತಿಲ್ಲ. ಕಾರಣ ಬಹು ಸಂಸ್ಕೃತಿಯ ಪ್ರಭಾವ. ಹಿಂದೆ ನಾಗರ ಪಂಚಮಿಯ ವಿಶೇಷವೆಂದರೆ ಸೋದರ, ಸೋದರಿಯರು ಒಂದು ಕಡೆ ಸೇರಿ ಒಬ್ಬರಿಗೊಬ್ಬರು ಶುಭಾಶಯ ಹೇಳುವರು. ಸೋದರಿಯರು, ಸೋದರರ ಶರೀರದಲ್ಲಿ ಹೊಕ್ಕಳು, ಬೆನ್ನುಗಳಿಗೆ ತಾಳೆ ಹೂವಿನಿಂದ ಹಾಲು ಚಿಮುಕಿಸಿ ಅವರು ತಂಪಾಗಿರಲಿ ಎಂದು ಹಾರೈಸುತ್ತಿದ್ದರು ಹೀಗಾಗಿ ಇದು ಒಡಹುಟ್ಟಿದವರ ಹಬ್ಬ ಕೂಡ ಆಗಿತ್ತು. ಆದರೆ ಇತ್ತೀಚಿನ ದಿನಮಾನಗಳಲ್ಲಿ ಶಿಕ್ಷಣವನ್ನು ಪಡೆಯುವುದಕ್ಕೆ ಹಾಗೂ ಕೆಲಸಕ್ಕಾಗಿ ನಗರದ ಕಡೆ ವಲಸೆ ಹೋಗುವುದರಿಂದ ಇಂತಹ ಬಾಂಧವ್ಯ, ಆಚರಣೆಗಳು ಕಣ್ಮರೆಯಾಗುತ್ತಿವೆ.

೫.೩.೧.೫ ಕಾರುಹುಣ್ಣಿಮೆ ಹಬ್ಬ

ಜೇಷ್ಠ ಮಾಸದಲ್ಲಿ ಅಂದರೆ ಪ್ರತಿ ವರ್ಷ ಮೇ-ಜೂನ್ ತಿಂಗಳಲ್ಲಿ ಕಾರಹುಣ್ಣಿಮೆ ಹಬ್ಬವನ್ನು ಆಚರಿಸಲಾಗುತ್ತದೆ. ಚಿತ್ರದುರ್ಗದ ಹೆಚ್ಚಿನ ಮಾದಿಗ ಸಮುದಾಯದವರು ಪಶುಪಾಲಕರು ಹಾಗೂ ಕೃಷಿಕೂಲಿ ಕಾರ್ಮಿಕರು ಹೆಚ್ಚಿನದಾಗಿ ಇರುವುದರಿಂದ ಈ ಹಬ್ಬವನ್ನು ವಿಶೇಷವಾಗಿ ಆಚರಿಸುತ್ತಾರೆ. ಈ ಹಬ್ಬವನ್ನು ಗ್ರಾಮೀಣ ಪ್ರದೇಶದಲ್ಲಿ ಎತ್ತುಗಳ ಹಬ್ಬ ಎಂತಲೂ ಕರೆಯುತ್ತಾರೆ. "ಕರ್ನಾಟಕದ ಇತರೆ ಪ್ರದೇಶಗಳಲ್ಲಿ 'ಕಾರ್‌ಹಬ್ಬ' ಮತ್ತು 'ಕರೆಹಬ್ಬ' ಎಂಬ ಹೆಸರಿನಿಂದ ಕರೆಯಲಾಗಿರುವ ಈ ಹಬ್ಬವನ್ನು ಉತ್ತರ ಕರ್ನಾಟಕದಲ್ಲಿ ಕಾರುಹುಣ್ಣಿಮೆ ಎಂದು ಆಚರಿಸುತ್ತಾರೆ. ಬೆಟಗೇರಿ ಕೃಷ್ಣಶರ್ಮರ ವಿವರಣೆಯಂತೆ 'ಕಾರ್' ಎಂದರೆ ಮಳೆ, ಇದು ಮಳೆಗಾಲದ ಆರಂಭದ ಹುಣ್ಣಿಮೆಯೆಂದು ಕಾರ್‌ಮೋಡ (ಮಳೆಮೋಡ) ಆಚರಿಸುವುದರಿಂದ ಇದಕ್ಕೆ "ಕಾರುಹುಣ್ಣಿಮೆ" ಎಂದು ಹೆಸರೂ ಬಂದಿದೆ ಎಂದಿದ್ದಾರೆ."[೧೫]

ಕಾರುಹುಣ್ಣಿಮೆಯ ದಿನ ರೈತರು ತಮ್ಮ ತಮ್ಮ ವ್ಯವಸಾಯದ ಕೆಲಸಗಳನ್ನು ಸ್ಥಗಿತಗೊಳಿಸಿ ಕೃಷಿಗೆ ಆಧಾರವಾದ ಎತ್ತುಗಳ ಕೊಂಬು, ಹಕ್ಕೆಯನ್ನು ಸ್ವಚ್ಛಮಾಡಿ ತೊಳೆಯುತ್ತಾರೆ. ಎತ್ತುಗಳ ಕೋಡುಗಳಿಗೆ ಬಣ್ಣವನ್ನು ಲೇಪಿಸಿ ಗಗ್ಗರಿ, ಕೊಡ್‌ಹಣ್ಣೆಸು, ಮೈಮೇಲೆ ಸಿಂಗರಿಸಿ ಬಟ್ಟೆಯನ್ನು ಹಾಕುತ್ತಾರೆ. ನಂತರ ಎತ್ತುಗಳನ್ನು ಮನೆಯೊಳಗೆ ಕರೆತಂದು ಅಲ್ಲಿ ಸ್ವಲ್ಪ ಜಾಗವನ್ನು ದುಂಡನಾಗಿ ಸಾರಿಸಿ ಅದರಲ್ಲಿ ಗುಂಪೆಗೆ ಹಾಕಿರುವ ಜೋಳದ ಕಾಳುಗಳ ಮೇಲೆ ಅವು ಬಲಗಾಲು ಇಟ್ಟು ನಿಲ್ಲುವಂತೆ ಮಾಡಿ ಪೂಜೆ ಮಾಡುತ್ತಾರೆ. ಇದರಿಂದ ಜೋಳದ ರಾಶಿಯು ಒಡೆದು ಕಾಳುಗಳು ಮನೆ ತುಂಬಾ ಚೆಲ್ಲಾಡುತ್ತವೆ. ಈ ಭಾಗದ ರೈತರಿಗೆ ಜೋಳ ಮುಖ್ಯ ಆಹಾರ ಮತ್ತು ಶೇಂಗ ಮುಖ್ಯ ಆದಾಯದ ಬೆಳೆಯಾದ್ದರಿಂದ ಇವುಗಳಿಗೆ ವಿಶೇಷವಾದ ಸ್ಥಾನ ಕೊಟ್ಟಿದ್ದಾರೆ.

ವ್ಯವಸಾಯದ ಎಲ್ಲಾ ಕೆಲಸಗಳನ್ನು ಎತ್ತುಗಳ ನೆರವಿನಿಂದ ಮಾಡಬೇಕಾಗುವುದರಿಂದ 'ಎತ್ತಿಲ್ಲದವನಿಗೆ ಎದೆ ಇಲ್ಲ' ಎಂಬ ನಾಣ್ನುಡಿ ಚಿತ್ರದುರ್ಗ ಜಿಲ್ಲೆಯಾದ್ಯಂತ ಪ್ರಚಲಿತದಲ್ಲಿದೆ. ಪ್ರತಿಯೊಬ್ಬರು ತಮ್ಮ ತಮ್ಮ ಮನೆಯಲ್ಲಿ ಎತ್ತುಗಳನ್ನು ಹೊಂದಿದ್ದಾರೆ. ಭೂಮಿ ಹದ ಮಾಡಲು ಎತ್ತುಗಳು ಬೇಕು. ಆದ್ದರಿಂದ ಬೀಜಗಳ ಮೇಲೆ ಭೂದೇವಿಯ ಕೃಪೆಯಿದೆ. ಈ ವರ್ಷ ಹೆಚ್ಚು ಫಸಲು ಕೊಡುವಳು ಎಂಬ ಉದ್ದೇಶದಿಂದ ಭೂಮಿಯನ್ನು ಪೂಜೆ ಮಾಡುತ್ತಾರೆ.

ಗ್ರಾಮೀಣ ಪ್ರದೇಶದಲ್ಲಿ ರಾಜಕೀಯದಿಂದ ಸಂಘರ್ಷಗಳು ಪ್ರಾರಂಭವಾಗಿದೆ. ಇದರಿಂದಾಗಿ ಅನೇಕ ಹಬ್ಬದಾಚಾರಣೆಗಳಂತೆ ಕೆಲವು ಕಡೆ ಕಾರುಹುಣ್ಣಿಮೆ ಹಬ್ಬದಾಚರಣೆಯ ಬಹಿರಂಗವಾಗಿ ಆಚರಣೆಯನ್ನು ಮಾಡುವುದು ನಿಲ್ಲಿಸಿದ್ದಾರೆ. ಇಂದು ಸಮುದಾಯದಲ್ಲಿ ಸಾಮರಸ್ಯ, ಸಹಕಾರ ಕಣ್ಮರೆಯಾಗಿವೆ.

೫.೩.೧.೬ ದಸರಾ ಹಬ್ಬ

ಪ್ರತಿವರ್ಷ ಸೆಪ್ಟೆಂಬರ್-ಅಕ್ಟೋಬರ್ ತಿಂಗಳಿನಲ್ಲಿ ದಸರಾವನ್ನು ಆಚರಿಸಲಾಗುತ್ತದೆ. ಹೇಮಂತ ಋತುವಿನಲ್ಲಿ ಅಂದರೆ ಮಳೆಗಾಲದಿಂದ ವರ್ಷ ಋತುವಿನ ಚಳಿಗಾಲಕ್ಕೆ ಹೇಮಂತ ಋತುವಿಗೆ

ಬದಲಾಗುವ ಕಾಲವಿದು. ಬೆಳೆಗಳು ಬಲಿತು, ಕಾಳು ಗಟ್ಟಿಯಾಗುವ ಕಾಲವಿದು, ಈ ಕಾಲದಲ್ಲಿ ಆಚರಿಸುತ್ತಾರೆ. ಈ ಹಬ್ಬವನ್ನು ನವಮಿ, ಮಹಾನವಮಿ, ಮಾರ್ನೋಮಿ ಆಯುಧಪೂಜೆ, ಹಿರಿಯರ ಪೂಜೆ, ಬನ್ನಿ ಪೂಜೆ ಹೀಗೆ ಅನೇಕ ಹೆಸರುಗಳಿಂದ ಕರೆಯಲಾಗುತ್ತದೆ. ಮಾದಿಗ ಸಮುದಾಯವು ಜೀವನ ನಿರ್ವಹಣೆಗಾಗಿ ದುಡುಮೆಗಾಗಿ ಬೇರೆ ಕಡೆ ವಲಸೆ ಹೋಗಿರುವಂಥವರು ಎಲ್ಲೇ ಇರಲಿ ಈ ಹಬ್ಬಕ್ಕೆ ಬರುತ್ತಾರೆ. ಮೂಲ ಪುರುಷರಾದ ಹಿರಿಯರನ್ನು ಪೂಜೆ ಮಾಡುವ ಸಲುವಾಗಿ ಪ್ರತಿಯೊಬ್ಬರು ಈ ಹಬ್ಬಕ್ಕೆ ಬರುತ್ತಾರೆ.

• ಆಯುಧ ಪೂಜೆ

ಆಯುಧಗಳಲ್ಲಿ ಪವಿತ್ರವಾದ ಸಾಧನಗಳೂ ಕೆಲವಿವೆ. ತಮ್ಮ ಕುಲಗುರುವೋ, ಮನೆತನದ ಹಿರಿಯರೋ ಬಳಸಿದ ಆಯುಧ ವಿಶೇಷಗಳನ್ನು ಮನೆಗಳಲ್ಲಿಟ್ಟು ಪೂಜಿಸುವ ವಾಡಿಕೆಯಿದೆ. ಕೆಲವು ದೈವಗಳ ಆರಾಧನೆಯಲ್ಲಿ ಆ ದೈವದ ಆಯುಧ ವಿಶೇಷವನ್ನೇ ಇಟ್ಟು ಪೂಜಿಸುವ ಬಗೆಯನ್ನು ಕಾಣಬಹುದು. ಆತ್ಮರಕ್ಷಣೆಯ ಸಾಧನಗಳು ಎಲ್ಲ ಬಗೆಯ ಆಯಧಗಳೂ ಒಂದಲ್ಲ ಒಂದು ರೀತಿಯಲ್ಲಿ ಆತ್ಮರಕ್ಷಣೆಯ ಸಾಧನಗಳೇ ಆದರೂ ಅದಕ್ಕಾಗಿಯೇ ಮೀಸಲಾದ ಸಾಧನ ಸಲಕರಣೆಗಳೂ ಮುಖ್ಯವಾಗಿವೆ.

ದಸರಾ ಹಬ್ಬದ ಸಂದರ್ಭದಲ್ಲಿ ಆಯುಧ ಪೂಜೆ ಕರ್ನಾಟಕದಲ್ಲಿ ಒಂದು ವಿಶೇಷ ಆಚರಣೆಯಾಗಿ ಬೆಳೆದಿದೆ. ಗ್ರಾಮಾಂತರ ಪ್ರದೇಶಗಳಲ್ಲೂ ವ್ಯಾಪಿಸಿರುವ ಈ ಪೂಜೆಯ ಸಂದರ್ಭದಲ್ಲಿ ರೈತ ಬಳಸುವ ಸಾಧನಗಳಲ್ಲಿ ವ್ಯವಸಾಯ ಹಾಗೂ ಮನೆ ಬಳಕೆಯ ಸಾಧನಗಳೇ ಆಯುಧಗಳೂ ಪೂಜೆಗೊಳ್ಳತ್ತದೆ. ಗ್ರಾಮೀಣ ಪ್ರದೇಶದಲ್ಲಿ ಸಿಗುವಂತಹ ಹಾರೆ, ಗುದ್ದಲಿ, ಪಿಕಾಸಿ, ಚಾಚಿ, ಚಲಕೆ, ಕೊಡಲಿ, ಕುಡುಗೋಲು, ಭರ್ಜಿಗಳು ಮುಂತಾದ ಆಯುಧಗಳನ್ನು ಹೊರತೆಗೆದು ತೊಳೆದು ಸ್ವಚ್ಚಮಾಡಿ ವಿಭೂತಿ, ಕುಂಕುಮ ಇಟ್ಟು, ತೆಂಗಿನಕಾಯಿ ಒಡೆದು ಪೂಜೆ ಮಾಡುತ್ತಾರೆ.

• ಹಿರಿಯರ ಪೂಜೆ

ಚಿತ್ರದುರ್ಗ ಜಿಲ್ಲೆಯ ಮಾದಿಗ ಸಮುದಾಯದಲ್ಲಿ ದಸರಾ ಮತ್ತು ಯುಗಾದಿ ಹಬ್ಬದ ಸಂದರ್ಭದಲ್ಲಿ ಹಿರಿಯರ ಪೂಜೆಯನ್ನು ಮಾಡುತ್ತಾರೆ. ವಿಶೇಷವಾಗಿ ದಸರಾ ಹಬ್ಬದಲ್ಲಿ ಹಿರಿಯರನ್ನು ಪೂಜೆ ಮಾಡುತ್ತಾರೆ. ಊರಿನ ಹೊರಭಾಗದಲ್ಲಿ ಯಾವ ವ್ಯಕ್ತಿ ಸಾವಿಗೆ ಈಡಾಗಿರುತ್ತಾನೆ ಅವನ ಹೆಸರಿನಲ್ಲಿ ಒಂದು ಕಲ್ಲು ತೆಗೆದುಕೊಂಡು ಚಿಕ್ಕದಾದ ಗುಡಿಯನ್ನು ನಿರ್ಮಾಣ ಮಾಡಿರುತ್ತಾರೆ. ಅದರಲ್ಲಿ ಒಂದೇ ಕುಲಕ್ಕೆ ಸಂಬಂಧಿಸಿದ ಹಿರಿಯರ ಮತ್ತು ಮಕ್ಕಳು ಸತ್ತಿರುವ ಕಲ್ಲುಗಳನ್ನು ಇಡುತ್ತಾರೆ. ನಂತರ ಹೆಣ್ಣುಮಕ್ಕಳ ಒಂದು ಗುಡಿಯನ್ನು ನಿರ್ಮಾಣ ಮಾಡುತ್ತಾರೆ. ದಸರಾ ಸಮಯದಲ್ಲಿ ಗುಡಿಗಳನ್ನು ಸ್ವಚ್ಚಗೊಳಿಸಿ ಹಾಗೂ ಹಿರಿಯರ ಕಲ್ಲುಗಳನ್ನು ಸ್ವಚ್ಚಗೊಳಿಸಿ ಗುಡಿಗೆ ಮತ್ತು ಹಿರಿಯರ ಕಲ್ಲುಗಳಿಗೆ ಸುಣ್ಣ, ಜಾಜು ಬಳಿದು ಸಗಣಿಯಿಂದ ನೆಲವನ್ನು ಸಾರಿಸಿ ಹಿರಿಯ ಕಲ್ಲುಗಳನ್ನು ಗುಡಿಯೊಳಗೆ ಇಡುತ್ತಾರೆ. ಸಂಜೆ ಸುಮಾರಿಗೆ ಹೊಲದಲ್ಲಿ ತಂದಿರುವ ಸಜೆತೆನೆ, ಸೂರ್ಯಕಾಂತಿ ಹೂ, ಶೇಂಗ

ಗಿಡ, ಎಳ್ಳಿನ ಹೂ ಮುಂತಾದವುಗಳನ್ನು ಪೂಜೆಗೆ ತರುತ್ತಾರೆ. ನಂತರ ಮನೆಯಲ್ಲಿ ಮಾಡಿದಂತಹ ಅಡುಗೆ ಮತ್ತು ಅವರು ಸೇವಿಸುವಂತಹ ಆಹಾರ ಪದಾರ್ಥಗಳನ್ನು ತಂದು ಎಡೆ ಇಡುತ್ತಾರೆ.

ಮತ್ತೆ ಕೆಲವರು ಸ್ಮಶಾನಕ್ಕೆ ಹೋಗಿ ಸತ್ತ ವ್ಯಕ್ತಿಯ "ಗುಟ್ಟೆಗೆ (ಸಮಾಧಿ) ಅವರು ಉಪಯೋಗಿಸುತ್ತಿದ್ದ ಬಟ್ಟೆಗಳನ್ನು ಮತ್ತು ಅವರು ಸೇವಿಸುವ ಆಹಾರ ಪದಾರ್ಥಗಳನ್ನು ಗುಟ್ಟೆಗೆ ಎಡೆ ಹಾಕಿ ಪೂಜೆ ಮಾಡುತ್ತಾರೆ. ರಾತ್ರಿ ವೇಳೆಯಲ್ಲಿ ತಮ್ಮ ತಮ್ಮ ಮನೆಗಳಲ್ಲಿ ಹಿರಿಯರಿಗೆ ಎಡೆ ಹಾಕುವ ಸ್ಥಳದಲ್ಲಿ ನೆಲವನ್ನು ಸಾರಿಸಿ ಅದರ ಒಂದು ಕಡೆ ಪರಿಪೂರ್ಣತೆ ಸಂಕೇತವಾಗಿ, ಸ್ವಲ್ಪ ನೆಲವನ್ನು ದುಂಡಗೆ ಸಾರಿಸಿ ಅದರ ಮೇಲೆ ಜೋಳ ಅಥವಾ ಅಕ್ಕಿಯನ್ನು ಹರಡುತ್ತಾರೆ. ಅದರ ಮೇಲೆ ಪುರುಷ ಹಿರಿಯರಿಗೆ ತಾಮ್ರದ ಕೊಡವನ್ನು ಸ್ತ್ರೀಯರಿಗೆ ಒಂದು ಕುಂಭವನ್ನು ಇಟ್ಟು ಅವುಗಳಲ್ಲಿ ಈ ಉದ್ದೇಶಕ್ಕೆ ಎಂದು ತಂದ ಹೊಸ ನೀರನ್ನು ಕಂಠ ಮಟ್ಟಕ್ಕೆ ತುಂಬುತ್ತಾರೆ. ನಂತರ ಐದ್ಯೆದು ವೀಳ್ಯೆದೆಲೆಗಳನ್ನು ತೊಟ್ಟು ಅಡಿಯಾಗಿ ಇಟ್ಟು ಕೊಡಕ್ಕೆ ಹೊಸ ಪಂಚೆ, ಷರಟಿನ ಬಟ್ಟೆ ಮತ್ತು ಟವಲ್ಲು (ಅಂಗವಸ್ತ್ರ) ಹೊದಿಸಿ ಪೇಟವನ್ನು ಇಡುತ್ತಾರೆ. ಮಹಿಳೆಯರಿಗೆ ಹೊಸ ಸೀರೆ ಮತ್ತು ಕುಪ್ಪಸ ಹಾಕಿ ಅಡ್ಡಿಕೆ, ನಸಿ ಮುಂತಾದ ಒಡವೆಗಳನ್ನು ಹಾಕುತ್ತಾರೆ. ನಂತರ ಮನೆಯ ಹಿರಿಯ ಮಗ ಅಥವಾ ಕೊನೆಯ ಮಗ ಪೂಜೆ ಮಾಡಿದ ಮೇಲೆ ಮನೆಯಲ್ಲಿ ಇರುವ ಎಲ್ಲರೂ ಬಂದು ಪೂಜೆ ಮಾಡಿ ಕಡ್ಡಿ ಬೆಳಗುತ್ತಾರೆ.

ನಂತರ ಹಿರಿಯರ ಎದುರಿಗೆ ಬಾಳೆ ಎಲೆ ಹಾಕಿ, ಹಬ್ಬಕ್ಕೆ ಸಿದ್ಧಪಡಿಸಿದ ಎಲ್ಲ ಅಡುಗೆಗಳನ್ನೂ ಎಡೆ ಹಾಕುತ್ತಾರೆ. ಈ ಎಡೆಯನ್ನು ಮನೆ ಮಕ್ಕಳು ಮಾತ್ರ ಊಟ ಮಾಡಬೇಕೆಂದು (ಅಂದರೆ ಅಜ್ಜನ ಹೆಸರಿನಲ್ಲಿ ಹಾಕಿದ ಎಡೆಯನ್ನು ಅವರ ಮಗ ಅಥವಾ ಮೊಮ್ಮಗ ಮತ್ತು ಅಜ್ಜಿಯ ಹೆಸರಿನಲ್ಲಿ ಹಾಕಿದ ಎಡೆಯನ್ನು ಅವರ ಮಗಳು ಅಥವಾ ಮೊಮ್ಮಗಳು ಉಣ್ಣಬೇಕೆಂದು) ಸಂಪ್ರದಾಯವಿದೆ. ಮರುದಿನ ಹಿರಿಯರನ್ನು ಕಳುಹಿಸುವುದು ರೂಢಿ. ಅಂದು ಕೂಡ ಹಿರಿಯರಿಗೆ ಪೂಜೆ ಮಾಡಿ ನಂತರ ಹಿರಿಯರ ಅಲಂಕಾರವನ್ನು 'ಸಡಲಿಸಿ' ಅಂದರೆ ತೆಗೆದು ಬಿಂದಿಗೆಯಲ್ಲಿ 'ನೀರು ಮತ್ತು ಹೂ ಪತ್ರೆಗಳ ಅಲಂಕಾರವನ್ನು ಯಾವುದಾದರೂ ಫಲ ನೀಡುವ ಗಿಡ ಮರಗಳಿಗೆ ಅಥವಾ ದೇವರ ಮರಗಳಿಗೆ ಎರೆಯುತ್ತಾರೆ."[೧೬] ಈ ಹಬ್ಬವನ್ನು ಸಂಪ್ರದಾಯಬದ್ಧವಾಗಿ ಮಾಡುತ್ತಾರೆ. ಕಾರಣ ನಮ್ಮ ಹಿರಿಯ ಆತ್ಮಗಳು ಸಂತೋಷದಾಯಕವಾಗಿ ಹಾಗೂ ನಮ್ಮ ಮಕ್ಕಳು ಕುಟುಂಬವನ್ನು ರಕ್ಷಣೆ ಮಾಡಲಿ ಎಂಬ ಉದ್ದೇಶವಿದೆ.

• ಬನ್ನಿ ಪೂಜೆ

ಧಾರ್ಮಿಕ ಆಚರಣೆಯಲ್ಲಿ ಸ್ವಲ್ಪ ಮಟ್ಟಿಗೆ ಸಡಲಿಕೆ ಆಗಿರುವುದರಿಂದ ಜೊತೆಗೆ ಮಾದಿಗರಲ್ಲಿ ಉನ್ನತ ಶಿಕ್ಷಣ ಮತ್ತು ಸಾಮಾಜಿಕ ಜ್ಞಾನ ತಿಳಿದಿರುವುದರಿಂದ ಹಿಂದಿನ ಕಟ್ಟುಪಾಡುಗಳನ್ನು ಬಿಟ್ಟು ಹೊರ ಬರುವಂತಹ ಪ್ರಯತ್ನ ಮಾಡುತ್ತಿದ್ದಾರೆ. ಮಾದಿಗ ಸಮುದಾಯದಲ್ಲಿ ಇತ್ತೀಚಿನ ದಿನಮಾನಗಳಲ್ಲಿ ಬನ್ನಿ ಪೂಜೆಯನ್ನು ಮಾಡುತ್ತಿದ್ದಾರೆ. ಹಿಂದಿನ ದಿನಮಾನಗಳಲ್ಲಿ ಬನ್ನಿ ಮುಡಿಯುವ ಆಚರಣೆಯಿರಲಿಲ್ಲ ಎಂದು ಹಿರಿಯರು ಹೇಳುತ್ತಾರೆ. ಆದರೆ ಮಾದಿಗರ ದೇವರುಗಳಾದ ದುರುಗಮ್ಮ, ಮಾರಮ್ಮ,

ಕೊಲ್ಲಾರಮ್ಮ, ಮಾತಂಗಿ ದೊಡ್ಡ ಹಿರಿಯಮ್ಮ, ಸಣ್ಣ ಹಿರಿಯಮ್ಮ, ಮೈಲಾರಲಿಂಗೇಶ್ವರ, ಪೆನ್ನೊಬಳೇಶ್ವರ ಇನ್ನೂ ಮುಂತಾದ ದೇವರು ಹಿರಿಯರ ಹಬ್ಬದ ಮರುದಿನ ಸಂಜೆ ಪಲ್ಲಕ್ಕಿಯನ್ನು ಎಲ್ಲ ಹೂಗಳಿಂದ ಅಂದರೆ ಸೂರ್ಯಕಾಂತಿ, ತಂಗಡಿ ಹೂ, ಎಕ್ಕೆ ಹೂ, ಕನಕಾಂಬರಿ, ಮಲ್ಲಿಗೆ ಹೂ, ಚೆಂಡು ಹೂ ಇವುಗಳಿಂದ ಆಲಂಕಾರಗೊಳಿಸಿ ತಮಟೆ, ಡೋಲು ಬಾರಿಸುವುದರ ಮೂಲಕ ಮೆರವಣಿಗೆಯನ್ನು ಮಾಡಿಕೊಂಡೇ ಬನ್ನಿ ಮುಡಿಯುವುದಕ್ಕೆ ಕರೆದುಕೊಂಡು ಹೋಗುತ್ತಾರೆ.

ನಂತರ ಕಾಳಮ್ಮನ ಪೂಜಾರಿಯಾದ ಆಚಾರಿಯು ಬನ್ನಿ ಮರಕ್ಕೆ ಒಂದು ಸೀರೆ ಕಟ್ಟಿ ಅದರ ಕೆಳಭಾಗದಲ್ಲಿ ಚಿಕ್ಕದಾದ ದೇವರ ಗುಡಿಯನ್ನು ನಿರ್ಮಾಣ ಮಾಡಿರುತ್ತಾನೆ. ಬನ್ನಿ ಮುಡಿಯಲು ಬಂದಿರುವ ಎಲ್ಲ ದೇವರುಗಳ ಭಕ್ತರು ಬಾಳೆಹಣ್ಣು, ತೆಂಗಿನಕಾಯಿ, ಹೂವು, ಕರ್ಪೂರ, ಊದುಬತ್ತಿ, ಎಲೆ ಅಡಿಕೆ ಅರ್ಪಿಸುತ್ತಾರೆ. ಪೂಜಾರಿ ತಂದಿರುವ ಅಡುಗೆಯನ್ನು ಬಾಳೆ ಎಲೆ ಎಡೆಹಾಕಿ ಪೂಜೆಯನ್ನು ಮಾಡುತ್ತಾನೆ. ನಂತರ ಬಂದಿರುವ ಎಲ್ಲಾ ದೇವರುಗಳಿಗೆ ಪೂಜೆ ಮಾಡಿಸಿಕೊಂಡು ಬನ್ನಿ ಪತ್ರೆಯನ್ನು ಊರಲ್ಲಿ ಮೆರವಣಿಗೆಯಲ್ಲಿ ಬರುವಾಗ ದಾರಿಯಲ್ಲಿ ಸಿಕ್ಕ ಎಲ್ಲ ಹಿರಿಯ ಬಂಧು-ಬಳಗದವರಿಗೆ ಮತ್ತು ಬೇರೆ ಸಮುದಾಯಗಳಿಗೆ ಈ ಸಂಪತ್ತಿನಲ್ಲಿ ಅಂದರೆ ಬನ್ನಿ ಪತ್ರೆಯಲ್ಲಿ ಕೆಲವಾಂಶವನ್ನು ಕೊಟ್ಟು, ಅವರಿಂದಲೂ ಸ್ವಲ್ಪ ಪಡೆದು ಅವರ ಕಾಲು ಮುಟ್ಟಿ ನಮಸ್ಕರಿಸಿ ಆಶೀರ್ವಾದ ಪಡೆಯುತ್ತಾರೆ. ಈ ಬನ್ನಿ ಪತ್ರೆಯನ್ನು 'ಬಂಗಾರ' ಎಂದು ಪರಿಗಣಿಸುತ್ತಾರೆ. ಮಾದಿಗ ಸಮುದಾಯ ಎಲ್ಲ ದೇವರುಗಳು ಅಲ್ಲಿ ಸೇರಿರುವುದರಿಂದ ಎಲ್ಲರೂ ಆ ಸ್ಥಳದಲ್ಲಿ ಸೇರಿರುತ್ತಾರೆ. ಸಂಬಂಧಗಳನ್ನು ಕಟ್ಟಿಗೊಳಿಸುವ ಸಲುವಾಗಿ ಈ ರೀತಿಯಾಗಿ ಬನ್ನಿ ಪತ್ರೆಯನ್ನು ಕೊಡುತ್ತಾರೆ. ನಂತರ ಪಲ್ಲಕ್ಕಿಯಲ್ಲಿ ತಂದಿರುವ ದೇವರುಗಳನ್ನು ಗುಡಿದುಂಬಿಸುತ್ತಾರೆ.

ಇಂದು ಅನೇಕ ಗ್ರಾಮಗಳಲ್ಲಿ ವಿಜಯ ದಶಮಿಯನ್ನು ವೈದಿಕ ಪದ್ಧತಿಯಲ್ಲಿ ಆಚರಿಸಲಾಗುತ್ತದೆ. ಗ್ರಾಮದೇವರ ದೊಡ್ಡ ದೇವಸ್ಥಾನದಲ್ಲಿ ಒಂದು ಮಂಟಪವನ್ನು ನಿರ್ಮಿಸಿ ಅದನ್ನು ತಳಿರು ತೋರಣಗಳಿಂದ, ಬಣ್ಣ ಬಣ್ಣದ ಕಾಗದದಿಂದ ಅಲಂಕರಿಸುತ್ತಾರೆ. ಪ್ರತಿಯೊಂದು ಗ್ರಾಮದೇವತೆಗಳಿಗೆ ಕೇಸರಿಕರಣ ಪ್ರಭಾವ ಹೆಚ್ಚಾಗಿ, ತಳಸಮುದಾಯದ ಮೇಲೆ ಪ್ರತಿ ಸಂಸ್ಕೃತಿಯನ್ನು ಪ್ರಭಾವಿಗೊಳಿಸುವ ಪ್ರಯತ್ನ ಹಾಗೂ ದಲಿತರು ವೈದಿಕ ವಿಚಾರಗಳನ್ನು ಮೈಗೂಡಿಸಿಕೊಳ್ಳುವ ಪ್ರಭಾವಕ್ಕೆ ಒಳಗಾಗಿದ್ದಾರೆ. ಆದ್ದರಿಂದ ದಸರಾ ಹಬ್ಬ ಕೇವಲ ಸಾಂಪ್ರದಾಯಿಕವಾಗಿ ಮಾತ್ರ ಕೆಲವು ಗ್ರಾಮೀಣ ಪ್ರದೇಶದವರು ಉಳಿಸಿಕೊಂಡು ಬಂದಿದ್ದಾರೆ. ನಗರ ಪ್ರದೇಶದಲ್ಲಿನ ದಸರಾ ಹಬ್ಬ ವೈದಿಕ ಸಂಸ್ಕೃತಿ ಒಳಗಾಗಿದೆ.

೫.೩.೧.೭ ದೀಪಾವಳಿ ಹಬ್ಬ

ದೀಪಾವಳಿ ಹಬ್ಬವು ಹೇಮಂತ ಋತುವಿನ ಕಾರ್ತಿಕ ಮಾಸದಲ್ಲಿ ಅಂದರೆ ಅಕ್ಟೋಬರ್-ನವೆಂಬರ್ ತಿಂಗಳಿನಲ್ಲಿ ಬರುತ್ತದೆ. ಚಳಿಗಾಲದಲ್ಲಿ ಆಚರಿಸುವ ಹಬ್ಬಗಳಲ್ಲಿ ದೊಡ್ಡ ಹಬ್ಬವು ಹೌದು ಹಾಗೂ ಕೃಷಿ ಕಾರ್ಮಿಕರು ವಿಶ್ರಾಂತಿಯನ್ನು ಪಡೆಯುವ ಕಾಲ. ಈ ಸಮಯದಲ್ಲಿ ಬೆಳೆದಿರುವ ಫಸಲುಗಳು ಮನೆಯ ಬಾಗಿಲಿಗೆ ಬಂದಿರುತ್ತವೆ. ಅವುಗಳನ್ನು ಮನೆ ತುಂಬಿಕೊಳ್ಳುವ ಹಾಗೂ ಎತ್ತುಗಳನ್ನು

ಪೂಜೆ ಮಾಡುವ "ಇದು ಪಶು ಸಂಪತ್ತಿಗೆ ಮತ್ತು ಕೊಟ್ಟಿಗೆ ಗೊಬ್ಬರದ ಹೆಚ್ಚಳದ ಅಥವಾ ಅದರ ಮಹತ್ವವನ್ನು ಹೇಳಲು ಆಚರಿಸಲ್ಪಡುವ ಹಬ್ಬವೂ ಹೌದು. ಈ ಹಬ್ಬದ ಆಚರಣೆಯ ಅಭ್ಯಾಸದಿಂದ ಒಂದು ಸಂಸ್ಕೃತಿಗೆ ಸೇರಿದ ಜನರು ಪಶುಪಾಲನಾ ಹಂತದಿಂದ ವ್ಯವಸಾಯಗಾರಿ ಹಂತಕ್ಕೆ ಬಂದುದನು ಇದರಿಂದ ಅವರ ಧಾರ್ಮಿಕ ಹಾಗೂ ಆರ್ಥಿಕ ಜೀವನದಲ್ಲಾದ ಪಲ್ಲಟನೆಯನ್ನು ತಿಳಿಯಲು ಅನುಕೂಲವಾಗುತ್ತದೆ."[೧೭] ದೀಪಾವಳಿ ಎಂದರೆ ದೀಪಗಳ ಹಬ್ಬ ಅಥವಾ ದೀಪಾವಳಿ ಸಾಲು ಹೀಗೆ ಅನೇಕ ರೀತಿಯಲ್ಲಿ ಕರೆಯುತ್ತಾರೆ. ಈ ಹಬ್ಬವನ್ನು ಸುಮಾರು ಐದುಗಳವರೆಗೆ ಆಚರಿಸುತ್ತಾರೆ. ನೀರು ತುಂಬುವ ಹಬ್ಬ, ನರಕ ಚತುರ್ದಶಿ, ಅಮಾವಾಸ್ಯೆ, ಬಲಿಪಾಡ್ಯಮಿ ಹಾಗೂ ಲಕ್ಷ್ಮಿಹಬ್ಬ ಹೀಗೆ ಸುಮಾರು ಐದು ದಿನಗಳ ಕಾಲ ಆಚರಿಸುತ್ತಾರೆ. ಆದರೆ ಈ ಸಮುದಾಯದಲ್ಲಿ ಹಿರಿಯ ದೀಪಾವಳಿಯನ್ನು ಆಚರಿಸುವುದಿಲ್ಲ ಒಂದು ತಿಂಗಳ ನಂತರ ಕಿರು ದೀಪಾವಳಿಯನ್ನು ಆಚರಿಸುತ್ತಾರೆ. ಈ ಹಬ್ಬವು "ವಾಸ್ತವಿಕ ಕತ್ತಲೆಯಿಂದ ಬೆಳಕಿನೆಡೆಗೆ ಸಾಗುವುದನ್ನು ಸಂಕೇತಿಸುವ ಆಚರಣೆ, ದೀಪಾವಳಿ ನಾವು ಆಚರಿಸುವ ದೀಪಾವಳಿಗೆ ಮೂಲವೆನ್ನಲಾದ ಎರಡು ಪೌರಾಣಿಕ ಪ್ರಸಂಗಗಳು ಪ್ರಕಾರ ಹಿಂದೆ ನರಕಾಸುರನೆಂಬ ದುಷ್ಟ ರಾಕ್ಷಸನಿದ್ದನು, ಇವನು ಲೋಕಕಂಟಕನಾಗಿದ್ದನು. ಭೂದೇವಿ ಇವನ ಉಪದ್ರವ ತಾಳಲಾರದೆ ಅವನ ಸಂಹಾರಕ್ಕೆ ಶ್ರೀಕೃಷ್ಣನನ್ನು ಪ್ರಾರ್ಥಿಸುತ್ತಾನೆ. ಸೃಷ್ಟಿ ಅಶ್ವಯುಜ ಕೃಷ್ಣ ಚತುರ್ದಶಿ ದಿನ ತೈಲಾಂಬ್ಯಂಜನ ಮಾಡಿ ನರಕಾಸುರನನ್ನು ವಧಿಸುತ್ತಾನೆ ಹಾಗೂ ಅವನು ಬಂಧಿಸಿಟ್ಟಿದ್ದ ೧೬.೦೦೦ ಸಾವಿರ ಕನ್ಯೆಯರನ್ನು ಬಿಡುಗಡೆಗೊಳಿಸುತ್ತಾನೆ. ಚತುರ್ದಶಿಗೆ ನರಕ ಚತುರ್ದಶಿ ಎಂದು ಹೆಸರು."[೧೮] ಈ ಪೌರಾಣಿಕ ಹಿನ್ನೆಲೆಯಿಂದ ದೀಪಾವಳಿ ಹಬ್ಬವನ್ನು ಚಿತ್ರದುರ್ಗದ ಮಾದಿಗ ಸಮುದಾಯದವರು ಆಚರಿಸಿಕೊಂಡು ಬರುತ್ತಿದ್ದಾರೆ.

೫.೩.೧.೮ ಬಲಿಪಾಡ್ಯಮಿ

"ಕಾರ್ತಿಕ ಮಾಸದ ಮೊದಲ ದಿನವೇ ಬಲಿಪಾಡ್ಯಮಿ ಬಲಿಪ್ರಹ್ಲಾದನ ಮೊಮ್ಮಗ ತನ್ನ ತಪೋಬಲ ಹಾಗೂ ಭುಜಬಲದಿಂದ ಬಲಿ ಚಕ್ರವರ್ತಿ ದೇವೇಂದ್ರನನ್ನು ಸೇರಿಸಿ ಸುರಲೋಕವನ್ನು ವಶಪಡಿಸಿಕೊಂಡು ಮೆರೆಯುತ್ತಿದ್ದ. ಸ್ತ್ರೀಮನ್ನಾರಾಯಣನು ದೇವತೆಗಳ ಕೋರಿಕೆಯ ಮೇರೆಗೆ ವಾಮನನಾಗಿ ಅವತರಿಸುತ್ತಾನೆ. ಬಲಿಯು ಸರ್ಹಜಿತ ಯಾಗ ಮಾಡಿದ ಅನಂತರ ಬಲಿಪಾಡ್ಯಮಿಯಾಗಿ ದೀಪಾವಳಿಯ ದಿವಸ ಆಚರಿಸುತ್ತಾರೆ."[೧೯]

- **ಅಮವಾಸ್ಯೆ**

ಅಮವಾಸ್ಯೆ ಕತ್ತಲೆಯ ದಿವಸ ಬೆಳಕನ್ನು ಹೊರ ಸೂಸುವಂತಹ ಹಬ್ಬ. ಆದ್ದರಿಂದ ಕುಂಬಾರನ ಮನೆಯಿಂದ ತಂದ ಮಣ್ಣಿನ ದೀಪಗಳನ್ನು ಅಷ್ಟೇ ಸಂಖ್ಯೆಯಲ್ಲಿ ಸಿದ್ಧಪಡಿಸಿ ಎಣ್ಣೆ ಮತ್ತು ಬತ್ತಿಗಳನ್ನು ಹಾಕಿ ಉರಿಸುತ್ತಾರೆ. ಆರಾಧ್ಯ ದೇವರಿಗೆ ದೀಪ ಹಚ್ಚಿ ಮನೆಯ ಬಾಗಿಲುಗಳಿಗೆ, ಮನೆಯ ಸುತ್ತಲೂ ದೀಪಗಳನ್ನು ಹಚ್ಚುತ್ತಾರೆ. ಮರುದಿನ ಲಕ್ಷ್ಮಿಪೂಜೆಯನ್ನು ಮಾಡುತ್ತಾರೆ. ಲಕ್ಷ್ಮಿ ಫೋಟೋಗೆ ಮಾಡಿದ ಆಹಾರವನ್ನು ಎಡೆ ಇಟ್ಟು ಮನೆಯಲ್ಲಿ ಇರುವ ಹಣವನ್ನು ಫೋಟೋದ ಮುಂದೆ ಇಟ್ಟು ಪೂಜೆಮಾಡಿ ಅಂದು ಮಾಡಿದ ಆಹಾರವನ್ನು ಎಲ್ಲರೂ ಸೇವಿಸುತ್ತಾರೆ.

• ಹಿರಿಯರ ಪೂಜೆ

ಹೊಳಲ್ಕೆರೆ ತಾಲ್ಲೂಕಿನ ತಾಳ್ಯ ಗ್ರಾಮದಲ್ಲಿ ದೀಪಾವಳಿ ಹಬ್ಬದ ದಿವಸ ಹಿರಿಯರ ಪೂಜೆ ಮಾಡುತ್ತಾರೆ. ಅಂದು ಪುರುಷ ಮತ್ತು ಸ್ತ್ರೀಯರ ಹೆಸರಿನಲ್ಲಿ ಮಣ್ಣಿನ ಕುಂಭವನ್ನು ತಂದು ಅವುಗಳನ್ನು ಸ್ವಚ್ಛಗೊಳಿಸಿ ಎರಡು ಕುಂಭಗಳನ್ನು ಅಕ್ಕಪಕ್ಕದಲ್ಲಿ ರಾಗಿ ಅಥವಾ ಜೋಳದ ಹಿಟ್ಟಿನ ಮೇಲೆ ಇಟ್ಟು ಈ ಉದ್ದೇಶಕ್ಕೆ ಎಂದು ತಂದ ನೀರನ್ನು ಕಂಠಮಟ್ಟಕ್ಕೆ ತುಂಬಿ ನಂತರ ಮೂರು ಮೂರು ವೀಳ್ಯೆದೆಲೆಗಳನ್ನು ತೊಟ್ಟು ಅಡಿಯಾಗಿ ಇಟ್ಟು ಒಂದೊಂದು ಸುಲಿದ ತೆಂಗಿನಕಾಯಿಯನ್ನು ಕಣ್ಣು ಮೇಲಾಗಿ ಇಟ್ಟು, ಕುಂಭಕ್ಕೆ ಹೊಸ ಪಂಚೆ, ಷರಟಿನ ಬಟ್ಟೆ ಮತ್ತು ಟವಲ್ಲು ಹೊದಿಸಿ ಪೇಟವನ್ನು ಇಡುತ್ತಾರೆ. ಸ್ತ್ರೀಯರಿಗೆ ಹೊಸ ಸೀರೆ ಮತ್ತು ಕುಪ್ಪಸ ಒಡವೆ ಹಾಗೂ ತಾಳಿಯನ್ನು ಹಾಕುತ್ತಾರೆ.

ಅಂದು ಹಿರಿಯರಿಗೆ ಪ್ರಿಯವಾದ ಆಹಾರವಾದ ಕೋಳಿ ಅಥವಾ ದನದ ಮಾಂಸದ ಊಟ, ಹೋಳಿಗೆ ವಡೆ, ಪಾಯಾಸ, ಹಣ್ಣು, ಎಲೆ ಅಡಿಕೆ, ಕಡ್ಡಿ ಪುಡಿ, ನಸೆಪುಡಿ, ಮದ್ಯಪಾನ ಇನ್ನೂ ಮುಂತಾದ ಆಹಾರ ಪದಾರ್ಥಗಳನ್ನು ಗದ್ದುಗೆಯ ಎದುರಿಗೆ ಬಾಳೆಎಲೆ ಹಾಕಿ ಮಾಡಿದ ಆಹಾರ ಎಡೆ ಹಾಕುತ್ತಾರೆ. ನಂತರ ದಾಸಯ್ಯನಿಗೆ ಒಂದೇ ಎಡೆ ಹಾಕಿ ದಾಸಯ್ಯನಿಂದ ಹಿರಿಯರಿಗೆ ಪೂಜೆ ಮಾಡಿಸಿ ಮನೆಯ ಎಲ್ಲಾ ಸದಸ್ಯರಿಗೆ ನಾಮ ಹಾಕಿ ಹಿರಿಯರಿಗೆ ಕಡಿ ಹಚ್ಚಿ "ಗೋವಿಂದ ಎಂದು ಕೂಗಿಸಿ' ಎಡೆಯನ್ನು ಸರಿಸುತ್ತಾರೆ. ನಂತರ ಮನೆಯ ಹಿರಿಯ ಮಗ ಎಡೆಯನ್ನು ಸರಿಸಿದ ಮೇಲೆ ಎಲ್ಲರೂ ಸೇರಿ ಊಟವನ್ನು ಮಾಡುತ್ತಾರೆ. ಈ ಹಬ್ಬವನ್ನು ಪದ್ಧತಿ ಪ್ರಕಾರ ಆಚರಿಸುವುದರಿಂದ ಹಿರಿಯರು ಸಂತುಷ್ಠರಾಗಿ ಹರಸುವುದರ ಜೊತೆಗೆ ದನ-ಕರುಗಳ ಸಂಖ್ಯೆ ಹೆಚ್ಚಾಗುವಂತೆಯೂ ಆಶಿಸಿ ಈ ಹಬ್ಬವನ್ನು ಆಚರಿಸುತ್ತಾರೆ.

ದೀಪಾವಳಿ ಹಬ್ಬವನ್ನು ಈ ಸಮುದಾಯವು ಕೇವಲ ಸಾಂಪ್ರದಾಯಿಕವಾಗಿ ಮಾತ್ರ ಆಚರಣೆಯನ್ನು ಮಾಡುತ್ತಾರೆ. ಹಿಂದೆ ದೀಪವನ್ನು ಹಚ್ಚುವುದರ ಉದ್ದೇಶವೇ ಬೇರೆಯಾಗಿತ್ತು. ಆದರೆ ಇವತ್ತಿನ ದಿನಮಾನಗಳಲ್ಲಿ ಅತ್ಯಂತ ವೈಭವದಿಂದ ಈ ಹಬ್ಬವನ್ನು ಆಚರಿಸುತ್ತಾರೆ. ಕಾರಣ ಆಧುನಿಕವಾಗಿ ಬಂದಿರುವ ಸಿಡಿಮದ್ದುಗಳು ಹಬ್ಬದ ದಿನ ಹಚ್ಚುವುದರಿಂದ ಎಷ್ಟೋ ಜನರನ್ನು ಬಲಿ ತೆಗೆದುಕೊಂಡಿದೆ. ಇದಕ್ಕೆ ಪರಿಹಾರವಾಗಿ ಸರ್ಕಾರ ಸೂಕ್ತವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು. ಇಂತಹ ಹಬ್ಬಗಳನ್ನು ಹಿಂದೆ ಕೇವಲ ಶ್ರೀಮಂತರು ಮಾತ್ರ ಈ ರೀತಿಯಾದ ವೈಭವಯುತ ಆಚರಣೆಯನ್ನು ಮಾಡುತ್ತಿದ್ದರು. ಇವತ್ತು ತಳಸಮುದಾಯದವರು ಈ ಹಬ್ಬವನ್ನು ಆಚರಿಸುತ್ತಾರೆ.

೫.೩.೨ ಜಾತ್ರೆಗಳು

"ಅತ್ಯಂತ ಆಕರ್ಷಕವಾದ ಜನಪದೀಯ ಆಚರಣೆ 'ಜಾತ್ರೆ', ಜಾತಿ-ವರ್ಗಗಳ, ಮೇಲು-ಕೀಳು, ಮಡಿ-ಮೈಲಿಗೆಯನ್ನು ಮೀರಿ ಜನ ಸಮುದಾಯ ಮತೀಯ ವಿಧಿಯಾಚರಣೆಯ ನೆಪದಲ್ಲಿ ದೈವವೊಂದರ ಸುತ್ತ ನಿರ್ದಿಷ್ಟ ದಿನಗಳಂದು ನೆರೆಯುವುದನ್ನು 'ಜಾತ್ರೆ' ಎನ್ನಬಹುದು."[೨೦] ಜಾತ್ರೆಗಳ ಜಾತ್ರೆ, ಪರಿಷೆ, ರಥೋತ್ಸವ, ಉಚ್ಚಾಯ, ಪಲ್ಲಕ್ಕಿ, ಬಂಡಿ, ಸಿಡಿ ಇತ್ಯಾದಿ ಹೆಸರುಗಳಿಂದ ಕರೆಯುತ್ತಾರೆ.

ಕೃಷಿಯ ಕೆಲಸಗಳು ಮುಗಿದು ಫಲ ಕೈಗೆ ಬಂದ ರೈತನು ಬಿಡುವಾಗುತ್ತಾನೆ. ಕಾಲದಲ್ಲಿ ಕೈಗೆ ಬಂದ ಫಲದ ಈ ಮೊದಲನೇ ಭಾಗವನ್ನು ದೇವರಿಗೆ ಅರ್ಪಿಸುವ ಹಾಗೂ ಮುಂದಿನ ವರ್ಷವೂ ಇದೇ ರೀತಿಯಾಗಿ ಫಲ ಸಿಗುವಂತೆ ದೇವರಲ್ಲಿ ಬೇಡಿಕೊಳ್ಳುವ, ಇಡೀ ಊರಿಗೆ ಒಳ್ಳೆಯ ಬೆಳೆ, ಎಲ್ಲರನ್ನು ಸಂರಕ್ಷಿಸುವಂತೆ ಪ್ರಾರ್ಥನೆ ಮಾಡುವುದೇ ಜಾತ್ರೆಗಳ ಮುಖ್ಯ ಉದ್ದೇಶವಾಗಿರಬಹುದು. ಬೆಳೆದಿರುವ ಬೆಳೆಗಳನ್ನು ವಿನಿಮಯ ಮಾಡಿಕೊಳ್ಳುವುದು ಜಾತ್ರೆಯ ಇನ್ನೊಂದು ಉದ್ದೇಶ. ರೈತರಿಗೆ ಬೇಕಾದ ವಸ್ತುಗಳನ್ನು ಹಾಗೂ ಮನರಂಜನೆಯನ್ನು ಒದಗಿಸುವುದಕ್ಕಾಗಿ ವಿವಿಧ ಪ್ರಕಾರದ ಅಂಗಡಿಗಳೂ, ಮನೋರಂಜನೆಯ ಪ್ರಕಾರಗಳೂ ಜಾತ್ರೆಯಲ್ಲಿ ಸೇರಿಕೊಂಡಿರುತ್ತವೆ. ಅನೇಕ ಜಾತ್ರೆಗಳು ದನಗಳ ಜಾತ್ರೆಗಳೂ ಆಗಿರುವುದನ್ನೂ, ದನಗಳ ಪ್ರದರ್ಶನ ಹಾಗೂ ಮಾರಾಟವೇ ಇಲ್ಲಿನ ಪ್ರಧಾನ ಅಂಶವಾಗಿರುವುದನ್ನೂ ಸಹ ಈ ಸಂದರ್ಭದಲ್ಲಿ ಗಮನಿಸಬಹುದು.

ಜಾತ್ರೆಗಳೂ ಕಾಲಮಾನಕ್ಕೂ ಸಂಬಂಧವನ್ನು ಕಲ್ಪಿಸುವ, ದೇವರಿಗೂ ಹರಕೆಗಳನ್ನು ಮುಟ್ಟಿಸುವ ಹಾಗೂ ಫಲವಂತಿಕೆ ಸಂಬಂಧವಾಗಿ ನಡೆಯುತ್ತವೆ. ಈ ಆಚರಣೆಗಳೂ ವಿವಾಹ ಸಂಬಂಧದ ಆಚರಣೆಗಳಿಗೂ ನೇರವಾದ ಸಂಬಂಧವಿದೆ. ಉದಾ:– ಜಾತ್ರೆಯಲ್ಲಿ ದೇವರುಗಳಿಗೆ ನಡೆಯುವ ಉಯ್ಯಾಲೆ ಉತ್ಸವ, ವಿವಾಹೋತ್ಸವ, ಗಂಧ ಎರಚುವುದು, ಓಕಳಿಯಾಟ, ಸಕ್ಕರೆ ಹಂಚುವುದು, ಕಳಸ ಒಯ್ಯುವುದು, ಮಡಿಲು ತುಂಬುವುದು, ತಾಳಿ ಕಟ್ಟುವುದು, ಹೊಸ ತಾಳಿ ಕಟ್ಟುವುದು ಹೀಗೆ ವಿವಾದಕ್ಕೆ ಸಂಬಂಧಿಸಿದ ಮೂಲಗಳನ್ನು ಅನೇಕ ಜಾತ್ರೆಗಳಲ್ಲಿ ಕಾಣಬಹುದು.

೫.೩.೨.೧ ಜಾತ್ರೆಗಳಲ್ಲಿ ತಳ ಸಮುದಾಯಗಳ ಪಾತ್ರ

ಕರ್ನಾಟಕದಲ್ಲಿ ಪ್ರಮುಖವಾಗಿ ೧೪೭೦ ಜಾತ್ರೆಗಳನ್ನು ಅಧ್ಯಯನಕಾರರು ಗುರುತಿಸಿದ್ದಾರೆ. ಜಾತ್ರೆಗಳು ಮೂಲತಃ ಜಾತ್ಯತೀತ ಕಲ್ಪನೆಗಳು, ಎಲ್ಲ ಜಾತಿಯವರನ್ನು ಒಗ್ಗೂಡಿಸಿ ಅವರೆಲ್ಲರ ಸಹಕಾರ ಹಾಗೂ ಸಹಯೋಗದಿಂದ ನೆರವೇರುವ ಪೂಜೆ ಪುನಸ್ಕಾರಗಳ ಒಂದು ಬಗೆಯ ಸಹಬಾಳ್ವೆಯ ಆದರ್ಶವಿದೆ. ಈಗ ಜಾತ್ರೆ ಮತ್ತು ರಥೋತ್ಸವ ಕೆಲವೆಡೆ ಒಂದೇ ಅರ್ಥದಲ್ಲಿ ಬಳಕೆಯಾಗುತ್ತಿದ್ದರೂ ಅವೆರಡೂ ವಿಭಿನ್ನ ಪರಿಕಲ್ಪನೆಗಳು. ರಥೋತ್ಸವದ ಅಗತ್ಯವಾದ ಭಾಗ, ಸಂಕಲ್ಪ ಇದು ಸಾಮಾನ್ಯವಾಗಿ ವಿಧಿಯೊಂದಿಗೆ ಆರಂಭವಾಗುತ್ತದೆ. ನಿರ್ದಿಷ್ಟ ಮಾಸ, ತಿಥಿ, ದೇವತಾರಾಧನೆಗಳ ಇದಕ್ಕೆ ಮುಖ್ಯ. ಭಿನ್ನವಾದ ಉತ್ಸವದ ರೂಪವನ್ನು ನಾವು ಜಾತ್ರೆಯಲ್ಲಿ ಕಾಣುತ್ತೇವೆ. ಇಂತಹ ಆಚರಣೆಗಳು ವ್ಯವಸ್ಥಿತವಾಗಿ ನಡೆಯಬೇಕಾದರೆ ಎಲ್ಲ ಸಮುದಾಯಗಳ ಪಾತ್ರ ಬಹಳ ಮುಖ್ಯ. ಅದರಲ್ಲೂ ತಳ ಸಮುದಾಯಗಳ ಪಾತ್ರ ಇನ್ನೂ ಮುಖ್ಯವಾದುದು ಎಂದರೆ ತಪ್ಪಾಗಲಾರದು.

ಜಾತ್ರೆಗಳಲ್ಲಿ ಗಮನಿಸಬೇಕಾದ ಇನ್ನೊಂದು ಅಂಶವೆಂದರೆ ತಳ ಸಮುದಾಯಗಳು ಎನ್ನಿಸಿಕೊಂಡ “ದಲಿತರು ಚಾರಿತ್ರಿಕವಾಗಿ ಸವರ್ಣಿಯರಿಂದ ಎಷ್ಟೊಂದು ಅವಮಾನಕ್ಕೆ, ಹಿಂಸೆಗೆ, ಶೋಷಣೆಗೆ ತುತ್ತಾಗಿದ್ದಾರೆ ಎಂಬುದನ್ನು ನಿರ್ಲಕ್ಷಿಸುವಂತಿಲ್ಲ. ಆದರೆ ದಲಿತರು ಅದಕ್ಕೆ ಪ್ರತಿಯಾಗಿ ಮಾನವೀಯ ಪ್ರೀತಿಯನ್ನು ಉಳಿಸಿಕೊಂಡು ತಮ್ಮ ಸಂಸ್ಕೃತಿಯ ಮೂಲಕ ಸಮಾಜೋಪಯೋಗಿ ಕೆಲಸಗಳಲ್ಲಿ

ತೊಡಗಿಕೊಂಡು ಬಂದಿದ್ದಾರೆ. "ವಿಷವನ್ನು ನುಂಗಿ ಅಮೃತ"ವನ್ನು ನೀಡಿದ್ದಾರೆ. ಜಾತ್ರೆಗಳಲ್ಲಿ ದಲಿತರ ಪಾತ್ರವನ್ನು ಈ ಹಿನ್ನೆಲೆಯಲ್ಲೇ ಅವಲೋಕಿಸಬೇಕಿದೆ."[೨೦] ಜಾತ್ರೆಯು ಸರಾಗವಾಗಿ ನಡೆಯಬೇಕಾದರೆ ಊರಿನ ಎಲ್ಲ ಜಾತಿ, ವರ್ಗ, ಧರ್ಮಗಳ ಜನರೂ ಬೇಕು. ಪ್ರತಿಯೊಂದು ಸಂಪ್ರದಾಯ ಆಚರಣೆಗಳನ್ನು ಒಂದೊಂದು ಜಾತಿಯವರು ಒಂದೊಂದು ರೀತಿಯಲ್ಲಿ ಪಾಲಿಸಿಕೊಂಡು ಬರುವುದರಲ್ಲಿಯೂ ಸಹಕಾರ ಸಮನ್ವಯ ಅಂಶವನ್ನು ಕಾಣಬಹುದು. ಉದಾ:- ಮಾದಿಗರು ಇಡೀ ಗುಡಿಯ ಸುತ್ತ ಮುತ್ತಲನ್ನು ಸ್ವಚ್ಛಗೊಳಿಸುವುದು. ತಮಟೆ ಬಾರಿಸುವುದು, ಹೊಲೆಯರು ಉರುಮೆ ಬಾರಿಸುವುದು, ಬೇಡ ಸಮುದಾಯದ ಜನರು ಜಾತ್ರೆಗೆ ಬಂದಿರುವ ಜನರನ್ನು ನಿಯಂತ್ರಣ ಮಾಡುವ ಹಾಗೂ ದೇವರಿಗೆ ಬೇಟೆಯಾಡಿದ ಮಾಂಸವನ್ನು ದೇವರ ಎಡೆಗೆ ಕೊಡುವುದು. ಅಗಸರು ದೇವರ ಪಾದಗಳಿಗೆ 'ಮಡಿ ಹಾಸುವುದು' ಮತ್ತು ಪಂಜು ಹಿಡಿಯುವುದು. ಇಂತಹ ವಿಶೇಷವಾದ ಆಚರಣೆಗಳನ್ನು ತಳ ಸಮುದಾಯಗಳು ಕಟ್ಟುನಿಟ್ಟಾಗಿ ಮೈಗೂಡಿಸಿಕೊಂಡೇ ಬಂದಿದ್ದಾರೆ.

• ಚಿತ್ರದುರ್ಗ ಜಿಲ್ಲೆಯ ಜಾತ್ರೆಗಳು ಮತ್ತು ಮಾದಿಗ ಸಮುದಾಯದ ಪಾಲ್ಗೊಳ್ಳುವಿಕೆ

ಮಾದಿಗ ಸಮುದಾಯವು ಊರಿನ ಹೊಲೆಯ ಕೇರಿಗಳಲ್ಲಿ ವಾಸ ಮಾಡುವುದು ನಿಜ. ಆದರೆ ಹೊಲೆಯ ಕೇರಿಗಳಿಗೂ ಮತ್ತು ಸ್ಪೃಶ್ಯ ಸಮುದಾಯದ ಮನೆತನಗಳಿಗೂ ಯಾವುದೇ ತೆರನಾದಂತಹ ಸಂಬಂಧ ಇಲ್ಲದಿರುವುದು ವಿಶೇಷ. ಬಹುಶಃ ಮಾದಿಗರ ಕುಲಕಸುಬಾದ ಚರ್ಮಗಾರಿಕೆ ಮತ್ತು ಮಾಂಸದ ದುರ್ವಾಸನೆಯಿಂದ ಇವರನ್ನು ಊರಿನ ಹೊರಗೆ ಇಟ್ಟಿರಬಹುದು. ಹೀಗೆ ಸಾಮಾಜಿಕವಾಗಿ ಬಹಿಷ್ಕೃತರಂತೆ ಬದುಕಿದ ಮಾದಿಗರು ಊರಿನ ಹೊರಗೆ ಇದ್ದುಕೊಂಡೇ ತಮ್ಮ ಆಚರಣೆಗಳ ಮುಖಾಂತರ ಇತರೆ ಸಮುದಾಯಗಳಿಗೆ ಹತ್ತಿರವಾದರು. ಚಿತ್ರದುರ್ಗದ ಗ್ರಾಮೀಣ ಪ್ರದೇಶದಲ್ಲಿ ನಡೆಯುವ ಜಾತ್ರೆಗಳಲ್ಲಿ ಯಾವುದೇ ಜಾತಿ ಭೇಧವಿಲ್ಲದೇ ನಾನಾ ಸಮುದಾಯಗಳು ಸಂಭ್ರಮ, ಸಂತೋಷಗಳಿಂದ ಪಾಲ್ಗೊಂಡು ಬೆರೆಯುವ ಒಂದು ಸೌಹಾರ್ದ ಪರಂಪರೆಯೇ ಬೆಳೆದು ಬಂದಿದೆ. ಈ ಆಚರಣೆಗಳಲ್ಲಿ ತಳ ಸಮುದಾಯಗಳ ದಲಿತರು ಪಾಲ್ಗೊಳ್ಳುವುದು ಸಹ ಒಂದು ಸಹಜ ಭಾಗವೇ ಆಗಿದೆ. ಎಲ್ಲ ಸಮುದಾಯಗಳು ಭಾಗವಹಿಸುವುದು ಸತ್ಯ ಆದರೆ ಯಾವ ಸಮುದಾಯಗಳು ಯಾವ ಆಚರಣೆಗಳನ್ನು ಮಾಡುತ್ತಾರೆ ಎಂಬುವುದು ದೊಡ್ಡ ಪ್ರಶ್ನೆ. ಚಿತ್ರದುರ್ಗ ಜಿಲ್ಲೆಯ ಜಾತ್ರೆಯಲ್ಲಿ ಮಾದಿಗ ಸಮುದಾಯದ ಪಾತ್ರ ಅನನ್ಯ ಎಂದು ಹೇಳಬಹುದು. ಜಾತ್ರೆಗಳು ಪ್ರಾರಂಭವಾಗುವುದಕ್ಕಿಂತ ಮುಂಚೆ ಇವರ ಕಾರ್ಯಗಳು ಆರಂಭಗೊಳ್ಳುತ್ತವೆ. ಊರಿಗೆ ಸುದ್ದಿ ಮುಟ್ಟಿಸುವುದರಿಂದ ಹಿಡಿದು ದೇವಸ್ಥಾನ ಸುತ್ತಮುತ್ತಲ ಸ್ವಚ್ಛಗೊಳಿಸುವುದು, ಕಟ್ಟುನಿಟ್ಟಿನಿಂದ ಊರಿನ ಸುತ್ತಲು ಕಾಯಿತ್ತಿರಬೇಕು. ಬೇರೆ ಊರಿನ ಜನರನ್ನು ಊರಿನ ಒಳಗೆ ಬಿಡುವಂತಿಲ್ಲ, ಊರಿನ ಸುತ್ತಲು ಸುಳ್ಳಿ ಕಳೆಯನ್ನು ಹಾಕಬೇಕು ಹಾಗೂ ತಮಟೆ ನುಡಿಸುವುದಷ್ಟೆ ಅಲ್ಲ ಕೋಣವನ್ನು ಬಲಿ ನೀಡಿ ಅನ್ನದ ಜತೆ ಕಲಸಿ ಬೆರೆಸಿ ಊರ ಗಡಿಗುಂಟ ಚರಗ ಚೆಲ್ಲುವ ವಿಧಿ ಅತ್ಯಂತ ಮುಖ್ಯ. ಜಾತ್ರೆಯಲ್ಲಿ ಈ ಸಮುದಾಯದವರು ಇಲ್ಲವೆಂದರೆ ಜಾತ್ರೆಯೇ ನಿಂತು ಹೋಗುತ್ತದೆ.

ಉದಾಹರಣೆಗೆ:- ನಾಯಕನಹಟ್ಟಿ ತಿಪ್ಪೇಸ್ವಾಮಿ ಜಾತ್ರೆ ಜಾತ್ರೆ ಆರಂಭದಿಂದ ಕೊನೆಯವರೆಗೆ ಮಾದಿಗರ ಪಾಲ್ಗೊಳ್ಳುವಿಕೆ ಮುಖ್ಯ. ಕಾರಣ ಈ ಸಮುದಾಯದವರು ಎಲ್ಲವನ್ನು ಮೊದಲೇ ಮಾಡಿದ್ದರೆ. ಉಳಿದ ಕಾರ್ಯವನ್ನು ಬೇರೆ ಸಮುದಾಯದವರು ಮಾಡುತ್ತಾರೆ. ಗ್ರಾಮೀಣ ಪ್ರದೇಶದಲ್ಲಿ ಗ್ರಾಮ ದೇವತೆಗಳಲ್ಲಿ ಇವರ ಪಾಲ್ಗುದಾರಿಕೆ ಮುಖ್ಯವಾಗಿರುತ್ತದೆ.

ಇವತ್ತಿನ ಜಾತ್ರೆಗಳು ಬದಲಾವಣೆಯ ಕಡೆಗೆ ದಾಪುಗಾಲು ಹಾಕುತ್ತಿವೆ. ಸಸ್ಯಹಾರಿ ಸಂಪ್ರದಾಯವಿದ್ದರೆ, ಇನ್ನೊಂದು ಕಡೆ ಮಾಂಸಹಾರಿ ಪದ್ಧತಿ ಇರುತ್ತದೆ. ದೇವಾಲಯಗಳೊಳಗೆ ಪ್ರವೇಶವಿರದ ಮಾದಿಗರಿಗೆ ಹಾಗೂ ಹೊಲೆಯರು ಅಂದು ದೇವರನ್ನು ಹೊರುತ್ತಾರೆ. ಈ ರೀತಿ ಸೌಹಾರ್ದದ ಉದ್ದೇಶದಿಂದಾಗಿ ಸೇರಿ ಜಾತ್ರೆಯನ್ನು ಮಾಡುವ ಸಂಪ್ರದಾಯವನ್ನು ರೂಢಿಸಿಕೊಂಡಿದ್ದಾರೆ. ಚಿತ್ರದುರ್ಗ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಎಲ್ಲ ಪ್ರಕಾರದ ಜಾತ್ರೆಗಳು ಸಿಗುತ್ತವೆ. ಆದ್ದರಿಂದ ಪ್ರತಿಯೊಂದು ತಾಲೂಕು ಹಾಗೂ ಗ್ರಾಮಗಳಿಗೆ ಸಂಗ್ರಹ ಕಾರ್ಯವನ್ನು ಅಧ್ಯಯನ ಕೈಗೊಂಡು ಜಾತ್ರೆಗಳ ಸಂಬಂಧಿಸಿದಂತೆ ಈ ಕೆಳಕಂಡ ಅಂಶಗಳನ್ನು ವಿಶ್ಲೇಷಣೆ ಮಾಡಲಾಗಿದೆ.

೫.೩.೨.೨ ಹೊಲದ ದೇವರ ಜಾತ್ರೆ

ಮಾದಿಗ ಸಮುದಾಯದ ಪಾರಂಪರಿಕವಾಗಿ ತಮ್ಮ ಆರಾಧ್ಯ ದೈವವನ್ನು ಪೂಜಿಸುತ್ತಾರೆ. ಈ ಬಗೆಯ ಆಚರಣೆಯನ್ನು ಪ್ರಕೃತಿ ಆರಾಧನೆ, ಗಿಡದ ದೇವರು, ಹೊಲದ ದೇವರು, ಎಡೆ ಜಾತ್ರೆ ಎಂದು ಕರೆಯುತ್ತಾರೆ. ರೈತಾಪಿ ಜನಗಳೆಲ್ಲ ಹೊಲ-ಗದ್ದೆಗಳಲ್ಲಿ, ಬೆಟ್ಟ-ಗುಡ್ಡಗಳಲ್ಲಿ ಕೆಲಸಗಳಲ್ಲಿ ತೊಡಗುವ ಕಾರಣ ಏನೇ ಅಪಾಯ ಬಾರದಿರಲಿ ಎಂಬ ಉದ್ದೇಶದಿಂದ ಈ ಆಚರಣೆಯನ್ನು ರೂಢಿಸಿಕೊಂಡು ಬಂದಿದ್ದಾರೆ.

ಮಾದಿಗ ಸಮುದಾಯವು ಸಹ ಊರಿನ ಹೊರಗೆ ಬಂದು ನಿರ್ದಿಷ್ಟ ಜಾಗದಲ್ಲಿ ಅಥವಾ ಇವರ ಅರಾಧ್ಯ ದೈವವು ಇರುವ ಸ್ಥಳಕ್ಕೆ ಹೋಗಿ, ದೇವರಿಗೆ ಪೂಜೆ ಮಾಡಿ ಕೋಣವನ್ನು ಬಲಿ ಕೊಟ್ಟು ಮಾಂಸದ ಪಾಲು ಹಾಕಿ ಪ್ರತಿಯೊಂದು ಕುಟುಂಬಕ್ಕೆ ಹಂಚುತ್ತಾರೆ. ಮಾಂಸ ಊಟ ತಯಾರಿಸಿದ ಮೇಲೆ ಹಿರಿಯರು ಹಾಗೂ ಪೂಜಾರಿ ಮೂರು ಗಿಡಕ್ಕೆ ಬಾಳೆ ಎಲೆ ಮೇಲೆ ಎಡೆ ಹಾಕಿ ಪೂಜೆ ಮಾಡಿ ಇವರು ನೆಲೆಸಿರುವ ಸ್ಥಳದ ಸುತ್ತಲು ಚರಗ ಚೆಲ್ಲುತ್ತಾರೆ. ನಂತರ ಮಾಡಿದ ಮಾಂಸಹಾರವನ್ನು ಬಂದಿರುವ ಸಂಬಂಧಿಕರು ಹಾಗೂ ಕುಟುಂಬದವರು ಸೇರಿ ಸೇವಿಸುತ್ತಾರೆ.

ಸಂಜೆ ಎತ್ತಿನ ಬಂಡಿಯ ಮೇಲೆ ತಮ್ಮ ತಮ್ಮ ಮನೆಗಳಿಗೆ ಬರುವ ಸಮಯದಲ್ಲಿ ಊರಿನ ದ್ವಾರ ಬಾಗಿಲು ಬಳಿ ಬಂಡಿಗಳನ್ನು ನಿಲ್ಲಿಸಿ ಮತ್ತೊಂದು ಬಾರಿ ಉಳಿದ ಅನ್ನ ಪೂಜೆ ಮಾಡಿದ ತೆಂಗಿನ ನೀರಿನಿಂದ ಚರಗವನ್ನು ಚೆಲ್ಲುತ್ತಾರೆ. ನಂತರ ಊರ ಒಳಗೆ ಬಂಡಿಗಳನ್ನು ಬಿಡುತ್ತಾರೆ. ಹೊಲದಲ್ಲಿ ಫಸಲು ಬಂದಿರುವ ಸಂದರ್ಭದಲ್ಲಿ ಈ ಆಚರಣೆಯನ್ನು ಮಾಡುತ್ತಾರೆ. ಫಸಲುಗಳಿಗೆ ಯಾವುದೇ ರೋಗಗಳು ಬರದಂತೆ ಹಾಗೂ ಪ್ರತಿ ವರ್ಷ ಇದೇ ರೀತಿಯಾದ ಮಳೆ ಬೆಳೆಯನ್ನು ನೀಡಲಿ ಎಂಬ ಆಶಯದಿಂದ ಈ ಜಾತ್ರೆಯನ್ನು ಮಾಡುತ್ತಾರೆ. ಇತ್ತೀಚೆಗೆ ಈ ಜಾತ್ರೆಯು ಜನಗಳ ಹೊಂದಾಣಿಕೆ ಸಮಸ್ಯೆಯಿಂದ ನಿಂತು ಹೋಗಿದೆ.

೫.೩.೨.೩ ಪೆನ್ನಓಬಳೇಶ್ವರ ಸ್ವಾಮಿ ಜಾತ್ರೆ

ಚಿತ್ರದುರ್ಗ ಜಿಲ್ಲೆಯ ಹಲವಾರು ಪ್ರದೇಶಗಳಲ್ಲಿ ಪೆನ್ನಓಬಳೇಶ್ವರ ಸ್ವಾಮಿಯನ್ನು ಅನೇಕ ಹೆಸರುಗಳಿಂದ ಕರೆಯುತ್ತಾರೆ. ಪೆನ್ನೋಬಳೇಶ್ವರ, ಪೆನ್ನಯ್ಯ, ಓಬಳೇಶ್ವರ, ಉಗ್ರನರಸಿಂಹ, ಓಬಳಯ್ಯ ಇತ್ಯಾದಿ ಹೆಸರುಗಳವೆ. ಈ ದೇವರು ಇರುವುದು ಮೂಲತಃ ಆಂಧ್ರಪ್ರದೇಶದ 'ಚಳುಗುರ್ತಿ' ಎಂಬ ಪ್ರದೇಶದಲ್ಲಿ. ಅಲ್ಲಿ ದೊಡ್ಡ ದೇವಾಲಯವಿದೆ. ಮೂಲ ಈ ಸಮುದಾಯದವರು ಆಂಧ್ರದಿಂದ ಬಂದಿದ್ದಾರೆ ಅನೇಕ ವಿದ್ವಾಂಸರು ಎಂದುಳುತ್ತಾರೆ. ಆದ್ದರಿಂದ ಇವರ ದೇವರುಗಳು ಹೆಚ್ಚಿನದಾಗಿ ಅಂಧ್ರದಲ್ಲಿ ಇರುವುದು ಕಂಡು ಬರುತ್ತವೆ.

ಚಿತ್ರದುರ್ಗ ಪ್ರದೇಶಗಳಲ್ಲಿ ಈ ದೇವರ ದೇವಾಲಯಗಳನ್ನು ನಿರ್ಮಾಣ ಮಾಡಿಕೊಂಡು. ಇವರಲ್ಲಿ ಒಬ್ಬರನ್ನು ಪೂಜಾರಿಯನ್ನಾಗಿ ಮಾಡಿಕೊಂಡು ಆರಾಧಿಸುವುದನ್ನು ಇವತ್ತಿಗೂ ಸಹ ನೋಡಬಹುದು. ಈ ದೇವರನ್ನು 'ಹೆಡ್ಡೆಯರು' ಅಂದರೆ ಕುಲಕ್ಕೆ ಒಂದು ದೇವರನ್ನು ಪೂಜೆ ಮಾಡಲು ಹಂಚಿರುವುದರಿಂದ ಈ ಕುಲಕ್ಕೆ ಪೆನ್ನಓಬಳೇಶ್ವರ ಸ್ವಾಮಿಯಾಗಿದೆ. ಈ ದೇವರಿನ ಹೆಸರಿನಲ್ಲಿ ಜಾತ್ರೆಯನ್ನು ೫ ೭ ೯ ಅಥವಾ ೧೨ ವರ್ಷಗಳಿಗೊಮ್ಮೆ ಮಾಡುತ್ತಾರೆ. ಮೊದಲನೆಯ ದಿನ ಗಂಗೆಪೂಜೆ ಎರಡನೆಯ ದಿನ ನಟೆಪೂಜೆ, ಮೂರನೆಯ ದಿನ ಹೂ, ಹಣ್ಣು, ಕಾಯಿಗಳ ಹಂಚಿಕೆ ನಡೆಯುತ್ತದೆ. ಈ ಜಾತ್ರೆಯಲ್ಲಿ ಯಾವುದೇ ಬಲಿ ಕೊಡುವುದಿಲ್ಲ. ಈ ಹೀಗೆ ಮಾದಿಗರು ಸ್ತ್ರೀ ಮತ್ತು ಪುರುಷ ದೈವಗಳನ್ನು ಆರಾಧಿಸುವುದು ಚಿತ್ರದುರ್ಗ ಜಿಲ್ಲೆಗಳಲ್ಲಿ ಕಂಡುಬರುತ್ತದೆ. ಇತ್ತೀಚಿನ ದಿನಗಳಲ್ಲಿ ಆಚರಣೆ ನಿಂತು ಹೋಗಿದೆ.

೫.೩.೨.೪ ಹೊಳಲ್ಕೆರೆ ದುರುಗಮ್ಮನ ಜಾತ್ರೆ

ಹೊಳಲ್ಕೆರೆ ಪಟ್ಟಣದ ಮಾದಿಗ ಸಮುದಾಯವು ಮಾತ್ರ ಆಚರಿಸುವ ಜಾತ್ರೆಯಾಗಿದೆ. ಪ್ರತಿ ವರ್ಷ ಮೇ ತಿಂಗಳಿನಲ್ಲಿ ದುರುಗಮ್ಮನ ಜಾತ್ರೆಯನ್ನು ಹಿರಿಯರ ಸಮ್ಮುಖದಲ್ಲಿ ಮಾಡುತ್ತಾರೆ. ಊರಿನ ಐದು ಜನರು ದೇವರ ಕಾರ್ಯಕ್ಕೆ ಸುಮಾರು ೧೫ ದಿನಗಳ ಕಾಲ ತಯಾರು ಮಾಡಿಕೊಡಿಕೊಳ್ಳುವರು. ಮೊಲನೆಯ ದಿನ ಹೊಳೆ ಪೂಜೆಗೆ ದೇವರನ್ನು ಕರೆದುಕೊಂಡು ಹೋಗುತ್ತಾರೆ. ದೇವರನ್ನು ಹೊಳೆಯಲ್ಲಿ ಸ್ವಚ್ಛಗೊಳಿಸಿ ದೇವರಿಗೆ ಹೊಸ ಸೀರೆ, ತಾಳಿ, ಮೂಗುತಿ, ಹೂವಿನ ಹಾರ ಮುಂತಾದವುಗಳನ್ನು ಹಾಕಿ ಪೂಜೆ ಮಾಡಿ ದೇವರನ್ನು ಹೊಳೆಯ ದಂಡೆಯ ಮೇಲೆ ಕರಿಕಂಬಳಿ ಮೇಲೆ ಕೂರಿಸುತ್ತಾರೆ. ಊರಿನ ಮಾದಿಗ ಸಮುದಾಯದ ಹದಿಹರೆಯದ ಹುಡುಗಿಯರು ಕಳಸವನ್ನು ಹೊಳೆಯ ದಂಡೆಯ ಹತ್ತಿರ ಬರುತ್ತಾರೆ. ದೇವರಿಗೆ ಕಳಸ ಬೆಳಗಿ ಮೆರವಣಿಗೆಯ ಮೂಲಕ ದೇವಸ್ಥಾನದ ಹೊರಗೆ ಚಪ್ಪರದ ಕೆಳಗೆ ಕೂರಿಸುತ್ತಾರೆ.

ಪೂಜಾರಿಯ ಹೆಂಡತಿ ಹಾಗೂ ಊರಿನ ಹಿರಿಯ ಮಹಿಳೆಯರು ಮದಲಿಗಿತ್ತಿಯನ್ನು ಮಾಡುತ್ತಾರೆ. ಪೂಜಾರಿಗೆ ಮತ್ತು ದೇವರಿಗೆ ಅರಿಶಿಣ ಹಚ್ಚುತ್ತಾರೆ. ಪೂಜಾರಿಯ ಮನೆಯಲ್ಲಿ ಮಾಡಿದ ಅಡುಗೆಯನ್ನು ದೇವರಿಗೆ ಎಡೆ ಹಾಕಿ ಪೂಜಾರಿಯು ಎಡೆಯನ್ನು ಸ್ವಲ್ಪ ಸೇವಿಸಿದ ನಂತರ ಪೂಜಾರಿ ಮನೆಯಲ್ಲಿ

ಮಾಡಿದ ಅಡುಗೆಯನ್ನು ಸಂಬಂಧಿಕರಿಗೆ ಹಾಗೂ ಊರಿನ ಗ್ರಾಮಸ್ಥರಿಗೆ ಬಡಿಸುತ್ತಾರೆ. ಇದೇ ರೀತಿಯಾಗಿ ಮೂರು ದಿನ ಯಜಮಾನರ ಮನೆಯಲ್ಲಿ ಈ ಆಚರಣೆ ನಡೆಯುತ್ತದೆ.

ಮಂಗಳವಾರ ಬೆಳಗಿನ ಜಾವ ಕೋಣವನ್ನು ಬಲಿ ಕೊಟ್ಟು ಅದನ್ನು ಊರಿನ ಪ್ರತಿಯೊಂದು ಮನೆಯವರಿಗೆ ಭಾಗ ಹಾಕಿ ಬಂದಿರುವ ಸಂಬಂಧಿಕರಿಗೆ ಮಾಂಸದ ಊಟವನ್ನು ಬಡಿಸುತ್ತಾರೆ. ನಂತರ ದೇವರನ್ನು ಮುಖ್ಯ ಬೀದಿಗಳಲ್ಲಿ ಮೆರವಣಿಗೆ ಮಾಡಿ ಉಡಿ ತುಂಬಿಸಿ ಮತ್ತೆ ಪೂಜೆಯನ್ನು ಮಾಡುತ್ತಾರೆ. ಈ ರೀತಿಯಾಗಿ ಮೂರು ದಿನಗಳ ಕಾಲ ವ್ಯವಸ್ಥಿವಾಗಿ ನಡೆಯುತ್ತದೆ.

೫.೩.೨.೫ ತಾಳ್ಯ ಕರಿಯಮ್ಮನ ಜಾತ್ರೆ

ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲೂಕಿನ ತಾಳ್ಯ ಗ್ರಾಮದ ಕರಿಯಮ್ಮನ ಜಾತ್ರೆಯನ್ನು ವಿಶೇಷವಾಗಿ ಮಾದಿಗ ಸಮುದಾಯದವರು ಬಹಳ ಕಟ್ಟುನಿಟ್ಟಿನಿಂದ ಆಚರಿಸುತ್ತಾರೆ. ಸುಮಾರು ಐದು ದಿನಗಳು ನಡೆಯುವ ದೊಡ್ಡ ಜಾತ್ರೆಯು ಹೌದು. ಈ ಜಾತ್ರೆಯು ಪ್ರತಿವರ್ಷವು ಜೂನ್ ತಿಂಗಳಲ್ಲಿ ಜರುಗುತ್ತದೆ. ಐದು ದಿನಗಳಲ್ಲಿ, ಅನೇಕ ರೀತಿಯ ಆಚರಣೆಗಳು ಜರುಗುತ್ತವೆ. ಅವುಗಳನ್ನು ಗಮನಿಸಬಹುದು.

- **ಕರಿಯಮ್ಮನ ಜಾತ್ರೆಯ ಸಾರು**

ಕರಿಯಮ್ಮನ ಜಾತ್ರೆಯನ್ನು ಮಾಡಲು ಮೊದಲು ಗ್ರಾಮದ ಹಿರಿಯರು ಚಾವಡಿಯಲ್ಲಿ ಅಥವಾ ಗುಡಿಯಲ್ಲಿ ಸಭೆ ಸೇರಿ ಅನುಕೂಲಕರ ಅಥವಾ ಸೂಕ್ತವಾದ ದಿನ ಯಾವುದು ಎಂದು ನಿರ್ಣಯಿಸುತ್ತಾರೆ. ಈ ಬಗ್ಗೆ ಗ್ರಾಮದಲ್ಲಿ 'ಸಾರು' ಹಾಕಲು ಹೇಳುತ್ತಾರೆ. ಮಾದಿಗ ಸಮುದಾಯದ 'ಕೋಲುಕಾರ' ಅಥವಾ 'ಹಸೇದಪ್ಪ' ತಮಟೆ ಬಾರಿಸುತ್ತಾ ಇವತ್ತಿಗೆ ಹದಿನೈದು ದಿನಕ್ಕೆ ಅಥವಾ ಒಂಬತ್ತನೆಯ ದಿನಕ್ಕೆ ಜಾತ್ರೆ ಇದೆ ಎಂದು ಮೂರು ಬಾರಿ ಸಾರು ಹಾಕುತ್ತಾನೆ. ಹೀಗೆ ಸಾರುವುದನ್ನು ಕೇಳಿಸಿಕೊಂಡು ಜಾತ್ರೆಗೆ ಎಲ್ಲವನ್ನು ಸಿದ್ಧಪಡಿಸಿಕೊಂಡು ಹಾಗೂ ಸಂಬಂಧಿಕರಿಗೆ ದೇವಿ ಜಾತ್ರೆಯ ವಿಷಯವನ್ನು ತಿಳಿಸುತ್ತಾರೆ.

- **ಮಾದಲಗಿತ್ತಿ**

ಮಂಗಳವಾರ ಬೆಳಗಿನ ಜಾವ ಕರಿಯಮ್ಮ ದೇವಿಯನ್ನು ಗಂಗಮ್ಮನ ಪೂಜೆಗೆ ಕರೆದುಕೊಂಡು ಹೋಗಲಾಗುತ್ತದೆ. ಗಂಗೆ ಹಣ್ಣು ಕಾಯಿ ಮಾಡಿಸಿಕೊಂಡು ದೇವಿಯ ಮೇಲೆ ಮೂರು ಬಾರಿ ನೀರನ್ನು ಚುಮುಕಿಸಿ ನಂತರ ಆರತಿ ಬೆಳಗಿ ದೇವಸ್ಥಾನಕ್ಕೆ ಮೆರವಣಿಗೆಯ ಮೂಲಕ ಕರೆದುಕೊಂಡು ಬರುತ್ತಾರೆ. ದೇವರ ಗುಡಿಯ ಎದುರಿಗೆ ಕರಿಕಂಬಳಿ ಹಾಕಿ ದೇವರನ್ನು ಕೂರಿಸಿ ಐದು ಜನ ಮುತ್ತೈದೆಯರು ದೇವರಿಗೆ ಅರಿಶಿಣ ಹಚ್ಚಿ ಮತ್ತು ಹೂವಿನ ಹಾರ ಹಾಕಿ ಪೂಜೆ ಮಾಡುತ್ತಾರೆ. ಈ ರೀತಿಯಾಗಿ ಮದಲಗಿತ್ತಿಯನ್ನು ಮಾಡಿ ಮುಂದಿನ ಕಾರ್ಯಕ್ಕೆ ಹೋಗುತ್ತಾರೆ.

- **ಪಟ್ಟದ ಕೋಣ ಬಲಿ**

ಬುಧವಾರ ಕರಿಯಮ್ಮನ ಕೋಣವನ್ನು ಹುಡುಕಿ ತಂದು ಒಂದೆಡೆ 'ಸೆರೆ'ಯಲ್ಲಿ ಇಡುತ್ತಾರೆ. ರಾತ್ರಿ 'ಎಡೆ ಬೀಡಾರ' ಮಾಡಿಕೊಂಡು 'ಘಟ' ತರುತ್ತಾರೆ. 'ಘಟ' ಎಂದರೆ ಈಡಿಗರ ಮನೆಯಲ್ಲಿ

'ಯಂಡ'ವನ್ನು ಕುಂಭಕ್ಕೆ ಅಡಿಕೆ ಅಥವಾ ತೆಂಗಿನ ಹೊಂಬಾಳೆ, ಬೇವಿನ ಸೊಪ್ಪು, ಕುಂಕುಮ, ಬತ್ತಿ ಹಚ್ಚಿ ಪೂಜೆ ಮಾಡಿಸಿಕೊಂಡು ಶುಕ್ರವಾರ ಸಂಜೆ ಕರಿಯಮ್ಮನನ್ನು ಮುಖ್ಯ ಬೀದಿಗಳಲ್ಲಿ ಮೆರವಣಿಗೆ ಕರೆದುಕೊಂಡು ಹೋಗುತ್ತಾರೆ. ಹೋಗುವ ಪ್ರತಿ ಹೆಜ್ಜೆಗೆ ನಿಂಬೆಹಣ್ಣು, ಓಕುಳಿ, ಈರುಳ್ಳಿ, ತೆಂಗಿನಕಾಯಿ ಹೊಡೆಯುವ ಮೂಲಕವಾಗಿ ಪ್ರತಿ ಬೀದಿಯ ಮನೆಯವರು ಹಣ್ಣುಕಾಯಿ ಪೂಜೆ ಮಾಡುತ್ತಾರೆ. ಯುವಕರು ತಮಟೆ ಮತ್ತು ಉರುಮೆಗೆ ಹೆಜ್ಜೆ ಹಾಕುತ್ತಾ ಸಾಗುತ್ತಾರೆ. ಮೆರವಣಿಗೆ ಮುಗಿದ ಮೇಲೆ ದೇವರ ಗುಡಿಯ ಮುಂಭಾಗ ದೇವರನ್ನು ಕೂರಿಸುತ್ತಾರೆ.

• ಕರಿಯಮ್ಮನ ಗಾವು ಸಿಗಿಯುವುದು

ಕರಿಯಮ್ಮನ ಜಾತ್ರೆಯಲ್ಲಿ ಗಾವು ಸಿಗಿಯುವುದು ಭಯಾನಕ ಪ್ರಸಂಗವಾಗಿದೆ. ಕರಿಯಮ್ಮ ದೇವಿಗೆ ದುಷ್ಟ ಶಕ್ತಿಗಳನ್ನು ನಾಶ ಮಾಡುವ ಸಲುವಾಗಿ ಗಾಳಿಮರಿ ಅಥವಾ ಗಾವು ಮರಿಯನ್ನು ಬಲಿ ಕೊಡುತ್ತಾರೆ. ಬಲಿ ಕೊಡುವ ಮೇಕೆ ಮರಿಯು ಒಂದೇ ಬಣ್ಣದಿಂದ ಕೂಡಿರಬೇಕು. ಕಪ್ಪು ಅಥವಾ ಬಳಿ ಬಣ್ಣದ ಮೇಕೆ ಬೇಕು ಗಾವು ಸಿಗಿಯುವ ಕಾರ್ಯ ಮಾಡಲು ಬೇಡ ಸಮುದಾಯದಲ್ಲಿ ಇರುವ ಪೋತರಾಜ ಅಥವಾ ಪಾತಯ್ಯಯನ್ನು ಕರೆಸುತ್ತಾರೆ. ಪೋತರಾಜರನ್ನು ಬೀದಿಗಳ ಮೂಲಕ ಆವೇಶ ಬಂದವನಂತೆ ಹಲಗೆ ಮತ್ತು ಉರುಮೆ ಬಡಿತಕ್ಕೆ ತಕ್ಕಂತೆ ಬರಿ ಮೈಯಲ್ಲಿ ಕೆಂಪು ಚಡ್ಡಿ ಧರಿಸಿ ಹೆಜ್ಜೆ ಹಾಕುತ್ತಾ ಗಾವು ಸಿಗಿಯುವ ಗುಂಡಿಯ ಹತ್ತಿರಕ್ಕೆ ಕರೆದುಕೊಂಡು ಬರುತ್ತಾರೆ. ಮೇಕೆ ಮರಿಯನ್ನು ತನ್ನ ಎಡಭಾಗಕ್ಕೆ ಇಟ್ಟುಕೊಂಡು ಕಿವಿಯಲ್ಲಿ ಮಂತ್ರವನ್ನು ಹೇಳಿ ಮೇಕೆಯ ದವಡೆಯನ್ನು ಹಲ್ಲಿನಿಂದಲೇ ಕಚ್ಚಿ, ರಕ್ತ ಕುಡಿಯುತ್ತಾ, ಮೇಕೆಯ ಮುಖದ ಭಾಗವನ್ನು ಗಾವಿಯ ಗುಂಡಿಯ ಮೇಲೆ ಹಿಡಿದಿರುವ ಬಿಳಿಯ ಬಟ್ಟೆಯ ಮೇಲೆ ಹಾಕುತ್ತಾ, ರಕ್ತಸಿಕ್ತ ಮುಖವನ್ನು ಭಯಾನಕವಾಗಿ ಜನರಿಗೆ ಪ್ರದರ್ಶಸುತ್ತಾ, ಉಳಿದ ಪೋತ ರಾಜರುಗಳು ಉರುಮೆಗೆ ತಳಕ್ಕೆ ಮೈಯಿಗೆ ಚಟ್ಟೆಯಿಂದ ಹೊಡೆದುಕೊಳ್ಳುತ್ತಾ ಹೆಜ್ಜೆಯನ್ನು ಹಾಕುತ್ತಾರೆ.

ನಂತರ ದೇವರ ಚಪ್ಪರಕ್ಕೆ ಕಟ್ಟಿದ ನೆಣ(ಕಬ್ಬು), ಬುತ್ತಿಅನ್ನ, ಕೋಣದ ತಲೆ, ಗಾವು ಸಿಗಿದ ಮೇಕೆಯ ತಲೆಯನ್ನು ಹಾಕಿ ಗಾವಿನ ಗುಂಡಿಯನ್ನು ಮುಚ್ಚುತ್ತಾರೆ. ಹೀಗೆ ಕರಿಯಮ್ಮ ಜಾತ್ರೆಯನ್ನು ಪ್ರತ್ಯೇಕವಾಗಿ ಮಾದಿಗರೇ ಮಾಡಿದ್ದರೂ ಸಹ ಇತ್ತೀಚಿನ ದಿನಗಳಲ್ಲಿ ಇಂತಹ ಕಟ್ಟುನಿಟ್ಟಿನ ಆಚರಣೆ ಕಡಿಮೆಯಾಗಿದೆ. ಹೊಂದಾಣಿಕೆಯ ಸಮಸ್ಯೆಯಿಂದ ಇಂತಹ ಜಾತ್ರೆಯು ಅವನತಿಯೆಡೆಗೆ ಸಾಗುತ್ತಿವೆ.

ಕುಂಭವನ್ನು ಪೂಜಾರಿಯು ದೇವಸ್ಥಾನದ ಎದುರಿಗೆ ಕರಿಕಂಬಳಿಯ ಮೇಲೆ ಇಡುತ್ತಾನೆ. ಘಟಿಗೆ ಗದ್ದಿಗೆ ಹಾಕಿ ಇಡೀ ಹಟ್ಟಿಯ ಜನರು ಪೂಜೆ ಮಾಡಿ ಎಡೆಯನ್ನು ಎಲ್ಲರೂ ಊಟ ಮಾಡುತ್ತಾರೆ.

ರಾತ್ರಿ ಸುಮಾರು ೧ ಘಂಟೆಗೆ ಕೋಣದ ಕುತ್ತಿಗೆ ಮತ್ತು ಮುಂದಿನ ಕಾಲುಗಳಿಗೆ ದಪ್ಪನೆಯ ಹಗ್ಗ ಕಟ್ಟಿ ಎಳೆದುಕೊಂಡು ನಿಲ್ಲಿಸುತ್ತಾರೆ. ಇದು "ಬಲಿ ಪ್ರಾಣಿ" ಎಂದು ಗುರುತಿಸಲು ಅನುಕೂಲವಾಗುವಂತೆ ಅದರ ಕುತ್ತಿಗೆಗೆ ಬೇವಿನ ಸೊಪ್ಪನ್ನು ಕಟ್ಟಿ ಹಣೆಗೆ ಕುಂಕುಮವಿಟ್ಟು ಶಿರಕ್ಕೆ ಹಾಗೂ ತಲೆಗೆ ಎಣ್ಣೆ ಎರೆಯುತ್ತಾರೆ. ಬಲಿ ಕೊಡಲು ಸಿದ್ಧತೆಗಳು ಪ್ರಾರಂಭವಾಗುತ್ತವೆ. ಕೋಣದ ಕೊಂಬು ಮತ್ತು

ಎರಡೂ ಹಿಂಗಾಲುಗಳಿಗೆ ಬಲವಾದ ಹಗ್ಗಗಳನ್ನು ಕಟ್ಟಿ ಅದು ಮುಂದೆ ಹಿಂದೆ ಸರಿದಾಡಿ ಕೊಸರಾಡದಂತೆ ಭದ್ರವಾಗಿ ಕಟ್ಟುತ್ತಾರೆ. ಈ ಸಮುದಾಯದಲ್ಲಿ ಬಲಿಷ್ಠವಾದ ಕೋರಿ ಹುಡುಗನನ್ನು ಗುರುತಿಸಿ, ಅವನಿಗೆ ದೇವರ ಕುಂಕುಮ ಹಣೆಗೆ ಹಚ್ಚಿ ಗಂಡುಗೊಡಲಿಗೆ ನಮಸ್ಕರಿಸಿ ಅದನ್ನು ಕೈಯಲ್ಲಿ ತೆಗೆದುಕೊಂಡು ದೇವರಿಗೆ ಕೈಮುಗಿದು ಕೋಣದ ತಲೆಯನ್ನು ಕಡಿಯುತ್ತಾನೆ.

ತಲೆಯನ್ನು ಕತ್ತರಿಸಿದ ತಕ್ಷಣ ತಲೆಯನ್ನು ದೇವಿಯ ಮುಂದೆ ಮುಖ ಮುಂದಾಗಿ ಇಡುತ್ತಾರೆ. ನಂತರ ಕೋಣದ ಎಡಗಾಲು ಕತ್ತರಿಸಿ, ತೆಗೆದು ಕೋಣದ ಬಾಯಿಯಲ್ಲಿ ಇಡುತ್ತಾರೆ. ಕೋಣದ ಬಾಲ, ಕಿವಿಗಳ ತುದಿ, ನಾಲಿಗೆಯ ತುದಿ, ಮೂತಿಯನ್ನು ಕತ್ತರಿಸಿ ಬುಡ್ಡೆಕಲ್ಲುಗೆ ಹಾಕುತ್ತಾರೆ. ನಂತರ ತಲೆಯ ಮೇಲೆ ಗೋದಿಯ ಹಿಟ್ಟಿನ ಕಣಕದ ಹಣತೆ ಮಾಡಿಟ್ಟು ಅದರಲ್ಲಿ ಅದೇ ಕೋಣದ 'ನೆಣ' ಹಾಕಿ ದೀಪ ಹಚ್ಚುತ್ತಾರೆ. ಈ ಸಮುದಾಯದ ಮೂರು ಜನರು ದೀಪ ಆರದಂತೆ ನೋಡಿಕೊಳ್ಳುತ್ತಾರೆ. ಅಸೇದಪ್ಪ ಮಂತ್ರವನ್ನು ಹೇಳುತ್ತಾನೆ. ಅಸೇದಪ್ಪ ಇದ್ದರೆ ಈ ಕಾರ್ಯ ನಡೆಯುತ್ತದೆ. ಅಸೇದಪ್ಪ ಈ ಆಚರಣೆಯಲ್ಲಿ ಮುಖ್ಯ ಪಾತ್ರವನ್ನು ನಿಭಾಯಿಸುತ್ತಾನೆ. ನಂತರ ಕೋಣದ ಮಾಂಸವನ್ನು ಒಂದೇ ಕಡೆ ಅಡುಗೆಮಾಡಿ ಪಂಕ್ತಿ ಭೋಜನದಲ್ಲಿ ಪ್ರತಿಯೊಬ್ಬರು ಈ ಊಟವನ್ನು ಮಾಡುತ್ತಾರೆ. ಸಂಜೆ ೬ ಗಂಟೆಗೆ ತಲೆಯ ಮೇಲೆ ಇರುವ 'ನೆಣ' ಮತ್ತು ಬುತ್ತಿ ಅನ್ನವನ್ನು ದೇವಸ್ಥಾನ ಮುಂದೆ ಹಾಕಿರುವ ಚಪ್ಪರಕ್ಕೆ ಕಟ್ಟುತ್ತಾರೆ.

ಭಾವೈಕ್ಯತೆಯಿಂದ ಮೆರೆಯುವ ಹಾಗೂ ಅರೆಮಲೆನಾಡು ಎನ್ನಿಸಿಕೊಂಡಿರುವ ಹೊಳಲ್ಕೆರೆಯ ತಾಳ್ಯ ಗ್ರಾಮದಲ್ಲಿ ಇಂದಿಗೂ ಕರಿಯಮ್ಮನ ಜಾತ್ರೆಯ ನಡೆಸಿಕೊಂಡು ಬರುತ್ತಿದ್ದಾರೆ. ಆದರೆ ಈಗ ಅ ಹಿಂದಿನ ಸಂಭ್ರಮದ ಜಾತ್ರೆ ನಡೆಯುವುದು ಕಡಿಮೆಯಾಗಿದೆ. ಹಿಂದೆ ಗ್ರಾಮಸ್ಥರಲ್ಲಿ ಏನೇ ಭಿನ್ನತೆ ಇದ್ದರೂ ಹಬ್ಬ, ಉತ್ಸವ ಜಾತ್ರೆಗಳಲ್ಲಿ ಒಗ್ಗಟ್ಟು ಬೇಕೆಬೇಕಾಗುತ್ತಿದ್ದುದರಿಂದ ಅವರನ್ನು ಒಂದುಗೂಡಿಸುತ್ತಿತ್ತು. ಗ್ರಾಮದಲ್ಲಿ ಗುಂಪುಗಾರಿಕೆ, ಅಸೂಯೆ, ದ್ವೇಷ ಕೆಲವು ಸಣ್ಣಪುಟ್ಟ ಒಳ ಉಂಟಾಗಿ ಜನರ ಜೀವನದಲ್ಲಿ ಜಿಗುಪ್ಸೆ ತರುತ್ತದೆ. ಜನರಲ್ಲಿ ಭಯ–ಭಕ್ತಿಯು ಕಡಿಮೆಯಾಗಿ ಆಚರಣೆಗಳು ನಿಂತು ಹೋಗುವ ಸ್ಥಿತಿಗೆ ತಲುಪಿವೆ.

೫.೩.೨.೬ ಎಳವಮ್ಮ ಜಾತ್ರೆ

ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕಿನ ನೆರ್ಲಗುಂಟೆ ಗ್ರಾಮದಲ್ಲಿ ಎಳವಮ್ಮನ ಗುಡಿ ಇದ್ದು. ಈ ದೇವತೆಯ ಹೆಸರಲ್ಲಿ ಜಾತ್ರೆ ನಡೆಯುತ್ತಿದ್ದು, ಮಾದಿಗರು ಮಾತ್ರವೇ ಆಚರಿಸುತ್ತಾರೆ. ಈ ಜಾತ್ರೆ ಐದು ಇಲ್ಲವೇ ಒಂಬತ್ತು ಇಲ್ಲವೇ ಹನ್ನೆರಡು ವರ್ಷಗಳಿಗೊಮ್ಮೆ ಶೂನ್ಯ ಮಾಸದಲ್ಲಿ ಮೂರು ದಿನಗಳ ಕಾಲ ನಡೆಯುತ್ತದೆ. ಈ ಎಳವಮ್ಮನ ಕುರಿತ ಒಂದು ಐತಿಹ್ಯವೊಂದು ಹೀಗಿದೆ. "ಹಿಂದೆ ಇಂಡಿ ಕಾಯಿಲೆ (ಮೈಮೇಲೆ ಗುಳ್ಳೆಗಳಾಗುವುದು) ಬಂದು ಇದರ ವಾಸನೆಗೆ ಜನ ಸಾಯುತ್ತಿದ್ದರು. ಆಗ 'ಎಳವಮ್ಮ' ಇಂಡಿ ಕಾಯಿಲೆಯನ್ನು ಹೊಡೆದೋಡಿಸಿ ನಿಮ್ಮನ್ನೆಲ್ಲ ರಕ್ಷಣೆ ಮಾಡುತ್ತೇನೆ ಎಂದು ಭರವಸೆ ಕೊಟ್ಟು ಆ ಕಾಯಿಲೆಯಿಂದ ಇವರನ್ನು ರಕ್ಷಣೆ ಮಾಡುತ್ತಾಳೆ.

ಅದಕ್ಕೆ ಪ್ರತಿಯಾಗಿ ಮಾದಿಗರು 'ಎಳವಮ್ಮ' ಮಾರಿಯ ಹೆಸರಲ್ಲಿ ಮೂರು ದಿನಗಳ ಕಾಲ ಜಾತ್ರೆ ಮಾಡುತ್ತಾರೆ. ಮೊದಲನೆ ದಿನ ಹೊಸ ಮಡಿಕೆಯನ್ನು ತಂದು ಅವುಗಳಿಗೆಲ್ಲ ಬಿಳಿ ಸುಣ್ಣದಿಂದ ಚುಕ್ಕೆಗಳನ್ನು ಇಟ್ಟು ಅಲಂಕಾರ ಮಾಡುತ್ತಾರೆ. ಅನ್ನವನ್ನು ಹಾಕಿರುವ ಈ ಮಡಿಕೆಯನ್ನು 'ಬಾನಗದ ಸೊರೆ' ಎಂದು ಕರೆಯುತ್ತಾರೆ. ಈ ಸೊರೆಯನ್ನು ಮದುವೆಯಾಗದ ಹುಡುಗ ಅಥವಾ ಹುಡುಗಿಯರ ತಲೆ ಮೇಲೆ ಹೊರಿಸಿಕೊಂಡು ಹೋಗಿ ಎಳವಮ್ಮನಿಗೆ ಎಡೆ ಹಾಕಲಾಗುತ್ತದೆ. ಅನಂತರ ಅಲ್ಲಿಗೆ ತಂದಿರುವ ಎಲ್ಲ ಮಡಿಕೆಗಳ ಅನ್ನವನ್ನು ಒಂದು ಕಡೆ ಹಾಕಿ 'ದಾಸೋಹ' ಮಾಡುತ್ತಾರೆ. ಎರಡನೆಯ ದಿನ 'ಬಲಿ' ಕೊಡುವುದು ನಡೆಯುತ್ತದೆ. ಮೂರನೆಯ ದಿನ ದೇವರಿಗೆ ಎಡೆ ಹಾಕಿರುವ ಹೂ ಕಣ್ಣು ಕಾಯಿ ಇತ್ಯಾದಿಗಳನ್ನು ಹಂಚಿಕೆ ಮಾಡಿಕೊಳ್ಳುತ್ತಾರೆ."[೨೨]

೫.೩.೨.೭ ಕಣೆಮೆ ದುರುಗಮ್ಮ ಜಾತ್ರೆ

ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲೂಕಿನ ನೇರ್ಲಹಳ್ಳಿ ಗ್ರಾಮದಲ್ಲಿ ಕಣೆಮೆ(ವೆ) ದುರುಗಮ್ಮನ ಜಾತ್ರೆ ವೈಭವದಿಂದ ನಡೆಯುತ್ತದೆ. ಮಾದಿಗ ಹಾಗೂ ಬೇಡ ಸಮುದಾಯದವರು ಆಚರಿಸುವ ವಿಶೇಷವಾದ ಆಚರಣೆಯಾಗಿದೆ. ಈ ಜಾತ್ರೆಯು ಸುಮಾರು ಐದು ಅಥವಾ ಒಂಬತ್ತು ವರ್ಷಕ್ಕೆ ಒಂದು ಬಾರಿ ಆಚರಿಸುತ್ತಾರೆ. ದೇವರ ಕಾರ್ಯವನ್ನು ಹೊರತುಪಡಿಸಿ ಉಳಿದ ಎಲ್ಲಾ ಕೆಲಸವನ್ನು ಮಾದಿಗ ಸಮುದಾಯದವರೇ ಮಾಡುತ್ತಾರೆ. ಈ ಜಾತ್ರೆ ಮಾಡುವುದಕ್ಕಿಂತ ಮುಂಚೆ ಊರಿನ ದೈವಸ್ಥರು ಸೇರಿ ಗುಡಿ ಚಾವಡಿಯಲ್ಲಿ ಕುಳಿತು ಒಂದು ದಿನವನ್ನು ನಿಗದಿ ಮಾಡಿ. ಅಂದಿನ ದಿನ ದೇವರನ್ನು ಕರಿಸಿ ದೇವರ ಮೂರ್ತಿ ಮಾಡಲು ತಾಳೆ ಮರವನ್ನು ಗೊತ್ತುಪಡಿಸಿ. ಕಡಿದು ತರುತ್ತಾರೆ. ಮರವನ್ನು ಒಣಗಿಸಿ, ಅ ಮರಕ್ಕೆ ಬಡಗಿ ಕೈಯಿಂದ ಪೂಜೆ ಮಾಡಿಸಿಸುತ್ತಾರೆ. ಬಡಗಿ ಕಣೆಮೆಯಲ್ಲಿ ಇರುವಂಥ ದೇವರ ಮೂರ್ತಿಯನ್ನು ಕೆತ್ತುತ್ತಾನೆ. ಪ್ರತಿ ಬಾರಿ ಜಾತ್ರೆಯನ್ನು ಮಾಡುವಾಗ ಹೊಸ ದೇವರನ್ನು ಕೆತ್ತಿಸುತ್ತಾರೆ. ಹೊಸ ದೇವರನ್ನು ಕೆತ್ತಿದ ನಂತರ ಹಳೆ ದೇವರನ್ನು ದೇವರ ಗುಡಿಯ ಹಿಂಭಾಗದಲ್ಲಿ ಇಡುತ್ತಾರೆ.

• ಕಣೆಮೆ ದುರುಗಮ್ಮನ ಸಾರು

ದೇವಿ ದುರುಗಮ್ಮನ ಜಾತ್ರೆಯ ಹದಿನೈದು ದಿನಕ್ಕೆ ಮೊದಲು ಸಾರಲಾಗುತ್ತದೆ. ಮಾದಿಗ ಸಮುದಾಯದ ಹಿರಿಯ ವ್ಯಕ್ತಿ ತಮಟೆ ಬಡಿಯುತ್ತಾ. ಇವತ್ತಿಗೆ ಹದಿನೈದು ದಿನಕ್ಕೆ ದೇವಿ ದುರುಗಮ್ಮನ ಹಬ್ಬ ಎಂದು ಸಾರುತ್ತಾನೆ. ಹೀಗೆ ಸಾರುವುದನ್ನು ಕೇಳಿಕೊಂಡು ಪರಸ್ಥಳದವರೂ ಕೂಡ ದೇವಿ ದುರುಗಮ್ಮನ ಜಾತ್ರೆಗೆ ಹಾಜರಾಗಬೇಕೆಂಬ ನಂಬಿಕೆ ಇಲ್ಲಿಯೂ ಇದೆ. ಮನೆಯಲ್ಲಿ ಅಂದಿನಿಂದ ಯಾರು ಮನೆಯಲ್ಲಿ ಹಂಚಿನ ಮೇಲೆ ಯಾವುದೇ ಅಡುಗೆಯನ್ನು ಮಾಡುವುದಿಲ್ಲ. ಬೇರೆ ಯಾವುದೇ ಊರಿನ ಜನರನ್ನು ಊರಿನ ಒಳಗೆ ಪ್ರವೇಶವನ್ನು ನಿಷೇದಿಸಲಾಗುತ್ತದೆ.

• ಕಣೆಮೆ ದುರುಗಮ್ಮನಿಗೆ ಕೋಣ ಬಿಡುವ ಆಚರಣೆ

ಕಣೆಮೆ ದುರುಗಮ್ಮನಿಗೆ ಐದು ಅಥವಾ ಒಂಬತ್ತು ವರ್ಷಕ್ಕೆ ಒಂದು ಪಟ್ಟದ ಕೋಣವನ್ನು ಬಿಡುವ ಸಂಪ್ರದಾಯವಿದೆ. ಈ ಕೋಣವನ್ನು ಊರಿನ ಗೋಚಿಗಾರು, ಗೌಡರು, ಊರಿನ ದೈವಸ್ಥರು

ಕಾಣಿಕೆಯಾಗಿ ಬಿಡುತ್ತಾರೆ. ಆ ಕೋಣ ಯಾರ ಮನೆಯಲ್ಲಿ ಬಿಡುತ್ತಾರೋ, ಅವರ ಮನೆಯಲ್ಲಿಯೇ ಮೇಯ್ದುಕೊಂಡು ರಾತ್ರಿ ಅಲ್ಲಿಯೇ ಮಲಗಿಕೊಳ್ಳುತ್ತದೆ. ಮಾದಿಗ ಸಮುದಾಯದವರು ಹೋಗಿ ಕೋಣವನ್ನು ಹಿಡಿದುಕೊಂಡು ಬಂದು ಕಟ್ಟಿಹಾಕುತ್ತಾರೆ. ಮೈತೊಳೆದು ವಿಭೂತಿ, ತಲೆಯ ಮೇಲೆ ಹರಳೆಣ್ಣೆ ಹಾಕಿ, ಕುಂಕುಮ, ಬೇವಿನಸೊಪ್ಪು ಕಟ್ಟಿ ದೇವಿ ದುರುಗಮ್ಮನ ಗುಡಿಯ ಬಳಿಗೆ ಹೊಡೆದುಕೊಂಡು ಬರುತ್ತಾರೆ. ಅದಕ್ಕೆ ಪೂಜಾರಿ ದೇವರ ತೀರ್ಥ ಹಾಕಿ ಪೂಜೆ ಮಾಡಿ ಬಿಡುತ್ತಾರೆ. ಅಂದಿನಿಂದ ಯಾರ ತೋಟದಲ್ಲಿ ಬೇಕಾದರೂ ಮೇಯಬಹುದು. ಯಾರು ಸಹ ಅದನ್ನು ಹಿಂಸಿಸುವಂತಿಲ್ಲ ದೇವರ ಕೋಣವೆಂದು ಗೌರವಿಸುತ್ತಾರೆ.

- **ಕಣೆಮೆ ದುರುಗಮ್ಮನಿಗೆ ಗಂಗೆ ಪೂಜೆ**

ಕಣೆಮೆ ದುರುಗಮ್ಮನ ಮೂರ್ತಿ ಮಾಡಲು ಪ್ರತ್ಯೇಕವಾದ ಒಂದು ಜಾಗವನ್ನು ನಿಗಧಿ ಮಾಡಿರುತ್ತಾರೆ. ಮಾದಿಗ ಸಮುದಾಯದ ಗೊಲ್ಲೋಬಯ್ಯನವರ ತೋಟದಲ್ಲಿ ಸಣ್ಣ ಗುಡಿಯನ್ನು ಈ ದೇವಿಯ ಹೆಸರಿನಲ್ಲಿ ನಿರ್ಮಾಣ ಮಾಡಿ. ಈ ಜಾಗದಲ್ಲಿ ಬಡಗಿಯು ದೇವರ ಮೂರ್ತಿಯನ್ನು ತಯಾರಿಸುತ್ತಾನೆ. ಜಾತ್ರೆಯ ದಿನ ಎಲ್ಲಾ ಭಾಗಗಳನ್ನು ಜೋಡಿಸುತ್ತಾರೆ. ಅಂದು ರಥ ರೂಪದಲ್ಲಿ ಇರುತ್ತದೆ. ಮಂಗಳವಾರ ಸಂಜೆ ದೇವರನ್ನು ಗಂಗೆ ಪೂಜೆಗೆ ಕರೆದುಕೊಂಡು ಹೋಗುತ್ತಾರೆ. ಹಳ್ಳಕ್ಕೆ ಹೋಗಿ ಐದು ಜನ ಮುತ್ತೈದೆಯರು ಸೇರಿ ಹೊಸ ಸೀರೆ, ಕುಬುಸ ಉಡಿಸಿ ದೇವರಿಗೆ ಗಂಗಮ್ಮನ ಪೂಜೆ ಮಾಡಿಸಿಕೊಂಡು ಮತ್ತೆ ಗೊಲ್ಲೋಬಯ್ಯನ ತೋಟಕ್ಕೆ ಕರೆದುಕೊಂಡು ಬರುತ್ತಾರೆ.

- **ದೇವರಿಗೆ ಜೀವಕಳೆ ಅಥವಾ ಪ್ರಾಣ ತುಂಬುವುದು**

ಕಣೆಮೆ ದುರುಗಮ್ಮನ ಜಾತ್ರೆಯ ಸಮಯದಲ್ಲಿ ದುರುಗಮ್ಮನಿಗೆ ಬಣ್ಣ ಹಾಕಿ ಅಲಂಕಾರ ಮಾಡುವ ಪದ್ಧತಿ ಇಲ್ಲದೆ. ಬಣ್ಣ ಹಾಕದೆ ಹೊಸ ದೇವರು ಮಾಡದೆ ಇರುವುದು ಅಲಂಕಾರಕ್ಕೆ ಶೋಭೆ ಎಂಬುದೇ ಇಲ್ಲಿನ ನಂಬಿಕೆ. ರಥದ ಮೇಲೆ ದೇವರನ್ನು ನಿರ್ಮಾಣ ಮಾಡಿರುತ್ತಾರೆ. ಆದ್ದರಿಂದ ರಥಕ್ಕೆ ಐದು ತೆಂಗಿನಕಾಯಿ, ಐದು ನಿಂಬೆಹಣ್ಣು, ಬಾಳೆಗಿಡ, ಮಾವಿನ ಸೊಪ್ಪು, ಬೇವಿನ ಸೊಪ್ಪು, ನಕಲಿ ಸೊಪ್ಪು ಹಾಗೂ ಐದು ಬಣ್ಣದ ಕುಬುಸಗಳನ್ನು ಅಲಂಕಾರ ದೇವಿಗೆ ಮಾಡಿರುತ್ತಾರೆ. ಜೊತೆಗೆ ದೇವಿಯ ದರ್ಶನವೂ ನಿಷಿದ್ಧ. ಪೂಜೆ ನೈವೇದ್ಯ ತೆರೆಯ ಮರೆಯಲ್ಲಿ ನಡೆಯುತ್ತದೆ. ಇಲ್ಲಿಂದಲೇ ಜಾತ್ರೆಯ ವಿಧಿಬದ್ಧ ಆಚರಣೆಗಳನ್ನು ನಡೆಸುವುದು. ಅಂದು ಮಂಗಳವಾರ ರಾತ್ರಿ ಎಂಟು ಗಂಟೆಯ ಸುಮಾರಿಗೆ ಗ್ರಾಮಸ್ಥರು ನೆರೆಯ ಊರುಗಳಿಂದ ಬಂದ ಭಕ್ತಾದಿಗಳೆಲ್ಲ ಅಪಾರ ಸಂಖ್ಯೆಯಲ್ಲಿ ಸೇರುತ್ತಾರೆ. ದೇವರ ಮುಂಭಾಗದಲ್ಲಿನ ಬಲಿ ಗಂಬದ ಪಕ್ಕದಲ್ಲಿ ಒಂದು ಬಾಳೆ ಎಲೆಯಲ್ಲಿ ಎಡೆ ಹಾಕಿ, ಕಾಯಿ ಒಡೆದು ಪೂಜಿಸುವನು. ನಂತರ ಪೂಜಾರಿ ದೇವತೆಗೆ ಒಂದು ದೃಷ್ಟಿಬೊಟ್ಟು ಇಟ್ಟು ಪರದೆ ತೆಗೆಯುವರು. ಪರದೆ ತೆಗೆದ ಕೂಡಲೇ ದೇವತೆಗೆ ಎದುರಾಗಿ ಹಾಕಿದ್ದ ಅನ್ನದ ಮುಂದೆ ಮೇಕೆಯನ್ನು (ಬಲಿಮರಿ) ಬಲಿ ಕೊಡುವರು. ಇದಕ್ಕೆ 'ದೃಷ್ಟಿಮರಿ' ಎನ್ನುವರು.' ಊರಿನ ಮುಂಭಾಗದಲ್ಲಿ ದೇವರ ಕಟ್ಟೆ ನಿರ್ಮಾಣ ಮಾಡಿರುತ್ತಾರೆ. ದೇವರನ್ನು ಮೆರವಣಿಗೆಯ

ಮೂಲಕ ಸೋಬಾನೆ ಪದಗಳು, ಚೌಡಿಕೆ, ಉರುಮೆ ಹಾಗೂ ತಮಟೆ ಬಾರಿಸುವುದರ ಮೂಲಕ ಕರೆದುಕೊಂಡು ಬರುತ್ತಾರೆ.

• ದೇವಿಗೆ ಪೂಜೆ ಮತ್ತು ನೈವೇದ್ಯ

ಬುಧವಾರ ಬೆಳಿಗ್ಗೆಯಿಂದ ಸಂಜೆ ನಾಲ್ಕು ಗಂಟೆಯವರಗೆ ಪ್ರತಿಯೊಂದು ಸಮುದಾಯವರು ದೇವರಿಗೆ ಹೂವು, ಹಣ್ಣುಕಾಯಿ ಮಾಡಿಸಿಕೊಂಡು ಹೋಗುತ್ತಾರೆ. ಕೆಲವರು ಗೋಚಿಗಾರರು, ಗೌಡರು ಸೇರಿ ಊರಿಗೆ ಊಟ ಹಾಕಿಸುತ್ತಾರೆ. ದುರುಗಮ್ಮನಿಗೆ ಹರಕೆ ಹೊತ್ತವರು ಹರಕೆ ತೀರಿಸಿಕೊಳ್ಳುತ್ತಾರೆ. ಹರಕೆಗಾಗಿ ಬೆಳ್ಳಿಛತ್ರಿ, ಬೆಳ್ಳಿ ಸೊಂಟಪಟ್ಟಿ, ಬೆಳ್ಳಿಗಂಟೆ ಹಾಗೂ ಕಂಚಿನ ಗಂಟೆಯನ್ನು ತಂದು ದೇವರಿಗೆ ಅರ್ಪಿಸುತ್ತಾರೆ. ಮಕ್ಕಳ ಸಂತಾನಕ್ಕೆ, ಕೌಟುಂಬಿಕ ಸಮಸ್ಯೆ, ಹೊಲದಲ್ಲಿ ಉತ್ತಮ ಫಲವತ್ತೆ ಪಡೆಯುವುದಕ್ಕೆ ಹರಕೆಯನ್ನು ಹೊತ್ತುಕೊಂಡಿರುತ್ತಾರೆ ಇವುಗಳನ್ನು ಜಾತ್ರೆಯಲ್ಲಿ ತೀರಿಸುತ್ತಾರೆ.

• ದೇವಿಯ ಪಟ್ಟದ ಕೋಣ ಬಲಿ

ಮಾದಿಗ ಸಮುದಾಯದ ಹಿರಿಯರು ಹೇಳುವ ಪ್ರಕಾರ ಜಾತ್ರೆಯ ನಡೆಯುವುದಕ್ಕಿಂತ ಮುಂಚೆ ಕೋಣ ಎಲ್ಲೇ ಹೋಗಿದ್ದರೂ ಅಂದು ಊರಿಗೆ ಬರುತ್ತದೆ. ಒಂದುವೇಳೆ ಬರಲ್ಲಿಲ್ಲವೆಂದರೆ ಊರಿನ ಗ್ರಾಮಸ್ಥರು ಹೋಗಿ ಹುಡುಕಿಕೊಂಡು ಬರುತ್ತಾರೆ. ಅದನ್ನು ಮರವೊಂದಕ್ಕೆ ಕಟ್ಟಿಹಾಕಿ ಅರೆಉಪವಾಸದಿಂದ ಅದರ ಶಕ್ತಿಗುಂದಿಸುತ್ತಾರೆ. ನಂತರ ಗುದ್ದಿ ಗುದ್ದಿ ಕುತ್ತಿಗೆಯ ಭಾಗವನ್ನು ಮೃದುಗೊಳಿಸುತ್ತಾರೆ. ಕೋಣವನ್ನು ಕವಗೆ ಹಾಕಿ ಹಗ್ಗದಿಂದ ಬಿಗಿದಿರುವುದರಿಂದ ಅಸಹಾಯಕವಾಗಿ ನಿಂತುಕೊಳ್ಳಲೇಬೇಕಾಗುತ್ತದೆ. ಸಾಮಾನ್ಯವಾಗಿ ಕೋಣವನ್ನು ಕಡಿಯುವಾಗ ಭಕ್ತರ ಅಪ್ಪಣೆ ಕೇಳುತ್ತಾರೆ. ಬೇಡ ಸಮುದಾಯದ ತಳವಾರರು ಮಾತ್ರ ಕೋಣವನ್ನು ಕಡಿಯಬೇಕಾಗಿರುತ್ತದೆ. ಆದ್ದರಿಂದ ಅವನಿಗೆ ಹೂಮಾಲೆ ಹಾಕಿ ವಿಶೇಷ ರೀತಿಯಲ್ಲಿ ಅಲಂಕರಿಸಿರುತ್ತಾರೆ ಒಂದೇ ಬಾರಿಗೆ ಕತ್ತರಿಸಿಲ್ಲವೆಂದರೆ ಆತನ ಬೆನ್ನಿಗೆ ಎಲ್ಲರೂ ಸೇರಿ ಹೊಡೆಯುತ್ತಾರೆ.

• ಕೋಣದ ತಲೆಯ ಮೇಲೆ ದೀಪ ಹಚ್ಚುವುದು

ಬಲಿ ಕೊಟ್ಟ ಕೂಡಲೇ ಕೋಣದ ರಕ್ತಸಿಕ್ತ ತಲೆಯನ್ನು ತಂದು ದುರುಗಮ್ಮನ ಎದುರಿಗೆ ಇಡುತ್ತಾರೆ. ಅದರ ಮೇಲೆ ಹಸಿ ಸಗಣಿ ಇಟ್ಟು ಅದರ ಮೇಲೆ ದೀಪ ಇಟ್ಟು ಬತ್ತಿಯನ್ನು ಮಾಡಿಕೊಂಡು ಅಂಟಿಸುತ್ತಾರೆ. ಈ ಊರಿನಲ್ಲಿ ಸುಂಕಜ್ಜನರು ಎಂಬ ಕುಲಸ್ಥರು ಈ ಕಾಯಕವನ್ನು ಮಾಡುತ್ತಾರೆ. ಕೋಣ ಬಿದ್ದ ತಕ್ಷಣ ಕತ್ತಿಯಿಂದ ಹೊಟ್ಟೆಯನ್ನು ಬಗೆದು ಅದರ 'ನೆಣ'ವನ್ನು ತೆಗೆದು ಆ ದೀಪಕ್ಕೆ ಹಾಕಲಾಗುತ್ತದೆ. ಈ ದೀಪವನ್ನು ಜಾತ್ರೆ ಮುಗಿಯುವರೆಗೆ ಆರದಂತೆ ಈ ಕುಲದ ವಂಶಸ್ಥರು ನೋಡಿಕೊಳ್ಳಬೇಕಾಗುತ್ತದೆ.

• ಕೋಣದ ಪಾಲು

ಈ ಊರಿನಲ್ಲಿ ಸತ್ತ ದನಗಳನ್ನು ಹಾಗೂ ರೋಗಕ್ಕೆ ತುತ್ತಾದ ದನಗಳನ್ನು ಕೊಯಲು ಪ್ರತ್ಯೇಕವಾಗಿ ಊರಿನ ಹೊರಭಾಗದಲ್ಲಿ "ಸಳ್ಳೆಬಂಡೆ"ಯನ್ನು ಮಾಡಿಕೊಂಡಿರುತ್ತಾರೆ. ಅ ಸಳ್ಳೆಬಂಡೆಗೆ ಬಲಿ ಕೊಟ್ಟ

ಕೋಣವನ್ನು ತೆಗೆದುಕೊಂಡು ಹೋಗಿ ಎಂಟು ಜನ ಯಜಮಾನರು ಅ ಕೋಣದ ಮಾಂಸವನ್ನು ಬೇರ್ಪಡಿಸಿ ಎಂಟು ಪಾಲುಗಳನ್ನು ಹಾಕುತ್ತಾರೆ. ಒಂದೊಂದು ಪಾಲನ್ನು ತೆಗೆದುಕೊಂಡು ಹೋಗುತ್ತಾರೆ. ನಂತರ ಅವರವರ ಅನುಕೂಲಕ್ಕೆ ತಕ್ಕಂತೆ ಮರಿ, ಕೋಣ, ಕೋಳಿ, ಹಸು, ಆಡು, ಕುರಿಗಳನ್ನು ಬಲಿ ಕೊಡುವ ನಿಯಮವಿದೆ. ಅದರ ಮಾಂಸದ ಅಡುಗೆಯನ್ನು ಸಂಬಂಧಿಕರ ಜೊತೆಗೆ ಸೇವಿಸುತ್ತಾರೆ.

• ಗಾವು ಸಿಗಿಯುವುದು

ದೇವರು ಕುಳಿತಿರುವ ಗುಡಿಯ ಮುಂಭಾಗದಲ್ಲಿ ಈ ಆಚರಣೆ ಮಾಡುತ್ತಾರೆ. ಪಕ್ಕದ ರಾಯಾಪುರದಲ್ಲಿ ಇರುವ ಬೇಡ ಸಮುದಾಯದವರು ಗಾವು ಸಿಗಿಯುತ್ತಾರೆ. ಜಾತ್ರೆಯ ದಿನ ಪೋತರಾಜರನ್ನು ತಮಟೆ ಮತ್ತು ಉರುಮೆಯ ಮೂಲಕ ಮೆರವಣಿಗೆಯಲ್ಲಿ ಕರೆದುಕೊಂಡು ಬರುತ್ತಾರೆ. ಗಾವು ಸಿಗಿಯಲು ಗೌಡರು ಕೊಟ್ಟ ಒಂದೇ ಬಣ್ಣವನ್ನು ಹೊಂದಿರುವ ಮೇಕೆಯನ್ನು ಕೊಡುತ್ತಾರೆ. ಸಂಜೆ ನಾಲ್ಕು ಗಂಟೆಗೆ ಗಾವು ಸಿಗಿಯುವ ಆಚರಣೆ ಪ್ರಾರಂಭವಾಗುತ್ತದೆ. ಸುಮಾರು ಐದರಿಂದ ಏಳು ಪೋತರಾಜರು ಬಂದಿರುತ್ತಾರೆ. ಅವರಲ್ಲಿ ಯಾರು ಪ್ರಾವೀಣ್ಯತೆಯನ್ನು ಹೊಂದಿರುವವರನ್ನು ಗಾವು ಸಿಗಿಯಲು ಕಳುಹಿಸುತ್ತಾರೆ. ಉಳಿದವರು ತಮಟೆ ಮತ್ತು ಉರುಮೆ ವಾದ್ಯಕ್ಕೆ ಹೆಜ್ಜೆ ಹಾಕುತ್ತಾ ಕುಣಿಯುತ್ತಾರೆ. ಪೋತರಾಜ ಮೇಕೆಯ ಕಿವಿಯಲ್ಲಿ ಮಂತ್ರ ಹೇಳಿ. ಹೀಗೆ ಇಡೀ ಮೇಕೆಯ ತಲೆಯ ಭಾಗದ ಚರ್ಮವನ್ನು ಕಿತ್ತು ಗಾವಿನ ಗುಂಡಿಯಲ್ಲಿ ಹಾಕುತ್ತಾನೆ. ಉಳಿದ ಭಾಗವನ್ನು ಗುಂಡಿಯಲ್ಲಿ ಹಾಕಿ ಮುಚ್ಚಿ ಗುಂಡಿಗೆ ಪೂಜೆ ಮಾಡುತ್ತಾರೆ.

• ದೇವಿಯ ಮೆರವಣಿಗೆ

ಕಣೆಮೆ ದುರುಗಮ್ಮನ ಜಾತ್ರೆಯ ಮೆರವಣಿಗೆಯು ಅತ್ಯಂತ ಸಂಭ್ರಮದಿಂದಿರುತ್ತದೆ. ನಾಲ್ಕು ಚಕ್ರಗಳಿಂದ ತಯಾರಿಸಿದ ದುರುಗಮ್ಮನ ರಥವನ್ನು ಮುಖ್ಯ ಬೀದಿಗಳಲ್ಲಿ ಮೆರವಣಿಗೆಗೆ ಕರೆದುಕೊಂಡು ಹೋಗುತ್ತಾರೆ. ಹೋಗುವ ಸಂದರ್ಭದಲ್ಲಿ ಪ್ರತಿ ಹೆಜ್ಜೆಗೂ ನಿಂಬೆಹಣ್ಣು, ಓಕುಳಿ ನೀವಾಳಿಸಿ ಚೆಲ್ಲುತ್ತಾರೆ. ರಾವು ಇರುವ ಜಾಗಕ್ಕೆ ಬಲಿಮರಿಗಳನ್ನು ಕಡಿಯುತ್ತಾರೆ. ಪ್ರತಿಯೊಂದು ಮನೆಯವರು ದೇವರಿಗೆ ನೀರು ಹಾಕಿ ಮನೆಗೆ ಕರಿಸಿ ಹಣ್ಣುಕಾಯಿ (ಕೆಲವರು ಸೀರೆ, ಕುಬುಸ, ಬೆಳೆ, ಬೆಲ್ಲವನ್ನು) ಕೊಟ್ಟು ಪೂಜೆ ಮಾಡಿಸುತ್ತಾರೆ. ಮೆರವಣಿಗೆಯಾದ ಮೇಲೆ ಊರಿನ ಹೊರಭಾಗದಲ್ಲಿ ಇರುವ ಕಣಿಮೆ ದುರುಗಮ್ಮನ ಗುಡಿಯಲ್ಲಿ ಗುಡಿ ತುಂಬಿಸುತ್ತಾರೆ.

ಹೆಸರೇ ಸೂಚಿಸುವಂತೆ ಕಣೆಮೆ ಎಂದರೆ ಎತ್ತರದ ಪ್ರದೇಶದಲ್ಲಿ ಹಾಗೂ ಹೆಚ್ಚು ಕಾಡು ಇರುವ ಪ್ರದೇಶ ಇಲ್ಲಿ ಈ ದೇವರ ಗುಡಿಯನ್ನು ಸ್ಥಾಪಿಸಿದ್ದಾರೆ. ಕಾರಣ ಕಾಡು ನಾಶವಾಗಬಾರದು ಭೂತಗಳು ನಮ್ಮನ್ನು ಕಾಡಬಾರದು. ಈ ರೀತಿಯಾದ ರಕ್ಷಣೆ ಮಾಡುವ ಉದ್ದೇಶದಿಂದ ಊರ ಹೊರಗಡೆ ಗುಡಿಯನ್ನು ನಿರ್ಮಿಸಿದ್ದಾರೆ.

ಗ್ರಾಮೀಣ ಭಾಗದಲ್ಲಿ ಅತ್ಯಂತ ಭಯ-ಭಕ್ತಿ ಮತ್ತು ಸಡಗರದಿಂದ ಈ ಜಾತ್ರೆಯನ್ನು ಆಚರಿಸುತ್ತಿದ್ದರು. ಗ್ರಾಮದ ಶಕ್ತಿ ದೇವತೆಯಾಗಿ ಹಾಗೂ ಗ್ರಾಮದ ಫಲಶಕ್ತಿಗೆ ರಕ್ಷಣೆಯಾಗಿ ದೈವಗಳ ನೆರವು

ಪಡೆಯುತ್ತಿದ್ದರು. ಆದರೆ ಪರಿಸ್ಥಿತಿ ಈಗ ಬದಲಾಗಿದೆ, ಹಿರಿಯ ತಲೆಮಾರಿನವರು ಹೆಚ್ಚು ಮರಣ ಹೊಂದಿದ ಕಾರಣಕ್ಕೆ ಈ ಜಾತ್ರೆಯಲ್ಲಿ ನಡೆಯುವ ಅನೇಕ ಆಚರಣೆಗಳು ನಿಂತು ಹೋಗಿವೆ. ಈ ಜಾತ್ರೆಯ ಸುಮಾರು ೧೦–೧೫ ವರ್ಷಗಳ ಕಾಲ ನಡೆದಿರುವುದಿಲ್ಲ ಎಂದು ವಕ್ತೃಗಳು ಹೇಳುತ್ತಾರೆ. ಆದ್ದರಿಂದ ಗ್ರಾಮಗಳಲ್ಲಿ ಸಾಮರಸ್ಯ, ಸಹಕಾರ, ಸ್ನೇಹ ಸಂಬಂಧವನ್ನು ಬೆಳೆಸುವುದರ ಮೂಲಕ ಮತ್ತೆ ಸಾಂಪ್ರದಾಯಿಕ ಮಹತ್ವವನ್ನು ಪಡೆದುಕೊಂಡಿರುವ ಆಚರಣೆಗಳನ್ನು ಪ್ರಾರಂಭಿಸುವುದರ ಮೂಲಕ ಮಹತ್ವವಾದ ಬದಲಾವಣೆಯನ್ನು ತರಬಹುದು.

೫.೩.೨.೮ ಗೌರ ಸಮುದ್ರ ಮಾರಮ್ಮನ ಜಾತ್ರೆ

ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕಿನ ಗೌರಸಮುದ್ರದಲ್ಲಿ ನಡೆಯುವ ಜಾತ್ರೆ ಕರ್ನಾಟಕದಲ್ಲಿ ಹೆಚ್ಚು ಪ್ರಸಿದ್ಧಿಯಾಗಿದೆ. ಐತಿಹಾಸಿಕವಾಗಿ ಮತ್ತು ಧಾರ್ಮಿಕವಾಗಿ ಈ ಗ್ರಾಮ ಬಹಳ ಮಹತ್ವ ಪಡೆದುಕೊಂಡಿದೆ. ಗೌರ ಸಮುದ್ರದಿಂದ ೨ ಕಿ.ಮಿ. ದೂರದಲ್ಲಿ ಇರುವ ತುಮ್ಮಲು ಎಂಬ ಸ್ಥಳದಲ್ಲಿ ಜಾತ್ರೆ ನಡೆಯುತ್ತದೆ. ಈ ಜಾತ್ರೆ ಪ್ರತಿವರ್ಷ ಬಾದ್ರಪದ ತಿಂಗಳಲ್ಲಿ ನಡೆಯುತ್ತದೆ. ಗೌರಸಂದ್ರ ಮಾರಮ್ಮನ ಜಾತ್ರೆ ನಡೆಸಿದ ನಂತರ ಚಿತ್ರದುರ್ಗ ಜಿಲ್ಲೆಯ ಎಲ್ಲ ಊರುಗಳಲ್ಲಿ ಗೌರಸಂದ್ರ ಮಾರಮ್ಮನ ಹಬ್ಬವನ್ನು ಮಾಡುತ್ತಾರೆ. ಗೌರಸಂದ್ರ ಇಡೀ ಮಾದಿಗರ ಹಟ್ಟಿಗೆ ಸೇರಿದ ಕುಲದೇವತೆ ಮಾತಂಗಿ. ಮಾತಂಗಿಯು ಗೌರಸಂದ್ರದ ಮಾರಮ್ಮನ ತಂಗಿ ಎಂದು ಭಾವಿಸಿ ಆರಾಧಿಸುವ ಸಂಪ್ರದಾಯ ಇಲ್ಲಿದೆ. ಗೌರಸಂದ್ರದ ಮಾರಮ್ಮನಿಗೆ ಪಟ್ಟದ ಕೋಣವನ್ನು ಬಲಿ ಕೊಟ್ಟ ನಂತರ ಇಲ್ಲಿನ ಮಾದಿಗರ ಹಟ್ಟಿಯಲ್ಲಿರುವ ಮಾತಂಗಿಗೆ ಘಟೆಯನ್ನು ಹೊತ್ತು ತರುತ್ತಾರೆ. ಈ ಎರಡು ದೇವರುಗಳನ್ನು ಜಾತ್ರೆಯ ದಿವಸ ತುಮ್ಮಲಕ್ಕೆ ಕರೆದುಕೊಂಡು ಹೋಗುತ್ತಾರೆ.

ಗೌರಸಂದ್ರ ಮಾರಮ್ಮನಿಗೆ ಗೌರಸಮುದ್ರ ಗ್ರಾಮದಲ್ಲಿ ಭವ್ಯವಾದ ದೇವಸ್ಥಾನವಿದೆ. ಬಹು ಹಿಂದೆ ಈ ಮಾರಿಗುಡಿಯು ಹುಲ್ಲುಗುಡಿಸಿಲಾಗಿದ್ದು. ಮಾರಿಯಮ್ಮಳನ್ನು ಪೆಟ್ಟಿಗೆಯಲ್ಲಿರಿಸಿ ಪೂಜಿಸಲಾಗುತ್ತಿತ್ತು. ಎಂದು ಗೌರಸಂದ್ರ ಮಾರಮ್ಮನ ಪೂಜಾರಿ ಹೇಳುತ್ತಾನೆ. ಗ್ರಾಮದಲ್ಲಿ ಹೆಚ್ಚು ಮಾದಿಗರು ಹೇಳುವ ಪ್ರಕಾರ ಗೌರಸಮುದ್ರ ಪೂರ್ವಕಾಲದಲ್ಲಿ ಪಾವಗಡ ಬಳಿಯ ನಿಡುಗಲ್ಲು ಸಂಸ್ಥಾನದ ದೊರೆಗಳ ಆಳ್ವಿಕೆಗೆ ಸೇರಿತ್ತು. ಆಗಿನಿಂದಲೂ ಗೌರಸಮುದ್ರ ಮಾರಮ್ಮನ ಜಾತ್ರೆ ನಡೆಸಲು ಹುತ್ತಕ್ಕೆ 'ಮೀಸಲು ಹಾಲು ಕಾವಡಿ' ಎರೆಯುವ ಸಂಪ್ರದಾಯ ಪ್ರಾರಂಭವಾಗಿತ್ತು. ಹಾಗೆಯೇ ಹಂಪಿಯ ಮಾತಂಗಿ ಪರ್ವತದಿಂದ ಮಾತಂಗಿ ಬಂದಳು. ಆದ್ದರಿಂದ ಗೌರಸಂದ್ರ ಮಾರಮ್ಮನ ಗುಡಿಯ ಎದುರಿಗೆ ಮಾತಂಗಿಯ ಪೌಳಿಯಿದೆ. ಹಂಪಿಯಲ್ಲಿರುವ ಮಾತಂಗಿಗೆ ಪೂಜೆ ಮಾಡಿದ ನಂತರವಾಗಿ ಗೌರಸಂದ್ರದಲ್ಲಿ ಇರುವ ಮಾತಂಗಿಗೆ ಪೂಜೆಯನ್ನು ಮಾಡುತ್ತಾರೆ.

ಅದರಲ್ಲಿ ವಿಶೇಷವಾಗಿ ಈ ಜಾತ್ರೆಗೆ ಹೆಚ್ಚಿನ ಸಂಖ್ಯೆಯಲ್ಲಿ ಮಾದಿಗ ಮತ್ತು ಹೊಲೆಯ ಸಮುದಾಯದವರು ಬಂದು ಸೇರುತ್ತಾರೆ. ಈ ಜಾತ್ರೆಗೆ ಕರ್ನಾಟಕವಲ್ಲದೆ ಆಂಧ್ರಪ್ರದೇಶ, ತಮಿಳುನಾಡು ಮತ್ತು ಇತರೆ ರಾಜ್ಯಗಳಿಂದ ಸುಮಾರು ೩೦ ರಿಂದ ೩೫ ಸಾವಿರ ಜನಸಂಖ್ಯೆ ಸೇರುತ್ತಾರೆ" ಈ

ಎರಡು ಸಮುದಾಯಗಳಿಗೆ ಕುಲದೇವತೆಯಾಗಿ ಮತ್ತು ಹಲವಾರು ಪಾಳೆಗಾರರ ಇತಿಹಾಸದಲ್ಲಿ ಹೀಗೆ ಗೌರಸಮುದ್ರ ಮಾರಮ್ಮನ ವಿಷಯ ಪ್ರಸ್ತಾಪವಾಗಿದೆ. ಮಾದಿಗರ ಎತ್ತಪ್ಪ ಮತ್ತು ಪುರಾಣ ಕಥೆಗಳಲ್ಲಿ ಗೌರಸಂದ್ರ ಮಾರಕ್ಕನ ಪಾತ್ರ ಬಹು ಮುಖ್ಯವಾಗಿದೆ. ಮಾದಿಗ ಮತ್ತು ಹೊಲೆಯ ಸಮುದಾಯದ ಕಥೆ ಪುರಾಣಗಳಲ್ಲಿ ಗೌರಸಮುದ್ರ ಮಾರಕ್ಕ ಹೇಳುವ ಕೊರವಂಜಿ ವೇಷದಲ್ಲಿ ಪ್ರತ್ಯಕ್ಷಳಾಗುತ್ತಾಳೆ."[೨೩]

ಗೌರಸಂದ್ರ ಮಾರಮ್ಮ ಒಂದು ಪೆಟ್ಟಿಗೆ ದೇವತೆ ಈ ದೇವರನ್ನು ಒಂದು ವರ್ಷಕ್ಕೆ ಒಂದು ಬಾರಿ ಪೂಜಾರಿಯು ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಮೂಲವಸ್ತುಗಳನ್ನು ಸ್ವತಃ ತಾನು ಕೂಡ ನೋಡದೆ ಶುಚಿಗೊಳಿಸಿ ಪೆಟ್ಟಿಗೆಯಲ್ಲಿಯೇ ಇರಿಸಿ. ಜಾತ್ರೆಯ ದಿನ ಮೂರ್ತಿ ಮಾತ್ರ ಪೆಟ್ಟಿಗೆ ಕಟ್ಟಿ ಅದಕ್ಕೆ ಹೂವಿನಿಂದ ಅಲಂಕರಿಸಿ ಸುಮಾರು ಎರಡು ಗಂಟೆಯ ವೇಳೆ ಮಾರಮ್ಮ ತುಮ್ಮುಲಿಗೆ ಕರೆತರುವಾಗ ಸುತ್ತ ಮುತ್ತಲಿನಲ್ಲಿ ಬರುವ ರೈತಾಪಿ ಜನವರ್ಗ ಮತ್ತು ಹೊಲ ಗದ್ದೆಗಳಲ್ಲಿ ಬೆಳೆದಿದ್ದ ಬೆಳೆಗಳನ್ನು ಅದರಲ್ಲೂ ಈರುಳ್ಳಿ, ಕೋಳಿಮರಿ, ಬಾಳೆಹಣ್ಣು, ಬೆಲ್ಲ ತಂದು ದೇವಿಗೆ ತೂರುತ್ತಾರೆ. ವಿಶೇಷವಾಗಿ ಮಾದಿಗ ಸಮುದಾಯದವರು "ಚೂರು ಬೆಲ್ಲ" ಮಾರುತ್ತಾರೆ, ಅವುಗಳನ್ನು ಸಹ ಭಕ್ತರು ತೂರುತ್ತಾರೆ. ಚೆಲ್ಲಿದ ಈರುಳ್ಳಿ, ಬೆಲ್ಲ, ಬಾಳೆಹಣ್ಣುಗಳನ್ನು ಆರಿಸಿಕೊಂಡು ಅಲ್ಲೇ ಸೇವಿಸುತ್ತಾರೆ. ಇನ್ನೂ ಕೆಲವರು ಮನೆಗೆ ತೆಗೆದುಕೊಂಡು ಹೋಗಿ ಮನೆಯ ತೊಲೆಗೆ ಕಟ್ಟುತ್ತಾರೆ. ಈ ರೀತಿ ತೂರುವುದರಿಂದ, ಹೊಲದಲ್ಲಿ ಬೆಳೆದಿರುವಂಥ ಫಸಲು ಚೆನ್ನಾಗಿ ಬರಲಿ, ಕೌಟುಂಬಿಕ ಕಲಹಗಳು ಕಡಿಮೆಯಾಗಲಿ, ಭೂತಗಳ ತೊಂದರೆಯನ್ನು ಕಡಿಮೆ ಮಾಡಲಿ ಎನ್ನುವ ಉದ್ದೇಶ ಇವುಗಳನ್ನು ದೇವಿಗೆ ತೂರುತ್ತಾರೆ. ಈ ರೀತಿಯಾಗಿ ಮೆರವಣಿಗೆಯ ಮೂಲಕ ಪೌಳಿಯ ಒಳಗೆ ದೇವರ ಕರೆದುಕೊಂಡು ಬಂದು ಕರಿ ಕಂಬಳಿ ಗದ್ದಿಗೆ ಹಾಕಿ ಕೂರಿಸುತ್ತಾರೆ. ಮ್ಯಾಸಬೇಡ ಸಮುದಾಯದವರು ಮಾರಮ್ಮನಿಗೆ ಪೂಜೆಯನ್ನು ಮಾಡುತ್ತಾರೆ. ಮಾರಮ್ಮನ ಪೌಳಿಯ ಎದುರಿಗೆ ಮಾತಂಗಿ ದೇವರನ್ನು ಕೂರಿಸಿರುತ್ತಾರೆ. ಈ ದೇವರಿಗೆ ಮಾದಿಗ ಸಮುದಾಯದ ಲಿಂಗಪ್ಪ ಪೂಜೆ ಮಾಡುತ್ತಾನೆ.

ಗೌರಸಂದ್ರ ಮಾರಮ್ಮಗೆ ಹರಕೆಯನ್ನು ಹೊತ್ತುಕೊಂಡು ಬಂದಿರುವ ಜನರು ಬೇವಿನ ಉಡುಗೆ ಉಟ್ಟು ಅರೆಬೆತ್ತಲೆ ಸೇವೆ ಮಾಡುತ್ತಾರೆ. ಬಾಯಿಬೀಗ, ದಿಂಡುಳ್ಳಿ, ಹಿಟ್ಟಿನಾರತಿ ಮೊದಲಾದ ಸೇವೆಗಳನ್ನು ಸಲ್ಲಿಸಿ ಪೌಳಿ ಸುತ್ತ ಪ್ರದಕ್ಷಿಣೆ ಹಾಕುತ್ತಾರೆ. ಸುಮಾರು ನಾಲ್ಕೈದು ಲಾರಿಯಷ್ಟು ಬೇವಿನ ಸೊಪ್ಪು ಬಿದ್ದಿರುತ್ತದೆ. "ಹೊಸ ಮಣ್ಣಿನ ಮಡಿಕೆಯಲ್ಲಿ ಈಚಲು ಹೆಂಡವನ್ನು ತುಂಬಿಕೊಂಡು 'ಘಟಿ' ಪೂಜೆ ಮಾಡಿ ಮಾರಮ್ಮನಿಗೆ ಅರ್ಪಿಸುತ್ತಾರೆ. ಹೆಂಡವನ್ನು ಹಾಲು ಎಂದು ಕರೆಯುತ್ತಾರೆ. ಸಾವಿರಾರು ಕುರಿ, ಕೋಣ, ಮೇಕೆಗಳನ್ನು ಇದೇ ಸಂದರ್ಭದಲ್ಲಿ ಮಾರಮ್ಮನಿಗೆ ಬಲಿ ಕೊಟ್ಟು ಮಾಂಸದ ಅಡುಗೆ ಮಾಡಿ ಜಾತ್ರೆಯಲ್ಲಿ ಊಟ ಮಾಡುತ್ತಾರೆ. ಬೇರೆ ಸಮುದಾಯದವರು ಹೋಳಿಗೆ, ಹುಗ್ಗಿ, ಅನ್ನ ಮೊದಲಾದ ಸಿಹಿ ಪದಾರ್ಥಗಳನ್ನು ದೇವರಿಗೆ ಎಡೆ ಹಾಕಿ ಊಟ ಮಾಡುತ್ತಾರೆ. ಮಾದಿಗರು ಮತ್ತು ಹೊಲೆಯ ಸಮುದಾಯದವರು ಮಾತ್ರ ಕುರಿ, ಕೋಣ, ಮೇಕೆಗಳನ್ನು ಮಾತ್ರ ಕಡಿಯುತ್ತಾರೆ.

ಕೋಳಿಯನ್ನು ಕಡಿಯುವುದಿಲ್ಲ. ಅದನ್ನು ಕೊಯ್ದು ತಿನ್ನುತ್ತಾರೆ. ಊಟವೆಲ್ಲ ಮುಗಿದ ಮೇಲೆ ಸುತ್ತ ಮುತ್ತಲಿನಿಂದ ಎತ್ತಿನ ಬಂಡಿಯಲ್ಲಿ ಬಂದಿರುವ ಜನರು ಸಂಜೆ ೩-೮ ಗಂಟೆಗೆ ಬಂಡಿ ಕಟ್ಟಿಕೊಂಡು ಮನೆಗಳಿಗೆ ತೆರಳುತ್ತಾರೆ. ಒಂದೇ ವೇಳೆ ರಾತ್ರಿ ಅಲ್ಲೇ ಉಳಿದರೆ ಎದೆ ಒಡೆದು ಸಾಯುತ್ತಾರೆಂದು ಇಲ್ಲಿಯ ಜನರ ನಂಬಿಕೆಯಾಗಿದೆ. ಬಳೆಗಾರನೊಬ್ಬ ಮಾರಮ್ಮ ಜಾತ್ರೆ ನಡೆದಾಗ ಆ ದಿನ ರಾತ್ರಿ ಮರಹತ್ತಿ ಕುಳಿದು ತುಮ್ಮುವಿನಲ್ಲಿ ಉಳಿದಕೊಂಡನಂತೆ. ಮಧ್ಯರಾತ್ರಿ ಸಮಯದಲ್ಲಿ ಆರ್ಭಟಿಸುತ್ತ ಬಂದ ಮಾರಿಯ ರೌದ್ರಾವತಾರ ನೋಡಿ ರಕ್ತಕಾರಿ ಮರದಿಂದ ಕೆಳಗೆ ಬಿದ್ದು ಸತ್ತನೆಂದು ಆತನ ಸಮಾಧಿ ಕಟ್ಟೆ ಮತ್ತು ಮರವನ್ನು ಈಗಲೂ ತೋರಿಸುತ್ತಾರೆ. ಅದಕ್ಕಾಗಿ ಈ ದೇವರು ತಮ್ಮಗೆ ಹೋಗುವಾಗ ಬಳೆಗಾರನ ಕಟ್ಟೆ ಹತ್ತಿರ ಗದ್ದಿಗೆ ಮಾಡಿ ಹೊರಡುವ ಪದ್ಧತಿ ಇದೆ.

ಈ ಕಥೆಗೆ ಸಾಕ್ಷಿ ಎಂಬಂತೆ ಬಳೆಗಾರನ ಗುಡ್ಡೆ ಇದೆ. ಈ ಜಾತ್ರೆಯಲ್ಲಿ ಹಲವಾರು ಬುಡಕಟ್ಟು ಸಮುದಾಯಗಳು ಭಾಗಿಯಾಗಿ ತಮ್ಮ ಕಲೆಯನ್ನು ಪ್ರದರ್ಶನವನ್ನು ಮಾಡುತ್ತಾರೆ. ಈ ಜಾತ್ರೆಯು ಕೆಲವು ಗಂಟೆಗಳಲ್ಲಿ ಮುಗಿದು ಹೋಗುತ್ತದೆ. ಸಂಜೆ ವೇಳೆ ಗೌರಸಮುದ್ರದಲ್ಲಿ ಇರುವ ಗುಡಿ ಒಳಗೆ ದೇವರನ್ನು ತುಂಬಿಸಿಕೊಳ್ಳುತ್ತಾರೆ. ಬುಧವಾರ ಗೌರಸಮುದ್ರ ಮಾರಮ್ಮ ಸಿಡಿ ನಡೆಯುತ್ತದೆ. ಗುರುವಾರ ಓಕುಳಿ ಉತ್ಸವಗಳು ಊರಿನಲ್ಲಿ ಬಹಳ ವಿಜೃಂಭಣೆಯಿಂದ ನಡೆಯುತ್ತದೆ. ವಿಶೇಷವೆಂದರೆ ಗೌರಸಮುದ್ರ ಜನರು ಈ ಜಾತ್ರೆಯ ದಿನ ಯಾವುದೇ ಪ್ರಾಣಿಗಳನ್ನು ಬಲಿ ಕೊಡುವುದಿಲ್ಲ. ಆದರೆ ತಿಂಗಳ ಕಳೆದ ನಂತರ ಮರಿ ಪರಿಷೆಯಲ್ಲಿ ಅಥವಾ ತಿಂಗಳ ಪರಿಷೆಯಲ್ಲಿ ಮಾಂಸದ ಆಹಾರವನ್ನು ಸೇವಿಸುತ್ತಾರೆ. ಈ ಜಾತ್ರೆಗೆ ಇವರ ಸಂಬಂಧಿಕರು ಬಂದಿರುತ್ತಾರೆ. ಅವರಿಗೆ ಅಂದಿನ ದಿನ ಮದ್ಯಪಾನ, ಮಾಂಸದ ಊಟವನ್ನು ಮಾಡಿಸುವುದು ರೂಢಿಗತವಾಗಿ ಬೆಳೆದುಕೊಂಡು ಬಂದಿದೆ.

ಕರ್ನಾಟಕದಲ್ಲಿ ಹೆಸರು ಪಡೆದುಕೊಂಡಿರುವ ಗೌರಸಂದ್ರ ಮಾರಮ್ಮನ ಜಾತ್ರೆಯ ಆಚರಣೆಯಲ್ಲಿ ಅನೇಕ ಬದಲಾವಣೆಗಳು ಆಗಿವೆ. ಹಿಂದೆ ರೈತರು ಬೆಳೆದಿರುವ ಆಹಾರ ಧಾನ್ಯಗಳು ಹಾಗೂ ವಾಣಿಜ್ಯ ಬೆಳೆಗಳನ್ನು ಮೊದಲನೇ ಬಾರಿ ದೇವರಿಗೆ ಅರ್ಪಿಸುತ್ತಿದ್ದರು. ವ್ಯವಸಾಯ ಪ್ರಧಾನತೆಯನ್ನು ಪಾಲಿಸಿಕೊಂಡು ಬಂದಿರುವುದರ ಸಲುವಾಗಿ ಈ ಜಾತ್ರೆಯಲ್ಲಿ ಪೂಜೆಗೆ ಬಳಸುತ್ತಿದ್ದರು. ಪ್ರತಿವರ್ಷ ಅಕ್ಕ-ಪಕ್ಕ ಊರಿನ ಜನರು ಬಂಡಿ ಎತ್ತುಗಳನ್ನು ಶೃಂಗರಿಸಿಕೊಂಡು ಜಾತ್ರೆಗೆ ಬರುತ್ತಿದ್ದರು. ಇವತ್ತು ಮಳೆ ಬೆಳೆ ಪ್ರಮಾಣ ಕಡಿಮೆಯಾಗಿರುವುದರಿಂದ ದನಕರುಗಳನ್ನು ರಕ್ಷಿಸುವುದೇ ಕಷ್ಟದ ಕೆಲಸವಾಗಿದೆ. ಅದರ ಬದಲಾಗಿ ಟ್ರಾಕ್ಟರ್, ಆಟೋ, ಬಸ್ಸು ಸೌಲಭ್ಯಗಳಿರುವುದರಿಂದ ಅವರವರ ಅನುಕೂಲಕ್ಕೆ ತಕ್ಕಂತೆ ಬರುತ್ತಾರೆ. ಈ ಜಾತ್ರೆ ಮುಗಿದ ನಂತರ ಚಿತ್ರದುರ್ಗದಲ್ಲಿ ಅತಿಹೆಚ್ಚು ಈ ದೇವರನ್ನು ಆರಾಧಿಸುವ ಸ್ಥಳಗಳಿರುವುದರಿಂದ ಅಲ್ಲಿಯೇ ಕೋಣ, ಕುರಿ, ಕೋಳಿ ಬಲಿ ಕೊಟ್ಟು ಅಲ್ಲೇ ಪೂಜೆಯನ್ನು ಮಾಡುತ್ತಾರೆ. ಆದ್ದರಿಂದ ಇಲ್ಲಿ ಬರುವವರ ಪ್ರಮಾಣ ಸ್ವಲ್ಪ ಕಡಿಮೆಯಾಗಿದೆ.

೫.೩.೨.೯ ಚಿನ್ನೋಬನಹಳ್ಳಿಯ ಕಂಚಿ ಓಬಳೇಶ್ವರ ಜಾತ್ರೆ

ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲೂಕಿನ ಚಿನ್ನೋಬನಹಳ್ಳಿಯಲ್ಲಿ ಮಾದಿಗರ ಆರಾಧ್ಯ ದೈವವಾದ ಕಂಚಿ ಓಬಳೇಶ್ವರ ದೇವಾಲಯವಿದೆ. ಈ ದೇವರನ್ನು ಹಲವಾರು ಹೆಸರಿನಿಂದ

ಕಲೆಯಲಾಗುತ್ತದೆ. ಕೆಂಚಪ್ಪ, ಕಂಚಿ ಓಬಳೇಶ್ವರ, ಓಬಳಪ್ಪ, ಓಬಳೇಶ್ವರ, ಓಬಳದೇವರು ಎಂದೆಲ್ಲ ಸಂಬೋಧಿಸುತ್ತಾರೆ. ಗುಡಿಯಲ್ಲಿರುವುದು ಪೆಟ್ಟಿಗೆ ದೇವರು. ಈ ಸಮುದಾಯದಲ್ಲಿ ಸಾಮಾನ್ಯವಾಗಿ ಪೆಟ್ಟಿಗೆ ದೇವರುಗಳನ್ನೇ ಪೂಜಿಸುತ್ತಾರೆ. ಈ ದೇವರ ಜಾತ್ರೆಯು ಪ್ರತೀ ವರ್ಷ ಫೆಬ್ರವರಿ ತಿಂಗಳ ಎರಡನೇ ವಾರದಲ್ಲಿ ಮೂರು ದಿನಗಳ ಕಾಲ ಜರುಗುತ್ತದೆ. ಮಾದಿಗರು ಬಹುಮುಖ್ಯವಾಗಿ ಈ ದೇವರನ್ನು ಕೇಂದ್ರವನ್ನಾಗಿ ಮಾಡಿಕೊಂಡಿದ್ದಾರೆ. ಈ ದೇವರು ಚಿನ್ನೋಬನಹಳ್ಳಿ, ಉಡೇವುದ(ಹುಡೇಂ), ಚೌಳಕೆರೆ ಮತ್ತು ಏಳು ಊರಿನ ಅಣ್ಣ-ತಮ್ಮಂದಿರು ಸಂಬಂಧದಲ್ಲಿ ಪ್ರತಿನಿಧಿಕರಣವನ್ನು ಗುರುತಿಸಿಕೊಳ್ಳುತ್ತಾರೆ. ಈ ದೇವರನ್ನು ಮೂಲತಃ ಹುಲ್ಲಿನ ಗುಡಿಸಲಿನಲ್ಲಿಟ್ಟೇ ಪೂಜಿಸಲಾಗುತ್ತಿತ್ತು. ಇಪ್ಪತ್ತು-ಮೂವತ್ತು ವರ್ಷಗಳ ಹಿಂದೆ ಚಿನ್ನೋಬನಹಳ್ಳಿಯಲ್ಲಿ ಗುಡಿ ನಿರ್ಮಾಣ ಮಾಡಿ ಪೂಜೆ ಮಾಡುತ್ತಿದ್ದರು. ಈ ದೇವರ ಮೂಲ ಗುಡಿ ನಾಯಕನಹಟ್ಟಿ ಸಮೀಪದ ದೇವರಹಳ್ಳಿಯಲ್ಲಿದೆ. ಹುಲ್ಲಿನ ಗುಡಿಸಲಿನಲ್ಲಿ ಇದ್ದ ದೇವರಿಗೆ ಇತ್ತೀಚೆಗೆ ಕಾಂಕ್ರೀಟ್ ದೇವಸ್ಥಾನವನ್ನು ನಿರ್ಮಾಣ ಮಾಡಿದ್ದಾರೆ.

ಇಲ್ಲಿನ ಹಿರಿಯರು ಹೇಳುವ ಪ್ರಕಾರ ಕಂಪಳದೇವರಹಟ್ಟಿಯಲ್ಲಿ ಒಂದೇ ದೇವರನ್ನು ಪೂಜಿಸುತ್ತಿದ್ದರು. ಕೆಲವು ಸಣ್ಣಪುಟ್ಟ ಸಮಸ್ಯೆಗಳಿಂದ ಪ್ರತ್ಯೇಕವಾಗಿ ದೇವರನ್ನು ತೆಗೆದುಕೊಂಡು ಬಂದಿದ್ದೇವೆ ಎಂದು ಹೇಳುತ್ತಾರೆ. ಇಂದಿಗೂ ಮ್ಯಾಸಬೇಡರ ಸಂಸ್ಕೃತಿ, ಆಚಾರ-ವಿಚಾರಗಳನ್ನೇ ಓಲೈಕೆ ಮಾಡುವ ಅನೇಕ ಮೌಖಿಕ ಆಕರಗಳನ್ನು ತಿಳಿಸಿಕೊಡುತ್ತಾರೆ. ಉದಾ: ಚಿನ್ನೋಬನಹಳ್ಳಿ ಮಾದಿಗರಲ್ಲಿ ಎನುಮಲ (ಎಮ್ಮೆಗಳ) ಕುಲದವರು. ಇವರನ್ನು ಇವರೇ 'ಮ್ಯಾಸರು' ಎಂದು ಕರೆದುಕೊಳ್ಳುತ್ತಾರೆ. ಇವರ ಹೆಸರುಗಳಲ್ಲಿ ಮ್ಯಾಸಬೇಡರನ್ನು ಹೋಲಿಕೆ ಮಾಡುವ ರೀತಿಯಲ್ಲಿವೆ. ಬೋರಯ್ಯ, ಸಣ್ಣೋಬಯ್ಯ, ಮಾರಯ್ಯ, ದೊಡ್ಡಮಾರಯ್ಯ ಹೀಗೆ ಕರೆಯುತ್ತಾರೆ. ಮ್ಯಾಸಬೇಡರಲ್ಲಿ ಎನುಮಲ ಕುಲದವರು ಇಂತಹ ಹೆಸರುಗಳನ್ನು ಹೊಂದಿದ್ದಾರೆ.

ಈ ದೇವರಿಗೆ ಸೇರಿದ ಎನುಮಲ ಗೋತ್ರದ ವಂಶದವರು ಎಲ್ಲೇ ಇದ್ದರೂ ಈ ಜಾತ್ರೆಯು ನಡೆಯುವ ಸಂದರ್ಭದಲ್ಲಿ ಭಾಗಿಯಾಗುತ್ತಾರೆ. ಈ ಗುಡಿಕಟ್ಟೆಗೆ ಸಂಬಂಧಿಸಿದ ವಿಧಿವಿಧಾನಗಳಿಗೆ ಹಾಗೂ ಕೆಲವೊಂದು ಕಟ್ಟುಪಾಡುಗಳನ್ನು ಬಹಳ ಶ್ರದ್ಧೆಯಿಂದ ಆಚರಿಸಿಕೊಂಡು ಬಂದಿದ್ದಾರೆ. ಆಚರಣೆಗೆ ಸಂಬಂಧಿಸಿದ ವಿಚಾರಗಳಲ್ಲಿ ಎನುಮಲ ಕುಲದವರ ಪಾತ್ರ ಮುಖ್ಯ. ಈ ಜಾತ್ರೆಯಲ್ಲಿ ಪ್ರತಿಯೊಂದು ಕುಲದವರು ಭಾಗವಹಿಸುವ ಅವಕಾಶಗಳು ಇವೆ.

• ಗುಡಿಕಟ್ಟೆ

ಮಾದಿಗರು ಗುಡಿಕಟ್ಟೆಯನ್ನು ನ್ಯಾಯ ಕೇಂದ್ರವನ್ನಾಗಿ ಮಾಡಿಕೊಂಡಿದ್ದಾರೆ. ಈ ಸಮುದಾಯಕ್ಕೆ ಸಂಬಂಧಿಸಿದ ಯಾವುದೇ ಆಚರಣೆ, ವಿಧಿವಿಧಾನಗಳನ್ನು, ಸಮಸ್ಯೆಗಳು ಹಾಗೂ ಸಂಪ್ರದಾಯಗಳು ಗುಡಿಕಟ್ಟೆಯಲ್ಲಿ ತೀರ್ಮಾನವಾಗುತ್ತವೆ. ಇಂತಹ ಆಚರಣೆಗಳನ್ನು ಮೊದಲು ನಾಯಕನಹಟ್ಟಿ ಸಮೀಪದಲ್ಲಿ ಇರುವ ದೇವರಹಳ್ಳಿಯಲ್ಲಿ ಇತ್ತು. ಈಗ ಚಿನ್ನೋಬನಹಳ್ಳಿಯಲ್ಲಿ ದೇವಸ್ಥಾನವನ್ನು ನಿರ್ಮಿಸಿದ್ದಾರೆ. ಈ ದೇವರಿಗೆ ಪೂಜೆಯನ್ನು ಎನುಮಲರಿಗೆ ಸಂಬಂಧಿಸಿದ ಹಿರಿಯರು ಮಾಡುತ್ತಾರೆ. ಈ ಕಟ್ಟೆಮನೆಯ

ಮೂಲ ಚಿತ್ರದುರ್ಗ ಜಿಲ್ಲೆಯ ಗೊನೂರಿನಲ್ಲಿದೆ. ಇವತ್ತಿಗೂ ಪ್ರತಿ ವರ್ಷಕ್ಕೆ ಒಂದು ಬಾರಿ ದೇವರಿಗೆ ಹೋಗಿ ಪೂಜೆ ಮಾಡಿಸಿಕೊಂಡು ಬರುತ್ತಾರೆ.

• ಗುಡಿಕಟ್ಟೆಯ ಅಜ್ಜನವರ ಪಾತ್ರ

ಗುಡಿಕಟ್ಟೆನಲ್ಲಿ ಮೂವರು ಅಜ್ಜನವರು ವಿಶೇಷವಾದ ಜವಾಬ್ದಾರಿಯನ್ನು ನಿಭಾಯಿಸುತ್ತಾರೆ. ಯಾವುದೇ ಸಮಸ್ಯೆಗಳು, ಸಂಪ್ರದಾಯಗಳಿಗೆ ಸಂಬಂಧಿಸಿದಂತೆ ಅಂತಿಮ ನಿರ್ಧಾರಗಳನ್ನು ತೆಗೆದುಕೊಳ್ಳುವ ಸುಪ್ರೀಂ ಅಧಿಕಾರವನ್ನು ಈ ಕಟ್ಟೆಯಲ್ಲಿ ಅಜ್ಜನವರು ಹೊಂದಿರುತ್ತಾರೆ. ಇಂತಹ ಗುಡಿಕಟ್ಟೆಯಲ್ಲಿ ಮೂರು ಊರಿನ ಹಿರಿಯ ಯಜಮಾನರಾದ ಚಿನ್ನೋಬನಹಳ್ಳಿ ಅಜ್ಜ(ದೊಡ್ಡ ಅಜ್ಜ), (ಈತನೇ ಈ ಗುಡಿಕಟ್ಟೆಯ ಯಜಮಾನಿಕೆಯ ಕೇಂದ್ರಬಿಂದು) ಉಡೇವುದ(ಹುಡ್ಡೇಂ) ಅಜ್ಜ ಈತನೂ ಮಾಹಿತಿಯನ್ನು ತಿಳಿಸುವಂತವನೂ, ಚೌಳಕೆರೆ ಅಜ್ಜನವರು ಇವರು ಎಲ್ಲರನ್ನೂ ಸೇರಿಸುವ ಕೆಲಸವನ್ನು ನಿಭಾಯಿಸುತ್ತಾರೆ.

• ಯಜಮಾನಿಕೆ

ಗುಡಿಕಟ್ಟೆಯಲ್ಲಿ ಒಟ್ಟು ಮೂರು ಅಜ್ಜನವರಿಂದ ರಚನೆಯಾದ ಸಮಿತಿ ಇರುತ್ತದೆ. ಇದಕ್ಕೆ ಚಿನ್ನೋಬನಹಳ್ಳಿ ಅಜ್ಜನೇ ಮುಖ್ಯಸ್ಥನಾಗಿ ಕಾರ್ಯವನ್ನು ನಿಭಾಯಿಸುತ್ತಿದ್ದ. ಇತ್ತೀಚಿನ ದಿನಗಳವರೆಗೂ ಆ ಯಜಮಾನಿಕೆಗೆ ಮಹತ್ವವಿರಲಿಲ್ಲ. ಆದರೆ ಚಿನ್ನೋಬನಹಳ್ಳಿ ಆರು ಭಾಗದ ಜನರಲ್ಲಿ ಯಜಮಾನಿಕೆಯ ಬಗ್ಗೆ ಹುಟ್ಟಿಕೊಂಡ ವ್ಯಾಮೋಹ, ಅಧಿಕಾರದ ಅಸೆ ಹಾಗೂ ಅದಕ್ಕೆ ಇರುವ ಗೌರವದಿಂದ ಸುಮಾರು ಐದಾರು ವರ್ಷಗಳ ಕಾಲ ದೇವಸ್ಥಾನಕ್ಕೆ ಬೀಗ ಹಾಕಿಸಲಾಯಿತ್ತು. ಗ್ರಾಮದ ಸುತ್ತ ಏಳು ಹಳ್ಳಿಯ ಇತರೇ ಸಮುದಾಯದ ಯಜಮಾನರು ಬಂದು ನ್ಯಾಯ ತೀರ್ಮಾನ ಮಾಡುವಂತಾಯಿತು. ನಂತರ ಎಲ್ಲರೂ ಒಂದು ಅವಧಿಯಂತೆ ನಿರ್ಧರಿಸಿ, ಆರು ಜನ ಯಜಮಾನರಿಗೆ ಪ್ರತಿ ಅವಧಿಯಲ್ಲೂ ಒಬ್ಬೊಬ್ಬರಿಗೆ ಹಂಚಿಕೆಯಾಗುವಂತೆ ಕರಾರು ಮಾಡಿದೆ. ಹೀಗಾಗಿ ಪ್ರತಿವರ್ಷ ಜಾತ್ರೆಯನ್ನು ಏಳು ಹಳ್ಳಿಯ ಜನರು ಸೇರಿ ಮಾಡುತ್ತಾರೆ. ಅದಕ್ಕೆ ಅನುಗುಣವಾಗಿ ಎಲ್ಲರೂ ಚಾಚೂ ತಪ್ಪದೇ ಪಾಲಿಸಿಕೊಂಡು ಬರುತ್ತಿದ್ದಾರೆ.

• ಗುಡಿಕಟ್ಟೆಯ ಕಾರ್ಯವಿಧಾನಗಳು

ಗುಡಿಕಟ್ಟೆಯಲ್ಲಿ ಅದರದೇ ಆದ ಕಾರ್ಯವಿಧಾನಗಳನ್ನು ಪಾಲಿಸುತ್ತಾ ಬಂದಿದ್ದಾರೆ. ಅವುಗಳನ್ನು ಈ ಗುಡಿಕಟ್ಟೆಗೆ ಸೇರಿದ ಜನರು ಪಾಲಿಸಲೇಬೇಕು. ಒಂದುವೇಳೆ ಇದಕ್ಕೆ ವಿರೋಧವಾಗಿ ನಡೆದುಕೊಂಡರೆ ಊರಿನಿಂದ ಹೊರಹಾಕುವ ಮತ್ತು ತಪ್ಪಿಗೆ ಸರಿಹೊಂದುವಂತೆ ದಂಡವನ್ನು ಕಟ್ಟಿಸಿಕೊಳ್ಳುತ್ತಿದ್ದರು. ಅಂತವುಗಳೆಂದರೆ ಹೊಸದಾಗಿ ಮದುವೆಯಾಗುವ ವರನನ್ನು ಈ ದೇವಸ್ಥಾನಕ್ಕೆ ಸೋದರ ಮಾವನೊಂದಿಗೆ ಕರೆತಂದು, ದೇವರಿಗೆ ತೆರಿಗೆ ಕಟ್ಟಿ (ನಿಗದಿತ ಶುಲ್ಕ) ನೈವೇದ್ಯ ಮಾಡಿಸಿ ದೇವಸ್ಥಾನದ ಮುಂಭಾಗದಲ್ಲಿ ಸಿದ್ಧಪಡಿಸಿದ ಕುರಿಪಿಚ್ಚಿಗೆಯ ಮೂರು ಕುಪ್ಪೆ ಮತ್ತು ಅಡ್ಡಲಾಗಿ ಒನಕೆಯ ಇಟ್ಟು

ಅದರ ಮೇಲೆ ಮದುಮಗನನ್ನು ಕೂರಿಸಿ ಆತನ ಸುತ್ತ ನಾಲ್ಕು ಮಗ್ಗಿಗಳನ್ನು (ಮಣ್ಣಿನಿಂದ ಮಾಡಿದ ಚಿಕ್ಕ ಚಿಕ್ಕ ಮಡಿಕೆಗಳು) ನೀರಿನಿಂದ ತುಂಬಿ ಇಟ್ಟು, ಅವುಗಳಿಗೆ ದಾರದಿಂದ ಸುತ್ತುವರಿದು, ಮೊದಲಿಗೆ ಸೋದರಮಾವನು ವೀಳ್ಯದೆಲೆ ಎಲೆ ಮತ್ತು ರೆಂಪಿಗೆಯಿಂದ (ಚರ್ಮವನ್ನು ಕೊಯಲು ಬಳಸುವ ಕಬ್ಬಿಣದ ವಸ್ತು) ಕಾಲುಶನಿ, ಕೈಶನಿ ತೆಗೆಯುತ್ತಾನೆ. ನೀರು ಹಾಕಿದ ನಂತರ ಪೂಜಾರಿಯು ದೇವರಿಗೆ ನೈವೇದ್ಯ ಮಾಡಿದ ತೀರ್ಥ, ಪ್ರಸಾದವನ್ನು ಮದುಮಗನಿಗೆ ಕುಡಿಸುತ್ತಾನೆ. ಊರಿನ ಐದು ಜನ ಮುತ್ತೈದೆಯರು ಮೈಗೆ ಅರಿಶಿಣ ಹಾಕಿ, ಕೊರಳಿಗೆ ಹೂವಿನಹಾರ ಹಾಕಿ, ಬಾಸಿಂಗ ಕಟ್ಟಿ ಆರತಿ ಬೆಳಗುತ್ತಾರೆ. ಉಳಿದ ಹಿರಿಯ ಯಜಮಾನಿಯರು ಸೋಬಾನೆ ಪದಗಳನ್ನು ಹಾಡುತ್ತಾರೆ.

ಜಾತ್ರೆ ನಡೆಯುವುದಕ್ಕಿಂತ ಮುಂಚೆ ಗುಡಿಕಟ್ಟೆಯಲ್ಲಿ ಏಳು ಊರಿನ ಯಜಮಾನರು ಮೂರು ಅಜ್ಜನವರು ಸೇರಿ ಜಾತ್ರೆಯಲ್ಲಿ ನಡೆಯುವ ಆಚರಣೆಗಳನ್ನು ಕಟ್ಟುನಿಟ್ಟಿನಲ್ಲಿ ಪಾಲಿಸುವ ಬಗ್ಗೆ ಜಾತ್ರೆ ವಿಧಾನಗಳನ್ನು ಕುರಿತು ಚರ್ಚಿಸುತ್ತಾರೆ.

• ಪೂಜಾರಿಯ ಅಯ್ಕೆ

ಹಲವಾರು ತಲೆಮಾರುಗಳಿಂದ ಉಡೇವುದ ಅಜ್ಜನವರು ಈ ದೇವರ ಪೂಜಾರಿಕೆಯನ್ನು ಮಾಡಿಕೊಂಡು ಬಂದಿದ್ದಾರೆ. ಈ ದೇವರ ಪೂಜಾರಿಯು ಬಹಳ ಕಟ್ಟುನಿಟ್ಟಾದ ಆಚರಣೆಯನ್ನು ಮಾಡುತ್ತಾನೆ. ಈಗ ಒಂದು ತಲೆಮಾರು ಮರಣ ಹೊಂದಿದೆ. ಈ ದೇವರಿಗೆ ಸೂಕ್ತವಾದ ವ್ಯಕ್ತಿಯನ್ನು ಮೂರು ಅಜ್ಜನವರು ಆಯ್ಕೆ ಮಾಡುತ್ತಾರೆ. ಇತ್ತೀಚಿನ ವರ್ಷಗಳಲ್ಲಿ ಪೂಜಾರಿಯ ಹೆಂಡತಿಯು ಅಕಾಲಿಕ ಮರಣ ಹೊಂದಿದ್ದಾಗ ಆತನಿಗೆ ಮೊತ್ತೊಂದು ಮದುವೆಯಾಗಲು ಗುಡಿಕಟ್ಟೆಯ ಯಜಮಾನರು ತೀರ್ಮಾನಿಸಿದ್ದಾರೆ. ಅದಕ್ಕೊಪ್ಪದ ಪೂಜಾರಿಯನ್ನು ತಲೆಸುಟ್ಟವರು (ವಿಧುರ) 'ಈ ದೇವರನ್ನು ಪೂಜಿಸುವಂತಿಲ್ಲ' ಎಂದು ಕಾರಣ ಕೊಟ್ಟು ಪೂಜಾರಿಕೆಯಿಂದ ಕೆಳಗಿಳಿಸುತ್ತಾರೆ. ಅದೇ ಗುಂಪಿನ ಮತ್ತೊಬ್ಬ ಬಾಲಕನಿಗೆ ಗುಗ್ಗರಿ ಹಬ್ಬದ ದಿನದಂದು ಪೂಜಾರಿಕೆಯ ಪಟ್ಟ ಕಟ್ಟುತ್ತಾರೆ. ಆ ಪೂಜಾರಿಯ ವಯಸ್ಸು ಸುಮಾರು ಆರು ವರ್ಷದಿಂದ ಏಳು ವರ್ಷ ಇರಬಹುದು. ಪೂಜಾರಿಯ ಜೊತೆಗೆ ಈ ದೇವರಿಗೆ ದಾಸಯ್ಯನನ್ನು ಆಯ್ಕೆ ಮಾಡುವ ಸಂಪ್ರದಾಯವಿದೆ.

೧. ಪಟ್ಟದ ದಾಸಯ್ಯ

ಈ ದೇವರಿಗೆ ಕೆಲವೊಂದು ಆಚರಣೆಗಳನ್ನು ನಿಭಾಯಿಸಬೇಕಾಗುತ್ತದೆ. ಆಂತಹ ಸಮಯದಲ್ಲಿ ದಾಸಯ್ಯ ಎನ್ನುವ ಒಬ್ಬ ನಿಷ್ಠಾವಂತ ವ್ಯಕ್ತಿಯನ್ನು ಮೂರು ಅಜ್ಜನವರು ಆಯ್ಕೆ ಮಾಡುತ್ತಾರೆ. ಈ ಗುಡಿಕಟ್ಟೆಗೆ ಸೇರಿದ ಚೌಳಕೆರೆ ಅಜ್ಜನ ಗುಂಪಿಗೆ ಸೇರಿದ ವ್ಯಕ್ತಿಯನ್ನು ಆರಿಸಿ ಎಲ್ಲ ಅಣ್ಣ-ತಮ್ಮಂದಿರು 'ಪಟ್ಟ' ಕಟ್ಟುತ್ತಾರೆ. ಆದ್ದರಿಂದ ಈತನನ್ನು "ಪಟ್ಟದ ದಾಸಯ್ಯ" ಎಂದು ಕರೆಯುತ್ತಾರೆ.

೨. ಹರಕೆ ದಾಸಯ್ಯ

ಜಾತ್ರೆ ನಡೆಯುವ ವೇಳೆಯಲ್ಲಿ 'ಹರಕೆ ದಾಸಯ್ಯ'ನ ಪಾತ್ರ ಬಹು ಮುಖ್ಯವಾಗಿರುತ್ತದೆ. ಪಟ್ಟದ ದಾಸಯ್ಯನು ಹೇಳಿದ ಕೆಲಸದ ಜೊತೆಗೆ ದೇವರಿಗೆ ಹರಕೆಯನ್ನು ಮುಟ್ಟಿಸುವಂಥ ಹಾಗೂ ಅಣ್ಣ-

ತಮ್ಮಂದಿರ ಪೂಜೆಯನ್ನು 'ಹರಕೆ ದಾಸಯ್ಯ' ಮಾಡುತ್ತಾನೆ. ಈ ದಾಸಯ್ಯನ ಕೆಳಗೆ ಮುಚ್ಚಳ ದಾಸಯ್ಯ ಇರುತ್ತಾನೆ.

೩. ಮುಚ್ಚಳದ ದಾಸಯ್ಯ

ಈ ದೇವರಿಗೆ ಮುಚ್ಚಳ ದಾಸಯ್ಯನನ್ನು ಮೂವರು ಅಜ್ಜನವರು ಆಯ್ಕೆ ಮಾಡುತ್ತಾರೆ. ವಿಶೇಷ ಆಚರಣೆ ಸಂದರ್ಭದಲ್ಲಿ ಸಹಾಯಕ ಪೂಜಾರಿಯಾಗಿ ಕಾರ್ಯವನ್ನು ನಿರ್ವಹಿಸುತ್ತಾನೆ. ಈ ಮೂರು ದಾಸಯ್ಯ ಹೇಳಿದ ಕೆಲಸಗಳನ್ನು ಚಾಚೂ ತಪ್ಪದೆ ಮಾಡಬೇಕಾಗುತ್ತದೆ. ಒಂದುವೇಳೆ ತಪ್ಪು ಮಾಡಿದರೆ ದಾಸಯ್ಯನನ್ನು ತೆಗೆದುಹಾಕಿ ಬೇರೆಯವರನ್ನು ನೇಮಕ ಮಾಡುವ ಸಂಪ್ರದಾಯ ಇವರಲ್ಲಿದೆ.

• ದಾಸರಜ್ಜಿಯರ ಪಾತ್ರ

ಈ ದೇವರಿಗೆ ವಿಶೇಷವಾಗಿ ದಾಸರಜ್ಜಿಯರನ ಆಯ್ಕೆ ಮಾಡುತ್ತಾರೆ. ಇವರನ್ನು ಒಂದೊಂದು ಊರಿನಿಂದ ಒಬ್ಬೊಬ್ಬರನ್ನು ಮೂರು ಊರಿನಿಂದ ನೇಮಿಸುತ್ತಾರೆ. ಚಿನ್ನೋಬನಹಳ್ಳಿಯಿಂದ ಹಿರಿಯಜ್ಜಿ, ಉಡೇವನಿಂದ ಚಿಕ್ಕ ದಾಸರಜ್ಜಿ, ಹಾಗೂ ಚೌಳಕೆರೆಯಿಂದ ಒಬ್ಬ ದಾಸರಜ್ಜಿಯನ್ನು ನೇಮಿಸುತ್ತಾರೆ. ಇವರನ್ನು ದೇವರ ಸೇವೆಯನ್ನು ಮಾಡುವ ಸಲುವಾಗಿ ಆಯ್ಕೆ ಮಾಡುತ್ತಾರೆ. ಮಹಿಳೆಯರ ಹರಕೆಯನ್ನು ತೀರಿಸಲು ಬೇಡಿಕೆಗಳನ್ನು ಬಗೆಹರಿಸುವ ಸಲುವಾಗಿ ಅವರಿಗೆ ಸಹಕಾರಿಯಾಗಿ ಕೆಲಸವನ್ನು ಮಾಡುತ್ತಾರೆ.

• ದಾಸರಯ್ಯರ ಆಯ್ಕೆ ವಿಧಾನಗಳು

ಅಜ್ಜನವರು	
ಪೂಜಾರಿ	ದಾಸರಜ್ಜಿಯರು
ಪಟ್ಟದ ದಾಸಯ್ಯ	
ಹರಕೆ ದಾಸಯ್ಯ	
ಮುಚ್ಚಳದ ದಾಸಯ್ಯ (ಸಹಾಯಕ ಪೂಜಾರಿ)	

• ಪೌಳಿ ನಿರ್ಮಾಣ

ಜಾತ್ರೆಯು ನಿಗಧಿಯಾದ ಮೂರು ದಿನಕ್ಕಿಂತ ಮುಂಚೆ ಅಜ್ಜನವರು ಊರಿನ ಯಜಮಾನರಿಗೆ ಜಾತ್ರೆಯ ಮಾಹಿತಿ ತಿಳಿಸಿ, ಊರ ಹೊರಗಿನ ಬಯಲಿನಲ್ಲಿ ಲಕ್ಕಿ ಬರಲಿನ ಅಥವಾ ನಕಲಿ ಸರಬಿನಿಂದ ಪೌಳಿ ನಿರ್ಮಾಣ ಮಾಡಿ ಎಂದು ಹೇಳುತ್ತಾರೆ. ಯಜಮಾನರು ಕಟ್ಟುನಿಟ್ಟಾಗಿ ಈ ಕಾರ್ಯವನ್ನು ಮಾಡುತ್ತಾರೆ. ಊರಿನ ಯುವಕರು ಸೇರಿ ದೇವರು ಕೂರಿಸಲು ಸರಿಹೊಂದುವಂತೆ ಹಸಿರು ನಕಲಿ ಸೊಪ್ಪು ಚೌಕಾಕಾರವಾಗಿ ಪೌಳಿಯನ್ನು ನಿರ್ಮಾಣ ಮಾಡುತ್ತಾರೆ.

• ದೇವರ ಎತ್ತುಗಳನ್ನು ಬಿಡುವುದು.

ಮಾದಿಗ ಸಮುದಾಯವು ಮೂಲತಃ ಪಶುಪಾಲಕರು ಹಾಗೂ ಕೃಷಿಕರು ಆಗಿದ್ದರು. ಆದ್ದರಿಂದ ಈ ಗ್ರಾಮದಲ್ಲಿ ದೇವರ ಹೆಸರಿನಲ್ಲಿ ಎತ್ತುಗಳನ್ನು ಬಿಡುವ ಸಂಪ್ರದಾಯವನ್ನು ರೂಢಿಸಿಕೊಂಡು

ಬಂದಿದ್ದಾರೆ. ಈ ಎತ್ತುಗಳ ಬಗ್ಗೆ ತುಂಬಾ ಗೌರವ ಮತ್ತು ಪವಿತ್ರ ಭಕ್ತಿಯಿದೆ. ಇತ್ತೀಚೆಗೆ ಸುಮಾರು ೩೦ ವರ್ಷಗಳ ಕಾಲ ದೇವರ ಎತ್ತುಗಳನ್ನು ಬಿಡುವುದನ್ನು ನಿಲ್ಲಿಸಿದ್ದಾರೆ. ಮೂರು ವರ್ಷಗಳಿಂದ ಗುಗ್ಗರಿ ಹಬ್ಬದ ದಿನದಂದು ರಾತ್ರಿಯೆಲ್ಲ ದೇವಾಲಯದ ಮುಂದೆ ಉರುಮೆ, ತಮಟೆ, ಕಹಳೆಗಳ ವಾದ್ಯ ನುಡಿಸುವಿಕೆ ಅಲ್ಲಿಯೇ ಹುರುಳಿ, ಹೆಸರು, ಕಡಲೆ, ಅವರೆ, ಕಾಳುಗಳನ್ನು ಬೇಯಿಸಿ ಜೋಳದ ಅನ್ನ ಮಾಡಿ ಮೀಸಲು ಮೊಸರನ್ನು ಕಡೆದು ಅದರಲ್ಲಿ ಬೆಲ್ಲ, ಬಾಳೆಹಣ್ಣು ಹಾಕಿ ದೇವರಿಗೆ ನೈವೇದ್ಯ ಮಾಡಿಡುತ್ತಾರೆ. ಪೂಜಾರಿಯು ಗ್ರಾಮದ ಹಿರಿಯರು ಕೊಟ್ಟಿರುವಂಥ ಎತ್ತುಗಳಿಗೆ ಮುದ್ರೆ ಹಾಕಿ ಪೂಜೆ ಮಾಡಿ ನಂತರ ಎತ್ತುಗಳನ್ನು ದೇವರಿಗೆ ಬಿಡುತ್ತಾರೆ.

• ದೀವಳಿ

ದೀಪಾವಳಿ ಆದ ನಂತರದ ವಾರದಲ್ಲಿ ದೀವಳಿಗೆ ಮಾಡುತ್ತಾರೆ. ಇದನ್ನು ಕಿರುದೀವಳಿಗೆ ಎಂದು ಕರೆಯುತ್ತಾರೆ. ಈ ಆಚರಣೆಯಲ್ಲಿ ಏಳು ಊರಿನ ಜನರು ಭಾಗವಹಿಸುತ್ತಾರೆ. ಶನಿವಾರ ರಾತ್ರಿ ಪೂಜಾ ವಿಧಗಳು ಪ್ರಾರಂಭವಾಗುತ್ತವೆ. ರಾತ್ರಿಪೂರ್ತಿ ದೇವರಿಗೆ ಪೂಜಾರಿ ಮತ್ತು ದಾಸರಯ್ಯನವರು ಒಂದೊತ್ತಿನ (ಉಪವಾಸ)ದ ಮೇಲೆ ಒಂಬತ್ತು ಪೂಜೆಗಳನ್ನು ನಡೆಸುತ್ತಾರೆ. ಬೆಳಗಿನ ಜಾವ ಮಹಾಮಂಗಳಾರತಿ ನಡೆಯುತ್ತದೆ ಸೂರ್ಯ ಉದಯ ಆಗುವ ಸಮಯದಲ್ಲಿ ದೇವರ ಎದುರಿಗೆ ಮಣೇವು ಆಡುವರು.

• ಮಣೇವು ಆಡುವುದು

ಚಿತ್ರದುರ್ಗ ಜಿಲ್ಲೆಯ ಮಾದಿಗ ಸಮುದಾಯದವರು ಮಾಡುವ ಪ್ರತಿಯೊಂದು ಹಬ್ಬದ ಸಂದರ್ಭದಲ್ಲಿ ಮಣೇವು ಆಡುವುದು ವಿಶೇಷವಾಗಿದೆ. ಮಣೇವನ್ನು ಅತ್ಯಂತ ವಿಜೃಂಭಣೆಯಿಂದ ಆಚರಣೆ ಮಾಡುತ್ತಾರೆ. ಕುರುಬರು ತಯಾರಿಸಿದ ಕರಿಯ ಕಂಬಳಿಯ ಗದ್ದಿಗೆ ಹಾಕಿ, ಅದರ ಮೇಲೆ ಭಕ್ತರು ತಂದಿರುವ ಬಾಳೆಹಣ್ಣು ಮತ್ತು ಬೆಲ್ಲವನ್ನು ಬೆರೆಸಿ ಚಿಕ್ಕ ಚಿಕ್ಕ ಕುಪ್ಪೆ ಹಾಕಿ ದಾಸರಯ್ಯನವರು ಸುತ್ತಲೂ ತಮಟೆ, ಉರುಮೆ, ಕಹಳೆ, ಭೇರಿ ವಾದ್ಯಗಳ ತಾಳಕ್ಕೆ ತಕ್ಕಂತೆ ಕುಣಿಯುತ್ತಾರೆ. ಕುಣಿಯುತ್ತಾ ಗದ್ದಿಗೆಯ ಮೇಲೆ ಹಾಕಿದ ಬಾಳೆಹಣ್ಣು ಬೆಲ್ಲವನ್ನು ಬಾಯಿ ಮೂಲಕ ತೆಗೆಯಲು ಪ್ರಯತ್ನಿಸುತ್ತಾರೆ. ದಾಸರಯ್ಯಗಳು ಹೂಂಕರಿಸುತ್ತಾ ಬಂದು ಮಲಗಿ ಬಲ ಪಕ್ಕಕ್ಕೆ ಹೊರಳಿ ಆ ಬಾಳೆಹಣ್ಣು ಬೆಲ್ಲದ ಕುಪ್ಪೆಗೆ ಬಾಯಿ ಹಾಕಿ ಪ್ರಾಣಿಯಂತೆ ತಿನ್ನುತ್ತಾರೆ. ನಂತರ ಎಲ್ಲರೂ ಸೇರಿ ಸೂರ್ಯನಿಗೆ ನಮಸ್ಕರಿಸಿ ಎಂಜಲುಗೊಳಿಸಿದ ಬೆಲ್ಲವನ್ನು ಮೂರಜ್ಜನವರು, ಭಕ್ತರು ಭಕ್ತಿಪೂರ್ವಕವಾಗಿ ಎತ್ತಿಕೊಳ್ಳುತ್ತಾರೆ. ನಂತರ ದಾಸರಯ್ಯರು, ಪೂಜಾರಿಗಳು ಉಪವಾಸ ಅಂತ್ಯಗೊಳಿಸಲು ಅನ್ನ ಬೆಲ್ಲದ ಹಾಲು ಕೊಡುತ್ತಾರೆ. ನಂತರ ಎಲ್ಲ ಭಕ್ತರಿಗೂ ಅದನ್ನೇಲ್ಲವನ್ನು ನೀಡುತ್ತಾರೆ.

• ಹಣ್ಣು ಹೂವಿನ ಭಾಗ

ಅಣ್ಣ-ತಮ್ಮಂದಿರು ಸೇರಿ ಜಾತ್ರೆ ಮುಗಿದ ನಂತರ ಲೆಕ್ಕಕ್ಕೆ ಒಂದು ಕಡೆ ಸೇರುತ್ತಾರೆ. ಈ ಒಂದು ಸಭೆಯಲ್ಲಿ ಹಣ್ಣು ಹೂವಿನ ಭಾಗವನ್ನು ಹಂಚುತ್ತಾರೆ, ಭಕ್ತಾದಿಗಳು ಬಾಳೆಹಣ್ಣು, ಬೆಲ್ಲ, ಹೂವುಗಳನ್ನು

ತಂದಿರತ್ತಾರೆ. ಅವುಗಳನ್ನು ಭಾಗವಾಗಿ ಮಾಡಿ ಮೊದಲ ಭಾಗವನ್ನು ಅಜ್ಜನವರಿಗೆ ಕೊಟ್ಟು ನಂತರ ಗುಂಪಿನ ಭಾಗದವರಿಗೆ ಹಂಚಿ ಮತ್ತೆ ಅಣ್ಣ-ತಮ್ಮಂದಿರ ಮನೆಗಳನ್ನು ಲೆಕ್ಕಹಾಕಿ ಹಣ್ಣು ಹೂಗಳನ್ನು ಪ್ರಸಾದ ಎಂದು ಪ್ರತಿಯೊಬ್ಬರಿಗೆ ಹಂಚುತ್ತಾರೆ.

• ಹಣದ ಲೆಕ್ಕಚಾರ

ಹಣ್ಣು ಹೂವಿನ ಹಂಚಿಕೆಯಾದ ಮೇಲೆ ಹಂಚಿಕೆಯಾಗಿದ್ದ ದುಡ್ಡಿನಲ್ಲಿ ಯಾವುದಕ್ಕೆ ಎಷ್ಟು ಖರ್ಚಾಗಿದೆ ಎಂದು ಲೆಕ್ಕ ತೋರಿಸಿ ಉಳಿದ ಹಣವನ್ನು ಮುಂದಿನ ಕಾರ್ಯಕ್ಕೆ ಈ ಹಣವನ್ನು ಬಳಸುತ್ತಾರೆ. ನಂತರ ವಿವಾಹ ಸಂದರ್ಭದಲ್ಲಿ ಮದುಮಗ ನೀಡಿದ ಹಣವನ್ನು ಪುಸ್ತಕದಲ್ಲಿ ಅವರ ಹೆಸರು, ಊರು, ಎಷ್ಟು ಹಣ ಎಂದು ದಾಖಲೆ ಮಾಡುತ್ತಾರೆ. ದೇವರಿಗೆ ಹರಕೆಯ ಹಣವನ್ನು ಸಂಗ್ರಹಿಸಿ ಜಾತ್ರೆಯಲ್ಲಿ ಬಳಸಿಕೊಳ್ಳುತ್ತಾರೆ. ಹೀಗೆ ಜಾತ್ರೆಯ ಆಯವ್ಯಯವನ್ನು ಮಾಡುವುದು ವಿಶೇಷವಾಗಿ ಕಂಡುಬರುತ್ತದೆ.

• ಗುಗ್ಗರಿ ಹಬ್ಬ

ಚಿನ್ನೋಬನಹಳ್ಳಿಯಲ್ಲಿ ಕಂಚಿಓಬಳೇಶ್ವರ ದೇವರಿಗೆ ಮಾದಿಗ ಸಮುದಾಯದವರು ವಿಶೇಷವಾಗಿ ಆಚರಿಸುವಂತಹ ಹಬ್ಬವಿದು. ಜಾತ್ರೆ ನಡೆಯುವ ಸಂದರ್ಭದಲ್ಲಿ ಗುಗ್ಗರಿ ಹಬ್ಬವನ್ನು ರಾತ್ರಿ ಇಡಿಯಾಗಿ ಏಳು ಊರಿನ ಗ್ರಾಮಸ್ಥರು, ಊರಿನ ಅಜ್ಜನವರು, ಊರಿನವರೆಲ್ಲಿ ಪಾಲ್ಗೊಳ್ಳುತ್ತಾರೆ. ಈ ಸಮುದಾಯದ ಬಹುಮಂದಿ ಬೇರೆ ಬೇರೆ ಊರುಗಳಿಂದಲೂ ಕಾಸು ಮೀಸಲು ಕಾಳಿನೊಂದಿಗೆ ಬರುತ್ತಾರೆ. ಕೆಲವರು ಮೀಸಲು ಕಾಳನ್ನು ಭಕ್ತಿಪೂರ್ವಕವಾಗಿ ದೇವಾಲಯಕ್ಕೆ ಅರ್ಪಿಸುತ್ತಾರೆ. ಕಾಳು ಮೀಸಲು ಅರ್ಪಿಸಲು ಅನೇಕ ನಿಯಮಗಳು ಇವೆ. ಮನೆಯಲ್ಲಿ ಬೆಳೆದಿರುವ ಬೆಳೆಯಲ್ಲಿ ಮೊದಲ ಬೆಳೆಯನ್ನು ದೇವರಿಗೆ ತೆಗೆಯಬೇಕು. ಮನೆಯನ್ನು ಸ್ವಚ್ಛಗೊಳಿಸಿ ಉಪವಾಸದಿಂದ ಕಾಳನ್ನು ಕಣದಿಂದ ತರಬೇಕು, ಮನೆಯಲ್ಲಿ ಯಾರಾದರೂ ಸಾವಿಗೀಡಾದರೆ, ಋತುಮತಿ, ಋತುಚಕ್ರ ಸಂಭವಿಸಿದ ಮನೆಯವರು ಮೀಸಲು ಕಾಳನ್ನು ಕೊಡುವಂತಿಲ್ಲ. ಇಂಥವುಗಳನ್ನು ಸೂಕ್ಷ್ಮವಾಗಿ ಗಮನದಲ್ಲಿ ಇಟ್ಟುಕೊಂಡು ಮೀಸಲು ಕಾಳು ಅರ್ಪಿಸಬೇಕು, ನಂತರ ಎಲ್ಲರೂ ಪೂಜಾಕಾರ್ಯಗಳಲ್ಲಿ ಪಾಲ್ಗೊಳ್ಳುತ್ತಾರೆ.

ಭಕ್ತರು ತಂದಿರುವ ಮೀಸಲು ಕಾಳುಗಳನ್ನು ದೇವರಿಗೆ ಅರ್ಪಿಸಿ ಅವುಗಳನ್ನು ದಾಸರಜ್ಜಿಯರು ಸ್ವಚ್ಛಗೋಳಿಸಿ ಪಾತ್ರೆಯಲ್ಲಿ ಹಾಕಿ ಕುದಿಸುತ್ತಾರೆ. ಕುದ್ದಿರುವ ಕಾಳುಗಳು, ಮೀಸಲು ಬೆಲ್ಲವನ್ನು ತೊಕ್ಕು ಮಾಡಿ ಅನ್ನದೊಂದಿಗೆ ದೇವರಿಗೆ ಎಡೆ ಹಾಕಿ, ಬಂದಿರುವ ಭಕ್ತರಿಗೆ ಪ್ರಸಾದವಾಗಿ ಕೊಡುತ್ತಾರೆ. ಪೂಜೆ ಮುಗಿದ ಮೇಲೆ ತಮಟೆ, ಉರುಮೆಗೆ ಯುವಕರು ಹೆಜ್ಜೆ ಹಾಕುತ್ತಾರೆ. ಹಿರಿಯ ಮಹಿಳೆಯರು ಸೋಬಾನೆ ಪದಗಳನ್ನು ಹಾಡುವುದರ ಮೂಲಕ ಸಂಭ್ರಮದಿಂದ ಗುಗ್ಗರಿ ಹಬ್ಬವನ್ನು ಆಚರಿಸುತ್ತಾರೆ.

ಇಂದಿನ ಆಧುನಿಕ ಕಾಲದಲ್ಲಿಯೂ ಒಂದೇ ಕಡೆ ಮಾದಿಗ ಸಮುದಾಯದ ಏಳು ಊರಿನ ಜನರು ಸೇರುತ್ತಾರೆ. ಹಿರಿಯರು ಅಥವಾ ಅಜ್ಜನವರು ಹೇಳಿದ ತೀರ್ಮಾನಗಳಿಗೆ ಬದ್ಧರಾಗಿ

ನಡೆದುಕೊಳ್ಳುವುದು ಕಷ್ಟದ ಕೆಲಸ. ಆದರೂ ಚಿನ್ನೋಬನಹಳ್ಳಿಯಲ್ಲಿ ಮಾದಿಗ ಸಮುದಾಯದ ಜನರು ಹಿರಿಯರು ಹೇಳಿದ ಕಾರ್ಯಕ್ರಮಗಳನ್ನು ಅತ್ಯಂತ ಗೌರವಪೂರ್ವಕವಾಗಿ ಸ್ವೀಕರಿಸುತ್ತಾರೆ. ಇಂತಹ ಕಟ್ಟುನಿಟ್ಟಿನಿಂದ ಆಚರಿಸುವಂತಹ ಜಾತ್ರೆಯನ್ನು ನೋಡಿದರೆ ನಮ್ಮಗೆ ಆಶ್ಚರ್ಯವಾಗುವುದರಲ್ಲಿ ಎರಡು ಮಾತಿಲ್ಲ.

ಜಾನಪದ ಸಂಸ್ಕೃತಿಯನ್ನು ಪರಂಪರಾಗತವಾಗಿ ಬೆಳೆಸಿಕೊಂಡು ಬಂದಿರುವ ಈ ಸಮುದಾಯದವರು ಬಹುದೊಡ್ಡ ಧಾರ್ಮಿಕ ಕೇಂದ್ರವನ್ನಾಗಿ ಮಾಡಿಕೊಂಡಿದ್ದಾರೆ. ವರ್ಷದಲ್ಲಿ ಬೆಳೆದಿರುವಂಥ ಬೆಳೆಗಳಲ್ಲಿ ಮೊದಲ ಭಾಗವನ್ನು ದೇವರಿಗೆ ತೆಗೆಯುವುದು. ವಹಿಸಿದ ಕಾರ್ಯದಲ್ಲಿ ನಿರತರಾಗುವುದು, ಬೇರೆ ಊರಿನವರ ಜೊತೆಗಿನ ಬಾಂಧವ್ಯವನ್ನು ವೃದ್ಧಿಸುವುದು. ಜನರಿಗೆ ತೊಂದರೆಯಾದರೆ ರಕ್ಷಣೆ ಮಾಡುವಂತೆ ಪೂಜೆಯನ್ನು ಮಾಡುವುದು. ಜಾನಪದರ ನಂಬಿಕೆಯಂತೆ ಪ್ರಕೃತಿಯಲ್ಲಿ ಸಂಭವಿಸುವ ಎಲ್ಲಾ ಚಟುವಟಿಕೆಗಳ ಹಿಂದೆ ಈ ಪ್ರಕೃತಿ ದೇವರ ಕೈವಾಡವಿರುತ್ತದೆ ಎಂದು ನಂಬಿಕೆಯನ್ನು ಹೊಂದಿದ್ದಾರೆ. ಹಬ್ಬ, ಜಾತ್ರೆಗಳನ್ನು ಮಾಡುವುದರ ಮುಖೇನ ಸಹಕಾರ, ಹೊಂದಾಣಿಕೆ, ಸಾಮಾಜಿಕ ಸಂಬಂಧವನ್ನು ವೃದ್ಧಿಸುವಲ್ಲಿ ಹಾಗೂ ಈ ರೀತಿಯಾದ ಹೊಸ ಬದಲಾವಣೆ ಈ ಜಾತ್ರೆಗಳಿಂದ ಸಹಕಾರಿಯಾಗಿದೆ ಎಂದು ಹೇಳಬಹುದು.

೫.೩.೨.೧೦ ನಾಯಕನಹಟ್ಟಿ ತಿಪ್ಪೇಸ್ವಾಮಿ ಜಾತ್ರೆ

ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕಿನ ನಾಯಕನಹಟ್ಟಿ ಗ್ರಾಮದಲ್ಲಿ ತಿಪ್ಪೇಸ್ವಾಮಿ ಜಾತ್ರೆಯು ಹೋಳಿ ಹುಣ್ಣಿಮೆಯ ಸಂದರ್ಭದಲ್ಲಿ ನಡೆಯುತ್ತದೆ. ತಿಪ್ಪೇಸ್ವಾಮಿ ಮಾದಿಗರ ಆರಾಧ್ಯ ದೈವಗಳಲ್ಲಿ ಒಂದು. ಆದ್ದರಿಂದ ಈ ಜಾತ್ರೆಯಲ್ಲಿ ಮೊದಲ ನೈವೇದ್ಯ ಸೇವೆ ಮಾಡುವ ಪ್ರಾಧಾನ್ಯತೆಯನ್ನು ಈ ಭಾಗದಲ್ಲಿ ಪಡೆದುಕೊಂಡಿದ್ದಾರೆ. ಕರ್ನಾಟಕದಲ್ಲಿ ಅತಿ ಹೆಚ್ಚು ಜನಸಂಖ್ಯೆ ಸೇರುವ ದೊಡ್ಡ ಜಾತ್ರೆ ಹೌದು. ಈ ಜಾತ್ರೆಯಲ್ಲಿ ಇತರೆ ಜಿಲ್ಲೆಗಳ ಜನರು ಭಾಗಿಯಾಗುತ್ತಾರೆ. ತಿಪ್ಪೇಸ್ವಾಮಿ ಜಾತ್ರೆ ಈ ಭಾಗದಲ್ಲಿ ಹಟ್ಟಿ ಹುಣ್ಣಿಮೆ ಎಂದು ಹೆಸರಾಗಿದೆ. ಶಿಷ್ಟರಲ್ಲಿ ತಿಪ್ಪೇಸ್ವಾಮಿ ಎಂದು ಸಂಸ್ಕೃತೀಕರಣಗೊಂಡಿರುವ ಈತನ ಹೆಸರು ಜನಪದರಲ್ಲಿ ಆತ್ಮೀಯವಾಗಿ "ತಿಪ್ಪೇಸ್ವಾಮಿ", "ತಿಪ್ಪಯ್ಯ" ಎಂದೇ ಚಲಾವಣೆಯಲ್ಲಿದೆ. ತಿಪ್ಪೇಸ್ವಾಮಿಯನ್ನು ಪಂಚಗಣದೀಶರಲ್ಲಿ ಒಬ್ಬನೆಂದು ಹೇಳಲಾಗುತ್ತಿದ್ದು ನಾಯಕನಹಟ್ಟಿಯ ಫಣಿಯಪ್ಪನೆಂಬ ವರ್ತಕ ರಾಯದುರ್ಗಕ್ಕೆ ವ್ಯಾಪಾರಕ್ಕಾಗಿ ಹೋಗಿ ಬರುತ್ತಿರುವಾಗ ತಿಪ್ಪೇಸ್ವಾಮಿ ಆತನ ಹಿಂದೆ ನಾಯಕನಹಟ್ಟಿಗೆ ಬಂದನೆಂಬುದು ಪ್ರತೀತಿ. ಈತನಿಗೆ ಈ ಹೆಸರು ಬಂದುದರ ಬಗ್ಗೆ ಐತಿಹ್ಯವೊಂದಿದೆ. ಈತ ಮೊದಲು ಹಟ್ಟಿಗೆ ಬಂದಾಗ ತಿಪ್ಪೆಗುಂಡಿಗಳಲ್ಲಿ ಇರುತ್ತಿದ್ದನಂತೆ. ಅನೇಕ ಅವಧೂತರು ಹೀಗೆ ಕೊಳಕಾಗಿ ಇರುತ್ತಿದ್ದ ಕತೆಗಳೊಂದಿಗೆ ಈತನ ಕಥೆಯನ್ನು ಹೋಲಿಸಿ ನೋಡಬಹುದು. ಹೀಗೆ "ತಿಪ್ಪೆಯಲ್ಲಿ ಇರುತ್ತಿದ್ದ ಈ ಸ್ವಾಮಿಯನ್ನು ಅವರು ಸಹಜವಾಗಿ 'ತಿಪ್ಪೇಸ್ವಾಮಿ' ಎಂದು ಕರೆದಿದ್ದರೆ ಅಶ್ಚರ್ಯವೇನಲ್ಲ".

ಇಂತಹ ಚರಿತ್ರೆಯನ್ನು ಹೊಂದಿರುವ ತಿಪ್ಪೇಸ್ವಾಮಿ ಜಾತ್ರೆಯಲ್ಲಿ ಮೊದಲು ಮಾದಿಗ ಸಮುದಾಯದವರು ಪೂಜೆಯನ್ನು ಮಾಡುವ ಪ್ರತೀತಿಯಿದೆ. ರಥೋತ್ಸವ ಸಂದರ್ಭದಲ್ಲಿ ಭಕ್ತರು

ರಥಕ್ಕೆ ಪೂಜೆಯನ್ನು ಮಾಡುತ್ತಾರೆ. ಆಗ ಒಂದು ರಥದ ಚಕ್ರಕ್ಕೆ ಮಾದಿಗ ಸಮುದಾಯದವರೇ ಪೂಜೆಯನ್ನು ಮಾಡಬೇಕು. ಸಂಜೆ ೪ ಗಂಟೆಗೆ ಈ ರಥವನ್ನು ಎಳೆಯುತ್ತಾರೆ. ರಥದ ಹಗ್ಗವನ್ನು ಸಹ ಮಾದಿಗ ಸಮುದಾಯದವರೆ ಎಳೆಯುತ್ತಾರೆ. ಮಾದಿಗ ಸಮುದಾಯದವರು ಮೊದಲ ಪೂಜೆ ಹಾಗೂ ರಥವನ್ನು ಎಳೆಯಲಿಲ್ಲವೆಂದರೆ ಇಡೀ ವರ್ಷ ಊರಿಗೆ ಗಂಡಾಂತರ ಕಾದಿರುತ್ತದೆ ಎಂದು ನಾಯಕನಹಟ್ಟಿ ಮಾದಿಗ ಸಮುದಾಯದ ಹಿರಿಯರು ಹೇಳುತ್ತಾರೆ.

ಈ ಹಿನ್ನೆಲೆಯನ್ನು ಹೊಂದಿರುವ ನಾಯಕನಹಟ್ಟಿ ತಿಪ್ಪೇಸ್ವಾಮಿಯ ಭಕ್ತರು ಚಿತ್ರದುರ್ಗದ ಗ್ರಾಮೀಣ ಭಾಗದಲ್ಲಿ ಈ ದೇವರ ಹೆಸರುಗಳನ್ನು ಇಟ್ಟುಕೊಂಡಿರುವುದನ್ನು ಕಾಣಬಹುದು. ಒಂದು ಊರಿನಲ್ಲಿ ಸುಮಾರು ೧೦ರಿಂದ ೨೦ ಜನರು ತಿಪ್ಪೇಸ್ವಾಮಿ-ತಿಪ್ಪಕ್ಕ, ರುದ್ರಪ್ಪ-ರುದ್ರಮ್ಮ, ತಿಪ್ಪಣ್ಣ-ತಿಪ್ಪಮ್ಮ, ಸಣ್ಣತಿಪ್ಪಯ್ಯ-ಸಣ್ಣತಿಪ್ಪಮ್ಮ ದೊಡ್ಡತಿಪ್ಪಯ್ಯ-ದೊಡ್ಡತಿಪ್ಪಮ್ಮ ಹೀಗೆ ಹೆಸರುಗಳನ್ನು ನೋಡಬಹುದು.

ಸಮಾಜದಲ್ಲಿ ಜಾತಿ ಭೇದ ಮಾಡದೆ, ತಳಸಮುದಾಯಗಳ ಉನ್ನತಿಗಾಗಿ ಹಾಗೂ ಅವರ ಶ್ರೇಯಸ್ಸಿಗಾಗಿ ಹೆಚ್ಚು ಒತ್ತು ನೀಡಿದ್ದವರು ತಿಪ್ಪೇಸ್ವಾಮಿ. ಯಾವುದೇ ಮೇಲು ಕೀಳು ಇಲ್ಲದೇ ಶ್ರಮಕ್ಕೆ ತಕ್ಕಂತೆ ಪ್ರತಿಫಲ ಎನ್ನುವ ನೆಲೆಯಲ್ಲಿ ಮಾಡಿದ "ಮಾಡಿದೊಷ್ಟು ನೀಡು ಭಿಕ್ಷೆ" ಘೋಷಣೆಯನ್ನು ನೀಡಿದ ಮಹಾನ್ ಚೇತನ ಎಂದು ಹೇಳಬಹುದು. ಈ ತತ್ವಗಳನ್ನು ಆಧಾರವಾಗಿ ಇಟ್ಟುಕೊಂಡು ಕೃಷಿಗೆ ಸಂಬಂಧಿಸಿದಂತೆ ಈ ಭಾಗದಲ್ಲಿ ಎರಡು ಬೃಹತ್ ಕೆರೆಗಳನ್ನು ನಿರ್ಮಾಣ ಮಾಡಿದ್ದರು. ಇದರ ಮೂಲಕ ಸುತ್ತಮುತ್ತಲಿನ ಜನರು ಸಮೃದ್ಧಿಯಾಗಿ ಬೆಳೆಯನ್ನು ಬೆಳೆಯಲು ಪ್ರಾರಂಬಿಸಿದ್ದರು. ಜಾತಿ ವ್ಯವಸ್ಥೆಯಿಂದ ತುಂಬಿ ತುಳುಕುವ ಕಾಲಘಟ್ಟದಲ್ಲಿ ಲಿಂಗಾಯಿತ ಎಂದು ಗುರುತಿಸಿಕೊಂಡ ತಿಪ್ಪೇಸ್ವಾಮಿ ಮಾದಿಗರ ಮನೆಯಲ್ಲಿ ನೆಲೆನಿಂತು ಅವರ ಮನೆ ಊಟ ಮಾಡುವುದರ ಮೂಲಕ ಒಂದು ಪವಾಡಗಳನ್ನು ಮಾಡಿ ದೈವತ್ವಕ್ಕೆ ಏರಿದ. ಈತನ ಮೂಲದ ಬಗೆಗೆ ಅನೇಕ ಭಿನ್ನಾಭಿಪ್ರಾಯಗಳಿವೆ. ಒಂದು ಮೂಲದ ಪ್ರಕಾರ ಈತ ಬೇಡ ಮೂಲದವನೆಂದು, ಮತ್ತೊಂದು ಬೇರೆ ಮೂಲವನ್ನು ಹೇಳುತ್ತಿದೆ. ಇಂತಹ ಅನೇಕ ಮೌಖಿಕ ಚರಿತ್ರೆ, ಐಹಿತ್ಯಗಳು, ಜನಪದರು ಮತ್ತು ಮಾದಿಗ ಸಮುದಾಯದ ಹಿರಿಯರು ತಿಪ್ಪೇಸ್ವಾಮಿ ಮಾದಿಗ ಸಮುದಾಯಕ್ಕೆ ಸೇರಿದವನು ಎಂದು ಹೇಳುತ್ತಾರೆ.

ಇಂತಹ ಹಿನ್ನೆಲೆಯನ್ನು ಹೊಂದಿದ ತಿಪ್ಪೇಸ್ವಾಮಿ ಕೊಂಡ್ಲಹಳ್ಳಿ ಬಿಳಿನೀರು ಚಿಲುಮೆಯಿದೆ. ಇಲ್ಲಿ ನಾಯಕನಹಟ್ಟಿ ಜಾತ್ರೆ ನಡೆದು ಐದನೆಯ ದಿನಕ್ಕೆ ಜಾತ್ರೆ ನಡೆಯುತ್ತದೆ. ಮತ್ತೊಂದು ತಿಪ್ಪೇಸ್ವಾಮಿ ದೇವಸ್ಥಾನ ಕೋನಸಾಗರದಲ್ಲಿ ಇದೆ. ಲಿಂಗಾಯತರು ಪೂಜೆಯನ್ನು ಮಾಡುತ್ತಾರೆ. ಒಂದು ವರ್ಷಕ್ಕೆ ಒಂದು ಬಾರಿ ಇಲ್ಲಿ ಜಾತ್ರೆಯನ್ನು ಮಾಡುತ್ತಾರೆ.

೫.೩.೨.೧೧ ಚಳ್ಳಕೆರೆ ಗ್ರಾಮದೇವತೆ ಶ್ರೀ ಚಳ್ಳಕೇರಮ್ಮನ ಜಾತ್ರೆ

ಚಿತ್ರದುರ್ಗ ಜಿಲ್ಲೆಯಲ್ಲಿನ ಗ್ರಾಮ ದೇವತೆಗಳ ಹಬ್ಬದಲ್ಲಿ ಬಲಿ ಪದ್ಧತಿ ಕಂಡುಬರುತ್ತದೆ. ಇಂತಹ ಬಲಿಯನ್ನು ಕೊಡುವಂತಹ ಆಚರಣೆಗಳನ್ನು ಹೆಚ್ಚಿನದಾಗಿ ತಳ ಸಮುದಾಯಗಳೇ ಮಾಡುತ್ತಾರೆ.

ಇಂತಹ ಹೆಚ್ಚಾಗಿ ಆಚರಣೆಗಳಲ್ಲಿ ವಿಶೇಷವಾಗಿ ಚಳ್ಳಕೆರೆ ಗ್ರಾಮದೇವತೆಯನ್ನು ಮಾದಿಗ ಸಮುದಾಯದವರು ಮತ್ತು ಬೇಡ ಸಮುದಾಯದವರು ಭಯ ಭಕ್ತಿಯಿಂದ ಆಚರಿಸುತ್ತಾರೆ. ಈ ಜಾತ್ರೆಯನ್ನು ಐದು ದಿನಗಳ ಕಾಲ ಆಚರಿಸುತ್ತಾರೆ. ಊರಿನ ಪ್ರಮುಖರು ಸೇರಿ ಜಾತ್ರೆ ಯಾವ ದಿನ ಆಚರಣೆ ಮಾಡಬೇಕು ಎಂದು ತೀರ್ಮಾನ ತೆಗೆದುಕೊಂಡು ಮರುದಿನ ಮಾದಿಗ ಸಮುದಾಯದ ಹಿರಿಯ ವ್ಯಕ್ತಿ ಜಾತ್ರೆಯ ಸಾರನ್ನು ಎಲ್ಲ ಜನರಿಗೆ ಸುದ್ದಿಯನ್ನು ಮುಟ್ಟಿಸುತ್ತಾರೆ.

ಜಾತ್ರೆ ನಡೆಯುವ ದಿನ ಪ್ರತಿಯೊಂದು ಸಮುದಾಯಗಳ ಜನರು ಸೇರುತ್ತಾರೆ. ಅದರಲ್ಲಿ ಮುಖ್ಯವಾಗಿ ಬೇಡ ಮತ್ತು ಮಾದಿಗ ಸಮುದಾಯದವರ ಪಾಲು ಹೆಚ್ಚಿರುತ್ತದೆ. ಆ ಕಾರಣದಿಂದಾಗಿ ಪ್ರತಿಯೊಂದು ಆಚರಣೆಯಲ್ಲಿ ಇವರ ಪಾತ್ರ ಮುಖ್ಯವಾಗಿರುತ್ತದೆ. ಮಂಗಳವಾರ ದಿನ ದೇವಿಗೆ ಗಂಗಮ್ಮನ ಪೂಜೆಯನ್ನು ಮಾಡಿ ಐದು ಜನ ಮುತ್ತೈದೆಯರು ಮದಲಿಗಿತ್ತಿ ಮಾಡುತ್ತಾರೆ. ನಂತರ ಪೂಜಾರಿ ದೇವಿಗೆ ಪೂಜೆಯನ್ನು ಮಾಡುತ್ತಾರೆ. ಗುರುವಾರ ಸಿಡಿಯನ್ನು ಹಾಡಿಸುತ್ತಾರೆ. ಈ ಆಚರಣೆ ಮುಗಿದ ಮೇಲೆ ವಿಶಿಷ್ಟ ಆಚರಣೆಯಾದ ಗಾವು ಸಿಗಿಯುವ ಪದ್ಧತಿ ಶುಕ್ರವಾರ ಪ್ರಾರಂಭವಾಗುತ್ತದೆ.

• ಗಾವು ಸಿಗಿಯುವ ಆಚರಣೆ

ಗಾವು ಸಿಗಿಯುವ ಆಚರಣೆಯನ್ನು ವಂಶ ಪಾರಂಪರ್ಯವಾಗಿ ಮಾಡಲಾಗುತ್ತದೆ. ಜಾತ್ರೆಗಳಲ್ಲಿ ಪೋತರಾಜರು ಕಾಣಿಸಿಕೊಳ್ಳುತ್ತಾರೆ. ಇವರನ್ನು ಮಾರಿಯ ಆರಾಧಕರು ಎಂದು ಕರೆಯಲಾಗುತ್ತದೆ. ಪೋತ ಎಂದರೆ "ಹೋತ" ಗಂಡು ಮೇಕೆ ಎಂಬ ಅರ್ಥವಿದೆ. ಪೋತರ ವೇಷವನ್ನು ಹಾಕಿ ಉರುಮೆ ಮತ್ತು ತಮಟೆಯ ತಾಳಕ್ಕೆ ಹೆಜ್ಜೆ ಹಾಕುತ್ತಾರೆ. ಕಪ್ಪು ಅಥವಾ ಬಿಳಿ ಬಣ್ಣದ ಮೇಕೆಯನ್ನು ಮಡಿವಾಳ ಅಥವಾ ನಾಯಕರ ಪೋತರಾಜರು ಕಟ್ಟಿ ಸಿಡಿದು ಅದರ ರಕ್ತ ಮಾಂಸ ತಿನ್ನುವ ವಿಚಿತ್ರ ಆಚರಣಾ ವಿಧಿ ಇದಾಗಿದೆ.

ಬ್ರಾಹ್ಮಣ ಕನ್ಯೆಯಾದ ಮಾರಮ್ಮನನ್ನು ಮಾದಿಗನೊಬ್ಬ ವಂಚಿಸಿ ಮದುವೆ ಆಗುತ್ತಾನೆ. ಇದು ಆಕೆಗೆ ತಿಳಿದು ಕೊನೆಗೆ ತನ್ನ ಗಂಡ ಮತ್ತು ಮಕ್ಕಳನ್ನು ಕೊಲ್ಲುತ್ತಾಳೆ. ಕೋಣದ ರೂಪದಲ್ಲಿ ಗಂಡ, ಕುರಿ, ಕೋಳಿ ಬಲಿ ತೆಗೆದುಕೊಳ್ಳುತ್ತಾಳೆ ಎನ್ನುವ ಕಥೆ ಇದೆ. ಹೀಗೆ ಬಲಿ ಪಡೆಯುವ ಮಾರಮ್ಮಳನ್ನು ಜಾತ್ರೆಯ ಸಂದರ್ಭದಲ್ಲಿ ಗುಡಿದುಂಬುವ ಮುಂಚೆ ಆಕೆಯ ಕೋಪ ಶಮನಕ್ಕಾಗಿ ಗಾವು ಮರಿಯನ್ನು ಈ ಪೋತರಾಜರು ಅದರ ಗಂಟಲಿಗೆ ಬಾಯಿ ಹಾಕಿ ಕಚ್ಚಿ ಕೊಲ್ಲುವ ಪರಿಪಾಟವಿದೆ.

ಈ ಆಚರಣೆ ನಡೆಯುವಾಗ ಅವರು ಹೋತದ ರೀತಿಯಲ್ಲಿ ಅಲಂಕರಿಸಿಕೊಂಡಿರುತ್ತಾರೆ. ಕೆಲವು ದೇವಿ ಜಾತ್ರೆಯಲ್ಲಿ ಗಾವು ಸಿಗಿಯುವ ಆಚರಣೆ ನಡೆಯದಿದ್ದರೂ ಈ ಪೋತನಾಯಕರು 'ಚಾವುಟಿ' ಬೀಸುತ್ತಾ ಪೌಳಿಗುಡಿಯ ಸುತ್ತ ಸುತ್ತುತ್ತಾರೆ. ಇದರ ವೇಷ ಅಕರ್ಷಕವಾಗಿರುತ್ತದೆ. ಗಾವು ಸಿಗಿಯುವ ಬಲಿ ಪ್ರಕ್ರಿಯಗಳಲ್ಲಿ ಕೃಷಿಯ ಫಲವತ್ತತೆಗಾಗಿ ಪಶು ಸಂಪತ್ತಿನ ಅಭಿವೃದ್ಧಿಗೆ ಮತ್ತು ಕೋಣ ಬಲಿ ನಂತರ ಚೆಲ್ಲುವ ಚರಗ ಭೂತಾಯಿ ತಣಿವಿಗಾಗಿ ಈ ಪದ್ಧತಿ ಚಾಲ್ತಿಯಲ್ಲಿದೆ. ಮಾರಮ್ಮ, ಕರಿಯಮ್ಮ, ಚಳ್ಳಕೇರಮ್ಮ ಸೇರಿದಂತೆ ಹೆಣ್ಣು ದೇವತೆಗಳ ಜಾತ್ರೆ ಸಂದರ್ಭದಲ್ಲಿ ಪೂರ್ವಜರು ಇಂಥ ಆಚರಣೆಗಳನ್ನು

ಮಾಡುತ್ತಿದ್ದು ಈಗಲೂ ಸಹ ಮುಂದುವರೆದಿದೆ. ಹಿಂದೆ ನಡೆದ ರೀತಿಯಲ್ಲಿ ಕಟ್ಟುನಿಟ್ಟಾಗಿ ಆಚರಣೆ ಮಾಡುವ ಪ್ರಮಾಣ ಕಡಿಮೆಯಾಗಿದೆ ಎಂದು ಹಿರಿಯರು ಹೇಳುತ್ತಾರೆ.

• ಪೂಜಾರಿಕೆ

ಚಿತ್ರದುರ್ಗ ಜಿಲ್ಲೆಯಲ್ಲಿ ಕೆಲವೊಂದು ಭಾಗದಲ್ಲಿ ಪೂಜಾರಿಕೆ ಸ್ಥಾನವನ್ನು ಮಾದಿಗರು ಪಡೆದುಕೊಂಡಿದ್ದಾರೆ. ಈ ಪೂಜಾರಿಕೆಯು ವಂಶಪರಂಪರ್ಯವಾಗಿ ಮಾಡಿಕೊಂಡು ಬಂದಿರುತ್ತಾರೆ. ಕೇವಲ ತಳ ಸಮುದಾಯದ ದೇವರುಗಳು ಎಂದು ಗುರುತಿಸಿಕೊಂಡ ಮಾತಂಗಿ, ದುರುಗಮ್ಮ, ಎಲ್ಲಮ್ಮ, ಮಾರಮ್ಮ, ಗಾಳೆಮ್ಮ, ಕೊಲ್ಲಾರಮ್ಮ ಮುಂತಾದ ಸ್ತ್ರೀ ದೇವತೆಗಳು ಹಾಗೂ ಪೆನ್ನಓಬಳೇಶ್ವರ, ಹರಳಯ್ಯ, ತಿಪ್ಪೇಸ್ವಾಮಿ ಇತ್ಯದಿ ಪುರುಷ ದೇವರುಗಳ ಪೂಜೆಯನ್ನು ಮಾತ್ರ ಮಾದಿಗ ಸಮುದಾಯದವರು ಮಾಡುತ್ತಾರೆ. ದೇವಸಮುದ್ರದಲ್ಲಿ ಮಾದಿಗ ಕೇರಿಯಲ್ಲಿ ಇರುವ ಕೊಲ್ಲೂರಮ್ಮ ದೇವಿಗೆ ಪೂಜೆಯನ್ನು ಮಾಡುತ್ತಾರೆ. ಚಿತ್ರದುರ್ಗದ ಬೆಟ್ಟದಲ್ಲಿ ಸ್ಥಾಪಿತಗೊಂಡಿರುವ ಉಚ್ಚೆಂಗಮ್ಮ (ರೇಣುಕೆ), ದೇವಾಲಯದ ಎದುರು ಇರುವ ಮಾತಂಗಿ ಗುಡಿಯಿದ್ದು ರೇಣುಕೆಗೆ ಮಂಗಳಾರತಿಯಾದ ನಂತರ ಆ ಧೂಪವನ್ನೇ ಮಾತಂಗಿಗೂ ಬೆಳಗುವರು. ಮಾತಂಗಿಯ ವಿಗ್ರಹಕ್ಕೆ ಈ ಸಮುದಾಯದ ಜೋಗತಿ (ಬಸವಿ) ಪೂಜಾರಿಯಾಗಿರುವಳೆಂದು, ನೇರ್ಲಹಳ್ಳಿ ದುರುಗಮ್ಮಗೆ ಪೂಜಾರಿಯು ಮಾದಿಗ ಸಮುದಾಯ ಶಂಕರಪ್ಪ ಪೂಜೆ ಮಾಡುತ್ತಾರೆ. ಗೌರ ಸಮುದ್ರದ ಮಾರಮ್ಮ ಜಾತ್ರೆಯಲ್ಲಿ ಜಾತ್ರೆಯ ದಿವಸ ಮಾರಮ್ಮನ ಹಾಗೂ ಮಾತಂಗಿ ಪೌಳಿಗೆ ಹೋಗುತ್ತದೆ ಗೌರಸಮುದ್ರದಲ್ಲಿ ಪೌಳಿಯಲ್ಲಿ ಪ್ರತ್ಯೇಕವಾಗಿ ಮಾರಮ್ಮನನ್ನು ಕೂರಿಸಿದ್ದಾರೆ. ಎದುರು ಮಾತಂಗಿಯನ್ನು ಕೂರಿಸುತ್ತಾರೆ. ಆ ದಿನ ಪೂಜೆಯನ್ನು ಮಾದಿಗ ಸಮುದಾಯದ ಯುವಕ ಲಿಂಗಪ್ಪ ಮಾಡುತ್ತಾನೆ. ಹೀಗೆ ಚಿತ್ರದುರ್ಗದ ಕೆಲವು ಭಾಗದಲ್ಲಿ ಈ ತೆರನಾದ ಪೂಜೆಯನ್ನು ಮಾದಿಗ ಸಮುದಾಯದವರೇ ಮಾಡುತ್ತಾರೆ ಎಂದು ಕ್ಷೇತ್ರಕಾರ್ಯದ ಮೂಲಕ ತಿಳಿದುಕೊಳ್ಳಲಾಗಿದೆ.

೫.೪ ಮತಾಂತರ

ಮತಾಂತರದಂತಹ ಸೂಕ್ಷ್ಮ ವಿಷಯಗಳ ಬಗ್ಗೆ ಮುಕ್ತವಾದ ಹಾಗೂ ಬಹಿರಂಗವಾದ ಚರ್ಚೆಗಳು ಭಾರತದಲ್ಲಿ ನಡೆಯುತ್ತಿರುತ್ತವೆ. ಆದರೆ "ಮತಾಂತರ ವಿಷಯಕ್ಕೆ ಬಂದರೆ ಭಾರತದಲ್ಲಿ ಹಲವು ರೀತಿಗಳ ಮತಾಂತರಗಳ ಚರಿತ್ರೆಯಿದೆ. ಬೌದ್ಧ ಧರ್ಮವನ್ನು ಒಂದು ಕಾಲದಲ್ಲಿ ಜನರು ವ್ಯಾಪಕವಾಗಿ ಸ್ವೀಕರಿಸಿದರು. ಅದೇ ರೀತಿ ಜೈನ ಧರ್ಮವನ್ನು ಸ್ವೀಕರಿಸಿದರು. ಆನಂತರದ ಕಾಲಘಟ್ಟದಲ್ಲಿ ಬಸವಣ್ಣನವರ ಚಳುವಳಿಯಿಂದಾಗಿ ಬೇರೆ ಬೇರೆ ಜಾತಿಗಳಿಗೆ ಸೇರಿವದರು ತಮ್ಮದೇ ಆದ ವೀರಶೈವ-ಲಿಂಗಾಯಿತ ಧರ್ಮ ಅಥವಾ ಮತವನ್ನು ಕಟ್ಟಿಕೊಂಡರು. ಇವೆಲ್ಲವೂ ಒಂದೊಂದು ಬಗೆಯಲ್ಲಿ ಮತಾಂತರಗಳೇ ಹೌದು."[೨೪] ಸಾಮಾಜಿಕ ಸ್ಥಿತಿಯಲ್ಲಿ ಕೆಳಜಾತಿಗಳು ಎಂದು ಕರೆಸಿಕೊಂಡಿರುವ ದಲಿತರು ಅಧಿಕ ಸಂಖ್ಯೆಯಲ್ಲಿ ಇದ್ದರೂ ಉನ್ನತ ಸ್ಥಾನಮಾನಗಳನ್ನು ಹೊಂದಿದವರು ಸಮಾಜದಲ್ಲಿ ಇರುವ ಎಲ್ಲಾ ಸಂಪತ್ತನ್ನು ದೋಚಿಕೊಂಡು ಶೂದ್ರರನ್ನು ವಂಚನೆ ಮಾಡಿರುವುದು ಸಮಾಜದ ಉದ್ದಕ್ಕೂ ಕಾಣುತ್ತದೆ.

ಜೊತೆಗೆ ದಲಿತರ ಮೇಲೆ ನಡೆಯುತ್ತಿರುವ ಸಾಮಾಜಿಕ ದಬ್ಬಾಳಿಕೆ, ಶೋಷಣೆ, ಕಿರುಕುಳ, ಮಹಿಳೆಯರ ಮೇಲೆ ಲೈಂಗಿಕ ಶೋಷಣೆ, ಆರ್ಥಿಕ ನಿರ್ಬಂಧ ಜನರ ಎಲ್ಲಾ ಸೌಲಭ್ಯ ಸೌಕರ್ಯಗಳನ್ನು ಕಿತ್ತುಕೊಳ್ಳುವುದು ಇತ್ಯಾದಿಗಳಿಂದಾಗಿ ದಲಿತರೇ ಸ್ವಯಂ ಪ್ರೇರಿತರಾಗಿ ಯಾವ ಧರ್ಮದಲ್ಲಿ ತಮಗೆ ರಕ್ಷಣೆ ಸಿಗುವುದು ಎಂಬ ಕಾರಣಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಕ್ರೈಸ್ತ ಧರ್ಮವನ್ನು ಸ್ವೀಕರಿಸುವಂತಾಯಿತು.

ದಲಿತರು ಇಂತಹ ಅನೇಕ ಶೋಷಣೆಗಳಿಗೆ ಒಳಗಾಗಿದ್ದರು. ತಮ್ಮ ಬದುಕಿನಲ್ಲಿ ಒಂದು ಪರಿವರ್ತನೆ ಆದೀತು ಎಂದು ನಂಬಿದ್ದ ದಲಿತರು ಹಲವಾರು ಸಾಮಾಜಿಕ ನಿರ್ಬಂಧಗಳಿಗೆ ಈಡಾದರು. ಸಾರ್ವಜನಿಕವಾಗಿರುವಂತಹ ಹೋಟೆಲುಗಳಲ್ಲಿ ಪ್ರವೇಶ ನಿಷೇದ ಒಂದುವೇಳೆ ಪ್ರವೇಶವಿದ್ದರೆ ಅವರಿಗೆ ಪ್ರತ್ಯೇಕವಾದ ತಟ್ಟೆ, ಲೋಟಗಳನ್ನು ಚಪ್ಪರದಲ್ಲಿ ಇಡುತ್ತಾರೆ. ಕೆರೆ ಮತ್ತು ಬಾವಿಯಲ್ಲಿ ನೀರು ತೆಗೆದುಕೊಳ್ಳುವುದು ನಿಷೇಧ, ಮೇಲ್ಜಾತಿಯ ಜನರು ಕೆರೆ ಬಾವಿಯಲ್ಲಿ ನೀರು ಬತ್ತಿ ಹೋದರೆ ದಲಿತರ ಕೆರೆ ಬಾವಿಯಲ್ಲಿ ಯಾವುದೇ ನಿರ್ಬಂಧವಿಲ್ಲದೆ ನೀರನ್ನು ತೆಗೆದುಕೊಂಡು ಹೋಗುವ ಅಧಿಕಾರವಿದೆ. ಆದರೆ ಇವರ ಕೆರೆ ಅಥವಾ ಬಾವಿಯಲ್ಲಿ ನೀರು ಬತ್ತಿದಾಗ ಮಾತ್ರ ನೀರು ಕೊಡಲು ಮುಂದಾಗಲಿಲ್ಲ. ಊರಿನ ಮುಖ್ಯ ಬೀದಿಗಳಲ್ಲಿ ಪ್ರವೇಶ ನಿಷೇಧ ಹಾಗೂ ದಲಿತರ ಮದುವೆ ಮೆರವಣಿಗೆಗಳನ್ನು ನಿರ್ಬಂಧಿಸಲಾಯಿತು.

ದಲಿತರು ಯಾವುದೇ ಧರ್ಮವನ್ನು ಸ್ವೀಕರಿಸಿದ್ದರೂ ಪರಂಪರಾಗತವಾದ ಕಸುಬುಗಳನ್ನೇ ಮುಂದುವರಿಸಿಕೊಂಡು ಬರಬೇಕಾಯಿತು. ಮಾದಿಗರು ಕ್ರೈಸ್ತರಾದರೂ ಮಾದಿಗತನ ಇವರನ್ನು ಬಿಡಲಿಲ್ಲ. ಮಾದಿಗರು ಬೌದ್ಧ ಧರ್ಮಕ್ಕೆ ಹೋದರೂ ಚರಂಡಿ, ಶೌಚಾಲಯ, ರಸ್ತೆ, ಸತ್ತವರಿಗೆ ಕುಣಿ ತೆಗೆಯುವುದು ದೇವಸ್ಥಾನದ ಮುಂದಿನ ಭಾಗವನ್ನು ಸ್ವಚ್ಛ ಮಾಡುವುದು ನಿಂತಿಲ್ಲ. ಕೇವಲ ಪ್ರೌಢಶಿಕ್ಷಣವನ್ನು ಮುಗಿಸಿದರೆ ಅವರಿಗೆ ಅವರ ಕುಲ ಕಸುಬೇ ಗತಿ. ಆರ್ಥಿಕವಾಗಿ ಯಾವ ಸುಧಾರಣೆಯನ್ನು ಕಂಡು ಬರುತ್ತಿಲ್ಲ. ವರ್ತಮಾನಯಲ್ಲಿ ಈ ಭಾಗದ ಜನರು ಕೃಷಿಕೂಲಿ ಕಾರ್ಮಿಕರಾಗಿ ಕೆಲಸವನ್ನು ಮಾಡುವುದು ತಪ್ಪಿಲ್ಲ. ಒಂದುವೇಳೆ ಭೂಮಿ ಇದ್ದರೆ ಅದು ತುಂಡು ನೆಲೆ, ಅದಕ್ಕೆ ಯಾವುದೇ ನೀರಿನ ಅಶ್ರಯವಿಲ್ಲ ಇವರುಗಳ ಸಂಖ್ಯೆ ಹೆಚ್ಚು. ಒಂದು ವೇಳೆ ಪಶುಗಳನ್ನು ಸಾಕಿದ್ದರೆ ಅವುಗಳ ರಕ್ಷಣೆ ಮಾಡುವುದೇ ದೊಡ್ಡ ಕೆಲಸ, ಕಾರಣ ಇವರಿಗೆ ವಾಸ ಮಾಡಲು ವಾಸಸ್ಥಳಗಳೇ ಇಲ್ಲದಂತಹ ಪರಿಸ್ಥಿತಿಯಲ್ಲಿ ಪಶುಗಳನ್ನು ರಕ್ಷಣೆ ಮಾಡುವುದೇ ಕಷ್ಟದ ಕೆಲಸವಾಗಿತ್ತು. ಇಂತಹ ಅನೇಕ ಕಾರಣಕ್ಕಾಗಿ ಒಂದಲ್ಲ ಒಂದು ರೀತಿಯಲ್ಲಿ ಸಾಲ ಮಾಡಿ ಸಾಲದ ಬೋನಿನಲ್ಲಿ ಸಿಕ್ಕಿ ನರಳುವ ಸ್ಥಿತಿ ಮಾದಿಗರದು.

"ಇದನ್ನೆಲ್ಲಾ ಗಮನಿಸಿದಾಗ ತಮ್ಮ ಮುಂದೆ ಬಹು ಆಯ್ಕೆಗಳು ಇದ್ದರೂ ಅಂಬೇಡ್ಕರರು ಬೌದ್ಧ ಧರ್ಮವನ್ನೇ ಯಾಕೆ ಆರಿಸಿದರು ಎಂದರೆ ಸ್ಪಷ್ಟವಾಗುತ್ತದೆ. ಅಂಬೇಡ್ಕರರಿಗೆ ಬ್ರಾಹ್ಮಣ ಧರ್ಮವೂ ಸೇರಿದಂತೆ ವಿವಿಧ ಧರ್ಮಗಳ ಚರಿತ್ರೆ ಮತ್ತು ವರ್ತಮಾನಗಳ ಕುರಿತು ಆಳವಾದ ಅರಿವಿತ್ತು."[೨೫] ಸಮಾಜದಲ್ಲಿ ಇಂತಹ ಶೋಷಣೆಗಳನ್ನು ಮನಗಂಡು ಅಂಬೇಡ್ಕರರು ತಮ್ಮ ಜೀವನದ ಕೊನೆಯಲ್ಲಿ

ತಮ್ಮ ಹಿಂಬಾಲಕರ ಜೊತೆ ಬೌದ್ಧ ಧರ್ಮವನ್ನು ಸ್ವೀಕರಿಸುತ್ತಾರೆ. ಮತಾಂತರದ ಮೂಲಕ ಜಾತಿ ವ್ಯವಸ್ಥೆಯ ವಿರುದ್ಧ ದಂಗೆ ಸಾರುವ ಹೊತ್ತಿನಲ್ಲಿಯೇ ೨೦೧೦ನೇ ಇಸವಿ ಸೆಪ್ಟೆಂಬರ್ ತಿಂಗಳಲ್ಲಿ ಪೇಜಾವರ ಶ್ರೀ ವಿಶ್ವೇಶ್ವರ ತೀರ್ಥ ಸ್ವಾಮಿಯು ಮೈಸೂರಿನ ದೇವರಾಜ ಅರಸು ಕಾಲೋನಿಯಲ್ಲಿ ವಾಸವಿರುವ ಪೌರ ಕಾರ್ಮಿಕರಿಗೆ 'ವೈಷ್ಣವ ದೀಕ್ಷೆ' ನೀಡುವುದಾಗಿ ಘೋಷಿಸಿದರು. ಆದರೆ ಅವರು ವಿಧಿಸಿದ ಕಟ್ಟಳೆ ಏನೆಂದರೆ ದಲಿತರಲ್ಲಿ ಮಾಂಸಹಾರ ಮತ್ತು ಮದ್ಯಸೇವನೆ ಬಿಡಬೇಕೆಂಬುದು. ದಲಿತರು ಕ್ರೈಸ್ತ ಮತ್ತು ಬೌದ್ಧ ಧರ್ಮಗಳಿಗೆ ದೊಡ್ಡ ಸಂಖ್ಯೆಯಲ್ಲಿ ಮತಾಂತರಗೊಳ್ಳುವುದನ್ನು ಕಂಡು ಹಿಂದು ಧರ್ಮದಲ್ಲಿಯೇ ಉಳಿಸಿಕೊಳ್ಳಬೇಕೆಂದು ದಲಿತರ ಕೇರಿಗಳಿಗೆ ಪಾದಯಾತ್ರೆ ಕೈಗೊಂಡರು. ದಲಿತರಿಗೆ ವೈಷ್ಣವ ದೀಕ್ಷೆ ನೀಡುವ ಆಂದೋಲನ ಪ್ರಾರಂಭಿಸಿದರು."[೨೬]

ದಲಿತರನ್ನು ಯಾಕೆ ಸ್ವತಂತ್ರವಾಗಿ ಬದುಕಲು ಇಂತಹ ಮಠ ಮಾನ್ಯರು ಬಿಡುವುದಿಲ್ಲ. ಇವರು ಬೇಕಾದರೆ ವೈಷ್ಣವ ಧರ್ಮವನ್ನು ಸ್ವೀಕರಿಸಬಹುದು ಎಂದು ಹೇಳುತ್ತಾರೆ. ದಲಿತರು ಸೇವಿಸುವ ಆಹಾರದ ಮೇಲೆ ನಿರ್ಬಂಧವನ್ನು ಹೇರಲು ಇವರು ಯಾರು? ಅವರ ಇಚ್ಚೆಗೆ ಅನುಗುಣವಾಗಿ ಆಹಾರವನ್ನು ಸೇವಿಸಲು ಬಿಡಬೇಕು ಹಾಗೂ ಪೇಜಾವರ ಶ್ರೀ ವಿಶ್ವೇಶ್ವರ ತೀರ್ಥ ಸ್ವಾಮೀಜಿಗಳು ದಲಿತರ ಕೇರಿಗಳಿಗೆ ಹೋದರೆ ದಲಿತರು ಎದುರಿಸುತ್ತಿರುವ ಸಮಸ್ಯೆಗಳು ಪರಿಹಾರವಾಗಲಾರವು. "ವಾಸ್ತವವಾಗಿ ದಲಿತರನ್ನು ಕುರಿತು ಸ್ವಾಮೀಜಿಯವರಿಗೆ ಕಾಳಜಿ ಇರುವುದು ದಿಟವೇ ಆಗಿದ್ದ ಪಕ್ಷದಲ್ಲಿ ದಲಿತ ಸಮುದಾಯಗಳನ್ನು ಬಾಧಿಸುತ್ತಿರುವ ಶೈಕ್ಷಣಿಕ, ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳ ನಿವಾರಣೆಯ ದಿಕ್ಕಿನಲ್ಲಿ ತಮ್ಮ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದರೆನ್ನಿಸುತ್ತದೆ. ದಲಿತರ ವಿರುದ್ಧ ಸವರ್ಣೀಯರು ಎದುರಿಸುತ್ತಿರುವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳದ ಶ್ರೀಗಳು ದಲಿತರ ವೈಷ್ಣವ ದೀಕ್ಷೆ ನೀಡುವ ಮೂಲಕ ದಲಿತರ ಸಂಸ್ಕೃತಿಗೆ ಬಗೆದಂತಹ ಬ್ರಾಹ್ಮಣ ಸಂಸ್ಕೃತಿಯ ಮೌಢ್ಯ, ಕಂದಾಚಾರಗಳನ್ನು ವಿಸ್ತರಿಸುವಂತಾಗುತ್ತದೆಯಷ್ಟೆ."[೨೭]

ವಾಸ್ತವವಾಗಿ ಸ್ವಇಚ್ಚೆಯ ಅರಿವಿನ ಮತಾಂತರವನ್ನು ತಡೆಯಲಾಗದು, ತಡೆಯಬಾರದು. ಆದರೆ ನಿಜವಾಗಿ ವರ್ತಮಾನದಲ್ಲಿ ಮಾದಿಗರು ಹೆಚ್ಚು ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದುತ್ತಿರುವುದು ಕ್ಷೇತ್ರಕಾರ್ಯದಲ್ಲಿ ತಿಳಿದ ಅಂಶ. ಯಾವುದೇ ಸಾರ್ವಜನಿಕ ಸ್ಥಳಗಳಲ್ಲಿ ಹೋಗಿ ನಾವು ಕ್ರೈಸ್ತರು ಎಂದರೆ ಯಾವುದೇ ನಿರ್ಬಂಧಗಳು ಕಡಿಮೆಯಾಗುತ್ತವೆ. ಇನ್ನು ಕೆಲವು ಕ್ರೈಸ್ತ ಮಿಷನರಿಗಳು ಈ ಸಮುದಾಯದ ಮಕ್ಕಳಿಗೆ ಉಚಿತ ಶಿಕ್ಷಣ, ವೈದ್ಯಕೀಯ ಶಿಕ್ಷಣ, ವಸತಿ ಹೀಗೆ ಅನೇಕ ಮೂಲಭೂತ ಸೌಲಭ್ಯಗಳನ್ನು ನೀಡುತ್ತವೆ. ಇದರ ಮೂಲಕ ಸಮಾಜದಲ್ಲಿ ಉನ್ನತ ಮಟ್ಟದ ಜೀವನವನ್ನು ನಡೆಸಬಹುದು ಎನ್ನುವ ಕಾರಣಕ್ಕೆ ಮತಾಂತರ ಹೊಂದುತ್ತೇವೆ ಎಂದು ಹೇಳುತ್ತಾರೆ.

ಪರಿಸಮಾಪ್ತಿ

ಗ್ರಾಮೀಣ ಸಮಾಜದಲ್ಲಿ ಇನ್ನೂ ಅದೇ ಅಂತರ ಉಳಿದುಕೊಂಡಿದೆ. ವಿಚಾರದಲ್ಲಿ ಕಡಿಮೆಯಾಗಿದೆ, ಆದರೆ ವ್ಯವಹಾರದಲ್ಲಿ ಆಗಿಲ್ಲ, ಇದು ಸ್ಪಷ್ಟವಾಗಿ ವಿರೋಧಾಭಾಸವಾಗಿ ಕಾಣುತ್ತದೆ. ಆದರೆ ಇದು

ಸತ್ಯವಾಗಿದೆ ಪರಿಣಿತ ಜಾತಿಗಳು ಹಾಗೂ ಚಾಂಡಾಲರಲ್ಲಿ ಶಿಕ್ಷಣದ ಪ್ರಸಾರ ಹೆಚ್ಚುತ್ತಿದೆ. ಆರ್ಥಿಕ ಸ್ಥಿತಿಯಲ್ಲಿ ಸುಧಾರಣೆ ಆಗುತ್ತಿದೆ. ಶಿಕ್ಷಣ ಮತ್ತು ಆರ್ಥಿಕ ಸುಧಾರಣೆಯಿಂದಾಗಿ ಉನ್ನತ ಜಾತಿಯ ಜನರಲ್ಲಿ ಈರ್ಷ್ಯೆ-ದ್ವೇಷ ಬೆಳೆಯುತ್ತಿದೆ. ಅಂತ್ಯಜರ ಮಕ್ಕಳ ಶಿಕ್ಷಣ ಹಾಳಾಗಲಿ, ಸರಕಾರಿ ನೌಕರಿಗೆ ಬಂದ ಜನರನ್ನು ಮೊಕದ್ದಮೆಗಳಲ್ಲಿ ಸಿಲುಕಿಸಿ ನೌಕರಿಯಿಂದ ಹೊರಹಾಕುವ ಅವಕಾಶಕ್ಕಾಗಿ ಕಾಯುತ್ತಿದ್ದಾರೆ. ಇದೊಂದು ಸಾಮಾನ್ಯ ದೂರು. ಅವರ ತಂತ್ರ ಸಫಲವಾಗದಿದ್ದಲ್ಲಿ ಅವರ, ಈ ವರ್ಗದ ಉಚ್ಚ ಪದದಲ್ಲಿ ಇರುವ ಅಧಿಕಾರಗಳನ್ನು ತಮ್ಮ ಕಡೆ ಸೆಳೆದುಕೊಳ್ಳುವ ಸಫಲಪ್ರಯತ್ನ ಮಾಡುತ್ತಾರೆ. ಇಂಥ ಉಚ್ಚ ಪದವಿಯಲ್ಲಿರುವ ಅಧಿಕಾರಿ ತಮ್ಮ ಸಮಾಜದಿಂದ ಬೇರೆಯಾಗಿ ಬಿಡುತ್ತಾರೆ. ಈಗ ತಾವು ದೊಡ್ಡವರ ಶ್ರೇಣಿಯಲ್ಲಿ ಬಂದಿದ್ದೇವೆ ಎಂದು ಅವರು ಭಾವಿಸುತ್ತಾರೆ ವಾಸ್ತವವಾಗಿ ಅವರು ಇಲ್ಲಿಯವರೂ ಆಗಿರುವುದಿಲ್ಲ, ಅಲ್ಲಿಯವರೂ ಆಗಿರುವುದಿಲ್ಲ."[೨೮]

ಗ್ರಾಮೀಣ ಕ್ಷೇತ್ರದಲ್ಲಿ ಅಸ್ಪೃಶ್ಯತೆಯ ಮುಖ್ಯ ಆಧಾರ ನೀರು ಆಗಿರುತ್ತಿತ್ತು ಸಾರ್ವಜನಿಕ ಬಾವಿ ಅಥವಾ ಮೆಟ್ಟಿಲು ಇಳಿದು ತುಂಬುವ ಬಾವಿಯಿಂದ, ಅಸ್ಪೃಶ್ಯರೆಂದು ತಿಳಿಯಲಾಗಿರುವ ಜನರಿಗೆ ನೀರನ್ನು ಪಡೆಯುವ ಸೌಕರ್ಯವೂ ಇರುತ್ತಿರಲಿಲ್ಲ. ಅವರು ಮುಟ್ಟಿದ ನೀರನ್ನು ಉಚ್ಚವರ್ಗದ ಜನರು ಕುಡಿಯುತ್ತಿರಲಿಲ್ಲಿ, ಸ್ವಾತಂತ್ರ್ಯ ನಂತರ ಸರ್ಕಾರಿ ಬೋರ್‌ವೆಲ್‌ಗಳು, ಬಾವಿಗಳು ಈ ಸಮಸ್ಯೆಗಳ ಪರಿಹಾರ ಒದಗಿಸಿದವು. ಎಲ್ಲರಿಗೂ ತಮ್ಮ ತಮ್ಮ ಕುಡಿಯುವ ನೀರಿನ ಮೂಲಗಳು ದೊರಕಿವೆ. ಈ ಪರಿವರ್ತನೆಗಳಿಂದ ಶೂದ್ರರಲ್ಲಿ ವಿಶೇಷವಾಗಿ ಅಂತ್ಯಜರು ಅಥವಾ ಪರಿಗಣಿತ ಜಾತಿಯ ಜನರಲ್ಲಿ ಆತ್ಮಗೌರವದ ಉದಯವಾಗಿದೆ. ಈ ವಿಭಜನಯು ಒಳ್ಳೆಯದಕ್ಕಾಗಿಯೇ ಆಗಿದೆ."[೨೯]

ಚಿತ್ರದುರ್ಗ ಜಿಲ್ಲೆಯ ಮಾದಿಗ ಸಮುದಾಯದಲ್ಲಿ ಧಾರ್ಮಿಕ ಕ್ಷೇತ್ರದಲ್ಲಿ ಬದಲಾವಣೆಯಾಗಿರುವುದು ನೋಡಬಹುದು. ಇವರು ಮಾಡುವ ಸಾಂಪ್ರದಾಯಿಕ ವೃತ್ತಿಯಾದ ಚಮ್ಮಾರಿಕೆ, ಸತ್ತ ದನಗಳ ಚರ್ಮವನ್ನು ಹದ ಮಾಡುವುದು, ಪಾದರಕ್ಷೆ ಮಾಡುವುದು, ಬಿಟ್ಟಿದನಗಳನ್ನು ಕಾಯುವುದು, ಬಿಟ್ಟಿಸೇವೆಯನ್ನು ಮಾಡುವುದು, ಗುಲಾಮಗಿರಿಯಿಂದ ಮುಕ್ತವಾಗಿರುವುದು, ಜೀತಪದ್ಧತಿ ನಾಶವಾಗಿ ಹೊಸವೃತ್ತಿಗಳ ಕಡೆ ಮುಖ ಮಾಡಿರುವುದನ್ನು ನೋಡಬಹುದು. ಆಧುನೀಕರಣ, ನಗರೀಕರಣ, ಜಾಗತೀಕರಣ, ಸಂಸ್ಕೃತಿಕರಣದಿಂದ ಇವರ ಬದುಕಿನಲ್ಲಿ ಹೊಸ ತಿರುವು ಮೂಡಿರುವುದು ಕಂಡುಬಂದಿದೆ.

ಟಿಪ್ಪಣಿಗಳು

೧. ಸೋಮಶೇಖರ, ೨೦೧೦, ಸಿದ್ಧಿಯರ ಸಾಮಾಜಿಕ ಸ್ಥಿತ್ಯಂತರಗಳು, ಪಿಎಚ್ ಡಿ, (ಅಪ್ರಕಟಿತ ಮಹಾಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪುಟ, ೬೩.

೨. ವಡ್ಡಗೆರೆ ನಾಗರಾಜಯ್ಯ, ೨೦೧೪, ಕರ್ನಾಟಕ ಆದಿಜಾಂಬವ ಮಾತಂಗ ಪರಂಪರೆ, ಪಿಎಚ್ ಡಿ, (ಅಪ್ರಕಟಿತ ಮಹಾ ಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪುಟ, ೧೩೧.

೩. ಅದೇ ಪುಟ, ೨೮೮.

೪. ಅದೇ ಪುಟ, ೧೪೫.

೫. ಅದೇ ಪುಟ, ೨೭೭.

೬. ಹಿರೇಮಠ ಎಸ್ ಎಸ್, ೧೯೯೩, ಕರ್ನಾಟಕ ದಲಿತ ಸಂಸ್ಕೃತಿ ಪರಂಪರೆ (ಭಾಗ-೨), ಜಾತ್ರೆಗಳು, ಪುಟ, ೧೭.

೭. ಹೊನ್ನುಂಗೂರ, ೨೦೧೩, ಚಲುವಾದಿ ಸಮುದಾಯದ ಸಮಾಜಶಾಸ್ತ್ರೀಯ ಅಧ್ಯಯನ, ಪಿಎಚ್.ಡಿ (ಅಪ್ರಕಟಿತ ಮಹಾ ಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪುಟ, ೧೬೮

೮. ಹಿರೇಮಠ ಎಸ್ ಎಸ್, ೧೯೯೩, ಕರ್ನಾಟಕ ದಲಿತ ಸಂಸ್ಕೃತಿ ಪರಂಪರೆ (ಭಾಗ-೨), ಜಾತ್ರೆಗಳು, ಪುಟ, ೪೭.

೯. ಅದೇ ಪುಟ, ೪೩.

೧೦. ರಮೇಶ ಬಿ ಜಿ, ೨೦೦೭, ನಮ್ಮ ಹಬ್ಬಗಳು, ಪುಟ, ೬.

೧೧. ಅದೇ ಪುಟ, ೮.

೧೨. ನರಸಿಂಹಮೂರ್ತಿ ಎಚ್, ೨೦೦೨, ನಮ್ಮ ಹಬ್ಬಗಳು, ಪುಟ, ೧೧೫.

೧೩. ಅದೇ ಪುಟ, ೧೧೬.

೧೪. ಅದೇ ಪುಟ, ೧೨.

೧೫. ಗುರುಮೂರ್ತಿ ಕೆ ಜಿ, ೨೦೧೧, ಕರ್ನಾಟಕ ಜಾನಪದ ಹಬ್ಬಗಳು ಮತ್ತು ಅವುಗಳ ಸಾಂಸ್ಕೃತೀಕರಣ, ಪುಟ, ೬೮.

೧೬. ಅದೇ ಪುಟ, ೧೨೦.

೧೭. ಅದೇ ಪುಟ, ೧೧೫.

೧೮. ನರಸಿಂಹಮೂರ್ತಿ ಎಚ್, ೨೦೦೨, ನಮ್ಮ ಹಬ್ಬಗಳು, ಪುಟ, ೪೧.

೧೯. ಅದೇ ಪುಟ, ೪೧.

೨೦. ಹಿರೇಮಠ ಎಸ್ ಎಸ್, ೧೯೮೮, ಜನಪದ ಸಮಾಜ ಸಂಸ್ಕೃತಿ, ಪುಟ, ೧೦೪.

೨೧. ಅದೇ ಪುಟ, ೧೨೧.

೨೨. ರಾಜಕುಮಾರ, ೨೦೦೭, ಸ್ವಾತಂತ್ರ್ಯ ಪೂರ್ವದಲ್ಲಿ ಮಾದಿಗ ಸಮುದಾಯ, ಚರಿತ್ರೆ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪುಟ, ೨೭೭.

೨೩. ಹನುಮಂತಪ್ಪ ಡಿ, ೨೦೦೯, ಮೊಳಕಾಲ್ಮೂರು ಪರಿಸರದ ತಾಲ್ಲೂಕಿನ ಮಾದಿಗ ಸಮುದಾಯದ ಒಂದು ಅಧ್ಯಯನ, (ಎಂಫಿಲ್ ಪ್ರಬಂಧ), ಜಾನಪದ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪುಟ, ೪೮.

೨೪. ಪ್ರಧಾನ ಗುರುದತ್ತ (ಸಂ), ೨೦೦೯, ಮತಾಂತರ (ಸತ್ಯದ ಮೇಲೆ ಹಲ್ಲೆ), ಪುಟ, ೪೧.

೨೫. ಅದೇ ಪುಟ, ೪೦.

೨೬. ವಡ್ಡಗೆರೆ ನಾಗರಾಜಯ್ಯ, ೨೦೧೪, ಕರ್ನಾಟಕ ಆದಿಜಾಂಬವ ಮಾತಂಗ ಪರಂಪರೆ, ಪಿಎಚ್ ಡಿ, (ಅಪ್ರಕಟಿತ ಮಹಾ ಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪುಟ, ೪೧೮.

೨೭. ಅದೇ ಪುಟ, ೪೧೯.

೨೮. ಹೆಗಡೆ ಆರ್ ಪಿ (ಅನು), ಜಿಯಲಾಲ ಆರ್ಯ (ಮೂಲ), ೨೦೧೪, ದಲಿತ ಸಮಾಜ ಇಂದಿನ ಸವಾಲುಗಳು, ಪುಟ, ೮೯.

೨೯. ಅದೇ ಪುಟ, ೯೦.

ಅಧ್ಯಾಯ: ಆರು
ಮಾದಿಗ ಸಮುದಾಯದ ಆರ್ಥಿಕ ಬದಲಾವಣೆ

೬.೧ ಆರ್ಥಿಕ ಜೀವನ

೬.೨ ಪಾರಂಪರಿಕ ಕುಲಕಸುಬುಗಳು

೬.೩ ಪಶುಪಾಲನೆ

೬.೪ ಕೃಷಿ

೬.೫ ವರ್ತಮಾನದಲ್ಲಿ ಕಸುಬುದಾರರ ಸ್ಥಿತಿಗತಿಗಳು

ಅಧ್ಯಾಯ: ಆರು
ಮಾದಿಗ ಸಮುದಾಯದ ಆರ್ಥಿಕ ಬದಲಾವಣೆ

ಪೀಠಿಕೆ

ಒಂದು ರಾಷ್ಟ್ರ ಅಥವಾ ದೇಶ ಅಭಿವೃದ್ಧಿ ಆ ದೇಶದಲ್ಲಿರುವ ಜನರ ತಲಾಆದಾಯ, ಶಿಕ್ಷಣ, ಸಾಮಾಜಿಕ ಹಾಗೂ ಆರ್ಥಿಕ ಕ್ಷೇತ್ರದ ಮೇಲೆ ನಿಂತಿರುತ್ತದೆ. ಭಾರತ ದೇಶವು ಪ್ರಜಾಪ್ರಭುತ್ವ ರಾಷ್ಟ್ರವಾಗಿರುವುದರಿಂದ ಪ್ರತಿಯೊಬ್ಬರಿಗೂ ಬದುಕಲು, ಅವರ ರಕ್ಷಣೆಯನ್ನು ಮಾಡುವ ಉದ್ಧೇಶವನ್ನು ಸರಕಾರ ಹೊಂದಿದೆ. ಇಂತಹ ಅಭಿವೃದ್ಧಿ ಕಡೆಗೆ ಸಾಗುವಂತಹ ಭಾರತ ದೇಶದಲ್ಲಿ ಆರ್ಥಿಕ, ಸಾಮಾಜಿಕ, ರಾಜಕೀಯ ಹಾಗೂ ಶೈಕ್ಷಣಿಕವಾಗಿ ಅತ್ಯಂತ ತಳಮಟ್ಟದ ಜೀವನವನ್ನು ಶ್ರಮಪಟ್ಟು ಮೇಲ್ವರ್ಗದವರ ನಡೆಸುತ್ತ ಬಂದಿವೆ. ಸೇವೆಯನ್ನು ಮಾಡಿಕೊಂಡು ಬಂದ ತಳಸಮುದಾಯಗಳು ಇವತ್ತು ಸಂವಿಧಾನದ ಅಡಿಯಲ್ಲಿ ಸಿಗುವಂತಹ ಕೆಲವು ಸೌಲಭ್ಯಗಳನ್ನು ಪಡೆಯುವ ಪ್ರಯತ್ನದಲ್ಲಿವೆ. ಸರ್ಕಾರವು ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವವರನ್ನು ಗುರುತಿಸಲು ಸ್ವಾತಂತ್ರ್ಯ ಪೂರ್ವದಿಂದಲೂ ಅನೇಕ ಆಯೋಗಗಳನ್ನು ರಚನೆ ಮಾಡಲಾಗಿದೆ. ಪ್ರತಿಯೊಂದು ಆಯೋಗಗಳು ಅಸ್ಪೃಶ್ಯ ವರ್ಗಗಳು ಆರ್ಥಿಕವಾಗಿ ಹಿಂದುಳಿದಿವೆ ಎಂಬುದನ್ನು ಸ್ಪಷ್ಟಪಡಿಸಿದವು. ಅದರಂತೆ ಅವರ ಅಭಿವೃದ್ಧಿಗೆ ಕೆಲವೊಂದು ಸಲಹೆಗಳನ್ನು ಸೂಚಿಸಿದವು. ಹೀಗೆ ಸಂವಿಧಾನಬದ್ಧವಾದ ಸಾಮಾಜಿಕ ನ್ಯಾಯವನ್ನು ನೀಡುವ ಸಲುವಾಗಿ ಸರ್ಕಾರವು ಪಂಚವಾರ್ಷಿಕ ಯೋಜನೆಗಳ ಮೂಲಕ ಕ್ರಮ ಕೈಗೊಂಡಿತ್ತು. ಈ ರೀತಿಯಾಗಿ ಕೈಗೊಂಡ ಕ್ರಮಗಳು ಎಷ್ಟರ ಮಟ್ಟಿಗೆ ಸಾಮಾಜಿಕವಾಗಿ ಅಭಿವೃದ್ಧಿ ಹೊಂದಲು ಸಹಕಾರಿಯಾಗಿವೆ ಎಂದು ತಿಳಿಯಲು ಇಲ್ಲಿ ಪ್ರಯತ್ನಿಸಲಾಗಿದೆ.

ಚಿತ್ರದುರ್ಗ ಜಿಲ್ಲೆಯ ಮಾದಿಗರ ಆರ್ಥಿಕ ಪರಿಸ್ಥಿತಿ ತುಂಬಾ ದುಃಸ್ಥಿತಿಯಲ್ಲಿದೆ. ಇಲ್ಲಿನ ಬಹುಪಾಲು ಜನರಿಗೆ ಭೂಮಿಯೇ ಇಲ್ಲ ಇದ್ದರೂ ಸಹ ಕಡಿಮೆ ಪ್ರಮಾಣದಲ್ಲಿದೆ. ಹೀಗಾಗಿ ಕೆಲವರು ಬೇರೆಯವರ ಹೊಲ-ಗದ್ದೆಗಳಲ್ಲಿ ಕೃಷಿ ಕಾರ್ಮಿಕರಾಗಿ ಕೆಲಸವನ್ನು ಮಾಡುವುದರ ಮೂಲಕ ಜೀವನ ನಡೆಸುತ್ತಿದ್ದಾರೆ.

ಬಹುತೇಕ ಮಾದಿಗ ಸಮುದಾಯದ ಜನರು ವ್ಯವಸಾಯದ ಕೂಲಿಯನ್ನೇ ನೆಚ್ಚಿಕೊಂಡಿದ್ದಾರೆ. ಇನ್ನು ಕೆಲವರು ಪಾರಂಪರಿಕವಾಗಿ ನೆಚ್ಚಿಕೊಂಡು ಬಂದಿರುವ ಒಕ್ಕಲುತನ, ಚರ್ಮದಿಂದ ಪಾದರಕ್ಷೆ ಮಾಡಿಕೊಡುವ ವೃತ್ತಿಯನ್ನು ಮಾಡಿಕೊಂಡು ಬಂದಿದ್ದಾರೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಬಹುತೇಕ ಜನರು ಮಳೆ ಆಧಾರಿತವಾದ ಒಣಭೂಮಿಯನ್ನು ಹೊಂದಿದ್ದಾರೆ. ಮಳೆಯನ್ನು ನಂಬಿಕೊಂಡು ಬದುಕುತ್ತಿದ್ದಾರೆ. ಅಲ್ಪಸ್ವಲ್ಪ ಭೂಮಿಯನ್ನು ಹೊಂದಿದ್ದರೂ ಆ ಭೂಮಿಯನ್ನು ತಮ್ಮ ಮಕ್ಕಳ ಮದುವೆಗೆ, ಹಬ್ಬ–ಹರಿದಿನಗಳಿಗೆ ಕಳೆದುಕೊಂಡು ದಿಕ್ಕು ಕಾಣದೆ ಅಬ್ಬೆಪಾರಿಗಳಾಗಿದ್ದಾರೆ. ಇನ್ನು ಕೆಲವರು ಬೆಳೆದಿರುವ ಬೆಳೆಗಳನ್ನು ಮಧ್ಯವರ್ತಿಗಳು ವ್ಯಾಪಾರದಲ್ಲಿ ಮೋಸಕ್ಕೊಳಗಾಗುತ್ತಿದ್ದಾರೆ. ಇಂತಹ ಅನ್ಯಾಯಕ್ಕೆ ಒಳಗಾಗಿರುವ ಈ ಸಮುದಾಯದ ಮುಗ್ಧತೆಯು ತಿಳಿದುಕೊಂಡು ಇವರ ಬಾಳಿನ ಜೊತೆ ಆಟವಾಡುತ್ತಿದ್ದಾರೆ. ನಗರೀಕರಣದ ವೇಗಕ್ಕೆ ಸಿಲುಕಿ ಓಡಲಾಗದ, ಬೇರು ಕಿತ್ತಸೆದ ಬಳ್ಳಿಗಳಂತೆ ಬಾಡಿ ಹೋಗುತ್ತಿದ್ದಾರೆ. ಇಂಥವೆಲ್ಲ ಸಮಸ್ಯೆಗಳನ್ನು ಅರಿತುಕೊಂಡು ಶಿಕ್ಷಣವನ್ನು ಪಡೆಯುವ ದಿಕ್ಕಿಗೆ ಸಾಗುವಂತಹ ಪ್ರಯತ್ನವನ್ನು ಇವತ್ತು ಈ ಸಮುದಾಯದ ಯುವಕರು ಮಾಡಬೇಕಾಗಿದೆ.

ಗ್ರಾಮೀಣವಾಸಿಗಳು ಶಿಕ್ಷಣ ಪಡೆದಾದ ನಂತರ ಇಂದು ಕೃಷಿವಲಯದಲ್ಲಿ ತೀರಾ ಸುಧಾರಿತ ಮಾದರಿಯ ಯಂತ್ರೋಪಕರಣಗಳನ್ನು ಬಳಸುತ್ತಾರೆ. ಸುಧಾರಿತ ಬೀಜ, ಗೊಬ್ಬರ, ಸಾಲಸೌಲಭ್ಯಗಳ ಬಗ್ಗೆ ಅವರಿಗಿಂದು ತಿಳಿವಳಿಕೆಯಿದೆ. ಜೊತೆಗೆ ಚಿತ್ರದುರ್ಗ ಜಿಲ್ಲೆಯಲ್ಲಿ ಇರುವ ಹಿರಿಯೂರು ತಾಲ್ಲೂಕಿನಲ್ಲಿ 'ಬೊಬುರೂ'ನಲ್ಲಿ ರೈತರ ಸಲುವಾಗಿ ಕೃಷಿಗೆ ಸಂಬಂಧಿಸಿದ ತರಬೇತಿ ಮತ್ತು ರೈತರಿಗೆ ಪ್ರಾಯೋಗಿಕವಾಗಿ ಮಣ್ಣು ಪರೀಕ್ಷೆ, ಬೀಜಗಳನ್ನು ನಾಟಿ ಮಾಡುವ ವಿಧಾನದ ಬಗ್ಗೆ, ಬೀಜಗಳನ್ನು ಸಂರಕ್ಷಣೆ ಮಾಡುವ ವಿಧಾನಗಳನ್ನು ತಿಳಿಸುವಂಥ ಕಾರ್ಯವನ್ನು ಮಾಡುತ್ತಿದ್ದಾರೆ. ಸರ್ಕಾರವು ಪ್ರತಿಯೊಂದು ತಾಲ್ಲೂಕಿನಲ್ಲಿ ರೈತರ ಸಂಪರ್ಕ ಕೇಂದ್ರಗಳು, ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ, ರೇಷ್ಮೆ ಇಲಾಖೆ ಇವುಗಳು ರೈತರಿಗೆ ಗೊಬ್ಬರ, ಬೀಜ, ವ್ಯವಸಾಯದ ಸಲಕರಣೆಗಳು ಮತ್ತು ಕೃಷಿಯಲ್ಲಿ ಅಭಿವೃದ್ಧಿ ಹೊಂದಿದ ಕ್ಷೇತ್ರಗಳಿಗೆ ರೈತರನ್ನು ಕರೆದುಕೊಂಡು ಹೋಗಿ ಬೆಳೆಗಳ ಬಗ್ಗೆ ಮಾಹಿತಿಯನ್ನು ನೀಡುತ್ತಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಗೃಹ ಕೈಗಾರಿಕೆಗಳನ್ನು ಸ್ಥಾಪಿಸುವ ಸಲುವಾಗಿ ಸಾಲ ಸೌಲಭ್ಯವನ್ನು ನೀಡುತ್ತಿದ್ದಾರೆ. ಹಿಂದಿನಂತೆ ಜಮೀನ್ದಾರ ಸಾಹುಕಾರ ಶೋಷಣೆ ಮಾಡುವಂತಿಲ್ಲ, ಯಾವುದೇ ಅನ್ಯಾಯ ನಡೆದರೆ ಕಾನೂನಿನ ಮೂಲಕ ನ್ಯಾಯವನ್ನು ಪಡೆಯವ ನಿಟ್ಟಿನಲ್ಲಿ ಮುಂದಾಗುತ್ತಿದ್ದಾರೆ.

೬.೧ ಆರ್ಥಿಕ ಜೀವನ

ಭೂಮಿಯ ಮೇಲೆ ಮಾನವ ವಿಕಾಸವಾದ ಆರಂಭದಿಂದ ಇಂದಿನವರೆಗೂ ಕಾಲಕಾಲಕ್ಕೆ ಅನೇಕ ಬದಲಾವಣೆಗಳನ್ನು ಹೊಂದುತ್ತಾ ಬಂದಿದ್ದಾನೆ. ಒಂದು ಕಾಲಕ್ಕೆ ಹೊಟ್ಟೆಪಾಡಿಗಾಗಿ ಬೇಟೆಯನ್ನು ಅವಲಂಬಿಸಿ ಜೀವನವನ್ನು ಸಾಗಸುತ್ತಿದ್ದ ಮಾನವ. ನಂತರದ ಹಂತದಲ್ಲಿ ಪಶುಪಾಲನೆಯನ್ನು

ಕೈಗೊಂಡು, ಹೊಟ್ಟೆ ಹೊರೆಯಲು ಪ್ರಾರಂಭ ಮಾಡಿದ. ನಂತರ ದಿನಮಾನಗಳಲ್ಲಿ ಕೃಷಿಯನ್ನು ಅವಲಂಬಿಸಿ ಬದುಕಲು ರೂಪುರೇಷೆಗಳನ್ನು ಹಾಕಿಕೊಂಡು ಸಾಗಿಬಂದುದು ಇತಿಹಾಸದಲ್ಲಿ ದಾಖಲೆಯಾಗಿದೆ. ಹೀಗಾಗಿ ಪ್ರಕೃತಿಯನ್ನು ಬಿಟ್ಟರೆ ಮಾನವ ಬದಕಲಾರ. ಆದ್ದರಿಂದ ಮಾನವ ಪ್ರಕೃತಿ ಮಡಿಲಲ್ಲೇ ತನ್ನ ಜೀವನವನ್ನು ಆದಿಕಾಲದಿಂದ ಇಂದಿನವರೆಗೂ ಬದುಕನ್ನು ಒಂದಿಲೊಂದು ರೀತಿಯಲ್ಲಿ ಜೀವನವನ್ನು ಕಟ್ಟಿಕೊಳ್ಳುವಲ್ಲಿ ಪ್ರಯತ್ನ ಮಾಡುತ್ತಬಂದಿದ್ದಾನೆ.

ಪ್ರಾಚೀನ ಕಾಲದಲ್ಲಿ ಚಾತುರ್ವರ್ಣ ಪದ್ಧತಿಯಲ್ಲಿ ಶ್ರೇಷ್ಠರೆನಿಸಿಕೊಂಡಿರುವವರು ಅಲ್ಪ ಮತಸ್ಥರಾಗಿದ್ದರೂ. ಕೆಲವರು ದೈನಂದಿನ ಸಾಮಾಜಿಕ ನಡವಳಿಕೆಗಳಲ್ಲಿ ನಿಯಂತ್ರಿಸುವ ಶಕ್ತಿವಂತರು. ಅವರು ಹಾಕಿದ ನಿಯಮಗಳನ್ನು ಇಂದಿಗೂ ಪ್ರತ್ಯಕ್ಷವಾಗಿ ಇಲ್ಲವೆ ಪರೋಕ್ಷವಾಗಿ ಪಾಲಿಸುವಂತಹ ನಿರ್ಭಾಗ್ಯ ಸಮುದಾಯಗಳು ಭಾರತದಲ್ಲಿ ವಾಸವಾಗಿದ್ದಾರೆ. ವರ್ಣವ್ಯವಸ್ಥೆಯು ಕಾಲ ನಂತರ ದಿನಗಳಲ್ಲಿ ವರ್ಗಗಳಾಗಿ ಮಾರ್ಪಾಟುಗೊಂಡವು. ತದನಂತರ ಜಾತಿ ವ್ಯವಸ್ಥೆಯಾಗಿ ಬೆಳವಣಿಗೆಯನ್ನು ಪಡೆದುಕೊಂಡು. ಜಾತಿಗಳು ಮಾಡುವ ಕುಲ ಕಸುಬುಗಳ ಆಧಾರದ ಮೇಲೆ ಭಾರತ ಸಮಾಜದ ಮಟ್ಟಗೆ ಗುರುತಿಸುವ ಪ್ರಯತ್ನಗಳು ನಡೆದವು. ಇಂದಿಗೂ ಬಹುತೇಕ ಗ್ರಾಮೀಣ ಪ್ರದೇಶದ ಸಮುದಾಯಗಳು ಶೋಷಿತ ವರ್ಗದ ನೆರಳಲ್ಲಿ ನಿಂತಿರುವುವನ್ನು ಕಾಣಬಹುದು. ಈ ಜನರಲ್ಲಿ ಸುಲಭವಾಗಿ ನಿರ್ಧರಿಸಲಾರದಂತಹ ಹಲವು ಸಮಸ್ಯೆಗಳು ಕಂಡುಬರುತ್ತಿವೆ. ಅವುಗಳೆಂದರೆ ಬಡತನ, ದಾರಿದ್ರ್ಯ, ನಿರುದ್ಯೋಗ, ಅಜ್ಞಾನ, ಶಿಕ್ಷಣದ, ಆರ್ಥಿಕತೆಯ ಕೊರತೆ ಹೀಗಾಗಿ ಇವರು ಆರ್ಥಿಕ ಕ್ಷೇತ್ರದಲ್ಲಿ ಹಿನ್ನಡೆಯ ಜೀವನವನ್ನು ನಡೆಸುತ್ತಿದ್ದಾರೆ.

ಒಂದು ಸಮುದಾಯವು ಅನುಭವಿಸುತ್ತಿರುವ ಸಂಪತ್ತಿನ ಸದುಪಯೋಗ, ಶಿಕ್ಷಣ, ಸಂಪನ್ಮೂಲದ ಪಾತ್ರ, ಕೌಟುಂಬಿಕ ಹಿನ್ನೆಲೆ ಆಧಾರದ ಮೇಲೆ ಸಮುದಾಯದ ಸ್ಥಾನಮಾನಗಳನ್ನು ಗುರುತಿಸಬಹುದು. ಆರ್ಥಿಕ ಚಟುವಟಿಕೆಯ ಆಧಾರದ ಮೇಲೆ ಸಮುದಾಯದ ರೀತಿ–ನೀತಿಗಳನ್ನು ತಿಳಿಯಬಹುದು. ಒಂದು ಸಮುದಾಯದ ಆರ್ಥಿಕತೆ ಸಂಪತ್ತಿನ ಮೇಲೆ ಒಂದು ದೇಶದ ತಲಾಆದಾಯವನ್ನು ಹೆಚ್ಚಿಸುವ ಮಹತ್ವವಾದ ಪಾತ್ರ ವಹಿಸುತ್ತದೆ. ಆರ್ಥಿಕ ಕ್ಷೇತ್ರದಲ್ಲಿ ಬಲಿಷ್ಠವಾಗಿದ್ದರೆ ಇತರೆ ಕ್ಷೇತ್ರಗಳಲ್ಲಿ ಪ್ರಾಧಾನ್ಯತೆ ಹೆಚ್ಚಿಸಲು ಸಹಕಾರಿಯಾಗುತ್ತದೆ. ಇದರ ಆಧಾರದ ಮೇಲೆ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ ಕ್ಷೇತ್ರಗಳ ಸ್ಥಾನಮಾನಗಳು ನಿರ್ಧರಿತವಾಗುತ್ತದೆ. ಸಮುದಾಯವು ಅಭಿವೃದ್ಧಿ ಹೊಂದಲು ಸಹಕಾರಿಯಾಗುತ್ತದೆ ಹಾಗೂ ಸಮುದಾಯದ ಸರ್ವಾಂಗೀಣ ಅಭಿವೃದ್ಧಿಲ್ಲಿ ಆರ್ಥಿಕತೆಯು ಬಹಳ ಮಹತ್ವದ ಪಾತ್ರ ವಹಿಸುತ್ತದೆ.

"ಜಾತಿ ಪದ್ಧತಿಯು ಭಾರತ ಎಲ್ಲಾ ಗ್ರಾಮಗಳಲ್ಲಿನ ಸಾಮಾಜಿಕ ನಿಯಂತ್ರಣ ಮತ್ತು ನ್ಯಾಯಿಕ ನಿಯಂತ್ರಣ ಸಾಧನವಾಗಿ ಕಾಣಿಸಿಕೊಂಡಿದೆ. ಇಂತಹ ವೃತ್ತಿ ಅಸಾಧಾರಣ ವ್ಯವಸ್ಥೆಯೊಳಗೆ ಅಸ್ಪೃಶ್ಯರು ಅನ್ಯೆರ್ಮಲ್ಯದ ವೃತ್ತಿಗಳಾದ ಚರಂಡಿ ಸ್ವಚ್ಛಗೊಳಿಸುವುದು, ಮಲವನ್ನು ತಲೆಯ ಮೇಲೆ ಸಾಗಿಸುವುದು,

ಸ್ಪೃಶ್ಯರ ಮನೆಯಲ್ಲಿ ಸತ್ತ ಪ್ರಾಣಿಗಳಾದ ಹಸು, ಎಮ್ಮೆಗಳನ್ನು ಹೊತ್ತು ತಂದು ತಿನ್ನುತ್ತಾರೆ. ಇವುಗಳೆಲ್ಲವೂ ಅವರ ದೈನಂದಿನ ಬದುಕಿನೊಳಗೆ ಖಾಯಂ ವೃತ್ತಿಗಳಾಗಿವೆ. ರೋಗರುಜಿನಲಾಗದ ಸತ್ತಪ್ರಾಣಿ ಮಾಂಸ ಮಾತ್ರ ಇವರ ಪಾಲಿಗಿದೆ. ಅದರ ಚರ್ಮ ಹದ ಮಾಡಿ ಧಣಿಗಳ ಕಾಲಿಗೆ ಅಂದ-ಚಂದದ ಪಾದರಕ್ಷೆ ಮಾಡುವುದು ಇವರ ಕರ್ತವ್ಯ. ಇನ್ನೂ ಕೆಲವು ಅಸ್ಪೃಶ್ಯರು ಜೀವನಪೂರ್ತಿ ಖಾಯಂ ಜೀತದಾಳುಗಳಾಗಿ ಅವರ ಇಡೀ ಕುಟುಂಬವೇ ಸವರ್ಣಿಯರ ಅಧೀನದಲ್ಲಿ ಬಾಳಿದ್ದಾರೆ. ಇದೇ ಜನರ ಅಕ್ಕ-ತಂಗಿಯರು ಉಳ್ಳವರ ದೇವದಾಸಿಯರಾಗಿದ್ದಾರೆ."[೧] ಕೆಲವರು ಧಾರ್ಮಿಕ ಪ್ರವೃತ್ತಿಗಳನ್ನು ಅವಲಂಬಿಸಿ ಚಲನಾತ್ಮಕ ಸ್ವರೂಪದ ಭಿಕ್ಷುಕರಾದರು. ಯಾವುದೇ ಚರ-ಸ್ಥಿರಾಸ್ತಿಗಳಿಲ್ಲ, ಮೇಲ್ಜಾತಿಯ ಸಮುದಾಯದವರು ನೀಡುವ ಒಕ್ಕಲುಕಾಳು, ಮನೆಯಲ್ಲಿ ರಾತ್ರಿ ಉಳಿದ ಅನ್ನ ತೆಗೆದುಕೊಂಡು ಹೋಗಿ ಜೀವನವನ್ನು ಸಾಗಿಸುವ ಹೀನ ಸ್ಥಿತಿ ಈ ಸಮುದಾಯದಲ್ಲಿ ಕಂಡುಬರುವುದನ್ನು ನೋಡಬಹುದು.


ಕೃಷಿ ಪ್ರಧಾನವಾದ ಭಾರತದಲ್ಲಿ ಎಲ್ಲಾ ಜಾತಿ ಜನ ಸಮುದಾಯಗಳು ಒಂದಿಲ್ಲೊಂದು ರೀತಿಯಿಂದ ವ್ಯವಸಾಯಕ್ಕೆ ಸಂಬಂಧ ಪಟ್ಟ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುತ್ತಾರೆ. ಖಾಸಗೀಕರಣವೆಂಬ ಕರಿಛಾಯೆ ಕಸ ಗುಡಿಸುವವರಿಗೂ ತಟ್ಟದೆ ಬಿಡಲಿಲ್ಲ ಇಂತಹ ಸಂದರ್ಭದಲ್ಲಿ ಸಂಘಟನೆ ಮೂಲಕ ಹಾಗೂ ಸಂವಿಧಾನಬದ್ಧ ಹಕ್ಕುಗಳನ್ನು ಉಪಯೋಗಿಸಿಕೊಂಡು ಸಮುದಾಯಕ್ಕೆ ಆಗಿರುವ ಅನ್ಯಾಯದ ವಿರುದ್ಧ ಹೋರಾಟ ಮಾಡುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು. ಇಂತಹ ಹಿನ್ನೆಲೆಯ ಕೆಲಸಗಳನ್ನು ಬಿಟ್ಟು ಎಲ್ಲರಂತೆ ಗೌರವಿಸುವ ಸ್ಥಾನಗಳಿಗೆ ಹೋಗುವ ದಿಟ್ಟತನವನ್ನು ಮೈಗೂಡಿಸಿಕೊಳ್ಳಬೇಕು. ಅವರೂ ಈ ದೇಶದಲ್ಲಿ ನಮ್ಮೊಂದಿಗೆ ಉಸಿರಾಡುವ ಮಾನವ ಸಂಕುಲವೆಂದು ಒಪ್ಪಿಕೊಳ್ಳುವ ರೀತಿಯಲ್ಲಿ ಎಲ್ಲಾ ಕ್ಷೇತ್ರದಲ್ಲಿ ಪ್ರಗತಿ ಮತ್ತು ಸಮಾನ ಮಾನವ ಧರ್ಮ ಸೃಷ್ಟಿಗೆ ನಾಂದಿಹಾಡಲು ಸಾಧ್ಯವಾಗಿದೆ ಎಂದು ತಿಳಿಯಬಹುದು.

ಆದರೆ ಇವತ್ತಿನ ದಿನಮಾನಗಳಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನಗಳು ಅತಿ ವೇಗವಾಗಿ ಬೆಳೆಯುತ್ತಿದವೆ. ಇವುಗಳ ಸೆಳೆಗೆ ಸಿಕ್ಕಿಕೊಂಡು ಮಾದಿಗ ಸಮುದಾಯವು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಧಾರ್ಮಿಕ, ಸಾಂಸ್ಕೃತಿಕವಾಗಿ ಮಹತ್ತರವಾದ ಬದಲಾವಣೆಯನ್ನು ಮಾಡಿಕೊಂಡಿದೆ. ಜೊತೆಗೆ ಈ ಸಮುದಾಯದ ಹೆಚ್ಚಿನ ಜನರು ತಮ್ಮ ಮೂಲ ವೃತ್ತಿಗಳಿಂದ ಹೊರಬಂದು ಹೊಸ ಹೊಸ ಮಾರ್ಗಗಳನ್ನು ಹುಡುಕಿಕೊಳ್ಳುತ್ತಿವೆ. ಅವರು ವಾಸಿಸುವ ಹಳ್ಳಿಗಳ ಮತ್ತು ಪರಿಸರ ಸುತ್ತಲು ನಗರ ಪ್ರದೇಶಗಳು ಬೃಹತ್ ಪ್ರಮಾಣದಲ್ಲಿ ಬೆಳೆಯುವುದರಿಂದ ಮತ್ತು ಸಾಮಾಜಿಕ ಸಂಬಂಧಗಳು ವೃದ್ಧಿಯಾಗುವುದರ ಮೂಲಕ ಹಾಗೂ ಬೆಳೆಯುತ್ತಿರುವ ನಗರೀಕರಣ ಔದ್ಯೋಗಿಕರಣದ ಸ್ವರೂಪಗಳು ಇವರನ್ನು ಹೆಚ್ಚು ಕಾರ್ಯಶೀಲರಾಗುವಂತೆ ಮಾಡಿದೆ. ಇದರಿಂದ ಇವರ ಬದುಕನ್ನು ಸರಿದೂಗಿಸುವ ಆರ್ಥಿಕವಾಗಿ ಬಲಪಡಿಸಿಕೊಳ್ಳುವ ಸಲುವಾಗಿ ಇವುಗಳಲ್ಲಿ ತೊಡಗಿಸಿಕೊಂಡಿರುವುದರಿಂದ ಸಾಕಷ್ಟು ಸಾಮಾಜಿಕ ಬದಲಾವಣೆಯನ್ನು ಕಾಣಬಹುದು.

ಕೋಷ್ಟಕ: ೬.೧. ಸಮೀಕ್ಷೆಗೊಳಪಡಿಸಿದ ಚಿತ್ರದುರ್ಗ ಜಿಲ್ಲೆಯ ತಾಲೂಕುವಾರು ಮಾದಿಗ ಸಮುದಾಯದ ಲಿಂಗವಾರು ಕಾಯಕರ್ಹರು, ಕಾಯಕಸ್ಥರು ಮತ್ತು ಅವಲಂಬಿತ ವರ್ಗ

ಜಿಲ್ಲೆಗಳು	ಕುಟುಂಬಗಳು	ಕಾಯಕರ್ಹರು			ಕಾಯಕಸ್ಥರು			ಅವಲಂಬಿತ ವರ್ಗ		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
ಚಳ್ಳಕೆರೆ	೧೨೦	೧೯೦	೧೮೭	೩೭೭	೧೫೭	೧೬೧	೩೧೮	೩೩	೨೬	೫೯
ಚಿತ್ರದುರ್ಗ	೧೨೦	೧೯೫	೧೮೩	೩೭೮	೧೫೩	೧೨೭	೨೮೦	೪೨	೫೬	೯೮
ಮೊಳಕಾಲ್ಮೂರು	೧೨೦	೨೦೪	೧೯೬	೪೦೦	೧೬೪	೧೬೧	೩೨೫	೪೦	೩೫	೭೫
ಹಿರಿಯೂರು	೧೨೦	೧೯೧	೧೮೪	೩೭೫	೧೭೭	೧೭೮	೩೫೫	೧೪	೬	೨೦
ಹೊಳಲ್ಕೆರೆ	೧೨೦	೧೮೩	೧೮೩	೩೬೬	೧೬೭	೧೫೫	೩೨೨	೧೬	೨೮	೪೪
ಹೊಸದುರ್ಗ	೧೨೦	೨೦೧	೧೯೫	೩೯೬	೧೩೩	೧೦೯	೨೪೨	೬೮	೮೬	೧೫೪
ಒಟ್ಟು	೭೨೦	೧೧೬೪	೧೧೨೮	೨೨೯೨	೯೫೧	೮೯೧	೧೮೪೨	೨೧೩	೨೩೭	೪೫೦

ಲಂಬಚಿತ್ರ: ೬.೧. ಸಮೀಕ್ಷೆಗೊಳಪಡಿಸಿದ ಚಿತ್ರದುರ್ಗ ಜಿಲ್ಲೆಯ ತಾಲೂಕುವಾರು ಮಾದಿಗ ಸಮುದಾಯದ ಲಿಂಗವಾರು ಕಾಯಕಸ್ಥರು ಮತ್ತು ಅವಲಂಬಿತವರ್ಗ



ಕೋಷ್ಟಕ ೬.೧ ಮತ್ತು ಲಂಬಚಿತ್ರ ೬.೧ರಲ್ಲಿ ತಿಳಿಸಿದಂತೆ. ಚಿತ್ರದುರ್ಗದ ಮಾದಿಗ ಸಮುದಾಯವನ್ನು ಅಧ್ಯಯನಕ್ಕೆ ಸೀಮಿತ ಮಾಡಿಕೊಂಡು. ಜಿಲ್ಲೆಯ ಆರು ತಾಲೂಕುಗಳಲ್ಲಿ ಎರಡು ಗ್ರಾಮಗಳನ್ನು ಆಯ್ಕೆ ಮಾಡಿಕೊಂಡಿದೆ. ಪ್ರತಿಯೊಂದು ಗ್ರಾಮದಲ್ಲಿ ೬೦ ಕುಟುಂಬಗಳನ್ನು ಪ್ರಶ್ನಾವಳಿ ಮೂಲಕ ಸಂದರ್ಶನ ಮಾಡಿ, ಒಟ್ಟು ೭೨೦ ಕುಟುಂಬಗಳಿಂದ ಮಾಹಿತಿಯನ್ನು ಸಂಗ್ರಹಿಸಿಲಾಗಿದೆ. ಕಾಯಕ ಮಾಡಲು ಅರ್ಹತೆಯನ್ನು ಹೊಂದಿದವರು. ಇವರು ತಮ್ಮ ಕುಟುಂಬದ ಜೀವನೋಪಾಯ ನಿರ್ವಹಣೆ ಮಾಡುವ ಹಾಗೂ ದಿನನಿತ್ಯದಲ್ಲಿ ಹೆಚ್ಚು ಶ್ರಮ ಪಡುವ ಪುರುಷರ ಪ್ರಮಾಣ ಶೇಕಡ ೪೧.೪೯ರಷ್ಟು, ಮಹಿಳೆಯರ ಪ್ರಮಾಣ ಶೇಕಡ ೩೮.೮೭ರಷ್ಟು ಇದ್ದು, ಒಟ್ಟು ಗಂಡು ಮತ್ತು ಹೆಣ್ಣು ಸೇರಿ ಪ್ರಮಾಣ ಶೇಕಡ ೮೦ರಷ್ಟಿದೆ. ಅವಲಂಬಿತ ವರ್ಗದಲ್ಲಿ ಮಕ್ಕಳು ಅಥವಾ ವೃದ್ಧರು ಇರುತ್ತಾರೆ. ಇವರು ಯಾವುದೇ ವೃತ್ತಿಯನ್ನು ಮಾಡುವುದಿಲ್ಲ. ಮನೆಯಲ್ಲಿ ಸಣ್ಣಪುಟ್ಟ ಕೆಲಸಗಳನ್ನು ಮಾಡುವ ವರ್ಗವಾಗಿದೆ. ಇವರಲ್ಲಿ ಪುರುಷರ ಪ್ರಮಾಣ ಶೇಕಡ ೯.೨೯ರಷ್ಟು, ಮಹಿಳೆಯರ ಪ್ರಮಾಣ ಶೇಕಡ ೧೦.೨೪ರಷ್ಟು ಇದ್ದು, ಒಟ್ಟು ಗಂಡು ಮತ್ತು ಹೆಣ್ಣು ಸೇರಿ ಪ್ರಮಾಣ ಶೇಕಡ ೨೦ರಷ್ಟಿದೆ. ಇದರಿಂದ ಕಾಯಕಸ್ಥರು ಕುಟುಂಬಕ್ಕೆ ಭದ್ರತೆಯನ್ನು ಒದಗಿಸುವವರಾಗಿದ್ದಾರೆ ಎಂದು ತಿಳಿದುಬರುತ್ತದೆ.

೬.೨ ಪಾರಂಪರಿಕ ಕುಲಕಸುಬುಗಳು

ಮಾನವನು ಭೂಮಿಯ ಮೇಲೆ ವಿಕಾಸಗೊಂಡ ನಂತರ ಇಂತಥದೇಯಾದ ವೃತ್ತಿಯನ್ನು ಮಾಡಿಕೊಂಡು ಬಂದಿದ್ದಾನೆ ಎಂದು ಗುರುತಿಸಲು ಇತಿಹಾಸದುದ್ದಕ್ಕೂ ದಾಖಲೆಗಳು ಕಂಡುಬರುವುದಿಲ್ಲ. ತಮ್ಮ ಜೀವನ ನಿರ್ವಹಣೆಯ ಸಲುವಾಗಿ ವೃತ್ತಿಯನ್ನು ಅವಲಂಬಿಸಿರುವುದು ನಿಜ. ಭೂಮಿಯ ಮೇಲೆ ಜನಸಂಖ್ಯೆ ಬೆಳೆದಂತೆಲ್ಲ ಒಂದೊಂದು ಸಮುದಾಯವು ಒಂದೊಂದು ವೃತ್ತಿಯನ್ನು ಅಥವಾ



ಕಸುಬುಗಳನ್ನು ಮಾಡುತ್ತಾಬರಲಾಗಿದೆ. ಕೈಗಳ ಸಹಾಯದಿಂದ ಕಲಾತ್ಮಕವಾಗಿ ತಯಾರಿಸುವ ವಸ್ತುಗಳಿಂದ ಹಿಡಿದು ಪಶುಪಾಲನೆ, ವ್ಯವಸಾಯ ನಂತರ ಬೆಳೆದ ಬೆಳೆಯನ್ನು ಸಂಗ್ರಹಿಸಲು ಗಿಡದ ಗರಿಗಳಿಂದ, ಟೊಂಗೆಗಳಿಂದ, ಮರದ ತೊಗಟೆಯಿಂದ ಬುಟ್ಟಿಗಳನ್ನು ಹಣೆಯುವುದರೊಂದಿಗೆ ಅವುಗಳನ್ನು ಹಂಚಿಕೊಳ್ಳಲು, ಬಿದಿರಿನಿಂದ ತಯಾರಿಸಿದ 'ಸೇರು' ತಯಾರು ಮಾಡುವ ಹಾಗೂ ನೀರಿನಿಂದ ಮತ್ತು ಎಣ್ಣೆಯ ಬುಟ್ಟಿಗಳನ್ನು ತಯಾರಿಸುವ ಕರಕುಶಲತೆಯನ್ನು ಬೆಳೆಸಿಕೊಂಡಿದ್ದಾರೆ. ಹೀಗೆ ತಮ್ಮ ಬದುಕುನ್ನು ರೂಪಿಸುವ ಸಂದರ್ಭದಲ್ಲಿ, ಭೂಮಿಯನ್ನು ಉಳುಮೆ ಮಾಡುವುದನ್ನು ಪ್ರಾರಂಭಿಸಿದ್ದಾಗಿನಿಂದ ಆರ್ಥಿಕವಾಗಿ ಶಕ್ತಿಯುಕ್ತನಾಗಿರಲು ಪ್ರಾರಂಭವಾದಾಗ ಹಿರಿಯರು ಕುಟುಂಬವಾರು ಭೂಮಿಯನ್ನು ಹಂಚಿದರು. ಕುಟುಂಬವೂ ಒಂದು ಘಟಕವಾಯಿತು. ಸ್ವಕುಲದ ಕುಟುಂಬಗಳ ಕೂಟವು ಸಮುದಾಯವಾಯಿತು, ಪ್ರತಿಯೊಂದು ಕುಟುಂಬವು ತನಗೆ ಸಂಬಂಧಿಸಿದ ಭೂಮಿ ಹಾಗೂ ತನ್ನದೇಯಾದ ಕುಲ ಕಸುಬುಗಳನ್ನು ಮುಂದುವರಿಸುತ್ತ ಬಂದರು. ಇಂತಹ ಕೆಲವು ಸಮುದಾಯಗಳಲ್ಲಿ ಆರ್ಥಿಕವಾಗಿ ಬಲಿಷ್ಠವಾದ ತರುವಾಯ ಸಮಾಜದಲ್ಲಿ ಉನ್ನತವಾದ ಸ್ಥಾನಮಾನವನ್ನು ಗಳಿಸುವ ಯತ್ನವನ್ನು ಮಾಡಲು ಪ್ರಾರಂಭಿಸಿದ್ದರು. ಸಮಾಜದಲ್ಲಿ ಯಾವುದು ತನ್ನ ಕಾಯಕ ಶ್ರೇಷ್ಠತೆಯನ್ನು ಪಡೆದಿರುತ್ತದೋ ಆ ಕಸುಬುಗಳನ್ನು ತಮ್ಮ ಕುಲಮೂಲ ಕಸುಬುಗಳಾನ್ನಾಗಿ ಮಾಡಿಕೊಂಡರು. ಇನ್ನೂ ಕೆಲವು ಸಮುದಾಯಗಳು ಸಮಾಜದಲ್ಲಿ ಅತ್ಯಂತ ಕೆಳಮಟ್ಟದ ಸ್ಥಾನಮಾನ ಹೊಂದಿರುವ ಕುಲ ಕಸುಬುಗಳನ್ನು ಅನುಸರಿಸಿಕೊಂಡು ಬಂದಿರುವುದನ್ನು ನೋಡಬಹುದು. ಅಂತಹ ಸಮುದಾಯಗಳಲ್ಲಿ ಮಾದಿಗ ಸಮುದಾಯವು ಒಂದು. ಮಾದಿಗ ಸಮುದಾಯವು ಬೇರೆ ಸಮುದಾಯಗಳ ಕೆಲಸವನ್ನು ಮಾಡುವ ಅವರ ಮನೆಗಳಲ್ಲಿ, ಭೂಮಿಯಲ್ಲಿ ಬಿಟ್ಟಿ ಸೇವೆಯನ್ನು ಮಾಡಿಸಿಕೊಳ್ಳಲು ಪ್ರಾರಂಭಿಸಿದ್ದರು. ಆದ್ದರಿಂದ ಇವರನ್ನು ಸಮಾಜದಲ್ಲಿ ಕೆಳಸ್ಥರ ಸಾಮಾಜಿಕ ಸ್ಥಾನಮಾನಗಳನ್ನು ಹಾಗೂ ಅಸ್ಪೃಶ್ಯರ ಜಾತಿ, ದಲಿತರು ಎಂದು ಗುರುತಿಸಿಕೊಳ್ಳಲು ಮತ್ತು ಸಮಾಜದಲ್ಲಿ ಪ್ರತಿಯೊಂದು ಶುಭ, ಅಶುಭು ಕಾರ್ಯಕ್ರಮದಲ್ಲಿ ಸ್ವಚ್ಛ ಮಾಡುವ ವೃತ್ತಿಯಿಂದ ಗುರುತಿಸಿಕೊಂಡಿದ್ದಾರೆ.

ಸಾಮಾನ್ಯವಾಗಿ ಮಾದಿಗರು ಜಾಡಮಾಲಿಗಳಾಗಿ, ಚಮ್ಮಾರರಾಗಿ, ಹಳ್ಳಿಯ ಕಾವಲುಗಾರರಾಗಿ, ಕಸಾಯಿಗಳಾಗಿ, ಬಿಟ್ಟಿಸೇವೆಯ ಕೂಲಿಗಳಾಗಿ ಮತ್ತು ಹಳ್ಳಿಯಲ್ಲಿ ನಿಕೃಷ್ಟ ಸೇವೆಗಳನ್ನು ಮಾಡುತ್ತಿದ್ದಾರೆ. ಸಾಮಾಜಿಕ-ಆರ್ಥಿಕ ಒತ್ತಡಗಳಿಂದಾಗಿ ಮಾದಿಗರಲ್ಲಿ ಹೆಚ್ಚಿನವರು ಇದೇ ಕೆಲಸವನ್ನು ಇನ್ನೂ ಮುಂದುವರೆಸಿಕೊಂಡು ಬಂದಿರುವುದನ್ನು ಗಮನಿಸಬಹುದಾಗಿದೆ. ಇದು ಅವರ ಜೀವನ ಮಟ್ಟ ಹೇಗಿದೆ ಎಂಬುದನ್ನು ತೋರಿಸುತ್ತದೆ.

೬.೨.೧ ಗುಲಾಮಗಿರಿ ಪದ್ಧತಿ

ಸಮಾಜದಲ್ಲಿ ಪುರುಷ-ಪುರುಷನನ್ನು ಗುಲಾಮನನ್ನಾಗಿಸಿಕೊಳ್ಳುವ ಪೂರ್ವದಲ್ಲಿಯೇ ಮಹಿಳೆಯನ್ನು ಗುಲಾಮತನಕ್ಕೆ ಗುರಿಪಡಿಸಲಾಗಿತ್ತು. ಮಹಿಳೆಗೆ ವೇದಾಧ್ಯಯನ, ಪೌರೋಹಿತ್ಯ ವೃತ್ತಿಯಂತಹ ಧಾರ್ಮಿಕ ಕ್ರಿಯೆಗಳಲ್ಲಿ ಭಾಗವಹಿಸದಂತೆ ತಡೆಯೊಡ್ಡಲಾಗಿತ್ತು. ಅಷ್ಟೇ ಅಲ್ಲ ಸ್ತ್ರೀಯರಿಗೆ ಯಾವುದೇ ಬಗೆಯ

ಸ್ವಾತಂತ್ರ್ಯವನ್ನು ನಿರಾಕರಿಸಿ ಸದಾ ಪುರುಷಾವಲಂಬಿಯಾಗಿ ಜೀವನ ನಡೆಸಬೇಕಾದ ಅನಿವಾರ್ಯತೆಯನ್ನು ಸೃಷ್ಟಿಸಲಾಗಿತ್ತು. ಮನುಸ್ಮೃತಿಯಂತೂ ಸ್ತ್ರೀ ಮತ್ತು ಶೂದ್ರರ ಪಾಲಿಗೆ 'ಕರಾಳ ಶಾಸನ'ವಾಗಿ ಪರಿಮಿಸಿತು. ಇದು ಸಮಾಜದಲ್ಲಿ ಮನುಷ್ಯ-ಮನುಷ್ಯರ ನಡುವೆ-ಪುರುಷ ಮತ್ತು ಸ್ತ್ರೀಯರ ನಡುವೆ ಅಸಮಾನತೆಯನ್ನು ಸೃಷ್ಟಿಸಿ ತಾರತಮ್ಯ ಭಾಸವವು ಎಲ್ಲೆಡೆ ವ್ಯಾಪಿಸಲು ಕಾರಣವಾಯಿತು."[೨]

"ಭಾರತೀಯ ಸಮಾಜವು ಸಾವಿರಾರು ವರ್ಷಗಳಿಂದ ಪೋಷಿಸಿಕೊಂಡು ಬಂದ ಜಾತಿ ವ್ಯವಸ್ಥೆಯಿಂದಾಗಿ ಸಮಾಜದಲ್ಲಿ ಆರ್ಥಿಕ, ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ಅಸಮಾನತೆಗಳು ನೆಲೆಯೂರಿ ನಿಂತಿವೆ. ಇಂತಹ ಅಸಮಾನತೆಯ ವ್ಯವಸ್ಥೆಯಿಂದಾಗಿ ಸಮಾಜದಲ್ಲಿ ಕೆಲವೇ ಜನರು ಸುಖಿಗಳಾಗಿ, ಬಹುಪಾಲು ಜನರು ನೋವು ಮತ್ತು ಅಪಮಾನಗಳಲ್ಲಿ ಬದುಕಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಹಿನ್ನೆಲೆಯಲ್ಲಿ ಸಮಾಜದಲ್ಲಿ ಶ್ರಮಿಕ ವರ್ಗ ಅಸಂತೋಷದಲ್ಲಿ ಬದುಕನ್ನು ನೂಕಬೇಕಾದ ಪರಿಸ್ಥಿತಿ ಇದ್ದರೆ ಆ ಸಮಾಜದ ಏಳ್ಗೆಯೂ ಕುಂಠಿತಗೊಳ್ಳುತ್ತದೆ."[೩] "ಜಾತಿ ಪದ್ಧತಿ ರೂಢಿಗೆ ಬಂದ ಮೇಲೆ ಒಂದೊಂದು ಜಾತಿಯ ಜನಗಳು ಪ್ರತ್ಯೇಕ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿವೆ. ಈ ವ್ಯವಸ್ಥೆಯಲ್ಲಿ ಒಂದು ಗುಂಪು ಇತರ ಗುಂಪಿನೊಂದಿಗೆ ಯುದ್ಧ ಮಾಡುವುದು, ಅವರನ್ನು ಹತಗೊಳಿಸುವುದು, ಅವರನ್ನು ದೋಚುವುದು, ಅವರ ಸಂಪತ್ತು ಕೊಳ್ಳೆಹೊಡೆಯುವುದು, ಅವರನ್ನು ನಿರ್ನಾಮ ಮಾಡುವುದು ನೀತಿಯೆಂದು ಪ್ರತಿಪಾದಿಸಲ್ಪಟ್ಟಿವೆ. ಆದರೆ ಸಮುದಾಯದ ಒಳಗೆ ಮಾತ್ರ ಪರಸ್ಪರ ಹಾನಿಯುಂಟುಮಾಡಬಾರದೆಂಬುದು ಜಾತಿ ವ್ಯವಸ್ಥೆಯ ಮೂಲ ತಿಳುವಳಿಕೆಯಾಗಿದೆ. ಒಂದು ಸಮುದಾಯಕ್ಕೆ ಸೇರಿದವರೆಲ್ಲರೂ ಸಜಾತಿಯವೆಂದು ಲೆಕ್ಕ. ಅವರವರಿಗೆ ಯಾವ ಹಾನಿಯು ಆಗಬಾರದು, ಆದರೆ ವರ್ಗ ಸಮಾಜ ನೀತಿ ಸೂತ್ರಗಳ ಭಿನ್ನವಾಗುತ್ತವೆ. ಆಸ್ತಿಗಾಗಿ, ರಾಜ್ಯಕ್ಕಾಗಿ ಒಡಹುಟ್ಟಿದವರನ್ನು ಸಾಯಿಸಬಹುದು. ಈ ಕಾರಣಕ್ಕಾಗಿ ತಳಸಮುದಾಯಗಳು ಶ್ರೀಮಂತ ವರ್ಗದ ಜನರನ್ನು ಆರಾಧ್ಯ ದೈವವನ್ನಾಗಿ ಮಾಡಿತ್ತು. ಇವನು ತನಗೆ ದೇವತ್ವವನ್ನು ಆರೋಪಿಸಿಕೊಳ್ಳುವಲ್ಲಿ ಭವಿಷ್ಯದ ಸುಖದ ಆಸೆ ಅವನಿಗಿರಲಿಲ್ಲ. ಅಸೆ ರಹಿತನಾಗಿದ್ದಂತೆ ಭಯರಹಿತನಾಗಿದ್ದನು. ತನ್ನನ್ನು ವಿರೋಧಿಸುವವರನ್ನು ಮೃದುವಾದ ವ್ಯಂಗ್ಯದಿಂದ ವಶಪಡಿಸಿಕೊಳ್ಳುತ್ತಿದ್ದನು."[೪] ಇದರೊಂದಿಗೆ ಗುಲಾಮರ ಸಂಖ್ಯೆಯೂ ಬೆಳೆಯಿತು, ಕೆಲವರು ರಾಜ ದಂಡನೆಯಿಂದ ಗುಲಾಮರಾದರು. ಅನೇಕರು ಸಾಲ ತೀರಿಸಲು ಅಸಮರ್ಥರಾಗಿ ಹರಿಶ್ಚಂದ್ರನಂತೆ ತಮ್ಮ ಹೆಂಡತಿ ಮಕ್ಕಳನ್ನೂ ತಮ್ಮನ್ನೂ ಮಾರಿ ಗುಲಾಮರಾಗಬೇಕಾಗಿ ಬಂತು. ಮೊದಲನೆಯವರನ್ನು ದಂಡದಾಸರೆಂದೂ, ಎರಡನೆಯವರನ್ನು ಋಣದಾಸರೆಂದೂ ಕರೆಯಲಾಗುತ್ತಿತ್ತು, ಗುಲಾಮರ ಕ್ರಯ ವಿಕ್ರಯವೂ ನಡೆಯತೊಡಗಿ, ಅವರೊಂದು ಲಾಭದಾಯಕ ಸರಕಾಗಿಯೂ ಪರಿಣಮಿಸಿದರು. ಆ ಕಾಲದ ಚಿಕ್ಕ ದೊಡ್ಡ ರಾಜರು ಕೊಳ್ಳೆಗೋಸ್ಕರ ನಡೆಸುತ್ತಿದ್ದ ನಿರಂತರ ಯುದ್ಧಗಳಲ್ಲಿ ಸೆರೆ ಸಿಕ್ಕದ ನತದೃಷ್ಟರನ್ನು ಹೆಚ್ಚಾಗಿ ಗುಲಾಮರನ್ನಾಗಿ ಮಾಡಿ ಒಂದೋ ಅವರನ್ನು ಸೇವೆಗೆ ಇಟ್ಟುಕೊಳ್ಳಲಾಗುತ್ತಿತ್ತು ಅಥವಾ ಮಾರಾಟ ಮಾಡಲಾಗುತ್ತಿತ್ತು. ಮುಖ್ಯವಾಗಿ ಕೌಟಿಲ್ಯನ ಅರ್ಥಶಾಸ್ತ್ರ, ಮನುಸ್ಮೃತಿ ಮತ್ತು

ನಾರದ ಸ್ಮೃತಿ ಮುಂತಾದ ಧರ್ಮಶಾಸ್ತ್ರಗಳಲ್ಲಿ ಅವುಗಳೆಲ್ಲ ಈ ಕಾಲದಲ್ಲೇ ಬಳಕೆಗೆ ಬಂದಿದ್ದವು. ಅರ್ಥಶಾಸ್ತ್ರವು ಐದು ವಿಧದ ಗುಲಾಮರನ್ನು ಹೆಸರಿಸುತ್ತದೆ. 'ಧ್ವಜಾಹೃತ' (ಯುದ್ಧದಲ್ಲಿ ಸೆರೆಸಿಕ್ಕಿದವನು), 'ಆತ್ಮವಿಕ್ರಿಯ' (ತನ್ನನ್ನು ತಾನೇ ಮಾರಿಕೊಂಡವನು), 'ಉದರದಾಸ ಅಥವಾ ಗರ್ಭದಾಸ' (ದಾಸಿಯರಲ್ಲಿ ಹುಟ್ಟಿ ಅನ್ನಕ್ಕಾಗಿ ಯಜಮಾನನ ಮನೆಯಲ್ಲೇ ಇರುವವನು), 'ಆಹಿತಕ' (ಸಾಲ ತೀರಿಸಲು ಸಾಧ್ಯವಾಗದೆ ದಾಸನಾದವನು ಅಥವಾ ಗಿರವಿ ಇಡಲ್ಪಟ್ಟವನು) ಮತ್ತು 'ದಂಡಪ್ರಣೀತ' (ರಾಜದಂಡನೆಯಿಂದ ಗುಲಾಮನಾದವನು) ಮನುಸ್ಮೃತಿಯಲ್ಲೂ ಹೆಚ್ಚು ಕಡಿಮೆ ಇದೇ ರೀತಿಯಿದೆ. ನಾರದ ಸ್ಮೃತಿ ವಿಧದ ಗುಲಾಮರನ್ನು ಹೆಸರಿಸುತ್ತದೆ."[೫] ಈ ಗುಲಾಮರ ಸ್ಥಿತಿ ಬಹಳ ನಿಕೃಷ್ಟವಾಗಿತ್ತು. ಪಶುಗಳಂತೆ ಅವರು ಸಂಪೂರ್ಣವಾಗಿ ತಮ್ಮ ಯಜಮಾನನ ಸೊತ್ತು. ಅವರನ್ನು ಮಾರಬಹುದಿತ್ತು, ಜೂಜಾಟಗಳಲ್ಲಿ ಪಣವಾಗಿ ಇಡಬಹುದಿತ್ತು, ಗಿರವಿಯಾಗಿ ಇಟ್ಟು ಸಾಲ ಪಡೆಯಬಹುದಿತ್ತು. ಯಜಮಾನನನ ಮನೆಯ ಮಲ ಮೂತ್ರಗಳನ್ನು ತೆಗೆದು ಬಿಸಾಡುವಂಥ ಹೀನ ಕೃತ್ಯಗಳನ್ನೂ ಅವರು ಮಾಡಬೇಕಾಗಿತ್ತು."[೬] ಆದ್ದರಿಂದಾಗಿಯೋ ಏನೋ ಗುಲಾಮರನ್ನು ಸ್ವತಂತ್ರರನ್ನಾಗಿ ಮಾಡುವ ಮತ್ತು ವರ್ಗಗಳನ್ನು ಸೋದರರನ್ನಾಗಿ ಮಾಡುವ ಸತ್ಯವನ್ನು ಮಾತುಗಳಲ್ಲಿ ಜನರು ಗುರುತಿಸುತ್ತಿದ್ದರು. ಆಗ ಹೃದಯದಿಂದ ಹೃದಯಕ್ಕೆ ಹೋಗುವ ವಿದ್ಯುತ್ ಪ್ರವಾಹ ಮಿಂಚಿನ ವೇಗಕ್ಕೆ ಕಾರಣಗಳನ್ನು ತಿಳಿಯುವುದು ಕಷ್ಟವಾಗುವುದಿಲ್ಲ."[೭] ಆದ್ದರಿಂದ ಶೂದ್ರರನ್ನು ಗುಲಾಮರನ್ನಾಗಿಸಿದ ಪ್ರಶ್ನೆಗೆ ನಾವು ತಿರುಗಿದಾಗ, ಅದೊಂದು ಅಪ್ಪಟ ಸುಳ್ಳು ಎಂದು ಎನ್ನಲಾಗದಿದ್ದರೂ ಅದೊಂದು ಅಸಂಬದ್ಧ ಪ್ರಲಾಪ ಎನ್ನದೆ ವಿಧಿಯಿಲ್ಲ. ಅದು ಎರಡು ಗ್ರಹಿಕೆಗಳ ಮೇಲೆ ಆಧಾರಿತವಾಗಿದೆ, ಒಂದೆಂದರೆ ಋಗ್ವೇದದಲ್ಲಿ ದಾಸರು ಗುಲಾಮರೆಂದು ವರ್ಣಿಸಲ್ಪಟ್ಟದು. ಎರಡನೆಯದೆಂದರೆ ದಾಸರೂ ಶೂದ್ರರೂ ಒಂದೇ ಎಂಬುದು.

ದಾಸನೆಂಬ ಶಬ್ದ ಋಗ್ವೇದದಲ್ಲಿ 'ಗುಲಾಮ' ಅಥವಾ 'ಸೇವಕ'ನೆಂಬ ಅರ್ಥದಲ್ಲಿ ಬಳಕೆಯದುದು ನಿಜ, ಆದರೆ ಆ ಅರ್ಥದಲ್ಲಿ ಈ ಶಬ್ದ ಉಪಯೋಗಿಸಲ್ಪಟ್ಟುದು ಐದು ಸಂದರ್ಭಗಳಲ್ಲಿ. ಆದರೆ ಶೂದ್ರರೂ ಗುಲಾಮರಾಗಿಸಲ್ಪಟ್ಟರು ಎಂಬುದನ್ನು ಸಿದ್ಧಮಾಡುವುದೇ 'ದಾಸ' ಹಾಗೂ 'ಶೂದ್ರ' ಎಂಬುವವರು ಬೇರೆ ಬೇರೆ ಜನಗಳಾಗಿರದೆ ಒಂದೇ ಜನಗಳು ಎಂಬುವುದು ಸಾಬೀತಾಗದ ಹೊರತು ಈ ವಾದ ಅಸಂಬದ್ಧ ಹಾಗೂ ಅದು ನಾವು ಬಲ್ಲ ಸಂಗತಿಗಳಿಗೆ ವ್ಯತಿರಿಕ್ತ."[೮] ಈ ಅಂಶಗಳನ್ನು ಗಮನದಲ್ಲಿ ಇಟ್ಟುಕೊಂಡು ನೋಡುವುದಾದರೆ. ಸಮಾಜದಲ್ಲಿ ಇರುವಂತ ವರ್ಣಗಳನ್ನು ಮನುಸ್ಮೃತಿ ಮೂರು ವರ್ಣದವರಿಗೆ ವಿಶೇಷ ಸ್ಥಾನಮಾನಗಳನ್ನು ವಿವರಿಸುವ ಮನುಸ್ಮೃತಿ ವಿಧಿಸುವ ಕಟ್ಟುಪಾಡುಗಳು ಅಮಾನುಷವಾಗಿದೆ. ಮನುಸ್ಮೃತಿ ವಿಧಿಸುವ ಕಟ್ಟುಪಾಡುಗಳಲ್ಲಿ ಕೆಲವನ್ನು ಇಲ್ಲಿ ನೀಡಿದೆ.

೧. ಶೂದ್ರನಿಗೆ ಸಾಮಾಜಿಕ ಅನುಶ್ರೇಣಿಯಲ್ಲಿ ಅತ್ಯಂತ ಕೊನೆಯ ಸ್ಥಾನ.

೨. ಶೂದ್ರನು ಅಶುದ್ಧನು ಮತ್ತು ಅಪವಿತ್ರನು.

೩. ಶೂದ್ರನು ಯಾವ ಗೌರವಕ್ಕೂ ಪಾತ್ರನಲ್ಲ.

೪. ಶೂದ್ರರ ಜೀವನಕ್ಕೆ ಯಾವ ಮೌಲ್ಯವು ಇಲ್ಲ. ಅವನನ್ನು ಯಾರು ಕೊಂದರೂ ಪರಿಹಾರ ಕೊಡಬೇಕಿಲ್ಲ.

೫. ಶೂದ್ರರು ಜ್ಞಾನವನ್ನು ಪಡೆಯಕೂಡದು. ಅವರಿಗೆ ಶಿಕ್ಷಣ ಕೊಡುವುದು ಒಂದು ಶಾಪ.

೬. ಶೂದ್ರ ಸ್ತ್ರೀಯನ್ನು ಮದುವೆಯಾಗಕೂಡದು, ಬೇಕಾದರೆ ಉಪಪತ್ನಿಯಾಗಿ ಇಟ್ಟುಕೊಳ್ಳಬಹುದು.

೭. ಶೂದ್ರನು ಆಸ್ತಿಯನ್ನು ಹೊಂದಕೂಡದು. ಬ್ರಾಹ್ಮಣನು ಅವನಿಷ್ಟದಂತೆ ಆಸ್ತಿಯನ್ನು ಪಡೆಯಬಹುದು.

೮. ಶೂದ್ರನ ಕರ್ತವ್ಯವೆಂದರೆ ಮೇಲ್ವರ್ಗದವರ ಸೇವೆಯನ್ನು ಬಿಟ್ಟಿಯಾಗಿ ಮಾಡುವುದು.

೯. ಶೂದ್ರನಿಗೆ ಹಣ ಮಾಡುವ ಶಕ್ತಿ ಇದ್ದರೂ ಅವನು ಹಣ ಮಾಡಬಾರದು. ಏಕೆಂದರೆ ಗುಲಾಮನಾದ ಅವನು ಸಂಪತ್ತನ್ನು ಸಂಗ್ರಹಿಸಿದರೆ ಅಹಂಕಾರಿಯಾಗುತ್ತಾನೆ. ತನ್ನ ಗರ್ವ ಮತ್ತು ಉಪೇಕ್ಷೆಯಿಂದ ಅವನು ಬ್ರಾಹ್ಮಣನಿಗೆ ಬಾಧೆಯನ್ನು ಉಂಟುಮಾಡುತ್ತಾನೆ."[೯]

ಈ ಅಮಾನುಷವಾದ ಕಟ್ಟುಪಾಡುಗಳಿಂದ ತಳಸಮುದಾಯಗಳು ಅನುಭವಿಸಿದಂತಹ ನೋವು ಎಷ್ಟು ಎಂದು ಮನುವಾದದ ಅಂಶಗಳು ಹೇಳುತ್ತವೆ. ಇಂತಹ ಹಿಂಸೆಯನ್ನು ಅನುಭವಿಸಿದಂತಹ ಈ ಸಮುದಾಯಗಳಲ್ಲಿ ಮಾದಿಗ ಸಮುದಾಯವು ಒಂದು. ಮನು ಮೇಲೆ ಹೇಳಿದಹಾಗೆ ಮೇಲ್ವರ್ಗದವರ ಮನೆಯಲ್ಲಿ ದನಗಳನ್ನು ಕಾಯಲು, ಅವರ ಮನೆಯಲ್ಲಿ ಬಿಟ್ಟಿಸೇವೆಯನ್ನು ಮಾಡುವುದು, ಹೊಲ ಗದ್ದೆಗಳಲ್ಲಿ ದಿನಪೂರ್ತಿ ಕೆಲಸಗಳನ್ನು ಮಾಡುವುದು, ಕೆಲವರು ಒಂದು ಹೊತ್ತಿನ ಊಟಕ್ಕೆ ಗುಲಾಮರಾಗಿದ್ದರೆ ಇನ್ನೂ ಕೆಲವರು ಮಕ್ಕಳ ಮದುವೆಗಳಿಗೆ ಸಾಲವನ್ನು ಮಾಡಿ ಅವರ ಮನೆಯಲ್ಲಿ ಗುಲಾಮರಾಗಿ ನಿರಂತರ ಸೇವೆಗಳನ್ನು ಮಾಡಿಕೊಂಡು ಬಂದಿರುವಂತಹ ಇತಿಹಾಸವನ್ನು ನೊಡಬಹುದು.

ಈ ಹಿನ್ನೆಲೆಯಲ್ಲಿ ಶೋಷಿತ ಅನೇಕ ತಳಸಮುದಾಯಗಳು ಶೋಷಕ ವರ್ಗದ ವಿರುದ್ಧ ಬಂಡಾಯವೇಳುವ ಅಪಾಯವಿರುತ್ತದೆ. ಈ ಕಾರಣಗಳಿಂದ ಸಮಾಜದಲ್ಲಿ ಸಾಮಾಜಿಕ ನ್ಯಾಯವನ್ನು ಸ್ಥಾಪಿಸುವುದು ತುಂಬಾ ಅಗತ್ಯವಾಗಿದೆ. ಸಮಾಜದಲ್ಲಿ ಸಮಾನತೆಯನ್ನು ಸ್ಥಾಪಿಸುವುದೆಂದರೆ ಶೋಷಣಾರಹಿತ ಸಮಾಜವನ್ನು ನಿರ್ಮಾಣ ಮಾಡಬೇಕಾಗುತ್ತದೆ. 'ಗುಲಾಮ ಪದ್ಧತಿ'ಯು ಜಗತ್ತಿನ ಬೇರೆ ಬೇರೆ ಸಮುದಾಯಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಅಂಶವಾಗಿದ್ದರೂ ಭಾರತೀಯ ಸಮಾಜದಲ್ಲಿ ಮಹಿಳೆಯರನ್ನು, ದಲಿತರನ್ನು ನಡೆಸಿಕೊಳ್ಳುತ್ತಿರುವ ರೀತಿ ಗುಲಾಮ ಪದ್ಧತಿಗಿಂತ ಅಮಾನುಷವಾಗಿದೆ. ಜಾತಿ ವ್ಯವಸ್ಥೆ ಎಂಬುದು ಕೇವಲ ಅಸ್ಪೃಶ್ಯರನ್ನು ಮಾತ್ರ ಗುಲಾಮರನ್ನಾಗಿಸದೆ ಒಟ್ಟಾರೆ ಭಾರತೀಯರ ಮನಸ್ಸನ್ನು ಅದು ಗುಲಾಮವಾಗಿಸಿದ, ಸ್ವಾತಂತ್ರ್ಯ ನಂತರದಲ್ಲಿ ಈ ಅರುವತ್ತು ವರ್ಷಗಳು ದಾಟಿದ್ದರೂ ಅಸ್ಪೃಶ್ಯತೆ ಎಂಬುದು ಸಮಾಜದಲ್ಲಿ ಇಂದಿಗೂ ಉಳಿದುಕೊಂಡು ಬಂದಿರುವುದು ಮಾನವತೆಗೆ ಒಂದು ಕಳಂಕವೆನ್ನಿಸಿದೆ.

೬.೨.೨ ಸತ್ತ ಪ್ರಾಣಿಗಳನ್ನು ಊರಿನಿಂದ ಸಾಗಿಸುವುದು ಮತ್ತು ಚರ್ಮ ಸುಲಿಯುವುದು

ಚಿತ್ರದುರ್ಗ ಜಿಲ್ಲೆಯಲ್ಲಿ ಅತೀ ಹೆಚ್ಚಾಗಿ ಪಶುಪಾಲಕರು ಇರುವಂಥ ಜಿಲ್ಲೆ. ಆ ಪಶುಪಾಲಕರಲ್ಲಿ ಮಾದಿಗ ಸಮುದಾಯವು ಒಂದು. ಪಶುಗಳನ್ನು ಸಾಕುವ, ಅವುಗಳ ಸಂರಕ್ಷಣೆ ಮಾಡುವ ನೈಪುಣ್ಯತೆ

ಈ ಸಮುದಾಯದವರು ಹೊಂದಿದ್ದರು. ಈ ಉದ್ದೇಶದಿಂದ ಪರಂಪರಾಗತ ಕುಲ ಕಸುಬುಗಳಲ್ಲಿ ಸತ್ತ ಪ್ರಾಣಿಗಳನ್ನು ಊರಿನಿಂದ ಸಾಗಿಸುವುದು ಮತ್ತು ಚರ್ಮ ಸುಲಿಯುವುದಾಗಿತ್ತು. ಸತ್ತ ದನ ಅಥವಾ ವಧಿಸಿದ ಕರು, ಎಮ್ಮೆ, ಕೋಣ ಮುಂತಾದ ಪ್ರಾಣಿಗಳ ಚರ್ಮವನ್ನು ಸುಲಿಯುವುದು, ಬಿಡಿಸಿದ ಚರ್ಮವನ್ನು ಗಲ್ಲೆಬಾನೆಯಲ್ಲಿ ಉಪ್ಪು ಹಾಕಿ ಮೂರು ಅಥವಾ ಐದು ದಿನಗಳ ಕಾಲ ಮುಳುಗಿಸಿ ಚರ್ಮವನ್ನು ಹದಮಾಡಿ ಹಾಗೂ ಉಳಿದ ಚರ್ಮವನ್ನು ಸಮೀಪದ ಪಟ್ಟಣಕ್ಕೆ ಹೋಗಿ ಚರ್ಮವನ್ನು ಗಾತ್ರಕ್ಕೆ ಅನುಗುಣವಾಗಿ ಮಾರುತ್ತಾರೆ. ಸಣ್ಣ ಪ್ರಾಣಿಯ ಚರ್ಮಕ್ಕೆ ರೂ. ೧೦೦, ಮಧ್ಯಮ ಗಾತ್ರದ ಪ್ರಾಣಿಯ ಚರ್ಮಕ್ಕೆ ರೂ. ೩೦೦ ಹಾಗೂ ದೊಡ್ಡ ಪ್ರಾಣಿಯ ಚರ್ಮಕ್ಕೆ ರೂ. ೫೦೦ರವರೆಗೆ ಮಾರಾಟವಾಗುತ್ತದೆ. ಗೌಡರ ಅಥವಾ ಗೋಚಿಗಾರ ಮನೆಯಲ್ಲಿ ಇರುವ ಜೀತದಾಳುಗಳು ಈ ತೆರನಾದ ಕೆಲಸವನ್ನು ಮಾಡಬೇಕಾಗಿತ್ತು.

• ಪ್ರಾಣಿಗಳನ್ನು ವಧಿಸುವುದು ಮತ್ತು ಅವುಗಳ ಸಂರಕ್ಷಣೆ ಮಾಡುವುದು

ಮಾನವನು ಹಿಂದೆ ಕಾಡು-ಮೇಡುಗಳಲ್ಲಿ ಜೀವನ ನಡೆಸುತ್ತಿದ್ದನು. ಪ್ರಕೃತಿಯಲ್ಲಿ ಸಿಗುವ ವಸ್ತುಗಳನ್ನು ಆಹಾರವಾಗಿ ಬಳಸುತ್ತಿದ್ದನು. ಇಂತಹ ವ್ಯವಸ್ಥೆಯಿಂದ ದೂರ ಬಂದು ನಾಗರಿಕ ಸಮಾಜಕ್ಕೆ ಪ್ರವೇಶವನ್ನು ಮಾಡಿದ್ದನು ಮಾದಿಗ ಸಮುದಾಯವು ದೈಹಿಕವಾಗಿ ಬಲಿಷ್ಠರಾಗಿದ್ದು ಆಹಾರಕ್ಕಾಗಿ ಪ್ರಾಣಿವಧೆ ಮಾಡುತ್ತಿದ್ದರು. ಧಾರ್ಮಿಕ ಉದ್ದೇಶಕ್ಕೋಸ್ಕರ ಮತ್ತು ಆಹಾರಕ್ಕೋಸ್ಕರ, ಧಾರ್ಮಿಕ ಉದ್ದೇಶಕ್ಕೋಸ್ಕರ ಪ್ರಾಣಿವಧೆ ಮಾಡುವುದನ್ನು ದೇಶದಲ್ಲಿ ಕಾನೂನು ನಿಷೇಧಿಸುತ್ತದೆ. "ಸಾಮಾನ್ಯವಾಗಿ ದಲಿತೇತರರು ಪ್ರಾಣಿವಧೆಯನ್ನು ತಮ್ಮ ತಮ್ಮ ಹಳ್ಳಿಯ ದಲಿತರೇ ಮಾಡಬೇಕೆಂದು ಅಪೇಕ್ಷೆ ಪಡುತ್ತಾರೆ. ಕಾಲ ಕ್ರಮೇಣ ಇದು ಕಡ್ಡಾಯವಾಗಿ ಮಾದಿಗರ ವೃತ್ತಿಯೇ ಆಯಿತು. ಆದರೆ ಬೇರೆ ಬೇರೆ ಸಾಮಾಜಿಕ, ಆರ್ಥಿಕ ಕಾರಣಗಳಿಂದಾಗಿ ಮತ್ತು ಮೇಲ್ಜಾತಿಯವರ ಸಾಮಾಜಿಕ ಒತ್ತಡದ ದೆಸೆಯಿಂದ ಈ ಪದ್ಧತಿಯಲ್ಲಿ ಬಿಟ್ಟು ಬಿಡುವುದು ಅವರಿಗೆ ಸುಲಭವಾಗಲಿಲ್ಲ."[೧೦] ಹೀಗಾಗಿ ಇನ್ನೂ ಅನೇಕ ಗ್ರಾಮೀಣ ಪ್ರದೇಶಗಳಲ್ಲಿ ಧಾರ್ಮಿಕ ಕಾರ್ಯಗಳಲ್ಲಿ ಈ ಪದ್ಧತಿ ಮುಂದುವರೆದುಕೊಂಡು ಬಂದಿದೆ.

ಕೆಲವು ಗ್ರಾಮಗಳಲ್ಲಿ ಪ್ರಾಣಿವಧೆ ಮಾಡಲು ದಲಿತೇತರರು ಮಾಡುವ ಬಲವಂತವನ್ನು ಎದುರಿಸಲು ಮಾದಿಗರು ಸಮರ್ಥರಾಗಿದ್ದರೆ, ಈ ಭಾಗದ ಕೆಲವು ಗ್ರಾಮಗಳಲ್ಲಿ ಈಗಲೂ ಇದನ್ನು ಮಾಡಲೇಬೇಕಾದ ಒತ್ತಡಕ್ಕೆ ಸಿಲುಕಿದ್ದಾರೆ. ಈ ಕೆಲಸ ಮಾಡಿದ್ದಕ್ಕೆ ಹತ್ತು ಗಿದ್ನ ದವಸ ಧಾನ್ಯಗಳು ಮತ್ತು ೫೦೧ರೂ.ಗಳ ಪ್ರತಿಫಲಕ್ಕೆ ಸಂತೋಷದಿಂದ ಈ ಕೆಲಸದಲ್ಲಿ ತೊಡಗಲು ಪ್ರೇರೇಪಿಸುತ್ತದೆ. ಧಾರ್ಮಿಕ ಆಚರಣೆಗಳಿಗೋಸ್ಕರ ಮಾದಿಗರು ಪ್ರಾಣಿವಧೆ ಮಾಡುತ್ತಿರೂ, ಕ್ರಮೇಣ ಇದರ ಪ್ರಮಾಣ ಕಡಿಮೆಯಾಗಿದೆ. ಪ್ರಾಣಿಗಳ ವಧೆ ಮಾಡುವುದರ ಜೊತೆಗೆ ಪ್ರಾಣಿಗಳನ್ನು ಸಂರಕ್ಷಣೆ ಮಾಡುವ ಕರ್ತವವನ್ನು ಈ ಸಮುದಾಯವು ಮಾಡುತ್ತಿದ್ದಾರೆ. ದನಗಳಿಗೆ ರೋಗ ಬಂದರೆ ಸ್ಥಳೀಯವಾಗಿ ಸಿಗುವ ನಾಟಿ ಔಷಧಿಗಳನ್ನು ನೀಡುವುದು. ಅವುಗಳನ್ನು ವಾರಕ್ಕೊಮ್ಮೆ ಸ್ವಚ್ಛಗೊಳಿಸುವುದು, ವರ್ಷಪೂರ್ತಿಯಾಗಿ ಅವುಗಳನ್ನು ಮೇಯಿಸುವ ಕೆಲಸವನ್ನು ಮಾಡುತ್ತಿದ್ದರು. ಇದಕ್ಕೆ ಪ್ರತಿಫಲವಾಗಿ

ಒಂದು 'ಗಿದನ' ಕಾಳು, 'ಮುಂಗಡ' ಕಾಳು ಕೊಡುತ್ತಿದ್ದರು. ಇಂತಹ ವಿಶೇಷವಾದ ಕುಲ ಕಸುಬುಗಳನ್ನು ಕೆಲವು ಗ್ರಾಮಗಳು ಮಾತ್ರ ಮುಂದುವರಿಸಿಕೊಂಡು ಬಂದಿವೆ.

೬.೨.೩ ಚಮ್ಮಾರಿಕೆ

ಮಾದಿಗ ಸಮುದಾಯವರು ಪರಂಪರಾಗತವಾಗಿ ಬೆಳೆಸಿಕೊಂಡು ಬಂದಿರುವ ಕುಲ ಕಸುಬು ಎಂದರೆ ಚಮ್ಮಾರಿಕೆ. ಜೀತದಾಳುಗಳಾಗಿ ಕೆಲಸವನ್ನು ಮಾಡುವುದರಿಂದ ಗೌಡ ಅಥವಾ ಗೋಚಿಗಾರನಿಗೆ ಚಪ್ಪಲಿಯನ್ನು ತಂದು ಕೊಡುವುದು ಆದ್ಯ ಕರ್ತವ್ಯವಾಗಿತ್ತು. ಆದ್ದರಿಂದ ಚಮ್ಮಾರಿಕೆ ಕೆಲಸವನ್ನು ಮಾಡಿಕೊಂಡು ಬರಬೇಕಾಗಿತ್ತು. ಒಂದುವೇಳೆ ಇವನಿಗೆ ಚಪ್ಪಲಿ ಮಾಡಲಿಕ್ಕೆ ಬಂದಿಲ್ಲವೆಂದರೆ ಬೇರೆಯವನ ಹತ್ತಿರವಾದರೂ ತೆಗೆದುಕೊಂಡು ಹೋಗಬೇಕು. ಆದ್ದರಿಂದ ಸತ್ತಿರುವ, ವಧಿಸಿದ ದನ, ಎಮ್ಮೆ, ಕೋಣ ಇನ್ನೂ ಮುಂತಾದ ಚರ್ಮವನ್ನು ಹದ ಮಾಡಿ, ಚರ್ಮವನ್ನು ನೆಲಕ್ಕೆ ಹಾಕಿ ಅದರ ಸುತ್ತಲು ತಂಗಡಿ ಕಟ್ಟಿಗೆ ಬಡಿದು ಮೂರು ಅಥವಾ ನಾಲ್ಕು ದಿನಗಳ ಕಾಲ ಒಣಗಿಸಿ, ಧರ್ಮ ಹದ ಆದ ಮೇಲೆ ಚಪ್ಪಲಿಯನ್ನು ಮಾಡುತ್ತಾರೆ. ಉಳಿದ ಚರ್ಮವನ್ನು ವ್ಯವಸಾಯಕ್ಕೆ ನಗದಣಿ, ನೊಗಸುತ್ತು, ಗೆಜ್ಜೆಸರ, ಹಗ್ಗ, ಮೀಣಿಬಾರಕೋಲು ಹಾಗೂ ಮನೆಯ ನಿರ್ಮಾಣ ಮಾಡಲು ಹಗ್ಗದ ರೂಪದಲ್ಲಿ ಚರ್ಮವನ್ನು ತಯಾರು ಮಾಡಿಕೊಡುತ್ತಾರೆ. ಹೆಚ್ಚಾಗಿ ಚಪ್ಪಲಿಯನ್ನು ತಯಾರು ಮಾಡಲು ಬಳಸುತ್ತಿದ್ದರು. ಇನ್ನೂ ಉಳಿದ ಚರ್ಮವನ್ನು ವ್ಯಾಪಾರಿಗಳಿಗೆ ಮಾರುತ್ತಿದ್ದರು. ಇಂದಿಗೂ ಗ್ರಾಮೀಣ ಪ್ರದೇಶಗಳಲ್ಲಿ ಧಾರ್ಮಿಕ ಕಾರ್ಯಗಳಲ್ಲಿ ಈ ಪದ್ಧತಿ ಮುಂದುವರೆದುಕೊಂಡು ಬಂದಿದೆ.

೬.೨.೪ ಮಾದಿಗತ-ಒಕ್ಕಲುತನ

ಮಾದಿಗರು ನಿರತರಾಗಿರುವ ಕುಲಕಸುಬು ಮಾದಿಗತನ ಒಕ್ಕಲುತನವಾಗಿರುತ್ತದೆ. ಮಾದಿಗರಿಗೆ ಸಂಬಂಧಿಸಿದ ಒಂದು ಪರಂಪರಾಗತ ಧಾರ್ಮಿಕ ಪದ್ಧತಿಯೇ ಮಾದಿಗತನ-ಒಕ್ಕಲುತನ ಎನ್ನುವರು. ಈ ಸಮುದಾಯಕ್ಕೆ ಯಾವುದೇ ಕೌಶಲ್ಯ ಕಸುಬು ಇಲ್ಲ ಬೇರೆಯವರ ಮನೆಯಲ್ಲಿ ಅಥವಾ ಭೂಮಿಯಲ್ಲಿ ಐದರಿಂದ ಆರು ಅಥವಾ ಹತ್ತು ವರ್ಷಗಳ ಕಾಲ ಗೌಡರು, ಗೋಚಿಗಾರರು ಹೇಳಿದ ಕೆಲಸಗಳನ್ನು ಮಾಡುತ್ತಾರೆ. ಈ ಕೆಳಗಿನ ಸೇವೆಗಳನ್ನು ಮಾದಿಗರು ಮಾಡಲೇಬೇಕು

೧. ಜಂಗಳಿ(ಲಿ) ದನಗಳನ್ನು ಕಾಯಿವುದು.

೨. ಜಂಗಳಿ ದನಗಳನ್ನು ಸಂರಕ್ಷಿಸುವುದು.

೩. ಕೊಯ್ಲಿನ ಸಮಯದಲ್ಲಿ ಬೆಳೆ ಕೊಯ್ಯುವುದು.

೪. ತೆನೆ ಬಡಿಯುವುದು, ಕಣ ಮಾಡುವುದು ಮತ್ತು ಇತರೆ ಕೆಲಸಗಳಲ್ಲಿ ಸಹಾಯ ಮಾಡುವುದು.

೫. ಗೋಚಿಗಾರ, ಗೌಡರ ಮನೆಗಳಲ್ಲಿ ಏನಾದರೂ ವಿಶೇಷ ಸಂದರ್ಭಗಳಿದ್ದರೆ ತಮಟೆ ಬಾರಿಸುವುದು.

೬. ಆ ಮನೆಯ ಸದಸ್ಯರಿಗೆ ಕಾಲಕಾಲಕ್ಕೆ ಪಾದರಕ್ಷೆಗಳನ್ನು ತಯಾರಿಸಿ ಕೊಡಬೇಕು.

೭. ಬೇಸಾಯ ಕೆಲಸಗಳಿಗೆ ಅಗತ್ಯವಿರುವ ಚರ್ಮದ ವಸ್ತುಗಳನ್ನು ತಯಾರಿಸುವುದು.

೮. ಈ ಮನೆಗಳಲ್ಲಿ ಯಾರಾದರೂ ಸತ್ತರೆ ಆ ಸುದ್ದಿಯನ್ನು ನೆರೆಯ ಊರುಗಳಲ್ಲಿರುವ ಸಂಬಂಧಿಕರಿಗೆ ತಿಳಿಸಿ ಬರುವುದು.

೯. ಊರಿನಲ್ಲಿ ಯಾರಾದರೂ ಸತ್ತರೆ ಅವರನ್ನು ಸುಡುವುದು ಹಾಗೂ ಉಳುವ ಎಲ್ಲ ಕೆಲಸಗಳನ್ನು ಇವರೇ ಮಾಡಬೇಕು.

೧೦. ಊರಿನ ಎಲ್ಲಾ ದೇವಸ್ಥಾನಗಳ ಮುಂಭಾಗದಲ್ಲಿ ಸ್ವಚ್ಛಗೊಳಿಸುವುದು.

ಈ ಕೆಲಸವನ್ನು ಮಾಡಿದ್ದರೆ ವರ್ಷಕ್ಕೆ ಒಂದು ಜೊತೆ ಬಟ್ಟೆ, ಎರಡು ಅಥವಾ ಮೂರು ಸಾವಿರ ರೂಪಾಯಿಗಳನ್ನು ಹಾಗೂ ವರ್ಷದ ಬೆಳೆಯಲ್ಲಿ ಇವರ ಜೊತೆಗೆ ಊರಿನಲ್ಲಿ ನಡೆಯುವ ಕಾರ್ಯಗಳಲ್ಲಿ ಭಾಗವಹಿಸಬೇಕಾಗಿತ್ತು. ಈ ಕೆಲಸಕ್ಕೆ ಸರಿಯಾದ ಪ್ರತಿಫಲ ಕಡಿಮೆ. ಒಂದುವೇಳೆ ಇವರ ವಿರೋಧ ಹೋರಾಟ ಮಾಡಿದರೆ. ಯಾವುದೋ ಸುಳ್ಳು ಆರೋಪ ಮಾಡಿ ಊರಿನಿಂದ ಓಡಿಸುವ ಕೆಲಸವನ್ನು ಮಾಡುತ್ತಿದ್ದರು ಆದ್ದರಿಂದ ಯಾವುದೇ ಫಲಾಪೇಕ್ಷೆ ಮಾಡದೆ ಇರುವ ಕೊಡುವ ಸವಲತ್ತುಗಳಿಗೆ ಸಂತೋಷಪಡುವ ಒಂದು ಪ್ರಸಂಗವನ್ನು ತಿಳಿಯಬಹುದಾಗಿದೆ.

• **ಮಾದಿಗತನ**

ಮಾದಿಗರು ಪರಂಪರಾಗತವಾಗಿ ಮಾಡಿಕೊಂಡು ಬಂದಿರುವ ಕುಲಸುಬುಗಳಿಗೆ ಹೆಚ್ಚಿನ ಪ್ರಮುಖ್ಯತೆಯನ್ನು ನೀಡಲಾಗಿತ್ತು. ಅದು ಇಂದಿಗೂ ಮುಂದುವರಿಯುತ್ತಿರುವುದನ್ನು ಚಿತ್ರದುರ್ಗ ಜಿಲ್ಲೆಯ ಗ್ರಾಮೀಣ ಭಾಗದಲ್ಲಿ ನೋಡಬಹುದು. ಗ್ರಾಮಗಳಲ್ಲಿ ಹಲವಾರು ಗುಂಪುಗಳು ಇರುತ್ತವೆ. ಒಂದೊಂದು ಗುಂಪು ಒಬ್ಬ ಗೌಡ ಅಥವಾ ಗೋಚಿಗಾರನನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಹುಟ್ಟಿನಿಂದ ಸಾವಿನವರೆಗೆ ಎಲ್ಲ ಜವಾಬ್ದಾರಿಗಳನ್ನು ಇವರು, ನೋಡಿಕೊಳ್ಳಬೇಕು. ಮಾದಿಗತ ಮಾಡುವ ಮಾದಿಗರು ತಾವು ಸಲ್ಲಿಸುವ ಈ ಎಲ್ಲಾ ಸೇವೆಗಳಿಗೆ ಪ್ರತಿಯಾಗಿ, ತಾವು ಸಲ್ಲಿಸುವ ಹೆಚ್ಚುವರಿ ಸೇವೆಗಾಗಿ, (ಅನೇಕ ಮಾದಿಗರು ತಮ್ಮ ಜೀವನೋಪಾಯಕ್ಕಾಗಿ) ಮಾದಿಗತನವನ್ನೇ ಸಂಪೂರ್ಣವಾಗಿ ಅವಲಂಬಿಸಿರುತ್ತಾರೆ. ಮಾದಿಗತನ ಮಾಡುತ್ತಿರುವ ದಲಿತೇತರ ಮನೆಗಳಿಂದ ಮಾದಿಗರು ಆಗಾಗ್ಗೆ ಸಾಲ ಮಾಡುತ್ತಿರುವುದು ಸಾಮಾನ್ಯ. ಈ ಸಾಲದ ಬಲೆಗೆ ಸಿಕ್ಕಿಕೊಂಡಿರುವ ಈ ಜನಕ್ಕೆ ಮಾದಿಗತನವೆಂಬ ಕವಿಮುಷ್ಠಿಯಿಂದ ಹೊರಬರಲು ಎಂದೂ ಸಾಧ್ಯವಾಗುತ್ತಿಲ್ಲ. ಅನೇಕ ವಿಷಯಗಳಲ್ಲಿ ಮಾದಿಗತನ ಮತ್ತು ಒಕ್ಕಲುತನವು ತಲೆ-ತಲಾಂತರಗಳವರೆಗೆ ಗೌಡರ ಅಥವಾ ಗೋಚಿಗಾರ ಸೇವೆ ಮಾಡುವ ಜೀತ ಪದ್ಧತಿಗೆ ಸರಿಸಮವಾಗಿದೆ.

ಮಾದಿಗ ಸಮುದಾಯವರು ಮಾದಿಗತನವನ್ನು ವ್ಯಾಪಕವಾಗಿ ಅನುಸರಿಸುತ್ತಿದ್ದರೂ ಈ ಪದ್ಧತಿಯ ಬಗ್ಗೆ ಅವರಲ್ಲಿ ಅಸಹನೆ ಇದೆ ಎಂದು ಹೇಳುತ್ತಾರೆ. ಮಾದಿಗತನ ಒಂದು ಅನ್ಯಾಯ ಮತ್ತು ದಮನಕರ ಪದ್ಧತಿಯೆಂದು ಈ ಜನ ತಿಳಿಯಲಾರಂಭಿಸಿದ್ದಾರೆ. ಹಿಂದಿನ ಕಾಲದಲ್ಲಿ ಮಾದಿಗತನ ಸೇವೆಗೆ ಪ್ರತಿಯಾಗಿ ಬೆಳೆಯ ಕಾಲಾಂಶ ದೊರೆಯುತ್ತಿತ್ತು. ಆದರೆ ಅವರಿಗೆ ತಾವು ಮಾಡುತ್ತಿದ್ದ ವೃತ್ತಿಯ ಬಗ್ಗೆ ಅಸಹ್ಯ ಭಾವನೆ ಹೆಚ್ಚುತ್ತಿದೆ. ಆದರೆ ಸಾಂಪ್ರದಾಯಿಕ ವೃತ್ತಿಯನ್ನು ಅವರು ತುಂಬಾ

ಹೇಸುತ್ತಿದ್ದರು. ಈ ಕಾರ್ಯವನ್ನು ಬಿಡಲು ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ತಮ್ಮ ಸಂಪ್ರದಾಯ ನಾಶವಾಗಬಾರದು ಎಂಬ ಕಾರಣಕ್ಕೆ ಕೆಲವು ಗ್ರಾಮೀಣ ಪ್ರದೇಶದಲ್ಲಿ ಉಳಿಸಿಕೊಂಡು ಬಂದಿದ್ದಾರೆ ಎಂದು ಹೇಳಬಹುದು.

೬.೨.೫ ಜಾಡಮಾಲಿ ಕೆಲಸ

ಮಾದಿಗ ಸಮುದಾಯದ ಮುಖಂಡರು ಹೇಳುವಂತೆ ತಮ್ಮ ಜನರು ಪರಂಪರಗಾತವಾಗಿ ಮಾಡುತ್ತಾ ಬಂದಿರುವ ಪೌರಕಾರ್ಮಿಕ ವೃತ್ತಿಯನ್ನು ಬಿಟ್ಟಿದ್ದಾರೆ. ಆದರೆ ಬಹುಪಾಲು ಈ ಕಸುಬು ಕಣ್ಮರೆಯಾಗಿದ್ದರೂ ಕೆಲವು ಗ್ರಾಮೀಣ ಪ್ರದೇಶಗಳಲ್ಲಿ ಮಾದಿಗರು ಈಗಲೂ ಈ ವೃತ್ತಿಯನ್ನು ಸಂಪೂರ್ಣವಾಗಿ ಕೈಬಿಟ್ಟಿಲ್ಲ ಎಂಬುದು ಅಧ್ಯಯನದಿಂದ ತಿಳಿದುಬಂದಿದೆ. ಅಲ್ಲಲ್ಲಿ ಕೆಲವು ಗ್ರಾಮ ಪಂಚಾಯ್ತಿಗ ಇದಕ್ಕೆ ಬಣ್ಣತುಂಬಿ ಪೌರಕಾರ್ಮಿಕರು ಎಂದು ಕರೆಯಲಾರಂಬಿಸುತ್ತಾರೆ.

ಒಂದು ರೀತಿಯಲ್ಲಿ ಈ ಪರಂಪರಾಗತ ವೃತ್ತಿ ತಮ್ಮಲ್ಲಿ ಇನ್ನೂ ಉಳಿದಿದೆ ಎಂದು ಒಪ್ಪಿಕೊಳ್ಳುವುದರಲ್ಲಿ ಮಾದಿಗರಿಗೆ ಕಸಿವಿಸಿ ಎದ್ದು ಕಾಣುತ್ತದೆ. ಇದೊಂದು ಸಹಜ ಪ್ರಕ್ರಿಯೆ, ಶೌಚಾಲಯವನ್ನು ಸ್ವಚ್ಛ ಮಾಡುವ ಕೆಲಸವನ್ನು ಮತ್ತೊಮ್ಮೆ ಯೋಚಿಸಲು ಅವರಿಗೆ ಆಗುತ್ತಿಲ್ಲ. ಅಷ್ಟೊಂದು ಅಸಹ್ಯ ಭಾವನೆ ಅವರಲ್ಲಿ ಗಾಢವಾಗಿ ಕಾಣುತ್ತದೆ. ಆದರೆ ಕಿತ್ತುತಿನ್ನುವ ಬಡತನದಿಂದ ಕುಟುಂಬದಲ್ಲಿ ಹೆಚ್ಚು ಜನಸಂಖ್ಯೆ ಇರುವುದರಿಂದ ಈ ಕಾರ್ಯವನ್ನು ಮಾಡುತ್ತಾರೆ ಎಂದು ತಿಳಿಸುತ್ತಾರೆ. ಹೆಚ್ಚಿನ ಹಳ್ಳಿಗಳಲ್ಲಿ ಮಲ ಹೊರುವುದನ್ನು ಸಂಪೂರ್ಣವಾಗಿ ಕೈಬಿಟ್ಟಿದ್ದರೂ ಅನೇಕ ಗ್ರಾಮೀಣ ಪ್ರದೇಶಗಳಲ್ಲಿ ಮಾದಿಗತನ ಮಾಡುತ್ತಿರುವ ಮಾದಿಗರು ತಮ್ಮ ಗೌಡ, ಗೊಂಚಿಗಾರ ಮನೆಗಳಲ್ಲಿ ಸ್ನಾನದ ಕೋಣೆಯಲ್ಲಿ ಸಂಗ್ರಹವಾಗಿರುವ ಕಸಕಡ್ಡಿ ಮೂತ್ರಾದಿಗಳನ್ನು ದೂರ ಸಾಗಿಸಬೇಕಾಗುತ್ತದೆ.

೬.೨.೬ ಬಿಟ್ಟಿ ಸೇವೆ

ಬಿಟ್ಟಿ ಸೇವೆ ಮಾದಿಗ ಸಮುದಾಯದವರು ಪರಂಪರಾಗತವಾಗಿ ಮುಂದುವರಿಸಿಕೊಂಡು ಬಂದಿರುವ ಕುಲ ಕಸುಬು ಆಗಿದೆ. ಬಿಟ್ಟಿ ಸೇವೆ ಎಂದರೆ ಯಾವುದೇ ಪ್ರತಿಫಲವಿಲ್ಲದೆ ಬಿಟ್ಟಿಯಾಗಿ ದಿನವಿಡಿ ಒಂದು ಹೊತ್ತಿನ ಅನ್ನಕ್ಕಾಗಿ ಬೇರೆಯವರ ಮನೆಯಲ್ಲಿ ಕೆಲಸವನ್ನು ಮಾಡುವುದು. ಚಿತ್ರದುರ್ಗ ಭಾಗದಲ್ಲಿ ಇತ್ತೀಚಿನವರೆಗೂ ಮಾದಿಗರು ಯಾವುದೇ ರೀತಿಯ ಕೆಲಸವನ್ನಾದರೂ ಕಡ್ಡಾಯವಾಗಿ ಹಾಗೂ ಬಿಟ್ಟಿಯಾಗಿಯೇ ಮಾಡಬೇಕಾಗಿತ್ತು. ಆದರೆ ಈ ಮಧ್ಯೆ ಸಾಕಷ್ಟು ಸುಧಾರಣೆಗಳು ಆಗಿವೆ. ಆದರೆ ಈ ಬಿಟ್ಟಿ ಸೇವೆ ಸಂಪೂರ್ಣವಾಗಿ ನಿಂತಿಲ್ಲ. ಹದಗೆಟ್ಟಿರುವ ಮಾದಿಗರ ಆರ್ಥಿಕ ಸ್ಥಿತಿಯಿಂದಾಗಿ ಸಾಲ ಶೂಲದಿಂದ ಹೊರಗೆ ಬರಲು ಆಗುತ್ತಿಲ್ಲ. ನಗರದಿಂದ ದೂರ ಉಳಿದಿರುವ ಕೆಲವು ಗ್ರಾಮಗಳು ಇದರಿಂದ ಹೊರತ್ತಾಗಿಲ್ಲ. ಅಲ್ಲಲ್ಲಿ ಕಂಡುಬರುವುದನ್ನು ಅಧ್ಯಯನದಿಂದ ತಿಳಿಯಲಾಗಿದೆ.

- **ಸಾಲದ ಶೂಲ**

ಹೆಚ್ಚಿನ ಮಾದಿಗರು ಸಾಲದ ಶೂಲಕ್ಕೆ ಬಿದ್ದವರು. ಭೂಮಾಲೀಕರಿಂದ ಹೆಚ್ಚಿನ ಬಡ್ಡಿಯ ದರದಲ್ಲಿ ಸಾಲವನ್ನು ತೆಗೆದುಕೊಂಡು, ಸಾಲವನ್ನು ಮರು ಪಾವತಿಸಲು ಆಗದೆ ನರಳುವವರೇ ಜಾಸ್ತಿ. ಈ

ದುಃಸ್ಥಿತಿಯ ದುರುಪಯೋಗವನ್ನು ಭೂಮಾಲೀಕರು ಚೆನ್ನಾಗಿಯೇ ಮಾಡುತ್ತಾರೆ. ಸಾಲದ ಮುಲಾಜಿಗೆ ಬೀಳುವ ಈ ಮಾದಿಗರನ್ನು ಬಲಾತ್ಕಾರವಾಗಿ ತಮ್ಮ ಹೊಲಗಳಲ್ಲಿ ಗುಲಾಮರಾಗಿ ದುಡಿಸಿಕೊಳ್ಳುತ್ತಾರೆ. ಅವರ ಕೈಯಿಂದ ಮಾಡಿಸಿಕೊಳ್ಳದ ನಿಕೃಷ್ಟ ಕೆಲಸಗಳೇ ಇಲ್ಲ. ಹೆಚ್ಚುತ್ತಲೇ ಇರುವ ಬಡ್ಡಿಯ ಮರುಪಾವತಿಯನ್ನು ಈ ಕೆಲಸಗಳ ಮೂಲಕ ವಜಾ ಮಾಡುತ್ತೇವೆ ಎಂದು ಹೇಳುತ್ತಾರೆ. ಈ ಸಾಲದ ಶೂಲದಲ್ಲಿ ಒಮ್ಮೆ ಬಿದ್ದರೆ ಹೊರಗೆ ಬರಲು ಈ ಸಾಧ್ಯವೆ ಇಲ್ಲ. ತಮ್ಮ ಸಾಲ ಮರುಪಾವತಿಗಾಗಿ ಮಾಡುವ ಕಡ್ಡಾಯ ಸೇವೆಗಳು ಒಂದೆರಡಲ್ಲ. ಕೊಟ್ಟಿಗೆಯನ್ನು ಶುಚಿ ಮಾಡುವುದು, ದನಕರುಗಳನ್ನು ಚೊಕ್ಕವಾಗಿಡುವುದು, ಕಸಕಡ್ಡಿಗಳನ್ನು ಹೊತ್ತು ಊರ ಹೊರಗೆ ಎಸೆಯುವುದು, ಬೆಳೆಗಳನ್ನು ಕೊಯ್ಲು ಮಾಡುವುದು, ಭೂಮಿಯಲ್ಲಿ ವ್ಯವಸಾಯವನ್ನು ಮಾಡುವುದು ಹೀಗೆ ಕೆಲಸಗಳನ್ನೆಲ್ಲ ಮಾದಿಗರು ಮಾಡಲೇ ಬೇಕಾಗುತ್ತದೆ. ಕೊಟ್ಟಿಗೆಯನ್ನು ಶುಚಿ ಮಾಡುವ ಕೆಲಸವು ಸಾಮಾನ್ಯವಾಗಿ ಮುಂಜಾನೆ ಐದು ಘಂಟೆಗೆ ಆರಂಭವಾಗಿ ಮಧ್ಯಾಹ್ನ ಎರಡರಿಂದ ಮೂರು ತಾಸುಗಳವರೆಗೆ ನಡೆಯುತ್ತದೆ. ಈ ಕೆಲಸ ಮುಗಿದ ನಂತರ ಇವರು ತಮ್ಮ ದಿನನಿತ್ಯದ ಕೆಲಸಗಳಿಗೆ ಹೋಗಬೇಕಾಗುತ್ತದೆ. ಇತ್ತೀಚಿನ ವರ್ಷಗಳಲ್ಲಿ ಮಾದಿಗ ಹೆಂಗಸು ಮತ್ತು ಮಕ್ಕಳು ಕೊಟ್ಟಿಗೆಯನ್ನು ಶುಚಿ ಮಾಡುವ ಕೆಲಸಗಳಲ್ಲಿ ಹೆಚ್ಚಾಗಿ ನಿರತರಾಗಿಲ್ಲ. ಆದ್ದರಿಂದ ಇಂತಹ ವೃತ್ತಿಯಿಂದ ಮಾದಿಗರು ಹೊರಬರಲು ಪ್ರಯತ್ನ ಮಾಡುತ್ತಿದ್ದಾರೆ.

೬.೨.೭ ತಮಟೆ ಬಾರಿಸುವುದು

ಚಿತ್ರದುರ್ಗ ಜಿಲ್ಲೆಯ ಮಾದಿಗ ಸಮುದಾಯದವರು ತಮಟೆ ಬಾರಿಸುವ ಕಸುಬಿನಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ತಮಟೆ ಬಾರಿಸುವುದು ಕೇವಲ ಬಿಟ್ಟಿ ಸೇವೆಯೇ ವಿನಃ ಸಂಪಾದನೆಗಾಗಿ ಅಲ್ಲ. ಊರಿನಲ್ಲಿ ಡಂಗುರ ಹೊಡೆಯಲು, ಸಾವಿನ ಸಂದರ್ಭದಲ್ಲಿ, ಹಿಂದೂಗಳ ಹಬ್ಬ, ಜಾತ್ರೆಗಳಲ್ಲಿ, ಮೊಹರಂ ಹಬ್ಬದಲ್ಲಿ ಇನ್ನಿತರ ಧಾರ್ಮಿಕ ಹಾಗೂ ಸಾಮಾಜಿಕ ಸಭೆ ಸಮಾರಂಭಗಳಲ್ಲಿ ಹಾಗೂ ದಲಿತೇತರ ಮನೆಗಳಲ್ಲಿ ನಡೆಯುವ ಮಂಗಳ ಕಾರ್ಯಗಳಲ್ಲಿ ಈ ತಮಟೆ ಬಾರಿಸುವುದು ಸರ್ವೇಸಾಮಾನ್ಯ. ಈ ಕಾರ್ಯಕ್ಕೆ ಇವರಿಗೆ ದೊರೆಯುವ ಸಂಬಳವೆಂದರೆ ಸಾರಾಯಿ ಅಥವಾ ಸೇಂದಿ. ತಮ್ಮ ಸರಕುಗಳನ್ನು ಹರಾಜು ಮತ್ತು ಮಾರಾಟಕ್ಕಾಗಿ ಬರುವ ಸಂಚಾರಿ ವರ್ತಕರು ಮಾತ್ರ ತಮಟೆ ಬಾರಿಸಿದ್ದಕ್ಕೆ ಹಣ ಕೊಡುತ್ತಾರೆ. ಹಿಂದೂಗಳ ಹಬ್ಬಗಳಲ್ಲಿ ತಮಟೆ ಬಾರಿಸಲು ನಿರಾಕಸಿದರೆ ಅವರ ಕೆಲಸಕ್ಕೆ ಕುತ್ತು ಬರುವುದರ ಬಗ್ಗೆ ಹಾಗೂ ಸಾಮಾಜಿಕ ಬಹಿಷ್ಕಾರ ಕೂಡ ಆಗುತ್ತವೆ. ಹಾಗಾಗಿ ಭಯದಿಂದಲೇ ಈ ವೃತ್ತಿಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಈ ಸೇವೆ ತಮ್ಮ ಗೋಂಚಿಗಾರ ಅಥವಾ ದಣಿಗಳಿಗಾಗಿ ಮಾಡಬೇಕಾದ ಕಡ್ಡಾಯ ಸೇವೆ. ಮಾದಿರಾಗಿದ್ದುಕೊಂಡು ದಣಿಯ ಮನೆಯಲ್ಲಿ ಸೇವೆ ಮಾಡುತ್ತಿರುತ್ತಾರೋ ಅಲ್ಲಿ ಅವರ ಹಬ್ಬ ಹರಿದಿನಗಳಲ್ಲಿ, ಮದುವೆ ಮುಂಜಿಗಳಲ್ಲಿ ಇವರು ತಮಟೆ ಬಾರಿಸಲೇಬೇಕಾಗಿದೆ.

ಇವತ್ತಿನ ದಿನಮಾನಗಳಲ್ಲಿ ಶಿಕ್ಷಣ ಪಡೆದಿರುವಂತಹ ಯುವಕರು ಈ ವೃತ್ತಿಯ ಬದಲಾಗಿ, ಆಧುನೀಕವಾಗಿ ಸಿಗುವ ಡೋಲು ಬಾರಿಸುವುದನ್ನು ಕಲಿತುಕೊಂಡಿದ್ದಾರೆ. ಡೋಲು ಬಾರಿಸುವ

ವೃತ್ತಿ ಮಾಡುವವರ ಪ್ರಮಾಣ ಕಡಿಮೆಯಾಗುತ್ತದೆ. ತಮಟೆಯನ್ನು ಬಾರಿಸುವುದು ಕೇವಲ ಹಿರಿಯ ತಲೆಮಾರಿನವರು ಮಾತ್ರ. ಯುವಕರು ತಮಟೆ ಬಾರಿಸುವ ವೃತ್ತಿಯನ್ನು ನಿರಾಕರಿಸುತ್ತಿರುವುದು ಒಂದು ಉತ್ತಮ ಬದಲಾವಣೆ ಎಂದು ಹೇಳಬಹುದು.

೬.೨.೮ ಸಮಾಧಿ ತೋಡುವುದು ಮತ್ತು ಸುದ್ದಿ ಮುಟ್ಟಿಸುವುದು

ಚಿತ್ರದುರ್ಗ ಪ್ರದೇಶದಲ್ಲಿ ಮಾದಿಗ ಸಮುದಾಯವು ಪರಂಪರಾಗತ ಕುಲಕಸುಬಾಗಿ ಸಮಾಧಿ ತೋಡುವುದು ಮತ್ತು ಸಾವಿನ ಸುದ್ದಿಯನ್ನು ಮುಟ್ಟಿಸುವುದು ಮಾಡಿಕೊಂಡು ಬಂದಿದ್ದಾರೆ. ಪ್ರತಿಯೊಂದು ನಗರ ಮತ್ತು ಗ್ರಾಮೀಣ ಭಾಗದಲ್ಲಿ ಈ ಕೆಲಸವನ್ನು ಮಾಡುಕೊಂಡು ಬಂದಿದ್ದಾರೆ. ಸಾಮಾನ್ಯವಾಗಿ ದಲಿತೇತರ ಸಮುದಾಯದವರು ಮರಣ ಹೊಂದಿದ್ದರೆ ಅಥವಾ ಬೇರೆ ಯಾವುದೇ ಕಾರಣಕ್ಕೆ ಮರಣ ಹೊಂದಿದ್ದರೆ ಶವವನ್ನು ಸುಡುವ ಅಥವಾ ಸಮಾಧಿ ತೋಡುವ ಕೆಲಸವನ್ನು ಮಾಡುವುದ್ದರ ಜೊತೆಗೆ ಮರಣ ಹೊಂದಿರುವ ವ್ಯಕ್ತಿಯ ಸಂಬಂಧಿಕರಿಗೆ ಸಾವಿನ ಸುದ್ದಿಯನ್ನು ಮುಟ್ಟಿಸುವ ಮತ್ತು ರಾತ್ರಿಪೂರ್ತಿ ಅವರ ಮನೆಯಲ್ಲಿ ಕಾವಲು ಕಾಯುವ ಕೆಲಸವನ್ನು ಈ ಸಮುದಾಯದವರೆ ಮಾಡಬೇಕಾಗಿತ್ತು. ನಂತರ ಬೆಳಗಿನ ಜಾವ ಸುಮಾರು ನಾಲ್ಕು ಘಂಟೆಗೆ ಕೇರಿಯ ಹಿರಿಯ ಯಜಮಾನರು ಸತ್ತಿರುವರ ಸಂಬಂಧಿಕರ ಊರುಗಳಿಗೆ ಹೋಗಿ ಇಂಥವರ ಮನೆಯಲ್ಲಿ ಸಾವಿಗೀಡಾಗಿದ್ದಾರೆ, ಇಷ್ಟುಹೊತ್ತಿಗೆ ಮಣ್ಣು ಮಾಡುತ್ತಾರೆ ಸುದ್ದಿ ಮುಟ್ಟಿಸುತ್ತಾರೆ. ಅದಕ್ಕೆ ಸಂಬಂಧಿಕರು ಕಾಳು, ಊಟ ಹಾಗೂ ಹತ್ತರಿಂದ ಇಪ್ಪತ್ತು ರೂಪಾಯಿಗಳು ಕೊಟ್ಟು ಕಳುಹಿಸುತ್ತಾರೆ. ನಂತರ ಮನೆಯ ಸುತ್ತಲು ಕೆಲವರು ಶುಚಿಗೊಳಿಸುವ ಕೆಲಸ ಮಾಡುತ್ತಾರೆ. ಮತ್ತೆ ಕೆಲವರು ಇಳಿಹೊತ್ತಿನಲ್ಲಿ ಸಮಾಧಿಯನ್ನು ತೆಗೆಯಲು ಹೋಗುತ್ತಾರೆ. ಬೇರೆ ಬೇರೆ ಸಮುದಾಯದವರು ಮಣ್ಣು ಮಾಡುವ ವಿಧಾನಕ್ಕೆ ಅನುಗುಣವಾಗಿ ಕುಣಿಯನ್ನು ತೆಗೆಯುತ್ತಾರೆ. ಉದಾ: ಲಿಂಗಾಯತರ ಸಾವಿನ ಸಂದರ್ಭದಲ್ಲಿ ಶವನ್ನು ಮಲಗಿಸುವುದಿಲ್ಲ, ಅವರು ಕೂರಿಸುತ್ತಾರೆ. ಅದರಿಂದ ಕೂರಿಸಲು ಬೇಕಾಗುವ ಆಕಾರದಲ್ಲಿ ಕುಣಿಯನ್ನು ತೆಗೆಯುತ್ತಾರೆ. ಕೆಲವರು ಆರು ಅಡಿ ಉದ್ದ, ಮೂರು ಅಡಿ ಆಳದ ಕುಣಿಯನ್ನು ತೆಗೆಸುತ್ತಾರೆ. ಈ ಮಣ್ಣಿನ ಕಾರ್ಯ ಮುಗಿದ ಮೇಲೆ ಸ್ಮಶಾನದಿಂದ ಸ್ವಲ್ಪ ದೂರ ಬಂದು ನೆಲದ ಮೇಲೆ ಟವಲ್ ಮತ್ತು ತಂದಿರುವ ಸಂಲಕರಣೆಗಳನ್ನು ಬಿಚ್ಚಿ ಇಡುತ್ತಾರೆ. ಬಂದಿರುವಂಥ ಜನರು ಅವರಿಗೆ ತಿಳಿದ ರೀತಿಯಲ್ಲಿ ಹತ್ತೋ ಐದೋ ರೂಪಾಯಿಯನ್ನು ಹಾಕುತ್ತಾರೆ. ಇದನ್ನು 'ಜಕಟಿ' ಬಾರಿಸುವುದು ಎಂದು ಕರೆಯುತ್ತಾರೆ. ಈ ಹಣವನ್ನು ಈ ಕಾರ್ಯದಲ್ಲಿ ಭಾಗವಹಿಸಿದ ಕೇರಿಯ ಯಜಮಾನರು ಹಂಚಿಕೊಂಡು ಸಾರಾಯಿ ಅಥವಾ ಸೇಂದಿಗೆ ಬಳಸುತ್ತಾರೆ. ಈ ಹಣವನ್ನು ಮನೆಗೆ ತೆಗೆದುಕೊಂಡು ಹೋಗುವಂತಿಲ್ಲ, ನಂತರ ಮೂರು ದಿನದ ಆಚರಣೆಯಲ್ಲಿ ಅಥವಾ ಹದಿನಾರು ದಿನದ ಕಾರ್ಯದಲ್ಲಿ ಇವರ ಪಾತ್ರ ಮುಖ್ಯವಾಗಿರುತ್ತದೆ. ವಿಶೇಷವಾಗಿ ಯಾರದೋ 'ತೊನ್ನು' ಇರುವ ವ್ಯಕ್ತಿಯ ಸಮಾಧಿಯನ್ನು ಗುರುತಿಸಿ, ಶವವನ್ನು ಹೊರತೆಗೆದು ಬೆಂಕಿಯಲ್ಲಿ ಸುಡುತ್ತಾರೆ. ಇದನ್ನು 'ಕಾಡು ಸೊಸಿಸುವುದು' ಎಂದು ಕರೆಯುತ್ತಾರೆ. ಈ ರೀತಿಯಾದ ಅನೇಕ ಕೆಲಸಗಳನ್ನು ತಮ್ಮ ಕುಲ ಕಸುಬಾಗಿ ಮಾದಿಗರು ಮಾಡಿಕೊಂಡಿದ್ದಾರೆ.

೬.೨.೯ ಸತ್ತ ಪ್ರಾಣಿಗಳ ಮಾಂಸವನ್ನು ತಿನ್ನುವುದು

ಮಾದಿಗರು ಸತ್ತ ಪ್ರಾಣಿಗಳನ್ನು ಊರಿನಿಂದ ಹೊರ ಸಾಗಿಸುವಂಥ ಪಾರಂಪರಿಕ ವೃತ್ತಿಯನ್ನು ಮಾಡಿಕೊಂಡು ಬಂದಿದ್ದಾರೆ. ಸಾಮಾನ್ಯವಾಗಿ ದಲಿತೇತರ ಮನೆಯಲ್ಲಿ ಯಾವುದೋ ಕಾರಣಕ್ಕೆ ಸತ್ತಿರುವಂಥ ಪ್ರಾಣಿಗಳನ್ನು ಸಾಗಿಸುವುದರ ಜೊತೆಗೆ ಅವುಗಳನ್ನು ತಿನ್ನುವಂತಹ ಪದ್ಧತಿಯು ಮಾದಿಗರಲ್ಲಿ ಕಂಡುಬರುತ್ತಿತ್ತು. ಆದರ ಇಂದು ಬಹುತೇಕರು ಇದನ್ನು ಪಾಲಿಸುತ್ತಿಲ್ಲ. ಕೆಲವು ಹಳ್ಳಿಗಳಲ್ಲಿ ಈ ಪದ್ಧತಿ ಇನ್ನೂ ಉಳಿದುಕೊಂಡಿದೆ. ಸತ್ತ ಪ್ರಾಣಿಗಳನ್ನು ತಿಂನ್ನುವುದರಿಂದ ಅನೇಕ ರೋಗಗಳು, ಹಲವಾರು ಜನರು ಸತ್ತಿರುವ ಘಟನೆಗಳು ಜನರಲ್ಲಿ ಭಯವನ್ನುಂಟುಮಾಡಿದೆ. ಹೀಗಾಗಿ ಬಹುತೇಕ ಸ್ಥಳಗಳಲ್ಲಿ ಪ್ರಾಣ ಭಯದಿಂದಾಗಿಯೇ ಈ ಪದ್ಧತಿ ಕಣ್ಮರೆಯಾಗಿದೆ ಎನ್ನುವುದರಲ್ಲಿ ಯಾವ ಅನುಮಾನವಿಲ್ಲ.

೬.೨.೧೦ ಪರಂಪರಾಗತ ಕಸುಬುಗಳಲ್ಲಿ ಬದಲಾವಣೆ

ಮಾದಿಗತನ–ಒಕ್ಕಲುತನ, ಚರ್ಮ ಸುಲಿಯುವುದು, ಡೋಲು ಬಾರಿಸುವುದು, ತಮಟೆ ಬಾರಿಸುವುದು, ಚಪ್ಪಲಿಗಳನ್ನು ಹೊಲಿಯುವುದು, ಪ್ರಾಣಿಗಳನ್ನು ವಧಿಸುವುದು ಈ ಮೊದಲಾದ ಪಾರಂಪರಿಕವಾಗಿ ಬಂದ ಕಸುಬುಗಳ ಪ್ರಮಾಣ ಮಾದಿಗರಲ್ಲಿ ಕಡಿಮೆಯಾಗಿದೆ. ತಾವು ಈ ಸಾಂಪ್ರದಾಯಿಕ ವೃತ್ತಿಗಳನ್ನು ಮಾಡುತ್ತಿದ್ದೇವೆಂದು ಒಪ್ಪಿಕೊಳ್ಳಲು ಮಾದಿಗರು ಹಿಂಜರಿಯುತ್ತಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಅಲ್ಲಲ್ಲಿ ಮಾತ್ರ ಈ ಕಸಬುಗಳನ್ನು ಮಾಡುವವರು ಇದ್ದಾರೆ.

ಕೆಲವು ಪರಂಪರಾಗತ ಕಸುಬುಗಳನ್ನು ಮಾದಿಗರು ಬಹಳ ಮಟ್ಟಿಗೆ ಕೈಬಿಟ್ಟಿದ್ದಾರೆ. ಹಾಗೇ ಹೋಗಿರುವ ಕೆಲವು ಅನಿಷ್ಟಗಳಲ್ಲಿ ಸತ್ತ ಪ್ರಾಣಿಗಳನ್ನು ತಿನ್ನುವುದು, ರಸ್ತೆ ಚರಂಡಿ ಗುಡಿಸುವುದು, ಪ್ರಾಣಿಗಳನ್ನು ವಧಿಸುವುದು, ಸಮಾಧಿ ತೋಡುವುದು ಹೀಗೆ ಕೆಲವಾರು ಸೇರಿವೆ. ಅಲ್ಲದೆ ಮಾದಿಗತ–ಒಕ್ಕಲುತನ, ಚರ್ಮ ಸುಲಿಯುವುದು, ಡೋಲು ಬಾರಿಸುವುದು, ತಮಟೆ ಬಾರಿಸುವುದು, ಚಮ್ಮಾರಿಕೆ ಇವು ಈಗಲೂ ವ್ಯಾಪಕವಾಗಿ ಕಂಡುಬಂದರೂ ಈ ವೃತ್ತಿಗಳಲ್ಲಿ ಇವರಿಗೆ ತಿರಸ್ಕಾರ, ಅಸಹ್ಯ ಮನೋಭಾವನೆ ಉಂಟಾಗಿದೆ. ಈ ವೃತ್ತಿಗಳ ಬಗ್ಗೆ ಅವರಲ್ಲಿ ಮೂಡಿರುವ ಈ ತಿರಸ್ಕಾರಕ್ಕೆ ಅನೇಕ ಕಾರಣಗಳಿವೆ.

ಪರಂಪರಾಗತ ಕಸುಬುಗಳನ್ನು ಕೈಬಿಡಲು ಆಥವಾ ಅವುಗಳ ಬಗ್ಗೆ ಅಸಹ್ಯಪಡಲು ಆಧುನಿಕ ಶಿಕ್ಷಣ, ನಾಗರಿಕರಣ, ಜಾಗತಿಕರಣ, ವಲಸೆಯ ಪ್ರಭಾವ ಹೀಗೆ ಅನೇಕ ಕಾರಣವೆಂದು ಹೆಚ್ಚಿನ ಸಂಖ್ಯೆಯಲ್ಲಿ ಜನರು ಹೇಳುತ್ತಾರೆ. ಸಾಮಾನ್ಯವಾಗಿ ಈ ಅಭಿಪ್ರಾಯಗಳ ಎಲ್ಲ ಹಳ್ಳಿಗಳಲ್ಲಿ ಕಂಡುಬಂದಿದೆ. ಹಾಗೇಯೇ ಒತ್ತಡಗಳಿಗೆ ಒಳಗಾಗಿ ಮಾದಿಗರು ವೃತ್ತಿಯಲ್ಲಿ ಸಾಕಷ್ಟು ಬದಲಾವಣೆ ಹೊಂದಲೂ ಕಾರಣವಾಗಿದೆ.

ಎರಡನೆ ಮುಖ್ಯ ಕಾರಣವಾಗಿ 'ಸಮಾಜದ ತಿಳಿವಳಿಕೆ ಮತ್ತು ನಾಗರಿಕ ಪ್ರಜ್ಞೆ' ಎಂದು ಉತ್ತರಿಸಿದ್ದಾರೆ. ಈ ಪರಂಪರಾಗತ ಕಸುಬುಗಳನ್ನು ಕೈಬಿಡಲು ಮೇಲೆ ತಿಳಿಸಿರುವ ಅಂಶಗಳ ಜೊತೆಗೆ ಸಮಾಜದಲ್ಲಿ ಉತ್ತಮ ಜೀವನವನ್ನು ನಡೆಸಬೇಕು ಮತ್ತು ಬೇರೆ ಸಮುದಾಯ ಹೋಲಿಕೆ ಮಾಡಿನೋಡಿದರೆ

ಅವರಿಗಿಂತ ಉತ್ತಮ ಜೀವನವನ್ನು ನಡೆಸಬೇಕು ಎನ್ನುವಂಥ ಮನೋಭಾವನೆ ಮಾದಿಗರ ಬದುಕಿನಲ್ಲಿ ಬದಲಾವಣೆಗೆ ಕಾರಣವಾಗಿದೆ.

"ಅತ್ಯಂತ ದುರ್ಗಮ ಸ್ಥಿತಿಯ ಬಾಳ್ವೆ ನಡೆಸುತ್ತಿರುವ ಇವರೊಳಗೆ ಅಂಧಕಾರವಿದೆ, ಅಜ್ಞಾನವಿದೆ ಹಾಗೂ ದೇವದಾಸಿಗಳಿದ್ದಾರೆ, ಮೂಢನಂಬಿಕೆಗಳಿಂದ ಜೀವನಪೂರ್ತಿ ನರಕದಲ್ಲೇ ಸಾಯುವ ಅಜಾಗೃತಿ ಸಮಾಜವೆಂದರೆ ತಪ್ಪಾಗದು. ಪಂಚರೂ ಒಂದೇ ಅನ್ನುವ ಮನೋಭೂಮಿಕೆ ಇಲ್ಲ ಇಂದಿಗೂ ಸೃಷ್ಟಿಯಾಗಿಲ್ಲ. ಇಂತಹ ಕ್ರೋಢೀಕರಣವಾಗಬೇಕಾದರೆ ಈ ಸಮಾಜದೊಳಗೆ ಪ್ರಾಮಾಣಿಕ ಮನಸ್ಸಿನ ಜನರ ಸೃಷ್ಟಿ ಜಾಸ್ತಿಯಗಬೇಕು ಆವಾಗ ಸಾಮಾಜಿಕ, ಧಾರ್ಮಿಕ ಹಾಗೂ ಸಂಸ್ಕೃತಿಗಳ ಮೇಲೆ ಆಗಿರುವ ಆನ್ಯಾಯಗಳಿಗೆ ಪ್ರಬಲ ಹೋರಾಟ ನೀಡಿ ಬದುಕಿನ ಅಯಾಮಗಳ ಸೃಷ್ಟಿಗೆ ಮಾರ್ಗೋಪಾಯ ಕಂಡುಕೊಳ್ಳುವರು."೧೧ ಬಚರ್ಮಗಾರಿಕೆ ಮಾಡುವ ಸಮುದಾಯಗಳಾದ ಚಮ್ಮಾರ, ಮಾಲ, ಸಮಗಾರ, ಮೀಣಿಮಾದಿಗ, ಮಾದಿಗ ಇವರು ಕೀಳು ಮನೋಭಾವನೆಯಲ್ಲಿ ಜೀವನವನ್ನು ನಡೆಸುತ್ತಾರೆ. ಕೀಳರಿಮೆಯಿಂದ ಹೊರಬಂದು ಸಾಮಾಜಿಕ ವ್ಯವಸ್ಥೆಯಲ್ಲಿ ಎಲ್ಲಾ ಸಮುದಾಯಗಳ ರೀತಿಯಲ್ಲಿ ಜೀವನವನ್ನು ನಡೆಸಬೇಕು ಎನ್ನುವುದು ಪ್ರಸ್ತುತ ಅಧ್ಯಯನದ ಆಶಯವಾಗಿದೆ.


ಕೋಷ್ಟಕ: ೬.೨. ಸಮೀಕ್ಷೆಗೊಳಪಡಿಸಿದ ಚಿತ್ರದುರ್ಗ ಜಿಲ್ಲೆಯ ತಾಲೂಕುವಾರು ಮಾದಿಗ ಸಮುದಾಯದ ಲಿಂಗವಾರು ಕಸುಬುಗಳು

ಕಸುಬುಗಳು	ಗಂಡು	ಹೆಣ್ಣು	ಒಟ್ಟು	ಶೇಕಡ %
ಕೃಷಿ	೪೮	೨೬	೭೪	೪.೦೨
ಕೃಷಿಕೂಲಿ	೭೯೭	೮೩೭	೧೬೩೪	೮೮.೭
ಸರ್ಕಾರಿ	೧೬	೩	೧೯	೧.೦೩
ಖಾಸಗಿ	೨೨	೪	೨೬	೧.೪೧
ಇತರೆ	೬೮	೨೧	೮೯	೪.೮೩
ಒಟ್ಟು	೯೫೧	೮೯೧	೧೮೪೨	
	೫೧.೬೩	೪೮.೩೭		೧೦೦.೦೦

ಕೋಷ್ಟಕ ೬.೨ರಲ್ಲಿ ತಿಳಿಸಿದಂತೆ. ಚಿತ್ರದುರ್ಗದ ಮಾದಿಗ ಸಮುದಾಯವನ್ನು ಅಧ್ಯಯನಕ್ಕೆ ಸೀಮಿತ ಮಾಡಿಕೊಂಡು, ಈ ಜಿಲ್ಲೆಯ ಆರು ತಾಲೂಕುಗಳಲ್ಲಿ ಎರಡು ಗ್ರಾಮಗಳನ್ನು ಆಯ್ಕೆ ಮಾಡಿಕೊಂಡಿದೆ. ಪ್ರತಿಯೊಂದು ಗ್ರಾಮದಲ್ಲಿ ೬೦ ಕುಟುಂಬಗಳನ್ನು ಪ್ರಶ್ನಾವಳಿ ಮೂಲಕ ಸಂದರ್ಶನದ ಮಾಡಿ, ಆರು ತಾಲೂಕುಗಳ ಹನ್ನೆರಡು ಹಳ್ಳಿಗಳನ್ನು ಒಟ್ಟು ೭೨೦ ಕುಟುಂಬಗಳಿಂದ ಮಾಹಿತಿಯನ್ನು ಸಂಗ್ರಹಿಸಿಲಾಗಿದೆ. ಅದರಲ್ಲಿ ಈ ಸಮುದಾಯದವು ತಮ್ಮ ಕುಟುಂಬದ ಮೂಲ ವೃತ್ತಿ ಕೃಷಿಯನ್ನಾಗಿಸಿಕೊಂಡವರ ಪುರುಷರ ಪ್ರಮಾಣ ಶೇ. ೪೮ರಷ್ಟು, ಮಹಿಳೆಯರ ಪ್ರಮಾಣ ಶೇ.

೨೬ರಷ್ಟು, ಒಟ್ಟು ಗಂಡು ಮತ್ತು ಹೆಣ್ಣು ಇಬ್ಬರ ಪ್ರಮಾಣ ಶೇ. ೭೪ರಷ್ಟು ಇರುವುದು ಕಂಡುಬಂದಿದೆ. ಕೃಷಿಕೂಲಿಯನ್ನು ತಮ್ಮ ಕುಟುಂಬದ ಮೂಲ ವೃತ್ತಿಯನ್ನಾಗಿಸಿಕೊಂಡವರ ಪುರುಷರ ಪ್ರಮಾಣ ಶೇ. ೭೯೭ರಷ್ಟು, ಮಹಿಳೆಯರ ಪ್ರಮಾಣ ಶೇ. ೮೩೭ರಷ್ಟು, ಒಟ್ಟು ಗಂಡು ಮತ್ತು ಹೆಣ್ಣು ಇಬ್ಬರ ಪ್ರಮಾಣ ಶೇ. ೧೬೩೪ರಷ್ಟು ಇರುವುದು ಕಂಡುಬಂದಿದೆ. ಸರ್ಕಾರಿ ವೃತ್ತಿಯಲ್ಲಿ ಇರುವ ಪುರುಷರ ಪ್ರಮಾಣ ಶೇ. ೧೬ರಷ್ಟು, ಮಹಿಳೆಯರ ಪ್ರಮಾಣ ಶೇ. ೩ರಷ್ಟು, ಒಟ್ಟು ಗಂಡು ಮತ್ತು ಹೆಣ್ಣು ಇಬ್ಬರ ಪ್ರಮಾಣ ಶೇ. ೧೯ರಷ್ಟು ಇರುವುದನ್ನು ನೋಡಬಹುದು. ಖಾಸಗಿ ವೃತ್ತಿಯನ್ನು ಮಾಡುತ್ತಿರುವ ಪುರುಷರ ಪ್ರಮಾಣ ಶೇ. ೨೨ರಷ್ಟು, ಮಹಿಳೆಯರ ಪ್ರಮಾಣ ಶೇ. ೪ರಷ್ಟು, ಒಟ್ಟು ಗಂಡು ಮತ್ತು ಹೆಣ್ಣು ಇಬ್ಬರ ಪ್ರಮಾಣ ಶೇ. ೨೬ರಷ್ಟು ಇರುವುದನ್ನು ತಿಳಿದುಕೊಳ್ಳಬಹುದು. ಇತರೆ ವೃತ್ತಿಗಳೆಂದರೆ ಸಣ್ಣ ವ್ಯಾಪಾರಗಳು, ಗಾರೆಕೆಲಸ ಅಥವಾ ಮನೆ ಕಟ್ಟುವ ಕೆಲಸ, ಹಮಾಲಿ ಕೆಲಸ, ಇಟ್ಟಿಗೆ ಬಟ್ಟಿಯಲ್ಲಿ ಕೂಲಿ ಕಾರ್ಮಿಕರಾಗಿ ಕೆಲಸಗಳನ್ನು ನಿರ್ವಹಿಸುವ ಪುರುಷರ ಪ್ರಮಾಣ ಶೇ. ೬೮ರಷ್ಟು, ಮಹಿಳೆಯರ ಪ್ರಮಾಣ ಶೇಕಡ ೨೧ರಷ್ಟು, ಒಟ್ಟು ಗಂಡು ಮತ್ತು ಹೆಣ್ಣು ಇಬ್ಬರ ಪ್ರಮಾಣ ಶೇ. ೮೯ರಷ್ಟು ಇದೆ. ಈ ಸಮುದಾಯ ಕಾಲಸಂದಂತೆ ಸ್ಥಿರವಾಗಿ ನಿಂತು ವ್ಯವಸಾಯವನ್ನು ವೃತ್ತಿಯನ್ನಾಗಿಸಿಕೊಂಡಿದ್ದು ಹೆಚ್ಚಾಗಿ ಕಂಡು ಬರುತ್ತಿದೆ. ಇತ್ತೀಚೆಗೆ ಶಿಕ್ಷಣ ಪಡೆದ ವಿದ್ಯಾವಂತರು ಅಲ್ಪಸ್ವಲ್ಪ ಸರ್ಕಾರಿ ನೌಕರಿಯನ್ನು ಹೊಂದುತ್ತಿದ್ದಾರೆ. ಸ್ತ್ರೀಯರಲ್ಲಿ ಶಿಕ್ಷಣ ಮಟ್ಟ ಕಡಿಮೆ ಇದ್ದು ಮನೆಕೆಲಸ, ಕುರಿ, ದನಗಳನ್ನು ಕಾಯುವುದು, ಹೊಲಗೆಲಸ ಮಾಡುವುದು ಕಂಡು ಬರುತ್ತದೆ. ದುಡಿಮೆಯ ವಿಧಾನಗಳು ಯಾವುವು ಯಾವ ದುಡಿಮೆಯಿಂದ ತನ್ನ ಜೀವನ ಸಾಗಿಸುವರು ಎನ್ನುವುದಕ್ಕೆ ಕೋಷ್ಟಕ ೬.೨ರಲ್ಲಿ ವ್ಯಕ್ತವಾಗುವುದು.

ವೃತ್ತಚಿತ್ರ: ೬.೧. ಸಮೀಕ್ಷೆಗೊಳಪಡಿಸಿದ ಚಿತ್ರದುರ್ಗ ಜಿಲ್ಲೆಯ ತಾಲೂಕುವಾರು ಮಾದಿಗ ಸಮುದಾಯದ ಲಿಂಗವಾರು ಕಸುಬುಗಳ ಪ್ರಮಾಣ



ವೃತ್ತಚಿತ್ರ ೬.೧ರಲ್ಲಿ ತಿಳಿಯುವ ಅಂಶವೆಂದರೆ ಚಿತ್ರದುರ್ಗದ ಮಾದಿಗ ಸಮುದಾಯವನ್ನು ಅಧ್ಯಯನಕ್ಕೆ ಸೀಮಿತ ಮಾಡಿಕೊಂಡು, ಈ ಜಿಲ್ಲೆಯ ಆರು ತಾಲೂಕುಗಳಲ್ಲಿ ಎರಡು ಗ್ರಾಮಗಳನ್ನು ಆಯ್ಕೆ ಮಾಡಿಕೊಂಡಿದೆ. ಪ್ರತಿಯೊಂದು ಗ್ರಾಮದಲ್ಲಿ ೬೦ ಕುಟುಂಬಗಳನ್ನು ಪ್ರಶ್ನಾವಳಿ ಮೂಲಕ ಸಂದರ್ಶನದ ಮಾಡಿ, ಆರು ತಾಲೂಕುಗಳ ಹನ್ನೆರಡು ಹಳ್ಳಿಗಳ ಒಟ್ಟು ೭೨೦ ಕುಟುಂಬಗಳಿಂದ ಮಾಹಿತಿಯನ್ನು ಸಂಗ್ರಹಿಸಿಲಾಗಿದೆ. ಅದರಲ್ಲಿ ಈ ಸಮುದಾಯವು ತಮ್ಮ ಕುಟುಂಬದ ಮೂಲ ವೃತ್ತಿ ಕೃಷಿಯನ್ನಾಗಿಸಿಕೊಂಡ ಪುರುಷರ ಪ್ರಮಾಣ ಶೇಕಡ ೮೯ರಷ್ಟು ಇರುವುದು ಕಂಡುಬಂದಿದೆ. ಸರ್ಕಾರಿ ವೃತ್ತಿಯಲ್ಲಿ ಇರುವ ಪ್ರಮಾಣ ಶೇಕಡ ೧ರಷ್ಟಿದೆ. ಖಾಸಗಿ ವೃತ್ತಿಯನ್ನು ಮಾಡುತ್ತಿರುವವರ ಪ್ರಮಾಣ ಶೇಕಡ ೧ರಷ್ಟು ಇರುವುದನ್ನು ತಿಳಿದುಕೊಳ್ಳಬಹುದು. ಇತರೆ ವೃತ್ತಿಗಳೆಂದರೆ ಸಣ್ಣ ವ್ಯಾಪಾರಗಳು, ಗಾರೆಕೆಲಸ ಅಥವಾ ಮನೆ ಕಟ್ಟುವ ಕೆಲಸ, ಹಮಾಲಿ ಕೆಲಸ, ಇಟ್ಟಿಗೆ ಬಟ್ಟಿಯಲ್ಲಿ ಕೂಲಿಕಾರ್ಮಿಕರಾಗಿ ಕೆಲಸಗಳು ನಿರ್ವಹಿಸುವವರ ಪ್ರಮಾಣ ಶೇಕಡ ೫ರಷ್ಟು ಈ ಸಮುದಾಯ ಕಾಲ ಸಂದಂತೆ ಸ್ಥಿರವಾಗಿ ನಿಂತು ವ್ಯವಸಾಯವನ್ನು ವೃತ್ತಿಯನ್ನಾಗಿಸಿಕೊಂಡಿದ್ದಾರೆ. ಇತ್ತೀಚೆಗೆ ಶಿಕ್ಷಣ ಪಡೆದ ವಿದ್ಯಾವಂತರು ಅಲ್ಪಸ್ವಲ್ಪ ಸರ್ಕಾರಿ ನೌಕರಿಯನ್ನು ಹೊಂದುತ್ತಿದ್ದಾರೆ. ಸ್ತ್ರೀಯರಲ್ಲಿ ಶಿಕ್ಷಣ ಮಟ್ಟ ಕಡಿಮೆ ಇದ್ದು ಮನೆಕೆಲಸ, ಕುರಿ ಕಾಯುವುದು, ದನಗಳನ್ನು ಮೇಯಿಸುವುದು, ಹೊಲಗೆಲಸ ಮಾಡುವುದು ಕಂಡು ಬರುತ್ತದೆ. ದುಡಿಮೆಯ ವಿಧಾನಗಳು ಯಾವುವು ಅದರಲ್ಲಿ ಯಾವ ದುಡಿಮೆಯಿಂದ ತನ್ನ ಜೀವನ ಸಾಗಿಸುವರು ಎನ್ನುವುದಕ್ಕೆ ವೃತ್ತಚಿತ್ರ ೬.೧ರಲ್ಲಿ ವ್ಯಕ್ತವಾಗುವುದು.

೬.೨.೧೧ ಪ್ರಸುತ್ತ ದಿನಮಾನಗಳಲ್ಲಿ ಕೈಗೊಂಡಿರವ ಪರ್ಯಾಯ ವೃತ್ತಿಗಳು

- ಕೂಲಿ ಕಾರ್ಮಿಕ ವೃತ್ತಿ

ಪ್ರತಿದಿನ ಇಂತಿಷ್ಟು ಹಣಕ್ಕಾಗಿ ಕೆಲಸ ಮಾಡುವುದೇ 'ಕೂಲಿ'. ಕೂಲಿಗಳಲ್ಲಿ ವಿವಿಧ ಪ್ರಕಾರಗಳಿವೆ ನಿತ್ಯ ಹೊಲ ಹಾಗೂ ದನಗಳನ್ನು ಕಾಯುವುದು, ಅವುಗಳ ರಕ್ಷಣೆ, ತಿಂಗಳುಗಟ್ಟಲೇ ಮಾಡುವ ಕೆಲಸ, ತಿಂಗಳಿಗೆ ಇಂತಿಷ್ಟು ಹಣ ಎಂದು ಗುರುತಿಸಿಕೊಂಡು ಅವರ ಮನೆಯಲ್ಲಿ ಕೆಲಸ ಮಾಡಿಕೊಂಡು ಇರುವುದು ಕೆಲವೊಂದು ಸಂದರ್ಭಗಳಲ್ಲಿ ನಿರಂತರವಾಗಿ ಕೆಲಸ ಸಿಗುವುದು ಸಾಧ್ಯವಾಗಲಾರದು. ಏಕೆಂದರೆ ಕೃಷಿ ಕೂಲಿ ಕೇವಲ ಆರು ತಿಂಗಳು ಕಾಲ ದೊರೆಯುವ ಕೆಲಸವಾಗಿದೆ. ಆದ್ದರಿಂದ ಕೃಷಿ ಚಟುವಟಿಕೆ ಆರಂಭವಾಗುವ ಸಂದರ್ಭದಲ್ಲಿ ಕೂಲಿ ಕೆಲಸಗಳು ಪ್ರಾರಂಭ, ಹಾಗಾಗಿ ಶ್ರಮಕ್ಕೆ ತಕ್ಕಂತೆ ಪ್ರತಿಫಲ ಸಿಗುವುದು ಬಹಳ ಕಷ್ಟ. ಏಕೆಂದರೆ ಮಳೆಯಾಧಾರಿತವಾದ ಭೂಮಿಯು ಹೆಚ್ಚಾಗಿ ಚಿತ್ರದುರ್ಗ ಭಾಗದಲ್ಲಿ ಇರುವುದರಿಂದ ಮಾದಿಗ ಸಮುದಾಯದವರು ಬೇರೆಯವರ ಮನೆಯಲ್ಲಿ ಕೂಲಿ ಕೆಲಸ ಮಾಡುತ್ತಾರೆ. ಕೂಲಿ ದೊರೆಯದೆ ಹಾಗೂ ಹೆಚ್ಚು ಕೂಲಿ ಸಿಗುವ ಕಡೆ ಈ ಸಮುದಾಯ ಗುಳೇ ಹೋಗುವ ಸಂದರ್ಭಗಳುಂಟು. ಹೆಚ್ಚು ಕೂಲಿ ಸಿಗುವ ಕಡೆ ಹೋದರೆ ಮನೆ, ಮದುವೆಯಂತಹ ಕಾರ್ಯಕ್ರಮಕ್ಕೆ ಸಹಾಯವಾಗಬಹುದೆಂಬ ಹಿನ್ನೆಲೆಯಲ್ಲಿ ಬೇರೆ ಕಡೆಗೆ ಹೋಗುವರು.

ಮನೆಯಲ್ಲಿ ಮಾಡಿದ ಸಾಲವನ್ನು ತೀರಿಸಲು ಅನಿವಾರ್ಯ ಕಾರಣದಿಂದಾಗಿ ಮಕ್ಕಳನ್ನು ಕಟ್ಟಿಕೊಂಡು ಹೋಗಬೇಕಾಗಿರುತ್ತದೆ. ಹೀಗೆ ಗುಳೇ ಹೋಗುವುದು ಪರ್ಯಾಯ ವ್ಯವಸ್ಥೆಯಾಗಿರಬಹುದು. ಆದರೆ

ಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದಂತೆ ದೊಡ್ಡ ಪರಿಣಾಮ ಬೀರುತ್ತದೆ. ಕೂಲಿ ಕೆಲಸಕ್ಕೆ ನೀಡುವ ಹಣವೆಂದರೆ ಪುರುಷರಿಗೆ ೧೫೦ ರೂ. ಹಾಗೂ ೧೦೦ ರೂ. ಗಳಂತೆ ಕೂಲಿ ಪಡೆಯುತ್ತಾರೆ. ಕಾಲಮಾನಕ್ಕೆ ಅನುಗುಣವಾಗಿ ದರದಲ್ಲಿ ವ್ಯತ್ಯಾಸವಾಗಬಹುದು. ಗುಂಟೆ ಹೊಡೆಯುವುದು, ಬದು ಕೆತ್ತುವುದು, ಬೀಜ ಬಿತ್ತನೆ ಮಾಡುವುದು, ಎಂಡೆಗುಂಟೆ ಹೊಡೆಯುವುದು, ಕಳೆ ತೆಗೆಯುವುದು, ಹತ್ತಿ ಬಿಡಿಸುವುದು, ಶೇಂಗಾ ಬಿತ್ತುವುದು ಹಾಗೂ ಬಿಡಿಸುವುದು, ಈರುಳ್ಳಿ ನಾಟಿ, ಕಳೆ, ಕೊರೆಯುವುದು, ಬೆಳೆಗಳಿಗೆ ರಾಸಾಯನಿಕ ಗೊಬ್ಬರ ಹಾಕುವುದು ಇನ್ನೂ ಮುಂತಾದ ಕೆಲಸಗಳನ್ನು ಮಾಡುತ್ತಾರೆ. ಈ ಕೆಲಸ ಮಾಡುವವರು ೨೦ ವರ್ಷದಿಂದ ೬೦ ವರ್ಷ ಒಳಗಿನವರಾಗಿರುತ್ತಾರೆ. ಇವರ ಮನೆಯಲ್ಲಿ ಕೃಷಿ ಸಂಬಂಧಿ ಕೆಲಸಗಳನ್ನು ಕುಟುಂಬದವರೇ ಸೇರಿಕೊಂಡು ಮಾಡುತ್ತಾರೆ.

• ಒಕ್ಕಲುತನ

ಮಾದಿಗ ಸಮುದಾಯವು ಬೇರೆ ಸಮುದಾಯಗಳಂತೆ ಭೂಮಿಯನ್ನು ಉಳುವ ಆಶೆ ಇದೆ. ಆದರೆ ಭೂಮಿಯ ಪ್ರಮಾಣ ಕಡಿಮೆಯಿದೆ. ಕೆಲವರಿಗೆ ಭೂಮಿಯೇ ಇಲ್ಲ, ಇಂತಹವರು ಬೇರೆಯವರ ಭೂಮಿಯನ್ನು ಗೇಣಿಗೆ, ಸರಿಪಾಲು ಅಥವಾ ಗುತ್ತಿಗೆ ತೆಗೆದುಕೊಂಡು ಕೃಷಿ ಮಾಡುತ್ತಾರೆ. ಸರಿಪಾಲು ಎಂದರೆ ಮಾಲೀಕ ಭೂಮಿಯಲ್ಲಿ ಬೆಳೆದಿರುವ ಬೆಳೆಯಲ್ಲಿ ಸರಿಸಮಾನವಾಗಿ ಭೂಮಿಯ ಮಾಲೀಕ ಹಾಗೂ ಭೂಮಿಯನ್ನು ಉಳುಮೆ ಮಾಡಿದವನ್ನು ಇವರಿಬ್ಬರು ಬೆಳೆಯನ್ನು ಹಂಚಿಕೊಳ್ಳುವುದಕ್ಕೆ ಗುತ್ತಿಗೆ ಎಂದು ಕರೆಯುತ್ತಾರೆ. ಆದರೆ ಬೆಳೆದಿರುವ ಶೇಂಗಾ, ಜೋಳ, ಮೆಕ್ಕೆಜೋಳದ ಹುಲ್ಲುಗಳನ್ನು ದನಗಳಿಗೆ ಭೂಮಿಯನ್ನು ಉಳುಮೆ ಮಾಡಿದವನೇ ತೆಗೆದುಕೊಳ್ಳುತ್ತಾನೆ. ಈ ಹುಲ್ಲುಗಳಿಂದ ವರ್ಷಪೂರ್ತಿಯಾಗಿ ಪಶುಗಳನ್ನು ಸಾಕುತ್ತಾರೆ. ಚಿತ್ರದುರ್ಗ ವ್ಯಾಪ್ತಿಯಲ್ಲಿ ಬರುವ ಕೆಲವು ಗ್ರಾಮಗಳಲ್ಲಿ ಮಾದಿಗ ಸಮುದಾಯದವರು ನೀರಾವರಿ ಮಾಡಿಕೊಂಡು ವಾಣಿಜ್ಯ ಬೆಳೆ ತೆಗೆಯುವ ಮೂಲಕ ಯಶಸ್ವಿ ವ್ಯವಸಾಯಗಾರರಾಗಿದ್ದಾರೆ. ಹತ್ತಿ, ಶೇಂಗಾ, ಮೆಕ್ಕೆಜೋಳ, ಸೂರ್ಯಕಾಂತಿ, ಈರುಳ್ಳಿ ಹಾಗೂ ಮನೆಗೆ ಬೇಕಾಗುವ ಬೆಳೆಗಳಾದ ಮೆಣಸಿನಕಾಯಿ, ಟೊಮೊಟೊ, ರಾಗಿ, ಜೋಳ, ತರಕಾರಿ ಬೆಳೆ ಇನ್ನೂ ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ. ಇದರ ಮೂಲಕ ಇವರ ಜೀವನ ವಿಧಾನದಲ್ಲಿ ಸ್ವಲ್ಪ ಮಟ್ಟಿಗೆ ಸುಧಾರಣೆಯನ್ನು ಕಾಣಲು ಸಾಧ್ಯವಾಗಿದೆ.

• ಸಣ್ಣ ವ್ಯಾಪಾರಗಳು

ಮಾದಿಗ ಸಮುದಾಯವು ವ್ಯಾಪಾರ, ವಾಣಿಜ್ಯ ಕ್ಷೇತ್ರದಲ್ಲಿ ಕಾಲಿಟ್ಟಿರುವುದು ತುಂಬಾ ವಿರಳ ಎನ್ನಬಹುದು. ಹಿಂದೆ ವ್ಯಾಪಾರ, ವಾಣಿಜ್ಯ ಎನ್ನುವ ಕ್ಷೇತ್ರಗಳು ಇವರಿಗೆ ಕನಸಿನ ಮಾತಾಗಿತ್ತು. ಇಂತಹ ವ್ಯಾಪಾರ ವಾಣಿಜ್ಯವನ್ನು ಉನ್ನತ ಜಾತಿಯವರೇ ಮಾತ್ರ ಮಾಡುತ್ತಿದ್ದರು. ಅವರ ಕೈಕೆಳಗೆ ಸಹಾಯಕರಾಗಿ ಮಾದಿಗ ಸಮುದಾಯದವರು ಕೆಲಸ ಮಾಡುತ್ತಿದ್ದರು. ಇದರಿಂದ ಹೊರ ಬರಬೇಕು ಎನ್ನುವ ಉದ್ದೇಶದಿಂದಾಗಿ ಹಾಗೂ ಬೇರೆಯವರ ರೀತಿಯಲ್ಲಿ ನಾವು ಮುಂದೆ ಬರಬೇಕು ಎನ್ನುವ ಆಶೆಯನ್ನು ಇಟ್ಟುಕೊಂಡಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಸಣ್ಣ ಕಿರಾಣಿ ಅಂಗಡಿ, ಕಾಳಿನ ವ್ಯಾಪಾರ,

ಹಾಲು ಮಾರಾಟ, ತರಕಾರಿ ವ್ಯಾಪಾರ, ದನಗಳ ದಲ್ಲಾಳಿ ಮುಂತಾದ ವ್ಯಾಪಾರ ವಹಿವಾಟುಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಸಣ್ಣಪುಟ್ಟ ವ್ಯಾಪಾರವನ್ನು ಬಿಟ್ಟರೆ ದೊಡ್ಡ ದೊಡ್ಡ ಅಂಗಡಿಗಳನ್ನು ಮಾಡಿಕೊಂಡು ವ್ಯಾಪಾರ ಮಾಡಲು ಇಲ್ಲಿಯವರೆಗೆ ಸಾಧ್ಯವಾಗಿಲ್ಲ. ಅದರೂ ಸಣ್ಣಪುಟ್ಟ ವ್ಯಾಪಾರ ಮಾಡಿ ತಮ್ಮ ಮಕ್ಕಳ ಶಿಕ್ಷಣ, ಕುಟುಂಬದ ನಿರ್ವಹಣೆ ಹಾಗೂ ಸಮಾಜದಲ್ಲಿ ಉತ್ತಮ ರೀತಿಯಲ್ಲಿ ಬದುಕುವ ನಿಟ್ಟಿನಲ್ಲಿ ಸಾಮಾಜಿಕ ಬದಲಾವಣೆ ಹೊಂದಲು ದಾಪುಗಾಲು ಪ್ರಯತ್ನಿಸುತ್ತಿರುವುದು.

೬.೨.೧೧.೧ ಅರೆಕಾಲಿಕ ವೃತ್ತಿಗಳು

ಅರೆಕಾಲಿಕ ವೃತ್ತಿಗಳೆಂದರೆ ಕೆಲಸ ಸಿಗದ ದಿನಗಳಲ್ಲಿ ಬೇರೆ ಕೆಲಸವನ್ನು ಮಾಡುವುದೇ ಅರೆಕಾಲಿಕ ವೃತ್ತಿ. ಕೆಲಸ ಸಿಗದ ದಿನಗಳಲ್ಲಿ ಅರೆಕಾಲಿಕ ವೃತ್ತಿಗಳನ್ನು ವರ್ಷವಿಡೀ ಮಾಡಿ ಜೀವನ ನಡೆಸಿದವರಿದ್ದಾರೆ. ಕಾಡಿನಲ್ಲಿ ಸಿಗುವ ಸೀಮೆಜಾಲಿ (ಬಳ್ಳಾರಿ ಜಾಲಿ)ಯ ಕಟ್ಟಿಗೆ ಹಾಗೂ ಮೊಟು ಕಡಿದುಕೊಂಡು ಬಂದು ಮನೆಯಲ್ಲಿ ಸಂಗ್ರಹಿಸುತ್ತಾರೆ. ಮಹಿಳೆಯರು ಕಟ್ಟಿಗೆ ತುಂಡು ಸೀಳಿ ಚಿಕ್ಕ ಚಿಕ್ಕ ಗಂಟು ಅಥವಾ ಕಟ್ಟು ಕಟ್ಟುತ್ತಾರೆ. ಮೊಟುಗಳನ್ನು ಇದ್ದಿಲು ಬಟ್ಟಿ ಹಾಗೂ ಇಟ್ಟಿಗೆ ತಯಾರಿಸಲು ತೆಗೆದುಕೊಂಡು ಹೋಗುತ್ತಾರೆ. ಕಟ್ಟಿಗೆಯನ್ನು ಸಮೀಪದಲ್ಲಿ ಇರುವ ಪಟ್ಟಣಗಳಿಗೆ ಹೋಗಿ ವ್ಯಾಪಾರವನ್ನು ಮಾಡುತ್ತಾರೆ. ಒಂದು ಕಟ್ಟಿಗೆ ೧೦ರಿಂದ ೨೦ ರೂ. ಗಳಿಗೆ ಮಾರುತ್ತಾರೆ. ಕೂಲಿ ಕೆಲಸವಿಲ್ಲದಂತಹ ಸಮಯದಲ್ಲಿ ಇಂತಹ ಕೆಲಸ ಮಾಡುತ್ತಾರೆ. ಈ ಕೆಲಸವನ್ನು ಹೆಚ್ಚಿನಾದಾಗಿ ಬೇಸಿಗೆಯ ಕಾಲದಲ್ಲಿ ಮಾಡುತ್ತಾರೆ. ಮೊಳಕಾಲ್ಮೂರು ತಾಲೂಕಿನ ಕೋನಪುರ, ಸಿದ್ದಾಪುರ, ಹನುಮಪುರ, ರಾಂಪುರ, ಬುಡ್ಡೆನಹಳ್ಳಿ. ಚಳ್ಳಕೆರೆ ತಾಲ್ಲೂಕಿನಲ್ಲಿ ಗೌರಸಮುದ್ರ, ಹಿರೆಹಳ್ಳಿ, ತಳುಕು, ಬಂಡೆ ತಿಮ್ಮಾಪುರ, ಹನುಮಂತನಹಳ್ಳಿ ಇತ್ಯಾದಿ ಗ್ರಾಮಗಳಲ್ಲಿ ಇಂತಹ ವ್ಯಾಪಾರ ಮಾಡುತ್ತಾರೆ. ಈ ಕೆಲಸಕ್ಕೆ ಪ್ರತಿಫಲವಾಗಿ ಸಿಗುವುದು ಹಣ ಬಹಳ ಕಡಿಮೆ. ಇವರು ಉತ್ಪಾದಿಸಿದ ಸರಕುಗಳಿಗೆ ಯೋಗ್ಯವಾದ ಬೆಲೆಯನ್ನು ಕೊಟ್ಟು ಸರಿಯಾದ ರೀತಿಯಲ್ಲಿ ಪ್ರೋತ್ಸಾಹಿಸಬೇಕು. ಇದರಿಂದ ಆರ್ಥಿಕ ಕ್ಷೇತ್ರದಲ್ಲಿ ಸ್ವಲ್ಪಮಟ್ಟಿಗೆ ಬದಲಾವಣೆಯನ್ನು ಹೊಂದಬಹುದು.

- **ಇಟ್ಟಿಗೆ ಬಟ್ಟಿಯಲ್ಲಿ ಕೂಲಿ ಕಾರ್ಮಿಕರಾಗಿ ಕೆಲಸಗಳು**

ಮಾದಿಗ ಸಮುದಾಯವು ದಿನನಿತ್ಯ ಜೀವನ ನಿರ್ವಹಣೆಗಾಗಿ ಕೂಲಿ ಕೆಲಸವಿಲ್ಲದ ಸಂದರ್ಭದಲ್ಲಿ ಇಟ್ಟಿಗೆ ಬಟ್ಟಿಯಲ್ಲಿ ಕೆಲಸವನ್ನು ಮಾಡಲು ಹೋಗುತ್ತಾರೆ. ಇಟ್ಟಿಗೆ ಬಟ್ಟಿಯು ಚಿತ್ರದುರ್ಗ ಜಿಲ್ಲೆಯಲ್ಲಿ ಹೆಚ್ಚಾಗಿದ್ದು ಬೇರೆ ಸಮುದಾಯದವರು ದೊಡ್ಡ ಉದ್ಯಮವನ್ನಾಗಿ ಮಾಡಿಕೊಂಡಿದ್ದಾರೆ. ಇದರಲ್ಲಿ ಮಾದಿಗ ಸಮುದಾಯದವರು ಇಟ್ಟಿಗೆ ಅಚ್ಚು ಹಾಕುವುದು, ಮಣ್ಣು ಮೃದುಗೊಳಿಸುವುದು, ಇಟ್ಟಿಗೆಯನ್ನು ಸುಡುವುದು ಮುಂತಾದ ಕೆಲಸಗಳನ್ನು ನಿರ್ವಹಿಸುತ್ತಾರೆ. ಇಟ್ಟಿಗೆ ಅಚ್ಚು ಹಾಕುವವರು ಬೆಳಗಿನ ಜಾವ ಹೋಗಿ ಮೃದುಗೊಳಿಸಿದ ಮಣ್ಣನ್ನು ಇಟ್ಟಿಗೆ ಹಾಕುತ್ತಾರೆ. ಒಂದು ದಿನಕ್ಕೆ ಒಂದು ಸಾವಿರ ಇಟ್ಟಿಗೆಯನ್ನು ಎತ್ತುತ್ತಾರೆ. ಇವರಿಗೆ ದಿನಕ್ಕೆ ೫೦೦ ರೂ ಗಳನ್ನು ಕೂಲಿ ಕೊಡುತ್ತಾರೆ. ಮಣ್ಣು ಮೃದುಗೊಳಿಸುವರಿಗೆ ೨೫೦ ರೂ. ಗಳನ್ನು, ಇಟ್ಟಿಗೆಯನ್ನು ಒಂದು ಕಡೆ ಶೇಖರಣೆ ಮಾಡುವವರಿಗೆ ಒಂದು ದಿನಕ್ಕೆ ಮಹಿಳೆಯರಿಗೆ ೧೫೦ ರೂ. ಗಳನ್ನು ಕೂಲಿ ಕೊಡುತ್ತಾರೆ.

ಈ ರೀತಿಯಾಗಿ ತಯಾರು ಮಾಡಿದ ಇಟ್ಟಿಗೆಗಳನ್ನು ಒಂದು ಕಡೆ ಸುಡಲು ಸಿದ್ಧಮಾಡಿಕೊಳ್ಳುತ್ತಾರೆ. ಒಂದು ಬಟ್ಟಿಗೆ ೪೫ರಿಂದ ೫೦ ಸಾವಿರದವರಗೆ ಇಟ್ಟಿಗೆಗಳನ್ನು ಹೊಟ್ಟುತ್ತಾರೆ. ಸಿದ್ಧಪಡಿಸಿದ ನಂತರ ಬಟ್ಟಿಗೆ ಕೋಳಿ ಅಥವಾ ಯಾವುದರೂ ಪ್ರಾಣಿಯನ್ನು ಬಲಿ ಕೊಟ್ಟು ಬಟ್ಟಿಗೆ ಬೆಂಕಿಯನ್ನು ಹಚ್ಚುತ್ತಾರೆ. ಈ ರೀತಿಯಾದ ಕೆಲಸವನ್ನು ಬೇರೆ ಸಮುದಾಯದವರೂ ಮಾಡುತ್ತಾರೆ. ಆದರೆ ಬಹುಪಾಲು ಮಾದಿಗ ಸಮುದಾಯದವರೇ ಹೆಚ್ಚು, ಇದರ ಮೂಲಕ ತಮ್ಮ ಆರ್ಥಿಕತೆ ಅಭಿವೃದ್ಧಿಪಡಿಸಲು ಸಹಕಾರಿಯಾಗುತ್ತದೆ ಎಂದು ಈ ಕೆಲಸ ಮಾಡುವ ಯುವಕರು ಹೇಳುತ್ತಾರೆ.

• ಹಮಾಲಿ ಕೆಲಸ

ಮಾದಿಗ ಸಮುದಾಯವು ದೈಹಿಕವಾಗಿ ಬಲಿಷ್ಠರಾಗಿದ್ದಾರೆ. ಭಾರ ಎತ್ತುವ ಕೆಲಸಗಳಲ್ಲಿ ನೈಪುಣ್ಯತೆಯನ್ನು ಹೊಂದಿದ್ದಾರೆ. ಆದ್ದರಿಂದ ಸಮಾಜದಲ್ಲಿ ಇಂತಹ ಕೆಲಸಗಳಿಗೆ ಮಾದಿಗರನ್ನು ಆಯ್ಕೆ ಮಾಡುತ್ತಾರೆ. ಕೈಗಾರಿಕೆ ಅಥವಾ ಮಾರುಕಟ್ಟೆಗಳಲ್ಲಿ, ಗುಮಾಸ್ತ, ವ್ಯವಸ್ಥಾಪಕ ಕೆಲಸವನ್ನು ಕೊಡುವುದಿಲ್ಲ. ಕಸ ಗುಡಿಸುವುದು ಮತ್ತು ಹಮಾಲಿ ಕೆಲಸವನ್ನು ಕೊಡುತ್ತಾರೆ. ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ, ತರಕಾರಿ ಮಾರುಕಟ್ಟೆಯಲ್ಲಿ, ದಲ್ಲಾಳಿ ಅಂಗಡಿಗಳಲ್ಲಿ, ಬಸ್ ಸ್ಟ್ಯಾಂಡ್‌ಗಳಲ್ಲಿ, ರೈಲ್ವೇ ನಿಲ್ದಾಣಗಳಲ್ಲಿ ಹಮಾಲಿ ಕೆಲಸಗಲನ್ನು ಮಾದಿಗರು ಮಾಡುತ್ತಾರೆ. ರೈತರು ತಂದಿರುವ ದವಸ ಧಾನ್ಯಗಳನ್ನು ಸ್ವಚ್ಛಗೊಳಿಸಿ, ತೂಕ ಮಾಡಿ ಚೀಲಗಳಲ್ಲಿ ತುಂಬಿ ಅದನ್ನು ನಿರ್ದಿಷ್ಟ ಸ್ಥಳಗಳಿಗೆ ಸೇರಿಸುವ ಕೆಲಸ ಹಾಗೂ ಲಾರಿಗಳಿಗೆ ಸರಕುಗಳನ್ನು ತುಂಬುವ ಮತ್ತೆ ಇಳಿಸುವ ಕೆಲಸ, ಬಸ್‌ಸ್ಟ್ಯಾಂಡ್‌ಗಳಲ್ಲಿ ಪ್ರಯಾಣಿಕರ ವಸ್ತುಗಳನ್ನು ಬಸ್ಸಿನ ಮೇಲೆ ಹಾಕುವ ಮತ್ತು ಇಳಿಸುವ ಕೆಲಸ, ರಿಕ್ಷಾವನ್ನು ತುಳಿಯುವುದು ಇದರಲ್ಲಿ ಪ್ರಯಾಣಿಕರು ಹಾಗೂ ಅವರ ವಸ್ತುಗಳನ್ನು, ಅಂಗಡಿ ಸಾಮಾನುಗಳು ಮನೆಗೆ ಸಾಗಿಸುವ, ರೈಲ್ವೆ ನಿಲ್ದಾಣದಲ್ಲಿ ಅಥವಾ ರೈಲ್ವೆಯಲ್ಲಿ ಸರಕು ಗಾಡಿಗಳಿಗೆ ಮರಳು, ಕಲ್ಲಿದ್ದಲು, ಗಣಿಮಣ್ಣು, ಸಿಮೇಂಟ್ ತುಂಬುವುದು ಇಂತಹ ಹಮಾಲಿ ಕೆಲಸವನ್ನು ಮಾಡುವವರಿಗೆ ಯಾವುದೇ ರೋಗ ಬಂದರೆ ಅದು ಗುಣವಾಗುವುದಿಲ್ಲ ಎಂದು ಹಮಾಲಿ ಮಾಡುವ ಜನರು ಹೇಳುತ್ತಾರೆ. ಕಾರಣ ಕೇಳಿದ್ದರೆ ಇಂತಹ ಗಟ್ಟಿ ಕೆಲಸ ಮಾಡುವುದರಿಂದ ಮೈಯಲ್ಲಿರುವ ಮಾಂಸಖಂಡಗಳು ಗಟ್ಟಿಯಾಗಿರುತ್ತವೆ. ಆದ್ದರಿಂದ ಕೊಡುವಂತಹ ಔಷಧಿ ದೇಹಕ್ಕೆ ಹೋಗುವುದಿಲ್ಲ ಎಂದು ಹೇಳುತ್ತಾರೆ. ಗಣಿ, ಕಲ್ಲಿದ್ದಲು, ಸೀಮೆಂಟ್ ಕೆಲಸವನ್ನು ಮಾಡುವ ಹಮಾಲಿಗಳು ಅನೇಕ ಜನರು ಸಾವಿಗೀಡಾಗಿದ್ದಾರೆ. ಕಾರಣ ಇವುಗಳ ದೂಳುನಿಂದ ಬರುವ ರೋಗಗಳು ಬೇಗ ವಾಸಿಯಾಗುವುದಿಲ್ಲ ಮತ್ತು ಹಣಕಾಸಿನ ತೊಂದರೆಯಿಂದ ಮರಣವನ್ನು ಹೊಂದುತ್ತಿದ್ದಾರೆ. ಇಂಥವರಿಗೆ ಯಾವುದೇ ಪರಿಹಾರವನ್ನು ನೀಡುವುದಿಲ್ಲ ಹಾಗೂ ಸರ್ಕಾರ ಇಂಥವರನ್ನು ಗುರುತಿಸಿ ವಿಶೇಷವಾದ ಸೌಲಭ್ಯಗಳನ್ನು ನೀಡಬೇಕೆಂಬುದು ಈ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ.

• ಗಾರೆಕೆಲಸ ಅಥವಾ ಮನೆ ಕಟ್ಟುವ ಕೆಲಸ

ಮನುಷ್ಯ ಹಗಲಿರುಳು ದುಡಿದು ಬೆಂಡಾದ ದೇಹಕ್ಕೆ ಶಾಂತಿ ತಾಣವಾಗಿ ಮನೆ ಕಟ್ಟಿಕೊಂಡು ವಾಸಿಸುವುದು ಸಹಜ. ಎಲ್ಲ ಋತುಮಾನಗಳಿಗೆ ರಕ್ಷಣೆ ನೀಡುವ ಮನೆ ಕಟ್ಟಿಕೊಂಡಿರುವುದು ಕೂಡ

ಸಾಮಾನ್ಯವಾಗಿದೆ. ಮಾನವ ತನ್ನ ಜೀವನದ ಆಯುಷ್ಯದ ಅವಧಿಯಲ್ಲಿ ಹೆಚ್ಚಿನ ಸಮಯ ಮನೆಯಲ್ಲಿ ಕಳೆಯುತ್ತಾನೆ. ಹಿಂದೆ ಪ್ರಕೃತಿಯಲ್ಲಿ ಸಿಗುವ ವಸ್ತುಗಳಾದ ಕಾಮುಸಿ (ಉದ್ದನೆಯ ಒಂದು ಜಾತಿಯ ಹುಲ್ಲು), ಬಾದೆಕಡ್ಡಿ, ನೀಲಗಿರಿ ಮರದ ಕಟ್ಟಿಗೆ ಮತ್ತು ಸಣ್ಣ ಬಿದಿಂನಿಂದ ಮಳೆಗೆ ಸೋರದ ರೀತಿಯಲ್ಲಿ ಮನೆಗಳನ್ನು ನಿರ್ಮಾಣ ಮಾಡುವ ಬಹುದೊಡ್ಡ ಕಲೆಯನ್ನು ಹೊಂದಿದ್ದನು. ಮಾದಿಗ ಸಮುದಾಯವು ಕಾಲ ನಂತರ ಗಾರೆ ಮತ್ತು ಕಲ್ಲಿನಿಂದ ಮನೆಗಳನ್ನು ನಿರ್ಮಾಣ ಮಾಡುವ ಕಲೆಯನ್ನು ಮೈಗೂಡಿಸಿಕೊಂಡರು. ಇವತ್ತಿನ ಆಧುನಿಕ ಯುಗದಲ್ಲಿ ಹೊಸ ಹೊಸ ತಂತ್ರಜ್ಞಾನಗಳಿಂದ ಮನೆಗಳನ್ನು ನಿರ್ಮಾಣ ಮಾಡುವುದು ಕಂಡುಬರುತ್ತದೆ. ಈ ಇಂತಹ ಮನೆಗಳನ್ನು ನಿರ್ಮಾಣ ಮಾಡುವಲ್ಲಿ ಮಾದಿಗ ಸಮುದಾಯದ ಪಾತ್ರ ಬಹುಮಖ್ಯವಾಗಿದೆ. ಆದರೆ ಹಿಂದೆ ಈ ವೃತ್ತಿಯೂ ಬೇರೆ ಒಂದು ಸಮುದಾಯಕ್ಕೆ ಮಾತ್ರ ಸೀಮಿತವಾಗಿತ್ತು. ಆದರೆ ಇವತ್ತಿನ ದಿನಮಾನಗಳಲ್ಲಿ ಯಾವ ವೃತ್ತಿಯೂ ಸೀಮಿತವಾಗಿಲ್ಲ ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯವನ್ನು ಪಡೆದುಕೊಂಡಿದ್ದರು. ಮನೆಯ ನೀಲನಕ್ಷೆ ಹಾಕುವುದು, ಮೇಸ್ತ್ರಿಯಾಗಿ, ಪ್ಲಂಬರ್‌ಗಳಾಗಿ, ನಳಗಳ ಜೋಡಣೆ, ಎಲೆಕ್ಟ್ರೀಶಿಯನ್, ಮನೆಗಳಿಗೆ ಟೈಲ್ಸ್ ಹಾಕುವ ಕೆಲಸಗಳನ್ನು ಮಾಡುವ ಪ್ರವೃತ್ತಿಯನ್ನು ಬೆಳೆಸಿಕೊಂಡಿದ್ದಾರೆ. ಕೇವಲ ಗ್ರಾಮೀಣ ಪ್ರದೇಶಗಳಲ್ಲಿಯೇ ಅಲ್ಲದೆ ನಗರ ಪ್ರದೇಶಗಳಲ್ಲಿಯೂ ಹೆಚ್ಚಿನವರು ಈ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಆದ್ದರಿಂದ ಕೃಷಿ ಕೂಲಿ ಮಾಡಿ ಜೀವಿಸುವುದಕ್ಕಿಂತಲೂ ಮನೆ ಕಟ್ಟುವ ಕೆಲಸಗಾರರಾಗಿ ದುಡಿಯುತ್ತಿದ್ದಾರೆ. ಆ ಮೂಲಕ ಆರ್ಥಿಕವಾಗಿ ಪ್ರಬಲರಾಗಬಹುದು ಎನ್ನುವ ಉದ್ದೇಶದಿಂದ ಅನೇಕ ಜನರು ಈ ವೃತ್ತಿಗೆ ಇಳಿದಿದ್ದಾರೆ ಎಂಬ ಆಂಶವನ್ನು ಕ್ಷೇತ್ರಕಾರ್ಯದ ಮೂಲಕ ತಿಳಿಯಲಾಗಿದೆ.

• ಪೌರ ಕಾರ್ಮಿಕ ವೃತ್ತಿಗಳು

ಪೌರಕಾರ್ಮಿಕರು ಎಂದಾಕ್ಷಣ ಈ ದೇಶದಲ್ಲಿ ಜಾತಿಯನ್ನು ಕುರಿತು ಸೂಚಿಸುವುದೇ ಒಂದು ದೊಡ್ಡ ಅಪಾಯದ ಸ್ಥಿತಿಯಿದೆ. ಇಂತಹ ಪೌರ ಕಾರ್ಮಿಕರನ್ನು ಕಂಡರೆ ಸಮಾಜದಲ್ಲಿ ವಾಸಿಸುವವರೆಲ್ಲರೂ ಮುಖ ಸಿಂಡರಿಸಿಕೊಳ್ಳುವಂತಹ ಮನೋಭಾವನೆಗಳನ್ನು ತಾಳುತ್ತಾರೆ. ಈ ಪದದ ಅರ್ಥವನ್ನು ವಿಶ್ಲೇಷಣೆ ಮಾಡಿದಾಗ 'ಪೌರ' ಎಂದರೆ ನಾಗರಿಕ ಅಥವಾ ಜನತೆ ಎಂದಾಗುತ್ತದೆ. ಕಾರ್ಮಿಕ ಎಂದರೆ ಸಾಮಾನ್ಯ ಆರ್ಥದಲ್ಲಿ ದುಡಿಯುವವರು. ಇಂತಹ ಪರಿಭಾಷೆಯನ್ನು ಹೊಂದಿರುವ ಕೆಲಸವನ್ನು ಚಿತ್ರದುರ್ಗ ವ್ಯಾಪ್ತಿಯಲ್ಲಿ ಕೆಲವರು ಈ ಮಾದಿಗ ಸಮುದಾಯದವರಾಗಿದ್ದರೆ, ಇನ್ನೂ ಕೆಲವರು ಮೂಲ ಉದ್ಯೋಗವನ್ನಾಗಿ ಮಾಡಿಕೊಂಡಿದ್ದಾರೆ. ಸಾಮಾನ್ಯವಾಗಿ ಚರ್ಮಗಾರರೇ ಈ ವೃತ್ತಿ ಮಾಡುವುದರಿಂದ ಅವರೆಲ್ಲರನ್ನು ಇಲ್ಲಿ ಪೌರ ಕಾರ್ಮಿಕರನ್ನಾಗಿ ಪರಿಗಣಿಸಿವೆ. ಪೌರ ಕಾರ್ಮಿಕರ ವೃತ್ತಿಯು ಮುಖ್ಯವಾಗಿದೆ ಎಂದು ಹೇಳಬಹುದು.

ಚಿತ್ರದುರ್ಗ ಜಿಲ್ಲೆಯಲ್ಲಿ ೧ ನಗರಸಭೆ, ೪ ಪುರಸಭೆಗಳು ಹಾಗೂ ೧ ಪಟ್ಟಣ ಪಂಚಾಯಿತಿಗಳು ಇವೆ. ಚಿತ್ರದುರ್ಗ ನಗರ ಸಭೆಯು ಒಟ್ಟು ೨೩೬ ನೌಕರರನ್ನು ಒಳಗೊಂಡಿದ್ದು. ಅವುಗಳಲ್ಲಿ ಪರಿಶಿಷ್ಟ

ಜಾತಿಯ ೧೩೨ ಹುದ್ದೆ ಮಾದಿಗರರೇ ಇರುವುದು ಕಂಡುಬರುತ್ತದೆ. ಇವುಗಳಲ್ಲಿ ಕಛೇರಿ ಸಿಬ್ಬಂದಿ ವಿಭಾಗದಲ್ಲಿರುವ ೨೩ ಹುದ್ದೆಗಳು ಪುರುಷರಿಗೂ, ೨ ಮಹಿಳೆಯರಿಗೂ ದೊರಕಿವೆ. ಪೌರಕಾರ್ಮಿಕರ ವಿಭಾಗದಲ್ಲಿ ೭೧ ಪುರುಷರು, ೩೪ ಮಹಿಳೆಯರು ಮಾದಿಗ ಸಮುದಾಯದವರು ಇದ್ದಾರೆ. ಈ ಎಲ್ಲಾ ಹುದ್ದೆಗಳು ೧೯೬೦ರಿಂದ ೨೦೦೦ರ ಅವಧಿಯಲ್ಲಿ ನೇರ ಮತ್ತು ಅನುಕಂಪದ ಮೇಲೆ ನೇಮಕಾತಿಯಾಗಿರುವಂಥವು. ಅನುಕಂಪದ ಆಧಾರದ ಮೇಲೆ ೧೮ ಜನರು ನೇಮಕಾತಿಯಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಹಿಂದೆ ಪೌರಕಾರ್ಮಿಕರು ಮಾದಿಗ ಸಮುದಾಯದವರು ಇದ್ದಾರೆಂಬುದನ್ನು ತಿಳಿಯಬಹುದಾಗಿದೆ.

ಚಳ್ಳಕೆರೆ ಪುರಸಭೆಯಲ್ಲಿ ಒಟ್ಟು ೧೧೩ ಹುದ್ದೆಗಳಿದ್ದು ಪರಿಶಿಷ್ಟ ಜಾತಿಗೆ ೫೭ ಹುದ್ದೆಗಳನ್ನು ನೀಡಲಾಗಿದೆ. ಇವುಗಳಲ್ಲಿ ಕಛೇರಿ ಸಿಬ್ಬಂದಿ ವಿಭಾಗದ ೧೦ ಹುದ್ದೆಗಳಲ್ಲಿ ೧೨ ಹುದ್ದೆಗಳು ಮತ್ತು ಪೌರಕಾರ್ಮಿಕ ವಿಭಾಗದಲ್ಲಿ ೩೮ ಹುದ್ದೆಗಳಿಗೆ ಮಾದಿಗ ಸಮುದಾಯದವರು ನೇಮಕವಾಗಿದ್ದಾರೆ. ಇವರು ಆಯ್ಕೆಯಾದ ಅವಧಿ ೧೯೬೫ರಿಂದ ೨೦೦೧ ಇವುಗಳಲ್ಲಿ ಅನುಕಂಪ ಆಧಾರದ ಮೇಲೆ ೭ ಜನ ಆಯ್ಕೆಯಾಗಿದ್ದಾರೆ.

ಮೊಳಕಾಲ್ಮೂರು ಪಟ್ಟಣ ಪಂಚಾಯಿತಿಯ ೧೪ ಹುದ್ದೆಗಳಲ್ಲಿ ಪರಿಶಿಷ್ಟ ಜಾತಿಗೆ ೯ ಹುದ್ದೆಗಳನ್ನು ನೀಡಲಾಗಿದೆ. ಇದರಲ್ಲಿ ಕಛೇರಿ ಸಿಬ್ಬಂದಿ ವಿಭಾಗದ ೨ ಹುದ್ದೆಗಳಲ್ಲಿ ಮಾದಿಗರು ಒಂದು, ಹೊಲೆಯ ಒಂದು ಪಡೆದರೆ ಉಳಿದ ೭ ಜನ ಪೌರಕಾರ್ಮಿಕರು ಮಾದಿಗ ಸಮುದಾಯದವರೇ ಆಗಿದ್ದಾರೆ. ೧೯೭೨ರಿಂದ ೧೯೭೮ರ ಅವಧಿಯಲ್ಲಿ ಆಯ್ಕೆಯಾದವರು ಇವರು.

ಈ ಮೇಲಿನ ಅಂಕಿ ಅಂಶಗಳು ಕೆಲವು ಸೇವಾ ಸಂಸ್ಥೆಗಳಲ್ಲಿ ಮಾದಿಗರು ಪಡೆದಿರಬಹುದಾದ ಹುದ್ದೆಗಳ ಸಂಖ್ಯೆಯನ್ನು ತಿಳಿಸುತ್ತವೆ. ಉಳಿದ ಪುರಸಭೆಗಳ ಪೌರಕಾರ್ಮಿಕ ಹುದ್ದೆಗಳಲ್ಲಿ ತೊಡಗಿರುವವರು ನೂರಕ್ಕೆ ಶೇಕಡ ೯೯ರಷ್ಟು ಮಾದಿಗರೆ ಆಗಿದ್ದಾರೆ.

ದಿನನಿತ್ಯ ತ್ಯಾಜ್ಯಗಳನ್ನು ವಿಲೇವಾರಿ ಮಾಡುವ ಮೂಲಕ ನಗರದ ಸೌಂದರ್ಯ ಕಾಪಾಡುವ ನಿಟ್ಟಿನಲ್ಲಿ ನಿಸ್ವಾರ್ಥ ಸೇವೆಯಲ್ಲಿ ತೊಡಗುವುದನ್ನು ಕಾಣುತ್ತಿದ್ದೇವೆ. ಗ್ರಾಮೀಣ ಪ್ರದೇಶ, ಪಟ್ಟಣ ಪಂಚಾಯಿತಿ, ನಗರಸಭೆ, ಪುರಸಭೆ, ಮಹಾನಗರ ಪಾಲಿಕೆಗಳಲ್ಲಿನ ಬೀದಿಗಳನ್ನು ಸ್ವಚ್ಛಗೊಳಿಸುವುದು, ಚರಂಡಿ ಸ್ವಚ್ಛಗೊಳಿಸುವುದು ಹಾಗೂ ಸತ್ತ ಪ್ರಾಣಿಗಳನ್ನು ಊರಿನಿಂದ ಹೊರಗೆ ಸಾಗಿಸುವುದು, ಜಾತ್ರೆ ಮತ್ತು ಸಂತೆ ಮುಗಿದ ಮೇಲೆ ಎಲ್ಲವನ್ನು ಸ್ವಚ್ಛಗೊಳಿಸುವುದು ಈ ಕೆಲಸಗಳಲ್ಲಿ ಬೆಳಿಗೆಯಿಂದ ಸಂಜೆಯವರೆಗೆ ನಿರತರಾಗುತ್ತಾರೆ. ಇಂತಹ ಕೆಲಸವನ್ನು ಸಮಾಜದ ಕೊನೆಯ ಪಂಕ್ತಿಯಲ್ಲಿರುವ ಈ ಸಮುದಾದವು ಸಕ್ರಿಯವಾಗಿ ಮಾಡುತ್ತಲೇ ಬಂದಿದ್ದಾರೆ. ಇಂತಹ ವೃತ್ತಿ ಅವಲಂಬಿತರನ್ನು ಮೇಲ್ಜಾತಿಯರಿಗೆ ಒಪ್ಪುವಂತಹ ಇಚ್ಚಾನುಸಾರದ ಅನ್ವರ್ಥ ನಾಮಗಳಿಂದ ಗುರುತಿಸಲ್ಪಡುತ್ತಿದ್ದಾರೆ. "ಜಾತಿಯಲ್ಲಿ ನಾಮಗಳಲ್ಲಿ ಎಷ್ಟೋ ಭಿನ್ನತೆ ಕಾಣಿಸಿಕೊಂಡರೂ ವೃತ್ತಿಯೊಳಗಿನ ಅರ್ಥ ಮಾತ್ರ ಒಂದೇ ಆಗಿದೆ. ಆದರೆ ಈ ವೃತ್ತಿದಾರರಿಂದ ಸೇವೆ ಪಡೆದ ನಾಗರಿಕರು ಮಾತ್ರವೇ ಅವರಿಗೆ ಭಿನ್ನ

ಭೇದಗಳನ್ನು ಎಣಿಸುತ್ತಾರೆ. ಅವರು ಮಾಡುವ ಈ ನಿಕೃಷ್ಟ ಸಾಮಾಜಿಕ ಸೇವೆಗಳಿಂದ ವೃತ್ತಿಸಂಬಂಧಿ ಗೌರವಗಳು ಕಿಂಚಿತ್ತು ಸಮಾಜದಿಂದ ದೊರೆತಿಲ್ಲ."೧೨ ಆದರೆ, ಅಂಬೇಡ್ಕರ್ ತಮ್ಮ ಸಂವಿಧಾನದಲ್ಲಿ ಇವುಗಳೆಲ್ಲವನ್ನು ಶಾಸನದಲ್ಲಿ ಕಿತ್ತಾಕ್ಕಿದ್ದರೂ ಆಚರಣೆಗಳಲ್ಲಿ ಸಂಪ್ರದಾಯಗಳಲ್ಲಿ ಕಿಂಚಿತ್ತು ಹೋಗಿಲ್ಲ. ಜನರು ತಾವು ತಿಂದು ವಿಸರ್ಜಿಸುವ ತ್ಯಾಜ್ಯವನ್ನು ಬೇರೊಬ್ಬರ ಕೈಯಿಂದ ತೆಗೆದು ಹಾಕಿಸುವಾಗ ಅದರ ಬಗ್ಗೆ ಎಲ್ಲಿಲ್ಲದ ಮಾನಸಿಕ ವೇದನೆ ಅನುಭವಿಸುತ್ತಾರೆ. ಆದರೆ ತೆಗೆದು ಹಾಕುವವರು ಅದರ ವಾಸನೆ ಹೇಗೆ ಇದ್ದರೂ ಜೀವನೋಪಾಯಕ್ಕಾಗಿ ಅಗತ್ಯವಾಗಿ ಮಾಡಲೇಬೇಕು. ಯಾವ ನಗರಗಳಲ್ಲಿ ವ್ಯವಸ್ಥಿತ ಒಳ ಚರಂಡಿಗಳಿಲ್ಲವೋ ಅಲ್ಲಿ ಇಂದಿಗೂ ತಲೆ ಮೇಲೆ ಮಲ ಸಾಗಿಸುವ ಕೆಟ್ಟ ಪ್ರವೃತ್ತಿಗಳು ಹೋಗಿಲ್ಲ. ಬೇರೆ ಯಾವುದೇ ಕೆಲಸ ಮಾಡಲು ಸಾಕಷ್ಟು ಜನ ಮುಂದೆ ಬರುತ್ತಾರೆ. ಆದರೆ ಪೌರಕಾರ್ಮಿಕರು ಮಾಡುವ ಕೆಲಸ ಎಲ್ಲರಿಂದ ಮಾಡಲಾಗದು. ಆದ್ದರಿಂದ ಪೌರಕಾರ್ಮಿಕರ ಸೇವಾ ಕಾರ್ಯವನ್ನು ನಾಗರಿಕರು ಗೌರವಿಸಬೇಕು. ಪೌರಕಾರ್ಮಿಕರ ಶ್ರಮದಿಂದ ಮಾತ್ರ ನಗರವಾಸಿಗಳು ಆರೋಗ್ಯದಿಂದ ಇರಲು ಸಾಧ್ಯ ಹೀಗಾಗಿ ಪೌರಕಾರ್ಮಿಕರೇ ನಿಜವಾದ ವೈದ್ಯರು ಎಂದು ಹೇಳಬಹುದು. ಆದರೆ ಬೇರೆಯವರ ಆರೋಗ್ಯವನ್ನು ಚೆನ್ನಾಗಿಡಲು ಇವರ ಪ್ರಾಣವನ್ನು ಒತ್ತಿಡುತ್ತಾರೆ. ದಿನನಿತ್ಯದ ವಿದ್ಯಮಾನದಲ್ಲಿ ಚರಂಡಿ ಸ್ವಚ್ಛಗೊಳಿಸುವಂತಹ ಸಂದರ್ಭದಲ್ಲಿ ಅನೇಕ ಪೌರಕಾರ್ಮಿಕರು ತಮ್ಮ ಪ್ರಾಣವನ್ನು ಕಳೆದುಕೊಂಡಿದ್ದಾರೆ. ಒಂದುವೇಳೆ ಸ್ವಚ್ಛತೆ ಮಾಡದೆ ಇದಂತಹ ವ್ಯವಸ್ಥೆಯನ್ನು ನೋಡಿದರೆ ಯಾರು ಆ ವಾಸನೆಯನ್ನು ಸೇವಿಸುವುದಿಲ್ಲ.

ಇಂತಹ ಸಮಸ್ಯೆಗಳನ್ನು ಗಮನದಲ್ಲಿ ಇಟ್ಟುಕೊಂಡು ಸರ್ಕಾರ ಇವರು ವಾಸ ಮಾಡುವ ಸ್ಥಳಗಳಲ್ಲಿ ಸೂಕ್ತವಾದ ಮನೆಗಳನ್ನು ನಿರ್ಮಾಣ ಮಾಡಿಕೊಡಬೇಕು, ತ್ಯಾಜ್ಯ ವಿಲೇವಾರಿ, ಚರಂಡಿ ಸ್ವಚ್ಛತೆ ವೇಳೆ ತಮ್ಮ ಆರೋಗ್ಯದ ಬಗ್ಗೆ ಜವಾಬ್ದಾರಿ ವಹಿಸುವ ಬಗ್ಗೆ ತರಬೇತಿ ನೀಡಬೇಕು, ಸ್ವಚ್ಛತೆಯಲ್ಲಿ ತೊಡಗುವ ವೇಳೆ ಕೈಗವಸು, ಮಾಸ್ಕ್ ಸೇರಿದಂತೆ ನಗರ ಸಭೆ ನೀಡಿರುವ ಪರಿಕರಗಳನ್ನು ನೀಡಬೇಕು, ಕೆಲವು ಸಂದರ್ಭಗಳಲ್ಲಿ ಅನಾರೋಗ್ಯಕ್ಕೆ ಈಡಾದರೆ ನಿರ್ಲಕ್ಷಿಸದೆ ತಕ್ಷಣ ಅವರಿಗೆ ಸೂಕ್ತ ಚಿಕಿತ್ಸೆ ಕೊಡಿಸಬೇಕು. ತಮ್ಮ ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸ ಕೊಡಿಸುವ ಕಾರ್ಯ ಮಾಡಬೇಕು, ಶ್ರಮಕ್ಕೆ ತಕ್ಕಂತೆ ಪ್ರತಿಫಲವನ್ನು ನೀಡಬೇಕು. ಸರಿಯಾದ ವೇಳೆಗೆ ಸಂಬಳವನ್ನು ಬಿಡುಗಡೆ ಮಾಡಬೇಕು, ಇವರ ಜೀವನ ನಿರ್ವಹಣೆಗಾಗಿ ಸೂಕ್ತ ಸಲಹೆ ಸೂಚನೆಯನ್ನು ನೀಡಬೇಕು. ಇಂತಹ ಸೂಕ್ತವಾದ ಯೋಜನೆಗಳನ್ನು ಹಾಕಿಕೊಂಡು ಅವುಗಳನ್ನು ಕಾಲಕಾಲಕ್ಕೆ ಬದಲಾವಣೆ ಮಾಡುವುದರಿಂದ ಇವರು ಸಾಮಾಜಿಕ ಜೀವನದಲ್ಲಿ ಬದಲಾವಣೆ ಹೊಂದಲು ಸಾಧ್ಯವಾಗುತ್ತದೆ.

೬.೩ ಪಶುಪಾಲನೆ

ಮಾನವನಿಗೂ ಪ್ರಾಣಿಗಳಿಗೂ ಇರುವ ನಿಕಟ ಸಂಬಂಧ ತುಂಬಾ ಹಳೆಯದು. ಆತನು ಮೊದಲ ಹಂತದಲ್ಲಿ ಪಶುಸಂಗೋಪನೆಯಲ್ಲಿ ದನಗಳಿಗೇ ಪ್ರಾಮುಖ್ಯತೆಯನ್ನು ನೀಡುತ್ತಿದ್ದನು. ವ್ಯವಸಾಯದ ಕಲ್ಪನೆ ಆರಂಭವಾದ ಮೇಲೆ ಕೃಷಿಕಾರ್ಯಗಳಿಗೆ ಎತ್ತುಗಳನ್ನು ಬಳಸಿಕೊಳ್ಳಲಾರಂಭಿಸಿದ. ಆಮೇಲೆ

ಎತ್ತುಗಳಿಗೆ 'ದೈವಿಕ' ಸ್ಥಾನವನ್ನು ಕೊಡಲಾಯಿತು. ಈ ಕುರುಹಗಳು ಸಿಂಧೂ ಸಂಸ್ಕೃತಿಯ ಕಾಲದಿಂದಲೂ ಸಿಕ್ಕಿವೆ. ಅವರ ದೇವರು ಪಶುಪತಿ, ಅವರ ಮುದ್ರೆಗಳಲ್ಲಿ 'ವೃಷಭ'ದ ಗುರುತಿರುತ್ತಿತ್ತು. ಪ್ರಾಚೀನ ಗುರುಕುಲಗಳಲ್ಲಿ ಗೋವು ಸಾಕುವಿಕೆ ಕಡ್ಡಾಯವಾಗಿರುತ್ತಿತ್ತು. ಮಹಾರಾಜರ ಸಂಪತ್ತುಗಳಲ್ಲಿ ಗೋ ಸಂಪತ್ತು ಪ್ರಧಾನವಾಗಿರುತ್ತಿತ್ತು. ಮೈಸೂರು ಮಹಾರಾಜರಂತೂ ಕರ್ನಾಟಕದ ದೇಸಿ ತಳಿಗಳ ಅಭಿವೃದ್ಧಿಗೆ ಟೊಂಕಕಟ್ಟಿ ನಿಂತವರಂತೆ ಶ್ರಮಿಸುತ್ತಿದ್ದರು. ಆಗ ಅವರು ಅಮೃತ್ ಮಹಲ್ ತಳಿಗಳ ಅಭಿವೃದ್ಧಿಗಾಗಿ ಕರ್ನಾಟಕದ ಅನೇಕ ಕಡೆ ಸಾವಿರಾರು ಎಕರೆ ಭೂಮಿಗಳನ್ನು ಮೀಸಲಿಟ್ಟಿದ್ದರು. ಅಂತಹ ಪ್ರದೇಶಗಳಲ್ಲಿ ಚಿತ್ರದುರ್ಗದ ಹಿರಿಯೂರು, ಚಳ್ಳಕೆರೆಗಳಲ್ಲಿ ಅಮೃತ ಮಹಲ್ ತಳಿಗಳ ಕೇಂದ್ರ ಸ್ಥಾಪನೆ ಮಾಡಲಾಯಿತು. ಅಮೃತ ಮಹಲ್ ಕಾವಲ್ ಎಂಬ ಹೆಸರಿನಲ್ಲಿ ಪಶು ಸಂಗೋಪನೆಗಾಗಿ ಉಪಯೋಗವಾಗುತ್ತಿದ್ದ ಆ ಹುಲ್ಲುಗಾವಲುಗಳು ಪಳೆಯುಳಿಕೆಯ ರೂಪದಲ್ಲಿ ಹಿಂದೆ ಉಳಿಸಿಕೊಂಡಿದ್ದರು. ಆದರೆ ಇವತ್ತು ಇಡೀ ಅಮೃತ್ ಮಹಲ್ ಕಾವಲುಗಳನ್ನು ಕೆಲವು ಭೂಮಾಲೀಕರು ಒತ್ತುವರಿ ಮಾಡಿಕೊಂಡಿದ್ದಾರೆ. ಉಳಿದ ಭೂಮಿಯನ್ನು ಕೇಂದ್ರ ಅಣುಬಾಂಬು ಕೇಂದ್ರವಾಗಿ ಸ್ಥಾಪನೆ ಮಾಡಿಕೊಂಡು ಅಮೃತ್ ಮಹಲ್ ಹುಲ್ಲುಗಾವಲು ನಾಶವಾಗಿದೆ.

'ಪಶುಪಾಲನೆ' ಎಂಬ ಪದವು ಅಪರಿಮಿತ ಹಾಗೂ ಸಂಕೀರ್ಣವಾದ ಅರ್ಥವನ್ನು ಹೊಂದಿದ್ದು. ವಿಶಾಲವಾಗಿ ಅಥವಾ ಪರಿಮಿತವಾಗಿ ಇದರ ನಿರೂಪಣೆ ಮಾಡಬಹುದು. ವ್ಯಾಪಕ ದೃಷ್ಟಿಕೋನದಲ್ಲಿ ಜಾನುವಾರುಗಳ ಯಾವುದೇ ತಳಿ ಅಥವಾ ಮನುಷ್ಯರು ತಮ್ಮ ಬಳಕೆಗಾಗಿ, ವ್ಯಾಪಾರ ಉದ್ದೇಶಗಳಿಗಾಗಿ ಸಾಕುವ ಪ್ರಾಣಿ ಸಂಖ್ಯೆಗೆ ಸೂಚಿತವಾಗುತ್ತದೆ. ಇವು ಪಳಗಿಸಲ್ಪಡುವ ಪ್ರಾಣಿಗಳು, ಅರೆ ಪಳಗಿಸಲ್ಪಟ್ಟ ಪ್ರಾಣಿಗಳು ಅಥವಾ ಸೆರೆ ಹಿಡಿಯಲಾದ ಕಾಡು ಪ್ರಾಣಿಗಳಿಗೂ ಸಹ ಸೂಚಿತವಾಗುತ್ತದೆ. ಇವುಗಳ ಸಂಖ್ಯೆಯು ಪಳಗಿಸುವಿಕೆ ಪ್ರಕ್ರಿಯೆಯ ಕಾರಣದಿಂದಲೂ ಉಂಟಾಗಿರಬಹುದು. ಕೆಲವರು ಪಶುಪಾಲನೆ ಎಂಬ ಪದವನ್ನು ಕೇವಲ ಪಳಗಿಸಲ್ಪಟ್ಟ ಪ್ರಾಣಿಗಳು ಅಥವಾ ಕೇವಲ ಗುಂಪು ಮಾಂಸವುಳ್ಳ ಪ್ರಾಣಿಗಳಿಗೆ ಸೂಚಿತವಾಗುವಂತೆ ಬಳಸುತ್ತಾರೆ. ಇನ್ನು ಕೆಲವರು ಪಶುಗಳನ್ನು ಸಾಧಾರಣವಾಗಿ ಜೀವನಾಧಾರಕ್ಕೆ ಅಥವಾ ಲಾಭಕ್ಕಾಗಿ ಸಾಕುತ್ತಾರೆ. ಪ್ರಾಣಿಗಳನ್ನು ಸಾಕುವುದು ಆಧುನಿಕ ಕೃಷಿಯ ಒಂದು ಮುಖ್ಯ ಅಂಶವಾಗಿದೆ. ಇದನ್ನು ಬೇಟೆಗಾರ ಸಂಗ್ರಾಹಕ ಜೀವನ ಶೈಲಿಗಳಿಂದ ಕೃಷಿಯೇಡೆಗೆ ಮಾರ್ಪಾಡಾದಂದಿನಿಂದ ಹಲವು ಸಂಸ್ಕೃತಿಗಳಲ್ಲಿ ಬಳಕೆಯಲ್ಲಿದೆ.

ಸಾಮಾಜಿಕ ವ್ಯವಸ್ಥೆಯಲ್ಲಿ ಆರ್ಥಿಕ ಚಟುವಟಿಕೆಗಳಿಂದ ಬಲುದೂರ ಉಳಿದ ಸಮುದಾಯವೆಂದರೆ ಮಾದಿಗ ಸಮುದಾಯವಾಗಿತ್ತು. ಈ ಸಮುದಾಯಕ್ಕೆ ಒಂದು ಹೊತ್ತಿಗೂ ಅನ್ನಕ್ಕೆ ಇಲ್ಲದ ಪರಿಸ್ಥಿತಿಯಲ್ಲಿ, ಇನ್ನೂ ಪಶುಗಳನ್ನು ಸಾಕುವುದು ಕನಸಿನ ಮಾತಾಗಿತ್ತು. ಈ ದೃಷ್ಟಿಯಿಂದ ಗ್ರಹಿಸಿದ್ದರೆ ಸತ್ತ ದನಗಳನ್ನು ಊರಿನಿಂದ ಹೊರ ಹಾಕುವುದು, ಸತ್ತ ದನ ಮಾಂಸವನ್ನು ತಿನ್ನುವುದು ಅನಿವಾರ್ಯವಾಗಿತ್ತು. ಕಾಲ ನಂತರ ಆಧುನಿಕರಣ ಹಾಗೂ ಜಾಗತಿಕರಣದ ಪ್ರಭಾವದಿಂದ ಪಶುಗಳನ್ನು ಸಾಕುವುದನ್ನು ಪ್ರಾರಂಭಿಸುತ್ತಾರೆ. ಇಂದು ಗ್ರಾಮೀಣ ಪ್ರದೇಶದಲ್ಲಿ ಮಾದಿಗ ಸಮುದಾಯಕ್ಕೆ ಪಶುಗಳೇ ಜಿವನಾಡಿ.

ಬಹುಬೇಗ ಪಶುಪಾಲನೆಗೆ ಹೊಂದಿಕೊಂಡಿರುವ ಸಮುದಾಯಗಳಲ್ಲಿ ಮಾದಿಗ ಸಮುದಾಯವು ಒಂದು. ಈ ಸಮುದಾಯವು ಎದುರಿಸುತ್ತಿರುವ ಹಲವಾರು ಸಮಸ್ಯೆಗಳು ಬರಗಾಲ ಮತ್ತು ಮೇವಿನ ಅಲಭ್ಯತೆಯಂತಹ ಕಾರಣಗಳಿಂದ ದನಗಳ ಸಾಕುವಿಕೆ ಕಷ್ಟಕರ ಎಂಬ ಅಭಿಪ್ರಾಯವಿದ್ದರೂ ಇಂದಿಗೂ ಎತ್ತು, ಹಸುಗಳಿಲ್ಲದೆ ಇವರ ಜೀವನವಿಲ್ಲ. ನೆಲ ಉಳಲು ಉಪಯೋಗಿಸುವ ಎತ್ತಿನಂತೆಯೇ ಹಾಲು ನೀಡುವ ಹಸುಗಳೂ ರೈತನಿಗೆ ಜೀವನಾಧಾರವಾಗಿವೆ. ವಿವಾಹ ಸಂದರ್ಭದಲ್ಲಿ ಈ ಸಮುದಾಯದ ಹಿರಿಯರು ತಮ್ಮ ಮಗಳನ್ನು ಹೆಚ್ಚು ಪಶುಗಳನ್ನು ಹೊಂದಿದ ಮನೆಗಳಿಗೆ ಮದುವೆ ಮಾಡಿಕೊಡುವ ವಾಡಿಕೆ ಇಂದಿಗೂ ಬೆಳೆಸಿಕೊಂಡು ಬಂದಿದ್ದಾರೆ. ಇದರಿರಾದ ತಮ್ಮ ಮಗಳು ಸುಖವಾಗಿರುತ್ತಾಳೆ ಎಂಬ ಮಾತು ಹೇಳುತ್ತಾರೆ. ಅದ್ದರಿಂದ ದೇಶ ಬೆನ್ನೆಲಬು ಎಂದು ವರ್ಣಿಸಲ್ಪಡುವ ರೈತನಿಗೆ ನಿಜವಾದ ಬೆನ್ನೆಲುಬು ದನಗಳು ಎಂದು ಹೇಳಬಹುದು.

ಭೂಮಿತಾಯಿಯನ್ನು ನಂಬಿದ ಮಾದಿಗ ಸಮುದಾಯ ಭೂಮಿತಾಯಿ ನಮಗೆ ಎಂದೂ ಮೋಸ ಮಾಡುವುದಿಲ್ಲ ಎಂಬ ಬಲವಾದ ನಂಬಿದೆ. ಆ ನಂಬಿಕೆಯಿಂದ ದನಗಳು ಕೊಡುವ ಅಮೂಲ್ಯ ಸಗಣಿಯ ಗೊಬ್ಬರ ಉತ್ತಮ ಬೆಳೆ ತೆಗೆಯಲು ಆಧಾರ ಹಾಗೂ ಹಿಂದೆ ದನ ಕರುಗಳನ್ನು ಮೇಯಿಸಲು ಗೋಮಾಳಗಳಿರುತ್ತಿದ್ದವು. ಊರಿನ ಎಲ ದನಕರುಗಳನ್ನು ಗೋಮಾಳದಲ್ಲಿ ಮೇಯಿಸಿಕೊಂಡು ಬರುತ್ತಿದ್ದರು. ತಮ್ಮ ಊರ ದನಗಳಿಗೆಗಾಗಿ ಖಾಲಿ ಬಿಟ್ಟ ಅಂತಹ ಗೋಮಾಳದಲ್ಲಿ ಬೆಳೆದ ಹುಲ್ಲನ್ನು ಮೇಯ್ದು ದನಗಳು ದಷ್ಟಪುಷ್ಟವಾಗಿರುತ್ತಿದ್ದವು. ಹಳ್ಳಿಗರಿಗೆ ಗೋ ಸಂಪತ್ತಿನ ಮೇಲೆ ಅದೆಷ್ಟು ಪ್ರೇಮವಿರುತ್ತಿತ್ತೆಂದರೆ ಮೈಯ್ದು ಹಿಂದಿರುಗುವಾಗ ಹಾದಿಯಲ್ಲಿ ಅವುಗಳ ವಿಶ್ರಮಿಸಿಕೊಳ್ಳಲು ತೋಪುಗಳನ್ನು ಬೆಳೆಸುತ್ತಿದ್ದರು. ತಮ್ಮ ಮೈಯನ್ನುಜ್ಜಿಕೊಂಡು ಕಾಡು ಕೀಟಗಳ ಕಡಿತವನ್ನು ನಿವಾರಿಕೊಳ್ಳಲು ಅಲ್ಲೇ ಹಲವಾರು ಕಲ್ಲುಕಂಭಗಳನ್ನು ನೆಟ್ಟಿರುತ್ತಿದ್ದರು. ಸಾಮಾನ್ಯವಾಗಿ ಈ ಸಮುದಾಯದರೆಲ್ಲ ಉದ್ದ ಆಕಾರದ ಕೊಟ್ಟಿಗೆಗಳನ್ನು ನಿರ್ಮಾಣ ಮಾಡಿಕೊಳ್ಳುತ್ತಿದ್ದರು. ಅಲ್ಲೆಲ್ಲಾ ಬೇಕಾದಷ್ಟು ದನಗಳು ಇರುತ್ತಿದ್ದವು ಇವರಲ್ಲಿ ಸ್ವಲ್ಪ ಆರ್ಥಿಕವಾಗಿ ಮುಂದುವರೆದವರಲ್ಲಿ ಅಮೃತ ಮಹಲ್ ತಳಿಯ ದನಗಳಿರುತ್ತಿದ್ದವು. ಉಳಿದವರ ಮನೆಯಲ್ಲಿ ಯಾವ ಕಾಲಕ್ಕೆ ರೋಗ ಬಾಧೆಗೂ ಈಡಾಗದ ಬಲಿಷ್ಠವಾದ 'ನಾಟಿ' ತಳಿಯ ದನಗಳಿರುತ್ತಿದ್ದವು. ಅವುಗಳ ಸಂತತಿ ಮನೆಯಲ್ಲಿ ಬೆಳೆದುಕೊಳ್ಳುತ್ತಿದ್ದರಿಂದ ಕೃಷಿ ಉಪಯೋಗಕ್ಕಾಗಲೀ, ಹಾಲಿಗಾಗಲೀ, ಗೋಬ್ಬರಕ್ಕಾಗಲೀ ಯಾವುದೇ ತೊಂದರೆಯಾಗುತ್ತಿರಲಿಲ್ಲ. ಜನಸಂಖ್ಯೆ ಹೆಚ್ಚಾದಂತೆ ಹೆಚ್ಚು ಪಶುಗಳನ್ನು ಸಾಕುವುದು ಮತ್ತು ಕೋಳಿ, ಕುರಿ, ಮೇಕೆ ಮುಂತಾದ ಪ್ರಾಣಿಗಳನ್ನು ಸಾಕುವ ಕೌಶಲ್ಯವನ್ನು ಬೆಳೆಸಿಕೊಳ್ಳುತ್ತಿದ್ದರು. ಆ ಮೂಲಕ ಕುಟುಂಬದ ಆದಾಯವನ್ನು ಹೆಚ್ಚಿಸಿ ಕೊಳ್ಳುತ್ತಿದ್ದರು. ಉದ್ಯೋಗ ಒದಗಿಸುವುದರ ಜೊತೆಗೆ ಗ್ರಾಮೀಣ ಭಾಗದಲ್ಲಿ ಆರ್ಥಿಕವಾಗಿ ಮಹತ್ತರವಾದ ಬೆಳವಣಿಗೆಗೆ ಇದು ಕಾರಣವಾದವು. ಕೃಷಿ ತ್ಯಾಜ್ಯ ಹಾಗೂ ಉಪ ಉತ್ಪನ್ನಗಳನ್ನು ಪಶು ಸಂಗೋಪನೆಯಲ್ಲಿ ಬಳಸಿ ಪಶು ಉತ್ಪನ್ನಗಳನ್ನು ಪಡೆಯುವ ಮೂಲಕ ಒಳ್ಳೆಯ ಆದಾಯವನ್ನು ಗಳಿಸುವುದರ ಮೂಲಕ ಮಾದಿಗ ಸಮುದಾಯದವರು ಅಭಿವೃದ್ಧಿಯ ಪಥ ತುಳಿದರು.

ಆದರೆ ಜನಸಂಖ್ಯೆ ಹೆಚ್ಚಿದಂತೆ ಸಂಸಾರಗಳು ಒಡೆದು ಹೊಸ ಸಂಸಾರಗಳಾದಂತೆ ಜಮೀನು ಸಹ ಪಾಲಾಗುತ್ತಾ ಹಿಡುವಳಿಯ ಪ್ರಮಾಣ ಕಡಿಮೆಯಾಗಿ ಮೇವಿನ ಅಲಭ್ಯತೆಯಿಂದ ಚಿತ್ರದುರ್ಗದ ಗ್ರಾಮೀಣ ಪ್ರದೇಶದಲ್ಲಿ ಅದರಲ್ಲೂ ಮಾದಿಗ ಸಮುದಾಯದಲ್ಲಿ ದನಗಳ ಪ್ರಮಾಣ ಕಡಿಮೆಯಾಯಿತು. ಈಗಂತೂ ಪ್ರತಿ ವರ್ಷಕ್ಕೆ ದನಗಳನ್ನು ತರುವುದು ಕೃಷಿ ಕೆಲಸ ಮುಗಿದ ಮೇಲೆ ಅವುಗಳನ್ನು ಮಾರುವುದು. ಮುಂದಿನ ವರ್ಷಕ್ಕೆ ಮತ್ತೆ ತರುವುದು ಇಂದಿನ ಅನಿವಾರ್ಯವಾಗಿದೆ. ಹಾಗಾಗಿ ಮಾದಿಗರು ದನಗಳ ಖರೀದಿಗೆ ದನಗಳ ಮಾರುಕಟ್ಟೆ ಹಾಗೂ ದನಗಳ ಜಾತ್ರೆಯನ್ನೇ ಅವಲಂಬಿಸಬೇಕಾಗಿದೆ. ಪ್ರತಿ ವರ್ಷದ ದನಗಳ ಅಗತ್ಯಗಳನ್ನು ಪೂರೈಸುವುದರಲ್ಲಿ ದನಗಳ ಜಾತ್ರೆ ಹಾಗೂ ಮಾರುಕಟ್ಟೆಯ ಪಾಲು ಮಹತ್ವದ್ದಾಗಿದೆ. ದನಗಳ ಆಯ್ಕೆಯಲ್ಲಿ ಮಾದಿಗರು ಪರಂಪರಾಗತ ಮಾರ್ಗಗಳನ್ನು ಇನ್ನೂ ನೆಚ್ಚಿಕೊಂಡಿದ್ದಾರೆ. ಪಶು ವೈದ್ಯರ ಹಂಗಿಲ್ಲದೆ ಪಶುಗಳ ಕಾಲಿನ ಸುಳಿ, ಭುಜದ ಸುಳಿ, ಬಾಲದ ಸುಳಿ, ಕುತ್ತಿಗೆ ಕೆಳಗಿನ ಗಂಗೆದೊದಲು ಇವುಗಳನ್ನು ಪರಿಶೀಲಿಸಿ ದನಗಳಲ್ಲಿ ಜೋಳಿಗೆ, ಶೀಲಕಂಟಕ, ಎಡಮೋಟು ಮೊದಲಾದ ಹೀನಸುಳಿಗಳು ಇಲ್ಲವೆಂದು ಖಚಿತಪಡಿಸಿಕೊಂಡು ಅದೃಷ್ಟ ತರುವ 'ನಾಗಪಾಣಿ' ರಾಶಿ ಸುಳಿಗಳಿರುವ ದನಗಳನ್ನು ಆಯ್ದುಕೊಳ್ಳುತ್ತಾರೆ. ಒಂದುವೇಳೆ ಸರಿಯಾದ ಸುಳಿಯಿರುವ ದನ ಸಿಕ್ಕರೆ ತೆಗೆದುಕೊಂಡು ಬರುತ್ತಾರೆ. ಇಲ್ಲವೆಂದರೆ ಯಾವುದೇ ಕಾರಣಕ್ಕೂ ದನಗಳನ್ನು ತರುವುದಿಲ್ಲ. ಕಾರಣ ಮನೆ ಉದ್ಧಾರವಾಗುವುದಿಲ್ಲ ಮತ್ತು ಬೆಳೆಗಳು ಸರಿಯಾಗಿ ಬರುವುದಿಲ್ಲ ಎನ್ನುವ ಬಲವಾದ ನಂಬಿಕೆ ಮಾದಿಗರಲ್ಲಿದೆ.

ದನಗಳ ಖಚಿತ ವಯಸ್ಸನ್ನು ದನಗಳಿಗೆ ಬಂದಿರುವ ಹಲ್ಲುಗಳ ಆಧಾರದ ಮೇಲೆ ಗುರುತಿಸುತ್ತಾರೆ. ಈ ಕ್ರಮ ಇನ್ನೂ ಚಾಲ್ತಿಯಲ್ಲಿದೆ. ಅಲ್ಲಿನ ವ್ಯವಹಾರವು ಕುತೂಹಲಕರವಾಗಿರುತ್ತದೆ. ಬಾಯಿ ಮಾತಿನ ಬಹಿರಂಗ ಚರ್ಚೆಯ ಮೂಲಕ ವ್ಯಾಪಾರವಿಲ್ಲ, ಕೊಳ್ಳುವವನ ಮತ್ತು ಮಾರುವವನ ಮಧ್ಯೆ ವ್ಯಾಪಾರ ನಡೆಯುವುದಿಲ್ಲ, ಮುಖ್ಯವಾಗಿ ಮಧ್ಯವರ್ತಿಗಳ ಮೂಲಕ ವ್ಯಾಪಾರ ಮಾಡುತ್ತಾರೆ. ದನಗಳನ್ನು ಮಾರುವವನು ಮತ್ತು ಮಧ್ಯವರ್ತಿ ಇಬ್ಬರು ಕೈಗಳನ್ನು ಟವಲ್ ಮುಚ್ಚಿಕೊಂಡು ಬೆರಳುಗಳನ್ನು ಸ್ಪರ್ಶಿಸುವ ಮೂಲಕ ಬೆಲೆ ತೀರ್ಮಾನಿಸುತ್ತಾರೆ. ಉದಾ: ಒಂದು ಬೆರಳನ್ನು ಮುಟ್ಟಿದ್ದಾರೆ ಅದು ಒಂದು ಸಾವಿರ ರೂಪಾಯಿ, ಬೆರಳಿನ ಅರ್ಧಭಾಗ ಮುಟ್ಟಿದ್ದಾರೆ ಐದು ನೂರು ರೂಪಾಯಿ ಹಾಗೇ ಇಡೀ ಐದು ಬೆರಳುಗಳನ್ನ ಮುಟ್ಟಿದರೆ ಐದು ಸಾವಿರ ರೂಪಾಯಿ ಎಂದು ಗುರುತಿಸುತ್ತಾರೆ. ಅದನ್ನು ಮೂರು ಬಾರಿ ಮುಟ್ಟಿಸಿದ್ದರೆ ಹದಿನೈದು ಸಾವಿರ ಎಂದು ತಿಳಿದುಕೊಳ್ಳುತ್ತಾರೆ. ಈ ವ್ಯಾಪಾರಕ್ಕೆ ಇಬ್ಬರು ಒಪ್ಪಿದರೆ ದನಗಳನ್ನು ತೆಗೆದುಕೊಳ್ಳುತ್ತಾರೆ. ಈ ವ್ಯಾಪಾರವನ್ನು ಬಟ್ಟೆ ಮುಚ್ಚುವ ವ್ಯಾಪಾರ ಎಂದು ಕರೆಯುತ್ತಾರೆ.

ಇಲ್ಲಿನ ದನಗಳ ಮಾರಾಟವಾಗುವ ಬೆಲೆಯನ್ನು ಕೇಳಿದರೆ ಅಚ್ಚರಿಯಾಗುತ್ತದೆ. ಈ ದನಗಳಲ್ಲಿ ಅನೇಕ ರೀತಿಯಾದ ತಳಿಗಳು ಕಂಡು ಬರುತ್ತವೆ. ತಳಿಗಳ ಆಧಾರದ ಮೇಲೆ ಬೆಲೆಗಳನ್ನು ನಿಗದಿ ಮಾಡಿರುತ್ತಾರೆ. 'ಮಲೆನಾಡು ಗಿಡ್ಡ ತಳಿಗೆ ಐವತ್ತು ಸಾವಿರಕ್ಕಿಂತ ಕಡಿಮೆ ಇಲ್ಲ. ಇನ್ನು 'ಜಾತಿದನಗಳ' ಬೆಲೆ ಒಂದು ಲಕ್ಷಕ್ಕಿಂತ ಹೆಚ್ಚು ಇರುತ್ತದೆ. 'ನಾಟಿ ದನಗಳು' ನಲವತ್ತು ಸಾವಿರ ರೂಪಾಯಿಗಳಿಗೆ

ಸಿಗುತ್ತವೆ. ಈ ರೀತಿಯಾದ ವ್ಯಾಪಾರ ಮಾಡಿ ತಂದಿರುವಂಥ ದನಗಳನ್ನು ಮೊದಲು ಮನೆಯ ದ್ವಾರಬಾಗಿಲ ಮೂಲಕ ಬಲಗಾಲು ಇಡುವಂತೆ ಒಳಗಡೆ ಕರೆದುಕೊಂಡು ಮುಂದಿನ ಎರಡು, ಕೊಂಬಿಗೆ ಪೂಜೆಯನ್ನು ಮಾಡಿ ಎಲ್ಲರೂ ಕೈಮುಗಿದು ಮನೆಯಿಂದ ಹೊರಗೆ ಕರೆದುಕೊಂಡು ಗೋದಲಿಗೆ ಕಟ್ಟಿಹಾಕುತ್ತಾರೆ. ಈ ಎಲ್ಲ ಪದ್ಧತಿಗಳನ್ನು ನೋಡಿದರೆ ಇವರು ಮೂಲತಃ ಪಶುಪಾಲಕರು ತಿಳಿದುಬರುತ್ತದೆ. ಎನ್ನುವಂತಹ ವಿಚಾರ ಹಾಗೇಯೇ ಮಾದಿಗ ಪಶುಗಳಿಗೆ ದೈವಿಕ ಸ್ವರೂಪವನ್ನು ನೀಡಿದ್ದರು ಎಂದು ತಿಳಿದುಬರುತ್ತದೆ.

ಇಂದು ದನಗಳ ಸಂಖ್ಯೆ ಕಡಿಮೆಯಾಗಿ ಭೂಮಿಯ ಸಾವಯವ ಸತ್ವವನ್ನು ಸ್ಥಿರೀಕರಿಸುವ ಸಗಣಿ ಗೊಬ್ಬರದ ಅಲಭ್ಯತೆಯಿಂದ ಉಂಟಾಗುತ್ತಿರುವ ಭೂಮಿಯ ಬಂಜರುತನದ ಪರಿಣಾಮವನ್ನು ನಾವೀಗಾಗಲೇ ಅನುಭವಿಸುತ್ತಿದ್ದೇವೆ. ಈ ಸಮುದಾಯಗಳು ಸಹ ಆಧುನಿಕ ಯಂತ್ರಗಳಿಗೆ ಮೊರೆಹೋಗಿ ಕೃಷಿಯಲ್ಲಿ ಎತ್ತುಗಳ ಬದಲು ಟ್ರ್ಯಾಕ್ಟರ್, ಟಿಲ್ಲರ್‌ಗಳು ಬಂದಿವೆಯಾದರೂ ಸಣ್ಣ ಮತ್ತು ಮಧ್ಯಮ ವರ್ಗದ ಕೃಷಿಕರಿಗೆ ಮರೀಚಿಕೆಯಾಗಿಯೇ ಉಳಿದಿದೆ. ಸುಮಾರು ಎರಡರಿಂದ ಐದು ಎಕರೆವರೆಗಿನ ಹಿಡುವಳಿ ಇರುವ ಮಾದಿಗರು ಟ್ರ್ಯಾಕ್ಟರ್‌ನ ಹಗಲುಗನಸು ಕಾಣುವ ಅದೃಷ್ಟವಂತನಾಗಿರಲಾರರು. ಆಕಸ್ಮಾತ್ ಅವನ್ನು ಕೊಂಡರೂ ಇಂಧನ, ರಿಪೇರಿ ಬಿಡಿಭಾಗಗಳು ಇದೆಲ್ಲವನ್ನು ಲೆಕ್ಕ ಹಾಕಿದರೆ 'ಅಜ್ಜ ನೂತದ್ದೆಲ್ಲ ಮೊಮ್ಮಗನ ಉಡಿದಾಣ್ಯೆ' ಎಂಬಂತಾಗುತ್ತದೆ. ಅಂತಹವರಿಗೆ ಇಂದಿಗೂ ಎತ್ತುಗಳೇ ಕೃಷಿಯ ಬೆನ್ನೆಲುವಾಗಿವೆ.

೬.೩.೧ ಪರಂಪರಾಗತವಾಗಿ ರೂಢಿಸಿಕೊಂಡು ಬಂದಿರುವ ನಾಟಿ ಔಷಧಿಯ ಜ್ಞಾನ

ಮಾದಿಗ ಸಮುದಾಯದಲ್ಲಿ ಪರಂಪರಾಗತವಾಗಿ ಪಶುಗಳಿಗೆ ನಾಟಿ ಔಷಧಿಯನ್ನು ಕೊಡುವುದನ್ನು ರೂಢಿಸಿಕೊಂಡು ಬಂದಿರುವ ಒಂದು ವಿದ್ಯೆ ಎಂದು ಹೇಳಬಹುದು. ಪ್ರತಿ ಊರಿನಲ್ಲಿ ಪಶುಗಳಿಗೆ ರೋಗ ಬಂದರೆ ನಾಟಿ ಔಷಧಿಯನ್ನು ನೀಡುವ ವೈದ್ಯರಿದ್ದಾರೆ. ಅದರಲ್ಲೂ ಮಾದಿಗ ಸಮುದಾಯದವರು ಪಶುಗಳಿಗೆ ಯಾವುದೇ ರೋಗ ಬಂದರೆ ದೈಹಿಕ ಲಕ್ಷಣಗಳನ್ನು ಆಧಾರವಾಗಿಟ್ಟುಕೊಂಡು ಅವುಗಳಿಗೆ ಇಂಥದೇ ರೋಗ ಬಂದಿದೆ ಎಂದು ಗುರುತಿಸುವ ಬಹುದೊಡ್ಡ ಕಲೆಯನ್ನು ಹೊಂದಿದ್ದಾರೆ. ಔಷಧಿಗೆ ಯಾವುದೇ ರಾಸಾಯನಿಕ ವಸ್ತುಗಳನ್ನು ಬಳಸುವುದಿಲ್ಲ. ಹಳ್ಳಿಗಳ ಸುತ್ತಮುತ್ತಲು ಸಿಗುವ ಗಿಡಮೂಲಿಕೆ ಮತ್ತು ಸಾಂಬಾರ ಪದಾರ್ಥಗಳು, ಗಿಡಗಂಟಿಗಳಿಂದ ಕೆಲವು ಔಷಧಿ ಸಸ್ಯಗಳನ್ನು ತಮ್ಮ ಮನೆಯ ಸುತ್ತಲು ಬೆಳೆಯುತ್ತಾರೆ. ಇವುಗಳನ್ನು ನೀಡುವವರು ಸಾವಿರಾರು ಮೂಕ ಪ್ರಾಣಿಗಳ ರೋಗ ವಾಸಿ ಮಾಡಿದ್ದಾರೆ. ದನಗಳ ಮುರಿದ ಮೂಳೆಗಳನ್ನು ಜೋಡಿಸಿ ಸರಿಪಡಿಸಿದ್ದಾರೆ. ತಲೆಮಾರಿನಿಂದ ತಲೆಮಾರಿಗೆ ಹರಿದು ಬಂದ ಇಂತಹ ಬಹುಶಕ್ತಿಶಾಲಿಯಾದ ನಾಟಿ ಔಷಧಿ ಒಂದು ಪಾರಂಪರಿಕ ಜ್ಞಾನ ಎಂದು ಹೇಳಬಹುದು.

ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಹಳ್ಳಿಯ ಜನ ಕರೆದಲ್ಲಿ ಹೋಗಿ ನಾಟಿ ಔಷಧಿ ಕೊಡುತ್ತಾರೆ. ಗೊತ್ತಿರುವ ಔಷಧಿ ಮದ್ದುನೀಡಿ ಪ್ರಾಣಿಗಳನ್ನು ಉಳಿಸುವ ಪುಣ್ಯಕಾರ್ಯದಲ್ಲಿ ತೊಡಗಿಕೊಂಡಿದ್ದಾರೆ.

ಇವರು ಸಾಮಾನ್ಯವಾಗಿ ದನಕರುಗಳಿಗೆ ದೊಮ್ಮೆ ರೋಗ, ಕಟಪಿಂಜರಿ, ಸೇಳವು, ಕಾಲುಬಾಯಿ, ಜ್ವರ, ಮಂಡಿನೋವು, ಗಾಯ, ಕರುಗಳಿಗೆ ಜಂತು ನಿವಾರಣೆ, ಸೊರಗಿದರೆ, ಬೇಧಿ, ಸಗಣಿ ಗಟ್ಟಿಯಾಗಿದ್ದರೆ, ಗರ್ಭ ನಿಲ್ಲಲು, ಕೆಚ್ಚಲು ಬಾವು, ಹಾಲು ಹೆಚ್ಚಾಗಲು ಇನ್ನೂ ಮುಂತಾದ ರೋಗಳಿಗೆ ನಾಟಿ ಔಷಧಿಯಿಂದ ನಿಯಂತ್ರಣ ಮಾಡುತ್ತಾರೆ. ಮಾದಿಗ ಸಮುದಾಯದವರು ನೀಡುವ ನಾಟಿ ಔಷಧಿಗಳನ್ನು ಗಮನಿಸುವುದಾದರೆ.

- **ಕಾಲುಬಾಯಿ ರೋಗ**

ಚಳಿಗಾಲದಲ್ಲಿ ಬರುವ ರೋಗ ಇದಾಗಿದ್ದು, ಕಾಲುಗಳ ಗೊರಸುಗಳ ಸಂಧಿನಲ್ಲಿ ಗಾಯವಾದಂತಾಗಿ ಹುಣ್ಣಾಗುವುದು. ಜ್ವರ ಬರುವುದು. ಇದರಿಂದ ದನಗಳು ಮೇಯಿವುದಿಲ್ಲ ಹಾಗೂ ಕುಂಟುತ್ತವೆ. ಇದಕ್ಕೆ ಪರಿಹಾರಕ್ಕೆ ಸ್ಥಳೀಯವಾಗಿ ಸಿಗುವ ಕರಿಬಾಳೆ ಹಣ್ಣು ಅಥವಾ ಕೊತ್ತಂಬರಿ ಸೊಪ್ಪನ್ನು ಶೇಂಗಾ ಎಣ್ಣೆಯಲ್ಲಿ ಅದ್ದಿ ಕೊಡಲಗುವುದು ಮತ್ತು ರಾಗಿ ಗಂಜಿ ಕುಡಿಸಬೇಕು. ಇದರಿಂದ ವಾಸಿಯಾಗಿಲ್ಲವೆಂದರೆ ಮೆಂತೆಸೊಪ್ಪು, ತಾಳೆಮರದ ತೊಗಟೆಯನ್ನು ಪುಡಿ ಮಾಡಿ ತಿನ್ನಿಸಬೇಕು, ಇದ್ದರಿಂದ ಕಾಲುಬಾಯಿ ರೋಗ ವಾಸಿಯಾಗುತ್ತದೆ ಎಂದು ಹಿರಿಯರಾದ ದುರುಗಪ್ಪ ನೇರ್ಲಹಳ್ಳಿ, ಹನುಮಂತಪ್ಪ ಮರ್ಲಹಳ್ಳಿ ಇವರು ಹೇಳುತ್ತಾರೆ.

- **ದನಗಳ ಮಂಡಿನೋವು**

ಕೆಲಬಾರಿ ದನಗಳಿಗೆ ಮಂಡಿ ನೋವು ಉಂಟಾಗಿ ನೆಲಕ್ಕೆ ಕಾಲು ಊರುವುದಿಲ್ಲ, ಕುಂಟುತ್ತವೆ. ಅದಕ್ಕೆ ಎರಡು ಹಿಡಿಯಷ್ಟು ಉಪ್ಪನ್ನು ಬಟ್ಟೆಯಲ್ಲಿ ಗಂಟುಕಟ್ಟಿ ಬೆಂಕಿಯಲ್ಲಿ ಕಾಯಿಸಿ ಮಂಡಿಯ ಭಾಗಕ್ಕೆ ಹಿಡಿಯಬೇಕು. ಶಾಖ ಕೊಡಬೇಕು ಅಥವಾ ಶಿವಣೆ ಎಲೆಯ ತೊಗಟೆ ತೆಗೆದು ಶುಂಠಿ ಓಮ ಸೇರಿಸಿ ಜಜ್ಜಿ ಕುಡಿಸುವುದರಿಂದ ದನಗಳ ಮಂಡಿನೋವು ನಿವಾರಣೆಯಾಗುತ್ತದೆ.

- **ದನಗಳಿಗೆ ಜ್ವರ ಬಂದರೆ**

ದನಗಳಿಗೆ ಜ್ವರ ಬಂದರೆ ಮೇವು ತಿನ್ನುವುದಿಲ್ಲ ಹಾಗೂ ಮೈಯೆಲ್ಲ ಬಿಸಿಯಾಗಿರುತ್ತದೆ. ನಾಟಿವೈದ್ಯ ದನದ ಕಿವಿಯನ್ನು ಮತ್ತು ಸಗಣೆಯಿಂದ ಗುರುತಿಸಿ ಅದಕ್ಕೆ ಸೂಕ್ತ ಔಷಧಿಯಾದ ಸ್ವಲ್ಪ ಬಿಸಿ ನೀರಿಗೆ ಉಪ್ಪು, ಕಾಳುಮೆಣಸು, ಜೀರಿಗೆ, ಅರಿಶಿಣ ಸೇರಿಸಿ ಕುಡಿಸಬೇಕು ಹಾಗೂ ಮೂರು-ನಾಲ್ಕು ತುಂಡು ಒಣ ಅರಿಶಿಣ ಕೊಂಬು, ಒಂದು ಚಮಚ ಅಡುಗೆ ಸೋಡಾ, ಐದು ಚಮಚ ಓಂಕಾಳು, ಒಂದು ಈರುಳ್ಳಿ ಸೇರಿಸಿ ತಿನ್ನಿಸಬೇಕು ಮತ್ತು ಒಣ ಶುಂಠಿಯನ್ನು ಪುಡಿ ಮಾಡಿ ಉಂಡೆ ಮಾಡಿ ದಿನಕ್ಕೆ ಒಂದರಂತೆ ಮೂರು ದಿನ ನೀಡಬೇಕು. ಹೀಗೆ ಮಾಡಿದರೆ ಜ್ವರ ನಿಯಂತ್ರಣವಾಗುತ್ತದೆ.

- **ದನಗಳಿಗೆ ಹುಳುವಾದ ಗಾಯಕ್ಕೆ**

ದನಗಳು ಹಲವು ಬಾರಿ ಸಣ್ಣಪುಟ್ಟ ಗಾಯ ಮಾಡಿಕೊಳ್ಳುತ್ತವೆ. ಅವುಗಳ ಕಾಲುಗಳಲ್ಲಿ ಕೆಸರು ಅಥವಾ ಮಣ್ಣು ತುಂಬಿಕೊಂಡು ಹುಳುಗಳಾಗುತ್ತವೆ. ಒಂದು ಹಿಡಿ ಸೀತಾಫಲದ ಎಲೆಯನ್ನು

ಅರೆದು ಗಾಯಕ್ಕೆ ಹಚ್ಚಬೇಕು ಅಥವಾ ತಂಬಾಕು ಮತ್ತು ಸುಣ್ಣದ ನೀರನ್ನು ಸೇರಿಸಿ ಹಚ್ಚಬೇಕು. ಈ ರೀತಿಯಾಗಿ ಮೂರು ದಿನಗಳ ಕಾಲ ಮಾಡಿದರೆ ಹುಳುಗಳಿಂದಾದ ಗಾಯ ನಿವಾರಣೆಯಾಗುತ್ತದೆ.

• ದನದ ಕರುಗಳ ಜಂತು ನಿವಾರಣೆಗೆ

ದನದ ಕರು ಮೂರ್ನಾಲ್ಕು ತಿಂಗಳಾಗುತ್ತಿದ್ದಂತೆ ಜಂತು ಹುಳು ಕಾಣಿಸಿಕೊಂಡು ಸರಿಯಾದ ಮೇವು ತಿನ್ನುವುದಿಲ್ಲ. ಅದಕ್ಕೆ ಹಾಗಲಕಾಯಿ ರಸ, ಕಹಿ ಸೌತೆಕಾಯಿ ರಸ ಕುಡಿಸಬೇಕು ಅಥವಾ ಮತಿಸೊಪ್ಪಿನ ಎಲೆ ಕುಡಿಯನ್ನು ತಿನ್ನಿಸಬಹುದು. ಇದಕ್ಕೆ ನಿಯಂತ್ರಣವಾಗಿಲ್ಲವೆಂದರೆ ಪಪ್ಪಾಯಿ ಬೀಜ ತಿನ್ನಿಸುವುದರಿಂದ ಹೊಟ್ಟೆಯಲ್ಲಿ ಇರುವ ಜಂತು ಹುಳುಗಳು ನಾಶವಾಗುತ್ತವೆ ಎಂದು ಹೇಳುತ್ತಾರೆ.

• ದನಗಳು ಸೊರಗಿದರೆ

ದನಗಳ ದೇಹದಲ್ಲಿ ನೀರಿನಾಂಶ ಕಡಿಮೆಯಾಗಿದ್ದರೆ ದನಗಳು ಸೊರಗಿದಂತೆ ಕಾಣುತ್ತವೆ. ನೋಡಲು ಸಣ್ಣದಾಗಿ ಕಾಣುತ್ತವೆ. ಇದಕ್ಕೆ ಹಲಸಿನ ಚಿಗುರೆಲೆ ಬೇಯಿಸಿ ಕೊಡಬಹುದು. ನಂತರ ಹುರುಳಿ ಮೊಳಕೆಯನ್ನು ಪ್ರತಿದಿನ ಅರ್ಧ ಕೆಜಿಯಷ್ಟು ಇಪ್ಪತ್ತು ದಿನ ಕೊಡಬೇಕು. ಇದರಿಂದ ದನಗಳು ಚೇತರಿಸಿಕೊಳ್ಳುತ್ತವೆ.

• ದನಗಳಿಗೆ ಕೆಮ್ಮು

ಮನುಷ್ಯರಿಗಾದಂತೆ ದನಗಳಗೂ ಹಲವು ಬಾರಿ ಕೆಮ್ಮು ಆಗುತ್ತದೆ. ಕೆಮ್ಮು ಆಗಿರುವ ದನಗಳು ಸರಿಯಾಗಿ ಮೇವು ಮೇಯುವುದಿಲ್ಲ ಮತ್ತು ಸರಿಯಾಗಿ ನೆಮರು (ಹಲ್ಲು ಜಗಿಯುವುದಿಲ್ಲ) ಹಾಕುವುದಿಲ್ಲ. ಆದ್ದರಿಂದ ಅದಕ್ಕೆ ಬಿಳಿ ಈರುಳ್ಳಿಯನ್ನು ಬೆಲ್ಲದಲ್ಲಿ ಅದ್ದಿ ಮೂರು ದಿನದವರೆಗೆ ತಿನ್ನಿಸುವುದು ಹಾಗೂ ಈರುಳ್ಳಿ, ಶುಂಠಿ, ಜೀರಿಗೆಯನ್ನು ತಿನ್ನಿಸುವುದು. ಈ ರೀತಿಯಾಗಿ ಬೆಳಿಗ್ಗೆ ಮತ್ತು ರಾತ್ರಿ ಒಂದು ಬಾರಿಯಂತೆ ಮೂರು ದಿನ ಮಾಡಿದರೆ ಮೂರು ದಿನಗಳಿಗೆ ರೋಗ ನಿವಾರಣೆಯಾಗುತ್ತದೆ.

• ದನಗಳಿಗೆ ಬೇಧಿ

ಆಹಾರ ಜೀರ್ಣವಾಗದೇ ವಿಷಾಹಾರ ಸೇವನೆ ಮಾಡಿದರೆ ಜಾನುವಾರುಗಳಲ್ಲಿ ಹಲವು ಬಾರಿ ಬೇಧಿಯಾಗುತ್ತದೆ. ಅದಕ್ಕೆ ನೇರಳೆ ಚೆಕ್ಕೆಯನ್ನು ಕುಟ್ಟಿ ಕಷಾಯ ಮಾಡಿ ಕುಡಿಸಬೇಕು. ಹೀಗೆ ಮೂರು ದಿನ ಮಾಡಿದರೆ ಈ ರೋಗ ವಾಸಿಯಾಗುತ್ತದೆ.

• ದನಗಳಿಗೆ ಸೆಳೆ ಅಥವಾ ಸೇಳುವು

ದನಗಳು ಮಣ್ಣುಮಿಶ್ರಿತ ನೀರು, ವಿಷಕಾರಿ ನೀರು ಅಥವಾ ದಿನಗಟ್ಟಲೇ ನೀರು ಕುಡಿಯುವುದಿಲ್ಲವೆಂದರೆ ದನಗಳು ಸೊರಗಿದ ರೀತಿಯಲ್ಲಿ ಇರುತ್ತವೆ. ಅದಕ್ಕೆ ದನದ ಮೂಗಿನ ಮೇಲೆ ದೊಡ್ಡ ನರಕ್ಕೆ ಕಬ್ಬಿಣದ ಉಳಿಯಿಂದ ಹೊಡೆಯುತ್ತಾರೆ. ಆಗ ಕೆಟ್ಟ ರಕ್ತ ಹೊರ ಹೋಗುವವರೆಗೆ ಬಿಡುತ್ತಾರೆ.

ಇದನ್ನು ಸಳೆ ಬಡಿಯುವುದು ಅಥವಾ ಸೇಳುವು ಎಂದು ಕರೆಯುತ್ತಾರೆ. ನಂತರ ಬೇವಿನ ಚಕ್ಕೆ, ಕಲ್ಲು ಸಕ್ಕರೆ, ಒಲೆಯಲ್ಲಿ ಕಾಸಿದ ಕಬ್ಬಿಣದ ಸಲಾಕೆಯಿಂದ ನೀರಿನಲ್ಲಿ ಹಾಕಿ ಕಸಾಯಿ ಮಾಡಿ ಗೊಟ್ಟದಲ್ಲಿ ದನಕ್ಕೆ ಕುಡಿಸುತ್ತಾರೆ. ಈ ರೀತಿಯಾಗಿ ಮಾಡುವುದರಿಂದ ಸಂಜೆಯ ಒಳಗೆ ದನಗಳು ಚೇತರಿಸಿಕೊಳ್ಳುತ್ತವೆ.

• ಸಗಣಿ ಗಟ್ಟಿಯಾಗಿದ್ದರೆ

ದನಗಳನ್ನು ಬೆಳಿಗ್ಗೆಯಿಂದ ಸಂಜೆಯವರಗೆ ಮೇಯಿಸುತ್ತಾರೆ. ಕೆಲವು ಸಂದರ್ಭದಲ್ಲಿ ನೀರೇ ಕುಡಿಸುವುದಿಲ್ಲ. ಆದ್ದರಿಂದ ಹುಲ್ಲು ಜೀರ್ಣಗೊಳ್ಳದೆ ಸೆಗಣಿ ಗಟ್ಟಿಯಾಗಿ ಹೊರಕ್ಕೆ ಬಾರದ ವೇಳೆಯಲ್ಲಿ ಅದಕ್ಕೆ ಓಮ, ಜೀರಿಗೆ ಕುಟ್ಟಿ ಪುಡಿ ಮಾಡಿ ತಿನ್ನಿಸುವುದು ಹಾಗೂ ಕಾಲು ಲೀಟರ್‌ನಷ್ಟು ಎಣ್ಣೆಯನ್ನು (ಶೇಂಗಾ ಅಥವಾ ತೆಂಗಿನ ಎಣ್ಣೆ) ಒಂದೂವರೆ ಲೀಟರ್ ಬಿಸಿ ನೀರಿಗೆ ಸೇರಿಸಿ ಕುಡಿಸಬೇಕು.ಆಗ ಸೆಗಣಿ ಸರಾಗವಾಗಿ ಬರುತ್ತದೆ.

• ಹಸು ಬೆದೆಗೆ ಬಾರದಿದ್ದರೆ

ಜನಪದರ ನಂಬಿಕೆ ಪ್ರಕಾರ ವಯಸ್ಸಿಗೆ ಬಂದಿರುವ ದನಗಳು ಬೆದೆಗೆ ಬರಬೇಕು. ಒಂದುವೇಳೆ ಬಂದಿಲ್ಲವೆಂದರೆ ಅದಕ್ಕೆ ಸೂಕ್ತವಾದ ನಾಟಿ ಔಷಧಿಯನ್ನು ನೀಡುತ್ತಾರೆ. ಕಹಿ ಸೌತೆಕಾಯಿಯನ್ನು ಏಳು ದಿನಗಳ ಕಾಲ ತಿನ್ನಲು ನೀಡಬೇಕು, ಚದರಂಗಿ (ಲಂಟಾನ) ಬೇರನ್ನು ಮಜ್ಜಿಗೆಯಲ್ಲಿ ತೇಯ್ದು ಕುಡಿಸುವುದು ಅಥವಾ ಬೇವಿನ ಸೊಪ್ಪ (ಒಗ್ಗರಣೆ ಸೊಪ್ಪು)ನ್ನು ತಿನ್ನಲು ನೀಡಬೇಕು. ಮರುದಿನವೇ ಬೆದೆಗೆ ಬರುತ್ತದೆ.

• ಗರ್ಭ ನಿಲ್ಲಲು

ಹಸುಗಳು ಬೆದೆಗೆ ಬಂದು ಗರ್ಭಧಾರಣೆ ಮಾಡಿಸಿದರೂ ಹಲವು ಬಾರಿ ಗರ್ಭ ನಿಲ್ಲುವುದಿಲ್ಲ. ಅಂತಹ ಸಮಯದಲ್ಲಿ ಕೆಲ ದಿನಗಳವರೆಗೆ ಪ್ರತಿದಿನ ಒಂದು ಹಿಡಿಯಷ್ಟು ಮದರಂಗಿ (ಮೆಹಂದಿ ತಯಾರಿಸುವ ಸೊಪ್ಪು) ಸೊಪ್ಪನ್ನು ತಿನ್ನಲು ನೀಡಬೇಕು. ಹಸು ಒಂದು ವಾರ ನಂತರ ಗರ್ಭ ಕಟ್ಟಿರುವ ಸೂಚನೆಗಳು ಕಂಡುಬರುತ್ತವೆ.

• ದನಗಳಿಗೆ ಕೆಚ್ಚಲು ಬಾವು

ಹಸುಗಳಿಗೆ ಕೆಚ್ಚಲು ಊದಿಕೊಂಡು ದೊಡ್ಡದಾಗುತ್ತದೆ. ಒಂದೊಂದು ವೇಳೆ ಹಸುವಿನ ಕರು ಸಾವಿ ಗೀಡಾದರೆ ಕೆಲವು ಹಸುಗಳು ಕೆಚ್ಚಲುನ್ನು ಮುಟ್ಟಿಸಿಕೊಳ್ಳುವುದಿಲ್ಲ. ಅಂತಹ ಸಮಯದಲ್ಲಿ ಕೆಚ್ಚಲು ಬಾವು ಬಂದಿರುತ್ತದೆ. ಅದಕ್ಕೆ ಹಸಿ ಅರಿಶಿಣದ ಕೊಂಬನ್ನು, ಲಿಂಬೆ ಹಣ್ಣಿನ ಹುಳಿಯಲ್ಲಿ ತೇಯ್ದು ಹಚ್ಚಬೇಕು ಅಥವಾ ಉಪ್ಪಿನಲ್ಲಿ ನೆನೆಹಾಕಿದ ಮಾವಿನಕಾಯಿ (ಕುಚುಗಾಯಿ)ಯನ್ನು ರುಬ್ಬಿ ಹಚ್ಚಬೇಕು ಹಾಗೂ ತೊಂಡೆ ಬಳ್ಳಿಯ ರಸವನ್ನು ತೇಯ್ದು ಹಚ್ಚಬಹುದು. ಇದಕ್ಕೆ ನಿವಾರಣೆಯಾಗಿಲ್ಲವೆಂದರೆ ಮೊಲೆಗಳಲ್ಲಿ ರಕ್ತ ಬರುತ್ತಿದ್ದರೆ ಕರಿ ಜೀರಿಗೆ, ಮುಟ್ಟಿದರೆ ಮುನಿ ಸೊಪ್ಪನ್ನು

ರುಬ್ಬಿ ತಯಾರಿಸಿದ ಒಂದು ಲೀಟರ್‌ನಷ್ಟು ರಸ ಕುಡಿಸಬೇಕು ಮತ್ತು ಲೋಳೆರಸವನ್ನು ಸ್ವಲ್ಪ ಸುಣ್ಣದಲ್ಲಿ ತೇಯ್ದು ಕೆಚ್ಚಲಿಗೆ ಹಚ್ಚಬೇಕು ಎರಡು ಅಥವಾ ಮೂರು ದಿನಕ್ಕೆ ವಾಸಿಯಾಗುತ್ತದೆ.

• ಹಾಲು ಹೆಚ್ಚಾಗಲು

ಕೆಲವೊಂದು ಹಸುಗಳಿಗೆ ಬೇಗ ಹಾಲು ಬರುವುದಿಲ್ಲ ಹಾಗೂ ಇನ್ನೂ ಕೆಲವುಗಳಿಗೆ ಹಾಲೇ ಬರುವುದಿಲ್ಲ ಅಂತಹ ಸಮಯದಲ್ಲಿ ಕಾಡು ಮಲ್ಲಿಗೆ ಸೊಪ್ಪು ಪಶು ಆಹಾರಕ್ಕೆ ಹಾಕಿ ನೀಡಬೇಕು ಹಾಗೂ ಪ್ರತಿದಿನ ಒಂದು ಹಿಡಿಯಷ್ಟು ನೆನೆಸಿದ ನವಧಾನ್ಯವನ್ನು ನಲವತ್ತು ದಿನಗಳವರೆಗೆ ನೀಡುವುದು, ಶತಾವರಿ ಗಡ್ಡೆಯನ್ನು ನೀಡಬೇಕು ಅಥವಾ ನೆಲಕಣಗಲನ್ನು ಮೇವಿನ ಜತೆ ನೀಡಬೇಕು. ಎರಡು ದಿನದಲ್ಲಿ ಎಲ್ಲಾ ಹಸುಗಳು ಕೊಡುವ ರೀತಿಯಲ್ಲಿ ಹಾಲು ಕೊಡುತ್ತದೆ ಎಂದು ಮಾದಿಗ ಸಮುದಾಯದ ಹಿರಿಯರಾದ ನಾಗರಾಜ ಸಿದ್ದಯನಕೋಟೆ, ದುರುಗಪ್ಪ ನೇರ್ಲಹಳ್ಳಿ, ಕೆಂಚಪ್ಪ ತಾಳ್ಯ ಇನ್ನೂ ಮುಂತಾದ ಸಂಪನ್ಮೂಲ ವ್ಯಕ್ತಿಗಳು ಬಗ್ಗೆ ಮಾಹಿತಿಯನ್ನು ನೀಡಿದ್ದಾರೆ.

ನಾಟಿ ಔಷಧಿಯ ಪದ್ಧತಿ ವ್ಯವಸ್ಥಿತವಾಗಿ ರೂಪುಗೊಂಡಿಲ್ಲ. ಪುರಾತನ ನಾಟಿ ಔಷಧಿಗಳ ದಾಖಲೀಕರಣ ನಡೆದ ಪ್ರಮಾಣ ಬಹಳ ಕಡಿಮೆಯಾಗಿದೆ. ಆದ್ದರಿಂದ ಮಾದಿಗ ಸಮುದಾಯದಲ್ಲಿ ಸಹ ನಾಟಿ ಔಷಧಿಗಳ ಕುರಿತು ಯುವ ಜನರಲ್ಲಿ ಜ್ಞಾನ ಕಡಿಮೆಯಾಗಿದೆ. ರಾಸಾಯನಿಕಗಳನ್ನೊಳಗೊಂಡ ಔಷಧಿ ಬಳಕೆ ಅನಿವಾರ್ಯವಾಗಿದೆ. ಆ ಔಷಧಿ ಪದ್ಧತಿ ಸಂಪೂರ್ಣ ಕೆಟ್ಟದ್ದಲ್ಲ. ಆದರೆ ಒಂದು ರೋಗಕ್ಕೆ ಔಷಧಿ ನೀಡಿದರೆ ಅಡ್ಡಪರಿಣಾಮ ಉಂಟಾಗುವ ಸಾಧ್ಯತೆ ಹೆಚ್ಚು. ಆದ್ದರಿಂದ ಕರ್ನಾಟಕ ಪಶು ವೈದ್ಯಕೀಯ ಇಲಾಖೆಯಿಂದಲೇ "ಸೇವೆಗಳ ವಿಸ್ತರಣೆಯಾಗಿ ಪಶುಗಳ ಆರೋಗ್ಯದಲ್ಲಿ ಉತ್ತಮವಾದ ಹಾಗೂ ಗಮನಾರ್ಹವಾದ ಬೆಳವಣಿಯನ್ನು ಕಾಣಬಹುದು. ರಾಜ್ಯದಲ್ಲಿ ಒಟ್ಟು ೩.೬೩೮ ಪಶು ವೈದ್ಯಕೀಯ ಸಂಸ್ಥೆಗಳ ಜಾಲವು ಹರಡಿವೆ. ಇದರಲ್ಲಿ ೨೪೪ ಪಶು ವೈದ್ಯ ಆಸ್ಪತ್ರೆಗಳು, ೮೦೩ ಪಶು ವೈದ್ಯ ಚಿಕಿತ್ಸಾಲಯಗಳು, ೨೦೧೮ ಪ್ರಾಥಮಿಕ ಪಶು ವೈದ್ಯಕೀಯ ಕೇಂದ್ರಗಳು, ೮೦೦ ಕೃತಕ ಗರ್ಭಧಾರಣಾ ಕೇಂದ್ರಗಳು ಹಾಗೂ ೭೭ ಸಂಚಾರಿ ಚಿಕಿತ್ಸಾಲಯಗಳು ೧೯೯೮–೯೯ನೇ ಸಾಲಿನಲ್ಲಿ ಕಂಡುಬಂದಿವೆ. ವಿವಿಧ ಬಗೆಯ ೬೫೭೭ ರೋಗಗಳ ಪ್ರಕರಣದಿಂದಾಗಿ ೧೨೯೬ ಜಾನುವಾರು ಸಾವುಗಳು ಸಂಭವಿಸಿರುತ್ತದೆ. ವಿವಿಧ ರೋಗಗಳ ಉಲ್ಬಣತೆಯನ್ನು ತಡೆಯಲು ಸುಮಾರು ೨.೧೫ ಲಕ್ಷ ಪಶುಗಳಿಗೆ ಲಸಿಕೆಗಳನ್ನು ಹಾಕಲಾಗಿತ್ತು ಒಟ್ಟು ೨೨ ಲಕ್ಷ ಕೃತಕ ಗರ್ಭಧಾರಣಾ ಕಾರ್ಯಕ್ರಮಗಳನ್ನು ನಡೆಸಿ ೨.೬೮ ಲಕ್ಷ ಕರುಗಳನ್ನು ಪಡೆಯಲಾಯಿತು. ಪಶುಗಳ ಅಭಿವೃದ್ಧಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಕೃತಕ ಗರ್ಭಧಾರಣಾ ತಾಂತ್ರಿಕತೆಯನ್ನು ಬಳಸಿಕೊಳ್ಳಲಾಗುತ್ತಿದ್ದು, ಅದರಿಂದ ನಮ್ಮಲ್ಲಿ ಸುಮಾರು ೨೦೫೪ ಪಶು ವೈದ್ಯಕೀಯ ಸಂಸ್ಥೆಗಳ ಪಶುಗಳಿಗೆ ಕೃತಕ ಗರ್ಭಧಾರಣೆಯನ್ನು ಮಾಡುವ ಸೌಲಭ್ಯವನ್ನು ಹೊಂದಿದೆ."೧೩ ದೇಶಿ ತಳಿಗಳನ್ನು ಆಯ್ಕೆ ಮಾಡಿಕೊಂಡು ಇಂತಹ ಪ್ರಕ್ರಿಯೆಗಳ ಮೂಲಕ ಅಭಿವೃದ್ಧಿಗೊಳಿಸಲಾಗುತ್ತಿದೆ. ಇಂತಹ ವಿಶೇಷವಾದ ಸೌಲಭ್ಯಗಳನ್ನು ಮಾದಿಗ ಸಮುದಾಯವು ಕೂಡ ಸಮರ್ಪಕವಾಗಿ ಪಡೆಯುವುದರ ಮೂಲಕ ಅಭಿವೃದ್ಧಿಯನ್ನು ಹೊಂದುವುದರ ಮೂಲಕ ಸಮಾಜದಲ್ಲಿ ಬದಲಾವಣೆ ತರಲು ಸಾಧ್ಯ.

೬.೪ ಕೃಷಿ ಪದ್ಧತಿ

ಮಾನವನ ಜೀವನ ಯಾವಾಗ ಪ್ರಾರಂಭವಾಯಿತೋ ಅದರ ಜೊತೆಗೆ ಪರಂಪರೆಯು ಬೆಳೆಯತೊಡಗಿತ್ತು. ಮಾನವ ಗುಂಪು-ಗುಂಪಾಗಿ ತಮ್ಮ ಜೀವನ ಕ್ರಮವನ್ನು ಪ್ರಾರಂಭ ಮಾಡಿಕೊಂಡನೋ ಅಂದಿನಿಂದಲೇ ಹಂತ ಹಂತವಾಗಿ ನಾಗರಿಕತೆಯನ್ನು ಮೈಗೂಡಿಸಿಕೊಳ್ಳಲು ಪ್ರಯತ್ನಿಸುತ್ತಾ ಬಂದಿದ್ದಾನೆ. ಕೃಷಿ ತನ್ನ ಜೀವನ ಒಂದು ಭಾಗವಾಗಿ ಸ್ವೀಕರಿಸಿದ್ದನೋ ಅಂದಿನಿಂದಲೇ ತನ್ನ ನಿಜ ಜೀವನದ ಬದುಕುನ್ನು ಪ್ರಾರಂಭ ಮಾಡಿಕೊಂಡನು ಎಂದು ಹೇಳಬಹುದು. ಆದ್ದರಿಂದ ನಮ್ಮ ಭಾರತ ದೇಶದ ಮೂಲೋದ್ಯೋಗ ಕೃಷಿ ಪ್ರತಿಕಶ ೭೦ರಷ್ಟು ಜನ ಕೃಷಿಯನ್ನು ಅವಲಂಬಿಸಿದ್ದಾರೆ. ಇಷ್ಟೇ ಏಕೆ ರೈತನು ನಮ್ಮ ದೇಶದ ಬೆನ್ನೆಲುಬು. ಆದುದರಿಂದ ನಮ್ಮ ದೇಶದಲ್ಲಿ ಕೃಷಿಕರು ಮತ್ತು ಕೃಷಿ ಕಾರ್ಮಿಕರು ತಮ್ಮ ಮಾನವತೆಯನ್ನು ಉಳಿಸಿಕೊಂಡು ಕಾಯಕ ನಿಷ್ಠರಾಗಿ ಬೆವರು ಸುರಿಸಿ ದುಡಿದು ಸತತೋದ್ಯೋಗಿಗಳಾದರೆ ನಮ್ಮ ದೇಶವು ಮುಂದುವರಿಯುವುದಲ್ಲಿ ಸಂದೇಹವಿಲ್ಲ.

ಕೃಷಿ ಪ್ರಧಾನ ಭಾರತ ದೇಶದಲ್ಲಿ ಅತ್ಯಂತ ಕಡಿಮೆ ಮಳೆ ಬೀಳುವ ಜಿಲ್ಲೆಗಳಲ್ಲಿ ಚಿತ್ರದುರ್ಗವೂ ಒಂದು. ಅಭಿವೃದ್ಧಿ ವಿಷಯದಲ್ಲಿ ದೇಶದ ಆರ್ಥಿಕತೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಕೃಷಿಯನ್ನು ಅವಲಂಬಿಸಿದೆ. ವರ್ಷದ ಒಂದೇ ಒಂದು ಮುಂಗಾರು ಮಳೆಯ ಏರಿಳಿತ ಇಡೀ ದೇಶದ ಆರ್ಥಿಕತೆಯನ್ನು ಬುಡಮೇಲು ಮಾಡುವಂತಹ ಶಕ್ತಿಯನ್ನು ಹೊಂದಿದೆ. 'ಕೃಷಿ' ಹೀಗೆ ಇಂದಿಗೂ ಭಾರತದ ಜೀವಾಳವಾಗಿದೆ ಎಂಬುದನ್ನು ನಾವು ತಿಳಿಯಬಹುದು.

ವಿಭಿನ್ನ ಮಳೆ ಹಂಚಿಕೆ, ಮಣ್ಣು, ಭೂಮೇಲ್ಮೈ ಲಕ್ಷಣ ಹಾಗೂ ಬೆಳೆ ಪದ್ಧತಿಗಳನ್ನು ಅನುಸರಿಸಿ ರಾಜ್ಯವನ್ನು ೬ ಕೃಷಿ ಪ್ರದೇಶ ಹಾಗೂ ೧೦ ಕೃಷಿ ವಲಯಗಳೆಂದು ಗುರುತಿಸಲಾಗಿದೆ. ಈ ಪೈಕಿ ಚಿತ್ರದುರ್ಗ ಜಿಲ್ಲೆ ಮಧ್ಯದ ಒಣವಲಯ ಎಂದು ಗುರುತಿಲ್ಪಟ್ಟಿದೆ. ಚಳಿಗಾಲದಲ್ಲಿ ಕನಿಷ್ಠ ೧೭ ಡಿಗ್ರಿ ಹಾಗೂ ಬೇಸಿಗೆಯಲ್ಲಿ ಗರಿಷ್ಠ ೪೧ ಡಿಗ್ರಿ ಸೆಲ್ಸಿಯಸ್ ಉಷ್ಣಾಂಶವಿರುತ್ತದೆ. ಚಿತ್ರದುರ್ಗ ಜಿಲ್ಲೆಯ ವಾರ್ಷಿಕ ಮಳೆಯ ಪ್ರಮಾಣ ೪೪೮ ಮಿಲಿ ಮೀಟರ್. ಈ ಸರಾಸರಿಯ ಪ್ರಕಾರ ಹೊಸದುರ್ಗ ತಾಲ್ಲೂಕಿನಲ್ಲಿ ಹೆಚ್ಚು ಮಳೆ ಬಿದ್ದರೆ, ಮೊಳಕಾಲ್ಮೂರು ತಾಲೂಕಿನಲ್ಲಿ ಅತ್ಯಂತ ಕಡಿಮೆ ಮಳೆಯಾಗುತ್ತದೆ. ಇಲ್ಲಿನ ಕೃಷಿಗೆ ಮಳೆಯೇ ನೀರಾವರಿಯ ಪ್ರಮುಖ ಮೂಲ. ಅದನ್ನು ಹೊರತುಪಡಿಸಿದರೆ ಸುಮಾರು ಹತ್ತು ಸಾವಿರದಷ್ಟಿರುವ ಕೊಳವೆ ಬಾವಿಗಳು ಕೃಷಿ ನೀರಾವರಿಯ ಮೂಲವಾಗಿದೆ. ವೇದಾವತಿ ನದಿಗೆ ಅಡ್ಡಲಾಗಿ ನಿರ್ಮಿಸಿರುವ 'ವಾಣಿವಿಲಾಸ ಸಾಗರ' ಜಿಲ್ಲೆಯ ಏಕೈಕ ಜಲಾಶಯವಾಗಿದ್ದು ಕ್ಷೀಣಗೊಂಡಿರುವ ಒಳಹರಿವಿನಿಂದಾಗಿ ಕೃಷಿಗೆ ನೀರು ದೊರಕುತ್ತಿರುವುದು ಅತ್ಯಲ್ಪ. ಮೊಳಕಾಲ್ಮೂರು ತಾಲೂಕಿನಲ್ಲಿರುವ ರಂಗಯ್ಯನದುರ್ಗ ಜಲಾಶಯ ಹಾಗೂ ಹಿರಿಯೂರಿನ ಜವ್ವಗೊಂಡನಹಳ್ಳಿ ಸಮೀಪವಿರುವ ಗಾಯತ್ರಿ ಜಲಾಶಯ ಅಲ್ಪ ಸಾಮರ್ಥ್ಯದ ನೀರಾವರಿಯನ್ನು ಒದಗಿಸುತ್ತಿದೆ."[೧೪]

ಚಿತ್ರದುರ್ಗ ಜಿಲ್ಲೆಯ ಕೃಷಿ ವೈವಿಧ್ಯಮಯವಾಗಿದ್ದರೂ ಅದು ಈ ಭಾಗದ ಮಾದಿಗ ಸಮುದಾಯಕ್ಕೆ ಬವಣೆ ನೀಗುವಲ್ಲಿ ಸಫಲವಾಗಿಲ್ಲ. ಹಾಗಾಗಿಯೇ ಪಶು ಸಂಗೋಪನೆ ಇಲ್ಲಿ ಕೃಷಿಯ ಅವಿಭಾಜ್ಯ

ಅಂಗವಾಗಿದೆ. ಇಂತಹ ಭೂ ಪ್ರದೇಶದಲ್ಲಿ ವಾಸ ಮಾಡುವ ಈ ಸಮುದಾಯದ ಬಹಳ ನಿಕೃಷ್ಟ ಜೀವನವನ್ನು ನಡೆಸುವುದು ಅನಿವಾರ್ಯವೆಂತಾಗಿದೆ. ಇದರ ಮಧ್ಯೆ ಕೆಲವರು ಭೂಮಿಯನ್ನು ಹೊಂದಿರುವಂಥ ಜನರು ಮಳೆಯ ಆಧಾರಿತವಾಗಿ ಬೆಳೆಯುನ್ನು ಬೆಳೆಯುತ್ತಾರೆ. ಇನ್ನು ಕೆಲವರು ಕೊಳವೆ ಬಾವಿಗಳ ಮೂಲಕ ಕೃಷಿಯನ್ನು ಅವಲಂಬಿಸಿ ಜೀವನವನ್ನು ನಡೆಸುತ್ತಿದ್ದಾರೆ. ಇವುಗಳನ್ನು ಗಮನದಲ್ಲಿ ಇಟ್ಟುಕೊಂಡು ಮಾದಿಗ ಸಮುದಾಯವು ಕೃಷಿ ದೃಷ್ಟಿಯಿಂದ ಇಡೀ ವರ್ಷವನ್ನು ಮೂರು ಕಾಲಗಳನ್ನಾಗಿ ವಿಂಗಡಿಸಿಕೊಂಡು ತಮಗೆ ಲಭ್ಯವಿರುವ ಸಂಪನ್ಮೂಲಗಳನ್ನು ತಿಳಿದುಕೊಂಡು ಯಾವ ಯಾವ ಕಾಲದಲ್ಲಿ ಯಾವ ಯಾವ ಬೆಳೆಗಳನ್ನು ಎಷ್ಟು ಎಷ್ಟು? ಕ್ಷೇತ್ರದಲ್ಲಿ ಬೆಳೆಯಬೇಕೆಂದು ನಿರ್ಧರಿಸಿ ಆ ವರುಷದಲ್ಲಿ ಬೆಳೆಗಳ ಯೋಜನೆಗಳನ್ನು ಸಿದ್ಧಪಡಿಸಿಕೊಳ್ಳುತ್ತಾರೆ.

ಮುಂಗಾರು ಕಾಲದಲ್ಲಿ ಸಾಮಾನ್ಯವಾಗಿ ಅಶ್ವಿನಿ, ಭರಣಿ, ಕೃತಿಕ, ರೋಹಿಣಿ ಮಳೆಗಳಿಂದ ಲಭ್ಯವಾಗುವ ತೇವಾಂಶದ ಆಧಾರದ ಮೇಲೆ ಬಿತ್ತನೆಯನ್ನು ಪ್ರಾರಂಭ ಮಾಡಬಹುದು. ಮುಂಗಾರು ಕಾಲದಲ್ಲಿ ಪ್ರಮುಖ ಬಿತ್ತನೆಯನ್ನು 'ಮೃಗ ಪಂಚಕ ಕಾಲ' ಅಂದರೆ ಮೃಗಶಿರ, ಆರಿದ್ರ, ಪುನರ್ವಸು, ಪುಷ್ಯ ಮತ್ತು ಆಶ್ಲೇಷ ಈ ಐದು ನಕ್ಷತ್ರಗಳ ಮಳೆಗಳ ಕಾಲ ಪ್ರಮುಖ ಕೃಷಿ ಋತುವಾದ ಮುಂಗಾರು ಕಾಲದಲ್ಲಿ ಮಳೆ ಆಶ್ರಿತ ಬೆಳೆಯುವ ಕ್ಷೇತ್ರ ಹೆಚ್ಚು. ಇದಲ್ಲದೆ ರಕ್ಷಿತ ನೀರಾವರಿಗೂ ಅನುಕೂಲವಾದ ಋತು ಅಂದರೆ ಮುಂಗಾರು ಹಾಗೇಯೇ ನೀರಾವರಿ ಅಶ್ರಯದಲ್ಲಿಯೂ ಬೆಳೆಗಳನ್ನು ಬೆಳೆಯಬಹುದು. ಮುಂಗಾರಿನ ಇನ್ನೊಂದು ಮಹತ್ವವೆಂದರೆ ವಿವಿಧ ಬೆಳೆಗಳನ್ನು ಬೆಳೆಯಬಹುದು.

ಮುಂಗಾರು ಕಾಲದಲ್ಲಿ ಸಕಾಲದಲ್ಲಿ ಮಳೆಯಾದರೆ ಮಳೆಯ ಆಶ್ರಯದಲ್ಲಿಯೇ ಮುಂಗಾರು ಬೆಳೆಗಳನ್ನು ತೆಗೆದುಕೊಳ್ಳಬಹುದು. ಆದ್ದರಿಂದ ಪಾರಂಪರಿಕವಾಗಿ ರಾಗಿ, ಭತ್ತ, ಜೋಳ, ನವಣೆ, ಮುಸುಕಿನಜೋಳ, ಗೋಧಿ ಮೊದಲಾದ ಏಕದಳ ಧಾನ್ಯಗಳನ್ನು, ತೊಗರಿ, ಹುರುಳಿ, ಉದ್ದು, ಹೆಸರು, ಅವರೆ, ಅಲಸಂದೆ, ಕಡಲೆ, ದ್ವಿದಳ ಧಾನ್ಯಗಳನ್ನು, ಶೇಂಗಾ, ಸೂರ್ಯಕಾಂತಿ, ಕುಸುಬೆ, ಎಳ್ಳು, ಹುಚ್ಚೆಳ್ಳು ಎಣ್ಣೆಕಾಳನ್ನು, ಹತ್ತಿ, ಅಗಸೆ, ಕಬ್ಬು, ಸೋಯಾದಂತಹ ವಾಣಿಜ್ಯ ಬೆಳೆಗಳನ್ನು ಮತ್ತು ತೆಂಗು, ಅಡಕೆ, ಬಾಳೆ, ಈರುಳ್ಳಿ ವಿವಿಧ ತರಕಾರಿ ಮತ್ತು ಸಪೋಟ, ದಾಳಿಂಬೆ, ಮಾವು ಮೊದಲಾದ ತೋಟಗಾರಿಕೆ ಬೆಳೆಗಳನ್ನು ಬೆಳೆಯಲಾಗುತ್ತಿತ್ತು. ಆದರೆ ಇದೀಗ ಕೃಷಿ ಕಾರ್ಮಿಕರ ಕೊರತೆ, ಎದುರಾಗುವ ಬರ, ಕೃಷಿ ಬಗೆಗಿನ ಮಾಹಿತಿ ಕೊರತೆ ಇವೇ ಮೊದಲಾದ ಕ್ಷೇತ್ರವನ್ನೂ ಆವರಿಸಿಕೊಂಡಿದೆ.

- **ಕೃಷಿ ಪದ್ಧತಿಯಲ್ಲಿ ಪಾರಂಪರಿಕ ಜ್ಞಾನ**

ಕೃಷಿ ಮಾನವನ ಮೂರು ಅಥವಾ ನಾಲ್ಕನೆಯ ಹಂತದಲ್ಲಿ ರೂಢಿಸಿಕೊಂಡ ಕಸುಬು. ಆಹಾರ ಸಂಗ್ರಹ, ಬೇಟೆ, ಪಶುಪಾಲನೆ ಮತ್ತು ಕೃಷಿ ಬಗ್ಗೆ ಪ್ರಸುತ್ತ ಉದ್ದೇಶಿತ ಸಮುದಾಯ ಕೃಷಿಯ ಕ್ಷೇತ್ರದಲ್ಲಿ ಹೊಂದಿರುವ ಪಾರಂಪರಿಕ ಜ್ಞಾನದ ಬಗ್ಗೆ ಚರ್ಚಿಸಿ, ಕೆಲವುಗಳನ್ನು ವಿಶ್ಲೇಷಿಸಿ ದಾಖಲಿಸುವ ಸಣ್ಣ ಪ್ರಯತ್ನ ಮಾಡಲಾಗಿದೆ. ಮಾದಿಗರು ಸಮಾಜದಲ್ಲಿ ತುಳಿತಕ್ಕೆ ಒಳಗಾಗಿರುವ ಸಮುದಾಯವಾಗಿದೆ. ಸಾವಿರಾರು ವರುಷಗಳಿಂದ ತಮ್ಮ ಜೀವನ ನಿರ್ವಹಣೆಗಾಗಿ ಮೇಲ್ಜಾತಿ ಮನೆಯಲ್ಲಿ ಜೀತಗಳುಗಳಾಗಿ

ಉತ್ಪನ್ನ ಮತ್ತು ಕೃಷಿ ಉತ್ಪನ್ನ ಎರಡನ್ನು ಅವಲಂಭಿಸಿ ಬದುಕುತ್ತಿದ್ದಾರೆ. ಆದರೆ ಇವರಲ್ಲಿ ಕೃಷಿ ಹೇಗೆ ಆರಂಭವಾಯಿತು? ಅದರ ಮುದುವರಿಕೆ ಹೇಗಿದೆ? ಈಗ ಕೃಷಿ ಯಾವ ಸ್ಥಿತಿಯಲ್ಲಿದೆ? ಎಂಬುದನ್ನು ವಿಸ್ತೃತ ಸಂದರ್ಶನದ ಮೂಲಕ ದಾಖಲಿಸಿದ ಹಿನ್ನೆಲೆಯಲ್ಲಿ ಹಲವಾರು ವಿಚಾರಗಳನ್ನು ಅಡಕಗೊಳಿಸಲಾಗಿದೆ.

• ಸ್ಥಳಾಂತರ ಕೃಷಿ

ಮೂಲತಃ ಮಾದಿಗ ಸಮುದಾಯದವರು ಅಲೆಮಾರಿಗಳಾಗಿದ್ದರು. ಆದ್ದರಿಂದ ಒಂದು ಸ್ಥಳದಲ್ಲಿ ಮೂರು ಅಥವಾ ನಾಲ್ಕು ವರ್ಷ ಕೃಷಿ ಮಾಡಿದ ಬಳಿಕ ಆ ಪ್ರದೇಶವನ್ನು ಬಿಟ್ಟು ಮತ್ತೊಂದು ಪ್ರದೇಶದಲ್ಲಿ ಹೋಗಿ ನೆಲವನ್ನು ಗಿಡ-ಪೊದೆಗಳಿಂದ ಸ್ವಚ್ಛಗೊಳಿಸಿ ಕೃಷಿ ಮಾಡುತ್ತಿದರು. ಈ ಮಾದರಿ ಕೃಷಿ ಪದ್ಧತಿಯನ್ನು ಸ್ಥಳಾಂತರ ಕೃಷಿ ಎಂದು ಕರೆಯಲಾಗಿದೆ. ಇದು ಅಂದಿನ ಕಾಲಘಟ್ಟಕ್ಕೆ ಅವರಿಗಿದ್ದ ಜ್ಞಾನವನ್ನು ತಿಳಿಸುತ್ತದೆ. ಹಾಗೆಯೇ ಸ್ವಾತಂತ್ರ್ಯ ನಂತರದಲ್ಲಿ ಹೊಸ ಆಡಳಿತ ವ್ಯವಸ್ಥೆಯ ಕಾರಣ ಸಂವಿಧಾನದ ಅನ್ವಯ ಜಾರಿಗೊಂಡ ಅರಣ್ಯ ಕಾಯಿದೆಗಳಿಂದ ಸ್ಥಳಾಂತರ ಕೃಷಿ ಮಾಡುವ ಕ್ರಮಕ್ಕೆ ಹಿನ್ನಡೆಯಾಗಿ ಒಂದು ಕಡೆ ಖಾಯಂ ನೆಲೆಸಿ ಹತ್ತಿರದ ಪ್ರದೇಶದಲ್ಲಿ ಕೃಷಿಯನ್ನು ಮುಂದುವರಿಸಿದರು. ಆ ಭೂಮಿಯಲ್ಲಿ ರಾಗಿ, ಜೋಳ, ಅವರೆ, ಹುಚ್ಚೆಳ್ಳು, ನವಣೆ, ಸಜ್ಜೆ ಮುಂತಾದ ದವಸ ಧಾನ್ಯ, ತರಕಾರಿಗಳನ್ನು ಬೆಳೆದುಕೊಳ್ಳುತ್ತಿದ್ದರು. ಕೃಷಿಗಾಗಿ ಮತ್ತು ಗುಡಿಸಲು ನಿರ್ಮಿಸಿಕೊಳ್ಳಲು ಬಳಸುವ ಭೂಮಿಯಲ್ಲಿ ಯಾವುದೇ ಮರಗಳನ್ನು ಕಡಿಯದೇ ಕೇವಲ ಮುಳ್ಳುಗಿಡ ಪೊದೆಗಳನ್ನು ಕಡಿದು ಸುಟ್ಟು ಕೃಷಿಗೆ ಹಸನು ಮಾಡಿ ಹತ್ತಿರದಲ್ಲಿ ಗುಡಿಸಲು ಕಟ್ಟಿ ವಾಸಿಸುತ್ತಿದ್ದರು.

• ಹಿಂದಿನ ಬಿತ್ತನೆ ಕ್ರಮ

ಕೃಷಿ ಮಾಡುವ ಭೂಮಿಯಲ್ಲಿದ್ದ ಕಸವನ್ನು ಸುಟ್ಟು ಸಣ್ಣಪುಟ್ಟ ಕಸ ಕಡ್ಡಿಯನ್ನು ಆರಿಸಿ ನೆಲವನ್ನು ಕೆದರಿ ಬೀಜ ಬಿತ್ತುವುದು ಅವರಿಗೆ ತಿಳಿದ ಜ್ಞಾನವಾಗಿತ್ತು. ಯಥೇಚ್ಛಗಿ ಮಳೆಯಾಗುತ್ತಿದ್ದ ಆ ಕಾಲದಲ್ಲಿ ಬಿತ್ತನೆ ಮಾಡಿ ಬಂದವರು ಮೂರು ತಿಂಗಳ ಬಳಿಕ ಬೆಳೆಯ ಕೊಯ್ಲಿಗೆ ಹೋಗುತ್ತಿದ್ದುದಾಗಿ ಮಾದಿಗರ ಹಿರಿಯ ಯಜಮಾನರೊಬ್ಬರು ತಮ್ಮ ಅನುಭವವನ್ನು ತಿಳಿಸುತ್ತಾರೆ. ಅಂದು ಕಾಡು ಸಮೃದ್ಧವಾಗಿತ್ತು. ಪ್ರತಿಯೊಂದು ಪ್ರಾಣಿಗಳಿಗೂ ವರ್ಷದ ಎಲ್ಲಾ ಕಾಲದಲ್ಲಿಯೂ ಆಹಾರ ದೊರೆಯುತ್ತಿತ್ತು. ರಾಗಿ, ಜೋಳ, ಅವರೆ, ಹುಚ್ಚೆಳ್ಳು ಬೆಳೆಗಳಿಗೆ ಯಾವುದೇ ಭಾದಕವಿರಲಿಲ್ಲ ಎಂಬುದೇ ಅದಕ್ಕೆ ಕಾರಣವಾಗಿದೆ. ಖಾಯಂ ಒಂದೇ ಪ್ರದೇಶದಲ್ಲಿ ಕೃಷಿ ಆರಂಭಿಸಿದ ಸಂದರ್ಭದಲ್ಲಿ ಕೈಗಾರಿಕೆ ಅಭಿವೃದ್ಧಿ ಕಾರ್ಯ ಭರದಿಂದ ಸಾಗುತ್ತಿತ್ತು. ಅವುಗಳಿಗೆ ಪೂರಕವಾಗಿ ಕಚ್ಚಾವಸ್ತುಗಳ ಸರಬರಾಜಿಗಾಗಿ ಅರಣ್ಯದ ಮರ-ಮುಟ್ಟು ಹೀಗೆ ಇಡೀ ಕಾಡನ್ನೇ ಕಡಿದು ಬರಿದು ಮಾಡಲಾಯಿತು. ಪರಿಣಾಮ ಪ್ರಾಣಿಗಳಿಗೆ ಆಹಾರದ ಕೊರತೆ ಉಂಟಾಗಿ ಕೃಷಿ ಭೂಮಿಯತ್ತ ಪ್ರಾಣಿಗಳು ಬರಲಾರಂಭಿಸಿದವು ತಮ್ಮ ಬೆಳೆಗಳನ್ನು ಪ್ರಾಣಿಗಳಿಂದ ರಕ್ಷಿಸುವುದಕ್ಕೋಸ್ಕರ ಎತ್ತರವಾದ ಮರದ ಮೇಲೆ ಗುಡಿಸಲುಗಳನ್ನು ನಿರ್ಮಿಸಿಕೊಂಡು ರಾತ್ರಿ ಕಾವಲು ಆರಂಭಿಸಿದರು. ಅದಕ್ಕಾಗಿ ಬೆಂಕಿ ಹಾಕಿಕೊಂಡು ತಮಟೆ ಬಾರಿಸುತ್ತಾ

ಕರಡಿ, ಹಂದಿಯಂಥ ಪ್ರಾಣಿಗಳನ್ನು ಓಡಿಸುವ ಸಾಹಸ ಮಾಡುತ್ತಿದ್ದರು, ಹಗಲು ಹೊತ್ತಿನಲ್ಲಿಯೂ ಇದು ಮುಂದುವರಿಯುತ್ತಿತ್ತು. ಅದಕ್ಕಾಗಿ ಮಾದಿಗರು ಕೃಷಿಯ ಬೆಳೆ ಸಂರಕ್ಷಣೆಗೆ ಉಪಾಯಗಳನ್ನು ಕಂಡುಕೊಂಡರು. ಹೀಗೆ ಆಯಾ ಸಂದರ್ಭದಲ್ಲಿ ಎದುರಾಗುವ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಸಲುವಾಗಿ ಹೊಸ ಹೊಸ ಅಲೋಚನೆಗಳು ಹುಟ್ಟಿಕೊಂಡವು. ಅದು ಕಾರ್ಯರೂಪಕ್ಕೆ ಬಂದು ಮುಂದಿನ ಪೀಳಿಗೆಗೆ ತಿಳಿವಳಿಕೆಯಾಗಿ, ಜ್ಞಾನವಾಗಿ ಮುಂದುವರಿಯುತ್ತದೆ.

• ಅಕ್ಕಡಿ ಪದ್ಧತಿ

ಮಾದಿಗ ಸಮುದಾಯವು ಸಾಮಾನ್ಯ ಅಕ್ಕಡಿ ಪದ್ಧತಿಯಲ್ಲಿ ಒಂದು ಮುಖ್ಯ ಬೆಳೆಯೊಂದಿಗೆ ಎರಡರಿಂದ ಮೂರು ಬೆಳೆಯನ್ನು ಬೆಳೆಯುತ್ತಾರೆ. ರಾಗಿಯನ್ನು ಮುಖ್ಯ ಬೆಳೆಯಾಗಿ ಬಿತ್ತಿದರೆ ಪ್ರತಿ ಎಂಟು ಸಾಲಿನ ನಂತರ ಒಂದು ಸಾಲು ತೊಗರಿ, ಸಜ್ಜೆ, ನವಣೆ, ಹುರುಳಿ, ಅಲಸಂದಿಯನ್ನು ಬಿತ್ತುವ ರೂಢಿಯಿದೆ. ಅಲ್ಲದೆ ರಾಗಿಯೊಂದಿಗೆ ಸಾಸಿವೆ, ಹುಚ್ಚೆಳ್ಳನ್ನು ಮಿಶ್ರಣ ಮಾಡಿ ಬಿತ್ತುತ್ತಾರೆ. ಹೊಸದುರ್ಗ ಭಾಗದಲ್ಲಿ ಮುಖ್ಯ ಬೆಳೆಯಾಗಿ ಭತ್ತ ಮತ್ತು ಮುಸಿಕಿನಜೋಳ ಬೆಳೆದರೆ ಅದರೊಂದಿಗೆ ರಾಗಿಯನ್ನು ಬಿತ್ತುತ್ತಾರೆ. ಮಳೆ ಚೆನ್ನಾಗಿ ಬಂದರೆ ಭತ್ತ ಅಥವಾ ಮುಸಿಕಿನಜೋಳ ದೊರೆಯುತ್ತದೆ. ಮಳೆ ಕೈಕೊಟ್ಟರೆ ರಾಗಿ ಬೆಳೆ ಕೈಗೆ ಸಿಗುತ್ತದೆ ಎನ್ನುವ ಮುಂದಾಲೋಚನೆ ಈ ಸಮುದಾಯದ್ದು. ಮೊಳಕಾಲ್ಮೂರು ತಾಲೂಕಿನ ಸುತ್ತಮುತ್ತಲ್ಲಿನ ಪ್ರದೇಶದ ಗ್ರಾಮೀಣಗಳಲ್ಲಿ ಇರುವ ಈ ಸಮುದಾಯವು ಶೇಂಗಾದ ಮಧ್ಯೆ ಹತ್ತು ಸಾಲಿಗೆ ಒಂದು ಸಾಲು ಅಕ್ಕಡಿ ಬೆಳೆ ಬೆಳೆಯುತ್ತಾರೆ. ಇಲ್ಲವೆಂದರೆ ಅಲಸಂದಿ, ಹೆಸರು, ರಾಗಿ, ನವಣೆ, ಸೂರ್ಯಕಾಂತಿ, ತೊಗರಿ ಬಿತ್ತನೆ ಮಾಡುತ್ತಾರೆ. ಶೇಂಗಾದ ಸುತ್ತಲೂ ಒಂದು ಕೂರಿಗೆ ಹುಚ್ಚೆಳ್ಳು ಅಥವಾ ಹುರುಳಿಯನ್ನು ಬಿತ್ತುತ್ತಾರೆ. ಹಿರಿಯೂರು ತಾಲೂಕಿನಲ್ಲಿ ರಾಗಿಯನ್ನು ಬಿತ್ತನೆ ಮಾಡುವಾಗ ಹತ್ತು ಸಾಲುಗಳ ಅಂತರದಲ್ಲಿ ತೊಗರಿ, ನವಣೆ ಹಾಗೂ ಜೋಳ ಬೆಳೆಗಳನ್ನು ಪೂರ್ವಿಕರು ಮಿಶ್ರ ಬೆಳೆಯಾಗಿ ಬೆಳೆಯುತ್ತಿದ್ದರು. ಅಕ್ಕಡಿಯಲ್ಲಿ ಶೇಂಗಾ, ಹುರುಳಿ ಸಹ ಹಾಕುತ್ತಿದ್ದರು. ಜೋಳವನ್ನು ಮುಖ್ಯ ಬೆಳೆಯಾಗಿ ಬೆಳೆಯುವಲ್ಲಿ ಅಲಸಂದೆ, ಹೆಸರು, ಸಜ್ಜೆ, ನವಣೆ, ತೊಗರಿ, ಮೆಣಸಿನಕಾಯಿ ಅಂತರ ಬೆಳೆಯಾಗಿ ಶೇಂಗಾ ಮುಖ್ಯ ಬೆಳೆಯಿದ್ದರೆ ಅಲಸಂದೆಯನ್ನು ಸಾಲು ಬೆಳೆಯಾಗಿ ಬೆಳೆಯುತ್ತಾರೆ. ಇದರ ಇನ್ನೊಂದು ಪ್ರಮುಖ ಅಂಶವೆಂದರೆ ಮುಖ್ಯ ಬೆಳೆಗೆ ಯಾವುದೇ ರೋಗಗನ್ನು ರಕ್ಷಣೆ ಮಾಡುವ ಸಲ್ಲುವಾಗಿ ಈ ರೀತಿಯಾದ ಮಿಶ್ರ ಬೆಳೆಯನ್ನು ಬೆಳೆಯುತ್ತಿದ್ದರು.

ಈ ರೀತಿಯಲ್ಲಿ ನಾವು ಕೃಷಿ ಮಾಡುವುದರಿಂದ ಆರ್ಥಿಕವಾಗಿಯೂ ಲಾಭವಾಗುತ್ತದೆ. ಅಲ್ಲದೆ ಭೂಮಿಯ ಫಲವತ್ತತೆ ಹೆಚ್ಚುತ್ತದೆ. ಮನೆಗೆ ಬೇಕಾದ ಆಹಾರ ವಿಷಮುಕ್ತವಾಗಿ ಸಿಗುತ್ತದೆ. ಇಂತಹ ಕೃಷಿ ಪದ್ಧತಿ ಅಳವಡಿಸಿಕೊಂಡರೆ ಎಲ್ಲಾ ರೀತಿಯಿಂದಲೂ ಅನುಕೂಲವೇ ಆಗುತ್ತದೆ. ನಂತರದಲ್ಲಿ ರಾಗಿಯ ಜೊತೆಗೆ ಅಂತರ ಬೇಸಾಯ ಮಾಡುತ್ತಿರುವುದರಿಂದ ಕಳೆಯ ಪ್ರಮಾಣವು ಕಡಿಮೆಯಾಗಿದೆ ಎಂದು ಈ ಸಮುದಾಯದ ಹಿರಿಯರು ಹೇಳುತ್ತಾರೆ. ಐದಾರು ಬೆಳೆಯಿಂದ ಆದಾಯವೂ ಬರುತ್ತದೆ. ಜೀವವೈವಿಧ್ಯತೆ ಕಾಪಾಡಿಕೊಲ್ಲುವ ದೃಷ್ಟಿಯಿಂದ ಮಾದಿಗರು ಸಾವಯವ ಕೃಷಿಯ ಜೊತೆ ಸಾಲು

ಬೆಳೆ ಪದ್ಧತಿಯನ್ನು ಅಳವಡಿಸಿಕೊಂಡರೆ ಉತ್ತಮ ಎನ್ನುವುದಾಗಿ ರಾಮಮೂರ್ತಿ ನೇರ್ಲಹಳ್ಳಿ ಇವರು ಹೇಳುತ್ತಾರೆ.

೬.೪.೧ ಧಾನ್ಯ ಸಂಗ್ರಹ ವಿಧಾನ

ಪ್ರತಿಯೊಂದು ವ್ಯವಸ್ಥೆಯನ್ನು ಭೌಗೋಳಿಕ ಪರಿಸರವು ತೀರ್ಮಾನಿಸುತ್ತದೆ. ಅದನ್ನು ಅರಿತು ಜನರು ಜಾಗೃತರಾಗುವರು, ಅ ಜಾಗೃತ ಮನಸ್ಸೇ ಅರಿವಿನ ಮೂಲಃ ಅದನ್ನೇ ಜ್ಞಾನವೆಂದು ಕರೆಯುತ್ತೇವೆ. ಇದು ತಲೆಮಾರಿನಿಂದ ತಲೆಮಾರಿಗೆ ಮುಂದುವರಿಯುವುದು ಮಾದಿಗ ಸಮುದಾಯವು ತಾವು ಬೆಳೆದ ಧಾನ್ಯಗಳನ್ನು ಸಂಗ್ರಹ ಮಾಡಿಕೊಳ್ಳಲು 'ಹಗೇವು' ಅಣಿಗೊಳಿಸುತ್ತಿದ್ದರು. ಏಕೆಂದರೆ ಪ್ರಾಣಿಗಳಿಂದ ರಕ್ಷಣೆ ಹಾಗೂ ಧಾನ್ಯ ಕೆಡಬಾರದು ಎನ್ನುವ ಉದ್ದೇಶದಿಂದಾಗಿ ಹಗೇವುವನ್ನು ಮಾಡಿಕೊಳ್ಳುತ್ತಿದ್ದರು.

• ಹಗೇವು ಸಿದ್ಧತೆ

ಮಾದಿಗ ಸಮುದಾಯದವರು ಹಗೇವು ಸಿದ್ಧತೆ ಮಾಡುವುದರ ಬಗ್ಗೆ ಅಪಾರ ಪಾರಂಪರಿಕ ಜ್ಞಾನವನ್ನು ಹೊಂದಿದ್ದಾರೆ. ಊರಿನ ಹೊರ ಭಾಗದಲ್ಲಿ ಹೇರಳವಾಗಿ ಸಿಗುವ ಲಕ್ಕಿ ಬಳ್ಳಿನಿಂದ ಸುಮಾರು ಹತ್ತು ಅಡಿಗಳಷ್ಟು ವಿಸ್ತಾರವಾದ ದುಂಡನೆ ಬುಟ್ಟಿಯ ಅಕಾರದಲ್ಲಿ ಹೆಣೆಯುವರು. ಹೆಣೆದ ಹಗೇವುವನ್ನು ಹೊರಭಾಗಕ್ಕೆ ಮತ್ತು ಒಳಭಾಗಕ್ಕೆ ಜಿಗುಟು ಮಣ್ಣು ಹಚ್ಚುತ್ತಾರೆ. ಸುಮಾರು ಒಂದು ವಾರ ಬಿಸಿಲಿನಲ್ಲಿ ಒಣಗಿದ ಹಗೇವಿನ ಸಗಣಿನಿಂದ ಸಾರಿಸಿ ಒಂದು ಭಾಗದಲ್ಲಿ ಕಾಳು ಬರುವಂತೆ ಸಣ್ಣಪ್ರಮಾಣದ ರಂಧ್ರವನ್ನು ಬಿಡುತ್ತಾರೆ. ಈ ರೀತಿಯಾಗಿ ಸಿದ್ಧಪಡಿಸಿದ್ದನ್ನು ಹಗೇವು ಎಂದು ಕರೆಯುತ್ತಾರೆ. ಇನ್ನೊಂದು ಹಗೇವಿನನ್ನು ಕುಂಬಾರರು ಮಾಡಿದ ಮಣ್ಣಿನ ದೊಡ್ಡಮಡಕೆ (ಗುಡಾಣ)ವನ್ನು ತರುತ್ತಾರೆ. ಸ್ವಲ್ಪ ಪ್ರಮಾಣದಲ್ಲಿ ಧಾನ್ಯಗಳನ್ನು ಸಂಗ್ರಹಿಸಿಕೊಳ್ಳುತ್ತಿದ್ದರು. ಇಂತಹ ಧಾನ್ಯ ಸಂಗ್ರಹಕ್ಕೆ ಸಿದ್ಧಗೊಳಿಸುತ್ತಿದ್ದ ಹಗೇವು ನಾಡಿನ ಜನರಲ್ಲಿರುವ ಹಗೇವಿಗಿಂತ ಭಿನ್ನ ಮತ್ತು ಹೆಚ್ಚು ಸುರಕ್ಷಿತ ಎಂಬುದು ಅದರ ಸಿದ್ಧತಾ ಕ್ರಮದಿಂದ ಮನವರಿಕೆಯಾಗುತ್ತದೆ. ವಾಸದ ಮನೆಯ ಒಂದು ಮೂಲೆಯಲ್ಲಿ ಈ ಹಗೇವನ್ನು ಮಾಡಿಕೊಳ್ಳುವ ಪದ್ಧತಿಯನ್ನು ರೂಢಿಸಿಕೊಂಡು ಬಂದಿದ್ದಾರೆ.

• ಧಾನ್ಯ ಸಂರಕ್ಷಣೆ

ಹುಳುಗಳು ಬಾರದಿರಲೆಂದು ಕೆಲವು ರಕ್ಷಣಾ ವಿಧಾನಗಳು ಮಾದಿಗರಿಗೆ ತಿಳಿದಿತ್ತು. ತುಳಸಿ ಎಲೆ, ಲಕ್ಕಿ ಸೊಪ್ಪು, ಬೂದಿ, ಬೇವಿನೆಲೆ, ಒಣಗಿದ ಮೆಣಸಿನ ಕಾಳುಗಳ ಜೊತೆಯಲ್ಲಿ ಬೆರೆಸಿ ಸಂಗ್ರಹಿಸಿದರೆ ಹುಳುಗಳು ಬರುವುದಿಲ್ಲ ಎಂಬುದು ಅವರ ತಿಳಿವಳಿಕೆಯಾಗಿತ್ತು. ಸಂಗ್ರಹಕ್ಕೆ ಪೂರ್ವದಲ್ಲಿ ಕಾಳುಗಳನ್ನು ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸುವುದು ಅಗತ್ಯವೆಂದು ಸಮುದಾಯದ ಹಿರಿಯ ಮಹಿಳೆಯರು ಅನುಭವವನ್ನು ತಿಳಿಸಿದ್ದಾರೆ. ಕಾಳು ಸಂಗ್ರಹಿಸಿದ ಹಗೇವು ಮೇಲೆ ಹುತ್ತದ ಕೆಮ್ಮಣ್ಣು ಮತ್ತು ಸಗಣಿಯನ್ನು ಬೆರೆಸಿ ಬಳಿಯುತ್ತಿದ್ದರು. ಇದರಿಂದಲೂ ಸಹ ಹುಳುಗಳು ಒಳಗೆ ಹೋಗಬಾರದು ಎಂದು ಉದ್ದೇಶವಿತ್ತು.

ಮಾದಿಗರಲ್ಲಿ ಧಾನ್ಯ ಸಂರಕ್ಷಣಾ ಜ್ಞಾನವು ಉತ್ತಮವಾಗಿತ್ತು ಎಂಬುದು ಮನವರಿಕೆಯಾಗತ್ತದೆ. ಆದರೆ ಇವುಗಳನ್ನು ಇಂದು ಬಳಸುವ ಅಗತ್ಯ ಕಂಡುಬರುತ್ತಿಲ್ಲ. ಬಿತ್ತನೆಯ ಬೀಜಗಳನ್ನಾದರೂ ಈ ಮಾದರಿಯಲ್ಲಿ ಸಂರಕ್ಷಿಸಬಹುದಾದರೂ ಅವುಗಳು ಬಿತ್ತನೆಯೋಗ್ಯವಾಗಿರುವುದಿಲ್ಲ. ಬಿತ್ತನೆಗಾಗಿಯೇ ಸಿದ್ಧಪಡಿಸಿದ ಬೀಜಗಳನ್ನು ತಂದು ಬೆಳೆ ತೆಗೆಯುವುದು ಅನಿವಾರ್ಯವಾಗಿರುವ ಹಿನ್ನೆಲೆಯಲ್ಲಿ ಇಂತಹ ಹಳೆಯ ವಿಧಾನಗಳು ಪ್ರಯೋಜನಕ್ಕೆ ಬರುವುದಿಲ್ಲ ಎಂದು ಹೇಳುತ್ತಾರೆ.

• ಅಗೋಚರ ಶಕ್ತಿಗಳು

ಮನುಷ್ಯ ತನ್ನ ಮಿತಿಯನ್ನು ಬಲ್ಲವನಾದುದರಿಂದ ಪ್ರಕೃತಿಯಲ್ಲಿ ಬೇರ್‍ಯಾವುದೋ ಒಂದು ಅದ್ಭುತವಾದ ಶಕ್ತಿಯಿದೆ ಎಂಬುದನ್ನು ನಂಬಿದ್ದಾನೆ. ಆ ನಂಬಿಕೆಯಿಂದಲೇ ಅನೇಕ ಕಲ್ಪನೆಗಳನ್ನು ಕಟ್ಟಿ ತನಗೆ ತೋಚಿದಂತೆ ಅದನ್ನು ಸಂತೃಪ್ತಿಪಡಿಸಲು ಪ್ರಯತ್ನಿಸುತ್ತಿದ್ದಾನೆ. ಈ ನಿಟ್ಟಿನಲ್ಲಿ ಮಾದಿಗ ಸಮುದಾಯವು ಅವರದೇಯಾದ ನಂಬಿಕೆಯನ್ನು ಹೊಂದಿದ್ದಾರೆ. ಅದಕ್ಕಾಗಿ ತಮ್ಮನ್ನು, ತಮ್ಮ ಬೆಳೆಯನ್ನು ರಕ್ಷಿಸಲು ಮಂತ್ರಶಕ್ತಿ, ದೇವರಿಗೆ ಹರಕೆ, ನಿಂಬೆಹಣ್ಣು ಮಂತ್ರಿಸಿ ಹೂಳುವುದು, ತೆಂಗಿನಕಾಯಿ ಮಂತ್ರಿಸಿ ಹೊಳುವುದು ಹೀಗೆ ಕೆಲವು ಕ್ರಮಗಳನ್ನು ಅನುಸರಿಸುತ್ತಿರುವುದು. ಹಿಂದೇಯೂ ಇತ್ತು ಈಗಲೂ ಇದೆ ಎಂಬುದನ್ನು ಗೌರಸಮುದ್ರದ ಯಜಮಾನ ಮಾರಯ್ಯ ಅವರು ತಮ್ಮ ಅನುಭವದ ಮಾತನ್ನು ಹೇಳಿದ್ದಾರೆ. ಇದು ಜ್ಞಾನದ ಅಂಶವಲ್ಲ, ಕಾರಣ ಅನುಕರಣೆಯವಲ್ಲ, ಅದರ ಫಲಿತಾಂಶ ತಿಳಿಯುವುದೇಯಿಲ್ಲ. ಕೇವಲ ವೈಯಕ್ತಿಕ ನಂಬಿಕೆಯನ್ನು ಆಧರಿಸಿದೆ. ಆದ್ದರಿಂದ ಇದನ್ನು ಎಲ್ಲರಿಗೂ ಎಲ್ಲಾ ಕಾಲಕ್ಕೂ ಅನುಸರಿಸಲು ಬರುವುದಿಲ್ಲ.

೬.೪.೨ ಕೃಷಿ ಮತ್ತು ಮಾದಿಗ ಸಮುದಾಯದ ಮಹಿಳೆ

ಭಾರತೀಯ ಸಾಮಾಜಿಕ ವ್ಯವಸ್ಥೆಯ ಯಾವ ಹಂತದಲ್ಲಿಯೂ ಕಾಣಸಿಗದಂತಹ ಮುಕ್ತ ಸ್ವಾತಂತ್ರ್ಯವನ್ನು ಸ್ತ್ರೀಗೆ ಮಾದಿಗ ಸಮುದಾಯ ಕೊಟ್ಟಿರುವುದನ್ನು ನೋಡಬಹುದು. ಅದನ್ನು ಶಕ್ತಿಯುತವಾಗಿ, ಸಮರ್ಥವಾಗಿ ನಿರ್ವಹಿಸಿರುವುದನ್ನು ಕಾಣಬಹುದು. ಆ ಕುಟುಂಬದ ನಿರ್ವಹಣೆಯನ್ನು ಆ ಮನೆಯ ಹೆಣ್ಣುಮಗಳು ನಿರ್ವಹಿಸಬೇಕು. ಮಕ್ಕಳ ಪೋಷಣೆ, ಸಂಸಾರದ ಜವಾಬ್ದಾರಿ, ಕುಟುಂಬದ ಮರ್ಯಾದೆಯನ್ನು ಕಾಪಾಡುವ ಸಲುವಾಗಿ ಅವಳೇ ಗಂಡಾಗುತ್ತಾಳೆ. ಇದನ್ನೆಲ್ಲ ಗಮನಿಸಿದರೆ ಈ ಸಮುದಾಯದಲ್ಲಿ ಹೆಣ್ಣು ತಾಯಿಯಾಗಿ, ಹೆಂಡತಿಯಾಗಿ, ಸಹೋದರಿಯಾಗಿ, ಪೋಷಕಳಾಗಿ ಎಲ್ಲಾ ಹಂತದಲ್ಲಿಯೂ ಕೆಲಸವನ್ನು ನಿರ್ವಹಿಸುವುದನ್ನು ನಾವು ಕಾಣಬಹುದು.

ಇನ್ನೊಂದು ಮುಖ್ಯವಾದ ಸಂಗತಿ ನಮಗೆ ಗೋಚರವಾಗಿದ್ದು ಎಂದರೆ 'ದ್ರಾವಿಡ' ಸಂಸ್ಕೃತಿಗಳಲ್ಲಿ ಜನನ ಮತ್ತು ಋತುಸ್ರಾವಗಳು ಫಲವಂತಿಕೆಯ ಪವಿತ್ರ ಸಂದರ್ಭಗಳು. ಕೃಷಿ ಸಂಸ್ಕೃತಿಗಳಲ್ಲಿ ಮುಟ್ಟಿನ ರಕ್ತವನ್ನು ಹೊಲಗಳಿಗೆ ಉಗ್ಗುವ ಮೂಲಕ ಸಮೃದ್ಧಿಯನ್ನು ಆಶಿಸಲಾಗುತ್ತದೆ. ಭೂಮಿಯಿಂದ ಸಸ್ಯ ಹುಟ್ಟುವುದು ಮತ್ತು ಯೋನಿಯಿಂದ ಶಿಶು ಜನಿಸುವುದು ಒಂದೇ ಆಗಿರುವುದರಿಂದ. ಕೃಷಿ

ಮೂಲಕ ಸಂಸ್ಕೃತಿಗಳು ಹೆಣ್ಣನ್ನು ಮೈಲಿಗೆಯೆಂದು ತಿಳಿಯಲಿಲ್ಲ ಎಂದು ರಹಮತ್ ತರೀಕೆರೆ ಅವರು ಕೃಷಿ ಮೂಲ ಸಂಸ್ಕೃತಿಗಳಲ್ಲಿನ ಹೆಣ್ಣಿನ ಸ್ಥಾನಮಾನದ ಕುರಿತು ಅಭಿಪ್ರಾಯಪಡುತ್ತಾರೆ.

ಇಲ್ಲಿ ಕೃಷಿ ಮೂಲ ಅಥವಾ ಕೃಷಿ ಆಧಾರಿತವೆಂದರೆ ತಳಸಮುದಾಯದ ಹೊಲೆಯ, ಮಾದಿಗರೆ. ಏಕೆಂದರೆ ಉನ್ನತ ಜಾತಿಗೆ ಎಲ್ಲಾ ವಿಧದಲ್ಲಿಯೂ ಇಂತಹ ಸವೆಸುವಿಕೆಯ ತಳವರ್ಗದವರಿಗೆ ಸಾಮಾಜಿಕವಾಗಿ ವಿಧಿಸಿರುವಂತಹ ಶಿಕ್ಷೆಯಾಗಿತ್ತು. ಇದೆಲ್ಲದರ ನಡುವೆಯು ಸಹ ಈ ಸಮುದಾಯ ಚರಿತ್ರೆಯನ್ನು ನಿರ್ಮಿಸಲು ಹೆಣಗಿತು ಎಂದರೆ ಅದು ಆ ಸಮುದಾಯದೊಳಗಿನ ಜೀವಂತಿಕೆಯ, ಅನನ್ಯತೆಯ ಮತ್ತು ಛಲದ ಕುರುಹು ಎಂದರೆ ತಪ್ಪಾಗಲಾರದು.

ಕೃಷಿಯಲ್ಲಿ ಈ ಸಮುದಾಯದ ಮಹಿಳೆಗೆ ಮಹತ್ವವಾದಂಥ ಸ್ಥಾನಮಾನವಿದೆ. ಕೃಷಿ ಕ್ಷೇತ್ರದಲ್ಲಿ ಹಲವಾರು ಆಚರಣೆಗಳು ಪ್ರಾರಂಭವಾಗುವುದು ಮಹಿಳೆಯಿಂದಲೇ. ಬೀಜ ಸಂಗ್ರಹಣೆಯಿಂದ ಹಿಡಿದು ಬಿತ್ತಿ ಫಲ ನೀಡುವವರೆಗೂ ಮಹಿಳೆಯರ ಪಾತ್ರ ಹೆಚ್ಚು, ಬಹುಪಾಲು ಬದುಕು ಅವಲಂಬಿತವಾದದ್ದೇ ಕೃಷಿ ಮೇಲೆ, ಈ ಕೃಷಿಯಿಂದ ಈ ಸಮುದಾಯದ ಸಂಪ್ರದಾಯ ಆಚರಣೆಗಳು ಪ್ರಾರಂಭವಾಗುತ್ತವೆ. ಒಂದು ಹೊತ್ತಿನ ಅನ್ನಕ್ಕಾಗಿ ಭೂಮಿತಾಯಿಯನ್ನು ನೆಚ್ಚಿಕೊಂಡು ಬದುಕುತ್ತಿರುವ ಸಮುದಾಯಗಳ ಸಂಖ್ಯೆ ಗಣನೀಯವಾಗಿದೆ. ಅವುಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ಸಮುದಾಯಗಳೆಂದರೆ ಕೃಷಿಕರು ಆಯಾಗಾರರು, ಕೂಲಿಕಾರರು ಎಲ್ಲರೂ ಸೇರಿ ತಮ್ಮ ಒಕ್ಕಲುತನಕ್ಕೆ ಸಂಬಂಧಿಸಿದಂತೆ ಹಲವಾರು ಆಚರಣೆಗಳು, ರೀತಿ ನೀತಿಗಳು ಸಂಪ್ರದಾಯಗಳನ್ನು ರೂಢಿಸಿಕೊಂಡು ಬಂದಿದ್ದಾರೆ. ಈ ಆಚರಣೆಗಳು ಕಂದಾಚಾರದ ಆಚರಣೆಗಳಲ್ಲ, ಇವುಗಳಲ್ಲಿ ಸಮುದಾಯಗಳ ಮುಗ್ಧತೆ, ಭಕ್ತಿ, ಗೌರವ, ನಂಬಿಕೆ, ಸಹಬಾಳ್ವೆಯ ಜೊತೆ ಜೊತೆಗೆ ತಮ್ಮ ದಿನನಿತ್ಯದ ಬದುಕನ್ನು ಮುಂದುವರಿಸಿಕೊಂಡು ಬಂದಿದ್ದಾರೆ.

ಚಿತ್ರದುರ್ಗ ವ್ಯಾಪ್ತಿಯಲ್ಲಿ ಬರುವ ಮಾದಿಗ ಸಮುದಾಯದ ಪೂರ್ವಜರು ಕೃಷಿಭೂಮಿಗಳನ್ನು ಹೊಂದಿರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿದುಬಂದಿದೆ. ಆದರೆ ಬಹುತೇಕ ಭೂಮಿಯನ್ನು ಮೇಲ್ವರ್ಗದ ಸಮುದಾಯದವರಿಗೆ ತಮ್ಮ ಮಕ್ಕಳ ಮದುವೆ, ಜಾತ್ರೆಗಳಿಗೆ, ಹಬ್ಬ ಹರಿದಿನಗಳಿಗೆ ಹಾಗೂ ಮೇಲ್ವರ್ಗದ ದೌರ್ಜನ್ಯಕ್ಕೆ ಒಳಗಾಗಿ ಕಳೆದುಕೊಂಡಿದ್ದಾರೆ. ದೊಡ್ಡ ದುರಂತವೆಂದರೆ ಇಂದು ಅವರ ಗದ್ದೆಗಳಲ್ಲಿ ಜೀತದಾಳುಗಳಾಗಿ ದುಡಿಯುತ್ತಿದ್ದಾರೆ. ಜೀತದಾಳುಗಳಾಗಿ ಬದುಕುವ ಪರಿಸ್ಥಿತಿ ಇದ್ದುದರಿಂದಾಗಿ ಬಹುಪಾಲು ಕುಟುಂಬಗಳ ಜನರು ಕೃಷಿ ಕೂಲಿಗಳಾಗಿ ಬದುಕುತ್ತಿದ್ದಾರೆ. ಚಿತ್ರದುರ್ಗದ ಆರು ತಾಲೂಕುಗಳಲ್ಲಿ ಅಧ್ಯಯನ ಮಾಡಿದ ಸಂದರ್ಭದಲ್ಲಿ ಮೊಳಕಾಲ್ಮೂರು, ಚಳ್ಳಕೆರೆ, ಹಿರಿಯೂರು ತಾಲೂಕುಗಳಲ್ಲಿ ಈ ಸಮುದಾಯಗಳಿಗೆ ಕಡಿಮೇ ಪ್ರಮಾಣದಲ್ಲಿ ಭೂಮಿಯಿದೆ. ಆದರೆ ಹೊಸದುರ್ಗ, ಹೊಳಲ್ಕೆರೆ, ಚಿತ್ರದುರ್ಗ ತಾಲೂಕುಗಳಲ್ಲಿ ಕೆಲವರಲ್ಲಿ ಗುಂಟೆಗಳಲ್ಲಿ ಇರುವುದು ಕಂಡು ಬರುತ್ತದೆ. ಇದರಿಂದ ಆರ್ಥಿಕವಾಗಿ ಸಬಲೀಕರಿಸಲು ಸಾಧ್ಯವಿಲ್ಲ. ಆದರೂ ಮಹಿಳೆಯರು ಕೃಷಿ ಭೂಮಿಯಲ್ಲಿ ಸಾವುಕಾರ, ದಣಿಗಳ ಹೊಲದಲ್ಲಿ ನಿರಂತರಾವಾಗಿ ದುಡಿಯುತ್ತಾರೆ. ಇದರ ಮೂಲಕ ತಮ್ಮ ಕುಟುಂಬದ ಆರ್ಥಿಕವಾಗಿ ಬಲಿಷ್ಠವಾಗುವ ಸಲುವಾಗಿ ಎಲ್ಲಾ ರೀತಿಯಾದ ಪ್ರಯತ್ನಗಳನ್ನು ಮಾಡುತ್ತಿದ್ದಾರೆ.

• ಕೃಷಿಕೂಲಿ

ಆರ್ಥಿಕ ಚಟುವಟಿಕೆಗಳು ವ್ಯಕ್ತಿಯ ಅಥವಾ ಸಮುದಾಯದ ಸ್ಥಾನಮಾನವನ್ನು ನಿರ್ಧರಿಸುತ್ತದೆ. ಕೂಲಿ ಎಂದರೆ ಬೇರೆಯವರ ಜಮೀನಿನಲ್ಲಿ, ಹೊಲಗದ್ದೆಗಳಲ್ಲಿ ಗೊತ್ತುಪಡಿಸಿದ ಕೆಲಸಕ್ಕಾಗಿ ಸಂಬಳದ ರೂಪದಲ್ಲಿ ಹಣ ಇಲ್ಲದೆ ಧಾನ್ಯಗಳನ್ನು ಪರ್ಯಾಯವಾಗಿ ಪಡೆಯುವುದು. ಚಿತ್ರದುರ್ಗದಲ್ಲಿ ಅತಿ ಹೆಚ್ಚು ಗ್ರಾಮಗಳು ಹೊಂದಿರುವುದರಿಂದ ಮಹಿಳೆಯರು ಪುರುಷರಿಗಿಂತ ಹೆಚ್ಚಾಗಿ ಕೂಲಿ ಮಾಡಲು ಹೋಗುವುದು ಕಂಡುಬಂದಿದೆ. ಶ್ರಮಕ್ಕೆ ಪಡೆಯುವ ಪ್ರತಿಫಲವು ಕೂಲಿಯಾಗಿದ್ದು, ಇದು ಅವರ ಆರ್ಥಿಕ ಸ್ಥಿತಿಯ ಜೊತೆಗೆ ಸಾಮಾಜಿಕ ಜೀವನ ವಿಧಾನವನ್ನು ಸಹ ತೋರಿಸುತ್ತದೆ. ಕೃಷಿ ಮಾಡಲು ಮೇಲ್ಜಾತಿ ಶ್ರೀಮಂತರ ಹೊಲಗಳಿಗೆ ಕೂಲಿ ಮಾಡಲು ಹೋಗುತ್ತಾರೆ. ಚಿತ್ರದುರ್ಗದಲ್ಲಿ ವರ್ಷಪೂರ್ತಿಯಾಗಿ ಕೂಲಿ ಕೆಲಸಕ್ಕೆ ಮಹಿಳೆಯರು ಹೋಗುತ್ತಾರೆ. ಕಾರಣ ಬೇರೆ ಸಮುದಾಯದವರ ಹೊಲ–ಗದ್ದೆಗಳಲ್ಲಿ ಹೆಚ್ಚಾಗಿ ನೀರಾವರಿ ಸೌಲಭ್ಯ ಇರುವುದರಿಂದ ವರ್ಷಪೂರ್ತಿ ಇವರ ಗದ್ದೆಗಳಲ್ಲಿ ಮಹಿಳೆಯರು ಕಳೆ ತೆಗೆಯುವುದು, ಗದ್ದೆ ಸ್ವಚ್ಛಗೊಳಿಸುವುದು, ಸಸಿ ನಾಟಿ ಮಾಡುವುದು. ಹೀಗೆ ವಾರದ ಏಳು ದಿನಗಳಲ್ಲಿ ನಿರಂತರವಾಗಿ ದುಡಿಯುತ್ತಾರೆ.

• ಬೀಜ ಬಿತ್ತುವುದು

ಮಾದಿಗ ಸಮುದಾಯದ ಮಹಿಳೆಯರು ಕಾಲಜ್ಞಾನದ ಬಗ್ಗೆ ಅಪಾರವಾದ ಜ್ಞಾನವನ್ನು ಹೊಂದಿದ್ದಾರೆ. ಮಳೆಗಾಲ ಪ್ರಾರಂಭವಾಗುವುದಕ್ಕಿಂತ ಮುಂಚೆ ಹಿಂದಿನ ವರ್ಷದ ಉತ್ತಮವಾದ ಬೀಜವನ್ನು ಸಂಸ್ಕರಿಸಿ ಅವುಗಳನ್ನು 'ವಡವು' (ಮಣ್ಣಿನಿಂದ ಮಾಡಿದ ದೊಡ್ಡ ಪ್ರಮಾಣದ ಮಡಿಕೆ) ಅಥವಾ ಚೀಲದಲ್ಲಿ ಸಂಗ್ರಹಿಸಿ ಮಳೆ ಬಂದ ಸಮಯದಲ್ಲಿ ಅವುಗಳನ್ನು ಮತ್ತೊಂದು ಬಾರಿ ಪರಿಷ್ಕರಿಸಿ ಬಿತ್ತನೆ ಕಾರ್ಯ ಮಾಡುತ್ತಾರೆ. ಜೊತೆಗೆ ಹಿಂದಿನ ವರ್ಷದ ತರಕಾರಿ ಬೀಜಗಳನ್ನು ಬಟ್ಟೆಯಲ್ಲಿ ಕಟ್ಟಿಟ್ಟು ಬೀಜಗಳನ್ನು ಹೊಲದ ಸುತ್ತಲು ಒಂದೊಂದು ಸಾಲುಗಳಲ್ಲಿ ಹಾಕುತ್ತಾರೆ. ಪುರುಷರು ಕೇವಲ ಹೊಲವನ್ನು ಉಳುವುದನ್ನು ಮಾತ್ರ ಮಾಡುತ್ತಾರೆ. ಬಿತ್ತಿದ ಐದು ಅಥವಾ ಎಂಟು ದಿನಗಳ ಬೀಜ ಮೊಳಕೆಯೊಡೆದಿದೆ ಇಲ್ಲವೋ ಎಂದು ಪರೀಕ್ಷೆ ಮಾಡುತ್ತಾರೆ.

• ಕಳೆ ತೆಗೆಯುವುದು

ಬಿತ್ತನೆ ಮಾಡಿ ಒಂದು ತಿಂಗಳ ನಂತರ ಮುಖ್ಯ ಬೆಳೆಯಲ್ಲಿ ಬೇರೆ ಜಾತಿಯ ಗಿಡಗಂಟಿಗಳು ಬೆಳೆದಿದ್ದರೆ 'ಕಳೆ' ಎಂದು ಕರೆಯುತ್ತವೆ. ಇಂತಹ ಕಳೆಯನ್ನು ತೆಗೆಯಲು ಈ ಸಮುದಾಯದ ಮಹಿಳೆಯರು ಹೆಚ್ಚಾಗಿ ಹೋಗುವುದನ್ನು ನೋಡಬಹುದು. ಈ ಕೆಲಸಕ್ಕೆ ಬೆಳಿಗೆ ಬೇಗ ಎದ್ದು ಮನೆಗೆಲಸ ಮುಗಿಸಿ, ಮಕ್ಕಳಿಗೆ ಅಡುಗೆ ಮಾಡಿ ತಾವು ಬುತ್ತಿ ಕಟ್ಟಿಕೊಂಡು ಬೇರೆ ಸಮುದಾಯದವರ ಹೊಲಗಳಿಗೆ ಹೋಗುತ್ತಾರೆ. ಈ ಭಾಗದಲ್ಲಿ ಕಳೆ ತೆಗೆಯುವುದಕ್ಕೆ ಬಹಳ ಬೇಡಿಕೆಯಿದೆ. ಯಾರ ಹೊಲದಲ್ಲಿ ಕೆಲಸವಿದೆ ಎಂದು ಸಂಜೆ ಮಾಲೀಕರು ಬಂದು ಮಾದಿಗ ಸಮುದಾಯದ ಹಿರಿಯ ಮಹಿಳೆಗೆ ಎಷ್ಟು ಕೂಲಿಯಾಳು ಬೇಕು ಅಷ್ಟು ಜನರನ್ನು ನಾಳೆ ಕರೆದುಕೊಂಡು ಬಾರಮ್ಮ ಎಂದು

ಹೇಳಿಹೋಗುತ್ತಾನೆ. ಬೆಳಿಗ್ಗೆ ಮಾಲೀಕನಿಗೆ ಎಷ್ಟು ಕೂಲಿಯಾಳು ಬೇಕೋ ಅಷ್ಟು ಮಹಿಳೆಯರನ್ನು ಕರೆದುಕೊಂಡು ಹೋಗುತ್ತಾಳೆ. ಬೆಳಿಗ್ಗೆಯಿಂದ ಸಂಜೆಯವರೆಗೆ ಅಲ್ಲೇ ದುಡಿಯಬೇಕಾಗಿರುತ್ತದೆ. ಈ ಕೆಲಸಕ್ಕೆ ಪ್ರತಿಫಲವಾಗಿ ದಿನಕ್ಕೆ ೧೦೦ರಿಂದ ೧೫೦ರೂ. ಗಳು ಸಿಗುತ್ತದೆ. ಆದರೆ ಹಿಂದೆ ಈ ಕೆಲಸಕ್ಕೆ ಕೇವಲ ೨೫ರಿಂದ ೩೦ ರೂ ಗಳನ್ನು ಮಾತ್ರ ಕೊಡುತ್ತಿದ್ದರು. ಈಗ ಸ್ವಲ್ಪ ಬದಲಾವಣೆಯಾಗಿದೆ ಎಂದು ಹೇಳುತ್ತಾರೆ.

• ಬೆಳೆ ಕಟಾವು ಮಾಡುವುದು

ಬೆಳೆ ಫಸಲು ಬಂದ ನಂತರ ಅದನ್ನು ಕಟಾವು ಮಾಡುವುದಕ್ಕೆ ದಿನಗೂಲಿ ಅಥವಾ ಒಪ್ಪಂದ ರೂಪದಲ್ಲಿ ಕೆಲಸ ನಿರ್ವಹಿಸುತ್ತಿರುವುದನ್ನು ಕಾಣಬಹುದು. ಬೆಳೆಯನ್ನು ಕೊಯ್ಯುವ, ಕೊಯ್ದ ಬೆಳೆಯನ್ನು ಒಂದು ಕಡೆ ಸಂಗ್ರಹಿಸುವ ಕಾರ್ಯದಲ್ಲಿ ಈ ಸಮುದಾಯದ ಮಹಿಳೆಯರ ಪಾತ್ರ ಮುಖ್ಯವಾಗಿರುತ್ತದೆ.

೬.೪.೩ಕೃಷಿಯೇತರ ಕೂಲಿ ಕೆಲಸದಲ್ಲಿ ಮಾದಿಗ ಸಮುದಾಯದ ಮಹಿಳೆಯರ ಪಾತ್ರ

ಕೃಷಿಯನ್ನು ಹೊರತುಪಡಿಸಿ ಇನ್ನೂ ಹಲವಾರು ಕ್ಷೇತ್ರಗಳಲ್ಲಿ ಮಾದಿಗ ಮಹಿಳೆಯರು ದುಡಿಯುತ್ತಿದ್ದಾರೆ. ಕುಟುಂಬದ ಆರ್ಥಿಕ ಮೂಲವನ್ನು ಸ್ವಲ್ಪಮಟ್ಟಿಗೆ ಸುಧಾರಿಸುವಂಥ ಕೆಲಸವನ್ನು ಈ ಸಮುದಾಯದ ಮಹಿಳೆಯರು ನಿಭಾಯಿಸುತ್ತಾರೆ. ಈ ಭಾಗದಲ್ಲಿ ಮಳೆ ಪ್ರಮಾಣ ಕಡಿಮೆ ಇರುವುದರಿಂದ ಕೃಷಿಗಿಂತ ಕೃಷಿಯೇತರ ಕೂಲಿ ಕಾರ್ಮಿಕರಾಗಿ ಕೆಲಸವನ್ನು ಮಾಡುತ್ತಾರೆ. ಗಾರೆ ಕೆಲಸ, ಸಣ್ಣ ಕೈಗಾರಿಕೆಗಳಲ್ಲಿ ಕೂಲಿ ಕೆಲಸ, ಮನೆಗೆಲಸಗಳನ್ನು ಮಾಡುವ ಕೆಲಸವನ್ನು ಮಹಿಳೆಯರು ಮಾಡುತ್ತಾರೆ.

• ಗಾರೆ ಕೆಲಸ

ಮಾದಿಗ ಸಮುದಾಯದ ಮಹಿಳೆಯರು ಇತ್ತೀಚೆಗೆ ಕೆಲವು ವರ್ಷಗಳಿಂದ ಗಾರೆ ಕೆಲಸಕ್ಕೆ ಹೋಗುತ್ತಿದ್ದಾರೆ. ಕಾರಣ ಮೂಲತಃ ಕೃಷಿಯನ್ನು ಅವಲಂಬಿರುವಂಥ ಈ ಸಮುದಾಯ ಸುಮಾರು ವರ್ಷಗಳಿಂದ ಮಳೆಯ ಪ್ರಮಾಣ ತೀರ ಕಡಿಮೆಯಾಗಿರುವುದರಿಂದ ಗಾರೆ ಕೆಲಸಕ್ಕೆ ಹೋಗುವ ಅನಿವಾರ್ಯತೆಯುಂಟಾಗಿದೆ. ಈ ಕಾರಣದಿಂದಾಗಿ ಗಾರೆ ಕೆಲಸವನ್ನು ಕೆಲವರು ನಂಬಿಕೊಂಟಿದ್ದಾರೆ. ಇವರು ಗಾರೆ ಕೆಲಸ ಮಾಡುವ ಸಂದರ್ಭದಲ್ಲಿ ಮರಳು ಪುಟ್ಟಿಯನ್ನು ಎತ್ತುವ, ಇಟ್ಟಿಗೆಯನ್ನು ಹೊರುವ ಮತ್ತು ಸಿಮೆಂಟ್ ಮಿಶ್ರಣ ಮಾಡಿದ ಕಲವಿಯನ್ನು ಹೊರುವುದು ಹೀಗೆ ಬಿಡಿ ಬಿಡಿ ಕೆಲಸಗಳನ್ನು ಮಾಡುತ್ತಾರೆ. ಆದರೆ ಶ್ರಮಕ್ಕೆ ಪ್ರತಿಫಲ ಸಿಗುವುದು ಕಷ್ಟ. ಒಂದು ದಿನಕ್ಕೆ ಪ್ರತಿಯಾಗಿ ಕೂಲಿಯನ್ನು ೧೫೦ರಿಂದ ೧೭೦ ರೂ. ಗಳನ್ನು ಕೊಡುತ್ತಾರೆ. ಆದರೆ ಪುರುಷರಿಗೆ ಒಂದು ದಿನಕ್ಕೆ ೩೦೦ರಿಂದ ೪೦೦ ರೂ. ಗಳು ಸಿಗುತ್ತವೆ. ಮಹಿಳೆಗೆ ಮತ್ತು ಪುರುಷರಿಗೆ ಹೋಲಿಕೆ ಮಾಡಿನೋಡಿದರೆ ಸಂಬಳದಲ್ಲಿ ಬಹಳ ವ್ಯತ್ಯಾಸವಿರುವುದು ಕಂಡುಬರುತ್ತದೆ. ಇನ್ನೊಂದು ಅಂತರವೆಂದರೆ ಬೇಲ್ದಾರ್‌ನಿಗೆ ಮನೆಯ ಮಾಲೀಕ ಮನೆ ಪೂರ್ಣಗೊಂಡ ಮೇಲೆ ಹೊಸ ವಸ್ತ್ರ ಮತ್ತು ಉಡುಗೊರೆಯನ್ನು ನೀಡುತ್ತಾನೆ. ಆದರೆ ಮಹಿಳೆಯರಿಗೆ ಇಂತಹವು ಯಾವುದೇ ವಸ್ತ್ರಗಳನ್ನು ನೀಡುವುದಿಲ್ಲ.

• **ಸಣ್ಣಪುಟ್ಟ ವ್ಯಾಪಾರ**

ಚಿತ್ರದುರ್ಗ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಮಾದಿಗ ಸಮುದಾಯದ ಕೆಲವು ಮಹಿಳೆಯರು ತಮ್ಮ ಕುಟುಂಬ ನಿರ್ವಹಣೆಗಾಗಿ ಸಣ್ಣಪುಟ್ಟ ವ್ಯಾಪಾರ ಮಾಡುತ್ತಿದ್ದಾರೆ. ತರಕಾರಿ ವ್ಯಾಪಾರ, ಸಣ್ಣಪುಟ್ಟ ಕಿರಾಣಿ, ಅಂಗಡಿ ವ್ಯಾಪಾರ ಹೀಗೆ ವ್ಯಾಪಾರ ಮಾಡುವುದಕ್ಕೆ ಮಹಿಳೆಯರಿಗೆ ಹಲವಾರು ಕಾರಣಗಳುಂಟು ಬಡತನ, ನಿರುದ್ಯೋಗ, ಕುಟುಂಬದ ಆರ್ಥಿಕ ಪರಿಸ್ಥಿತಿ, ಪುರುಷರು ಕೆಲವು ಕೆಟ್ಟ ಚಟಗಳಿಗೆ ಬಲಿಯಾಗಿ ದುಡಿಯದೇ ಹಣವನ್ನೆಲ್ಲ ಹಾಳು ಮಾಡುತ್ತಿರುವುದು. ಇದನ್ನು ಮನಗಂಡ ಮಹಿಳೆಯರು ಮನೆಯ ಜವಾಬ್ದಾರಿಯನ್ನು ನಿರ್ವಹಿಸುವಂಥ ಪರಿಸ್ಥಿತಿ ಎದುರಾಗಿದೆ ಹಾಗೂ ಮಕ್ಕಳ ಶಿಕ್ಷಣ, ಆರೋಗ್ಯದ ಕಡೆ ಗಮನ ಹರಿಸುತ್ತಿದ್ದಾರೆ. ಇಂದು ಕೃಷಿ ಪದೇ ಪದೇ ಕೈಕೊಡುತ್ತಿರುವುದರಿಂದ ಮಹಿಳೆಯರು ಅನಿವಾರ್ಯವಾಗಿ ಇಂತಹ ಪರ್ಯಾಯ ಮಾರ್ಗ ಕಂಡುಕೊಳ್ಳಬೇಕಾಗಿದೆ. ಹೆಚ್ಚು ಬಂಡವಾಳ ಹಾಕಿ ವ್ಯಾಪಾರ ಮಾಡುವಂಥ ಸೌಲಭ್ಯ ಈ ಮಹಿಳೆಯರಿಗೆ ಸಣ್ಣ ಪ್ರಮಾಣದಲ್ಲಿ ವ್ಯಾಪಾರವನ್ನು ಮಾಡುವುದನ್ನು ಗಮನಿಸಬಹುದು.

೬.೫ ವರ್ತಮಾನದಲ್ಲಿ ಕಸುಬುದಾರರ ಸ್ಥಿತಿಗತಿಗಳು

"ಭಾರತ ಸಾಮಾಜಿಕ, ಆರ್ಥಿಕ, ಧಾರ್ಮಿಕ, ರಾಜಕೀಯ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಸ್ವರೂಪಗಳೆಲ್ಲವೂ ಭಿನ್ನ ಮುಖಗಳನ್ನು ಹೊಂದಿವೆ. ಅವುಗಳೆಲ್ಲವೂ ಚಕ್ರಿಯ ಸಹ ಸಂಬಂಧಗಳನ್ನು ಹೊಂದಿವೆ. ದೇಶವೊಂದರಲ್ಲಿ ವಾಸಿಸುವವರ ಸಾಮಾಜಿಕ ಸಂಬಂಧಗಳು ಅದರ ಭೌಗೋಳಿಕ ಚೌಕಟ್ಟಿನೊಳಗೆ ಸಮರ್ಥ ಬಾಂಧವ್ಯ ಹೊಂದಿರದಿದ್ದಾಗ ಅನೇಕ ವೈರುಧ್ಯಗಳು ಬೆಳೆಯತೊಡಗಿದ್ದವು. ಭಾರತ ಸಾಮಾಜಿಕ ವ್ಯವಸ್ಥೆ ಒಂದು ಕುಲವನ್ನು ಉತ್ತರಕ್ಕೆ ಏರಿಸಿ ಉಚ್ಚರನ್ನಾಗಿಸಿದ್ದರೆ ಮತ್ತು ಹಲವು ಕುಲಗಳನ್ನು ನಿಮ್ನವಾಗಿಸಿದೆ. ಉಚ್ಚರೆನಿಸಿಕೊಂಡವರ ಮಕ್ಕಳಲ್ಲಿ ಸದಾ ಶ್ರೇಷ್ಠರೆಂಬ ಭೇದಭಾವದ ಮನೋಧರ್ಮಗಳು ಜನ್ಮಗತವಾಗಿ ಬರುತ್ತಿವೆ. ಇದನ್ನು ಅದರ ಮನೆತನದ ಪರಿಸರಗಳು ಬಾಲ್ಯದಿಂದಲೇ ಹಟ್ಟುಹಾಕುತ್ತವೆ. ದ್ವಂದ್ವ ಸಾಮಾಜಿಕತೆಯಲ್ಲಿ ಸಿಕ್ಕಿಕೊಂಡ ನಿಮ್ನ ಕುಲಗಳ ಜನರು ವಿವಿಧ ಹುನ್ನಾರದ ಶೋಷಣೆಗಳಿಗೆ ನೇರ ಬಲಿಪಶುಗಳಾಗುತ್ತಾರೆ. ಈ ನಮೂನೆಯ ನಡವಳಿಕೆಗಳನ್ನು ಭಾರತೀಯ ಚಾತುರ್ವರ್ಣ ನಿರಂತರವಾಗಿ ಇಲ್ಲಿನ ಮಾನವರೆಲ್ಲರೂ ಏಕ ಮಾದರಿಯ ಬಾಳ್ವೆಯನ್ನು ಕಾಣದಂತೆ ಮಾಡಿದೆ."೧೫

ಆದರೆ ಆರ್ಥಿಕ ಸಂಗತಿಗಳ ಪರಿಭಾವನೆಗಳು ವ್ಯಕ್ತಿ ಸಮಾಜಗಳೆರಡರ ಸೂಕ್ಷ್ಮ ಸಮಗ್ರ ಬದುಕಿನ ಮೇಲೆ ಹೊಂಗಿರಣಗಳನ್ನು ಹರಡುತ್ತವೆ. ಭಾರತಾದ್ಯಂತ ಪರಿಶಿಷ್ಟರು ಒಟ್ಟು ಜನಸಂಖ್ಯೆಯ ಕಾಲು ಭಾಗಕ್ಕಿಂತ ಅಧಿಕವಾಗಿದ್ದಾರೆ. ಕರ್ನಾಟಕದಲ್ಲಿ ಶೇಕಡ ೨೫ರಷ್ಟಿರುವ ಪರಿಶಿಷ್ಟ ಜಾತಿ/ಪಂಗಡಗಳು ಹೊಂದಿರುವ ಆಸ್ತಿ-ಪಾಸ್ತಿಗಳ ವಿವರ ಅಂಕಿ ಅಂಶಗಳ ಮೂಲಕ ನೋಡಿದಾಗ ಅಷ್ಟೇ ಮನಸ್ಸಿಗೆ ನೋವನ್ನು ನೀಡುತ್ತದೆ. ಪ್ರತಿ ಜನಗಣತಿಯ ದಶಕದಲ್ಲೂ ಪರಿಶಿಷ್ಟರ ಜನಸಂಖ್ಯೆಯು ಏರಿಕೆ ಪ್ರಮಾಣದಲ್ಲೇ ಬೆಳೆಯುತ್ತಿದೆ. ಅದಕ್ಕೆ ಅತಿಮುಖ್ಯವಾಗಿ ಅವರಲ್ಲಿರುವ ಬಾಲ್ಯವಿವಾಹ ಪದ್ಧತಿ,

ಹೆಚ್ಚು ಮಕ್ಕಳನ್ನು ಪಡೆಯುವ ಬಯಕೆ ಹಾಗೂ ಆಧುನಿಕ ಕುಟುಂಬ ಪದ್ಧತಿಗಳ ಬಗ್ಗೆ ಸ್ಪಷ್ಟವಾದ ಅರಿವಿಲದಿರುವುದು. ದಲಿತರು ಹೆಚ್ಚಾಗಿ ಗ್ರಾಮೀಣ ನಿವಾಸಿಗಳಾಗಿ ಮತ್ತು ಕಡಿಮೆ ಪ್ರಮಾಣದಲ್ಲಿ ನಗರ ಪ್ರದೇಶಗಳಲ್ಲಿದ್ದಾರೆ.”[೧೬]

ಮಾದಿಗ ಸಮುದಾಯದ ಜನರು ಅನಾದಿ ಕಾಲದಿಂದಲೂ ಉತ್ತಮ ವಾಸದ ಪರಿಸರಗಳಿಲ್ಲದೆ. ಅಗತ್ಯ ಮೂಲ ಸೌಲಭ್ಯಗಳಿಂದ ವಂಚಿತರಾಗಿ ಜೀವನ ನಡೆಸುತ್ತಾ ಬಂದಿರುವ ನತದೃಷ್ಟ ಜನ ಸಮೂಹವಾಗಿದೆ. ಅವರು ವಾಸಿಸುವ ಮನೆಯಿಂದ ಹಿಡಿದು ಅವರ ಮಾಡುವ ವೃತ್ತಿಯವರೆಗೆ ನೇರವಾಗಿ ಬಲಿಪಶುಗಳಾಗುವವರು. ಅತ್ಯಂತ ಹೀನಾಯ ಸ್ಥಿತಿಯಲ್ಲಿ ತಮ್ಮ ಬದುಕಿನ ನೋವುವನ್ನು ಅನುಭವಿಸುತ್ತಿದ್ದರೂ ಅವರುಹೊಂದಿರುವ ಸಾಮಾಜಿಕ ಸ್ಥಾನಮಾನ ಅತ್ಯಂತ ಕೆಳಮಟ್ಟದ್ದು ಹಾಗೂ ಹುಟ್ಟಿನಿಂದ ಸಾವಿನವರಗೆ ಅದೋ ಜೀವನವನ್ನು ಸಾಗಿಸಿಕೊಂಡು ಬಂದವರು. ನೇರವಾಗಿ ಭೂಮಾಲೀಕರಿಂದ ದೌರ್ಜನ್ಯಗಳಿಗೆ ಒಳಪಟ್ಟವರು ತಮ್ಮ ಜೀವನೋಪಾಯಕ್ಕಾಗಿ ಜಾಡಮಾಲಿಯಾಗಿ, ಚಮ್ಮಾರನಾಗಿ, ಸತ್ತ ಪ್ರಾಣಿಗಳನ್ನು ಊರಿನಿಂದ ಸಾಗಿಸುವುದು, ಭೂಮಾಲೀಕರ ಹೊಲದಲ್ಲಿ ಕಾರ್ಮಿಕರಾಗಿ ದುಡಿಯುತ್ತ ಬದುಕುತ್ತಿದ್ದಾರೆ. ಅದೆಷ್ಟೋ ಕಡೆ ಭೂಮಾಲೀಕರ ಹೊಲದಲ್ಲಿ ನಿಷ್ಠೆಯಿಂದ ದುಡಿಯುತ್ತದಿಂದ ಹೊರಬಾರದೆ ಸಾಯುತ್ತಿದ್ದಾರೆ.

ಚಿತ್ರದುರ್ಗ ಜಿಲ್ಲೆಯ ಮಾದಿಗ ಸಮುದಾಯ ಹೊಂದಿದ ಭೂಮಿಗಳೆಲ್ಲವೂ ಬಹುತೇಕ ಬರಡು ನೆಲಗಳಾಗಿವೆ. ಅವರು ಜೀವನ ಪೂರ್ತಿ ಭೂಮಿಯೊಂದಿಗೆ ಸಂಬಂಧ ಹೊಂದಿದ್ದರೂ, ಬೆವರಿಗೆ ತಕ್ಕ ಪ್ರತಿಫಲವಾಗಿ ಕೂಲಿ ಸಹ ಸಿಗುವುದಿಲ್ಲ. ಈ ಸಮುದಾಯದ ಕೆಲವು ಕುಟುಂಬಗಳಲ್ಲಿ ಒಪ್ಪೊತ್ತಿಗಿದ್ದರೆ, ಇನ್ನೊಪ್ಪತ್ತಿಗಿರುವುದಿಲ್ಲ ಅಂಥಸ್ಥಿತಿ ಇರುವುದು. ಆಹಾರವಿಲ್ಲದಂಥ ಪರಿಸ್ಥಿತಿ ಇರುವಾಗ ಇವರು ಸೇವಿಸುವ ದನದ ಮಾಂಸದ ಮೇಲೆ ಬಲಪಂಥಿಯ ಚಿಂತಕರು ತಮ್ಮದೇಯಾದ ಬಲಪ್ರಯೋಗವನ್ನು ಮಾಡುತ್ತಿದ್ದಾರೆ. ಎಲ್ಲಾ ಮಾಂಸವನ್ನು ಸೇವಿಸಲು ಬಿಡುತ್ತಾರೆ. ದನ ಮಾಂಸ ತಿನ್ನಲು ಯಾಕೆ ನಿರ್ಬಂಧನೆಯನ್ನು ಹೇರುತ್ತಾರೆ ಎನ್ನುವ ಒಂದು ಪ್ರಶ್ನೆ ಸಮಯೋಚಿತವಾಗಿದೆ. ಒಪ್ಪೊತ್ತಿನ ಅನ್ನಕ್ಕಾಗಿ ಪರದಾಡುವ ಈ ಸಮುದಾಯದ ಮೇಲೆ ಅನೇಕ ದೌರ್ಜನ್ಯಗಳು ದಿನನಿತ್ಯ ನಡೆಯುತ್ತವೆ. ಇವತ್ತು ಸಮಾಜ ಯಾವ ದಿಕ್ಕಿಗೆ ಸಾಗುತ್ತದೆ ಎನ್ನುವ ಒಂದು ಆಲೋಚನೆ ಸಂಶೋಧಕರಲ್ಲಿ ಹುಟ್ಟಬೇಕಾದ ಅನಿವಾರ್ಯತೆ ಇದೆ.

ಚಿತ್ರದುರ್ಗ ಜಿಲ್ಲೆಯ ಮಾದಿಗ ಸಮುದಾಯದ ವಾಸ್ತವ ಬದುಕಿನ ಚಿತ್ರಣವನ್ನು ಗಮನಿಸಿದರೆ ಆಶ್ಚರ್ಯವೆನಿಸುತ್ತದೆ. ಹಿಂದೆ ಇವರು ಮಾಡುವ ಕುಲಕಸುಬಿನಿಂದ ತಮ್ಮ ಜೀವನವನ್ನು ಸಾಗುತ್ತಿತ್ತು. ಇವತ್ತಿನ ಜಾಗತಿಕ ಸಂದರ್ಭದಲ್ಲಿ ಮಾಡಿದ ವಸ್ತುಗಳ ಜೊತೆಗೆ ಪೈಪೋಟಿ ಮಾಡಲು ಸಾಧ್ಯವಾಗುತ್ತಿಲ್ಲ ಉದಾ: ಇವರು ತಯಾರಿಸಿದ ಚರ್ಮದ ಪಾದರಕ್ಷೆ, ವ್ಯವಸಾಯದ ಹಗ್ಗಗಳು ಇಂದು ಕೈಗಾರಿಕೆಗಳಿಗೆ ವರ್ಗಾವಣೆಯಾಗಿರುವುದರಿಂದ ಇವರ ಕಸುಬಿನ ಮೇಲೆ ದೊಡ್ಡ ಪರಿಣಾಮ ಬೀರಿದೆ. ಇವರು ತಯಾರುಮಾಡಿದ ವಸ್ತುಗಳು ಗುಣಮಟ್ಟವನ್ನು ಹೊಂದಿದ್ದರೂ ಅವುಗಳಿಗೆ ಸೂಕ್ತ ಬೆಲೆ ಸಿಗುವುದು

ಕಷ್ಟಸಾಧ್ಯವಾಗಿದೆ. ಆದ್ದರಿಂದ ಇವತ್ತು ಬೇರೆ ಸಮುದಾಯದವರ ಭೂಮಿಯಲ್ಲಿ ಕೃಷಿಕೂಲಿ, ಕೃಷಿಯೇತರ ದುಡಿಮೆಯಲ್ಲಿ ತೊಡಗಿಸಿಕೊಳ್ಳಬೇಕಾಗಿದೆ. ಆ ಮೂಲಕ ತಮ್ಮ ಬದುಕಿನ ದಿಕ್ಕನ್ನು ಬದಲಾಯಿಸಿಕೊಳ್ಳುವ ಪ್ರಯತ್ನವನ್ನು ಮಾಡುತ್ತಿದ್ದಾರೆ. ಕೆಲವು ಸರ್ಕಾರಿ ಸೌಲಭ್ಯಗಳು ನಿಧಾನಗತಿಯಲ್ಲಿ ಸ್ವಲ್ಪ ಪ್ರಮಾಣದಲ್ಲಿ ಕೈಸೇರುತ್ತವೆ. ಇದರ ಮೂಲಕ ತಮ್ಮ ಆರ್ಥಿಕ ಕ್ಷೇತ್ರದಲ್ಲಿ ಬದಲಾವಣೆಯ ಕಡೆಗೆ ಮುಖಮಾಡುತ್ತಿದೆ.

ಗಮನಿಸಬೇಕಾದ ಮತ್ತೊಂದು ಅಂಶವೆಂದರೆ. ಮಾದಿಗ ಸಮುದಾಯದ ವೃತ್ತಿಗಳೊಂದಿಗೆ ಹಲವಾರು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಸಾಂಸ್ಕೃತಿಕ, ರಾಜಕೀಯ ಕ್ಷೇತ್ರಗಳೂ ಬದಲಾವಣೆಗೊಂಡಿವೆ. ಇಲ್ಲಿ ಮುಖ್ಯವಾಗಿ ಮಾದಿಗ ಸಮುದಾಯದ ವೃತ್ತಿಗಳನ್ನು ನೋಡಲಾಗಿದೆ. ಈ ಅಧ್ಯಾಯದಲ್ಲಿ ಒಂದು ನೂರು ವರ್ಷಗಳ ಈಚೆಗಿನ ಜನರನ್ನು ಅಧ್ಯಯನಕ್ಕೆ ಒಳಡಿಸಲಾಗಿದೆ. ಇದರಲ್ಲಿ ೬೦ ವರ್ಷಗಳ ಮೇಲ್ಪಟ್ಟು ಹಾಗೂ ನೂರು ವರ್ಷದೊಳಗಿನ ವಯೋಮಾನದವರನ್ನು ಮೊದಲ ತಲೆಮಾರೆಂದು, ೪೦ ವರ್ಷದ ಮೇಲ್ಪಟ್ಟು ೬೦ ವರ್ಷದೊಳಗಿನವರನ್ನು ಎರಡನೆ ತಲೆಮಾರಾಗಿ ಹಾಗೂ ೪೦ ವರ್ಷದೊಳಗಿನವರನ್ನು ಮೂರನೆ ತಲೆಮಾರೆಂದು ಪರಿಗಣಿಸಲಾಗಿದೆ. ಈ ಮೂರು ತಲೆಮಾರುಗಳ ನಡುವೆ ವೃತ್ತಿಗೆ ಸಂಬಂಧಿಸಿದಂತೆ ಉಂಟಾದ ಬದಲಾವಣೆಗಳು ಹಾಗೂ ಅದರಿಂದ ಉಂಟಾದ ಪರಿಣಾಮಗಳನ್ನು ನೋಡಲು ಪ್ರಯತ್ನಿಸಲಾಗಿದೆ. ಮೊದಲ ತಲೆಮಾರಿನಲ್ಲಿ ೬೦ ವರ್ಷ ಮೇಲ್ಪಟ್ಟು ೭೦ ವರ್ಷದೊಳಗಿನವರಿಗೂ ಹಾಗೂ ಎರಡನೇ ತಲೆಮಾರಿನ ೬೦ ವರ್ಷ ಆಜುಬಾಜಿನಲ್ಲಿರುವವರಿಗೂ ಅಂತಹ ವ್ಯತ್ಯಾಸಗಳು ಕಂಡುಬಂದಿಲ್ಲ. ಆದುದರಿಂದ ಆದಷ್ಟು ತಲೆಮಾರಿನಿಂದ ತಲೆಮಾರಿಗೆ ವಯಸ್ಸಿನಲ್ಲಿ ಹೆಚ್ಚು ಅಂತರಗಳಿರುವವರನ್ನೇ ಆಯ್ಕೆ ಮಾಡಿಕೊಂಡು ಅವರಿಂದ ಮಾಹಿತಿ ಸಂಗ್ರಹಿಸಲಾಗಿದೆ. ಉದಾಹರಣೆಗೆ ಮೊದಲ ತಲೆಮಾರಿನಲ್ಲಿ ೮೦ ವರ್ಷಕ್ಕೆ ಮೇಲ್ಪಟ್ಟ ವಕ್ತೃಗಳಿಂದಲೇ ಮಾಹಿತಿಯಗಳನ್ನು ಕಲೆಹಾಕಲಾಗಿದೆ. ಆದರೆ ತಾಂತ್ರಿಕವಾಗಿ ಮಾತ್ರ ತಲೆಮಾರುಗಳ ವಯೋಮಾನವನ್ನು ಮೂರು ಹಂತಗಳಲ್ಲಿ ವಿಂಗಡಿಸಿಕೊಳ್ಳಲಾಗಿದೆ. ಕ್ಷೇತ್ರಕಾರ್ಯದಲ್ಲಿ ವಕ್ತೃಗಳು ನೀಡಿದ ಮಾಹಿತಿಗಳೊಂದಿಗೆ ಭೌತಿಕವಾಗಿ ಇರುವ ಸ್ಥಿತಿಗತಿಗಳನ್ನು ಹೋಲಿಸಿ ನೋಡಲಾಗಿದೆ.

ಕೋಷ್ಟಕ: ೬.೩. ಚಿತ್ರದುರ್ಗ ಜಿಲ್ಲೆಯ ಮೊದಲ ತಲೆಮಾರು, ಎರಡನೆಯ ತಲೆಮಾರು, ಮೂರನೆಯ ತಲೆಮಾರಿನವರ ವೃತ್ತಿಗಳು ಈ ಕೆಳಗಿನಂತಿವೆ.

ಕ್ರಸಂ	ವೃತ್ತಿಗಳು	ವೃದ್ಧರು ೭೦+			ಮಧ್ಯವಯಸ್ಕರು			ಯುವಕರು		
೧		ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು
೨	ಪಶುಪಾಲನೆ	೫೭	೩೧	೮೮	೩೦	೨೧	೫೧	೧೫	೦೫	೨೦
೩	ಚರ್ಮಗಾರಿಕೆ	೨೧	೧೨	೩೩	೧೨	೦೬	೧೮	೧೧	೦೦	೧೧
೪	ಜೀತಗಾರಿಕೆ	೩೫	೦೦	೩೫	೦೭	೦೦	೦೭	೦೦	೦೦	೦೦

೪	ಕೃಷಿ ಕೂಲಿ	೧೭೯	೨೫೭	೪೩೬	೨೨೮	೨೬೦	೪೮೮	೨೩೦	೨೫೭	೪೮೭
೫	ಇತರೆ	೦೮	೦೦	೦೮	೨೩	೧೩	೩೬	೪೪	೩೮	೮೨
೬	ಒಟ್ಟು	೩೦೦	೩೦೦	೬೦೦	೩೦೦	೩೦೦	೬೦೦	೩೦೦	೩೦೦	೬೦೦

ಕೋಷ್ಟಕ ೬.೩ರಲ್ಲಿ ಪ್ರಕಾರ ಕಂಡುಬರುವ ಅಂಶವೆಂದರೆ, ಮಾದಿಗ ಸಮುದಾಯದ ಮೊದಲ ತಲೆಮಾರಿನವರು ತಮ್ಮ ಮೂಲ ವೃತ್ತಿಯನ್ನಾಗಿ ಪಶು ಸಾಕಾಣಿಕೆ, ಚರ್ಮಗಾರಿಕೆ, ಜೀತಗಾರಿಕೆ ಮತ್ತು ಕೃಷಿಕೂಲಿಯನ್ನು ಅವಲಂಬಿಸಿದ್ದಾರೆ. ಅದರಲ್ಲಿ ತಮ್ಮ ಕುಟುಂಬದ ಮೂಲ ವೃತ್ತಿ ಪಶು ಸಾಕಾಣಿಕೆಯನ್ನಾಗಿಸಿಕೊಂಡವರ ಪುರುಷರ ಮತ್ತು ಮಹಿಳೆಯರ ಪ್ರಮಾಣ ಶೇಕಡ ೧೪.೯೭ರಷ್ಟು ಇರುವುದು ಕಂಡುಬಂದಿದೆ. ಚರ್ಮಗಾರಿಕೆ ಮಾದಿಗ ಸಮುದಾಯದ ಬಹುಮುಖ್ಯವಾದ ಪರಂಪರಾಗತವಾಗಿ ಬೆಳೆಸಿಕೊಂಡು ಬಂದಿರುವ ಕುಲಕಸುಬಾಗಿದೆ. ಈ ವೃತ್ತಿಯನ್ನು ಮಾಡುವ ಪುರುಷರ ಹಾಗೂ ಮಹಿಳೆಯರ ಪ್ರಮಾಣ ಶೇಕಡ ೫.೫ರಷ್ಟು ಇದೆ. ಜೀತಗಾರಿಕೆಯಲ್ಲಿರುವ ಪುರುಷರ ಮತ್ತು ಮಹಿಳೆಯರ ಪ್ರಮಾಣ ಶೇಕಡ ೫.೮೩ರಷ್ಟು ಇದೆ. ಕೃಷಿಕೂಲಿಯನ್ನು ಅವಲಂಬಿಸಿರುವ ಪುರುಷರ ಹಾಗೂ ಮಹಿಳೆಯರ ಪ್ರಮಾಣ ಶೇಕಡ ೭.೬೬ರಷ್ಟು ಇರುವುದನ್ನು ಕಾಣಬಹುದು. ಇತರೆ ಕೆಲಸಗಳು ಎಂದರೆ ಮನೆ ನಿರ್ಮಾಣ, ಬಡಗಿ ಕೆಲಸ ಕೂಡ ಕೆಲವರು ತಮ್ಮ ಕುಟುಂಬದ ಮೂಲ ವೃತ್ತಿಯನ್ನಾಗಿಸಿಕೊಂಡಿದ್ದು, ಅವರಲ್ಲಿ ಪುರುಷರ ಪ್ರಮಾಣ ಶೇಕಡ ೧.೮೩ರಷ್ಟು ಕಂಡುಬರುತ್ತದೆ. ಒಟ್ಟಾರೆಯಾಗಿ ಚಿತ್ರದುರ್ಗದಲ್ಲಿ ನೆಲೆಸಿರುವ ಈ ಸಮುದಾಯದವು ಚರ್ಮಗಾರಿಕೆ, ಜೀತಗಾರಿಕೆ, ಕೃಷಿಕೂಲಿ ಮತ್ತು ಪಶು ಸಾಕಾಣಿಕೆಯಿಂದ ಜೀವನ ನಡೆಸುತ್ತಿರುವುದು ಪ್ರಸ್ತುತ ಅಧ್ಯಯನದಿಂದ ತಿಳಿಯುತ್ತದೆ.

ಮಾದಿಗ ಸಮುದಾಯದ ಎರಡನೆಯ ತಲೆಮಾರಿನವರು ತಮ್ಮ ಮೂಲ ವೃತ್ತಿಯನ್ನಾಗಿ ಪಶು ಸಾಕಾಣಿಕೆ, ಚರ್ಮಗಾರಿಕೆ, ಜೀತಗಾರಿಕೆ ಮತ್ತು ಕೃಷಿಕೂಲಿಯನ್ನು ಅವಲಂಬಿಸಿದ್ದಾರೆ. ಅದರಲ್ಲಿ ತಮ್ಮ ಕುಟುಂಬದ ಮೂಲ ವೃತ್ತಿ ಪಶು ಸಾಕಾಣಿಕೆಯನ್ನಾಗಿಸಿಕೊಂಡಿದ್ದು. ಅವರಲ್ಲಿ ಪುರುಷರ ಮತ್ತು ಮಹಿಳೆಯರ ಪ್ರಮಾಣ ಶೇಕಡ ೮.೫ರಷ್ಟು ಇರುವುದು ಕಂಡುಬಂದಿದೆ. ಚರ್ಮಗಾರಿಕೆ ಮಾದಿಗ ಸಮುದಾಯದ ಬಹುಮುಖ್ಯವಾದ ಪರಂಪರಾಗತವಾಗಿ ಬೆಳೆಸಿಕೊಂಡು ಬಂದಿರುವ ಕುಲಕಸುಬಾಗಿದೆ ಈ ವೃತ್ತಿಯನ್ನು ಮಾಡುವ ಪುರುಷರ ಮತ್ತು ಮಹಿಳೆಯರ ಪ್ರಮಾಣ ಶೇಕಡ ೨.೬೬ರಷ್ಟು ಇದೆ. ಜೀತಗಾರಿಕೆಯಲ್ಲಿ ಪುರುಷರ ಮತ್ತು ಮಹಿಳೆಯರ ಪ್ರಮಾಣ ಶೇಕಡ ೧.೧೬ರಷ್ಟು ಇದೆ. ಕೃಷಿಕೂಲಿಯನ್ನು ಅವಲಂಬಿಸಿರುವ ಪುರುಷರ ಮತ್ತು ಮಹಿಳೆಯರ ಪ್ರಮಾಣ ಶೇಕಡ ೮೧.೩೩ರಷ್ಟಿರುವುದನ್ನು ಕಾಣಬಹುದು. ಇತರೆ ಕಸುಬನ್ನು ಮಾಡುವ ಪುರುಷರ ಪ್ರಮಾಣ ಶೇಕಡ ೬ರಷ್ಟು, ಮಹಿಳೆಯರ ಪ್ರಮಾಣ ಶೇಕಡ ೧೩ರಷ್ಟು ಕಂಡುಬರುತ್ತದೆ.

ಮಾದಿಗ ಸಮುದಾಯದ ಮೂರನೆಯ ತಲೆಮಾರಿನವರು ತಮ್ಮ ಮೂಲ ವೃತ್ತಿಯನ್ನಾಗಿ ಪಶು ಸಾಕಾಣಿಕೆ, ಚರ್ಮಗಾರಿಕೆ, ಜೀತಗಾರಿಕೆ ಮತ್ತು ಕೃಷಿಕೂಲಿಯನ್ನು ಅವಲಂಬಿಸಿದ್ದಾರೆ. ಅದರಲ್ಲಿ ಈ

ಸಮುದಾಯದವು ತಮ್ಮ ಕುಟುಂಬದ ಮೂಲ ವೃತ್ತಿ ಪಶುಸಾಕಾಣಿಕೆಯನ್ನಾಗಿಸಿಕೊಂಡ ಪುರುಷ ಮತ್ತು ಮಹಿಳೆಯರ ಪ್ರಮಾಣ ಶೇಕಡ ೩.೩೩ರಷ್ಟು ಇರುವುದು ಕಂಡುಬಂದಿದೆ. ಚರ್ಮಗಾರಿಕೆ ಮಾದಿಗರ ಕುಲಕಸುಬಾಗಿದೆ, ಈ ವೃತ್ತಿಯನ್ನು ಮಾಡುವ ಪುರುಷ ಮತ್ತು ಮಹಿಳೆಯರ ಪ್ರಮಾಣ ಶೇಕಡ ೧೮೩ರಷ್ಟು ಇದೆ. ಕೃಷಿಕೂಲಿಯನ್ನು ಅವಲಂಬಿಸಿರುವ ಪುರುಷರ ಮತ್ತು ಮಹಿಳೆಯರ ಪ್ರಮಾಣ ಶೇಕಡ ೮೧.೧೬ರಷ್ಟಿರುವುದು ಕಾಣಬಹುದು. ಇತರೆ ಕೆಲಸಗಳನ್ನು ಕೂಡ ಕೆಲವರು ತಮ್ಮ ಕುಟುಂಬದ ಮೂಲ ವೃತ್ತಿಯನ್ನಾಗಿಸಿಕೊಂಡಿದ್ದು, ಅವರಲ್ಲಿ ಪುರುಷರ ಮತ್ತು ಮಹಿಳೆಯರ ಪ್ರಮಾಣ ಶೇಕಡ ೧೩.೬೬ರಷ್ಟು ಕಂಡುಬರುತ್ತದೆ. ಒಟ್ಟಾರೆಯಾಗಿ ಚಿತ್ರದುರ್ಗದಲ್ಲಿ ನೆಲೆಸಿರುವ ಮಾದಿಗ ಸಮುದಾಯದವು ಸಣ್ಣ ವ್ಯಾಪಾರಗಳು, ಗಾರೆಕೆಲಸ ಅಥವಾ ಮನೆ ಕಟ್ಟುವ ಕೆಲಸ, ಹಮಾಲಿ ಕೆಲಸ, ಇಟ್ಟಿಗೆ ಭಟ್ಟಿಯಲ್ಲಿ ಕೂಲಿ ಕಾರ್ಮಿಕರಾಗಿ, ಪೌರ ಕಾರ್ಮಿಕ ವೃತ್ತಿಗಳು, ಕಾರ್ಖಾನೆ ನೌಕರ, ವ್ಯಾಪಾರಿ, ತರಕಾರಿ ವ್ಯಾಪಾರಿ, ಉಪನ್ಯಾಸಕ, ಇಂಜಿನೀಯರ್, ಪ್ರಾಥಮಿಕ ಶಾಲಾ ಉಪಾಧ್ಯಾಯ, ಪ್ರೌಢ ಶಾಲಾ, ಉಪಾಧ್ಯಾಯ, ಆರೋಗ್ಯ ಸಹಾಯಕಿಯರು ಇನ್ನೂ ಮುಂತಾದ ವೃತ್ತಿಗಳನ್ನು ಅವಲಂಬಿಸಿದ್ದಾರೆ. ಕೆಲವರು ಬೆಂಗಳೂರು, ಚಿಕ್ಕಮಗಳೂರು, ಉಡುಪಿ ಜಿಲ್ಲೆಗಳಿಗೆ ಕಾಫಿ ತೋಟಗಳಿಗೆ ವಲಸೆ ಹೋಗಿ ಆರು ತಿಂಗಳು ಇದ್ದು, ಹಣ ಸಂಪಾದಿಸಿಕೊಂಡು ಬರುತ್ತಾರೆ. ಅಂಗನವಾಡಿ ಕಾರ್ಯಕರ್ತರಾಗಿ ಕಾರ್ಯನಿರ್ವಹಿಸುವುದು ಕಂಡುಬರುತ್ತದೆ.

ಚಿತ್ರದುರ್ಗ ಜಿಲ್ಲೆಯ ಎರಡು ತಾಲೂಕುಗಳು ಬಹುತೇಕ ನೀರಾವರಿಯಿಂದ ಕೂಡಿವೆ. ಇನ್ನು ಉಳಿದ ತಾಲೂಕುಗಳಲ್ಲಿ ಮಳೆಗಾಲದ ಹೊರತಾದ ಕಾಲದಲ್ಲಿಯೂ ಕೃಷಿ ಚಟುವಟಿಕೆಗಳು ನಡೆಯುತ್ತವೆ. ಹೀಗಾಗಿ ಇಲ್ಲಿ ಕೃಷಿ ಕೂಲಿಗೆ ಅಂತಹ ಕೊರತೆ ಇಲ್ಲ. ಅದರ ಹೊರತಾದ ಮೊಳಕಾಲ್ಮೂರು, ಚಳ್ಳಕೆರೆ ತಾಲೂಕುಗಳಲ್ಲಿ ಮಳೆಯಾಶ್ರಿತ ಕೃಷಿ ಭೂಮಿ ಇರುವುದರಿಂದ ಸುಗ್ಗಿಕಾಲದ ತರುವಾಯ ಇಲ್ಲಿಯ ದಲಿತ ಕುಟುಂಬಗಳು ಕೂಲಿಯನ್ನು ಹುಡುಕಿಕೊಂಡು ಚಿಕ್ಕಮಗಳೂರು, ಬೆಂಗಳೂರು ಮುಂತಾದ ಕಡೆ ವಲಸೆ ಹೋಗುತ್ತಾರೆ. ಈ ಕ್ರಿಯೆ ಎರಡನೇ ತಲೆಮಾರಿನಿಂದ ಪ್ರಾರಂಭಗೊಂಡು ಇಂದಿಗೂ ಮುಂದುವರೆದಿದೆ. ಮೊದಲ ತಲೆಮಾರಿನವರಲ್ಲಿ ಈ ರೀತಿಯ ವಲಸೆ ಕಂಡುಬರುತ್ತಿರಲಿಲ್ಲ. "ನಮ್ಮ ಕಾಲದಲ್ಲಿ ಮಳೆ ಬೆಳೆ ಚೆನ್ನಾಗಿತ್ತು. ಹಾಗಾಗಿ ನಾವು ವಲಸೆ ಹೋಗುವ ಪ್ರಶ್ನೆಯೇ ಇರಲಿಲ್ಲ" ಎಂದು ಉತ್ತರಿಸುತ್ತಾರೆ. ಈ ಹಳೆತಲೆಮಾರಿನವರ ಕಾಲದಲ್ಲಿ ಅವರು ವಲಸೆ ಹೋಗುವ ಸ್ವಾತಂತ್ರ್ಯವನ್ನು ಕಳೆದುಕೊಂಡಿದ್ದರು. ಬಹುತೇಕ ಅವರು ಇನ್ನೊಬ್ಬರ ಜೀತಗಾರನಾಗಿ ಇಲ್ಲವೆ ಅಡಿಯಾಳಾಗಿ ಜೀವನ ನಡೆಸಬೇಕಾಗಿತ್ತು. ಅದೇ ರೀತಿ ಸಾರಿಗೆ ಸಂಪರ್ಕವೂ ಇಷ್ಟು ಅಭಿವೃದ್ಧಿ ಹೊಂದಿರಲಿಲ್ಲ. ಹೀಗಿದ್ದಾಗ ಅವರ ವಲಸೆಯನ್ನು ಹೋಗಲು ಹೇಗೆ ಸಾಧ್ಯ ಎನ್ನುತ್ತಾರೆ. ಬಹುತೇಕ ಎರಡು ಮತ್ತು ಮೂರನೇ ತಲೆಮಾರಿನವರ ವಾದದಲ್ಲಿ ಸತ್ಯವಿದೆ. ಎರಡು ಮೂರನೇ ತಲೆಮಾರಿನವರಷ್ಟು ಹಳೆ ತಲೆಮಾರಿನವರಲ್ಲಿ ಸ್ವಾತಂತ್ರ್ಯ ಇರಲಿಲ್ಲ. ಅವರ ಕೆಲವು ನಂಬಿಕೆಗಳು, ತಾವು ಕಟ್ಟಿಕೊಂಡ ಬದುಕು ಅವರನ್ನು ವಲಸೆ ಹೋಗಲು ಬಿಡುತ್ತಿರಲಿಲ್ಲ. ಹಾಗೇ ಎರಡು ಮತ್ತು ಮೂರನೇ ತಲೆಮಾರಿನವರಲ್ಲಿರುವ ಹಣದ ಕುರಿತ ಅತಿಯಾದ ವ್ಯಾಮೋಹ ಹಳೆ ತಲೆಮಾರಿನವರಲ್ಲಿ ಇರಲಿಲ್ಲವೆಂಬುದು ಅಷ್ಟೇ ಸತ್ಯ. ಒಟ್ಟಾರೆಯಾಗಿ

ಚಿತ್ರದುರ್ಗದಲ್ಲಿ ನೆಲೆಸಿರುವ ಮಾದಿಗ ಸಮುದಾಯದವು ಕೃಷಿ ಮತ್ತು ಪಶು ಸಾಕಾಣಿಕೆಯಿಂದ ಜೀವನ ನಡೆಸುತ್ತಿರುವುದು ತಿಳಿಯುತ್ತದೆ.

ಮೊದಲ ಮತ್ತು ಎರಡನೇ ತಲೆಮಾರಿಗಿಂತ ಮೂರನೇ ತಲೆಮಾರಿನವರು ಆರ್ಥಿಕವಾಗಿ ಸುರಕ್ಷಿತವಾಗಿದ್ದಾರೆ. ಮೂರನೇ ತಲೆಮಾರಿನವರು ಹೆಚ್ಚು ಸರ್ಕಾರದ ಸೌಲಭ್ಯದಿಂದಲೇ ಆರ್ಥಿಕ ಮುನ್ನಡೆ ಕಾಣಲು ಸಾಧ್ಯವಾಗಿದೆ. ಮೂರನೇ ತಲೆಮಾರನವರಲ್ಲಿ ಕೂಲಿಯನ್ನರಸಿ ವಲಸೆ ಹೋಗುವುದು ಕಂಡುಬಂದರೂ ಅದರ ಪ್ರಮಾಣ ತುಂಬಾ ಕಡಿಮೆಯಾಗಿದೆಯೆಂದು ಹೇಳಬಹುದು. ಸರ್ಕಾರಿ ಹುದ್ದೆಗಳಲ್ಲಿ ಮುಂದುವರೆಯುವಂತಾಗಿರುವುರರಿಂದ ಪ್ರದೇಶದಿಂದ ಪ್ರದೇಶಕ್ಕೆ ಕೂಲಿಯರಸಿ ವಲಸೆ ಹೋಗುತ್ತಿಲ್ಲ. ಆದರೆ ಮೂರನೇ ತಲೆಮಾರಿನ ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳಲ್ಲಿ ದುಡಿಯುವವರು ತಮ್ಮ ಮೂಲ ಗ್ರಾಮಗಳನ್ನು ಬಿಟ್ಟು ಸಮೀಪದ ಪಟ್ಟಣಗಳಿಗೆ ಇಲ್ಲವೆ ಹುದ್ದೆಯನ್ನು ನಿರ್ವಹಿಸಬೇಕಾದ ಸ್ಥಳಗಳಿಗೆ ವಲಸೆ ಹೋಗಿದ್ದಾರೆ. ಆದರೆ ಇವರಾರೂ ಪೂರ್ಣವಾಗಿ ತಮ್ಮ ಗ್ರಾಮವನ್ನು ಬಿಡುತ್ತಾರೆ ಅಂತಹ ಅಲ್ಲ. ರಜೆಯ ದಿನಗಳಲ್ಲಿ ಬಹುತೇಕ ಅವರೆಲ್ಲಾ ತಮ್ಮ ಮೂಲ ಗ್ರಾಮಗಳಲ್ಲಿಯೇ ಕಾಲ ಕಳೆಯುತ್ತಾರೆ. ತಮ್ಮ ಗ್ರಾಮವನ್ನು ಬಿಡಲು ಕೆಲಸವೊಂದೆ ಕಾರಣವಾಗಿಲ್ಲ, ಹಾಗೆಯೇ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗುತ್ತದೆ ಎಂದು ತಿಳಿಸುತ್ತಾರೆ.

ಟಿಪ್ಪಣಿಗಳು.

೧. ದಾಸನೂರು ಕೂಸಣ್ಣ, ೨೦೦೬, ರೈತರ ಆತ್ಮಹತ್ಯೆ ಮತ್ತು ದಲಿತರ ನವಬ್ರಾಹ್ಮಣಿಕೆ?, ಪುಟ, ೧೩೯.

೨. www.kanaja, ಸಾಮಾಜಿಕ ನ್ಯಾಯದ ಪರಿಕಲ್ಪನೆ, ಅಂತರ್ಜಾಲದ ಮಾಹಿತಿ, ಪುಟ, ೧೬.

೩. ಅದೇ ಪುಟ, ೧೮.

೪. ರಾಜಶೇಖಯ್ಯ ಎ ಎಂ(ಸಂ), ೧೯೯೯, ಡಾ. ಬಾಬಾ ಸಾಹೇಬ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು (ಭಾಗ-೩), ಪುಟ, ೨೪೭.

೫. ಭಟ್ ಎಸ್ ಆರ್, ೨೦೧೧, ಪ್ರಾಚೀನ ಭಾರತದಲ್ಲಿ ಜನಜೀವನ, ಪುಟ, ೨೭.

೬. ಅದೇ ಪುಟ, ೨೭.

೭. ಅದೇ ಪುಟ, ೨೯.

೮. ರಾಜಶೇಖಯ್ಯ ಎ ಎಂ (ಸಂ), ೧೯೯೯, ಡಾ. ಬಾಬಾ ಸಾಹೇಬ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು-೫, (ಸಂ-೭), ಪುಟ, ೧೬೫, ೧೬೬.

೯. ರಾಜಶೇಖಯ್ಯ ಎ ಎಂ(ಸಂ), ೧೯೯೯, ಡಾ. ಬಾಬಾ ಸಾಹೇಬ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು (ಭಾಗ-೩), ಪುಟ, ೧೫೭.

೧೦. ಗಾಡ್ವಿನ್ ಶಿರಿ, ೧೯೯೭, ದಲಿತ ಕ್ರೈಸ್ತರು, ಅದೇ ಪುಟ, ೪೩.

೧೧. ದಾಸನೂರು ಕೂಸಣ್ಣ, ೨೦೦೬, ರೈತರ ಆತ್ಮಹತ್ಯೆ ಮತ್ತು ದಲಿತರ ನವಬ್ರಾಹ್ಮಣಿಕೆ?, ಪುಟ, ೧೪೬.

೧೨. ಅದೇ ಪುಟ, ೭೦.

೧೩. ಅನೀಸ್ ಸಿರಾಜ್ ಎಸ್ (ಸಂ), ೨೦೧೧, ಕರ್ನಾಟಕ ಕೈಪಿಡಿ, ಪುಟ, ೨೨೭, ೨೩೩.

೧೪. www.kanaja, ಸಾಮಾಜಿಕ ನ್ಯಾಯದ ಪರಿಕಲ್ಪನೆ, ಅಂತರ್ಜಾಲದ ಮಾಹಿತಿ, ಪುಟ, ೪೬.

೧೫. ದಾಸನೂರು ಕೂಸಣ್ಣ, ೨೦೦೬, ರೈತರ ಆತ್ಮಹತ್ಯೆ ಮತ್ತು ದಲಿತರ ನವಬ್ರಾಹ್ಮಣಿಕೆ?, ಪುಟ, ೮೨.

೧೬. ಅದೇ ಪುಟ, ೮೮.

ಅಧ್ಯಾಯ: ಏಳು
ಮಾದಿಗ ಸಮುದಾಯದ ಶೈಕ್ಷಣಿಕ ಬದಲಾವಣೆ

೭.೧ ಶಿಕ್ಷಣ ಸ್ವರೂಪ

೭.೨ ಶೈಕ್ಷಣಿಕ ಸ್ಥಿತಿಗತಿ

೭.೨.೧ ಪ್ರಾಥಮಿಕ ಶಿಕ್ಷಣ

೭.೨.೨ ಮಾದ್ಯಮಿಕ ಶಿಕ್ಷಣ

೭.೨.೩ ಪ್ರೌಢ ಶಿಕ್ಷಣ

೭.೨.೪ ಉನ್ನತ ಶಿಕ್ಷಣ

ಅಧ್ಯಾಯ: ಏಳು

ಮಾದಿಗ ಸಮುದಾಯದ ಶೈಕ್ಷಣಿಕ ಬದಲಾವಣೆ

ಪೀಠಿಕೆ

ಭಾರತವು ಅನೇಕ ಸಾಮಾಜಿಕ ಸಮಸ್ಯೆಗಳನ್ನು ಎದುರಿಸುತ್ತಿದೆ. ಮಿತಿಮೀರಿದ ಜನಸಂಖ್ಯೆ, ಬಡತನ, ನಿರುದ್ಯೋಗ, ಆರೋಗ್ಯದ ಸಮಸ್ಯೆ ಇನ್ನೂ ಮುಂತಾದವುಗಳು ತೀವ್ರ ಸಮಸ್ಯೆಗಳಾಗಿ ಸಮಾಜವನ್ನು ಒಂದೆಡೆ ಕಾಡುತ್ತಿದ್ದರೆ, ಇನ್ನೊಂದೆಡೆ ಬಂಡವಾಳಶಾಹಿಗಳು ತಮ್ಮ ಲಾಭದ ಆಸೆಯಿಂದ ಮಕ್ಕಳನ್ನು ದುರ್ಬಳಕೆ ಮಾಡುತ್ತಿರುವ ದುರಂತ ನಡೆಯುತ್ತಿದೆ. ೧೪ ವರ್ಷ ವಯಸ್ಸನ್ನು ಮೀರಿದ ಅಪ್ರಾಪ್ತ ವಯಸ್ಕರಾದ ಎಷ್ಟೋ ಮಕ್ಕಳನ್ನು ಕೃಷಿ, ಕೈಗಾರಿಕೆ ಮತ್ತು ಕೈಗಾರಿಕೇತರ ವಲಯಗಳಲ್ಲಿ ದುಡಿಸಿಕೊಳ್ಳಲಾಗುತ್ತಿದೆ. ಇಂತಹ ಕೋಟ್ಯಾಂತರ ಮಕ್ಕಳು ಪೌಷ್ಟಿಕ ಆಹಾರದ ಕೊರತೆ, ಶೈಕ್ಷಣಿಕ ಸೌಲಭ್ಯಗಳಿಂದ ವಂಚಿತರಾಗಿ ಶಾರೀರಿಕವಾಗಿ ಮತ್ತು ಮಾನಸಿಕವಾಗಿ ಬವಣೆ ಪಡುತ್ತಿದ್ದಾರೆ. ಇಂತಹ ಸಮಸ್ಯೆಗಳ ತೀವ್ರತೆಯ ಪ್ರಮಾಣ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ.

ಸಾಮಾಜಿಕ ಸನ್ನಿವೇಶವನ್ನು ಗಮನಿಸಿದರೆ ಬಾಲಕಾರ್ಮಿಕ ಪದ್ಧತಿ, ಪ್ರಾಥಮಿಕ ಶಿಕ್ಷಣ ಕ್ಷೇತ್ರ ಮತ್ತು ಅನಕ್ಷರತೆಯ ನಡುವೆ ಅವಿನಾಭಾವ ಸಂಬಂಧ ಇದೆ ಎನ್ನುವುದು ಸುಲಭವಾಗಿ ಅರಿವಿಗೆ ಬರುತ್ತದೆ. ಸರ್ಕಾರ ಕೋಟ್ಯಾಂತರ ರೂಪಾಯಿಗಳನ್ನು ಪ್ರಾಥಮಿಕ ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ ವ್ಯಯ ಮಾಡಿದರೂ ಬಹುತೇಕ ಮಕ್ಕಳು ಶಾಲೆಯಿಂದ ಹೊರಗುಳಿದು ಜೀವನ ಸಾಗಿಸುತ್ತಿದ್ದಾರೆ. ಇದರಿಂದ ಅನಕ್ಷರಸ್ಥ ಸಮಾಜದ ಬುನಾದಿ ಮತ್ತಷ್ಟು ಭದ್ರ ಹಾಗೂ ವಿಶಾಲವಾಗುತ್ತಿದೆ ಎನ್ನುವುದು ಗಮನಿಸಬೇಕಾದ ಅಂಶವಾಗಿದೆ. ಸಮಾಜದ ಕೊನೆಯ ಸ್ಥಿರದಲ್ಲಿರುವ ವೃತ್ತಿ ಶಿಕ್ಷಣದ ಬಳಿಗೆ ಬರಲಾರದಿದ್ದರೆ ಆ ಶಿಕ್ಷಣವೇ ನಿರ್ಲಕ್ಷಿತರನ್ನು ಹುಡುಕಿಕೊಂಡು ಹೋಗಬೇಕು. ಇಲ್ಲದಿದ್ದರೆ ಆ ಶಿಕ್ಷಣ ವ್ಯವಸ್ಥೆ ನಿಷ್ಪ್ರಯೋಜಕವೆಂದು ಸ್ವಾಮಿ ವಿವೇಕಾನಂದರು ಶತಮಾನದ ಹಿಂದೆ ನೀಡಿದ ಈ ಮಾತು ಇಂದಿಗೂ ಪ್ರಸ್ತುತ. ಸನಾತನ ಶಿಕ್ಷಣ ವರ್ಣ ವ್ಯವಸ್ಥೆಯ ಭಾಗವಾಗಿ ಕೇವಲ ಒಂದು

ವರ್ಗದ ಸೊತ್ತಾಗಿತ್ತು. ನಂತರ ಪಾಶ್ಚಿಮಾತ್ಯರ ದಾಸ್ಯದ ಛಾಯೆಯಾದ ಮೆಕಾಲೆ ಶಿಕ್ಷಣ ಕಾರ್ಖಾನೆಯ ವಸ್ತುಗಳನ್ನು ತಯಾರಿಸುವ ಮಾದರಿಯಲ್ಲೇ ಸುರಕ್ಷಿತರೆಂಬ ಸಮುದಾಯವನ್ನು ಹುಟ್ಟುಹಾಕುವಲ್ಲಿ ಯಶಸ್ವಿಯಾಯಿತು. ಆದರೆ ಸರ್ವರಿಗೂ ಶಿಕ್ಷಣ, ಸಮಗ್ರ ಶಿಕ್ಷಣ, ಜೀವನ ಶಿಕ್ಷಣ ಎಂಬ ವಾಸ್ತವಗಳ ಮೂಲಕ ಸಾಮಾಜಿಕ ನ್ಯಾಯವನ್ನು ದೊರಕಿಸುವಲ್ಲಿ ಈಗಿನ ಶಿಕ್ಷಣ ಪದ್ಧತಿ ಫಲಕಾರಿಯಾಗಿಲ್ಲ. ಅದರಲ್ಲಿಯೂ ನಮ್ಮ ದೇಶದ ಶಿಕ್ಷಣ ವ್ಯವಸ್ಥೆಯಲ್ಲಿ ಸಾಕಷ್ಟು ಪರಿಣಾಮಕಾರಿಯಾದ ಬದಲಾವಣೆ ಆಗಬೇಕಾಗಿದೆ.

ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಶಿಕ್ಷಣ ಪದ್ಧತಿಯು ಹೆಚ್ಚು ಮಹತ್ವವನ್ನು ಪಡೆದುಕೊಂಡಿದೆ. ಶಿಕ್ಷಣ ಮಾನವನ ಉನ್ನತಿಗಾಗಿ ಹಾಗೂ ಬದುಕಿಗೆ ನೆರವಾಗುವ ಅಸ್ತ್ರವಾಗಿದೆ. ಇಂತಹ ಶಿಕ್ಷಣ ಎಂಬ ಪದಕ್ಕೆ ವ್ಯಾಪಕವಾದ ಅರ್ಥವಿದೆ. ಆ ಅರ್ಥವನ್ನು ಹಿಡಿದಿರುವ ಒಂದು ಸಮರ್ಥ ವ್ಯಾಖ್ಯೆಯನ್ನು ಅಥವಾ ನಿರ್ದಿಷ್ಟವಾಗಿ ಕೊಡುವುದು ಕಷ್ಟ. ಆದರೂ ಕೆಲವು ವಿದ್ವಾಂಸರು, ತತ್ವಜ್ಞಾನಿಗಳು, ಶಿಕ್ಷಣತಜ್ಞರು, ರಾಜಕಾರಣಿಗಳು ಮತ್ತು ಸಾಧುಸಂತರು ತಮ್ಮ ತಮ್ಮ ದೃಷ್ಟಕೋನಗಳಿಗನುಗುಣವಾಗಿ ನೀಡಿದ್ದಾರೆ. ಇದರಿಂದ ಶಿಕ್ಷಣದ ಪರಿಕಲ್ಪನೆಯ ಸಂಕೀರ್ಣವಾದುದು ಹಾಗೂ ಸಕ್ರಿಯವಾದುದು ಎಂದು ಹೇಳಬಹುದಾಗಿದೆ. ನಿರಂತರವಾಗಿ ಪ್ರಗತಿ ಹೊಂದುತ್ತಿರುವ ಸಮಾಜದಲ್ಲಿ ಬೆಳೆಯುತ್ತಿರುವ ಮಾನವನಿಗೆ ಸಂಬಂಧಿಸಿರುವುದರಿಂದ ಶಿಕ್ಷಣದ ಪರಿಕಲ್ಪನೆಯೂ ಬದಲಾಗುತ್ತಿರುತ್ತದೆ. ಅಂತಯೇ ಶಿಕ್ಷಣದ ಬಗೆಗೆ ಅಂತಿಮ ಹೇಳಿಕೆ ಸಾಧ್ಯವೆ ಇಲ್ಲವೆನ್ನಬಹುದಾಗಿದೆ.

ಹಿಂದೆ ಆದಿಮಾನವ ಪ್ರಾರಂಭದಲ್ಲಿ ಸಂಚಾರಿ ಜೀವನವನ್ನವಲಂಬಿಸಿ ಬೆಟ್ಟ ಗುಡ್ಡಗಳಲ್ಲಿ, ಕಾಡುಮೇಡುಗಳಲ್ಲಿ ಸಂಚರಿಸುತ್ತಾ ಅಲೆಮಾರಿ ಜೀವನಕ್ಕೆ ಜೋತುಬಿದ್ದಿದ್ದ. ಕಾಲಕ್ರಮೇಣ ನದಿ ಬಯಲು ಪ್ರದೇಶವನ್ನು ಆಶ್ರಯಿಸಿ ಸ್ಥಾಯಿಯಾಗಿ ಒಂದು ಕಡೆ ನೆಲೆಯಾಗಿ ನಿಂತು ಕ್ರಿಯಾತ್ಮಕ ಸಾಮಾಜಿಕ ಜೀವನಕ್ಕೆ ನಾಂದಿ ಹಾಡಿದ. ಅಂದಿನಿಂದ ಮಾನವ ಗುಂಪಾಗಿ ಸಮಾಜದಲ್ಲಿ ವಾಸಿಸಲಾರಂಭಿಸಿ ವ್ಯವಸಾಯವನ್ನು ಮತ್ತು ಇತರೆ ಉಪಕಸುಬುಗಳನ್ನು ಅವಲಂಬಿಸಿ ಜೀವನ ಮಾಡಲಾರಂಭಿಸಿದನು. ಕಾಲಕ್ರಮೇಣ ಮಾನವ ಸಮಾಜದಲ್ಲಿ ಜಾತಿ ಮತ್ತು ವರ್ಗ, ಪದ್ಧತಿಗಳ ಕಲ್ಪನೆ ಸೃಷ್ಟಿಯಾದವು. ಇದರ ಪರಿಣಾಮವಾಗಿ ಬ್ರಾಹ್ಮಣ, ಕ್ಷತ್ರೀಯ, ವೈಶ್ಯ ಮತ್ತು ಶೂದ್ರ ಎಂಬ ನಾಲ್ಕು ಹಂತಗಳು ಸಮಾಜದ ಕಾರ್ಯಕಲಾಪಗಳನ್ನು ನೇರವೇರಿಸಿಕೊಂಡು ಹೋಗುತ್ತಿದ್ದವು. ಬ್ರಾಹ್ಮಣ ವರ್ಗ ಪಾಠ ಪ್ರವಚನ ಬೋಧಿಸುವ ಕಾರ್ಯ, ಕ್ಷತ್ರೀಯ ವರ್ಗ ರಾಜ್ಯಪಾಲನೆ, ವೈಶ್ಯ ವರ್ಗ ವ್ಯಾಪಾರ, ವ್ಯವಹಾರ ನೋಡಿಕೊಳ್ಳುತಿತ್ತು. ಶೂದ್ರ ವರ್ಗ ಸಮಾಜದ ಶುಚಿತ್ವಕ್ಕೆ ಮತ್ತು ಮೇಲಿನ ಮೂರು ವರ್ಗಗಳು ಚಾಕರಿಗೆ ಮೀಸಲಾಗಿದ್ದತ್ತು. ಹೀಗೆ ಇವು ನಿರಂತರವಾಗಿ ಕಾರ್ಯ ನೇರವೆರಿಸಿಕೊಂಡು ಹೋಗುತ್ತಿದ್ದವು.

ಅಂದು ವಿದ್ಯಾಭ್ಯಾಸಕ್ಕೆ ಅಷ್ಟು ಪ್ರಾಮುಖ್ಯತೆ ಇರಲಿಲ್ಲ. ಕೇವಲ ಬ್ರಾಹ್ಮಣರಿಗೆ ಮಾತ್ರ ಶಿಕ್ಷಣ ಮೀಸಲಾಗಿತ್ತು. ಸ್ತ್ರೀಯರಂತು ಅಕ್ಷರಾಭ್ಯಾಸ ಮಾಡುವುದೇ ಅಪರಾಧವೆಂದು ಪರಿಗಣಿಸಿದ್ದರು ಮತ್ತು

ಅಶ್ರಮಗಳಲ್ಲಿ, ಗುರುಕುಲಗಳಲ್ಲಿ ಮಾತ್ರ ಶಿಕ್ಷಣ ವ್ಯಾಸಂಗವಾಗಬೇಕಿತ್ತು. ಅಂದಿನ ಸಮಾಜದಲ್ಲಿ ವಿದ್ಯಾವಂತರ ಸಂಖ್ಯೆ ಬಹಳ ಕಡಿಮೆ ಇತ್ತು. ಕಾರಣ ವ್ಯವಸಾಯವೇ ಪ್ರಧಾನವಾದ್ದರಿಂದ ಶಿಕ್ಷಣಕ್ಕೆ ಮಹತ್ವವಿರಲಿಲ್ಲ. ಕಾಲಕ್ರಮೇಣ ಮನುಷ್ಯನ ಸಾಹಸ ಪ್ರಯತ್ನಗಳು ಕಂಡುಬಂದದರ ಪರಿಣಾಮವಾಗಿ ಶಿಕ್ಷಣದ ಬೇಡಿಕೆ ಹೆಚ್ಚಾಗಿ ಹೋಯಿತು. ಇಂದಿನ ಶಿಕ್ಷಣ ನಾಲ್ಕು ಗೋಡೆ ನಡುವೆ ಶಿಕ್ಷಣ ಮತ್ತು ವಿದ್ಯಾರ್ಥಿಗಳೊಡಗೂಡಿ ನಡೆಯುವ ಶಿಕ್ಷಣ ವ್ಯವಸ್ಥೆ. ಈ ಶಿಕ್ಷಣಕ್ಕೆ ಸೂಕ್ತವಾದ ವಾತಾವಾರಣ ಕೊಡುವ ಪರಿಸರವನ್ನು ಕಾಲನಂತರದಲ್ಲಿ ನಿರ್ಮಾಣ ಮಾಡಲಾಯಿತ್ತು. ಹಿಂದೆ ಶಿಕ್ಷಣವನ್ನು ಜ್ಞಾನಾರ್ಜನೆಗಾಗಿ ಪಡೆಯುತ್ತಿದ್ದರು. ನಂತರದಲ್ಲಿ ಇದು ಉದ್ಯೋಗ ಗಿಟ್ಟಿಸಿ ಹಣ ಸಂಪಾದಿಸುವ ಸಾಧನವಾಯಿತು. ಪ್ರಸ್ತುತ ಶಿಕ್ಷಣ ಸ್ಥಾನಮಾನದ ಸಾಧನವಾಗಿದೆ. ಈ ಶಿಕ್ಷಣ ಸಾಮಾನ್ಯ ಜನರ ಮೇಲೆ ಯಾವ ರೀತಿಯ ಪರಿಣಾಮ ಬೀರುತ್ತಿದೆ ಎಂಬುವುದನ್ನು ನಾವು ಕಾಣಬಹುದಾಗಿದೆ. ನಮ್ಮ ರಾಜ್ಯದಲ್ಲಿ ನಡೆದ ಒಂದು ಗಣತಿಯ ಪ್ರಕಾರ ಕನ್ನಡ ಮಾಧ್ಯಮದಲ್ಲಿ ಓದುತ್ತಿರುವ ಸುಮಾರು ಶೇಕಡ ೪೦ರಷ್ಟು ಮಕ್ಕಳು ಕನ್ನಡ ಸಾಮಾನ್ಯ ರೀತಿಯಲ್ಲಿ ಓದಲು ಬರೆಯಲು ಬಾರದಿರುವ ಸ್ಥಿತಿಯನ್ನು ತಲುಪಿದ್ದಾರೆ. ಇದು ನಮ್ಮ ದೇಶದ ಶಿಕ್ಷಣದ ಅವ್ಯವಸ್ಥೆಗೆ ಹಿಡಿದ ಕನ್ನಡಿಯಾಗಿದೆ.

ಆಧುನಿಕ ಸಮಾಜದಲ್ಲಿ ಶಿಕ್ಷಣ ಒಂದು ಅವಿಭಾಜ್ಯ ಅಂಗ, ಶಿಕ್ಷಣವಿಲ್ಲದ ಸಮಾಜವನ್ನು ಊಹಿಸುವುದಕ್ಕೂ ಆಗುವುದಿಲ್ಲ. ಪ್ರಜಾಪ್ರಭುತ್ವ ರಾಷ್ಟ್ರಕ್ಕೆ ಅನ್ವಯಿಸಿ ಹೇಳುವುದಾದರೆ ಶಿಕ್ಷಣವು ಒಂದು ಮುಖ್ಯ ಸಾಧನ. ಶಿಕ್ಷಣ ಪರಸ್ಪರವಾಗಿ ಸಂಬಂಧ ಹೊಂದಿರುವಂಥವುಗಳಾಗಿವೆ. ಪ್ರಜಾಪ್ರಭುತ್ವ ರಾಷ್ಟ್ರದ ಮುಖ್ಯ ಲಕ್ಷಣವೆಂದರೆ 'ಬದಲಾವಣೆ', ಬದಲಾವಣೆ ವೇಗವನ್ನು ಹೆಚ್ಚುಸುತ್ತದೆ. ಪ್ರಜಾಪ್ರಭುತ್ವದ ಮುಖ್ಯ ಲಕ್ಷಣವೆಂದರೆ 'ಜನತೆ', ಜನತೆ ಕಟ್ಟಿದ ಸಂಸ್ಥೆಗಳು ಮತ್ತು ಜನತೆಯ ಪ್ರತಿನಿಧಿಗಳು ಬದಲಾವಣೆಯನ್ನು ನಿರೀಕ್ಷಿಸುತ್ತವೆ. ಈ ಬದಲಾವಣೆ ಸೃಜನಾತ್ಮಕವಾಗಿಬೇಕು ನಮ್ಮ ಸಮಾಜವು ಬದಲಾವಣೆಯನ್ನು ಒಪ್ಪಿಕೊಂಡಿದೆ. ಇದು ಪ್ರಜಾಪ್ರಭುತ್ವವು ಜನತೆಯನ್ನು ಗುಲಾಮಗಿರಿ ಮತ್ತು ಉಪದ್ರವದಿಂದ ರಕ್ಷಿಸುವುದಾಗಿದೆ. ಇಂದು ಶಿಕ್ಷಣದ ಅಗತ್ಯವನ್ನು, ಅದರ ಮಹತ್ವವನ್ನು ಅರಿಯದವರು ವಿರಳ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಶಿಕ್ಷಣಕ್ಕೆ ಪ್ರಧಾನ ಸ್ಥಾನವಿದೆ. ಕಳೆದ ಅರ್ಧಶತಮಾನದ ಪೂರ್ವ ಅಜ್ಞಾತವಾಗಿದ್ದು 'ಅಭಿವೃದ್ಧಿಶೀಲ' ರಾಷ್ಟ್ರಗಳು ಶಿಕ್ಷಣದ ಪ್ರಭಾವದಿಂದ ಹೆಚ್ಚುತ್ತಿವೆ ಅಂತೆಯೇ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಶಿಕ್ಷಣದ ಮಹತ್ವವನ್ನರಿತ ಪ್ರತಿಯೊಂದು ರಾಷ್ಟ್ರವೂ ಶಿಕ್ಷಣ ಪ್ರಸಾರ ಪ್ರಗತಿಗಾಗಿ ವಿಶೇಷವಾದ ಆಸಕ್ತಿಯನ್ನು ವಹಿಸುತ್ತದೆ. ಭಾರತದಲ್ಲಿಯೂ ಕೂಡ ಮೊದಲಿಂದ ಶಿಕ್ಷಣದ ಪ್ರಗತಿಯನ್ನು ಸುಧಾರಿಸಲು ಹೊಸ ಶಿಕ್ಷಣ ಪದ್ಧತಿಯನ್ನು ಜಾರಿಯಲ್ಲಿ ತರಲು ಅನೇಕ ಪ್ರಯತ್ನಗಳು ನಡೆದಿವೆ.

ಶಿಕ್ಷಣವು ವ್ಯಕ್ತಿಯ ಸಾಮಾಜಿಕರಣ ಪ್ರಕ್ರಿಯೆಯಲ್ಲಿ ಬೆಳೆಯಲು ಮಹತ್ವದ ಪಾತ್ರವನ್ನು ವಹಿಸುತ್ತದೆ. ವ್ಯಕ್ತಿಯಲ್ಲಿ ಉತ್ತಮವಾದ ಅಂಶಗಳನ್ನು ಬೆಳೆಸಿ ಸಮಾಜದಲ್ಲಿ ನಿಜಮಾನವನಾಗಿ ಬಾಳುವಲ್ಲಿ ಪ್ರೇರೇಪಿಸುತ್ತದೆ. ಮಾನವೀಯ ಮೌಲ್ಯಗಳಾದ ಪ್ರೀತಿ, ವಿಶ್ವಾಸ, ಅನುಕಂಪ, ದಯೆ, ಕರುಣೆ,

ಸಹಕಾರ, ಸಹಬಾಳ್ವೆ ಮುಂತಾದವುಗಳನ್ನು ಸಿದ್ಧಸುವಂತೆ ಈ ಶಿಕ್ಷಣ ಕ್ರಮ ಮಾಡುತ್ತವೆ. ಇಂತಹ ಬಹುದೊಡ್ಡ ಜ್ಞಾನಶಕ್ತಿಯಾಗಿದ್ದರೂ ಮಾದಿಗ ಸಮುದಾಯಕ್ಕೆ ಯಾವುದೇ ಅಕ್ಷರ ಜ್ಞಾನವಿಲ್ಲದೆ ಒಂದು ಕಡೆ ಬದುಕುವ ಸ್ಥಿತಿ ಇತ್ತು. ಇದರಿಂದ ಹೊರಬರಲು ಸರ್ಕಾರದ ಅನೇಕ ಜಾಗೃತಿ ಕಾರ್ಯಕ್ರಮಗಳು, ಹೊಸ ಶಿಕ್ಷಣ ನೀತಿ ಜಾರಿಗೆ, ಬಿಸಿಯೂಟ ಯೋಜನೆ, ನಲಿ-ಕಲಿ, ರಾತ್ರಿ ಪಾಠಶಾಲೆಯಂಥ ಯೋಜನೆಗಳು ಉಪಕಾರಿಯಾಗಿವೆ. ಇದರಿಂದ ಮಾದಿಗ ಸಮುದಾಯದ ಪ್ರತಿಯೊಬ್ಬರೂ ಶಿಕ್ಷಣವನ್ನು ಕಲಿಯಲು ದಾಪುಗಾಲು ಹಾಕುತ್ತಿದ್ದಾರೆ. ಇವುಗಳ ಮೂಲ ಪ್ರೇರಣೆಯಿಂದ ಈ ಸಮುದಾಯದ ತಂದೆ ತಾಯಿಗಳು ತಮ್ಮ ಮಕ್ಕಳನ್ನು ತಪ್ಪದೇ ಶಾಲೆಗೆ ಕಳುಹಿಸುವ ಪ್ರಯತ್ನ ಮಾಡಬೇಕು. ಹೀಗಾಗಿ ಇವತ್ತಿನ ಮಕ್ಕಳ ಶಿಕ್ಷಣದ ಪ್ರಮಾಣ ಆಧಿಕವಾಗಿದೆ ಎಂದು ಹೇಳಬಹುದು.

ಶೈಕ್ಷಣಿಕವಾಗಿ ಮಾದಿಗ ಸಮುದಾಯದವರು ನಗರ ಪಟ್ಟಣದಲ್ಲಿ ಮಾತ್ರ ಹೆಚ್ಚಿನ ಲಾಭ ಪಡೆಯುತ್ತಿದ್ದಾರೆ. ಹಳ್ಳಿಗಳಲ್ಲಿ ಇನ್ನೂ ಹಳೆಯ ಕಾಲದ ಸಂಪ್ರದಾಯಗಳಿಂದ ಮಕ್ಕಳನ್ನು ಶಾಲೆಗೆ ಕಳುಹಿಸುವುದಿಲ್ಲ. ಅಲ್ಲಿಂದ ಬಂದ ವಿದ್ಯಾರ್ಥಿಗಳನ್ನು ತಳಸಮುದಾಯದ ಹಿನ್ನೆಲೆಯಿಂದ ಬಡತನ ಅನಕ್ಷರತೆ ಸೆಳೆತೆಗೆ ಸಿಕ್ಕು ಶಾಲೆ ಬಿಡುವುದು ಮತ್ತು ಅನುತ್ತೀರ್ಣರಾಗುವುದು ಹೆಚ್ಚು. ಹೀಗಾಗಿ ಬಡತನ, ದಾರಿದ್ರ್ಯ, ಅಜ್ಞಾನ, ಪರಾವಲಂಬನೆ, ಗುಲಾಮತನ, ದಾಸ್ಯ ಪ್ರವೃತ್ತಿ ಹೆಚ್ಚಾಗಿದೆ. ಇವುಗಳನ್ನು ನಿರ್ನಾಮ ಮಾಡಿ ಮೇಲೇಳಲು ಜಾಗೃತಿಗೊಳಿಸುವ ಅವಶ್ಯಕತೆ ಇದೆ. ಶಿಕ್ಷಣದಲ್ಲಿ ಪರಿವರ್ತನೆಗೊಂಡ ಸಮುದಾಯಗಳನ್ನು ನೋಡಿ ಈ ಸಮುದಾಯವು ಶಿಕ್ಷಣದ ಕಡೆ ಗಮನಹರಿಸುತ್ತಿದೆ. ಚಿತ್ರದುರ್ಗ ಜಿಲ್ಲೆಯ ಮಾದಿಗ ಸಮುದಾಯಗಳ ಅಭಿವೃದ್ಧಿಯ ಮೇಲೆ ಎಷ್ಟರಮಟ್ಟಿಗೆ ಪರಿಣಾಮ ಬೀರಿದೆ. ಯಾವ ಕ್ಷೇತ್ರದಲ್ಲಿ ಅಭಿವೃದ್ಧಿ ಸಾಧಿಸಿದೆ. ಯಾವ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ಇರುವ ಬಾಧಕಗಳನ್ನು ಶೋಧಿಸಿ ಅವುಗಳಿಗೆ ಸೂಕ್ತ ಮಾರ್ಗೋಪಾಯಗಳನ್ನು ಕಂಡುಕೊಳ್ಳಬೇಕಾಗಿದೆ.

ಶಿಕ್ಷಣ ಕೇವಲ ಜ್ಞಾನ ಸಂಪತ್ತಿನ ಕೇಂದ್ರವಾಗಿರದೆ ಮಕ್ಕಳಿಗೆ ಭವಿಷ್ಯವನ್ನು ಎದುರಿಸಲು ಅಗತ್ಯವಾದ ಕಲೆ ಮತ್ತು ನೈಪುಣ್ಯತೆ ಹಾಗೂ ಮನೋಭಾವವನ್ನು ಬೆಳೆಸುವ ಕೇಂದ್ರವಾಗಿದೆ. ಮಾದಿಗ ಸಮುದಾಯದ ಸಾಮಾಜೀಕರಣ ಪ್ರಕ್ರಿಯೆಯಲ್ಲಿ ತಮ್ಮ ಪಾರಂಪರಿಕ ಮೌಲ್ಯಗಳು, ಕೌಶಲ್ಯಗಳು ಹಾಗೂ ಸಾಂಸ್ಕೃತಿಕ ವಿಷಯಗಳನ್ನು ಮೌಖಿಕವಾಗಿ ಕುಟುಂಬ ಅಥವಾ ಸಮುದಾಯಗಳ ಮೂಲಕ ತಲೆಮಾರಿನಿಂದ ತಲೆಮಾರಿಗೆ ಅನೌಪಚಾರಿಕವಾಗಿ ಬೆಳೆಸಿಕೊಂಡು ಬಂದಿದೆ. ಶಿಕ್ಷಣದಿಂದ ವ್ಯಕ್ತಿಯಲ್ಲಿ ಆತ್ಮವಿಶ್ವಾಸ ಹೆಚ್ಚುವುದಲ್ಲದೆ ವ್ಯಕ್ತಿಯ ಸಾಮಾಜಿಕ ಪ್ರಗತಿಯು ಆಗುತ್ತದೆ. ಅಭಿವೃದ್ಧಿಗೆ ಶಿಕ್ಷಣ ಒಂದು ಮುಖ್ಯ ಆಧಾರವಾಗಿದ್ದು ಮಾದಿಗ ಸಮುದಾಯದ ಪ್ರಗತಿ ಅವರಿಗೆ ಕೊಡುವ ಶಿಕ್ಷಣದ ಮೇಲೆ ಅವಲಂಬಿತವಾಗಿದೆ. ೬ರಿಂದ ೧೪ ವಯೋಮಾನದ ಎಲ್ಲಾ ಮಕ್ಕಳು ಶಾಲೆಯಲ್ಲಿರಬೇಕು. ಎಲ್ಲ ಮಕ್ಕಳಿಗೂ ಗುಣಾತ್ಮಕ ಶಿಕ್ಷಣ ಸಿಗಬೇಕೆಂಬುದು ಸರಕಾರದ ಸರ್ವಶಿಕ್ಷಣ ಅಭಿಯಾನದ ಗುರಿಯಾಗಿದೆ. ಆದರೂ ಚಿತ್ರದುರ್ಗ ಜಿಲ್ಲೆಯ ಕೆಲವು ಭಾಗದಲ್ಲಿ ವ್ಯಾಪಕವಾಗಿ ಮಾದಿಗ ಸಮುದಾಯದ ಮಕ್ಕಳ ಸಾಕ್ಷರತಾ ಪ್ರಮಾಣವನ್ನು ನೋಡಿದ್ದರೆ ಬಹಳ ಕಡಿಮೆ ಇರುವುದು ಆಶ್ಚರ್ಯವನ್ನುಂಟುಮಾಡುತ್ತದೆ.

ತಾತ್ವಿಕ ವಿಚಾರಕ್ಕೆ ಸಂಬಂಧಪಟ್ಟ ಕೆಲವು ವಿಚಾರಗಳನ್ನು ಚರ್ಚೆ ಮಾಡುವುದರ ಮೂಲಕ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವುದು ಸೂಕ್ತ. ಹಾಗೂ ಕರ್ನಾಟಕದಲ್ಲಿ ಸಾಕ್ಷರತೆ ಚಾರಿತ್ರಿಕ ನೋಟ ಮತ್ತು ಸಮೀಕ್ಷೆಗೊಳಪಡಿಸಿದ ಚಿತ್ರದುರ್ಗ ಜಿಲ್ಲೆಯ ಮಾದಿಗ ಸಮುದಾಯದ ಲಿಂಗವಾರು ಸಾಕ್ಷರರ್ಹರಲ್ಲದವರು ಮತ್ತು ಸಾಕ್ಷರರ್ಹರ ಪ್ರಮಾಣ ತಿಳಿದುಕೊಳ್ಳುವುದು ಅತ್ಯಗತ್ಯ.

ಕೋಷ್ಟಕ: ೭.೧. ಕರ್ನಾಟಕದ ಸಾಕ್ಷರತೆ-ಚಾರಿತ್ರಿಕ ನೋಟ: ೧೯೫೧-೨೦೧೧

ಕ್ರ. ಸಂ	ವರ್ಷಗಳು	ಒಟ್ಟು	ಪುರುಷರು	ಮಹಿಳೆಯರು
೧	೧೯೫೧	೨೦.೬೦	----	---
೨	೧೯೬೧	೨೫.೪೦	೩೬.೨೦	೧೪.೨೦
೩	೧೯೭೧	೩೧.೫೦	೪೧.೬೦	೨೧.೦೦
೪	೧೯೮೧	೩೮.೫೦	೪೮.೮೦	೨೭.೭೦
೫	೨೦೦೧	೬೬.೬೦	೭೬.೧೦	೫೬.೮೭
೬	೨೦೧೧	೭೫.೬೦	೮೨.೮೫	೬೮.೧೩

(ಕೃಪೆ: ಸೆನ್ಸಸ್ ಆಫ್ ಇಂಡಿಯಾ ೨೦೧೧. ತಾತ್ಪೂರ್ತಿಕ ಜನಸಂಖ್ಯಾ ಮೊತ್ತ. ಡೈರೆಕ್ಟೋರೇಟ್ ಆಫ್ ಸೆನ್ಸಸ್ ಆಪರೇಶನ್, ಕರ್ನಾಟಕ, ಭಾರತ ಸರ್ಕಾರ, ಪು; ೨೮)

ಕೋಷ್ಟಕ ೭.೧ರಲ್ಲಿ ಈ ಸಾಕ್ಷರತೆಯ ಪ್ರಮಾಣ ೧೯೮೧ರಿಂದ ೧೯೯೧ರ ಅವಧಿಯಲ್ಲಿ ಶೇಕಡ ೧೭.೫೦ ಅಂಶಗಳಷ್ಟು ಬೆಳವಣಿಗೆ ಕಂಡಿತ್ತು. ಆದರೆ ೧೯೯೧ರಿಂದ ೨೦೦೧ದಶಕದಲ್ಲಿ ಅದರ ಬೆಳವಣಿಗೆ ಪ್ರಮಾಣ ಕೇವಲ ಶೇಕಡ ೧೦.೬೪ರಷ್ಟಾಗಿದೆ. ಮುಂದೆ ೨೦೦೧ರಲ್ಲಿ ಸಾಕ್ಷರತೆಯು ಶೇಕಡ ೬೬.೬೪ರಷ್ಟಾಯಿತು. ಈ ಕಾರಣದಿಂದ ೨೦೦೧ರಿಂದ ೨೦೧೧ರ ಅವಧಿಯಲ್ಲಿ ಅದರ ಬೆಳವಣಿಗೆ ಪ್ರಮಾಣ ಇನ್ನೂ ಕಡಿಮೆ, ಅಂದರೆ ಶೇಕಡ ೮.೯೬ ರಷ್ಟಾಗಿರುವುದು ಕಂಡುಬಂದಿದೆ.

ಜಿಲ್ಲೆಯ ಸಾಕ್ಷರತಾ ವಿವರ (೨೦೧೧ರ ಜನಗಣತಿಯ ಪ್ರಕಾರ)

ಚಿತ್ರದುರ್ಗ ಜಿಲ್ಲೆಯಲ್ಲಿ ಸಾಕ್ಷರತಾ ಪ್ರಮಾಣವನ್ನು ವಿಶ್ಲೇಷಿಸಿದರೆ ೨೦೦೧ರ ಜನಗಣತಿಯ ಪ್ರಕಾರ ಪುರುಷರ ಸಾಕ್ಷರತೆಯ ಪ್ರಮಾಣ ಸ್ತ್ರೀಯರ ಸಾಕ್ಷರತಾ ಪ್ರಮಾಣಕ್ಕಿಂತ ಹೆಚ್ಚು ಇರುವುದು. ೨೦೧೧ ರ ಜನಗಣತಿಯ ವಿಶ್ಲೇಷಣೆ ವರದಿಯಲ್ಲಿ ದಾಖಲಾಗಿರುವುದು. ೨೦೧೧ರ ಜನಗಣತಿಯ ಪ್ರಕಾರವು ಸಹ ಸ್ತ್ರೀಯರ ಸಾಕ್ಷರತಾ ಪ್ರಮಾಣಕ್ಕಿಂತ ಪುರುಷರ ಸಾಕ್ಷರತಾ ಪ್ರಮಾಣ ಹೆಚ್ಚು ಇರುವುದು ಅಂಕಿಅಂಶಗಳಲ್ಲಿ ವ್ಯಕ್ತವಾಗುವುದು. ಇದರ ಪ್ರಮಾಣವನ್ನು ಕೆಳಕಂಡ ಕೋಷ್ಟಕದಲ್ಲಿ ತಿಳಿಸಲಾಗಿದೆ.

ಕೋಷ್ಟಕ: ೭.೨. ಚಿತ್ರದುರ್ಗ ಜಿಲ್ಲೆಯ ತಾಲೂಕುವಾರು ಸಾಕ್ಷರತಾ ವಿವರ (೨೦೧೧ರ ಜನಗಣತಿ)

ಕ್ರ.ಸಂ	ತಾಲೂಕಿನ ಹೆಸರು	ಪುರುಷ	ಮಹಿಳೆ	ಒಟ್ಟು
೧	ಚಳ್ಳಕೆರೆ	೭೭.೮೪	೬೦.೩೪	೬೯.೨೨
೨	ಚಿತ್ರದುರ್ಗ	೮೫.೩೩	೭೨.೫೩	೭೯
೩	ಹಿರಿಯೂರು	೮೧.೩೨	೬೬.೪೧	೭೩.೯೧
೪	ಹೊಳಲ್ಕೆರೆ	೮೩.೨೯	೬೮.೧	೭೫.೭೮
೫	ಹೊಸದುರ್ಗ	೮೧.೨೮	೬೬.೧೧	೭೩.೭೮
೬	ಮೊಳಕಾಲ್ಮೂರು	೭೫.೯೪	೫೫.೦೪	೬೫.೬೯
	ಒಟ್ಟು	**೮೧.೩೭**	**೬೫.೮೮**	**೭೩.೭೧**

(ಕೃಪೆ: ಚಿತ್ರದುರ್ಗ ಜಿಲ್ಲೆಯ ೨೦೧೧ ರ ಜನಗಣತಿಯ ವರದಿ)

ಲಂಬಚಿತ್ರ: ೭.೧. ಚಿತ್ರದುರ್ಗ ಜಿಲ್ಲೆಯ ತಾಲೂಕುವಾರು ಸಾಕ್ಷರತಾ ವಿವರ ೨೦೧೧ ರ ಜನಗಣತಿ



(ಕೃಪೆ: ಚಿತ್ರದುರ್ಗ ಜಿಲ್ಲೆಯ ೨೦೧೧ರ ಜನಗಣತಿಯ ವರದಿ)

ಕೋಷ್ಟಕ ೭.೨ ಮತ್ತು ಲಂಬಚಿತ್ರ ೭.೧ರಲ್ಲಿ ಸಾಕ್ಷರತಾ ಎನ್ನುವುದು ಅಭಿವೃದ್ಧಿ ಸೂಚ್ಯಂಕದಲ್ಲಿ ಒಂದು ಪ್ರಮುಖವಾದ ಅಂಶವೆಂದು ಮತ್ತು ಅಭಿವೃದ್ಧಿಯನ್ನು ಅಳೆಯುವ ಮಾಪನವೆಂದು ಅನೇಕ ಅರ್ಥಶಾಸ್ತ್ರಜ್ಞರು ಮತ್ತು ಜನಸಂಖ್ಯಾ ಶಾಸ್ತ್ರಜ್ಞರು ಅಭಿಪ್ರಾಯಪಡುತ್ತಾರೆ. ಅದೇ ರೀತಿಯಲ್ಲಿ ಚಿತ್ರದುರ್ಗ ಜಿಲ್ಲೆಯಲ್ಲಿ ಸಾಕ್ಷರತಾ ಪ್ರಮಾಣವನ್ನು ವಿಶ್ಲೇಷಣೆ ಮಾಡಿದರೆ ಒಟ್ಟು ಜಿಲ್ಲೆಯ ಸಾಕ್ಷರತಾ ಪ್ರಮಾಣ ಶೇಕಡ ೭೩.೭೧ರಷ್ಟು ಕಂಡುಬಂದಿದೆ. ಅದರಲ್ಲಿ ಪುರುಷರ ಸಾಕ್ಷರತಾ ಪ್ರಮಾಣ ಶೇಕಡ ೮೧.೩೭ರಷ್ಟು ಇದ್ದರೆ, ಮಹಿಳಾ ಸಾಕ್ಷರತಾ ಪ್ರಮಾಣ ಶೇಕಡ ೬೫.೮೮ರಷ್ಟಿರುವುದು ವ್ಯಕ್ತವಾಗುವುದು. ಪುರುಷ ಮತ್ತು ಮಹಿಳೆಯರ ಸಾಕ್ಷರತಾ ಪ್ರಮಾಣದ ನಡುವೆ ಇರುವ ಅಂತರ ಶೇಕಡ ೧೫.೪೯ರಷ್ಟು. ತಾಲೂಕುವಾರು ಸಾಕ್ಷರತಾ ಪ್ರಮಾಣವನ್ನು ಪರಾಮರ್ಶಿಸಿದರೆ ಚಿತ್ರದುರ್ಗ ತಾಲ್ಲೂಕು ಇತರೆ



ತಾಲೂಕುಗಳಿಗೆ ಹೋಲಿಸಿದರೆ ಅತೀ ಹೆಚ್ಚು ಅಂದರೆ ಶೇಕಡ ೭೯ರಷ್ಟು ಸಾಕ್ಷರತಾ ಪ್ರಮಾಣ ಹೊಂದಿದ ತಾಲ್ಲೂಕು ಎಂದು ಮೇಲಿನ ಕೋಷ್ಟಕದಿಂದ ವ್ಯಕ್ತವಾಗುತ್ತದೆ. ಜಿಲ್ಲೆಯಲ್ಲೇ ಅತ್ಯಂತ ಕಡಿಮೆ ಸಾಕ್ಷರತೆ ಹೊಂದಿದ ತಾಲ್ಲೂಕು ಮೊಳಕಾಲ್ಮೂರು. ಶೇಕಡ ೬೫.೭೯ರಷ್ಟು ಸಾಕ್ಷರತಾ ಪ್ರಮಾಣವನ್ನು ಹೊಂದಿ ಹಿಂದುಳಿದಿರುವುದು ದಾಖಲಿಸಿದ ಅಂಕಿಅಂಶಗಳಿಂದ ವ್ಯಕ್ತವಾಗುತ್ತದೆ.

ಕೋಷ್ಟಕ: ೭.೩. ಸಮೀಕ್ಷೆಗೊಳಪಡಿಸಿದ ಚಿತ್ರದುರ್ಗ ಜಿಲ್ಲೆಯ ತಾಲೂಕುವಾರು ಮಾದಿಗ ಸಮುದಾಯದ ಲಿಂಗವಾರು ಸಾಕ್ಷರರ್ಹರಲ್ಲದವರು ಮತ್ತು ಸಾಕ್ಷರರ್ಹರ ಪ್ರಮಾಣ

ತಾಲೂಕುಗಳು	ಕುಟುಂಬಗಳು	೦–೫ ಸಾಕ್ಷರರ್ಹರಲ್ಲದವರು			೬–೬೧ ಸಾಕ್ಷರರ್ಹರು		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
ಚಳ್ಳಕೆರೆ	೧೨೦	೨೩	೨೩	೪೬	೨೮೪	೨೪೩	೫೨೭
ಚಿತ್ರದುರ್ಗ	೧೨೦	೨೩	೧೯	೪೨	೨೯೬	೨೬೪	೫೬೦
ಮೊಳಕಾಲ್ಮೂರು	೧೨೦	೨೬	೨೮	೫೪	೨೯೩	೩೧೧	೬೦೪
ಹಿರಿಯೂರು	೧೨೦	೯	೭	೧೬	೨೬೪	೨೪೯	೫೧೩
ಹೊಳಲ್ಕೆರೆ	೧೨೦	೨೪	೧೬	೪೦	೨೭೨	೨೩೮	೫೧೦
ಹೊಸದುರ್ಗ	೧೨೦	೨೬	೨೬	೫೨	೨೮೮	೨೬೨	೫೫೦
ಒಟ್ಟು	೭೨೦	೧೩೧	೧೧೯	೨೫೦	೧೬೯೭	೧೫೬೭	೩೨೬೪

ಕೋಷ್ಟಕ ಸಂಖ್ಯೆ ೭.೩ರಲ್ಲಿ ಲಿಂಗಕ್ಕನುಗುಣವಾಗಿ ತಾಲೂಕುವಾರು ಸಾಕ್ಷರರ್ಹರಲ್ಲದವರು ಮತ್ತು ಸಾಕ್ಷರರ್ಹರ ಪ್ರಮಾಣವನ್ನು ಕೊಡಲಾಗಿದೆ. ಇಲ್ಲಿ ಪ್ರತಿಯೊಂದು ತಾಲೂಕುಗಳಲ್ಲಿ ಗಂಡು ಮಕ್ಕಳು ೦–೫ ಸಾಕ್ಷರರ್ಹರಲ್ಲದವರು ಪ್ರಮಾಣ ೧೩೧ರಷ್ಟು, ಹೆಣ್ಣು ಮಕ್ಕಳ ಪ್ರಮಾಣ ೧೧೯ರಷ್ಟು, ಗಂಡು ಮಕ್ಕಳು ಮತ್ತು ಹೆಣ್ಣು ಮಕ್ಕಳ ಒಟ್ಟು ಪ್ರಮಾಣ ೨೫೦ರಷ್ಟು ಇರುವುದನ್ನು ನೋಡಬಹುದು. ಮಾದಿಗ ಸಮುದಾಯದ ಲಿಂಗಕ್ಕನುಗುಣವಾಗಿ ತಾಲೂಕುವಾರು ೬–೬೧ ಸಾಕ್ಷರರ್ಹರು ಪುರುಷರ ಪ್ರಮಾಣ ೧೬೯೭ರಷ್ಟು, ಮಹಿಳೆಯರ ಪ್ರಮಾಣ ೧೫೬೭ರಷ್ಟು, ಪುರುಷ ಮತ್ತು ಮಹಿಳೆಯರ ಒಟ್ಟು ಪ್ರಮಾಣ ೩೨೬೪ರಷ್ಟು ಇರುವುದು ಕಂಡುಬರುತ್ತದೆ. ಸಾಕ್ಷರರ್ಹರಲ್ಲದವರು ಮತ್ತು ಸಾಕ್ಷರರ್ಹರ ಪ್ರಮಾಣವನ್ನು ಅವಲೋಕಿಸಿದಾಗ ಮಹಿಳೆಯರ ಪ್ರಮಾಣ ಕಡಿಮೆ ಇರುವುದು ಕಂಡುಬರುತ್ತದೆ.

ಕೋಷ್ಟಕ: ೭.೪. ಸಮೀಕ್ಷೆಗೊಳಪಡಿಸಿದ ಚಿತ್ರದುರ್ಗ ಜಿಲ್ಲೆಯ ಮಾದಿಗ ಸಮುದಾಯದ ತಾಲೂಕುವಾರು ಲಿಂಗವಾರು ಸಾಕ್ಷರಸ್ಥರು ಮತ್ತು ನಿರಕ್ಷರಿಗಳು

ತಾಲೂಕುಗಳು	ಕುಟುಂಬಗಳು	ಸಾಕ್ಷರರ್ಹರು			ಸಾಕ್ಷರಸ್ಥರು			ನಿರಕ್ಷರಿಗಳು		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
ಚಳ್ಳಕೆರೆ	೧೨೦	೨೮೪	೨೪೩	೫೨೭	೧೯೩	೧೨೦	೩೧೩	೯೧	೧೨೩	೨೧೪
ಚಿತ್ರದುರ್ಗ	೧೨೦	೨೯೬	೨೬೪	೫೬೦	೧೭೯	೧೩೪	೩೧೩	೧೧೭	೧೩೦	೨೪೭
ಮೊಳಕಾಲ್ಮೂರು	೧೨೦	೨೯೩	೩೧೧	೬೦೪	೨೦೬	೧೬೦	೩೬೬	೮೭	೧೫೧	೨೩೮
ಹಿರಿಯೂರು	೧೨೦	೨೬೪	೨೪೯	೫೧೩	೨೨೮	೧೭೨	೪೦೦	೩೬	೭೭	೧೧೩
ಹೊಳಲ್ಕೆರೆ	೧೨೦	೨೭೨	೨೩೮	೫೧೦	೨೧೦	೧೭೨	೩೮೨	೬೨	೬೬	೧೨೮
ಹೊಸದುರ್ಗ	೧೨೦	೨೮೮	೨೬೨	೫೫೦	೧೫೯	೧೨೭	೨೮೬	೧೨೯	೧೩೫	೨೬೪
ಒಟ್ಟು	೭೨೦	೧೬೯೭	೧೫೬೭	೩೨೬೪	೧೧೭೫	೮೮೫	೨೦೬೦	೫೨೨	೬೮೨	೧೨೦೪

ಕೋಷ್ಟಕ ೭.೪ರಲ್ಲಿ ಅಧ್ಯಯನ ಪ್ರದೇಶದ ಕುಟುಂಬದ ಸದಸ್ಯರ ಶೈಕ್ಷಣಿಕ ಸ್ಥಿತಿಯನ್ನು ತಾಲೂಕುವಾರು ವರ್ಗೀಕರಣ ಮಾಡಲಾಗಿದೆ. ಇದರ ಪ್ರಕಾರ ಚಿತ್ರದುರ್ಗ ಜಿಲ್ಲೆಯಲ್ಲಿ ಮಾದಿಗ ಸಮುದಾಯದ ಸಾಕ್ಷರರ್ಹರು, ಸಾಕ್ಷರಸ್ಥರು ಹಾಗೂ ನಿರಕ್ಷರಿಗಳ ಪ್ರಮಾಣವನ್ನು ಗುರುತಿಸಲಾಗಿದೆ. ಇದರಲ್ಲಿ ಸಾಕ್ಷರರ್ಹ ಪುರುಷರ ಪ್ರಮಾಣ ೧೬೯೭ರಷ್ಟು, ಮಹಿಳೆಯರ ಪ್ರಮಾಣ ೧೫೬೭ರಷ್ಟು, ಒಟ್ಟು ಪುರುಷರ ಮತ್ತು ಮಹಿಳೆಯರ ಪ್ರಮಾಣ ೩೨೬೪ರಷ್ಟು ಇರುವುದನ್ನು ಕಾಣಬಹುದು. ಸಾಕ್ಷರಸ್ಥ ಪುರುಷರ ಪ್ರಮಾಣ ೧೧೭೫ರಷ್ಟು, ಮಹಿಳೆಯರ ಪ್ರಮಾಣ ೮೮೫ರಷ್ಟು, ಒಟ್ಟು ಪರುಷ ಮತ್ತು ಮಹಿಳೆಯರ ಪ್ರಮಾಣ ೨೦೬೦ರಷ್ಟು ಇದೆ. ನಿರಕ್ಷರಿಗಳು ಅಥವಾ ಅಕ್ಷರಜ್ಞಾನ ಇಲ್ಲದವರು ಪುರುಷರ ಪ್ರಮಾಣ ೫೨೨ರಷ್ಟು, ಮಹಿಳೆಯರ ಪ್ರಮಾಣ ೬೮೨ರಷ್ಟು, ಒಟ್ಟು ಪುರುಷರ ಮತ್ತು ಮಹಿಳೆಯರ ಪ್ರಮಾಣ ೧೨೦೪ರಷ್ಟು ಇರುವುದು ಕಾಣಬಹುದು. ಈ ಆರು ತಾಲೂಕುಗಳಲ್ಲಿ ಬಹುಮುಖ್ಯವಾಗಿ ಸರ್ಕಾರದ ಅನೇಕ ಸೌಲಭ್ಯಗಳ ನಡುವೆಯೂ ಈ ಸಮುದಾಯದ ಮಹಿಳೆಯರ ಶಿಕ್ಷಣ ಪ್ರಮಾಣ ಅತ್ಯಂತ ಕಡಿಮೆ ಮಟ್ಟದಲ್ಲಿ ಇರುವುದು ಕಳವಳಕಾರಿಯಾಗಿದೆ. ಈ ನಿಟ್ಟಿನಲ್ಲಿ ಸಂಬಂಧಪಟ್ಟ ಇಲಾಖೆ ಕಾರ್ಯಪ್ರವೃತ್ತರಾಗಬೇಕು ಹಾಗೂ ಮಹಿಳೆಯರ ಶಿಕ್ಷಣ ಮಟ್ಟ ಸುಧಾರಿಸಲು ಕ್ರಮ ಕೈಗೂಳ್ಳುವುದು ಅವಶ್ಯಕವಾಗಿದೆ.

ಲಂಬಚಿತ್ರ: ೭.೨. ಚಿತ್ರದುರ್ಗ ಜಿಲ್ಲೆಯ ಮಾದಿಗ ಸಮುದಾಯದ ತಾಲೂಕುವಾರು, ಲಿಂಗವಾರು ಸಾಕ್ಷರಸ್ಥರು ಮತ್ತು ನಿರಕ್ಷರಿಗಳು



	ಸಾಕ್ಷರಸ್ಥರು			ನಿರಕ್ಷರಿಗಳು		
	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
ಚಳ್ಳಕೆರೆ	೧೯೩	೧೨೦	೩೧೩	೯೧	೧೨೩	೨೧೪
ಚಿತ್ರದುರ್ಗ	೧೭೯	೧೩೪	೩೧೩	೧೧೭	೧೩೦	೨೪೭
ಮೊಳಕಾಲ್ಮೂರು	೨೦೬	೧೬೦	೩೬೬	೮೭	೧೫೧	೨೩೮
ಹಿರಿಯೂರು	೨೨೮	೧೭೨	೪೦೦	೩೬	೭೭	೧೧೩
ಹೊಸದುರ್ಗ	೨೧೦	೧೭೨	೩೮೨	೬೨	೬೬	೧೨೮

ಲಂಬಚಿತ್ರ ೭.೨ರಲ್ಲಿ ಅಧ್ಯಯನ ಪ್ರದೇಶದ ಕುಟುಂಬದ ಸದಸ್ಯರ ಶೈಕ್ಷಣಿಕ ಸ್ಥಿತಿಯನ್ನು ತಾಲೂಕುವಾರು ವರ್ಗೀಕರಣ ಮಾಡಲಾಗಿದೆ. ಇದರ ಪ್ರಕಾರ ಚಿತ್ರದುರ್ಗ ಜಿಲ್ಲೆಯ ಮಾದಿಗ



ಸಮುದಾಯದ ಸಾಕ್ಷರಸ್ಥರು, ಹಾಗೂ ನಿರಕ್ಷರಿಗಳ ಪ್ರಮಾಣವನ್ನು ಗುರುತಿಸಲಾಗಿದೆ. ಇದರಲ್ಲಿ ಸಾಕ್ಷರಸ್ಥರು ಚಳ್ಳಕೆರೆ ತಾಲೂಕಿನಲ್ಲಿ ಒಟ್ಟು ಪುರುಷ ಮತ್ತು ಮಹಿಳೆಯರ ಪ್ರಮಾಣ ಶೇಕಡ ೧೭.೬೪ರಷ್ಟು, ಚಿತ್ರದುರ್ಗ ತಾಲೂಕಿನಲ್ಲಿ ಒಟ್ಟು ಪುರುಷ ಮತ್ತು ಮಹಿಳೆಯರ ಪ್ರಮಾಣ ಶೇಕಡ ೧೭.೬೪ರಷ್ಟು ಇರುವುದು ಕಂಡುಬರುತ್ತದೆ. ಮೊಳಕಾಲ್ಮೂರು ತಾಲೂಕಿನಲ್ಲಿ ಒಟ್ಟು ಪುರುಷ ಮತ್ತು ಮಹಿಳೆಯರ ಪ್ರಮಾಣ ಶೇಕಡ ೨೦.೬೩ರಷ್ಟು ಇರುವುದು ಕಂಡುಬರುತ್ತದೆ. ಹಿರಿಯೂರು ತಾಲೂಕಿನಲ್ಲಿ ಒಟ್ಟು ಪುರುಷ ಮತ್ತು ಮಹಿಳೆಯರ ಪ್ರಮಾಣ ಶೇಕಡ ೨೨.೫೪ರಷ್ಟು ಇರುವುದು ಕಂಡುಬರುತ್ತದೆ. ಹೊಳಲ್ಕೆರೆ ತಾಲೂಕಿನಲ್ಲಿ ಒಟ್ಟು ಪುರುಷ ಮತ್ತು ಮಹಿಳೆಯರ ಪ್ರಮಾಣ ಶೇಕಡ ೨೧.೫೩ರಷ್ಟು ಇರುವುದು ಕಂಡುಬರುತ್ತದೆ.

ನಿರಕ್ಷರಿಗಳು ಚಳ್ಳಕೆರೆ ತಾಲೂಕಿನಲ್ಲಿ ಒಟ್ಟು ಪುರುಷ ಮತ್ತು ಮಹಿಳೆಯರ ಪ್ರಮಾಣ ಶೇಕಡ ೨೨.೭೬೫ರಷ್ಟಿದೆ. ಚಿತ್ರದುರ್ಗ ತಾಲೂಕಿನಲ್ಲಿ ಒಟ್ಟು ಪುರುಷ ಮತ್ತು ಮಹಿಳೆಯರ ಪ್ರಮಾಣ ಶೇಕಡ ೨೬.೨೭೬ರಷ್ಟು ಇರುವುದು ಕಂಡುಬರುತ್ತದೆ. ಮೊಳಕಾಲ್ಮೂರು ತಾಲೂಕಿನಲ್ಲಿ ಒಟ್ಟು ಪುರುಷ ಮತ್ತು ಮಹಿಳೆಯರ ಪ್ರಮಾಣ ಶೇಕಡ ೨೫.೩೧೯ರಷ್ಟು ಇರುವುದು ಕಂಡುಬರುತ್ತದೆ. ಹಿರಿಯೂರು ತಾಲೂಕಿನಲ್ಲಿ ಒಟ್ಟು ಪುರುಷ ಮತ್ತು ಮಹಿಳೆಯರ ಪ್ರಮಾಣ ಶೇಕಡ ೧೨.೦೨೦ರಷ್ಟು ಇರುವುದು ಕಂಡುಬರುತ್ತದೆ. ಹೊಳಲ್ಕೆರೆ ತಾಲೂಕಿನಲ್ಲಿ ಒಟ್ಟು ಪುರುಷ ಮತ್ತು ಮಹಿಳೆಯರ ಪ್ರಮಾಣ ಶೇಕಡ ೧೩.೬೧೭ರಷ್ಟು ಇರುವುದು ಕಂಡುಬರುತ್ತದೆ.

ಈ ಆರು ತಾಲೂಕುಗಳಲ್ಲಿ ಬಹುಮುಖ್ಯವಾಗಿ ಸರ್ಕಾರದ ಅನೇಕ ಸೌಲಭ್ಯಗಳ ನಡುವೆಯೂ ಈ ಸಮುದಾಯದ ಮಹಿಳೆಯರ ಶಿಕ್ಷಣ ಸಾಕ್ಷರಸ್ಥರು ಸ್ವಲ್ಪ ಕಡಿಮೆ ಮಟ್ಟದಲ್ಲಿ ಇರುವುದನ್ನು ಗಮನಿಸಬಹುದು. ಈ ಸಮುದಾಯದಲ್ಲಿ ಲಿಂಗಭೇದವಿಲ್ಲದೆ ಪ್ರತಿಯೊಬ್ಬರನ್ನೂ ಸಾಕ್ಷರರನ್ನಾಗಿಸುವ ಕಾರ್ಯಕ್ರಮ ಅತ್ಯಂತ ತ್ವರಿತ ಗತಿಯಲ್ಲಿ ಆಗಬೇಕಾಗಿದೆ.

೭.೧ ಶಿಕ್ಷಣದ ಸ್ವರೂಪ

ಶಿಕ್ಷಣ ಎಂದರೆ ಸಾಮಾನ್ಯವಾಗಿ ಹೇಳುವುದಾದರೆ ಸದೃಢವಾದ ದೇಹದಲ್ಲಿ ಸದೃಢವಾದ ಮನಸ್ಸನ್ನು ಬಿಂಬಿಸುವುದು ಎಂದರ್ಥ. ಡಾ ರಾಧಾಕೃಷ್ಣನ್ ಅವರು "ಶಿಕ್ಷಣದ ಬಗಗೆ ತುಂಬಾ ಸುಂದರವಾಗಿ ಹೇಳಿದ್ದಾರೆ. ಮಕ್ಕಳನ್ನು ಮಾನವರನ್ನಾಗಿ ಮಾಡಿ, ನಾಗರಿಕರನ್ನಾಗಿ ಮಾಡಿ ಇತರರೊಂದಿಗೆ ಘನತೆ, ಗೌರವದಿಂದ ವರ್ತಿಸಲು ನೆರವಾಗುವ ಕ್ರಿಯೆ ಶಿಕ್ಷಣ" ಎಂದಿರುವರು. ರಾಧಾಕೃಷ್ಣನ್ ಅವರ ಮಾತು ಅಕ್ಷರಶಃ ಸತ್ಯ. ಯಾಕೆಂದರೆ ಇಂದಿನ ಸ್ಪರ್ಧಾತ್ಮಕ ಪ್ರಪಂಚದಲ್ಲಿ ಒಬ್ಬ ವ್ಯಕ್ತಿ ಬದುಕಲು ಅರ್ಹನೆನಿಸಿಕೊಳ್ಳಬೇಕಾದರೆ ಅವನಿಗಿರಬೇಕಾದ ಪ್ರಮುಖವಾದ ಅರ್ಹತೆ ಎಂದರೆ ಶಿಕ್ಷಣ. ಶಿಕ್ಷಣ ಇಂದು ಅಂತಸ್ತು ಪಾತ್ರಗಳನ್ನು ನಿರ್ಧರಿಸುವಂತಹ ಅತಿ ಪ್ರಮುಖವಾದ ಸಂಗತಿಯಾಗಿ ಕೆಲಸ ಮಾಡುತ್ತದೆ. ಯಾವುದೇ ಒಬ್ಬ ವ್ಯಕ್ತಿಯು ಹುಟ್ಟಿದಾಗಲೇ ಒಳ್ಳೆಯವನಾಗಲೀ,

ಕೆಟ್ಟವನಾಗಲೀ ಇರುವುದಿಲ್ಲ. ಆತ ಬೆಳೆಯುತ್ತಾ ಹೋದಂತೆ ಪಡೆದ ಶಿಕ್ಷಣ, ಸಹವಾಸ, ಸಂಸ್ಕಾರಗಳ ನೆಲೆಯಲ್ಲಿ ಶ್ರೇಷ್ಠ-ಕನಿಷ್ಠ ಎಂದು ಗುರುತಿಸಿಕೊಳ್ಳುತ್ತಾನೆ.

ಚಾರಿತ್ರ್ಯ ನಿರ್ಮಾಣದಲ್ಲಿ ಶಿಕ್ಷಣದ ಪಾತ್ರ ಅಮೋಘವಾದುದು. ಹಿಂದಿನ ಕಾಲದಲ್ಲಿ ಅನೌಪಚಾರಿಕ ಶಿಕ್ಷಣದಿಂದಾಗಿ ಪ್ರತಿಯೊಬ್ಬ ವ್ಯಕ್ತಿಯು ತನ್ನ ಕುಟುಂಬದ ಜಾತಿಯಾಧಾರಿತ ಉದ್ಯೋಗವನ್ನು ಅನುಸರಿಸಿಕೊಂಡು ಬರುತ್ತಿದ್ದ. ಅದರಲ್ಲಿ ಲಾಭ ಇದೆಯೊ ಇಲ್ಲವೊ ಎಂಬುದು ಮುಖ್ಯವಾಗಿರಲಿಲ್ಲ. ಬದಲಾಗಿ ಅದು ಕುಟುಂಬದ ಪಾರಂಪರಿಕ ಉದ್ಯೋಗವೆಂದೇ ಪರಿಗಣಿತವಾಗುತ್ತಿತ್ತು. ಇಲ್ಲಿ ಅನೌಪಚಾರಿಕ ಶಿಕ್ಷಣ ಆ ಕುಟುಂಬದ ವೃತ್ತಿ ತರಬೇತಿಯ ಹಿನ್ನೆಲೆಯಲ್ಲಿ ಸಹಾಯಕವಾಗಿ ಕೆಲಸ ಮಾಡಿದರೆ ಅವರು ಯಾವ ಉದ್ಯೋಗ ಮಾಡಬೇಕು ಎಂಬುದು ಜಾತಿಯಧಾರಿತವಾಗಿ ನಿರ್ಧಾರವಾಗಿರುತ್ತಿತ್ತು. ಹುಟ್ಟಿನೊಂದಿಗೆ ಬಂದ ಅಂತಸ್ತುಗಳೇ ತುಂಬಾ ಪ್ರಾಮುಖ್ಯವಾಗಿದ್ದವು. ಸಾಮರ್ಥ್ಯದಿಂದ ಗಳಿಸಿದ ಅಂತಸ್ತುಗಳಿಗೆ ಯಾರೂ ಅಷ್ಟೊಂದು ಪ್ರಾಧಾನ್ಯತೆ ಕೊಡುತ್ತಿರಲಿಲ್ಲ. ಕಲಿಸುವವರ ಹಾಗೂ ಕಲಿಯುವವರ ಸ್ಥಾನಮಾನಗಳು ಸಾಂಪ್ರದಾಯಿಕವಾಗಿಯೇ ನಿರ್ಧರಿಸಲ್ಪಡುತ್ತಿದ್ದವು. ಗುರುಕುಲ ಮಾದರಿಯ ಶಿಕ್ಷಣ ಪದ್ಧತಿಯಲ್ಲಂತೂ ಮಾದಿಗ ಸಮುದಾಯದವರಿಗೆ ಖಡಾಖಂಡಿತವಾಗಿ ಶಿಕ್ಷಣವನ್ನು ನಿರಾಕರಿಸಲಾಗುತ್ತಿತ್ತು.

ಆಧುನಿಕ ಸಮಾಜದಲ್ಲಿಯ ಶಿಕ್ಷಣವು ಮಾದಿಗ ಸಮುದಾಯದಲ್ಲಿ ಅನೇಕ ರೀತಿಯ ಬದಲಾವಣೆಗಳಿಗೆ ಅವಕಾಶ ಮಾಡಿಕೊಟ್ಟಿದೆ. ಈ ಬದಲಾವಣೆ ಕೇವಲ ಪೂರ್ವಾತ್ಯ ಸಮಾಜಕ್ಕೆ ಮಾತ್ರ ಸೀಮಿತವಾಗಿರದೇ ಪೌರ್ವಾತ್ಯ ಸಮಾಜಗಳಿಗೆ ಕೂಡ ಇದು ಕಾರಣವಾಗಿದೆ. ಹಿಂದೆ ಶಿಕ್ಷಣವೆಂಬುದು ಕೇವಲ ಮೇಲ್ಜಾತಿಯವರ ಸ್ವತ್ತಾಗಿತ್ತು. ಆದರೆ ಸ್ವಾತಂತ್ರ್ಯ ಪೂರ್ವದಲ್ಲಿ ಈ ಸಮುದಾಯದವರಿಗೆ ಹಲವಾರು ಮೂಢನಂಬಿಕೆಗಳನ್ನು ಅಂಧಾನುಕರಣೆಗಳನ್ನು, ಹೆಣ್ಣು ಶಿಶುಹತ್ಯೆ, ಸತಿಸಹಗಮನದಂತಹ ಅರ್ಥವಿಲ್ಲದ ಪದ್ಧತಿಗಳನ್ನು ಅನುಸರಿಸಿಕೊಂಡು ಬಂದಿದ್ದರು. ಮೊದಲು ಸ್ತ್ರಿ ಕೇವಲ ಅಡುಗೆ ಮನೆಯ ನಾಲ್ಕು ಗೋಡೆಗೆ ಸೀಮಿತಳಾಗಿ ಪುರುಷನ ಮೇಲೆ ಸಂಪೂರ್ಣವಾಗಿ ಅವಲಂಬಿತಳಾಗಿ ಜೀವನ ಸಾಗಿಸಬೇಕಿತ್ತು. ಕಾಲನಂತರದಲ್ಲಿ ಶಿಕ್ಷಣವು ಅವರಲ್ಲಿ ವೈಚಾರಿಕ ಪ್ರಜ್ಞೆಯನ್ನು ಬೆಳೆಸಿ ಸ್ವತಂತ್ರವಾಗಿ ಆಲೋಚಿಸುವಂತೆ ಮಾಡಿತು. ಇಂದು ಸ್ತ್ರೀಯರು ಕೂಡ ಶಿಕ್ಷಣವನ್ನು ಪಡೆದು, ಉದ್ಯೋಗವನ್ನು ಹೊಂದಿ ಪುರುಷನಿಗೆ ಸರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಆರ್ಥಿಕ ಸ್ವಾವಲಂಬನೆಯನ್ನು ಹೊಂದಿದ್ದಾರೆ. ಅವರ ಅಂತಸ್ತಿನಲ್ಲಾದ ಈ ಬದಲಾವಣೆಗೆ ಶಿಕ್ಷಣವೇ ಕಾರಣೀಭೂತವಾಗಿದೆ.

ಶಿಕ್ಷಣ ಪದ್ಧತಿಯು ಗ್ರಾಮೀಣರ ಬದುಕಿನಲ್ಲಿಯೂ ಅನೇಕ ತೆರನಾದ ಬದಲಾವಣೆಗಳನ್ನು ತಂದಿದೆ. ಗ್ರಾಮೀಣ ಜನರು ಶಿಕ್ಷಣವನ್ನು ಪಡೆಯಲು ನಗರಗಳಿಗೆ ಹೋಗಬೇಕಾಗಿತ್ತು. ಇಂದು ಗ್ರಾಮೀಣ ಪ್ರದೇಶದಲ್ಲಿ ಪ್ರಾಥಮಿಕ, ಮಾಧ್ಯಮಿಕ, ಪದವಿ ಪೂರ್ವ ಕಾಲೇಜು, ಪದವಿ ಕಾಲೇಜು ಇಂತಹ ಉನ್ನತ ಶಿಕ್ಷಣದ ಸೌಲಭ್ಯಗಳು ಸಿಗುತ್ತಿವೆ. ಶಿಕ್ಷಣದಿಂದ ಮಾದಿಗ ಸಮುದಾಯದ ಜನರ

ಜೀವನ ವಿಧಾನದಲ್ಲಿ ಇಂದು ಸಾಕಷ್ಟು ಬದಲಾವಣೆಯನ್ನು ನಾವು ಕಾಣಬಹುದಾಗಿದೆ. ಅವರ ವೇಷಭೂಷಣ, ಊಟೋಪಚಾರಗಳಲ್ಲಿ ಅನೇಕ ಬದಲಾವಣೆಗಳಾಗಿವೆ.

ಹಿಂದೂ ಸಮಾಜದಲ್ಲಿ ಶಿಕ್ಷಣದ ಮೇಲೆ ನಿರ್ಬಂಧವಿದ್ದುದರಿಂದ ಉದ್ಯೋಗಗಳಲ್ಲಿ ಯಾವುದೇ ರೀತಿಯ ಚಲನೆಯಾಗಲಿ ಸಾಧ್ಯವಾಗಿರಲಿಲ್ಲ. ಇಂದು ನಗರೀಕರಣ, ಕೈಗಾರಿಕರಣ, ಖಾಸಗಿಕರಣದಿಂದಾಗಿ ಶಿಕ್ಷಣದಲ್ಲಿ ವೈವಿದ್ಯತೆ ಹೆಚ್ಚಾಗಿರುವುದಲ್ಲದೇ ಯಾವುದೇ ಜಾತಿ ವ್ಯಕ್ತಿ ಯಾವುದೇ ಉದ್ಯೋಗವನ್ನು ಹೊಂದಬಹುದಾಗಿದೆ ಮತ್ತು ಸಾಮಾಜಿಕ ಏಣಿಶ್ರೇಣಿಯಲ್ಲಿ ಯಾವುದೇ ಅಂತಸ್ತನ್ನು ಪಡೆಯಬಹುದಾಗಿದೆ. ಇದಕ್ಕೇ ಪೂರಕವಾಗಿ ಸಮಾಜದಲ್ಲಿ ನಿರ್ಬಂಧವಿಲ್ಲದೇ ಬದುಕುವ ಮಹಾದೊಡ್ಡ ಕೊಡುಗೆಯನ್ನು ಬಾಬಾ ಸಾಹೇಬರು ಸಂವಿಧಾನದ ಮೂಲಕ ಕೊಡಮಾಡಿದ್ದಾರೆ.

ಹಿಂದೆ ಗ್ರಾಮೀಣ ಸಮಾಜದಲ್ಲಿ ಉದ್ಯೋಗದ ಆಯ್ಕೆ ಸಾಧ್ಯವಿರಲಿಲ್ಲ. ಪ್ರತಿ ಜಾತಿಯೂ ತನ್ನದೇ ಆದ ಜಾತಿಯ ಕುಲಕಸುಬನ್ನೇ ಅನುಸರಿಸಬೇಕಾಗಿತ್ತು. ಹಾಗೆಯೇ ಭೂ ಒಡೆತನದಲ್ಲಿಯೂ ಬದಲಾವಣೆಯಾಗಿದೆ. ಸರ್ಕಾರ ಜಮೀನ್ದಾರಿ ಪದ್ಧತಿಯನ್ನು ರದ್ದುಮಾಡಿ, ಭೂ ಸುಧಾರಣಾ ಕಾಯಿದೆಯನ್ನು ಜಾರಿ ಮಾಡಿದ್ದರಿಂದ ತಮ್ಮ ಕುಲ ಕಸುಬುಗಳ ಜೊತೆಗೆ ಭೂರಹಿತ ಕೃಷಿಕಾರ್ಮಿಕರಾಗಿ ಮತ್ತು ಗೇಣಿದಾರರಾಗಿ ದುಡಿಯುತ್ತಿದ್ದ ಅನೇಕ ಮಾದಿಗ ಸಮುದಾಯದ ಜನರು ಸ್ವಂತ ಭೂಮಿಯನ್ನು ಹೊಂದಿ ವ್ಯವಸಾಯಗಾರರಾಗಿದ್ದಾರೆ.


ಈ ಸಮುದಾಯಗಳ ತಂದೆ ತಾಯಿಗಳಿಗೆ ಶಿಕ್ಷಣದ ಬಗ್ಗೆ ಅರಿವು ಮೂಡಿದ್ದು ತಮ್ಮ ಮಕ್ಕಳನ್ನು ಹತ್ತಿರದ ಶಾಲಾ ಕಾಲೇಜುಗಳಿಗೆ ಕಳುಹಿಸುತ್ತಿದ್ದಾರೆ. ಮಕ್ಕಳನ್ನು ವಿದ್ಯಾವಂತರನ್ನಾಗಿಸುತ್ತಿದ್ದಾರೆ. ಆ ಮೂಲಕ ಸಮಾಜದಲ್ಲಿ ತಮ್ಮ ಸಾಮಾಜಿಕ ಅಂತಸ್ತನ್ನು ಹೆಚ್ಚಿಸಿಕೊಂಡಿದ್ದಾರೆ. ಕೆಳಅಂತಸ್ತಿನಿಂದ ಮಧ್ಯಮ ಅಂತಸ್ತನ್ನು ಪಡೆಯಲು ಸಫಲರಾಗಿದ್ದಾರೆ.

ನಗರ ಪ್ರದೇಶಗಳಿಗೆ ಉದ್ಯೋಗಗಳನ್ನು ಹುಡುಕಿಕೊಂಡು ಬಂದ ಈ ಸಮುದಾಯದ ಮೊದಲ ತಲೆಮಾರಿನ ಜನರು ಅವಿದ್ಯಾವಂತರಾಗಿದ್ದುದರಿಂದ ಅಸಂಘಟಿತ ಕ್ಷೇತ್ರಗಳಲ್ಲಿ ದಿನಗೂಲಿ ಕಾರ್ಮಿಕರಾಗಿ ದುಡಿಯುತ್ತಿದ್ದರು. ಆದರೆ ಎರಡನೆ ಮತ್ತು ಮೂರನೆಯ ತಲೆಮಾರಿನವರಲ್ಲಿ ಹೆಚ್ಚಿನ ಜನ ವಿದ್ಯಾವಂತರಾಗಿದ್ದಾರೆ. ಈ ಕುಟುಂಬಗಳಿಂದ ಬಂದ ಯುವಕರು ಸರ್ಕಾರದ ಎಲ್ಲಾ ಸೌಲಭ್ಯಗಳನ್ನು ಪಡೆದುಕೊಳ್ಳಲು ಸಮರ್ಥರಾಗಿರುವುದಲ್ಲದೆ ಇದರ ಮೂಲಕ ಸಾಮಾಜಿಕ, ಆರ್ಥಿಕ ಬದಲಾವಣೆಗೆ ಕಾರಣರಾಗಿದ್ದಾರೆ. ಇಂದು ಮಾದಿಗ ಸಮುದಾಯದ ಯುವಕರು ಶಿಕ್ಷಣದ ಎಲ್ಲಾ ಹಂತಗಳಲ್ಲೂ ಮತ್ತು ಉದ್ಯೋಗ ಕ್ಷೇತ್ರಗಳಲ್ಲೂ ಕಾಣಸಿಗುತ್ತಾರೆ. ಉನ್ನತ ಶಿಕ್ಷಣಗಳಾದ ವೈದ್ಯಕೀಯ, ಇಂಜಿಯರಿಂಗ್, ತಂತ್ರಜ್ಞಾನ ಮತ್ತು ಭಾರತದ ಆಡಳಿತ ಸೇವೆಗಳಂಥ ಉನ್ನತ ಉದ್ಯೋಗದಲ್ಲಿದ್ದಾರೆ. ಮಾದಿಗ ಸಮುದಾಯದ ಅನೇಕ ಜನರು ಉನ್ನತ ಹುದ್ದೆಗಳಲ್ಲಿದ್ದಾರೆ. ಹಾಗೆಯೇ ಆ ಹುದ್ದೆಗಳಲ್ಲಿ ಸಮರ್ಥರಾಗಿ ಹಾಗೂ ದಕ್ಷತೆಯಿಂದ ಕಾರ್ಯನಿರ್ವಹಿಸಿ ಇತರರಿಗೆ ಮಾದರಿಯಾಗಿದ್ದಾರೆ.

ಕೋಷ್ಟಕ: ೭.೫. ಸಮೀಕ್ಷೆಗೊಳಪಡಿಸಿದ ಚಿತ್ರದುರ್ಗ ಜಿಲ್ಲೆಯ ಮಾದಿಗ ಸಮುದಾಯದ ತಾಲೂಕುವಾರು ಲಿಂಗವಾರು ಶೈಕ್ಷಣಿಕ ಹಂತ

ಶೈಕ್ಷಣಿಕ ಹಂತ	ಗಂಡು	ಹೆಣ್ಣು	ಒಟ್ಟು	ಶೇಕಡ
ಪ್ರಾಥಮಿಕ	೨೭೯	೨೧೯	೪೯೮	೨೪.೧೭
ಮಾಧ್ಯಮಿಕ	೧೫೧	೧೪೯	೩೦೦	೧೪.೫೬
ಪ್ರೌಢಶಾಲೆ	೪೦೫	೩೨೩	೭೨೮	೩೫.೩೪
ಡಿಪ್ಲೋಮಾ	೩೩	೩	೩೬	೧.೭೪೮
ಪದವಿ ಪೂರ್ವ	೧೮೨	೧೪೩	೩೨೫	೧೫.೭೮
ಪದವಿ	೯೫	೩೯	೧೩೪	೬.೫೦೫
ಸ್ನಾತಕೋತ್ತರ	೩೦	೫	೩೫	೧.೬೯೯
ಇತರೆ	೦	೪	೪	೦.೧೯೪
ಒಟ್ಟು	೧೧೭೫	೮೮೫	೨೦೬೦	
ಒಟ್ಟು ಶೇಕಡ	೫೭.೦೩೮೮೩	೪೨.೯೬೧೧೭	--	೧೦೦.೦೦

ಲಂಬಚಿತ: ೭.೩. ಸಮೀಕ್ಷೆಗೊಳಪಡಿಸಿದ ಚಿತ್ರದುರ್ಗ ಜಿಲ್ಲೆಯ ಮಾದಿಗ ಸಮುದಾಯದ ತಾಲೂಕುವಾರು ಲಿಂಗವಾರು ಸಾಕ್ಷರಸ್ಥರು



ಕೋಷ್ಟಕ ೭.೫ ಮತ್ತು ಲಂಬಚಿತ್ರ ೭.೩ರಲ್ಲಿ ೧ರಿಂದ ೫ನೇ ತರಗತಿಯವರೆಗೆ ಪ್ರಾಥಮಿಕ ತರಗತಿಗಳು ಎಂದು ಪರಿಗಣಿಸಲಾಗಿದೆ. ಹಾಗೆಯೇ ೬ರಿಂದ ೮ನೇ ತರಗತಿವರೆಗೆ ಮಾಧ್ಯಮಿಕವೆಂದೂ, ೯ರಿಂದ ೧೦ನೇ (ಪಿಯುಸಿ) ಪ್ರೌಢ ಹಾಗೂ ಪಿಯುಸಿ ಶಿಕ್ಷಣವೆಂದು ಪರಿಗಣಿಸಲಾಗಿದೆ. ಅದರಾಚೆಗೆ ಪದವಿ, ಸ್ನಾತಕೋತ್ತರಗಳೆಂದು ಪರಿಗಣಿಸಲಾಗಿದ್ದು ಇತರೆ ತರಗತಿಗಳೆಂದರೆ ಇಂಜಿನಿಯರಿಂಗ್, ಮೆಡಿಕಲ್ ಮುಂತಾದ ಉನ್ನತ ತಾಂತ್ರಿಕ ಶಿಕ್ಷಣವೆಂದು ಪರಿಗಣಿಸಲಾಗಿದೆ

ಚಿತ್ರದುರ್ಗ ಜಿಲ್ಲೆಯ ಆರು ತಾಲೂಕುಗಳಲ್ಲಿ ಸಮೀಕ್ಷೆ ಮಾಡಲಾದ ಮಾದಿಗ ಸಮುದಾಯದ ಮಕ್ಕಳಲ್ಲಿ ಪ್ರಾಥಮಿಕ ತರಗತಿಗಳಲ್ಲಿ ಓದುತ್ತಿರುವ ಮಕ್ಕಳು ಒಟ್ಟು ೪೯೮ ಇವೆ. ಇದರಲ್ಲಿ ಗಂಡುಮಕ್ಕಳು ೨೭೯ ಹಾಗೂ ಹೆಣ್ಣುಮಕ್ಕಳು ೨೧೯ ಇವೆ. ಹಾಗೆಯೇ ಮಾಧ್ಯಮಿಕ ತರಗತಿಗಳಲ್ಲಿ ಒಟ್ಟು ೩೦೦ ಮಕ್ಕಳಿವೆ. ಇದರಲ್ಲಿ ಗಂಡು ೧೫೧ ಹಾಗೂ ಹೆಣ್ಣು ೧೪೯ ಇವೆ. ಪ್ರೌಢಶಾಲೆಯಲ್ಲಿ ೮ರಿಂದ ೧೦ನೇ ತರಗತಿಯವರೆಗೆ ಓದುವ ಮಕ್ಕಳು ೭೨೮ ಇವೆ. ಇದರಲ್ಲಿ ಗಂಡು ೪೦೫ ಹಾಗೂ ಹೆಣ್ಣು ೩೨೩ ಇವೆ.

ಪ್ರೌಢ ಶಿಕ್ಷಣದ ತರುವಾಯ ನೇರವಾಗಿ ಮೆಕ್ಯಾನಿಕಲ್, ಎಲೆಕ್ಟ್ರಾನಿಕ್ಸ್ ಮುಂತಾದ ಡಿಪ್ಲೊಮಾ ತರಗತಿಗಳಲ್ಲಿ ಕಲಿಯುವ ಮಕ್ಕಳು ಒಟ್ಟು ೩೬ ಇವೆ. ಇದರಲ್ಲಿ ಗಂಡುಮಕ್ಕಳು ೩೩ ಇದ್ದರೆ, ಹೆಣ್ಣುಮಕ್ಕಳ ಸಂಖ್ಯೆ ಕೇವಲ ೩. ಪದವಿಪೂರ್ವದಲ್ಲಿ ಒಟ್ಟು ಮಕ್ಕಳು ೩೨೫ ಇವೆ, ೧೮೨ ಗಂಡುಮಕ್ಕಳು ಹಾಗೂ ೧೪೩ ಹೆಣ್ಣುಮಕ್ಕಳು ವ್ಯಾಸಂಗ ಮಾಡುತ್ತಿರುವರು. ಬಿಎ, ಬಿಕಾಂ, ಬಿಎಸ್ಸಿ ಮುಂತಾದ ಪದವಿ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ೧೩೪ ವಿದ್ಯಾರ್ಥಿಗಳಿದ್ದಾರೆ. ಇದರಲ್ಲಿ ೯೫ ಪುರುಷರು ಹಾಗೂ ೩೯ ಮಹಿಳೆಯರು ವ್ಯಾಸಂಗ ಮಾಡುವರು. ಸ್ನಾತಕೋತ್ತರ ತರಗತಿಗಳಲ್ಲಿ ಕೇವಲ ೩೫ ವಿದ್ಯಾರ್ಥಿಗಳು ಮಾತ್ರ ಓದುತ್ತಿರುವರು. ೩೦ ಜನ ಪುರುಷರ ಓದುತ್ತಿದ್ದರೆ. ಕೇವಲ ೫ ವಿದ್ಯಾರ್ಥಿನಿಯರು ಮಾತ್ರ ಇರುವರು. ಇತರೆ ತಾಂತ್ರಿಕ ಶಿಕ್ಷಣ ಪಡೆಯುವ ಮಹಿಳೆಯರ ಸಂಖ್ಯೆ ೪ ಮಾತ್ರ. ಒಟ್ಟಾರೆಯಾಗಿ ಸಮೀಕ್ಷೆ ಮಾಡಿದ ಕುಟುಂಬಗಳಲ್ಲಿ ೨೦೬೦ ವಿದ್ಯಾರ್ಥಿಗಳು ವ್ಯಾಸಂಗದಲ್ಲಿ ನಿರತವಾಗಿರುವರು. ಇದರಲ್ಲಿ ಪುರುಷರು ೧೧೭೫ ಹಾಗೂ ಮಹಿಳೆಯರು ೮೮೫ ಜನರಿದ್ದಾರೆ. ಒಟ್ಟಾರೆಯಾಗಿ ನೋಡಿದರೆ ಶೇಕಡ ಪ್ರಮಾಣ ೫೭.೦೩೮೮೩ರಷ್ಟು ಪುರುಷರು ಹಾಗೂ ೪೨.೯೬೧೧೭ರಷ್ಟು ಮಹಿಳೆಯರು ವ್ಯಾಸಂಗ ಮಾಡುತ್ತಿದ್ದಾರೆ.

೭.೨ ಶೈಕ್ಷಣಿಕ ಸ್ಥಿತಿಗತಿ

ಮಾನವನು ಸಮಾಜದಲ್ಲಿ ಜೀವನವನ್ನು ನಡೆಸಲು ಹಾಗೂ ಸಾಮಾಜಿಕ ಬದಲಾವಣೆ ದೂರದೃಷ್ಟಿಯಿಂದ ಶಿಕ್ಷಣಸ ಪಾತ್ರ ತುಂಬಾ ಮಹತ್ವದ್ದಾಗಿದೆ. ಸಾಮಾಜಕ, ಆರ್ಥಿಕ ರಚನೆಯಲ್ಲಿ ಮೇಲ್ಮುಖಿ ಚಲನೆಯು ಶಿಕ್ಷಣದಿಂದ ಸಾಧ್ಯವೆಂದು ಹೇಳಬಹುದು. ಅಭಿವೃದ್ಧಿ ಅರ್ಥಶಾಸ್ತ್ರದಲ್ಲಿ ಶಿಕ್ಷಣವನ್ನು ಮಾನವ ಬಂಡವಾಳವೆಂದು ಪರಿಗಣಿಸಲಾಗಿದೆ. ಅದರೆ ಮೇಲೆ ತೊಡಗಿಸುವ ಬಂಡವಾಳನ್ನು ಹೂಡಿಕೆಯೆಂದು ಪರಿಭಾವಿಸಿಕೊಳ್ಳಲಾಗಿದೆ. ಆದರೆ ಶಿಕ್ಷಣವನ್ನು ಸ್ಥೂಲವಾಗಿ ಪ್ರಾಥಮಿಕ

(ಮೂಲ) ಮತ್ತು ಉನ್ನತವೆಂದು ವರ್ಗೀಕರಸುವದು ರೂಢಿಯಲ್ಲದೆ. ವಾಸ್ತವವಾಗಿ ಇವೆರಡರ ನಡುವೆ ಪ್ರೌಢಶಿಕ್ಷಣ ಹಾಗೂ ಪದವಿ ಪೂರ್ವ ಶಿಕ್ಷಣವೆಂಬ ಮಧ್ಯಂತರ ಹಂತಗಳೂ ಇವೆ. ಪ್ರಸುತ್ತ ಅಧ್ಯಯನದ ಸಂದರ್ಭದಲ್ಲಿ ೧ ರಿಂದ ೧೦ನೇಯ ತರಗತಿಗಳನ್ನು ಒಳಗೊಂಡ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣವನ್ನು ಪ್ರಾಥಮಿಕವೆಂದು ಮತ್ತು ಅದರ ನಂತರದ್ದನ್ನು ಉನ್ನತವೆಂದೂ ವರ್ಗೀಕರಿ ಕೊಳ್ಳಲಾಗಿದೆ. ಇತ್ತೀಚೆಗೆ ಪೂರ್ವ ಪ್ರಾಥಮಿಕ ಹಂತವೂ ರೂಪಗೊಂಡಿದೆ. ಇಂತಹ ಶಿಕ್ಷಣದ ಸ್ವರೂಪವನ್ನು ಇತ್ತೀಚೆಗೆ ಮಾಡಿಕೊಂಡಿರುವ ಕ್ರಮವಾಗಿದೆ ಆದರೆ ಸಮಾಜದಲ್ಲಿ ಶಿಕ್ಷಣದಿಂದ ಬಲುದೂರ ಉಳಿದಿರುವ ಸಮುದಾಯಗಳಲ್ಲಿ ಮಾದಿಗ ಸಮುದಾಯ ಒಂದು. ಶತಮಾನಗಳಿಂದಲೂ ತುಳಿತಕ್ಕೆ ಒಳಗಾಗಿರುವ, ಕೆಲವೆ ಜನರ ಹಿಡಿತಕ್ಕೆ ಸಿಲುಕಿ ನರಳಿದ ಬಹುಸಂಖ್ಯಾತ ಮಾದಿಗ ಸಮುದಾಯದ ಜನರ ಬದುಕು ಇನ್ನೂ ಹಸನಾಗಿಲ್ಲ. ದೇಶವನ್ನು ರಕ್ಷಿಸುವ ಕವಚದಂತೆ ಸಂವಿಧಾನವಿದ್ದರೂ ತಾರತಮ್ಯಗಳು ಇನ್ನೂ ಹೋಗಿಲ್ಲ ಈ ದೇಶದಲ್ಲಿ ಅಸ್ಪೃಶ್ಯತೆರಾರಾಜಿಸುತ್ತಿದೆ. ಇಂತಹ ಸಾಮಾಜಿಕ ಸಮಸ್ಯೆಗಳನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡುವುದು ಇವತ್ತಿನ ಒತ್ತಿನಲ್ಲಿ ಅನಿವಾರ್ಯತೆಯಿದೆ ಎಂದು ಹೇಳಬಹುದು.

ಇವುಗಳ ಮದ್ಯೆಯು ಭಾರತದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಶೈಕ್ಷಣಿಕ ಕಲ್ಯಾಣಕ್ಕಾಗಿ ಹತ್ತು ಹಲವಾರು ಸೌಲಭ್ಯಗಳನ್ನು ಹಾಗೂ ಯೋಜನೆಗಳ ಕಲ್ಪಿಸಲಾಗಿದೆ. ಅದರೂ ಮಾದಿಗ ಸಮುದಾಯದ ಶೈಕ್ಷಣಿಕ ಪ್ರಗತಿ ನೀರಿಕ್ಷಿತ ಪ್ರಮಾಣದಲ್ಲಿ ತಲುಪಿಲ್ಲವೆಂದು ಹೇಳಬೇಕಾಗುತ್ತದೆ. ಇದಕ್ಕೆ ಕಾರಣವೇನೆಂದು ಹುಡುಕಿಕೊಂಡು ಹೋದರೆ ಬಹಳಷ್ಟು ಕಾರಣಗಳು ಸಿಗುತ್ತವೆ. ಅದ್ದರಿಂದ ಸಮಾಜದಲ್ಲಿ ಹೋರಾಟ ಮಾಡುವ ಮನುಸ್ಸುಗಳು ಇರುವುದರಿಂದಾಗಿ ಸಮಾಜವನ್ನು ಬದಲಾವಣೆ ತರುವಂತಹ ಆಶಯವನ್ನು ಹೊಂದಿರುವ ಸಮಾಜ ಸುಧಾರಕರ, ಚಿಂತಕರ ಹಾಗೂ ಸಂವಿಧಾನ ನಿರ್ಮಾಪಕರ ಹೋರಾಟದ ಫಲದಿಂದ ಹಾಗೂ ಇತ್ತೀಚೆಗೆ ಮಾದಿಗ ಸಮುದಾಯದಲ್ಲಿ ಇರುವ ಆರ್ಥಿಕವಾಗಿ ಸಧೃಡವಾಗಿರುವ ವ್ಯಕ್ತಿಗಳು ಬಡಮಕ್ಕಳಿಗೆ ಶಿಕ್ಷಣವನ್ನು ಕೊಡುವ ಮಹಾಕಾರ್ಯವನ್ನು ಮಾಡುತ್ತಿದ್ದಾರೆ. ಇಂತಹ ಸಫಲತೆಯ ಕೆಲಸದಿಂದಾಗಿ ಈ ಸಮುದಾಯಗಳಲ್ಲಿ ನಿಧಾನವಾಗಿ ಶಿಕ್ಷಣದ ಕಡೆ ನಿಧಾನವಾಗಿ ಮುಖ ಮಾಡುತ್ತಿರುವುದು ಕಂಡುಬರುತ್ತಿದೆ.

ಕೋಷ್ಟಕ ೭.೬. ಚಿತ್ರದುರ್ಗ ಜಿಲ್ಲೆಯ ಮೊದಲನೆಯ ತಲೆಮಾರಿನ, ಎರಡನೆಯ ತಲೆಮಾರಿನ ಮತ್ತು ಮೂರನೇ ತಲೆಮಾರಿನ ಮಾದಿಗ ಸಮುದಾಯದ ತಾಲೂಕುವಾರು ಶೈಕ್ಷಣಿಕ ವಿವರ

ವೃತ್ತಿಗಳು	ವೃದ್ಧರು ೭೦+			ಮಧ್ಯವಯಸ್ಕರು			ಯುವಕರು		
	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು
ಪ್ರಾಥಮಿಕ	೨೮	೦೭	೩೫	೧೦೧	೩೨	೧೩೩	೧೦೦	೯೫	೧೯೫
ಮಾಧ್ಯಮಿಕ	೦೬	೦೨	೦೮	೪೬	೦೯	೫೫	೬೭	೮೩	೧೫೦

ಪಿಯುಸಿ	೦೨	೦೧	೦೩	೦೬	೦೨	೦೮	೫೦	೪೦	೯೦
ಪದವಿ	೦೧	೦೦	೦೧	೦೪		೦೪	೨೪	೧೦	೩೪
ಸ್ನಾತಕೋತ್ತರ	೦೧	೦೦	೦೧	೦೧		೦೧	೧೬	೧೨	೨೮
ವೃತ್ತಿ ಪರ	೦೦	೦೦	೦೦	೦೦	೦೦	೦೦	೧೯	೧೬	೩೫
ಮಧ್ಯದಲ್ಲಿ ಶಾಲೆ ಬಿಟ್ಟವರು	೨೮	೦೪	೩೨	೪೩	೧೯	೬೨	೧೬	೧೫	೩೧
ಶಾಲೆಗೆ ದಾಖಲಾಗಿಲ್ಲ	೨೩೪	೨೮೬	೫೨೦	೯೯	೨೩೮	೩೩೭	೦೮	೨೯	೩೭
ಒಟ್ಟು	೩೦೦	೩೦೦	೬೦೦	೩೦೦	೩೦೦	೬೦೦	೩೦೦	೩೦೦	೬೦೦

ಕೋಷ್ಟಕ ೭.೬ರಲ್ಲಿ ಚಿತ್ರದುರ್ಗ ಜಿಲ್ಲೆಯಲ್ಲಿ ಬರುವ ಆರು ತಾಲೂಕುಗಳಿದ್ದು, ಪ್ರತಿಯೊಂದು ತಾಲೂಕಿನಲ್ಲಿ ಎರಡು ಗ್ರಾಮಗಳನ್ನು ಆಯ್ಕೆ ಮಾಡಿಕೊಂಡು ವ್ಯಕ್ತಿ ಅಧ್ಯಯನವನ್ನು ಮಾಡಲಾಗಿದೆ. ಮೊಳಕಾಲ್ಮೂರು ತಾಲೂಕಿನಲ್ಲಿ ಬರುವ ಗ್ರಾಮಗಳಲ್ಲಿ ೬೦ ವರ್ಷಗಳಿಗಿಂತ ಮೇಲ್ಪಟ್ಟವರ ಶೈಕ್ಷಣಿಕ ಪ್ರಗತಿಯನ್ನು ಗಮನಿಸಿದರೆ ಪ್ರಾಥಮಿಕ ಶಿಕ್ಷಣವನ್ನು ಪಡೆದವರ ಸಂಖ್ಯೆ ನೋಡಿದರೆ ಬಹಳ ನಿರಾಶೆಯಾಗುತ್ತದೆ. ಆ ಕಾಲದ ವಯೋವೃದ್ಧರು ಕೇವಲ ಹೊಟ್ಟೆಪಾಡಿಗಾಗಿ ಕೂಲಿನಾಲಿ ಮಾಡಬೇಕು ಇಲ್ಲವಾದರೆ ಇನ್ನೊಬ್ಬರ ಕೈಕೆಳಗೆ ಜೀತಗಾರರಾಗಿಯೋ ಕೆಲಸ ನಿರ್ವಹಿಸಬೇಕಾಗಿತ್ತು. ಸ್ವಂತಕ್ಕೆ ಯಾವುದೇ ರೀತಿಯ ಆಸ್ತಿಪಾಸ್ತಿಯಿಲ್ಲದೆ ಜೀವನ ನಿರ್ವಹಣೆಗೆ ಕಷ್ಟಪಡಬೇಕಾಗಿತ್ತು. ಇಂತಹ ಸಮಯದಲ್ಲಿ ವಿದ್ಯೆ ಕಲಿಯುವುದು ಕಷ್ಟಸಾಧ್ಯದ ಕೆಲಸವಾಗಿತ್ತು. ಪುರುಷರೇ ವಿದ್ಯೆ ಕಲಿಯಲು ಸಾಧ್ಯವಾಗದ ಸ್ಥಿತಿಯಿದ್ದಾಗ ಮಹಿಳೆಯರು ವಿದ್ಯೆಯ ಕುರಿತು ಆಲೋಚಿಸುವುದು ದೂರದ ಮಾತೇ ಸರಿ. ಚಿತ್ರದುರ್ಗದಲ್ಲಿ ಮೊದಲ ತಲೆಮಾರಿನಲ್ಲಿ ಒಟ್ಟು ಪ್ರಾಥಮಿಕ ಶಿಕ್ಷಣವನ್ನು ಪಡೆದ ಪುರುಷರ ಪ್ರಮಾಣ ಶೇ. ೨೮ರಷ್ಟು, ಮಹಿಳೆಯರ ಪ್ರಮಾಣ ಶೇ. ೦೭ರಷ್ಟು ಇದೆ. ಮಾಧ್ಯಮಿಕ ಶಿಕ್ಷಣವನ್ನು ಪಡೆದ ಪುರುಷರ ಪ್ರಮಾಣ ಶೇ. ೦೬ರಷ್ಟು, ಮಹಿಳೆಯರ ಪ್ರಮಾಣ ಶೇ. ೦೨ರಷ್ಟು ಇದೆ. ಪಿಯುಸಿ ಶಿಕ್ಷಣವನ್ನು ಪಡೆದ ಪುರುಷರ ಪ್ರಮಾಣ ಶೇ. ೨ರಷ್ಟು, ಮಹಿಳೆಯರ ಪ್ರಮಾಣ ಶೇ. ೧ರಷ್ಟು ಇದೆ. ಪದವಿಯನ್ನು ಒಬ್ಬ ಪುರುಷ ಮಾತ್ರ ಪಡೆದಿದ್ದಾರೆ. ಸ್ನಾತಕೋತ್ತರ ಪದವಿ ಒಬ್ಬ ಪುರುಷ ಮಾತ್ರ ಪಡೆದಿರುತ್ತಾರೆ. ಮಧ್ಯದಲ್ಲಿ ಶಾಲೆ ಬಿಟ್ಟವರಲ್ಲಿ ಪುರುಷರ ಪ್ರಮಾಣ ಶೇ. ೨೮ರಷ್ಟು, ಮಹಿಳೆಯರ ಪ್ರಮಾಣ ಶೇ. ೦೪ರಷ್ಟು ಇರುವುದು ಕಂಡುಬರುತ್ತದೆ. ಶಾಲೆಗೆ ದಾಖಲಾಗಿಲ್ಲದರ ಪುರುಷರ ಪ್ರಮಾಣ ಶೇ. ೨೩೪ರಷ್ಟು, ಮಹಿಳೆಯರ ಪ್ರಮಾಣ ಶೇ. ೨೮೬ರಷ್ಟು ಇದೆ. ಈ ತಲೆಮಾರಿನವರಲ್ಲಿ ಸಾಕ್ಷರರ ಪ್ರಮಾಣ ಕಡಿಮೆ ಇರುವುದು ಕಂಡುಬರುತ್ತದೆ. ಇವರು ತಮ್ಮ ಮಧ್ಯ ವಯಸ್ಸಿನಲ್ಲಿ ವಯಸ್ಕರ ಶಿಕ್ಷಣ ಯೋಜನೆಯಲ್ಲಿ ತಮ್ಮ ಊರಿನಲ್ಲಿಯ ರಾತ್ರಿ ಶಾಲೆಗಳಲ್ಲಿ

ಅಲ್ಪಸ್ವಲ್ಪ ಕಲಿತವರಾಗಿದ್ದಾರೆ. ಹಿಂದಿನ ಹಳ್ಳಿಗಳಲ್ಲಿ ಪ್ರಾಥಮಿಕ ಮಟ್ಟದ ಶಾಲೆಗಳೂ ಇರಲಿಲ್ಲ. ಮಧ್ಯವಯಸ್ಕರಾದ ನಂತರ ಅನೌಪಚಾರಿಕವಾಗಿ ಸಾಕ್ಷರರಾದವರು ಇದ್ದಾರೆ. ಮಹಿಳೆಯರ ಶಿಕ್ಷಣ ಪ್ರಮಾಣ ತುಂಬ ಕಡಿಮೆಯಿದೆ.

ಎರಡನೇ ತಲೆಮಾರು ೬ನೇ ವಯಸ್ಸಿಗೆ ತಲುಪುವಷ್ಟರಲ್ಲಿ ಗ್ರಾಮದಲ್ಲಿ ಇಲ್ಲವೇ ಗ್ರಾಮಕ್ಕೆ ಹತ್ತಿರದ ಊರುಗಳಲ್ಲಿ ಪ್ರಾಥಮಿಕ ಶಾಲೆಗಳು ತಲೆಯೆತ್ತಿದ್ದವು. ಹೀಗಾಗಿ ಅಲ್ಪಮಟ್ಟಿಗಾದರೂ ಅವರು ಓದಲು ಸಾಧ್ಯವಾಯಿತು. ಈ ತಲೆಮಾರಿನಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪಡೆದ ಪುರುಷರ ಪ್ರಮಾಣವು ಶೇ. ೧೦೧ ರಷ್ಟಿದೆ. ಮಹಿಳೆಯರ ಪ್ರಮಾಣವು ಶೇ. ೩೨ ರಷ್ಟಿದೆ. ಮಾಧ್ಯಮಿಕ ಶಿಕ್ಷಣವನ್ನು ಪಡೆದ ಪುರುಷರ ಪ್ರಮಾಣವು ಶೇ. ೪೬ರಷ್ಟಿದೆ. ಮಹಿಳೆಯರ ಪ್ರಮಾಣವು ಶೇ. ೧೯ರಷ್ಟಿದೆ. ಪಿಯುಸಿ ಹಂತದ ಶಿಕ್ಷಣವನ್ನು ಪಡೆದ ಪುರುಷರ ಪ್ರಮಾಣವು ಶೇ. ೦೬ರಷ್ಟಿದೆ. ಮಹಿಳೆಯರ ಪ್ರಮಾಣವು ಶೇ. ೦೨ರಷ್ಟಿದೆ. ಪದವಿ ಶಿಕ್ಷಣವನ್ನು ಪಡೆದ ಪುರುಷರ ಪ್ರಮಾಣವು ಶೇ. ೦೪ರಷ್ಟಿದೆ. ಸ್ನಾತಕೋತ್ತರ ಶಿಕ್ಷಣವನ್ನು ಪಡೆದ ಪುರುಷರ ಪ್ರಮಾಣವು ಶೇ. ೦೧ರಷ್ಟಿದೆ. ಮಧ್ಯದಲ್ಲಿ ಶಾಲೆ ಬಿಟ್ಟ ಪುರುಷರ ಪ್ರಮಾಣವು ಶೇ. ೪೨ರಷ್ಟಿದೆ. ಮಹಿಳೆಯರ ಪ್ರಮಾಣವು ೧೯ರಷ್ಟಿದೆ. ಶಾಲೆಗೆ ದಾಖಲಾಗದ ಪುರುಷರ ಪ್ರಮಾಣ ಶೇ. ೯೯ ರಷ್ಟು ಇದ್ದರೆ ಮಹಿಳೆಯರ ಪ್ರಮಾಣ ಶೇ. ೩೮೯ರಷ್ಟಿದೆ. ಈ ತಲೆಮಾರಿನಲ್ಲಿ ಗಮನಿಸಬೇಕಾದ ಅಂಶವೆಂದರೆ ಮೊದಲನೆ ತಲೆಮಾರಿನಗಿಂತ ಸ್ವಲ್ಪ ಶಿಕ್ಷಣದಲ್ಲಿ ಸುಧಾರಣೆಯಾಗಿದೆ.

ಮೂರನೇ ತಲೆಮಾರಿನಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪಡೆದ ಪುರುಷರ ಪ್ರಮಾಣವು ಶೇ. ೧೦೦ ರಷ್ಟಿದೆ. ಮಹಿಳೆಯರ ಪ್ರಮಾಣವು ಶೇ. ೯೫ ರಷ್ಟಿದೆ. ಮಾಧ್ಯಮಿಕ ಶಿಕ್ಷಣವನ್ನು ಪಡೆದ ಪುರುಷರ ಪ್ರಮಾಣವು ೬೦ರಷ್ಟಿದೆ. ಮಹಿಳೆಯರ ಪ್ರಮಾಣವು ಶೇಕಡ ೬೮ರಷ್ಟಿದೆ. ಪಿಯುಸಿ ಹಂತದ ಶಿಕ್ಷಣವನ್ನು ಪಡೆದ ಪುರುಷರ ಪ್ರಮಾಣವು ಶೇ. ೫೦ರಷ್ಟಿದೆ. ಮಹಿಳೆಯರ ಪ್ರಮಾಣವು ಶೇ. ೪೦ ರಷ್ಟಿದೆ. ಪದವಿ ಶಿಕ್ಷಣವನ್ನು ಪಡೆದ ಪುರುಷರ ಪ್ರಮಾಣವು ಶೇ. ೨೫ರಷ್ಟಿದೆ. ಮಹಿಳೆಯರ ಪ್ರಮಾಣವು ಶೇ. ಶೇ. ೧೦ ರಷ್ಟಿದೆ. ಸ್ನಾತಕೋತ್ತರ ಶಿಕ್ಷಣವನ್ನು ಪಡೆದ ಪುರುಷರ ಪ್ರಮಾಣವು ಶೇ. ೧೬ ರಷ್ಟಿದೆ. ಮಹಿಳೆಯರ ಪ್ರಮಾಣವು ಶೇ. ೧೨ರಷ್ಟಿದೆ. ತಾಂತ್ರಿಕ ಶಿಕ್ಷಣವನ್ನು ಪಡೆದ ಪುರುಷರ ಪ್ರಮಾಣವು ಶೇ. ೧೯ರಷ್ಟಿದೆ. ಮಹಿಳೆಯರ ಪ್ರಮಾಣವು ಶೇ. ೧೫ರಷ್ಟು. ಮಧ್ಯದಲ್ಲಿ ಶಾಲೆ ಬಿಟ್ಟ ಪುರುಷರ ಪ್ರಮಾಣವು ೧೬ರಷ್ಟಿದೆ. ಮಹಿಳೆಯರ ಪ್ರಮಾಣವು ಶೇ. ೧೫ರಷ್ಟಿದೆ. ಶಾಲೆಗೆ ದಾಖಲಾಗದಿರುವ ಪುರುಷರ ಪ್ರಮಾಣ ಶೇ. ೦೮ ಇದ್ದರೆ ಮಹಿಳೆಯರ ಪ್ರಮಾಣ ಶೇ. ೨೯ರಷ್ಟಿದೆ.

ಒಟ್ಟಾರೆ ಮೂರು ತಲೆಮಾರುಗಳನ್ನು ಗಮನಿಸಿದಾಗ ಹಂತ ಹಂತವಾಗಿ ಶೈಕ್ಷಣಿಕವಾಗಿ ಮಾದಿಗ ಸಮುದಾಯ ಪ್ರಗತಿ ಹೊಂದುತ್ತಿದೆಯೆಂಬುದು ಅಧ್ಯಯನದಿಂದ ತಿಳಿದುಬರುತ್ತದೆ. ಈ ರೀತಿಯ ಪ್ರಗತಿಗೆ ಕಾಲ ಕಾಲಕ್ಕೆ ಸರ್ಕಾರ ಹಮ್ಮಿಕೊಳ್ಳುವ ಯೋಜನೆಗಳು ಎಷ್ಟು ಮುಖ್ಯವೋ ಅಷ್ಟೇ ಮುಖ್ಯವಾದ

ವಿಚಾರ ಮೀಸಲಾತಿಯಾಗಿದೆ. ೧೯೫೨ರ ಸುಮಾರಿಗೆ ಮಾದಿಗ ಸಮುದಾಯವನ್ನು ಅನುಸೂಚಿತ ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಸೇರಿಸಲಾಯಿತು. ಈ ರೀತಿ ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಮಾದಿಗ ಸಮುದಾಯ ಸೇರಿದ ತರುವಾಯ ಇತರೆ ಅಸ್ಪೃಶ್ಯರಿಗಿಂತ ತೀವ್ರವಾಗಿ ಈ ಸಮುದಾಯವು ಮುಂದುವರೆಯಲು ಸಾಧ್ಯವಾಯಿತು. ಈ ಮೂರು ತಲೆಮಾರಿನಲ್ಲಿ ಮುಖ್ಯವಾಗಿ ಮೂರನೇ ತಲೆಮಾರಿನಲ್ಲಿ ಹೆಚ್ಚು ಶಿಕ್ಷಣವನ್ನು ಪಡೆದಿರುವುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ. ಇದರ ಮೂಲಕವಾಗಿ ಮಾದಿಗ ಸಮುದಾಯವು ಶೈಕ್ಷಣಿಕ ಕ್ಷೇತ್ರದಲ್ಲಿ ಅಲ್ಪ ಪ್ರಮಾಣದಲ್ಲಿ ಬದಲಾವಣೆ ಹೊಂದಿದೆ.

• ಪರಿಶಿಷ್ಟ ಜಾತಿ ಸಮುದಾಯದ ಅಭಿವೃದ್ಧಿಗಾಗಿ ಸರ್ಕಾರದ ಹಲವು ಯೋಜನೆಗಳು

೧. ಆಶ್ರಮ ಶಾಲೆಗಳು

ಆಶ್ರಮ ಶಾಲೆಗಳ ಪರಿಕಲ್ಪನೆ ಕೇಂದ್ರ ಸರ್ಕಾರದ್ದಾಗಿದ್ದು, ೧೯೯೦-೯೦ನೇ ಸಾಲಿನಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ರಾಜ್ಯಗಳಿಗೆ ಶೇ. ೫೦ರಷ್ಟು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಶೇ. ೧೦೦ರಷ್ಟು ಅನುದಾನವನ್ನು ಬಿಡುಗಡೆ ಮಾಡಿದೆ. ಪರಿಶಿಷ್ಟ ಜಾತಿ ಮಕ್ಕಳ ಶೈಕ್ಷಣಿಕ ಅನುಕೂಲಕ್ಕಾಗಿ ಹಾಗೂ ಪ್ರಾಥಮಿಕ ಐದನೇ ತರಗತಿಯವರಿಗೆ ವಿದ್ಯಾರ್ಥಿಗಳನ್ನು ದಾಖಲಿಸಿಕೊಳ್ಳುವುದರ ಜೊತೆಗೆ ವಸತಿ ನಿಲಯದ ಸೌಕರ್ಯವನ್ನು ಒದಗಿಸಲಾಗಿದೆ ಇದಕ್ಕಾಗಿಯೇ ಶಿಕ್ಷಕರ ವೃಂದದವರನ್ನು ಬೋಧನೆಗಾಗಿ, ಅಡುಗೆ ಸಿಬ್ಬಂದಿಯರನ್ನು ಊಟೋಪಚಾರಕ್ಕೆ ನೇಮಕ ಮಾಡಲಾಗಿದೆ. ಈ ಶಾಲೆಯಲ್ಲಿ ಶೇ. ೭೫ರಷ್ಟು ಪರಿಶಿಷ್ಟ ಜಾತಿ ಮಕ್ಕಳಿಗೆ ಹಾಗೂ ಶೇ. ೨೫ರಷ್ಟು ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ ಮಕ್ಕಳಿಗೆ ಪ್ರವೇಶ ಮೀಸಲಾತಿಯನ್ನು ಕಾಯ್ದಿರಿಸಲಾಗಿದೆ. ಪ್ರತಿಯೊಂದು ಶಾಲೆಯ ಪ್ರತಿ ತರಗತಿಗೆ ೧ರಿಂದ ೫ನೇ ತರಗತಿಯವರಿಗೆ ೨೫ರಂತೆ ೧೨೫ ಮಕ್ಕಳನ್ನು ದಾಖಲಿಸಲು ಅವಕಾಶವಿರುತ್ತದೆ. ಶಾಲೆಗಳು ಪರಿಶಿಷ್ಟ ಜಾತಿ ಮಕ್ಕಳ ಶಿಕ್ಷಣಕ್ಕಾಗಿಯೇ ತೆರೆದಿದ್ದು ಅವುಗಳಲ್ಲಿ ಸುಮಾರು ೫೭೨೫ ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದಾರೆ. ಚಿತ್ರದುರ್ಗ ಜಿಲ್ಲೆಯ ಈ ಕೆಳಕಂಡ ಸ್ಥಳಗಳಲ್ಲಿ ಆಶ್ರಮ ಶಾಲೆಗಳಿವೆ.

೧.ಆಶ್ರಮ ಶಾಲೆ ಮೊಳಕಾಲ್ಮೂರು, ಮೊಳಕಾಲ್ಮೂರು ತಾಲ್ಲೂಕು.

೨.ಆಶ್ರಮ ಶಾಲೆ ಹೊಳಲ್ಕೆರೆ, ಹೊಳಲ್ಕೆರೆ ತಾಲ್ಲೂಕು.

೩.ಆಶ್ರಮ ಶಾಲೆ ಹೊಸದುರ್ಗ, ಹೊಸದುರ್ಗ ತಾಲ್ಲೂಕು.

ಈ ಮೂರು ಆಶ್ರಮ ಶಾಲೆಗಳಲ್ಲಿ ೩೭೫ ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿರುತ್ತಾರೆ.

೨.ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ.

೧.ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ, ಮೊಳಕಾಲ್ಮುರು,

೨.ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ, ಚಿತ್ರದುರ್ಗ.

೩.ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ, ಹೊಸದುರ್ಗ.

೪.ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ, ಹಿರಿಯೂರು. (ದೇವರಕೊಟ್ಟ, ಮರಿಕಣಿವೆ)

೩.ಮೊರಾರ್ಜಿ ದೇಸಾಯಿ ಶಾಲೆ.

೧.ಮೊರಾರ್ಜಿ ದೇಸಾಯಿ ಶಾಲೆ. ಮೊಳಕಾಲ್ಮುರು,

೨.ಮೊರಾರ್ಜಿ ದೇಸಾಯಿ ಶಾಲೆ. ಹಿರಿಯೂರು.

೩.ಮೊರಾರ್ಜಿ ದೇಸಾಯಿ ಶಾಲೆ. ಹೊಸದುರ್ಗ

೪.ಮೊರಾರ್ಜಿ ದೇಸಾಯಿ ಶಾಲೆ. ಹೊಳಲ್ಕೆರೆ

೫.ಮೊರಾರ್ಜಿ ದೇಸಾಯಿ ಶಾಲೆ. ಚಳ್ಳಕೆರೆ

೬.ಮೊರಾರ್ಜಿ ದೇಸಾಯಿ ಶಾಲೆ. ಚಿತ್ರದುರ್ಗ.

೪.ನರ್ಸರಿ ಮತ್ತು ಮಹಿಳಾ ಕಲ್ಯಾಣ ಕೇಂದ್ರ

ಪರಿಶಿಷ್ಟ ಜಾತಿದವರ ಮಕ್ಕಳಿಗೆ ಚಿಕ್ಕವಯಸ್ಸಿನಲ್ಲೇ ಶಾಲೆಗೆ ಹೋಗುವ ಅಭ್ಯಾಸ ರೂಢಿಸಲು ಈ ಯೋಜನೆ ರೂಪಿಸಲಾಗಿದೆ. ಮೂರರಿಂದ ಐದು ವರ್ಷ ವಯಸ್ಸಿನ ಮಕ್ಕಳು ಇಂತಹ ಕೇಂದ್ರದಲ್ಲಿ ಪ್ರವೇಶ ಪಡೆಯಲು ಅರ್ಹರಾಗಿರುತ್ತಾರೆ. ಕೇಂದ್ರದಲ್ಲಿ ಮಕ್ಕಳಿಗೆ ಮಧ್ಯಾಹ್ನದ ಉಪಹಾರವನ್ನು ನೀಡಲಾಗುವುದು.

೫. ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯ

೫ರಿಂದ ೧೦ನೇ ತರಗತಿಗಳಲ್ಲಿ ವ್ಯಾಸಂಗ ಮಾಡುವ ಪರಿಶಿಷ್ಟ ವಿದ್ಯಾರ್ಥಿಗಳಿಗೆ ಊಟ, ವಸತಿ, ಪುಸ್ತಕ, ಲೇಖನ, ಉಡುಪು ಹಾಗೂ ಇನ್ನಿತರ ಅಗತ್ಯ ಪರಿಕರಗಳನ್ನು ಉಚಿತವಾಗಿ ಒದಗಿಸಲಾಗುತ್ತದೆ. ವಿದ್ಯಾರ್ಥಿ ನಿಲಯಗಳ ವಿದ್ಯಾರ್ಥಿಗಳಿಗೆ ಇದರಿಂದ ಉಪಯೋಗವಾಗುತ್ತಿದೆ. ಪ್ರತಿ ವಿದ್ಯಾರ್ಥಿಗಳಿಗೆ ಮಾಸಿಕ ರೂ.೭೫೦/-ಗಳ ವೆಚ್ಚದಲ್ಲಿ ಊಟ, ತಿಂಡಿ ಒದಗಿಸಲಾಗುವುದು.

೬. ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು

ಮೆಟ್ರಿಕ್ ನಂತರದ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗದ ಬಾಲಕ/ ಬಾಲಕಿಯರಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳನ್ನು ನಡೆಸಲಾಗುತ್ತಿದೆ. ಪ್ರತಿ ವಿದ್ಯಾರ್ಥಿಗೆ ಮಾಸಿಕ ರೂ.೮೫೦/-ಗಳ ವೆಚ್ಚದಲ್ಲಿ ಊಟ, ತಿಂಡಿ ಒದಗಿಸಲಾಗುವುದು. ಪರಿಶಿಷ್ಟ ಜಾತಿ ವಿದ್ಯಾರ್ಥಿಯಾಗಿದ್ದು ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ಮಂಜೂರಾತಿಗೆ ಅರ್ಹರಿರಬೇಕು.

೭. ವಿದ್ಯಾರ್ಥಿ ವೇತನಗಳು

೧ ರಿಂದ ೧೦ನೇ ತರಗತಿಯವರಿಗೆ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳು ಮಧ್ಯದಲ್ಲಿಯೇ ಶಾಲೆ ಬಿಡುವುದನ್ನು ತಡೆಗಟ್ಟಲು ಹಾಗೂ ವಿದ್ಯಾರ್ಥಿಗಳ ಪೋಷಕರು ಮಕ್ಕಳಿಗೆ

ಶಾಲೆಗೆ ಕಳುಹಿಸುವಂತೆ ಉತ್ತೇಜಿಸುವ ಸಲುವಾಗಿ ೧ರಿಂದ ೭ನೇ ತರಗತಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಾರ್ಷಿಕ ರೂ. ೭೫/- ಹಾಗೂ ೮ರಿಂದ ೧೦ನೇ ತರಗತಿ ವ್ಯಾಸಂಗ ಮಾಡುತ್ತಿವ ವಿದ್ಯಾರ್ಥಿಗಳಿಗೆ ವಾರ್ಷಿಕ ರೂ. ೧೦೦/-ಗಳನ್ನು ನೀಡಲಾಗುತ್ತಿದೆ. ವಿದ್ಯಾರ್ಥಿ ವೇತನಕ್ಕೆ ಆಯಾ ಶಾಲೆಯ ಮುಖ್ಯೋಪಾಧ್ಯಾಯರ ಮೂಲಕ ಸಂಬಂಧಪಟ್ಟ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳಿಗೆ ಕಳುಹಿಸಿ ಮಂಜೂರು ಪಡೆಯಬಹುದು. ಹಾಲಿ ನೀಡುತ್ತಿರುವ ರೂ. ೭೫/- ಮತ್ತು ರೂ. ೧೦೦/-ಗಳ ವಿದ್ಯಾರ್ಥಿ ವೇತನವನ್ನು ಕ್ರಮವಾಗಿ ರೂ. ೨೫೦/- ಮತ್ತು ರೂ.೫೦೦/-ಕ್ಕೆ ಹೆಚ್ಚಿಸಲು ಉದ್ದೇಶಿಸಲಾಗಿದೆ.

೨. ಪ್ರತಿಭಾ ವಿದ್ಯಾರ್ಥಿ ವೇತನ

ಪರಿಶಿಷ್ಟ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳು ವಾರ್ಷಿಕ ಪರಿಕ್ಷೆಗಳಲ್ಲಿ ಉತ್ತಮ ಅಂಕಗಳನ್ನು ಪಡೆಯುವಂತೆ ಪ್ರೋತ್ಸಾಹಿಸಲು ಹಾಗೂ ಅವರಲ್ಲಿ ಆರೋಗ್ಯಕರ ಸ್ಪರ್ಧಾ ಮನೋಭಾವ ತುಂಬುವ ಉದ್ದೇಶದಿಂದ ಪ್ರತಿಭಾ ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ. ವಿದ್ಯಾರ್ಥಿ ನಿಲಯದಲ್ಲಿ ವಾಸಿಸುವ, ವಾಸಿಸದ ಎಲ್ಲ ವಿದ್ಯಾರ್ಥಿಗಳು ಇದಕ್ಕೆ ಅರ್ಹರಾಗಿರುತ್ತಾರೆ. ವಾರ್ಷಿಕ ಪರೀಕ್ಷೆಗಳಲ್ಲಿ ಶೇಕಡ ೬೦ಕ್ಕಿಂತ ಹೆಚ್ಚು ಅಂಕ ಪಡೆದ ೫ ರಿಂದ ೭ನೇ ತರಗತಿಯ ವಿದ್ಯಾರ್ಥಿಗಳಿಗೆ ವಾರ್ಷಿಕ ರೂ. ೭೫/-ಗಳು, ೮ರಿಂದ ೧೦ನೇ ತರಗತಿಯ ವಿದ್ಯಾರ್ಥಿಗಳಿಗೆ ವಾರ್ಷಿಕ ರೂ. ೧೦೦/- ಗಳನ್ನು ನೀಡಲಾಗುತ್ತಿದೆ.

೧. ಎಸ್. ಎಸ್. ಎಲ್. ಸಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ.

೨. ಪ್ರತಿಷ್ಠಿತ ಶಾಲೆಗಳಿಗೆ ಅಂಕ ಗಳಿಸಿದ ವರ್ಗದ ವಿದ್ಯಾರ್ಥಿಗಳ ದಾಖಲು.

ಸಾಮಾಜಿಕ, ಆರ್ಥಿಕ, ಶೈಕ್ಷಣಿಕವಾಗಿ ಹಿಂದುಳಿದಿರುವ ಪರಿಶಿಷ್ಟ ವರ್ಗದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಶಿಕ್ಷಣವನ್ನು ರಾಜ್ಯಾದ್ಯಂತ ಇರುವ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ನೀಡಿ ವಾರ್ಷಿಕ ವೆಚ್ಚ ಭರಿಸಲಾಗುತ್ತಿದೆ. ಈ ಯೋಜನೆ ಸೌಲಭ್ಯ ಪಡೆಯಲು ವಿದ್ಯಾರ್ಥಿಯ ಪೋಷಕರ ಕುಟುಂಬದ ವಾರ್ಷಿಕ ಆದಾಯ ರೂ. ೭೫.೦೦೦/- ಮಿತಿಯಲ್ಲಿರಬೇಕು

೩. ನಗದು ಬಹುಮಾನ.

೪. ಅಧ್ಯಯನದ ಪ್ರವಾಸಕ್ಕೆ ನೆರವು.

೫. ಗ್ರಾಮೀಣ ಪ್ರದೇಶದ ಬುಡಕಟ್ಟು ಪಂಗಡದ ಬಾಲಕಿಯರಿಗೆ ಹಾಜರಾತಿ ವಿದ್ಯಾರ್ಥಿ ವೇತನ.

ಈ ಎಲ್ಲಾ ಯೋಜನೆಗಳೂ ಸರ್ಕಾರದ ಕಡತಗಳಿಲ್ಲದೆ ಕರ್ನಾಟಕ ಸರ್ಕಾರದ ಪರಿಶಿಷ್ಟ ಜಾತಿಗಳ ಕಲ್ಯಾಣ ನಿರ್ದೇಶನಾಲಯ ಈ ಯೋಜನೆಗಳ ಅನುಷ್ಠಾನಕ್ಕೆಂದೇ ಕಾರ್ಯತತ್ಪರವಾಗಿದೆ. ತಲುಪಿಸಬೇಕಾದ ಹೊಣೆಗಾರಿಕೆ ಸರ್ಕಾರದ್ದು ಮಾತ್ರ ಎಂದು ನಿರ್ಲಿಪ್ತವಾಗಿ ಉಳಿಯದೇ ಇದೇ ಸಮುದಾಯದಲ್ಲಿ ಈಗಾಗಲೇ ವಿದ್ಯಾವಂತರಾಗಿರುವ ನಮ್ಮಂತಹವರ ಕರ್ತವ್ಯದ ಒಂದು ಭಾಗ ಎಂದು

ಯೋಚಿಸಬೇಕಾಗಿದೆ. ಈ ಎಲ್ಲಾ ಯೋಜನೆಗಳೂ ಮಕ್ಕಳ ಶೈಕ್ಷಣಿಕ ಮಟ್ಟವನ್ನು ಉತ್ತಮ ಪಡಿಸಬಹುದು ಹಾಗೂ ಸ್ವಾವಲಂಬಿಯನ್ನಾಗಿ ಮಾಡಬಹುದು. ಪಿತೃ ಪ್ರಧಾನ ಕುಟುಂಬ ವ್ಯವಸ್ಥೆ ಮೊದಲುಗೊಂಡಾಗಿನಿಂದ ಆರಂಭವಾದ ಲಿಂಗಾಧಾರಿತ ಅಸಮಾನತೆ ಯೋಜನೆಗಳು ಕೊಡಮಾಡುವ ಆರ್ಥಿಕ ಅಭಿವೃದ್ಧಿಯ ಮೂಲಕ ನಿವಾರಿಸಲ್ಪಡುವುದಿಲ್ಲ.

ಅಧ್ಯಾಯ: ಎಂಟು

ಮಾದಿಗ ಸಮುದಾಯ ರಾಜಕೀಯ ಬದಲಾವಣೆ

೮.೧ ಒಳ ಆಡಳಿತ ವ್ಯವಸ್ಥೆ

೮.೧.೧ ಗುಡಿಕಟ್ಟೆ

೮.೧.೨ ಕಟ್ಟೆಮನೆಗಳ ಪಾತ್ರ

೭.೨ ಪಂಚಾಯತ್‌ರಾಜ್ ವ್ಯವಸ್ಥೆ

೮.೨.೧ ಗ್ರಾಮ ಪಂಚಾಯಿತ್

೮.೨.೨ ತಾಲ್ಲೂಕು ಪಂಚಾಯತ್

೮.೨.೩ ಜಿಲ್ಲಾ ಪಂಚಾಯತ್

೮.೩ ಆಧುನಿಕತೆಯ ಪ್ರಭಾವ

೮.೪ ಸಮುದಾಯ ಸಂಘಟನೆ ಮತ್ತು ಹೋರಾಟ

ಅಧ್ಯಾಯ: ಎಂಟು
ಮಾದಿಗ ಸಮುದಾಯ ರಾಜಕೀಯ ಬದಲಾವಣೆ

ಪೀಠಿಕೆ

ರಾಜಕೀಯ ವ್ಯವಸ್ಥೆಯು ಇಡೀ ಮಾನವರ ವರ್ತನೆ. ನಡವಳಿಕೆಗಳನ್ನು ಬದಲಾವಣೆ ತರುವಂತಹ ಬಹುದೊಡ್ಡ ಶಕ್ತಿಯಾಗಿದೆ. ಪ್ರತಿಯೊಂದು ಸಮಾಜದಲ್ಲಿಯೂ ಸಮುದಾಯದಲ್ಲಿ ಯಾವುದಾದರೊಂದು ಬಗೆಯ ರಾಜಕೀಯ ವ್ಯವಸ್ಥೆ ಕಂಡುಬರುತ್ತದೆ. ಲೂಸಿ ಮೇಯರ್ ಎಂಬ ಮಾನವಶಾಸ್ತ್ರಜ್ಞರು ರಾಜಕೀಯ ವ್ಯವಸ್ಥೆಯನ್ನು 'ಚಲನಾತ್ಮಕ' ಹಾಗೂ 'ಅಂಗೀಕೃತ' ಎಂಬ ಪ್ರಯೋಗಿಸಿದಾಗ ಮತ್ತೊಂದು ಅರ್ಥವನ್ನು ನೀಡುತ್ತದೆ ಎಂದು ಹೇಳುತ್ತಾರೆ. "ರಾಜಕೀಯ ಎಂಬ ಪದ ಪ್ರಯೋಗವು ಸಹ ಸರ್ಕಾರದ ಕಾರ್ಯಗಳಿಗೂ ಅನ್ವಯಿಸುವುದು. ರಾಜಕೀಯ ವ್ಯವಸ್ಥೆಯ ಸಕಲ ಕಾರ್ಯಗಳು ಮತ್ತು ರಾಜ್ಯಾಡಳಿತಕ್ಕೆ ಅನ್ವಯಿಸುವಂತೆ ಈ ಪದವನ್ನು ಹೆಚ್ಚು ವ್ಯಾಪಕವಾಗಿ ಬಳಸಿಕೊಳ್ಳಲಾಗುತ್ತದೆ. ಪ್ರಾರಂಭದಲ್ಲಿ 'ಅಧಿಕಾರ' ಅನೌಪಚಾರಿಕ ನಿಯಮಗಳಿಂದ ಏರ್ಪಡುತ್ತದೆ. ಭಾರತದಲ್ಲಿ ಜಾತಿ ಪಂಚಾಯಿತಿಗಳು ಇಂತಹ ಅಧಿಕಾರ ಹೊಂದಿದ್ದವು. ಜಾತಿ ಪಂಚಾಯಿತಿಗಳು ಜಾತಿ ಸಮುದಾಯದ ನಿಯಮಗಳನ್ನು ರೂಪಿಸುತ್ತಿದ್ದವಲ್ಲದೆ ಅವುಗಳನ್ನು ಉಲ್ಲಂಘಿಸಿದವರಿಗೆ ಶಿಕ್ಷಿಸುವ ಅಧಿಕಾರವನ್ನು ಹೊಂದಿದ್ದವು. ಆದರೆ, ಸ್ವಾತಂತ್ರ್ಯ ನಂತರ ಭಾರತವು ಸಾರ್ವಭೌಮಾಧಿಕಾರ ಹೊಂದಿರುವ ಧರ್ಮನಿರಪೇಕ್ಷಿತ ಪ್ರಜಾಪ್ರಭುತ್ವ ಅಡಳಿತ ರಾಷ್ಟ್ರವಾಗಿದೆ. ಪ್ರಜಾಪ್ರಭುತ್ವವು ವೈಚಾರಿಕ ನ್ಯಾಯಬದ್ಧ ವಿಧಾನ ಹಾಗೂ ಸೃಜನಾತ್ಮಕ ವಿಧಾನಗಳ ಸಮ್ಮಿಶ್ರಣವಾಗಿದೆ. ಪ್ರತಿನಿಧಿ ಪ್ರಜಾಪ್ರಭುತ್ವ ಆಡಳಿತ ರೀತಿಯಲ್ಲಿ ಚುನಾವಣೆಗಳ ಮೂಲಕ ಆಯ್ಕೆಗೊಂಡ ಪ್ರತಿನಿಧಿಯು ತನ್ನನ್ನು ಆಯ್ಕೆ ಮಾಡಿ ಕಳುಹಿಸುವ ಮತದಾರರಿಗೆ ಪ್ರತಿ ಚುನಾವಣೆಯ ಸಮಯದಲ್ಲೂ ತನ್ನ ಬದ್ಧತೆ ಮತ್ತು ಜವಾಬ್ದಾರಿಯನ್ನು ಸಿದ್ಧಪಡಿಸಿಕೊಳ್ಳಬೇಕಾಗುತ್ತದೆ. ಚುನಾವಣೆಗಳ ಮೂಲಕ ಪ್ರತಿನಿಧಿಸಲ್ಪಟ್ಟವರು ಸರ್ವಸಮ್ಮತ ಅಭ್ಯರ್ಥಿಯಾಗಿರುವುದಿಲ್ಲ. ತನ್ನ ನಿಕಟ ಸ್ಪರ್ಧಿಗಳ ವಿರುದ್ಧ ಹೆಚ್ಚಿನ ಮತ ಗಳಿಸಿ ಆಯ್ಕೆಯಾಗಿರುತ್ತಾರೆ. ಆದರೆ ಪ್ರತಿನಿಧಿಯು ತನ್ನ ಮತದಾರರ ಹಿತಾಸಕ್ತಿಗಳನ್ನು ಕಾಪಾಡಲು ಬದ್ಧನಾಗಿರುತ್ತಾನೆ.

ಹೀಗಾಗಿ ಜಾತಿ-ಜಾತಿಗಳ ನಡುವೆ ಇದ್ದ ಸಾಂಪ್ರದಾಯಿಕ ಹೊಂದಾಣಿಕೆ ಮಾಯವಾಗಿ. ಒಂದಕ್ಕೊಂದು ವಿರುದ್ಧವಾಗಿ ಸ್ಪರ್ಧಿಸುವ ಹಂತ ತಲುಪಿರುವುದಲ್ಲದೆ ಜಾತಿ ಸಂಘರ್ಷಗಳನ್ನು ಹೆಚ್ಚಿಸುತ್ತವೆ. ರಾಜಕಾರಣಕ್ಕಾಗಿ ಗ್ರಾಮ ಪಂಚಾಯಿತ್, ತಾಲ್ಲೂಕು ಪಂಚಾಯಿತ್, ಜಿಲ್ಲಾ ಮಟ್ಟಗಳಲ್ಲಿ ಜಾತಿ ಘರ್ಷಣೆಗಳು ನಡೆದು ಹಲವಾರು ಕೊಲೆ, ಮಾನಭಂಗದಂತಹ ಹೀನಾ ಅಪರಾಧಗಳು ಏರ್ಪಟ್ಟಿವೆ. ರಾಜಕೀಯ ವಿದ್ವೇಷಕ್ಕೆ ಹಳ್ಳಿಗಳಲ್ಲಿ ಒಂದು ಜಾತಿಗೆ ಸೇರಿದ ಜನರ ಮನೆಗಳನ್ನು ಸುಟ್ಟುಹಾಕಿ, ಬೆಳೆಗಳನ್ನು ಹಾಳುಗೆಡವುವಂತಹ ದುಷ್ಟ ಧಾರುಣ ಕೃತ್ಯಗಳು ನಡೆಯುತ್ತಿರುವುದು ವಿಷಾದನೀಯವಾಗಿದೆ. ಸಂಖ್ಯಾಬಾಹುಳ್ಯ ಹೆಚ್ಚಿರುವ ಜಾತಿಗಳು ಜಿಲ್ಲೆ, ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಅಪಾರ ಒತ್ತಡ ಬೀರುವ ಸಮೂಹಗಳಾಗುತ್ತಿವೆ. ಇವುಗಳ ಮಧ್ಯೆ ತಳಸ್ಪರ್ಶಿಯವಾದ ಎಷ್ಟೋ ಅಸ್ಪೃಶ್ಯ ಸಮುದಾಯಗಳು ರಾಜಕೀಯ ಅಧಿಕಾರವನ್ನು ಕೇವಲ ಕಣ್ಣಿನಿಂದ ನೋಡಿ ಅನುಭವಿಸುವ ಸ್ಥಿತಿ ನಿರ್ಮಾಣವಾಗಿದೆ. ಸಮುದಾಯದ ಏಳಿಗೆಗೆ ದುಡಿಯುವ ಹಾಗೂ ಸಮುದಾಯದ ಜೊತೆಗೆ ನಿರಂತರವಾದ ಸಾಮಾಜಿಕ ಸಂಬಂಧವನ್ನು ಇಟ್ಟುಕೊಂಡು, ಸಾಮಾಜಿಕ ಅಸಮಾನತೆಯನ್ನು ಹೋಗಲಾಡಿಸಲು ಶ್ರಮಿಸಿದ ಬುದ್ಧ, ಮಹಾವೀರ, ಬಸವಣ್ಣ, ಅಂಬೇಡ್ಕರ್ ಅವರು ಇಡೀ ಅಸ್ಪೃಶ್ಯ ಸಮುದಾಯಕ್ಕೆ ಸೇವಕರಾಗಿ ಜೀವನ ತೆತ್ತವರು ಡಾ. ಬಿ ಆರ್ ಅಂಬೇಡ್ಕರ್ ೧೯೫೦ ಜನವರಿ ೨೬ರಂದು ಬೃಹತ್ ಸಂವಿಧಾನ ರಚನೆ ಮಾಡಿಕೊಟ್ಟರು. ಇಂತಹ ಮಹತ್ವದ ಸಂವಿಧಾನವು ಬಡವರ ಪಾಲಿಗೆ ದಾರಿದೀಪವಾಗಿ, ಮಾತು ಬಾರದ ಜನರಿಗೆ ಮಾತು ಕಲಿಸಿತು, ಯಾವ ದೇವಸ್ಥಾನಗಳಿಗೆ ಪ್ರವೇಶ ನಿಷೇಧವಿತ್ತೋ ಅಂತಹ ದೇವಸ್ಥಾನಗಳಿಗೆ ಪ್ರವೇಶವನ್ನು ಕಲ್ಪಿಸಿಕೊಟ್ಟವರು ಹಾಗೂ ಸಾರ್ವಜನಿಕವಾಗಿ ನಡೆಯುವ ಪ್ರತಿಯೊಂದು ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಅವಕಾಶವನ್ನು ಮಾಡಿಕೊಟ್ಟಂತಹ ಮಹಾಚೇತನ ಅಂಬೇಡ್ಕರ್. ಸಂವಿಧಾನದ ಅಡಿಯಲ್ಲಿ ಸಾಮಾಜಿಕವಾಗಿ, ರಾಜಕೀಯವಾಗಿ, ಧಾರ್ಮಿಕವಾಗಿ ಸಮಾನತೆಯನ್ನು ಕಲ್ಪಿಸಿದ್ದರೂ. ಕೆಲವು ಬಲಪಂಥೀಯ ವಿಚಾರಧಾರೆಗಳು ಈ ಸಮುದಾಯದ ಜನರನ್ನು ದಾರಿ ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ಆದರೂ ಸಾಂವಿಧಾನಿಕವಾಗಿ ಸಿಗುವ ಎಲ್ಲಾ ಸೌಲಭ್ಯಗಳು ಹಾಗೂ ರಾಜಕೀಯವಾಗಿ ಗ್ರಾಮ ಪಂಚಾಯಿತಿಯಿಂದ ಹಿಡಿದು ವಿಧಾನ ಪರಿಷತ್ ಮತ್ತು ಸಚಿವ ಸ್ಥಾನಗಳಂಥ ಉನ್ನತ ಸ್ಥಾನಕ್ಕೆ ಹೋಗಿ ಈ ದೇಶದಲ್ಲಿ ಅಧಿಕಾರವನ್ನು ವಹಿಸಿಕೊಂಡಿರುವ ಹಲವಾರು ಸಂಗತಿಗಳನ್ನು ನೋಡಬಹುದು. ಇಂತಹ ಅನೇಕ ಹೊಸ ಹೆಜ್ಜೆಗಳ ಮೂಲಕ ದಲಿತ ಸಮುದಾಯಯದವರು ಸಮಾಜದಲ್ಲಿ ಸ್ವಲ್ಪವಾದರು ಮಾದಿಗ ಸಮುದಾಯವು ಉನ್ನತ ಸ್ಥಾನಮಾನ ಗಳಿಸುವುದರ ಮುಖೇನ ಸಾಮಾಜಿಕ ಬದಲಾವಣೆ ಹೊಂದಿದ್ದಾರೆ.

೮.೧ ಒಳಾಡಳಿತ ವ್ಯವಸ್ಥೆ

ಸಾಮಾಜಿಕ ವ್ಯವಸ್ಥೆಯಲ್ಲಿ ಸಾಮಾಜಿಕ ಸಂಬಂಧವನ್ನು ವೃದ್ಧಿಸಿಕೊಳ್ಳಲು ಅನೇಕ ವೈರುಧ್ಯಗಳು ನಡೆಯುವುದು ಸಾಮಾನ್ಯ. ಇವುಗಳನ್ನು ನಿಯಂತ್ರಣ ಮಾಡಲು ಪ್ರತಿಯೊಂದು ಸಮುದಾಯವೂ

ತನ್ನದೇ ಆದ ವೈಶಿಷ್ಟ್ಯಪೂರ್ಣ ಸಂಸ್ಕೃತಿಯನ್ನು ರೂಢಿಸಿಕೊಂಡಿರುತ್ತದೆ. ಹೀಗಾಗಿ ಆಯಾ ಸಂಸ್ಕೃತಿಗಳಿಗೆ ಅನುಗುಣವಾಗಿ ವ್ಯಕ್ತಿ ತನ್ನ ವ್ಯಕ್ತಿತ್ವ ರೂಪಿಸಿಕೊಳ್ಳವುದು ಅನಿವಾರ್ಯವಾಗುತ್ತದೆ. ಆದರೂ ಒಂದೇ ಸಂಸ್ಕೃತಿಯಲ್ಲಿ ಬೆಳೆದ ಎಲ್ಲ ವ್ಯಕ್ತಿಗಳ ಒಂದೇ ತೆರೆನಾದ ವ್ಯಕ್ತಿತ್ವವನ್ನು ಹೊಂದಿರುವುದಿಲ್ಲ. ಇಂತಹವುಗಳನ್ನು ಒಗ್ಗೂಡಿಸುವ ಪ್ರಯತ್ನ ಪ್ರತಿಯೊಂದು ಸಮುದಾಯ ಮಾಡುತ್ತದೆ. ಇದರ ಮೂಲಕ ಸಮುದಾಯದ ನಿಯಂತ್ರಣಕ್ಕೆ ಒಳಗೊಂಡಿರುವ ಸಮುದಾಯಗಳಲ್ಲಿ ಮಾದಿಗ ಸಮುದಾಯವೂ ಒಂದು. ಈ ದೃಷ್ಟಿಕೋನದಿಂದ ಬಹುತೇಕ ಆಚರಣೆಗಳನ್ನು ತಮ್ಮ ದೈನಂದಿನ ಬದುಕಿನಲ್ಲಿ ಅಳವಡಿಸಿಕೊಂಡಿದ್ದಾರೆ. ಇಂತಹ ಕಟ್ಟುಪಾಡುಗಳನ್ನು ರೂಢಿಸಿಕೊಳ್ಳಲು ಪಾರಂಪರಿಕವಾಗಿ ತಮ್ಮ ಸಂಪ್ರದಾಯ, ಆಚಾರ-ವಿಚಾರ, ದೈನಂದಿನ ಬದುಕು, ವಾರ್ಷಿಕ ಆಚರಣೆಗಳು, ಜನನ, ಮದುವೆ, ಸಾವು, ಮನಸ್ತಾಪ, ಜಗಳ ಮುಂತಾದ ವಿಚಾರಗಳನ್ನು ಈ ಒಳಾಡಳಿತ ವ್ಯವಸ್ಥೆ ಅಡಿಯಲ್ಲಿ ಮಾದಿಗ ಸಮುದಾಯದ ನಿಯಂತ್ರಣಕ್ಕೆ ಒಳಪಟ್ಟಿರುತ್ತದೆ. ಈ ವ್ಯವಸ್ಥೆಯನ್ನು ಸಮುದಾಯದ ಹಿರಿಯ ಯಜಮಾನ ನಿರ್ವಹಿಸುತ್ತಿದ್ದಾರೆ.

ಈ ಮೇಲಿನ ನಿರ್ಣಯಗಳನ್ನು ಕೊಡುವ ವ್ಯಕ್ತಿಗಳನ್ನು ಮಾದಿಗ ಸಮುದಾಯದ ಎಲ್ಲಾ ಜನರು ಸೇರಿ ಆಯ್ಕೆ ಮಾಡುತ್ತರೆ. ವಿಶೇಷವಾಗಿ ಜನಸಂಖ್ಯೆ ಆಧಾರವಾಗಿ, ಒಂದೇ ಪ್ರದೇಶದಲ್ಲಿ ವಾಸಮಾಡುವ ಗ್ರಾಮಗಳನ್ನು ಗಮನದಲ್ಲಿ ಇಟ್ಟಕೊಂಡು, ಕುಲಗಳಿಗೆ ಒಬ್ಬರಂತೆ ಐದು ಅಥವಾ ಏಂಟು ಜನರನ್ನು ಒಳಗೊಂಡಿರುವ ಯಜಮಾನರನ್ನು ಆಯ್ಕೆ ಮಾಡುತ್ತಾರೆ. ಇಂತಹ ಯಜಮಾನರನ್ನು ಆಯ್ಕೆ ಮಾಡುವ ಜ್ಞಾನ ತಿಳಿವಳಿಕೆ ಈ ಸಮುದಾಯದಲ್ಲಿ ವಿಭಿನ್ನವಾಗಿದೆ. ಇವರನ್ನು ಆಯ್ಕೆ ಮಾಡುವ ಸಂದರ್ಭದ ಮನದಂಡಗಳನ್ನು ಗಮನಿಸುವುದಾದರೆ.

- ಆತ ಅಪ್ಪಟ ಮಾದಿಗ ರಕ್ತದವನೇ ಆಗಿರಬೇಕು.
- ಈ ಕೇರಿಯ ಮೂಲ ನಿವಾಸಿಗಳಾಗಿರಬೇಕು.
- ವಯಸ್ಸಿನಲ್ಲಿ ಹಿರಿಯ ವ್ಯಕ್ತಿಯಾಗಿರಬೇಕು.
- ವಂಶ ಪಾರಂಪರಿಕವಾಗಿ ಆಧಿಕಾರವನ್ನು ಮುಂದುವರಿಸಿಕೊಂಡು ಬಂದಿರುವ ಮನೆತನದ ಹಿರಿಯ ಅಥವಾ ಕಿರಿಯ ವ್ಯಕ್ತಿಯಾಗಿರಬೇಕು.
- ಸಮುದಾಯದ ಎಲ್ಲರಿಗೂ ಪ್ರೀತಿ ಪಾತ್ರವಾದ ನಿಷ್ಪಕ್ಷಪಾತ ಅಥವಾ ನಿಷ್ಠಾವಂತ ವ್ಯಕ್ತಿಯಾಗಿರಬೇಕು.
- ಕಾಲಜ್ಞಾನದ ಬಗ್ಗೆ ತಿಳುವಳಿಕೆ ಹೊಂದಿರಬೇಕು.
- ಸಮಾಜದ ಜ್ಞಾನ ತಿಳುವಳಿಕೆಯನ್ನು ಹೊಂದಿರಬೇಕು.
- ಬೇರೆ ಊರಿನಿಂದ ವಲಸೆ ಬಂದು ನೆಲೆಸಿರುವ ಇದೇ ಸಮುದಾಯದ ಹಿರಿಯ ವ್ಯಕ್ತಿ ಹಾಗೂ ವಿಚಾರವಂತ ವ್ಯಕ್ತಿಯನ್ನು ಆಯ್ಕೆ ಮಾಡುತ್ತಾರೆ.
- ಸಮಾಜಬಾಹಿರ ಕೃತ್ಯಗಳಲ್ಲಿ ತೊಡಗಿರಬಾರದು.

ಆಯ್ಕೆ ಮಾಡಿದ ದಿನ ಗ್ರಾಮ ದೇವತೆಯ ಗುಡಿಯಲ್ಲಿ ಸಮಸ್ತರೂ ಕೂಟ ಸೇರುತ್ತಾರೆ. ಯಜಮಾನ ಆಯ್ಕೆಯ ಅನಿವಾರ್ಯತೆಯನ್ನು ನೆರೆದವರಿಗೆ ಮನವರಿಕೆ ಮಾಡಿಕೊಟ್ಟ ನಂತರ ಈ ಆಯ್ಕೆ ಮಾಡಲಾಗುತ್ತದೆ. ಈ ಹಿಂದೆ ಜವಾಬ್ದಾರಿಯನ್ನು ಹೊತ್ತುಕೊಂಡ ಕೆಲವರು ಪ್ರತಿ ಕುಟುಂಬದ ಹಿರಿಯ ತಲೆಯೊಂದಿಗೆ ಚರ್ಚಿಸಿ, ಸರ್ವರಿಗೂ ಒಪ್ಪಿತವಾಗುವ ಒಂದು ತೀರ್ಮಾನಕ್ಕೆ ಅವರನ್ನು ಸಜ್ಜಗೊಳಿಸಿರುತ್ತಾರೆ. ಆದ್ದರಿಂದಲೇ ಆಯ್ಕೆ ವೇಳೆ ಯಾವುದೇ ಸಮಸ್ಯೆಗಳು ಕಂಡುಬರುವುದಿಲ್ಲ. ಆಯ್ಕೆ ಮಾಡಲು ಸರಿಹೊಂದುವ ವ್ಯಕ್ತಿಗಳ ಒಪ್ಪಿಗೆಯನ್ನು ಇನ್ನೊಂದು ಬಾರಿ ಕೇಳಿ, ಇವರಲ್ಲಿ ಒಬ್ಬರನ್ನು ಕುಲದ ಹಿರಿಯ ಎಂದು ಘೋಷಣೆಯಾದ ಮೇಲೆ ಯಜಮಾನ ಗ್ರಾಮ ದೇವತೆಯ ಪೂಜೆಯನ್ನು ನೆರವೇರಿಸಿ, ಎಲ್ಲರ ಸಮ್ಮುಖದಲ್ಲಿ ವೀಳ್ಯ ಪಡೆಯುತ್ತಾರೆ. ತಾನು ಎಲ್ಲರನ್ನೂ ಮಕ್ಕಳಂತೆ ನೋಡಿಕೊಳ್ಳುವುದು ಹಾಗೂ ನಿಷ್ಪಕ್ಷಪಾತವಾಗಿ ಸಮುದಾಯ ಎಲ್ಲರನ್ನು ಪ್ರೀತಿಯಿಂದ ಕಾಣುವುದು. ನ್ಯಾಯಯುತ ತೀರ್ಮಾನವನ್ನು ತೆಗೆದುಕೊಳ್ಳುವುದು. ಈ ರೀತಿಯಾಗಿ ಆಯ್ಕೆಮಾಡಿದ ಯಜಮಾನರಿಗೆ ಎಲ್ಲರೂ ತಿಳಿಸುತ್ತಾರೆ. ಇಲ್ಲಿಗೆ ಸೇರಿದ ಕೂಟ ಚದುರುತ್ತದೆ ಕುಲ ಯಜಮಾನನ ಆಡಳಿತ ವೈಖರಿಗಳು ಜಾರಿಗೆಗೊಳ್ಳುತ್ತವೆ. ಇದಕ್ಕೆ ಪ್ರತಿಯಾಗಿ ಇಡೀ ಊರಿನ ಗ್ರಾಮದ ಜನರು ತಪ್ಪದೇ ಪಾಲಿಸಬೇಕಾದ ಜವಾಬ್ದಾರಿಯಗಳೂ ಇರುತ್ತವೆ. ಇದನ್ನು ಮುಂದುವರಿಸುತ್ತ ಗುಡಿಕಟ್ಟೆ, ಕಟ್ಟೆಮನೆ, ಜಾತಿ ಪಂಚಾಯಿತಿ ಎಂದು ವರ್ಗೀಕರಣ ಮಾಡಿಕೊಂಡು ಯಾವ ಯಾವ ಹಂತದಲ್ಲಿ ಯಾವ ತೀರ್ಮಾನಗಳನ್ನು ತೆಗೆದುಕೊಳ್ಳಬೇಕು. ಎಂಬ ಅಂಶಗಳ ಈ ಮೂರು ಕ್ಷೇತ್ರದಲ್ಲಿ ನಿರ್ಣಯಗಳನ್ನು ಮಾಡುತ್ತಾರೆ. ಆದರೆ ಇವತ್ತಿನ ದಿನಗಳಲ್ಲಿ ಈ ಆಯ್ಕೆ ಪ್ರಕ್ರಿಯೆಗಳು ಕಡಿಮೆಯಾಗಿವೆ. ಕೇವಲ ಹಬ್ಬ, ಜಾತ್ರೆ, ಉತ್ಸವ, ಮದುವೆ, ಕೇಲವು ಸಣ್ಣಪುಟ್ಟ ವ್ಯಾಜ್ಯಗಳನ್ನು ಮಾತ್ರ ಬಗೆಹರಿಸುವಂಥ ಕಾರ್ಯವನ್ನು ಮಾತ್ರ ಮಾಡುತ್ತಾರೆ. ಕಟ್ಟುನಿಟ್ಟಿನ ನಿರ್ಬಂಧಗಳು ನಿಂತುಹೋಗಿವೆ.

೮.೧.೧ ಗುಡಿಕಟ್ಟೆ

ಸಾಮಾಜಿಕ ನಿಯಂತ್ರಣವನ್ನು ತರುವ ಹಾಗೂ ಸಮಾಜದಲ್ಲಿ ಸಹ ಜೀವನವನ್ನು ನಡೆಸುವ ಉದ್ದೇಶದಿಂದ ಅನೇಕ ವಿಧಿವಿಧಾನಗಳನ್ನು ಪಾಲಿಸಿಕೊಂಡು ಬರಲಾಗಿದೆ. "ಒಂದೇ ಬಗೆಯ ಜೀವನ ಪದ್ಧತಿ ಆಚರಣೆ, ನಂಬಿಕೆ, ಕುಲದೈವಗಳ ಹೊಂದಿರುವ ಜನ ಸಮುದಾಯಗಳು ತಮ್ಮದೇ ಆದ ಸಾಮಾಜಿಕ ವ್ಯವಸ್ಥೆಯನ್ನು ಹೊಂದಿರುತ್ತವೆ. ಈ ಸಮಾಜದ ರಚನೆಯಲ್ಲಿ ಕುಟುಂಬ ವ್ಯವಸ್ಥೆ ಒಂದು ಚಿಕ್ಕ ಘಟಕವಾಗಿರುತ್ತದೆ. ಹಲವಾರು ಕುಟುಂಬಗಳು ಸೇರಿ ಒಂದು ಸಮಾಜದ ನಿರ್ಮಾಣವಾಗುತ್ತದೆ. ಒಂದೊಂದು ಜಾತಿಯು ಅದು ಪ್ರತ್ಯೇಕ ಸಮಾಜವೆಂದು ಗುರುತಿಸಿಕೊಳ್ಳುವುದು. ಈ ಹಿನ್ನೆಲೆಯಲ್ಲಿಯೇ ಒಂದು ಜಾತಿಯ ಪರಿಮಿತಿಯಲ್ಲಿ ಹಲವಾರು ಕುಟುಂಬಗಳು ಸೇರಿ ತಮ್ಮದೇ ಆದ ಸಾಮಾಜಿಕ ಚಟುವಟಿಕೆಗಳನ್ನು ರೂಪಿಸಿಕೊಳ್ಳುತ್ತವೆ. ಈ ಸಾಮಾಜಿಕ ಚಟುವಟಿಕೆಗಳು ಅವರನ್ನೆಲ್ಲ ಭಾವನಾತ್ಮಕವಾಗಿ ಬೆಸೆಯುವ ಉದ್ದೇಶವನ್ನು ಹೊಂದಿರುತ್ತವೆ. ಸಾಮಾಜಿಕ ಚಟುವಟಿಕೆಗಳ ಸ್ವರೂಪವೇ ಸಮುದಾಯವಾಗಿರುತ್ತದೆ. ಮಾದಿಗರಲ್ಲಿ ಯಾವುದೇ ಒಂದು ಜಾತಿಯ ಸಾಮಾಜಿಕ ಜೀವನವನ್ನು

ಪರಿಚಯಿಸಿದರೂ ಅದು ಮತ್ತೊಂದರಲ್ಲಿ ಗೋಚರಿಸುವ ಅಂಶವೇ ಆಗಿರುತ್ತದೆ."[7] ಆಚರಣೆಗಳು ವಿಭಿನ್ನವಾಗಿ ಕಂಡುಬಂದರೂ ಅವುಗಳು ಒಂದು ರೀತಿಯಲ್ಲಿ ನಿಯಂತ್ರಣವನ್ನು ಹೇರುವ ಅಂಶಗಳು ಆಗಿರುತ್ತವೆ. ಮಾದಿಗ ಸಮುದಾಯದಲ್ಲಿ ತಮ್ಮ ಸಂಪ್ರದಾಯಗಳನ್ನು ಕಟ್ಟುನಿಟ್ಟಾಗಿ ಅನುಸರಿಸಿಕೊಂಡು ಬಂದಿದ್ದಾರೆ. ಈ ಉದ್ದೇಶಕ್ಕಾಗಿ ಸಮುದಾಯದ ಜನರು ಸೇರಿಕೊಂಡು ಗುಡಿಕಟ್ಟೆ ಎಂಬ ಒಂದು ನ್ಯಾಯಿಕ ವ್ಯವಸ್ಥೆಯನ್ನು ನಿರ್ಮಾಣ ಮಾಡಿಕೊಂಡಿದ್ದಾರೆ.

ಗುಡಿಕಟ್ಟೆ ಎಂದರೆ ಒಂದೇ ಕುಲದ ಅಥವಾ ಬೆಡಗಿನವರು ಸೇರಿ ರಚಿಸಿಕೊಂಡ ನ್ಯಾಯ ತೀರ್ಮಾನದ ಒಂದು ಘಟಕವಾಗಿದೆ. ಗುಡಿಕಟ್ಟೆಯು ಹೆಚ್ಚುಕಡಿಮೆ ಒಂದೇ ರಕ್ತ ಸಂಬಂಧಿಗಳಿಂದಲೇ ರಚಿಸಿಕೊಂಡಿದ್ದಾಗಿದೆ. ಈ ಗುಡಿಕಟ್ಟೆಯನ್ನು ರಚನೆ ಮಾಡುವ ಸಂದರ್ಭ ಅನೇಕ ಮಾನದಂಡಗಳನ್ನು ಅನುಸರಿಸುತ್ತಾರೆ. ಮುಖ್ಯವಾಗಿ ಕುಲಗದ್ದಿಗೆ ಹಾಕುತ್ತಾರೆ. 'ಕುಲಗದ್ದಿಗೆ' ಎಂದರೆ ಒಂದೇ ಸೋದರ ಸಂಬಂಧಿಗಳು ಸೇರಿ ಮಾಡುವ ಆಚರಣೆ. ಕುಲದ ಎಲ್ಲಾ ಯಜಮಾನರು ಸೇರಿ ಕರಿ ಕಂಬಳಿಯ ಮೇಲೆ ವಿಭೂತಿಯಿಂದ ಓಂಕಾರ ಬರೆದು ಅದರ ಮೇಲೆ ಮೂರು ಸೇರು ಅಕ್ಕಿ ಅಥವಾ ಜೋಳ ಹಾಕಿ, ಮಧ್ಯದಲ್ಲಿ ಕಳಸ ಉಡಿ, ಸುತ್ತಲು ವೀಳ್ಯದೆಲೆಯಿಂದ ಶೃಂಗರಿಸುತ್ತಾರೆ. ಇದಕ್ಕೆ ಸರಿಹೊಂದುವ ಹಣವನ್ನು ಈ ಕುಲದವರೇ ಭರಿಸುತ್ತಾರೆ. ಈ ರೀತಿಯಾದ ಗದ್ದಿಗೆಹಾಕಿ ನಂತರ ಗುಡಿಕಟ್ಟೆಗೆ ಆಯ್ಕೆಯಾದ ಯಜಮಾನರು ಪೂಜೆ ಮಾಡಿ ನಂತರ ಗದ್ದಿಗೆಯಲ್ಲಿ ಇರುವ ವೀಳ್ಯದೆಲೆಯನ್ನು ಕುಲದ ಹಿರಿಯರಿಗೆ ಒಂದು ಭಾಗ, ಎಲ್ಲಾ ಕುಲಗಳಿಗೆ ಒಂದೊಂದು ಭಾಗವನ್ನು ಹಿರಿಯ ಯಜಮಾನ ಹಂಚಿಕೊಡುತ್ತಾನೆ. ಉಳಿದ ವೀಳ್ಯದೆಲೆ ಮತ್ತು ಅಡಿಕೆಯನ್ನು ಈ ಕಾರ್ಯದಲ್ಲಿ ಭಾಗವಹಿಸಿದ ಜನರಿಗೆ ಕೊಡುತ್ತಾರೆ. ಸೇರಿರುವ ಎಲ್ಲಾ ಜನರು ಊಟವನ್ನು ಮಾಡುತ್ತಾರೆ. ಈ ರೀತಿಯಾದ ವೈಶಿಷ್ಟ್ಯ ಪೂರ್ಣವಾದ ಸಾಂಸ್ಕೃತಿಕ ಅನನ್ಯತೆಯನ್ನು ಮಾದಿಗ ಸಮುದಾಯ ಇವತ್ತಿನ ಕಾನೂನು ರೀತಿಯಲ್ಲಿ ರೂಪಿಸಿಕೊಂಡ ನ್ಯಾಯ ವ್ಯವಸ್ಥೆ ಎಂದು ಹೇಳಬಹುದು. ಇಂತಹ ನ್ಯಾಯ ವ್ಯವಸ್ಥೆ ಕೆಲವು ಸಮಸ್ಯೆಗಳಿಗೆ ಪರಿಹಾರ ಅಥವಾ ಗುಡಿಕಟ್ಟೆ ನಿರ್ವಹಿಸುವ ಕಾರ್ಯಗಳನ್ನು ಈ ಕೆಳಗಿನಂತೆ ಚರ್ಚಿಸಲಾಗಿದೆ.

ಮಾದಿಗ ಸಮುದಾಯದ ಗುಡಿಕಟ್ಟೆಯಲ್ಲಿ ಒಳಜಗಳನ್ನು ಮಾತ್ರ ವಿಚಾರಣೆಗೆ ತೆಗೆದುಕೊಳ್ಳುವರು. ಸಾಮಾನ್ಯವಾಗಿ ಗ್ರಾಮದಲ್ಲಿ ನಡೆಯುವ ದೇವರ ಕಾರ್ಯಗಳಿಗೆ ಸಂಬಂಧಿಸಿದ ಚರ್ಚೆಗಳು ಹೆಚ್ಚಾಗಿ ಬರುತ್ತವೆ ಕುಟುಂಬದ ಸಣ್ಣಪುಟ್ಟ ವ್ಯಾಜ್ಯಗಳನ್ನು ಬಗೆಹರಿಸುವುದು ಮತ್ತು ವಿವಾಹ ವೇಳೆಯಲ್ಲಿ ವಧು-ವರನಿಗೆ ದೇವರ ನೀರನ್ನು ಹಾಕುವುದು. ಕುಲದೇವರು ಮಾಡಿದ ಸಮಯದಲ್ಲಿ ನಿಗದಿಪಡಿಸಿದ ಹಣ ನೀಡಲು ನಿರಾಕರಿಸಿದ ವಿಷಯಗಳು ಹೀಗೆ ಸಣ್ಣಪುಟ್ಟ ವಿಚಾರಗಳನ್ನು ಗುಡಿಕಟ್ಟೆ ಬಗೆಹರಿಸುತ್ತದೆ.

ಮಾದಿಗರು ಕೊಲೆ, ಕಳ್ಳತನ, ವಂಚನೆ ಮಾಡಿದ ಅಪರಾಧಕ್ಕಿಂತಲೂ 'ಮೆಟ್ಟೆ'ನಲ್ಲಿ ಹೊಡೆಸಿಕೊಳ್ಳುವುದು ದೊಡ್ಡ ಅಪರಾಧವೆಂದು ಪರಿಗಣಿಸುವರು. ಆಗ ಹೊಡೆಸಿಕೊಂಡವನನ್ನು ಹೊಡೆದವನನ್ನು ಕುಲದಿಂದ ಹೊರಹಾಕುವರು. ಮೃದು ಸ್ವಭಾವದ ಅಪರಾಧಿಗಳಾಗಿದ್ದರೆ ಮಾತ್ರ

ದಂಡವನ್ನು ಕಟ್ಟಿಸಿಕೊಂಡು ಬಂದಿರುವ ಈ ಸಮುದಾಯದ ಜನರಿಗೆ ಮೆಟ್ಟಿನಿಂದ ಹೊಡಿಸಿಕೊಂಡವನ್ನು ಮತ್ತು ಹೊಡೆದವನ್ನು ಸೇರಿ ಮಾಂಸದ ಊಟವನ್ನು ಮಾಡಿಸಬೇಕು. ಬಂದಿರುವ ಎಲ್ಲರಿಗೆ ವೀಳ್ಯದೆಲೆಯನ್ನು ಹಂಚಬೇಕು ನಂತರ ಗುಡಿಕಟ್ಟೆಗೆ ಹೋಗಿ ದೇವರ ನೀರನ್ನು ಹಾಕಿಸಿಕೊಳ್ಳಲು ಹೇಳುವರು. ಇಂತಹ ಕಾರ್ಯಗಳಿಗೆ ಮಾತ್ರ ಗುಡಿಕಟ್ಟೆಯನ್ನು ಉಪಯೋಗಿಸಿಕೊಳ್ಳುತ್ತಾರೆ. ದೊಡ್ಡ ವ್ಯಾಜ್ಯಗಳು ಬಂದರೆ ಅವುಗಳನ್ನು ಕಟ್ಟೆಮನೆಗೆ ವರ್ಗಾಯಿಸಲಾಗುತ್ತದೆ.

೭.೧.೨ ಕಟ್ಟೆಮನೆಗಳ ಪಾತ್ರ

ಸಮಾಜದಲ್ಲಿ ಸಾಮಾಜಿಕ ಸಂಬಂಧಗಳ ವೃದ್ಧಿಸಿಕೊಳ್ಳುವ ಸಂದರ್ಭಗಳಲ್ಲಿ ಅನೇಕ ವೈರುಧ್ಯಗಳು ಕಂಡುಬರುವುದು ಸಾಮಾನ್ಯವಾಗಿರುತ್ತವೆ. ಆದ್ದರಿಂದ ಸಮುದಾಯಗಳಲ್ಲಿ ಶಾಂತಿ, ಸುವ್ಯವಸ್ಥೆಯನ್ನು ಕಾಪಾಡಿಕೊಳ್ಳಲು ಸಮಾಜದಲ್ಲಿ ಸಾಮಾಜಿಕ ನಿಯಂತ್ರಣ ಅವಶ್ಯಕ. ಈ ಉದ್ದೇಶಗಳಾಗಿ ಮಾದಿಗ ಸಮುದಾಯವು ತಮ್ಮ ಜನರನ್ನು ನಿಯಂತ್ರಣ ಮಾಡುವ ಉದ್ದೇಶದಿಂದಾಗಿ ಹಾಗೂ ಶಾಂತಿ ಸುವ್ಯವಸ್ಥೆಯನ್ನು ಕಾಪಾಡಿಕೊಂಡು ಹೋಗಲು ಹಲವಾರು 'ಗುಡಿಕಟ್ಟೆ'ಗಳು ಸೇರಿ ಒಂದು 'ಕಟ್ಟೆಮನೆ' ನಿರ್ಮಾಣವಾಗಿರುತ್ತದೆ. ಈ ಕಟ್ಟೆಮನೆಯ ಮುಖ್ಯಸ್ಥರನ್ನು ಕುಲದ ಹಿರಿಯ ಅಥವಾ ಹಿರಿಯ ಯಜಮಾನ ಎಂದು ಕರೆಯುತ್ತಾರೆ. ಚಿತ್ರದುರ್ಗ ಜಿಲ್ಲೆಯಲ್ಲಿ ಬರುವ ಮಾದಿಗ ಸಮುದಾಯದವರಿಗೆ ಆಂಧ್ರಪ್ರದೇಶದ 'ಪೆನ್ನಕೊಂಡ', ಗೋನೂರು, ನಾಯಕನಹಟ್ಟಿ, ನನ್ನಿವಾಳ ಎಂಬ ನಾಲ್ಕು ಕಟ್ಟೆಮನೆಗಳಿವೆ. ಈ ನಾಲ್ಕು ಕಟ್ಟೆಮನೆಗಳು ಹಿಂದಿನಿಂದಲೂ ನ್ಯಾಯ ತೀರ್ಮಾನಗಳನ್ನು ಬಗೆಹರಿಸಿಕೊಡುತ್ತಿವೆ. ಈ ಕಟ್ಟೆಮನೆ ವ್ಯಾಪ್ತಿಗೆ ಮೂವತ್ತೂರು ಅಥವಾ ಮೂವತ್ತೆರಡು ಹಳ್ಳಿಗಳು ಬರುತ್ತವೆ. ಮುಖ್ಯ ಕಟ್ಟೆಮನೆ ಇರುವ ಹಳ್ಳಿಯಲ್ಲಿ ಐದು ಅಥವಾ ಎಂಟು ಜನರು ಇರುವ ಯಜಮಾನರನ್ನು ಆಯ್ಕೆ ಮಾಡುತ್ತಾರೆ. ಈ ರೀತಿಯ ಒಳಾಡಳಿತದ ವ್ಯವಸ್ಥೆ ಅವರ ಒಗ್ಗಟ್ಟಿನ ಕುರುಹು ಆಗಿವೆ.

ಮಾದಿಗ ಸಮುದಾಯದ ದೇವಸ್ಥಾನದ ಮುಂಭಾಗದ ಕಟ್ಟೆ ಅಥವಾ ದೇವಸ್ಥಾನದ ಜಗಲಿಯಲ್ಲಿಯೇ ಪ್ರತಿಯೊಂದು ಕಟ್ಟೆಮನೆಯ ಯಜಮಾನರು ನ್ಯಾಯ ತೀರ್ಮಾನ ಮಾಡುತ್ತಾರೆ. ನ್ಯಾಯ ಕೊಡುವುದರಲ್ಲಿ ಅಂತಿಮ ತೀರ್ಪನ್ನು ಪ್ರತಿಯೊಂದು ಕಟ್ಟೆಮನೆಗಳಲ್ಲಿ ಯಜಮಾನರೇ ಕೊಡುತ್ತಾರೆ. ಈ ಕಟ್ಟೆಮನೆಗಳ ನ್ಯಾಯ ತೀರ್ಮಾನಕ್ಕೆ ಮುಂಚೆ ಊರಿಗೆ ಸಾರು ಹಾಕುತ್ತಾರೆ. ನಂತರ ಯಾವ ಹಳ್ಳಿಯಲ್ಲಿ ಜಗಳವಾಗಿರುತ್ತದೆಯೋ ಆ ಹಳ್ಳಿಯ ಯಜಮಾನರು, ಪೂಜಾರಿ, ದೈವದವರು ಮತ್ತು ಆ ವ್ಯಾಜ್ಯಕ್ಕೆ ಸಂಬಂಧಿಸಿದ ಅಪರಾಧಿಗಳು ಬರಬೇಕಾಗುತ್ತದೆ. ಕಟ್ಟೆಮನೆಯಲ್ಲಿ ದೊಡ್ಡ ವ್ಯಾಜ್ಯಗಳು ಮಾತ್ರ ಬರುತ್ತವೆ. ಸಣ್ಣಪುಟ್ಟ ಒಳಜಗಳಗಳು ನಡೆದಿದ್ದರೆ ಅವುಗಳನ್ನು ಗುಡಿಕಟ್ಟೆಯಲ್ಲೇ ಬಗೆಹರಿಸುತ್ತಾರೆ.

ಕಟ್ಟೆಮನೆಯಲ್ಲಿ ನಡೆಯುವ ನ್ಯಾಯ ತೀರ್ಮಾನದಲ್ಲಿ ಯಾವುದೇ ಪಕ್ಷಪಾತವಾಗುವುದಿಲ್ಲ. ನ್ಯಾಯ ತೀರ್ಮಾನ ನಡೆಸುವಾಗ ಗಟ್ಟಿಯಾಗಿ ಮಾತನಾಡುವುದಾಗಲಿ, ದುರ್ವರ್ತನೆಯಿಂದ ನಡೆದುಕೊಳ್ಳುವುದಾಗಲಿ, ಬೀಡಿ, ನಶ್ಯ, ಸೇದುವುದಾಗಲಿ ನಿಷಿದ್ಧ, ಬಂದಿರುವ ಎಲ್ಲಾ ಸಾರ್ವಜನಿಕರು ತಾಳ್ಮೆಯಿಂದ ವಿಚಾರಗಳನ್ನು ಆಲಿಸಬೇಕು. ಅಪರಾಧಿ ಸ್ಥಾನದಲ್ಲಿ ನಿಂತವರು ತಮ್ಮ ಕುಲಕ್ಕೆ ದ್ರೋಹ

ಮಾಡಿದ್ದರೆ, ಅಣ್ಣ ತಮ್ಮಗಳಿಗೆ ಮೋಸ ಮಾಡಿದ್ದರೆ, ವಿಧವೆಯ ಜೊತೆ ಅನೈತಿಕ ವ್ಯವಹಾರ ಮಾಡಿದ್ದರೆ, ಕೊಲೆ ಮಾಡಿದ್ದರೆ, ಹೆಂಡ ಕುಡಿಯುತ್ತಿದ್ದರೆ, ಮೆಟ್ಟಿನಲ್ಲಿ ಬಡಿದಿದ್ದರೆ ಅಥವಾ ಬಡಿಸಿಕೊಂಡಿದ್ದರೆ, ಅಪರಾಧಿಯು ಕೂಡ ವಿಚಾರವನ್ನು ನಿಧಾನವಾಗಿ ಸ್ಪಷ್ಟವಾಗಿ, ಸತ್ಯಸಂಗತಿಗಳನ್ನು ಮುಚ್ಚುಮರೆಯಿಲ್ಲದೆ ಕೂಲಂಕಷವಾಗಿ ನಡೆಸುವರು. ಅಪರಾಧಿಗಳು ಸಂಬಂಧಿಸಿದ ಸಾಕ್ಷಿಗಳನ್ನು ತಂದಿರಬೇಕು. ಒಂದುವೇಳೆ ದೊರೆಯದಿದ್ದಾಗ ದೈವೀ ಪರೀಕ್ಷೆಗಳ ಮೂಲಕವಾಗಿ (ಕೈಮೇಲೆ ಕೆಂಡ ತಂದಿರಬೇಕು, ಹಾಲಿನ ಮೇಲೆ ಪ್ರಮಾಣ ಮಾಡುವುದು, ಕುದಿಯುವ ಎಣ್ಣೆಯಲ್ಲಿ ಕೈಯಿಡಿಸುವುದು, ದೇವರ ಮುಂದೆ ದೀಪ ಹಚ್ಚಿ ದೀಪದ ಮೇಲೆ ಪ್ರಮಾಣ ಮಾಡುವುದು) ತಪ್ಪು ಒಪ್ಪುಗಳನ್ನು ಕೂಲಂಕಷವಾಗಿ ವಿಚಾರಿಸಿ ಚರ್ಚಿಸಿ ದೈವದವರ ಸಲಹೆ ಸೂಚನೆಗಳನ್ನು ಪರಿಗಣಿಸಿ ಯಜಮಾನರು ತೀರ್ಪು ಕೊಡುತ್ತಾರೆ. ಈ ತೀರ್ಪು, ದಂಡ, ಶಿಕ್ಷೆ, ಬಹಿಷ್ಕಾರ ಎಂಬ ಮೂರು ರೀತಿಗಳಿಂದ ತೀರ್ಪು ಕೊಡುತ್ತಾರೆ. ಅಪಾದಿತ ವ್ಯಕ್ತಿ ಮಾಡಿದ ಅಪರಾಧಕ್ಕನುಗುಣವಾಗಿ ತೀರ್ಪು ನಿರ್ಧರಿತವಾಗುತ್ತಿತ್ತು. ಹಟ್ಟಿಯ ಹೆಣ್ಣು ಅಥವಾ ವಿಧವೆ ಬೇರೆ ಜಾತಿಯ ಪುರುಷನೊಂದಿಗೆ ಲೈಂಗಿಕ ಸಂಪರ್ಕವಿಟ್ಟುಕೊಂಡಿದ್ದರೆ ಅಥವಾ ಅವನ ಜೊತೆ ಓಡಿಹೋಗಿದ್ದರೆ, ಅಂಥವಳನ್ನು 'ಕುಲಗೆಟ್ಟ ಹೆಣ್ಣು' ಎಂದು ತೀರ್ಪು ಕೊಟ್ಟು ಹಟ್ಟಿಯಿಂದ ಹೊರ ಹಾಕಬಹುದು.

ಉಗ್ರರೂಪದ ಅಪರಾಧವಾಗಿದ್ದರೆ ಅಪರಾಧಿಯು ಕಾಲು ಕಟ್ಟಿ ಹೊರಹೋಗದಂತೆ ಬಂಧಿಸುವರೂ. ಅವನು ತನ್ನ ತಪ್ಪನ್ನು ಒಪ್ಪಿಕೊಳ್ಳದಿದ್ದಲ್ಲಿ ಬೀಸೋ ಕಲ್ಲಿನ ಒಂದು ಭಾಗವನ್ನು ಆತನ ಎದೆಯ ಮೇಲಿಟ್ಟು ಮತ್ತೊಂದು ಭಾಗವನ್ನು ಬೆನ್ನಿನ ಮೇಲೆ ನೇತು ಹಾಕಿ ಶಿಕ್ಷೆ ಕೊಡುವರು ಹಾಗೂ ಜಗ್ಗದಿದ್ದಲ್ಲಿ ಅಂತಹವರನ್ನು ಊರಿನಿಂದ 'ಬಹಿಷ್ಕಾರ' ಹಾಕುವರು. ಅಪರಾಧಿಗೆ ಯಾರೂ ಅನ್ನ, ನೀರು, ಬೆಂಕಿಯನ್ನು ಕೊಡಬಾರದೆಂದು ಡಂಗೂರ ಸಾರಿಸುವರು. ಚಿಕ್ಕ ಪುಟ್ಟ ಅಪರಾಧಿಗಳಿಗೆ ಊರಿನಿಂದ ಹೊರಗೆ ಕರೆದುಕೊಂಡು ಹೋಗಿ ತಲೆಯನ್ನು ಬೋಳಿಸಿ ಕುಂಕುಮ, ವಿಭೂತಿ ಇಟ್ಟು ಊರಿನ ಗುಡಿಯ ಹತ್ತಿರ ಕರಿಸಿ ಜೊತೆಗೆ ದೇವರ ದೀಪಕ್ಕೆ ಎಣ್ಣೆ ಹಾಕಿಸುವ. ತೀರ್ಪುಗಳನ್ನು ಕಟ್ಟೆಮನೆಯವರು ಕೊಡುತ್ತಾರೆ. ತೀರ್ಪು ಕೊಟ್ಟ ನಂತರ ತಪ್ಪು ಮಾಡಿದವನನ್ನು ಸೇರಿರುವ ಜನರಿಗೆ ಸರಿಹೊಂದುವಂತೆ ಮಾಂಸದ ಊಟ ಹಾಕಿಸಿ, ಎಲೆ, ಅಡಿಕೆ ಮತ್ತು ದಂಡವನ್ನು ಕಟ್ಟಿಸಿಕೊಂಡು ತಾಂಬೂಲದೊಂದಿಗೆ ದಕ್ಷಿಣೆ ಪಡೆದು ಕ್ಷಮಾಪಣೆ ಕೇಳಿಸಿ ದೇವರಿಗೆ ಕೈಮುಗಿಸಿ ಮುಂದೆ ಇಂತಹ ತಪ್ಪುಗಳನ್ನು ಮಾಡುವುದಿಲ್ಲ ಎಂದು ಹೇಳಿ ಬಿಡುತ್ತಾರೆ. ಈ ಕಟ್ಟೆಮನೆಯ ಯಜಮಾನರು ದಂಡದಿಂದ ಸಂಗ್ರಹಿಸಿದ ಹಣವನ್ನು ದೇವಸ್ಥಾನದ ಅಭಿವೃದ್ಧಿ ಕಾರ್ಯಗಳಿಗೆ ಮಾತ್ರ ಬಳಸುತ್ತಾರೆ. ಒಂದುವೇಳೆ ಈ ಹಣ ಬೇರೊಂದು ಕೆಲಸಕ್ಕೆ ಬಳಸಿದ್ದರೂ ಅಂತಹ ಯಜಮಾನರನ್ನು ದೆಹಲಿಯಲ್ಲಿ ನಮ್ಮ ಪೂರ್ವಜರ ಕಟ್ಟೆಮನೆಯಿದೆ ಅಲ್ಲಿ ಇವರಿಗೆ ನ್ಯಾಯ ತೀರ್ಮಾನ ನಡೆಯುತ್ತದೆ ಎಂದು ನಂಬಿಸಲಾಗುತ್ತದೆ. ಹೊಸದುರ್ಗ ತಾಲ್ಲೂಕಿನ ದೊಡ್ಡಘಟ್ಟದ ಗ್ರಾಮದ ಪೂಜಾರಿ ಎಂಬುದಾಗಿ ಹೇಳುತ್ತಾರೆ. ಇಂತಹ ಔಪಚಾರಿಕ ಕಾನೂನು ಮಾದಿಗ ಸಮುದಾಯ ಮಾಡಿಕೊಡಿರುವ ಕಟ್ಟೆಮನೆ

ಬಹಳ ಮಹತ್ವವಾದ ಹಾಗೂ ಪರಸ್ಪರ ಸಾಮಾಜಿಕ ಸಂಬಂಧಗಳನ್ನು ಗಟ್ಟಿಗೊಳ್ಳಲು ಗುಡಿಕಟ್ಟೆ, ಕಟ್ಟೆಮನೆಗಳು ಹೆಚ್ಚು ಅಗತ್ಯ ಎಂದು ಹೇಳಬಹುದು.

ಶಿಷ್ಟ ಸಂಪ್ರದಾಯಗಳ ಪ್ರಭಾವಕ್ಕೆ ಬಂದ ನಂತರ ಮಾದಿಗ ಸಮುದಾಯಗಳಲ್ಲಿ ಧಾರ್ಮಿಕ ವಿಚಾರದಲ್ಲಿ ಮಾತ್ರವಲ್ಲ, ಸಾಮಾಜಿಕ, ಆರ್ಥಿಕ, ನೈತಿಕ ವಿಚಾರದಲ್ಲೂ ಬದಲಾವಣೆಗಳು ಬಂದವು. ಹಿಂದೆ ಕಟ್ಟೆಮನೆಯಲ್ಲಿ ನೀಡಿದ ನ್ಯಾಯ ತೀರ್ಪಿನಿಂದ ಸಮುದಾಯಗಳಲ್ಲಿ ಹೊಂದಾಣಿಕೆ, ಸಹಕಾರ ಮನೋಭಾವನೆ ಬೆಳೆಸಿಕೊಳ್ಳುತ್ತಿದ್ದರು. ಇವತ್ತಿನ ಆಧುನೀಕರಣ ಸಾಂಧರ್ಭದಲ್ಲಿ ಈ ಸಮುದಾಯವು ಕಟ್ಟೆಮನೆಯನ್ನು ಕೇವಲ ಧಾರ್ಮಿಕ ಆಚರಣೆಯಲ್ಲಿ. ವಿವಾಹ ಸಂದರ್ಭದಲ್ಲಿ ದೇವರ ನೀರು ಹಾಕಿಸಿಕೊಳ್ಳಲು ಮಾತ್ರ ಬಳಸಿಕೊಳ್ಳುತ್ತಾರೆ. ಆದ್ದರಿಂದ ಹೆಚ್ಚಿನ ಜನರು ಇವತ್ತು ಯಾವುದೇ ನ್ಯಾಯವನ್ನು ಬಗೆಹರಿಸಿಕೊಳ್ಳಲ್ಲು ಪೊಲೀಸ್ ಠಾಣೆ, ಕೋರ್ಟು, ಕಛೇರಿಗೆ ಹೋಗುವವರ ಸಂಖ್ಯೆಯು ಅಧಿಕವಾಗುತ್ತಿದೆ. 'ಹಳ್ಳಿಯಿಂದ ದಿಲ್ಲಿಗೆ' ಎಂಬ ತತ್ವದಂತೆ ದಿಲ್ಲಿಯಲ್ಲಿ ನಡೆಯುವ ಯಾವುದೇ ಘಟನೆಗಳು ನಡೆದರೆ ದೂರದರ್ಶನಗಳ ಮೂಲಕ ಹಳ್ಳಿಯಲ್ಲಿ ನೋಡುತ್ತಿರುವುದರಿಂದ ಗುಡಿಕಟ್ಟೆ ಮತ್ತು ಕಟ್ಟೆಮನೆಗಳ ಪಾತ್ರ ಕಡಿಮೆಯಾಗುತ್ತಿದೆ. ಪ್ರತಿಯೊಂದು ವಿಚಾರಗಳನ್ನು ತರ್ಕ ಮಾಡುವ ಆಲೋಚನೆಗಳನ್ನು ಬೆಳೆಸಿಕೊಂಡಿದ್ದಾರೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಕಂಡುಬರುವ ಪ್ರಮುಖವಾದ ಕಟ್ಟೆಮನೆಗಳ ವಿವರಗಳು

- **ಚಳ್ಳಕೆರೆ ತಾಲೂಕಿನಲ್ಲಿ ಬರುವ ಕಟ್ಟೆಮನೆಗಳು**

೧. ಅನಂತಪುರ ಕಟ್ಟೆಮನೆ

೨. ಕೋನಬೇವು ಕಟ್ಟೆಮನೆ

೩. ಗೊಸಿಕೆರೆ ಕಟ್ಟೆಮನೆ

೪. ಗೌರಸಮುದ್ರ ಕಟ್ಟೆಮನೆ

೫. ಘಟ್ಟಿಪರ್ತಿ ಕಟ್ಟೆಮನೆ

೬. ದೊಡೇರಿ ಕಟ್ಟೆಮನೆ

೭. ದೊಡ್ಡಳ್ಳಾರ್ತಿ ಕಟ್ಟೆಮನೆ

೮. ನನ್ನಿವಾಳ ಕಟ್ಟೆಮನೆ

೯. ಭಂಜಗೆರೆ ಕಟ್ಟೆಮನೆ

೧೦. ತಾಳಿಕೆರೆ ಕಟ್ಟೆಮನೆ

೧೧. ಮಲ್ಲೋರ್ (ತಿರುಪತಿ) ಕಟ್ಟೆಮನೆ

೧೨. ರಾಯದುರ್ಗ ಕಟ್ಟೆಮನೆ

- **ಚಿತ್ರದುರ್ಗ ತಾಲೂಕಿನಲ್ಲಿ ಬರುವ ಕಟ್ಟೆಮನೆಗಳು**

೧. ಗೋನೂರು ಕಟ್ಟೆಮನೆ

೨. ಚಿತ್ರದುರ್ಗ ಕಟ್ಟೆಮನೆ

೩. ಚಿತ್ರಹಳ್ಳಿ ಕಟ್ಟೆಮನೆ

- **ಮೊಳಕಾಲ್ಮೂರು ತಾಲೂಕಿನಲ್ಲಿ ಬರುವ ಕಟ್ಟೆಮನೆಗಳು**

೧. ಕೋನಸಾಗರ ಕಟ್ಟೆಮನೆ

೨. ಗೌರಸಮುದ್ರ ಕಟ್ಟೆಮನೆ

೩. ಘಟ್ಟಪರ್ತಿ ಕಟ್ಟೆಮನೆ

೪. ಚಿನ್ನೋಬನಹಳ್ಳಿ ಕಟ್ಟೆಮನೆ

೫. ಬಿ.ಜಿ ಕೆರೆ ಕಟ್ಟೆಮನೆ

೬. ನಾಗಸಮುದ್ರ ಕಟ್ಟೆಮನೆ

೭ ದೇವಸಮುದ್ರ ಕಟ್ಟೆಮನೆ

೮. ಭಂಜಗೇರಿ ಕಟ್ಟೆಮನೆ

೯. ಮೊಳಕಾಲ್ಮೂರು ಕಟ್ಟೆಮನೆ

೧೦. ರಾಮಸಾಗರ ಕಟ್ಟೆಮನೆ

೧೧. ರಾಯದುರ್ಗ ಕಟ್ಟೆಮನೆ

೧೨. ವಲಸೆ ಕಟ್ಟೆಮನೆ

೧೩. ಹಿರೇಹಳ್ಳಿ ಕಟ್ಟೆಮನೆ

- **ಹಿರಿಯೂರು ತಾಲೂಕಿನಲ್ಲಿ ಬರುವ ಕಟ್ಟೆಮನೆಗಳು**

೧. ಕ್ಯಾದಿಗುಂಟೆ ಕಟ್ಟೆಮನೆ

೨. ಸುಗೂರು ಕಟ್ಟೆಮನೆ

೩. ಭರಮಪುರ ಕಟ್ಟೆಮನೆ

೪. ಮಹದೇವಪುರ ಕಟ್ಟೆಮನೆ

೫. ಹರ್ತಿಕೋಟೆ ಕಟ್ಟೆಮನೆ

೬. ಹುನ್ನಿಕೇರೆ ಕಟ್ಟೆಮನೆ

• **ಹೊಳಲ್ಕೆರೆ ತಾಲೂಕಿನಲ್ಲಿ ಬರುವ ಕಟ್ಟೆಮನೆಗಳು**

೧. ಗೂಂಡೇರಿ ಕಟ್ಟೆಮನೆ

೨. ಗೋನೂರು ಕಟ್ಟೆಮನೆ

೩. ಚಿಕ್ಕಜಾಜೂರು ಕಟ್ಟೆಮನೆ

೪. ಚಿತ್ರಹಳ್ಳಿ ಕಟ್ಟೆಮನೆ

೫. ತಾಳ್ಯ ಕಟ್ಟೆಮನೆ

೬. ಹೊರಕೆದಾಪುರ ಕಟ್ಟೆಮನೆ

೭. ಹೊಳಲ್ಕೆರೆ ಕಟ್ಟೆಮನೆ

ಚಿತ್ರದುರ್ಗ ಜಿಲ್ಲೆಯ ಆರು ತಾಲೂಕುಗಳಲ್ಲಿ ಅವರ ಅನುಕೂಲಕ್ಕೆ ಅನುಗುಣವಾಗಿ ಕಟ್ಟೆಮನೆಗಳನ್ನು ನಿರ್ಮಾಣ ಮಾಡಿಕೊಂಡು. ಸಮಾಜದ, ಸಮುದಾಯದ ಸ್ವಾಸ್ಥ್ಯಗಳನ್ನು ಕಾಪಾಡಿಕೊಂಡು ಬರುತ್ತಿದ್ದಾರೆ.

೮.೨. ಪಂಚಾಯತ್‌ರಾಜ್ ವ್ಯವಸ್ಥೆ

"ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಕಾಂತ್ರಿಕಾರಕ ಬದಲಾವಣೆಗಳನ್ನು ಅದರ ಪರಿಕಲ್ಪನೆ, ರಚನೆ, ಸಂವಿಧಾನ ಹಾಗೂ ಕಾರ್ಯವಿಧಾನಗಳಲ್ಲಿ ಕಳೆದ ನಾಲ್ಕು ದಶಕಗಳಿಂದ (೧೯೫೧-೧೯೯೩) ಅನುಷ್ಠಾನಗೊಳಿಸಲಾಗಿದೆ. ಕರ್ನಾಟಕದಲ್ಲಿ ಒಂದು ಪ್ರಗತಿಶೀಲ ಕಾಯ್ದೆಯ ಮೂಲಕ 'ಗ್ರಾಮಸ್ವರಾಜ್ಯ' ಮತ್ತು 'ಸ್ವರಾಜ್ಯ'ಗಳ ವಿಕೇಂದ್ರಿಕರಣದ ಪರಿಕಲ್ಪನೆಯನ್ನು ವಾಸ್ತವವಾಗಿ ಜಾರಿಗೆ ತರುವ ಮೂಲಕ ಆಡಳಿತಾರೂಢ ಸರ್ಕಾರಗಳು ಕಾಲಕ್ರಮೇಣ ಹಂತ ಹಂತವಾಗಿ ಪ್ರಾಮಾಣಿಕ ಪ್ರಯತ್ನ ಮಾಡಿ ಯಶಸ್ವಿಗೊಳಿಸಿವೆ."[೨]

"ರಾಜ್ಯ ಪುನರ್ ಸಂಘಟನೆಗೊಂಡ ನಂತರ ೧೯೬೦ರಲ್ಲಿ ಒಂದು ಒಗ್ಗೂಡಿದ ಸಮಗ್ರವಾದ ಪಂಚಾಯತ್‌ರಾಜ್ ಕಾಯಿದೆಯು ೧೯೫೯ರ ಕರ್ನಾಟಕ ಸ್ಥಳೀಯ ಸಂಸ್ಥೆಗಳು ಮತ್ತು ಗ್ರಾಮ ಪಂಚಾಯತಿ ಕಾಯಿದೆಯ ಮೂಲಕ ೧೯೬೦ರಿಂದ ಜಾರಿಗೊಳಿಸಲಾಯಿತು. ಈ ಕಾಯಿದೆಯಡಿ ಗ್ರಾಮ ಮಟ್ಟದಲ್ಲಿ ಗ್ರಾಮ ಪಂಚಾಯತಿಗಳು, ತಾಲೂಕು ಮಟ್ಟದಲ್ಲಿ ತಾಲೂಕು ಅಭಿವೃದ್ಧಿ ಮಂಡಳಿಗಳು ಮತ್ತು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಅಭಿವೃದ್ಧಿ ಪರಿಷತ್ತಗಳನ್ನು ರಚಿಸಲಾಯಿತು. ಮೂರು ಹಂತದ ಈ ಆಡಳಿತ ವ್ಯವಸ್ಥೆಯಲ್ಲಿ ಕೇವಲ ಗ್ರಾಮ ಪಂಚಾಯತಿಗಳು ಮತ್ತು ತಾಲೂಕು ಅಭಿವೃದ್ಧಿ ಮಂಡಳಿಗಳಲ್ಲಿ ಮಾತ್ರ ಚುನಾಯಿತ ಪ್ರತಿನಿಧಿಗಳು ಇರುತ್ತಿದ್ದು, ಜಿಲ್ಲಾಭಿವೃದ್ಧಿ ಪರಿಷತ್‌ನಲ್ಲಿ ಕೇವಲ ಸಲಹಾ ಮಂಡಳಿಗಳಲ್ಲಿ ಸರ್ಕಾರಿ ಅಧಿಕಾರಿಗಳು ಮತ್ತು ಅಭಿವೃದ್ಧಿ ಕೆಲಸಗಳ ಯೋಜನೆಯ ಸರ್ಕಾರೇತರ ಸದಸ್ಯರುಗಳನ್ನು ಒಳಗೊಂಡಂತಹ ಒಂದು ತಂಡ ಇರುತ್ತದೆ. ಈ ಮೇಲೆ ತಿಳಿಸಿದ ವ್ಯವಸ್ಥೆಯಲ್ಲಿ ಗ್ರಾಮೀಣ ಅಭಿವೃದ್ಧಿ ಯೋಜನೆ ಮತ್ತು ಕೆಲಸ ಕಾರ್ಯಗಳು ತಾಲೂಕು ಅಭಿವೃದ್ಧಿ ಮಂಡಳಿಗಳ ನಿಯಂತ್ರಣದ ಅಡಿಯಲ್ಲಿ ಅನುಷ್ಠಾನಗೊಳಿಸುವಂತೆ ನಿರ್ದೇಶಿಸಲಾಗುತ್ತದೆ. ತಾಲೂಕು ಅಭಿವೃದ್ಧಿ

ಮಂಡಳಿಗಳ ನಿಯಂತ್ರಣದಲ್ಲಿ ಗ್ರಾಮ ಪಂಚಾಯತಿಗಳು ಕಾರ್ಯನಿರ್ವಹಿಸುತ್ತವೆ. ೧೯೮೩ರವರೆಗೂ ಈ ರೀತಿಯ ಪಂಚಾಯತ್‌ರಾಜ್ ಸಂಸ್ಥೆಗಳು ಮುಂದುವರೆದವು. ಆಡಳಿತದಲ್ಲಿ ವಿಕೇಂದ್ರಿಕರಣವನ್ನು ಜಾರಿಗೊಳಿಸಲು ಹಾಗೂ ಮಂಡಲ ಹಂತದಲ್ಲಿ ಹೆಚ್ಚಿನ ಸಾರ್ವಜನಿಕ ಸಹಭಾಗಿತ್ವದ ಅಭಿವೃದ್ಧಿ ಕಾರ್ಯಗಳ ಪ್ರಕ್ರಿಯೆಯನ್ನು ಸಾಧಿಸಲು, ಈ ಮೊದಲಿದ್ದ ೧೯೫೯ರ ಕಾಯಿದೆಯನ್ನು ಬದಲಾಯಿಸಲಾಯಿತು. ೧೯೫೯ರ ಕಾಯಿದೆಯ ಸ್ಥಾನದಲ್ಲಿ ಕರ್ನಾಟಕ ಜಿಲ್ಲಾ ಪರಿಷತ್ತು, ತಾಲೂಕು ಪಂಚಾಯತಿ ಸಮಿತಿ, ಮಂಡಲ ಪಂಚಾಯತಿ ಮತ್ತು ನ್ಯಾಯ ಪಂಚಾಯತಿಗಳ ಕಾಯಿದೆಯನ್ನು ೧೯೮೩ರಲ್ಲಿಯೇ ರಚಿಸಲಾಯಿತು. ಈ ಕಾಯಿದೆಯನ್ನು ೧೯೫೮ರಿಂದ ಅನುಷ್ಠಾನಗೊಳಿಸಲಾಯಿತು. ಆದರೆ ಇದರಲ್ಲಿ ನ್ಯಾಯ ಪಂಚಾಯತಿಯು ಸೇರ್ಪಡೆಯಾಗಿದ್ದರೂ ಜಾರಿಗೆ ಬರಲಿಲ್ಲ."[೩]

"ರಾಜ್ಯದಲ್ಲಿ ೧೯೮೭ರಿಂದ ನೂತನ ಪಂಚಾಯತ್‌ರಾಜ್ ಸಂಸ್ಥೆಗಳು ಜಾರಿಗೆ ಬಂದವು ಮತ್ತು ಈ ಸಂಸ್ಥೆಗಳಿಗೆ ಮೊಟ್ಟಮೊದಲ ಬಾರಿಗೆ ಚುನಾವಣೆಗಳು ಜರುಗಿದವು. ೧೮ ವರ್ಷ ಪೂರೈಸಿದ ಎಲ್ಲರಿಗೂ ಮತ ಚಲಾಯಿಸುವ ಹಕ್ಕನ್ನು ವಿಸ್ತರಿಸಲಾಯಿತು. ಹೊಸ ಕಾಯಿದೆಯನ್ವಯ ಮೂರು ಹಂತಗಳ ಸಂಸ್ಥೆಗಳೂ ಅಭಿವೃದ್ಧಿ ಪ್ರೇರಿತವಾಗಿ ಅಂತರಿಕ ಸಂಬಂಧ ಹೊಂದಿರುವ ಸಂಸ್ಥೆಗಳಾಗಿದ್ದವು. ಗ್ರಾಮ ಮಟ್ಟದಲ್ಲಿ ಮಂಡಲ ಪಂಚಾಯತಿ ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಪಂಚಾಯತಿ ಸಮಿತಿಗಳು ಮತ್ತು ಜಿಲ್ಲಾ ಪರಿಷತ್‌ಗಳು ಅಸ್ತಿತ್ವಕ್ಕೆ ಬಂದವು. ಈ ಹೊಸ ಪದ್ಧತಿಯಲ್ಲಿ ಕೇವಲ ಮಂಡಲ ಪಂಚಾಯತಿ ಹಾಗೂ ಜಿಲ್ಲಾ ಪರಿಷತ್‌ಗಳು ಮಾತ್ರ ಚುನಾಯಿತ ಪ್ರತಿನಿಧಿಗಳನ್ನೊಳಗೊಂಡ ಸಂಸ್ಥೆಗಳಾಗಿದ್ದವು. ತಾಲ್ಲೂಕು ಪಂಚಾಯತಿ ಸಮಿತಿಗಳು ಜಿಲ್ಲಾ ಪರಿಷತ್‌ಗಳ ಅಡಿಯಲ್ಲಿ ಮಂಡಲ ಮತ್ತು ಜಿಲ್ಲಾ ಪರಿಷತ್‌ಗಳ ನಡುವೆ ಮೇಲ್ವಿಚಾರಣೆ ಹಾಗೂ ಸಂಯೋಜನೆಗಳಿಗಾಗಿ ಇರುವ ಸಂಸ್ಥೆಯಂತೆ ಕಾರ್ಯ ನಿರ್ವಹಿಸಬೇಕಾಯಿತು. ಹೊಸ ವ್ಯವಸ್ಥೆಯಲ್ಲಿ ಜಿಲ್ಲಾ ಪರಿಷತ್‌ಗಳಿಗೆ ಹೆಚ್ಚಿನ ಅಧಿಕಾರ ಮತ್ತು ಜವಾಬ್ದಾರಿಗಳನ್ನು ವಹಿಸಲಾಯಿತು. ಇವು ಬಹುಪಾಲು ಜಿಲ್ಲೆಗಳಲ್ಲಿ ಸರ್ಕಾರವಾಗಿ ಕಾರ್ಯನಿರ್ವಹಿಸ ತೊಡಗಿದವು. ರಾಜ್ಯದ ಹೆಚ್ಚಿನ ರೀತಿಯ ಅಭಿವೃದ್ಧಿ ಕಾರ್ಯ ಚಟುವಟಿಕೆಗಳು ಜಿಲ್ಲಾ ಪರಿಷತ್ ಮತ್ತು ಮಂಡಲಗಳಿಂದ ಕಾರ್ಯರೂಪಕ್ಕೆ ಬರತೊಡಗಿದವು. ಶೇ. ೮೦ರಷ್ಟು ಅಭಿವೃದ್ಧಿ ಖರ್ಚುಗಳು ಜಿಲ್ಲಾ ಪರಿಷತ್ ಅಡಿಯಲ್ಲಿ ನೆರವೇರತೊಡಗಿತು. ದೊಡ್ಡ ಮತ್ತು ಮಧ್ಯಮ ಪ್ರಮಾಣದ ನೀರಾವರಿ ಕಾಮಗಾರಿಗಳನ್ನು ಹೊರತುಪಡಿಸಿ ಎಲ್ಲಾ ಅಭಿವೃದ್ಧಿ ಕಾಮಗಾರಿಗಳನ್ನು ಜಿಲ್ಲಾ ಪರಿಷತ್‌ಗಳಿಗೆ ವಹಿಸಲಾಯಿತು. ಮಂಡಲಗಳಿಗೆ ಪ್ರತ್ಯೇಕವಾದ ಅಧಿಕಾರದೊಂದಿಗೆ ನಿರ್ದಿಷ್ಟಪಡಿಸಿದ (೨೭) ಅಭಿವೃದ್ಧಿ ಕಾಮಗಾರಿಗಳನ್ನು ಸ್ಥಳೀಯ ಅವಶ್ಯಕತೆಗೆ ಅನುಗುಣವಾಗಿ ವಹಿಸಲಾಯಿತು. ಜಿಲ್ಲಾ ಪರಿಷತ್ ಮತ್ತು ಮಂಡಲಗಳ ವಿಕೇಂದ್ರೀಕೃತ ಆಡಳಿತದ ಪರಿಣಾಮವು ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಾಗಿ ಕಾಣಲಾರಂಭಿಸಿದವು. ಅವುಗಳಲ್ಲಿ ವಿಶೇಷವಾಗಿ ಮತ್ತು ನಿರ್ದಿಷ್ಟವಾಗಿ ಅಂದರೆ ಪ್ರಾಥಮಿಕ ಶಾಲೆಗಳಲ್ಲಿನ ವಿದ್ಯಾರ್ಥಿಗಳ ಹಾಗೂ ಶಿಕ್ಷಕರ ಹಾಜರಾತಿಯಲ್ಲಿ ಸುಧಾರಿತ ಫಲಿತಾಂಶ, ಗ್ರಾಮೀಣ ಆಸ್ಪತ್ರೆಗಳಲ್ಲಿ ವೈದ್ಯಾಧಿಕಾರಿಗಳ ಲಭ್ಯತೆ ಮತ್ತು ಇತರೆ ಇಲಾಖೆಗಳ ಕ್ಷೇತ್ರಾಡಳಿತ ಸಿಬ್ಬಂದಿಗಳ ಸೇವೆ ಇತ್ಯಾದಿಗಳಲ್ಲಿ ಗಮನಾರ್ಹವಾದ ಸುಧಾರಿತ ಬದಲಾವಣೆಗಳಾದವು. ಜಿಲ್ಲಾ

ಪರಿಷತ್ ಮತ್ತು ಮಂಡಲ ಪಂಚಾಯತಿಗಳ ಕಾರ್ಯನಿರ್ವಹಣ ಮೌಲ್ಯಮಾಪನಾ ಸಮಿತಿಗಳು ಈ ಸುಧಾರಿತ ಫಲಿತಾಂಶಗಳ ಕುರಿತು ಮಾಹಿತಿ ನೀಡಿವೆ."[೪]

• ಕರ್ನಾಟಕ ಪಂಚಾಯತ್‌ರಾಜ್ ಕಾಯಿದೆ

"ರಾಜ್ಯದಲ್ಲಿ ಗ್ರಾಮೀಣ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಇನ್ನಷ್ಟು ಬಲಪಡಿಸಿ, ಅವುಗಳ ಕಾರ್ಯವಿಧಾನವನ್ನು ಸೂಕ್ತ ಹಂತದಲ್ಲಿ ವಿಕೇಂದ್ರೀಕರಣ ಮೂಲಕ ಉತ್ತಮಗೊಳಿಸುವ ಉದ್ದೇಶದಿಂದ ಹೊಸದಾಗಿ ಪಂಚಾಯತ್‌ರಾಜ್ ಕಾನೂನನ್ನು ೧೯೯೩ ಮೇ ೧೦ ರಂದು ಸರ್ಕಾರವು ಜಾರಿಗೆ ತಂದಿತು. ಇವುಗಳನ್ನು ಮೊದಲು ಕಾರ್ಯನಿರ್ವಹಿಸುತ್ತಿದ್ದ ಮಂಡಲ ಪಂಚಾಯತ್, ತಾಲೂಕು ಪಂಚಾಯತ್ ಸಮಿತಿ ಮತ್ತು ಜಿಲ್ಲಾ ಪರಿಷತ್ತುಗಳಿಗೆ ಬದಲಾಗಿ ರಚಿಸಲಾಗಿದೆ. ರಾಜ್ಯಾಂಗದ ೭೩ನೇ ತಿದ್ದುಪಡಿಯ ನಂತರ ಕಾರ್ಯರೂಪದಲ್ಲಿ ಬಂದಿರುವ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ರಾಷ್ಟ್ರದಲ್ಲಿ ಅರ್ಥಪೂರ್ಣವಾಗಿ ಅನುಷ್ಠಾನಗೊಳಿಸಿದ ಕೀರ್ತಿ ಕರ್ನಾಟಕಕ್ಕೆ ಸಲ್ಲುತ್ತದೆ. ದೇಶದಲ್ಲಿಯೇ ಪ್ರಥಮ ಪಂಚಾಯತ್‌ರಾಜ್ ಕಾಯಿದೆ ಇದಾಗಿದ್ದು ಆಡಳಿತದಲ್ಲಿ ವಿಕೇಂದ್ರೀಕರಣ, ದಕ್ಷತೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಿಂದುಳಿದ ವರ್ಗಗಳಿಗೆ ೨೩% ಹಾಗೂ ಮಹಿಳೆಯರಿಗೆ ೩೩% ಮೀಸಲಾತಿ ಸೌಲಭ್ಯ ಹಾಗೂ ಮೂರು ಹಂತಗಳಲ್ಲಿ ಚುನಾಯಿತ ಮಂಡಳಿಗಳ ರಚನೆ ಇದರ ವೈಶಿಷ್ಟ್ಯವಾಗಿದೆ. ಅಲ್ಲದೆ ಅಧ್ಯಕ್ಷ ಸ್ಥಾನವನ್ನು ಸರದಿ ಮೂಲಕ ಮೀಸಲಾತಿಗೆ ಒಳಪಡಿಸಲಾಯಿತು."[೫]

ಹೊಸ ಕಾಯ್ದೆಯು ೧೦ನೇ ಮೇ ೧೯೯೩ರಿಂದ ಜಾರಿಗೆ ಬಂದಿದೆ. ರಾಜ್ಯದಲ್ಲಿ ಇದೊಂದು ಸಮಗ್ರವಾದ ಮೂರು ಹಂತದ ಪಂಚಾಯತ್‌ರಾಜ್ ಪದ್ಧತಿಯ ಸ್ಥಾಪನೆಗೊಳಿಸುವ ಉದ್ದೇಶವನ್ನು ಹೊಂದಿದ್ದು, ಗ್ರಾಮಗಳಲ್ಲಿ ತಾಲೂಕುಗಳಲ್ಲಿ ಮತ್ತು ಜಿಲ್ಲಾ ಮಟ್ಟಗಳಲ್ಲಿ ಚುನಾಯಿತ ಸಂಸ್ಥೆಗಳನ್ನು ಒಳಗೊಂಡಿರುತ್ತದೆ. ಪಂಚಾಯತಿಗಳಿಗೆ ಸಂಬಂಧಿದಂತೆ ಸಂವಿಧಾನದ ೭೩ನೇ ತಿದ್ದುಪಡಿಯ ಹಿನ್ನೆಲೆಯಲ್ಲಿ ಹೊಸ ಕಾಯ್ದೆಯ ರೂಪದ ಈ ಪದ್ಧತಿಯು ಜಾರಿಗೆ ಬಂದಿದೆ. ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳು ಹೆಚ್ಚು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಲ್ಲಿ ಹೆಚ್ಚು ಸಂಖ್ಯೆಯ ಜನರು ಪಾಲ್ಗೊಳ್ಳುವಂತೆ ಮಾಡುವಲ್ಲಿ ಈ ಕಾಯ್ದೆಯು ಸಹಕಾರಿಯಾಗಿದೆ. ಪಂಚಾಯತ್ ಕಾಯ್ದೆಯ ಅಡಿಯಲ್ಲಿ ಗ್ರಾಮ ಪಂಚಾಯತ್ ಗ್ರಾಮೀಣ ಭಾಗದಲ್ಲಿ ಹಾಗೂ ತಾಲೂಕು ಪಂಚಾಯತ್ ತಾಲೂಕು ಮಟ್ಟದಲ್ಲಿ ಮತ್ತು ಜಿಲ್ಲಾ ಪರಿಷತ್ ಜಿಲ್ಲಾ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತದೆ. ಎಲ್ಲಾ ಮೂರು ಸಂಸ್ಥೆಗಳು ಚುನಾಯಿತ ಪ್ರತಿನಿಧಿಗಳನ್ನು ಹೊಂದಿದ್ದು, ಯಾವುದೇ ಸಂಸ್ಥೆಗಳಿಗೆ ನಾಮನಿರ್ದೇಶನ ಮಾಡುವ ಯಾವುದೇ ಅವಕಾಶಗಳು ಸರ್ಕಾರಕ್ಕೆ ಇರುವುದಿಲ್ಲ. ಸಂವಿಧಾನದ ಅವಕಾಶಗಳನ್ನು ಅನುಷ್ಠಾನಗೊಳಿಸಿದ ದೇಶದ ಮೊಟ್ಟ ಮೊದಲ ರಾಜ್ಯ ಕರ್ನಾಟಕವಾಗಿದೆ. ಪ್ರಸಕ್ತ ಕಾಯ್ದೆಯ ಅನ್ವಯ ೧೯೯೩ರ ಡಿಸೆಂಬರ್‌ನಲ್ಲಿ ಸ್ಥಾನಗಳಿಗೆ ೫೬೪೫ ಗ್ರಾಮ ಪಂಚಾಯತ್‌ಗಳಿಗೆ ೨೩೪೫೪ ಮಹಿಳೆಯರನ್ನು ಒಳಗೊಂಡಂತೆ ಒಟ್ಟು ೭೮೬೫ ಸ್ಥಾನಗಳಿಗೆ ಚುನಾವಣೆ ಮೊಟ್ಟಮೊದಲ ಬಾರಿಗೆ ನಡೆಸಲಾಯಿತು. ಆದರೆ ತಾಲೂಕು ಪಂಚಾಯತ್‌ಗಳು ಮತ್ತು ಜಿಲ್ಲಾ ಪರಿಷತ್‌ಗಳಿಗೆ ೧೯೯೫ರ

ಮಾರ್ಚ್‌ನಲ್ಲಿ ಚುನಾವಣೆ ನಡೆಸಲಾಯಿತು. ಜಿಲ್ಲಾ ಪರಿಷತ್‌ಗಳಿಗೆ ೯೧೯ ಮತ್ತು ತಾಲೂಕು ಪಂಚಾಯತ್‌ಗಳಿಗೆ ೩೩೪೦ ಸಂಖ್ಯೆಯಷ್ಟು ಸದಸ್ಯರು ಚುನಾಯಿತರಾದರು. ಸುಮಾರು ೨ ಕೋಟಿಯಷ್ಟು ಮತದಾರರು ಈ ಚುನಾವಣೆಯಲ್ಲಿ ತಮ್ಮ ಮತವನ್ನು ಚಲಾಯಿಸಿದರು. ರಾಜ್ಯದಲ್ಲಿ ೧೯೯೯–೨೦೦೦ರಲ್ಲಿ ನಡೆದ ಚುನಾವಣೆಯಲ್ಲಿ ೫೬೯೨ ಗ್ರಾಮ ಪಂಚಾಯತಿಗಳಿಗೆ ಒಟ್ಟು ೭೩೫೪೭ (೨೦೧೫೫) ಸದಸ್ಯರನ್ನು, ತಾಲೂಕು ಪಂಚಾಯತಿಗಳಿಗೆ ೩೩೪೦(೧೨೪೫) ಸದಸ್ಯರನ್ನು ಮತ್ತು ಜಿಲ್ಲಾ ಪರಿಷತ್‌ಗಳಿಗೆ ಒಟ್ಟು ೯೧೯(೩೩೫) ಸದಸ್ಯರುಗಳನ್ನು ಚುನಾಯಿಸಿದರು."[೬]

ಬಹುತೇಕ ಪರಿಶಿಷ್ಟ ಜಾತಿ ಮೀಸಲಾತಿ ಸ್ಥಾನಗಳಿಗೆ, ಅದರಲ್ಲೂ ಗ್ರಾಮ ಪಂಚಾಯಿತಿ, ತಾಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳಿಗೆ ಆಯ್ಕೆಯಾಗುವವರು ಕೇವಲ ಮಾದಿಗ ಸಮುದಾಯದವರೆಂಬ ವಾದವೂ ಇದೆ. ಅದರಲ್ಲೂ ಚಿತ್ರದುರ್ಗ ಹಾಗೂ ಮೊಳಕಾಲ್ಮೂರು ತಾಲೂಕುಗಳಲ್ಲಿ ಮಾದಿಗ ಸಮುದಾಯದ ಪ್ರಮಾಣ ಹೆಚ್ಚಾಗಿದೆ. ಈ ತಾಲೂಕುಗಳಲ್ಲಿ ಈ ಸಮುದಾಯವನ್ನು ಯಾರು ಓಲೈಸುತ್ತಾರೋ ಅವರಿಗೆ ಗೆಲುವು ನಿಶ್ಚಿತ ಎಂದೇ ತಿಳಿಯಲಾಗಿದೆ. ಆದರೆ ಇನ್ನೊಬ್ಬರ ಗೆಲುವಿಗೆ ಕಾರಣವಾಗುವ ಇವರು ರಾಜಕೀಯವಾಗಿ ಯಾವ ರೀತಿಯ ಸ್ಥಾನಗಳನ್ನು ಪಡೆದಿದ್ದಾರೆ ಮತ್ತು ಇವರು ರಾಜಕೀಯವಾಗಿ ಎಷ್ಟರಮಟ್ಟಿಗೆ ಬಲಿಷ್ಠರು ಎಂಬುದನ್ನು ಗಮನಿಸಿದಾಗ ನಿರಾಸೆಯಾಗುತ್ತದೆ. ಮೀಸಲಾತಿ ಅನುಕೂಲವಿರುವುದರಿಂದ ಇವರು ಕೆಲವು ಕ್ಷೇತ್ರದಲ್ಲಿ ಜಯವನ್ನು ಸಾಧಿಸಿದ್ದಾರೆ.

೮.೨.೧ ಗ್ರಾಮ ಪಂಚಾಯಿತ್

ಮಾದಿಗ ಸಮುದಾಯವು ಬೇರೊಂದು ಸಮುದಾಯದ ನ್ಯಾಯಿಕ ತೀರ್ಮಾನಗಳನ್ನು ನೀಡುವುದು. ಅದನ್ನು ಜಾರಿಗೆ ತರುವ ಅವಕಾಶಗಳು ಹಿಂದೆ ಇದ್ದು ಅಲ್ಪಪ್ರಮಾಣದಲ್ಲಿ ಮಾತ್ರ. ಸಾಂವಿಧಾನಿಕವಾಗಿ ಸಿಗುವ ಸೌಲಭ್ಯಗಳನ್ನು ಪಡೆದುಕೊಂಡು ಇವತ್ತು ಎಲ್ಲಾ ಕ್ಷೇತ್ರದಲ್ಲಿ ಸಾಮಾಜಿಕ ಬದಲಾವಣೆಯನ್ನು ಹೊಂದಲು ಪ್ರಯತ್ನ ಮಾಡುತ್ತಿದ್ದಾರೆ. ಆದ್ದರಿಂದ ರಾಜಕೀಯ ಕ್ಷೇತ್ರದಲ್ಲಿ ದಾಪುಗಾಲು ಹಾಕುತ್ತಿದ್ದಾರೆ. ಸಂವಿಧಾನದ ೭೩ನೇ ತಿದ್ದುಪಡೆ ಪ್ರಕಾರ ರಾಜಕೀಯವಾಗಿ ಬೆಳೆಯಲು ಸಹಾಯವಾಗಿದೆ ಹಾಗೂ ಸ್ಥಳೀಯ ಮಟ್ಟದಲ್ಲಿ ಸ್ಪರ್ಧಿಸಲು ಅವಕಾಶವನ್ನು ಪಡೆದುಕೊಂಡಿದ್ದಾರೆ.

ಆಡಳಿತ ವಿಕೇಂದ್ರೀಕರಣ ನೀತಿಯಿಂದಾಗಿ ಬಹುತೇಕ ಆಡಳಿತದ ಕೇಂದ್ರವಾಗಿ ಗ್ರಾಮ ಪಂಚಾಯತಿಗಳು ಕಾರ್ಯನಿರ್ವಹಿಸುತ್ತವೆ. ಗ್ರಾಮಗಳ ಅಭಿವೃದ್ಧಿ ಇತ್ಯಾದಿಗಳಿಗಾಗಿಯೇ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಅನುದಾನಗಳು ಬರುತ್ತವೆ. ಆದರೆ ಬಹುಪಾಲು ಮಾದಿಗ ಸಮುದಾಯದಲ್ಲಿ ಅನಕ್ಷರಸ್ಥ ಅಥವಾ ಅತೀ ಕಡಿಮೆ ಓದಿದ ಸದಸ್ಯರಿಗೆ ಆ ಅನುದಾನ ಯೋಜನೆಗಳು ಯಾವುವು ಇವೆ. ಯಾವ ಅನುದಾನ ಯೋಜನೆಯಲ್ಲಿ ಎಷ್ಟು ಹಣ ಬಿಡುಗಡೆಯಾಗಿದೆ ಮುಂತಾದ ಯಾವ ವಿಚಾರದ ತಿಳುವಳಿಕೆ ಇಲ್ಲ. ಇದು ಕೇವಲ ಗ್ರಾಮ ಪಂಚಾಯಿತಿಯ ಮಾದಿಗ ಸಮುದಾಯದ ಸದಸ್ಯರ ಬಹು ದೊಡ್ಡ ಸಮಸ್ಯೆ ಎಂದೇ ಹೇಳಬಹುದು.

ಗ್ರಾಮ ಪಂಚಾಯತಿ ಚುನಾವಣೆಗಳಲ್ಲಿ ಯಾವುದೇ ರಾಷ್ಟ್ರೀಯ ಅಥವಾ ಪ್ರಾದೇಶಿಕ ಪಕ್ಷಗಳು ಪ್ರವೇಶಿಸುವಂತಿಲ್ಲ. ಹೀಗಾಗಿ ಚುನಾವಣಾ ಆಯೋಗ ಗ್ರಾಮ ಪಂಚಾಯಿತಿ ಅಭ್ಯರ್ಥಿಗಳಿಗೆ ಯಾವುದೇ ಪಕ್ಷದ ಗರುತುಗಳನ್ನು ಗುರುತಾಗಿ ನೀಡುವುದಿಲ್ಲ. ಅವರಿಗೆ ಚುನಾವಣಾ ಆಯೋಗ ನಿರ್ಧಾರ ಮಾಡಿದ ಯಾವುದಾದರೂ ಒಂದು ಗರುತುಗಳನ್ನು ನೀಡಲಾಗುತ್ತದೆ ಅಷ್ಟೇ. ಆದರೆ ಗ್ರಾಮ ಮಟ್ಟದಲ್ಲಿ ಚುನಾವಣೆಗೆ ನಿಂತವರು ಮತಯಂತ್ರಗಳು ಎಂದರಿತ ಪಕ್ಷಗಳು ಅವರನ್ನು ಓಲೈಸಲು ಪ್ರಯತ್ನಿಸುತ್ತವೆ ಹಾಗೂ ಆ ಜನರಿಗೆ ಸರಾಯಿ, ಹಣ ಇತ್ಯಾದಿಗಳನ್ನು ನೀಡಿ ತಮ್ಮ ಪ್ರೀತಿಯನ್ನು ಗಳಿಸಿಕೊಳ್ಳುತ್ತವೆ. ಸಾಂವಿಧಾನಿಕವಾಗಿ ಪಕ್ಷಾತೀತವಾಗಿ ಜರುಗಬೇಕಾದ ಗ್ರಾಮ ಪಂಚಾಯಿತಿ ಚನಾವಣೆಗಳು ಇಂದು ಪಕ್ಷ ರಾಜಕೀಯವಾಗಿ ಮಾರ್ಪಟ್ಟಿವೆ. ಸ್ಥಳೀಯ ಮಟ್ಟದಲ್ಲಿ ಕಳೆದ ಚುನಾವಣೆಯಲ್ಲಿ ರಾಜಕೀಯ ಪ್ರವೇಶ ಮಾಡಿದ ವ್ಯಕ್ತಿಗಳ ವಿವರಗಳು ಈ ಕೆಳಗಿನಂತಿವೆ.

ಸಂವಿಧಾನದ ವಿಧಿಗಳನ್ವಯ ಗ್ರಾಮ ಪಂಚಾಯತಿ ಮಟ್ಟದಲ್ಲಿ ಯಾವುದೇ ಪಕ್ಷದ ಅಡಿಯಲ್ಲಿ ಚುನಾವಣೆಗಳು ನಡೆಯಬಾರದೆಂದಿದೆ. ಆ ಪ್ರಕಾರ ಯಾವುದೇ ಪಕ್ಷದ ಚಿನ್ಹೆಯನ್ನು ಗ್ರಾಮ ಪಂಚಾಯಿತಿ ಮಟ್ಟದ ಚುನಾವಣೆಗೆ ನೀಡುವುದಿಲ್ಲ. ಚುನಾವಾಣಾಧಿಕಾರಿ ಪ್ರಾದೇಶಿಕ, ರಾಜ್ಯ, ರಾಷ್ಟ್ರ ಮಟ್ಟದ ರಾಜಕೀಯ ಪಕ್ಷಗಳ ಚಿನ್ಹೆಗಳ ಹೊರತಾದ ಚಿನ್ಹೆಗಳನ್ನು ಗ್ರಾಮ ಪಂಚಾಯಿತಿ ಅಭ್ಯರ್ಥಿಗಳಿಗೆ ಆಯ್ಕೆ ಮಾಡಿ ಕೊಡುತ್ತಾನೆ. ಇದರ ಉದ್ದೇಶ ಗ್ರಾಮ ಮಟ್ಟದಲ್ಲಿ ರಾಜಕೀಯ ಪಕ್ಷಗಳ ಹೆಸರಿನಲ್ಲಿ ಘರ್ಷಣೆಗಳಾಗಬಾರದು ಎಂಬುದೇ ಆಗಿದೆ. ಆದರೆ ಬಹುತೇಕವಾಗಿ ಇಂದು ಗ್ರಾಮ ಪಂಚಾಯಿತಿ ಚುನಾವಣೆಗಳು ರಾಜಕೀಯ ಪಕ್ಷಗಳ ಹಿನ್ನೆಲೆಯಲ್ಲಿಯೇ ನಡೆಯುತ್ತವೆ. ಇದಕ್ಕೆ ರಾಜ್ಯ ಮಟ್ಟದ ರಾಜಕಾರಣಿಗಳ ಕುಮ್ಮಕ್ಕು ಇರುತ್ತದೆ ಎನಿಸುತ್ತದೆ. ಯಾವುದೇ ಪಕ್ಷದ ಅಭ್ಯರ್ಥಿಯಾಗಿರದ ಗ್ರಾಮ ಪಂಚಾಯಿತಿ ಸದಸ್ಯರಲ್ಲಿ ಕೆಲವರು ತಾವು ಬಿ.ಜೆ.ಪಿ ಪಕ್ಷದವರೆಂದೂ ಇನ್ನು ಕೆಲವರು ಕಾಂಗ್ರೇಸ್ ಪಕ್ಷದವರೆಂದೂ, ಇನ್ನು ಕೆಲವರು ಜೆ.ಡಿ.ಎಸ್. ಇತ್ಯಾದಿ ಪಕ್ಷಗಳ ಹೆಸರಿನ ಅಡಿಯಲ್ಲಿ ಪ್ರಚಾರ ಕಾರ್ಯ ನಡೆಸುತ್ತಾರಂತೆ.

ಕೋಷ್ಟಕ: ೮.೧. ಚಿತ್ರದುರ್ಗ ಜಿಲ್ಲೆಯ ಬೇರೆ ಸಮುದಾಯದವರು ಮತ್ತು ಮಾದಿಗ ಸಮುದಾಯದವರು ೨೦೧೬-೧೭ನೇ ಸಾಲಿನಲ್ಲಿ ನಡೆದ ಗ್ರಾಮ ಪಂಚಾಯತಿ ಚುನಾವಣೆಯಲ್ಲಿ ನಾಮನಿರ್ದೇಶನಗೊಂಡವವರ ತಾಲೂಕುವಾರು ವಿವರಗಳು.

ಕ್ರ. ಸಂ	ತಾಲ್ಲೂಕಗಳಲ್ಲಿ ಕಂಡುಬರುವ ಒಟ್ಟು ಗ್ರಾಮ ಪಂಚಾಯಿತಿಗಳ ವಿವರಗಳು	ಮಾದಿಗ ಸಮುದಾಯದ ಸದಸ್ಯರ ಸಂಖ್ಯೆ	ಒಟ್ಟು ಸದಸ್ಯರ ಸಂಖ್ಯೆ
೧	ಹೊಸದುರ್ಗ	೫೦	೪೯೩
೨	ಹಿರಿಯೂರು	೯೯	೫೧೦

೩	ಮೊಳಕಾಲ್ಮೂರು	೬೮	೩೦೩
೪	ಚಳ್ಳಕೆರೆ	೧೨೭	೬೫೯
೫	ಹೊಳಲ್ಕೆರೆ	೭೦	೫೦೧
೬	ಹೊಸದುರ್ಗ	೧೧೫	೭೧೦
	ಒಟ್ಟು	೫೨೯	೩೧೭೬

ಕೋಷ್ಟಕ ೮.೧ರಲ್ಲಿ ಚಿತ್ರದುರ್ಗ ಜಿಲ್ಲೆಯ ಇತರೆ ಸಮುದಾಯದವರು ಮತ್ತು ಮಾದಿಗ ಸಮುದಾಯದವರು ೨೦೧೬-೧೭ನೇ ಸಾಲಿನಲ್ಲಿ ನಡೆದ ಗ್ರಾಮ ಪಂಚಾಯತಿ ಚುನಾವಣೆಯಲ್ಲಿ ನಾಮನಿರ್ದೇಶನಗೊಂಡವವರು. ೬ ತಾಲೂಕುಗಳಲ್ಲಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಒಟ್ಟು ೧೭೯ ಗ್ರಾಮ ಪಂಚಾಯತಿಯಲ್ಲಿ ಮೀಸಲಾತಿಯಡಿ ಸ್ಪರ್ಧಿಸಿ ವಿಜೇತರಾದವರು ಒಟ್ಟು ೫೨೯ ಮಾದಿಗ ಸಮುದಾಯದ ಸದಸ್ಯರಾಗಿದ್ದಾರೆ. ಇವರಲ್ಲಿ ಇತರೆ ಸಮುದಾಯದವರು ಸ್ಪರ್ಧಿಸಿ ವಿಜೇತರಾದವರು ಒಟ್ಟು ೩೧೭೬ ಕಂಡುಬರುತ್ತಾರೆ. ಆದರೆ ಈ ಸಮುದಾಯದವರಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಸಾಮಾನ್ಯ ಅಭ್ಯರ್ಥಿಯಾಗಿ ಜಯ ಗಳಿಸಿರುವುದು ಕಡಿಮೆ, ಕಾರಣ ಚುನಾವಣೆಯ ಸಂದರ್ಭದಲ್ಲಿ ಮತದಾರರಿಗೆ ಹಣ, ಸಾರಾಯಿ ಮುಂತಾದಗಳನ್ನು ಕೊಡುವುದಕ್ಕೆ ಸಾಮರ್ಥ್ಯವಿಲ್ಲದ ಕಾರಣ ಮತ್ತು ಭೂಮಾಲೀಕ ಹೊಲದಲ್ಲಿ ಕೂಲಿ ಕೆಲಸಗಳನ್ನು ಹೋದತಂಹ ಸಂದರ್ಭದಲ್ಲಿ ದಲಿತ ಸಮುದಾಯದ ಜನರನ್ನು ಮನಒಲಿಸಿಕೊಳ್ಳುವ ಜಾಣತನ ಮೇಲು ಸಮುದಾಯ ಜನರು ಮಾಡುತ್ತಿದ್ದರು. ಇಂತಹ ಅನೇಕ ಅಂಶಗಳನ್ನು ಗಮನದಲ್ಲಿ ಇಟ್ಟುಕೊಂಡು ಇವರು ಸಾಮಾನ್ಯ ಅಭ್ಯರ್ಥಿಯಾಗಿ ಆಯ್ಕೆಯಾಗುವಲ್ಲಿ ವಿಫಲರಾಗುತ್ತಿದ್ದಾರೆ ಎಂದು ಹೇಳಬಹುದು.

ಕೋಷ್ಟಕ: ೮.೨. ಚಿತ್ರದುರ್ಗ ಜಿಲ್ಲೆಯ ಮಾದಿಗ ಸಮುದಾಯದವರು ೨೦೧೬-೧೭ನೇ ಸಾಲಿನಲ್ಲಿ ನಡೆದ ಗ್ರಾಮ ಪಂಚಾಯತಿ ಚುನಾವಣೆಯಲ್ಲಿ ನಾಮನಿರ್ದೇಶನಗೊಂಡವವರ ತಾಲೂಕುವಾರು ವಿವರಗಳು.

ತಾಲೂಕುವಾರು ಒಟ್ಟು ಗ್ರಾಮ ಪಂಚಾಯಿತಿಗಳ ವಿವರಗಳು	ಸದಸ್ಯರ ಸಂಖ್ಯೆ			ಅಧ್ಯಕ್ಷರ ಸಂಖ್ಯೆಗಳು			ಉಪಾಧ್ಯಕ್ಷರ ಸಂಖ್ಯೆಗಳು		
	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು
ಹೊಸದುರ್ಗ	೨೨	೨೩	೪೫	–	೦೧	೦೧	೦೧	೦೩	೦೪
ಹಿರಿಯೂರು	೩೩	೫೧	೮೪	೦೪	೦೩	೦೭	೦೧	೦೭	೦೮

ಮೊಳಕಾಲ್ಮೂರು	೨೭	೩೬	೬೩	೦೧	೦೧	೦೨	೦೧	೦೨	೦೩
ಚಳ್ಳಕೆರೆ	೪೯	೬೦	೧೦೯	೦೨	೦೮	೧೦	೦೩	೦೫	೦೮
ಹೊಳಲ್ಕೆರೆ	೨೭	೩೨	೫೭	೦೩	೦೧	೦೪	೦೧	೦೬	೦೭
ಚಿತ್ರದುರ್ಗ	೩೭	೬೦	೯೭	೦೩	೦೭	೧೦	೦೧	೦೭	೦೮
ಒಟ್ಟು	೧೯೫	೨೬೨	೪೫೭	೧೩	೨೧	೩೪	೦೮	೩೦	೩೮

ಕೋಷ್ಟಕ ೮.೨ರಲ್ಲಿ ಚಿತ್ರದುರ್ಗ ಜಿಲ್ಲೆಯ ಮಾದಿಗ ಸಮುದಾಯದವರು ೨೦೧೬–೧೭ನೇ ಸಾಲಿನಲ್ಲಿ ನಡೆದ ಗ್ರಾಮ ಪಂಚಾಯತಿ ಚುನಾವಣೆಯಲ್ಲಿ ನಾಮನಿರ್ದೇಶನಗೊಂಡವವರ ವಿವರಗಳಿವೆ. ಹಿಂದೆ ಈ ಸಮುದಾಯಕ್ಕೆ ರಾಜಕೀಯ ಅವಕಾಶಗಳು ಇರಲ್ಲಿಲ್ಲ, ಒಂದುವೇಳೆ ಇದ್ದರೆ ಅದು ನೇರವಾಗಿ ಬಂಡವಾಳಶಾಹಿಗಳ ಕೈಯಲ್ಲಿ ಇತ್ತು. ಮೀಸಲಾತಿಯ ಲಾಭವನ್ನು ಪಡೆದು ಈ ಸದಸ್ಯರು ರಾಜಕೀಯ ಪ್ರವೇಶ ಮಾಡಿದ್ದಾರೆನ್ನಿಸಬಹುದಾದರೂ ಪರೋಕ್ಷವಾಗಿ ಇಲ್ಲಿ ಅವಕಾಶ ಮತ್ತು ಅಧಿಕಾರದ ಲಾಭ ಪಡೆಯುವವರು ಮೇಲ್ಜಾತಿಗಳು ಹಾಗೂ ಬಂಡವಾಳಶಾಹಿಗಳೇ ಆಗಿರುತ್ತಾರೆ. ಮೀಸಲಾತಿ ಸವಲತ್ತನ್ನು ಪಡೆದು ಸದಸ್ಯರಾದ ಇವರು ಕೇವಲ ನೆಪಮಾತ್ರದ ಸದಸ್ಯರಾಗಿದ್ದಾರೆ. ಇಂತಹ ಅನೇಕ ಬಿಕ್ಕಟ್ಟುಗಳ ನಡುವೆ ಚುನಾವಣೆಯಲ್ಲಿ ಯಶಸ್ವಿಯಾಗಿ ಗೆದ್ದಿದ್ದು ಕಂಡುಬರುತ್ತದೆ. ಗ್ರಾಮ ಪಂಚಾಯತಿಯಲ್ಲಿ ಗೆದ್ದವರ ವಿವರವನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

ಹೊಸದುರ್ಗ ತಾಲೂಕಿನಲ್ಲಿ ಕಂಡುಬರುವ ಗ್ರಾಮ ಪಂಚಾಯತಿಯ ಸದಸ್ಯರು, ಉಪಾಧ್ಯಕ್ಷರು ಮತ್ತು ಅಧ್ಯಕ್ಷರ ವಿವರಗಳು. ಸದಸ್ಯರ ಸ್ಥಾನಕ್ಕೆ ಜಯ ಗಳಿಸಿದ್ದವರಲ್ಲಿ ಪುರುಷರ ಪ್ರಮಾಣ ೨೨ರಷ್ಟು, ಮಹಿಳೆಯರ ಪ್ರಮಾಣ ೨೩ರಷ್ಟು, ಪುರುಷ ಮತ್ತು ಮಹಿಳೆಯರ ಒಟ್ಟು ಪ್ರಮಾಣ ೪೫ರಷ್ಟು ಇದೆ. ಉಪಾಧ್ಯಕ್ಷರ ಸ್ಥಾನವನ್ನು ಪಡೆದವರು ಪುರುಷರ ಪ್ರಮಾಣ ಒಂದುರಷ್ಟು, ಇಬ್ಬರು ಮಹಿಳೆಯರು ಆಯ್ಕೆಯಾಗಿದ್ದಾರೆ. ಪುರುಷ ಮತ್ತು ಮಹಿಳೆಯರ ಒಟ್ಟು ೦೪ ರಷ್ಟು ಇರುವುದು ಕಂಡುಬರುತ್ತದೆ. ಅಧ್ಯಕ್ಷ ಸ್ಥಾನವನ್ನು ಒಬ್ಬ ಮಹಿಳೆ ಮಾತ್ರ ಪಡೆದುಕೊಂಡಿದ್ದಾರೆ.

ಹಿರಿಯೂರು ತಾಲೂಕಿನಲ್ಲಿ ಕಂಡುಬರುವ ಗ್ರಾಮ ಪಂಚಾಯತಿಯ ಸದಸ್ಯರು, ಉಪಾಧ್ಯಕ್ಷರು ಮತ್ತು ಅಧ್ಯಕ್ಷರ ವಿವರಗಳು. ಸದಸ್ಯರ ಸ್ಥಾನಕ್ಕೆ ಜಯ ಗಳಿಸಿದ್ದವರಲ್ಲಿ ಪುರುಷರ ಪ್ರಮಾಣ ೩೩ರಷ್ಟು, ಮಹಿಳೆಯರ ಪ್ರಮಾಣ ೫೧ರಷ್ಟು, ಪುರುಷ ಮತ್ತು ಮಹಿಳೆಯರ ಒಟ್ಟು ಪ್ರಮಾಣ ೮೪ರಷ್ಟು ಇದೆ. ಉಪಾಧ್ಯಕ್ಷರ ಸ್ಥಾನವನ್ನು ಪಡೆದವರು ಪುರುಷರ ಪ್ರಮಾಣ ಒಂದುರಷ್ಟು, ಮಹಿಳೆಯರ ಪ್ರಮಾಣ ೦೭ರಷ್ಟು, ಪುರುಷ ಮತ್ತು ಮಹಿಳೆಯರ ಒಟ್ಟು ೦೮ರಷ್ಟು ಇರುವುದು ಕಂಡುಬರುತ್ತದೆ. ಅಧ್ಯಕ್ಷ ಸ್ಥಾನದಲ್ಲಿ ಪುರುಷರ ಪ್ರಮಾಣ ೦೪ರಷ್ಟು, ಮಹಿಳೆಯರ ಪ್ರಮಾಣ ೦೩ರಷ್ಟು, ಪುರುಷ ಮತ್ತು ಮಹಿಳೆಯರ ಪ್ರಮಾಣ ಒಟ್ಟು ೦೭ರಷ್ಟು ಇರುವುದು ಕಂಡುಬರುತ್ತದೆ.

ಮೊಳಕಾಲ್ಮೂರು ತಾಲೂಕಿನಲ್ಲಿ ಕಂಡುಬರುವ ಗ್ರಾಮ ಪಂಚಾಯತಿಯ ಸದಸ್ಯರು, ಉಪಾಧ್ಯಕ್ಷರು ಮತ್ತು ಅಧ್ಯಕ್ಷರ ವಿವರಗಳು. ಸದಸ್ಯರ ಸ್ಥಾನಕ್ಕೆ ಜಯ ಗಳಿಸಿದ್ದವರಲ್ಲಿ ಪುರುಷರ ಪ್ರಮಾಣ ೨೭ರಷ್ಟು, ಮಹಿಳೆಯರ ಪ್ರಮಾಣ ೩೬ರಷ್ಟು, ಪುರುಷ ಮತ್ತು ಮಹಿಳೆಯರ ಒಟ್ಟು ಪ್ರಮಾಣ ೬೩ರಷ್ಟು ಇದೆ. ಉಪಾಧ್ಯಕ್ಷರ ಸ್ಥಾನವನ್ನು ಪಡೆದ ಪುರುಷರ ಪ್ರಮಾಣ ಒಂದರಷ್ಟು, ಮಹಿಳೆಯರ ಪ್ರಮಾಣ ೦೩ರಷ್ಟು, ಪುರುಷರ ಮತ್ತು ಮಹಿಳೆಯರ ಪ್ರಮಾಣ ಒಟ್ಟು ೦೪ರಷ್ಟು ಇರುವುದು ಕಂಡುಬರುತ್ತದೆ. ಅಧ್ಯಕ್ಷ ಸ್ಥಾನವನ್ನು ಪಡೆದ ಪುರುಷರ ಪ್ರಮಾಣ ಒಂದು, ಮಹಿಳೆಯರ ಪ್ರಮಾಣ ಒಂದು, ಪುರುಷ ಮತ್ತು ಮಹಿಳೆಯರ ಒಟ್ಟು ೦೨ರಷ್ಟು ಇರುವುದು ಕಂಡುಬರುತ್ತದೆ.

ಚಳ್ಳಕೆರೆ ತಾಲೂಕಿನಲ್ಲಿ ಕಂಡುಬರುವ ಗ್ರಾಮ ಪಂಚಾಯತಿಯ ಸದಸ್ಯರು, ಉಪಾಧ್ಯಕ್ಷರು ಮತ್ತು ಅಧ್ಯಕ್ಷರ ವಿವರಗಳು. ಸದಸ್ಯರ ಸ್ಥಾನಕ್ಕೆ ಜಯ ಗಳಿಸಿದ್ದವರಲ್ಲಿ ಪುರುಷರ ಪ್ರಮಾಣ ೪೯ರಷ್ಟು, ಮಹಿಳೆಯರ ಪ್ರಮಾಣ ೬೦ರಷ್ಟು, ಪುರುಷರ ಮತ್ತು ಮಹಿಳೆಯರ ಒಟ್ಟು ಪ್ರಮಾಣ ೧೦೯ರಷ್ಟು ಇದೆ. ಉಪಾಧ್ಯಕ್ಷರ ಸ್ಥಾನವನ್ನು ಪಡೆದ ಪುರುಷರ ಪ್ರಮಾಣ ೦೩ರಷ್ಟು, ಮಹಿಳೆಯರ ಪ್ರಮಾಣ ೦೫ರಷ್ಟು, ಪುರುಷರು ಮತ್ತು ಮಹಿಳೆಯರ ಒಟ್ಟು ಪ್ರಮಾಣ ೦೮ರಷ್ಟು ಇರುವುದು ಕಂಡುಬರುತ್ತದೆ. ಅಧ್ಯಕ್ಷ ಸ್ಥಾನ ಪಡೆದ ಪುರುಷರ ಪ್ರಮಾಣ ೦೩ರಷ್ಟು, ಮಹಿಳೆಯರ ಪ್ರಮಾಣ ೦೧ರಷ್ಟು, ಪುರುಷ ಮತ್ತು ಮಹಿಳೆಯರ ಪ್ರಮಾಣ ಒಟ್ಟು ೦೪ರಷ್ಟು ಇರುವುದು ಕಂಡುಬರುತ್ತದೆ.

ಹೊಳಲ್ಕೆರೆ ತಾಲೂಕಿನಲ್ಲಿ ಕಂಡುಬರುವ ಗ್ರಾಮ ಪಂಚಾಯತಿಯ ಸದಸ್ಯರು, ಉಪಾಧ್ಯಕ್ಷರು ಮತ್ತು ಅಧ್ಯಕ್ಷರ ವಿವರಗಳು. ಸದಸ್ಯರ ಸ್ಥಾನಕ್ಕೆ ಜಯ ಗಳಿಸಿದ್ದವರಲ್ಲಿ ಪುರುಷರ ಪ್ರಮಾಣ ೨೭ರಷ್ಟು, ಮಹಿಳೆಯರ ಪ್ರಮಾಣ ೩೨ರಷ್ಟು, ಪುರುಷ ಮತ್ತು ಮಹಿಳೆಯರ ಒಟ್ಟು ಪ್ರಮಾಣ ೫೭ರಷ್ಟು ಇದೆ. ಉಪಾಧ್ಯಕ್ಷರ ಸ್ಥಾನವನ್ನು ಪಡೆದವರು ಪುರುಷರ ಪ್ರಮಾಣ ೦೧ರಷ್ಟು, ಮಹಿಳೆಯರ ಪ್ರಮಾಣ ೦೬ರಷ್ಟು, ಪುರುಷ ಮತ್ತು ಮಹಿಳೆಯರ ಒಟ್ಟು ೦೭ರಷ್ಟು ಇರುವುದು ಕಂಡುಬರುತ್ತದೆ. ಅಧ್ಯಕ್ಷ ಸ್ಥಾನ ಪಡೆದ ಪುರುಷರ ಪ್ರಮಾಣ ಎರಡು, ಮಹಿಳೆಯರ ಪ್ರಮಾಣ ೦೮ರಷ್ಟು, ಪುರುಷ ಮತ್ತು ಮಹಿಳೆಯರ ಒಟ್ಟು ೧೦ರಷ್ಟು ಇರುವುದು ಕಂಡುಬರುತ್ತದೆ.

ಚಿತ್ರದುರ್ಗ ತಾಲೂಕಿನಲ್ಲಿ ಕಂಡುಬರುವ ಗ್ರಾಮ ಪಂಚಾಯತಿಯ ಸದಸ್ಯರು, ಉಪಾಧ್ಯಕ್ಷರು ಮತ್ತು ಅಧ್ಯಕ್ಷರ ವಿವರಗಳು. ಸದಸ್ಯರ ಸ್ಥಾನಕ್ಕೆ ಜಯ ಗಳಿಸಿದ್ದವರಲ್ಲಿ ಪುರುಷರ ಪ್ರಮಾಣ ೩೭ರಷ್ಟು, ಮಹಿಳೆಯರ ಪ್ರಮಾಣ ೬೦ರಷ್ಟು, ಪುರುಷ ಮತ್ತು ಮಹಿಳೆಯರ ಒಟ್ಟು ಪ್ರಮಾಣ ೯೭ರಷ್ಟು ಇದೆ. ಉಪಾಧ್ಯಕ್ಷರ ಸ್ಥಾನವನ್ನು ಪಡೆದವರು ಪುರುಷರ ಪ್ರಮಾಣ ೦೧ರಷ್ಟು, ಮಹಿಳೆಯರ ಪ್ರಮಾಣ ೦೭ರಷ್ಟು, ಪುರುಷ ಮತ್ತು ಮಹಿಳೆಯರ ಒಟ್ಟು ೦೮ರಷ್ಟು ಇರುವುದು ಕಂಡುಬರುತ್ತದೆ. ಅಧ್ಯಕ್ಷ ಸ್ಥಾನ ಪೆಡದ ಪುರುಷರ ಪ್ರಮಾಣ ೦೩ರಷ್ಟು, ಮಹಿಳೆಯರ ಪ್ರಮಾಣ ೦೭ರಷ್ಟು, ಪುರುಷ ಮತ್ತು ಮಹಿಳೆಯರ ಪ್ರಮಾಣ ಒಟ್ಟು ೧೦ರಷ್ಟು ಇರುವುದು ಕಂಡುಬರುತ್ತದೆ.

ಚಿತ್ರದುರ್ಗ ಜಿಲ್ಲೆಯ ವ್ಯಾಪ್ತಿಗೆ ಬರುವ ಗ್ರಾಮ ಪಂಚಾಯತಿಗಳಲ್ಲಿ ಗೆದ್ದವರ ಒಟ್ಟು ಪ್ರಮಾಣವನ್ನು ತಿಳಿಯಲಾಗಿದೆ. ಸದಸ್ಯರ ಸ್ಥಾನಕ್ಕೆ ಆಯ್ಕೆಯಾದ ಪುರುಷರ ಪ್ರಮಾಣ ೧೯೫ರಷ್ಟು, ಮಹಿಳೆಯರ

ಪ್ರಮಾಣ ೨೬೨ರಷ್ಟು, ಪುರುಷ ಮತ್ತು ಮಹಿಳೆಯರ ಒಟ್ಟು ಪ್ರಮಾಣ ೪೫೦ರಷ್ಟು ಇದೆ. ಉಪಾಧ್ಯಕ್ಷರ ಸ್ಥಾನವನ್ನು ಪಡೆದ ಪುರುಷರ ಪ್ರಮಾಣ ೦೮ರಷ್ಟು, ಮಹಿಳೆಯರ ಪ್ರಮಾಣ ೩೦ರಷ್ಟು, ಪುರುಷ ಮತ್ತು ಮಹಿಳೆಯರ ಪ್ರಮಾಣ ಒಟ್ಟು ೩೮ರಷ್ಟು ಇರುವುದು ಕಂಡುಬರುತ್ತದೆ. ಅಧ್ಯಕ್ಷ ಸ್ಥಾನವನ್ನು ಪುರುಷರ ಪ್ರಮಾಣ ೧೩ರಷ್ಟು, ಮಹಿಳೆಯರ ಪ್ರಮಾಣ ೨೧ರಷ್ಟು, ಪುರುಷ ಮತ್ತು ಮಹಿಳೆಯರ ಒಟ್ಟು ೩೪ರಷ್ಟು ಇರುವುದು ಕಂಡುಬರುತ್ತದೆ.

ಈ ಸಮುದಾಯದಿಂದ ಚುನಾವಣೆಗೆ ನಿಂತ ಎಲ್ಲರೂ ಮೀಸಲಾತಿ ಕಾರಣಕ್ಕೆ. ಚುನಾವಣೆಗೆ ನಿಂತವರು ಹಾಗೂ ಈ ಸದಸ್ಯರಲ್ಲಿ ಬಹುತೇಕರು ಇನ್ನೊಬ್ಬರ ಪ್ರಚೋದನೆಯಿಂದ ಸದಸ್ಯರಾದವರು. ಮಾದಿಗ ಸಮುದಾಯದ ಸದಸ್ಯರ ರಾಜಕೀಯ ಪ್ರವೇಶದ ಹಿಂದೆ ಮೇಲ್ಜಾತಿಗಳು ಮತ್ತು ಬಂಡವಾಳಶಾಹಿಗಳ ಒತ್ತಡವೂ ಇದೆ ಎಂಬುದನ್ನು ಮರೆಯುವಂತಿಲ್ಲ. ಮಹಿಳೆಯರೇ ಎಲ್ಲಾ ಕ್ಷೇತ್ರದಲ್ಲಿ ಹೆಚ್ಚು ಸ್ಥಾನಗಳನ್ನು ಪಡೆದಿದ್ದಾರೆ. ಆದರೆ ಮಹಿಳಾ ಸದಸ್ಯರು ಹೆಸರಿಗೆ ಮಾತ್ರ ಚುನಾವಣೆಗೆ ನಿಂತು ಹೆಸರಿಗೆ ಮಾತ್ರ ಕೇಳಿಬಂದವು ಸದಸ್ಯರಾದವರು. ಇವರ ಪರವಾಗಿ ಇವರ ಮನೆ ಗಂಡಸರೇ ಅಧಿಕಾರದ ಲಾಭ ಪಡೆಯುತ್ತಿದ್ದಾರೆ ಎನ್ನುವ ಮಾತುಗಳು ಕ್ಷೇತ್ರಕಾರ್ಯದಲ್ಲಿ ಕೇವಲ ಪರಿಶಿಷ್ಟ ಜಾತಿ ಮಹಿಳಾ ಮೀಸಲಾತಿ ಬಂದಿದೆ. ಎಂಬ ಕಾರಣಕ್ಕಾಗಿ ಆ ಅವಕಾಶವನ್ನು ಬಳಸಿಕೊಳ್ಳಲು ಆ ಹೆಣ್ಣುಮಕ್ಕಳ ಕುಟುಂಬದ ಪುರುಷರು ಅವರನ್ನು ಚುನಾವಣೆಗೆ ಕರೆತಂದರು. ಇನ್ನೊಂದು ಮುಖ್ಯವಾದ ವಿಚಾರವೆಂದರೆ ಕೆಲವು ಕಡೆ ಈ ಸಮುದಾಯದ ಜನರ ಮಧ್ಯೆ ಸ್ಪರ್ಧೆ ನಡೆಯುವುದರಿಂದ ಸಂಘರ್ಷಗಳು, ವೈಮನಸ್ಸು, ದ್ವೇಷ ಇಂತಹ ಅನೇಕ ಅಂಶಗಳು ಕಂಡುಬಂದಿವೆ. ಆದರೂ ಇವುಗಳ ಮಧ್ಯೆ ರಾಜಕೀಯ ಪ್ರವೇಶ ಮಾಡಿರುವುದು ಸಂತೋಷದ ಸಂಗತಿ, ಮೀಸಲಾತಿಯ ಲಾಭವನ್ನು ಪಡೆದು ಈ ಸದಸ್ಯರು ರಾಜಕೀಯ ಪ್ರವೇಶ ಮಾಡಿದ್ದಾರೆನ್ನಿಸಬಹುದಾದರೂ ಪರೋಕ್ಷವಾಗಿ ಇಲ್ಲಿ ಅವಕಾಶ ಮತ್ತು ಅಧಿಕಾರದ ಲಾಭ ಪಡೆಯುವವರು ಮೇಲ್ಜಾತಿಗಳು ಹಾಗೂ ಬಂಡವಾಳಶಾಹಿಗಳೇ ಆಗಿರುತ್ತಾರೆ. ಇತ್ತೀಚಿನ ದಿನಗಳಲ್ಲಿ ವಿದ್ಯಾವಂತರ ಸಂಖ್ಯೆ ಹೆಚ್ಚುತ್ತಿರುವುದರಿಂದ ತಮಗೆ ಸಿಗಬೇಕಾಗಿದ ಸೌಲಭ್ಯಗಳು ನೇರವಾಗಿ ಸಿಗಬೇಕೆಂಬುದರ ಬಗ್ಗೆ ಜಾಗೃತರಾಗುತ್ತಿರುವುದು ತಿಳಿದುಬಂದಿದೆ.

೮.೨.೨ ತಾಲ್ಲೂಕು ಪಂಚಾಯತ್

"೧೯೯೩ರ ಕರ್ನಾಟಕ ಪಂಚಾಯತ್‌ರಾಜ್ ಕಾಯ್ದೆಯು ಪ್ರತಿ ತಾಲೂಕಿಗೆ ಒಂದರಂತೆ ತಾಲೂಕು ಪಂಚಾಯಿತಿ ರಚನೆಗೆ ಅವಕಾಶ ನೀಡಿದೆ. ಸಂಪೂರ್ಣವಾಗಿ ಚುನಾಯಿತ ಪ್ರತಿನಿಧಿಗಳನ್ನೊಳಗೊಂಡ ಇವು ಆಯಾ ತಾಲೂಕಿನ ನಗರ ಸಭೆ, ಪುರಸಭೆಗಳನ್ನು ಹೊರತುಪಡಿಸಿ ಉಳಿದವು ಗ್ರಾಮೀಣ ಪ್ರದೇಶಕ್ಕೆ ಸೀಮಿತವಾಗಿವೆ. ತಾಲೂಕಿನ ವ್ಯಾಪ್ತಿಯಲ್ಲಿರುವ ಲೋಕಸಭೆ ಮತ್ತು ರಾಜ್ಯ ವಿಧಾನಸಭೆ ಕ್ಷೇತ್ರಗಳನ್ನು ಪೂರ್ಣವಾಗಿ ಇಲ್ಲವೇ ಭಾಗಶಃ ಪ್ರತಿನಿಧಿಸುವ ಚುನಾಯಿತ ಸದಸ್ಯರು, ಆಯಾ ತಾಲೂಕಿನ ಮತದಾರರು ಎಂದು ನೋಂದಾಯಿಸಲ್ಪಟ್ಟ ಲೋಕಸಭೆ ಹಾಗೂ ರಾಜ್ಯಸಭೆ ಸದಸ್ಯರು ಇದರ ಸದಸ್ಯರಾಗಿರುತ್ತಾರೆ. ಅಭಿವೃದ್ಧಿ ಚಟುವಟಿಕೆಗಳು ಯಾವುವೆಂದರೆ ವ್ಯವಸಾಯ ಹಾಗೂ

ಅದರ ವಿಸ್ತರಣಾ ಯೋಜನೆಗಳು, ಜಮೀನು ಅಭಿವೃದ್ಧಿ ಹಾಗೂ ಭೂಸಾರ ಸಂರಕ್ಷಣೆ, ಸಣ್ಣ ನೀರಾವರಿ ಯೋಜನೆಗಳ ನಿರ್ಮಾಣ, ಪಶುಪಾಲನೆ ಹಾಗೂ ಹೈನು ಅಭಿವೃದ್ಧಿ ಮೀನುಗಾರಿಕೆ, ಗೃಹ ಕೈಗಾರಿಕೆ, ಗ್ರಾಮೀಣ ವಸತಿ ಯೋಜನೆ, ಗ್ರಾಮಾಂತರ ಕುಡಿಯುವ ನೀರು ಯೋಜನೆ, ಗ್ರಾಮೀಣ ನೈರ್ಮಲ್ಯ, ರಸ್ತೆ ಚರಂಡಿಗಳ ನಿರ್ಮಾಣ, ಸಮಾಜ ಕಲ್ಯಾಣ, ಗ್ರಾಮೀಣ ವಿದ್ಯುಧೀಕರಣ ಹಾಗೂ ಸಹಕಾರಿ ಚಟುವಟಿಕೆಗಳು.”[೭]

ಕೋಷ್ಟಕ: ೮.೩. ಚಿತ್ರದುರ್ಗ ಜಿಲ್ಲೆಯ ಮಾದಿಗ ಸಮುದಾಯದ ತಾಲೂಕು ಪಂಚಾಯಿತಿಯ ಅಧ್ಯಕ್ಷ, ಉಪಾಧ್ಯಕ ಮತ್ತು ಸದಸ್ಯರ ತಾಲೂಕುವಾರು ವಿವರಗಳು

ತಾಲ್ಲೂಕು ಪಂಚಾಯಿತಿಗಳ ವಿವರಗಳು	ಸದಸ್ಯರ ಸಂಖ್ಯೆ			ಅಧ್ಯಕ್ಷರ ಸಂಖ್ಯೆಗಳು			ಉಪಾಧ್ಯಕ್ಷರ ಸಂಖ್ಯೆಗಳು		
	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು
ಹೊಸದುರ್ಗ	–	೦೨	೦೨	–	–	–	–	–	–
ಹಿರಿಯೂರು	೦೩	೦೧	೦೪	–	–	–	–	–	–
ಮೊಳಕಾಲ್ಮೂರು	–	೦೨	೦೨	–	–	–	–	೦೧	೦೧
ಚಳ್ಳಕೆರೆ	೦೨	೦೧	೦೩	–	–	–	–	–	–
ಹೊಳಲ್ಕೆರೆ	–	೦೧	೦೧	–	೦೧	೦೧	–	–	–
ಚಿತ್ರದುರ್ಗ	–	೦೨	೦೨	–	–	–	–	–	–
ಒಟ್ಟು	೦೫	೦೯	೧೪	–	೦೧	೦೧	–	೦೧	೦೧

ಕೋಷ್ಟಕ ೮.೩ರಲ್ಲಿ ಚಿತ್ರದುರ್ಗ ಜಿಲ್ಲೆಯ ಮಾದಿಗ ಸಮುದಾಯದವರು ೨೦೧೬-೧೭ನೇ ಸಾಲಿನಲ್ಲಿ ನಡೆದ ತಾಲೂಕು ಪಂಚಾಯತಿ ಚುನಾವಣೆಯಲ್ಲಿ ನಾಮನಿರ್ದೇಶನಗೊಂಡವವರ ವಿವರ. ೬ ತಾಲೂಕುಗಳಲ್ಲಿ ಒಟ್ಟು ಎಲ್ಲಾ ಸಮುದಾಯಗಳ ಸ್ಥಾನಗಳು ೧೩೫ರಷ್ಟು ಇರುವುದು ಕಂಡುಬರುತ್ತದೆ. ೬ ತಾಲೂಕುಗಳಲ್ಲಿ ತಾಲೂಕು ಪಂಚಾಯತಿಯಲ್ಲಿ ಪರಿಶಿಷ್ಟ ಜಾತಿ ಮೀಸಲಾತಿಯಡಿ ಸ್ಪರ್ಧಿಸಿ ವಿಜೇತರಾದವರು ಮಾದಿಗ ಸಮುದಾಯದವರು. ಹೊಸದುರ್ಗ ತಾಲೂಕಿನಲ್ಲಿ ಸದಸ್ಯ ಸ್ಥಾನಕ್ಕೆ ಆಯ್ಕೆಯಾದವರು ಇಬ್ಬರು ಮಹಿಳೆಯರು ಮಾತ್ರ, ಹಿರಿಯೂರು ತಾಲೂಕಿನಲ್ಲಿ ಸದಸ್ಯ ಸ್ಥಾನಕ್ಕೆ ಆಯ್ಕೆಯಾದವರು ಎರಡು ಜನ ಪುರುಷರು, ಒಬ್ಬ ಮಹಿಳೆ ಮಾತ್ರ, ಒಟ್ಟು ಪುರುಷ ಮತ್ತು ಮಹಿಳೆಯರ ಪ್ರಮಾಣ ೦೪ರಷ್ಟು ಕಂಡುಬರುತ್ತಾರೆ. ಮೊಳಕಾಲ್ಮೂರು ತಾಲೂಕಿನಲ್ಲಿ ಸದಸ್ಯ ಸ್ಥಾನಕ್ಕೆ ಆಯ್ಕೆಯಾದವರು ಇಬ್ಬರು ಮಹಿಳೆಯರು ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಒಬ್ಬ ಮಹಿಳೆ ಮಾತ್ರ,

ಚಳ್ಳಕೆರೆ ತಾಲೂಕಿನಲ್ಲಿ ಸದಸ್ಯ ಸ್ಥಾನಕ್ಕೆ ಆಯ್ಕೆಯಾದವರು ಇಬ್ಬರು ಪುರುಷರು ಮತ್ತು ಒಬ್ಬ ಮಹಿಳೆ ಮಾತ್ರ, ಒಟ್ಟು ಪುರುಷರು ಮತ್ತು ಮಹಿಳೆಯರ ಪ್ರಮಾಣ ೦೩ರಷ್ಟು ಇರುವುದನ್ನು ನೋಡಬಹುದು. ಹೊಳಲ್ಕೆರೆ ತಾಲೂಕಿನಲ್ಲಿ ಸದಸ್ಯ ಸ್ಥಾನಕ್ಕೆ ಆಯ್ಕೆಯಾದವರು ಒಬ್ಬ ಮಹಿಳೆ, ಅಧ್ಯಕ್ಷ ಸ್ಥಾನಕ್ಕೆ ಒಬ್ಬ ಮಹಿಳೆ ಚುನಾವಣೆಯಲ್ಲಿ ಪರಾಭವಗೊಂಡಿದ್ದಾರೆ. ಚಿತ್ರದುರ್ಗ ತಾಲೂಕಿನಲ್ಲಿ ಸದಸ್ಯ ಸ್ಥಾನಕ್ಕೆ ಆಯ್ಕೆಯಾದವರು ಇಬ್ಬರು ಮಹಿಳೆಯರು ಗೆಲುವನ್ನು ಸಾಧಿಸಿದ್ದಾರೆ.

ಮಾದಿಗ ಸಮುದಾಯದವು ರಾಜಕೀಯವಾಗಿ ತುಂಬಾ ಪ್ರಭಾವಶಾಲಿಗಳು ಎನ್ನುವಂತೆ ತೋರಿಸಿಕೊಳ್ಳುವದರಾದರೂ ಅದರಲ್ಲೂ ಮಹಿಳೆಯರು ಗೆಲುವನ್ನು ಸಾಧಿಸಲು ಮುಖ್ಯವಾಗಿ ಸಂವಿಧಾನದ ಮೀಸಲಾತಿ ಕಾರಣ. ಕೆಲವರು ಸದಸ್ಯರು ಇನ್ನೊಬ್ಬರ ಪ್ರಚೋದನೆಯಿಂದ ಸದಸ್ಯರಾಗಿದ್ದರೂ ಮತ್ತು ಇನ್ನು ಕೆಲವು ಸದಸ್ಯರ ಮಹಿಳೆಯರು ಬೇರೆಯವರ ಭೂಮಿಯಲ್ಲಿ ಕೂಲಿ ಕೆಲಸ ಮಾಡುವುದು ತಪ್ಪಿಲ್ಲ. ಒಟ್ಟಾರೆಯಾಗಿ ಮಾದಿಗ ಸಮುದಾಯದವರು ರಾಜಕೀಯವಾಗಿ ಬದಲಾವಣೆಯನ್ನು ಹೊಂದಿರುವುದನ್ನು ನೋಡಬಹುದು.

೮.೨.೩ ಜಿಲ್ಲಾ ಪಂಚಾಯತ್

ಕರ್ನಾಟಕ ಪಂಚಾಯತ್‌ರಾಜ್ ಕಾನೂನಿ(೧೯೯೩)ನನ್ವಯ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಇದ್ದ ಜಿಲ್ಲಾ ಪರಿಷತ್ತುಗಳ ಸ್ಥಾನದಲ್ಲಿ ಹೆಚ್ಚು ಬಲಿಷ್ಠ ಹಾಗೂ ವಿಶಿಷ್ಟ ಅಧಿಕಾರಗಳುಳ್ಳ ಜಿಲ್ಲಾ ಪಂಚಾಯತ್ ಎಂಬ ಸ್ವಯಮಾಡಳಿತ ಸಂಸ್ಥೆಗಳನ್ನು ರಚಿಸಲಾಯಿತು. ಜಿಲ್ಲಾ ಪಂಚಾಯತ್ ವ್ಯಾಪ್ತಿಯು ಆಯಾ ಜಿಲ್ಲೆಯಲ್ಲಿ ಬರುವ ಪುರಸಭೆಗಳು, ನಗರಸಭೆ, ಮಹಾನಗರಪಾಲಿಕೆ, ನೈರ್ಮಲ್ಯ ಮಂಡಳಿ, ಅಧಿಸೂಚಿತ ಪ್ರದೇಶ ಹಾಗೂ ನಗರಾಭಿವೃದ್ಧಿ ಪ್ರಾಧಿಕಾರ ಹೊರತುಪಡಿಸಿ ಗ್ರಾಮೀಣ ಪ್ರದೇಶಕ್ಕೆ ಸೀಮಿತವಾಗಿದೆ. ಚುನಾಯಿತ ಸದಸ್ಯರು ತಮ್ಮಲ್ಲಿಯೇ ಇಬ್ಬರನ್ನು ಅಧ್ಯಕ್ಷ ಹಾಗೂ ಉಪಾಧ್ಯಕ್ಷರೆಂದು ಆಯ್ಕೆ ಮಾಡಿಕೊಳ್ಳುವರು. ಹೀಗೆ ಆಯ್ಕೆಯಾದವರು ಸರಕಾರ ನಿರ್ದಿಷ್ಟಪಡಿಸಿದಷ್ಟು ಸಂಬಳ, ಸಾರಿಗೆ ಭತ್ಯೆ ಹಾಗೂ ಇತರೆ ಸೌಲಭ್ಯ ಪಡೆಯುವರು. ಜಿಲ್ಲಾ ಪಂಚಾಯತ್‌ನ ಅಧ್ಯಕ್ಷ/ಉಪಾಧ್ಯಕ್ಷ ಸ್ಥಾನಗಳಿಗೆ ಮೀಸಲಾತಿ ಇರುತ್ತದೆ."

ಗ್ರಾಮ, ತಾಲೂಕು ಮತ್ತು ಜಿಲ್ಲಾ ಪಂಚಾಯಿತಿಗಳ ಚುನಾವಣೆ ಕುರಿತಂತೆ ರಾಜ್ಯ ಸರ್ಕಾರವು ಪ್ರತ್ಯೇಕ ಚುನಾವಣಾ ಆಯೋಗ ರಚಿಸಿದೆ. ಜಿಲ್ಲಾಧಿಕಾರಿ ದರ್ಜೆಯ ಅಧಿಕಾರಿಯು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿರುತ್ತಾರೆ. ಜಿಲ್ಲಾ ಪಂಚಾಯಿತಿಯ ಆಡಳಿತದ ಪ್ರತಿಯೊಂದು ವಿಭಾಗ ಅಭಿವೃದ್ಧಿ ಯೋಜನೆಗಳ ಅನುಷ್ಠಾನ, ಆಡಳಿತಾತ್ಮಕ ಹಾಗೂ ಹಣಕಾಸಿನ ನಿರ್ವಹಣೆ, ಸಿಬ್ಬಂದಿ ನಿಯಂತ್ರಣ ಮುಂತಾದವುಗಳ ಮೇಲೆ ಅಧ್ಯಕ್ಷರ ಪರಮಾಧಿಕಾರವಿರುತ್ತದೆ. ನೈಸರ್ಗಿಕ ವಿಪತ್ತು ಬರಗಾಲದಂತಹ ತುರ್ತು ಸಂದರ್ಭಗಳಲ್ಲಿ ಪರಿಹಾರ ಕ್ರಮ ಕೈಗೊಳ್ಳಲು ಅನುಕೂಲವಾಗುವಂತೆ ಅಧ್ಯಕ್ಷರು ಒಂದು ಲಕ್ಷ ರೂ.ಗಳನ್ನು ಮಂಜೂರು ಮಾಡುವ ಅಧಿಕಾರವನ್ನು ಹೊಂದಿರುವರು. ಹೊಸ ಕಾನೂನಿನನ್ವಯ ಜಿಲ್ಲೆಗೊಂದರಂತೆ ಜಿಲ್ಲಾ ಯೋಜನಾ ಸಮಿತಿಗಳ ರಚನೆಗೆ ಅವಕಾಶ ಕಲ್ಪಿಸಲಾಗಿದೆ"(ಅನೀಸ್ ಸಿರಾಜ್ ಎಸ್ (ಸಂ):೨೦೧೧:೪೫೨).

ಕೋಷ್ಟಕ: ೮.೪. ಚಿತ್ರದುರ್ಗ ಜಿಲ್ಲೆಯ ಮಾದಿಗ ಸಮುದಾಯದಿಂದ ಚುನಾಯಿತರಾಗಿ ಜಿಲ್ಲಾ ಪಂಚಾಯಿತ್ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಸದಸ್ಯರಾಗಿ ಆಯ್ಕೆಯಾಗಿರುವ ವಿವರಗಳು

ಜಿಲ್ಲಾ ಪಂಚಾಯಿತಿಗಳ ಸದಸ್ಯರ ವಿವರಗಳು	ಸದಸ್ಯರ ಸಂಖ್ಯೆ			ಅಧ್ಯಕ್ಷರ ಸಂಖ್ಯೆಗಳು			ಉಪಾಧ್ಯಕ್ಷರ ಸಂಖ್ಯೆಗಳು		
	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು
ಚಿತ್ರದುರ್ಗ	೦೩	೦೪	೦೭	–	–	–	–	–	–
ಒಟ್ಟು	೦೩	೦೪	೦೭	–	–	–	–	–	–

ಕೋಷ್ಟಕ ೮.೪ರಲ್ಲಿ ಚಿತ್ರದುರ್ಗ ಜಿಲ್ಲೆಯ ಮಾದಿಗ ಸಮುದಾಯದವರು ೨೦೧೬-೧೭ನೇ ಸಾಲಿನಲ್ಲಿ ನಡೆದ ಜಿಲ್ಲಾ ಪಂಚಾಯಿತ್ ಅಧ್ಯಕ್ಷ, ಉಪಾಧ್ಯಕ್ಷರ ಮತ್ತು ಸದಸ್ಯರ ಚುನಾವಣೆಯಲ್ಲಿ ನಾಮನಿರ್ದೇಶನಗೊಂಡವರ ವಿವರವಿದೆ. ಜಿಲ್ಲಾ ಪಂಚಾಯತಿಯಲ್ಲಿ ಪರಿಶಿಷ್ಟ ಜಾತಿ ಮೀಸಲಾತಿಯಡಿ ಮಾದಿಗ ಸಮುದಾಯದವರು ಸ್ಪರ್ಧಿಸಿ ವಿಜೇತರಾಗಿದ್ದಾರೆ. ಸದಸ್ಯ ಸ್ಥಾನಕ್ಕೆ ಆಯ್ಕೆಯಾದವರು ಪುರುಷರ ಸಂಖ್ಯೆ ೦೩ ಹಾಗೆಯೇ ನಾಲ್ಕು ಜನ ಮಹಿಳೆಯರು, ಒಟ್ಟು ಪುರುಷರ ಮತ್ತು ಮಹಿಳೆಯರ ಸಂಖ್ಯೆ ೦೭.

ಇತ್ತೀಚಿನ ಬದಲಾದ ರಾಜಕೀಯ ವ್ಯವಸ್ಥೆಯಲ್ಲಿ ಸಂವಿಧಾನದ ಅವಕಾಶಗಳು ಸರ್ಕಾರದ ಅನುಷ್ಠಾನದ ಪ್ರಕ್ರಿಯೆಗಳು ಮಾದಿಗ ಸಮುದಾಯದ ಜೀವನದಲ್ಲಿ ಬದಲಾವಣೆಗಳನ್ನು ಪ್ರಸ್ತುತ ರಾಜಕೀಯ ಕ್ಷೇತ್ರದಲ್ಲಿ ಹೆಸರು ಮಾಡಿರುವ ಮಾದಿಗ ಸಮುದಾಯದ ಕೆಲವು ಪ್ರಮುಖ ರಾಜಕೀಯ ಗಣ್ಯರನ್ನು ಕಾಣಬಹುದು. ಹೆಚ್ ಆಂಜನೇಯ, ಮಾಜಿ ಸಮಾಜ ಕಲ್ಯಾಣ ಸಚಿವರು, ಚಿತ್ರದುರ್ಗ ಜಿಲ್ಲೆಯ ಉಸ್ತವಾರಿ ಸಚಿವರು (ಹೊಳಲ್ಕೆರೆ ಕ್ಷೇತ್ರ ಶಾಸಕರು), ಡಿ ಮಂಜುನಾಥ ಮಾಜಿ ಸಚಿವರು, ರಾಮಯ್ಯ, ಮಾಜಿ ಶಾಸಕರು (ಹಿರಿಯೂರು ಕ್ಷೇತ್ರ ಶಾಸಕರು)

೨೦೦೩ರ ವಿಧಾನಸಭೆ ಚುನಾವಣೆಯಲ್ಲಿ ಕರ್ನಾಟಕ ರಾಜ್ಯದಲ್ಲಿ ಈ ಸಮುದಾಯದಲ್ಲಿ ಒಟ್ಟು ಹನ್ನೆರಡು ಶಾಸಕರು ಆಯ್ಕೆಯಾಗಿದ್ದಾರೆ. ಅದರಲ್ಲಿ ಮುಖ್ಯವಾಗಿ ಚಿತ್ರದುರ್ಗ ಜಿಲ್ಲೆಯ ಲೋಕಸಭೆ ಸದಸ್ಯರಾದ ಎಂ ಚಂದ್ರಪ್ಪ, ಹೊಳಲ್ಕೆರೆ ತಾಲೂಕಿನ ಕ್ಷೇತ್ರದ ಶಾಸಕರು ಈ ಎರಡು ಕ್ಷೇತ್ರಗಳು ಪರಿಶಿಷ್ಟ ಜಾತಿಯ ಮೀಸಲು ಕ್ಷೇತ್ರಗಳಾಗಿವೆ.

೮.೩. ಆಧುನಿಕತೆಯ ಪ್ರಭಾವ

"ಮಾನವ ಸಮಾಜವು ನಿರಂತರವಾಗಿ ಬದಲಾಗುತ್ತಿರುವ ಹಾಗೂ ವಿಶಿಷ್ಟ ಸಾಮಾಜಿಕ ಸಂಬಂಧಗಳಿಂದ ಬಂಧಿಸಲ್ಪಟ್ಟ ಒಂದು ವ್ಯವಸ್ಥೆ ಎಂಬುದು ನಮಗೆಲ್ಲಗೂ ತಿಳಿದಿರುವ ಅಂಶವಾಗಿದೆ. ಅದು ಸದಾಗಮಿಸುತ್ತಿರುವ ನದಿಯಂತೆ ಕೆಲವು ಸಮಾಜಗಳಲ್ಲಿ ಬದಲಾವಣೆ ತೀವ್ರಗತಿಯಲ್ಲಿ

ಆಗುತ್ತದೆ ಮತ್ತೆ ಕೆಲವು ಸಮಾಜದಲ್ಲಿ ಬದಲಾವಣೆಯ ಗತಿ ನಿಧಾನವಾಗಿರುತ್ತದೆ. ಈ ಬದಲಾವಣೆಗಳನ್ನು ಕಾಲಮಾನದ ಮೂಲಕ ಜೀವನ ಸೌಲಭ್ಯಗಳ ಗುರುತಿಸುವುದು ಸಮಾಜದಲ್ಲಿ ನಡೆದು ಬಂದಿರುವ ರೂಢಿ. ಮಾನವ ಸಮಾಜ ವಿಶಾಲವೂ, ವ್ಯಾಪಕವೂ ಆದುದು. ಇಲ್ಲಿ ನಡೆಯುವ ಬದಲಾವಣೆ ಅಪಾರ. ಕೆಲವು ಭೌತಿಕ ನಿಯಮಗಳನ್ನು ಬಿಟ್ಟರೆ ಮಿಕ್ಕೆಲ್ಲವೂ ಬದಲಾಗುತ್ತ ಹೋಗುತ್ತದೆ. ವಿಶಾಲವಾದ ಸಮಾಜ ಮಾನವ ತನ್ನ ಬದುಕನ್ನು ಅತಿಚಿಕ್ಕ ಸಮುದಾಯದಿಂದ ಆರಂಭಿಸುತ್ತಾನೆ. ಆ ಸಮಾಜದಲ್ಲಿ ಅಂಗೀಕರಿಸಲ್ಪಟ್ಟ ನಿಯಮಗಳಿಗೆ ಬದ್ಧನಾಗಿ ಅವನು ಜೀವನ ಪ್ರಾರಂಭಿಸುತ್ತಾನೆ. ಅವನು ಬೆಳೆದಂತೆ ಬದಲಾವಣೆಗಳನ್ನೊಳಗೊಂಡಂತೆ ಅವನ ಸುತ್ತಲಿನ ಸಮಾಜದಲ್ಲಿಯೂ ಹಲವು ಬದಲಾವಣೆಗಳಾಗುತ್ತವೆ. ಇಂತಹ ಬದಲಾವಣೆಗಳನ್ನು ಹೋಲಿಕೆಯಿಂದ ಗುರುತಿಸಲಾಗುತ್ತದೆ. ಅಂತಹ ಹೋಲಿಕೆಗಳಲ್ಲಿ ಕೆಲವನ್ನು ಆಧಾರವಾಗಿ ಇಟ್ಟುಕೊಳ್ಳುತ್ತೇವೆ. ಅವುಗಳಲ್ಲಿ ಮುಖ್ಯವಾಗಿ ಭೂಚಲನೆ, ವ್ಯಕ್ತಿಗಳ ಜನನ, ಮರಣ ಕೆಲವು ಘಟನೆಗಳು ಸಂಭವಿಸುವಿಕೆ ಇವುಗಳಾಗಿರುತ್ತವೆ."[೯] (ಕೃಷ್ಣ ಬಿ ಆರ್:೨೦೦೮:೪೨೪-೨೫).

• **ಆಧುನಿಕತೆ ಎಂದರೇನು? ಆಧುನಿಕ ಎಂಬುದು ಯಾವುದು?**

"ಮೇಲಿನ ಪ್ರಶ್ನೆಗಳಿಗೆ ಸುಲಭವಾಗಿ ಉತ್ತರಿಸಲಾಗುವುದಿಲ್ಲ. ಹಾಗೆ ನೋಡಿದರೆ ವರ್ತಮಾನ ಕಾಲದ ಪ್ರತಿ ಸೆಕೆಂಡ್ ಸಹ ಆಧುನಿಕವಾಗಿರುತ್ತದೆ. ಉದಾ: ೧೯ನೇ ಶತಮಾನವನ್ನು ೨೦ನೇ ಶತಮಾನಕ್ಕೆ ಹೋಲಿಸಿ ನೋಡಿದರೆ, ೨೦ನೇ ಶತಮಾನದ ಪ್ರಾರಂಭ ಆಧುನಿಕ, ಹಾಗೆ ನೋಡಿದರೆ ೨೦ನೇ ಶತಮಾನದ ೧೯೨ನೇ ಇಸವಿ ಆಧುನಿಕ, ಈ ಇಸವಿಯ ಇಂದು ಆಧುನಿಕ ನಿನ್ನೆ ಆಗಲೇ ಹಳೆಯದು. ಆಧುನಿಕತೆಯ ಸುಳಿಗೆ ಯಾವ ಸಮುದಾಯವು ಬೇಕಾದರೂ ಸಿಕ್ಕಿಕೊಳ್ಳಬಹುದು. ಆಧುನೀಕರಣವು ಒಂದು ಸಮಗ್ರ ಸಂಕೀರ್ಣ ಕ್ರಿಯೆ ಅದು. ಜೀವನದ ಎಲ್ಲ ರಂಗಗಳ ಮೇಲೆ ಮತ್ತು ವ್ಯಕ್ತಿಯ ಅನಿಸಿಕೆಗಳ ಮೇಲೆ ವ್ಯಾಪಕವಾದ ಪರಿಣಾಮ ಬೀರುತ್ತದೆ. ಅದಕ್ಕೆ ಜಾತಿ, ಮತ, ಪಂಥ, ಧರ್ಮ, ದೇಶ ಮುಂತಾದವುಗಳ ಅಡೆತಡೆಗಳಿಲ್ಲ, ಆಧುನಿಕತೆಯ ಅಂಗಗಳಾಗಿ, ಕೈಗಾರೀಕರಣ, ನಾಗರಿಕರಣ, ಪಾಶ್ಚಾತ್ಯೀಕರಣ, ನೌಕರಶಾಹಿ ವ್ಯವಸ್ಥೆಗಳಿರುತ್ತವೆ."[೧೦] ಕೈಗಾರಿಕಾ ಕ್ರಾಂತ್ರಿಯ ನಂತರ ಆಧುನೀಕರಣ ಪ್ರಕ್ರಿಯೆ ಅಧಿಕಗೊಳ್ಳುತ್ತಾ ಹೋಗಿದೆ. ಪ್ರಾರಂಭಿಕ ದಿನಗಳಲ್ಲಿ ಆಧುನೀಕರಣವು ಕೇವಲ ತಾಂತ್ರಿಕ ಬದಲಾವಣೆ ಎಂದೇ ಗುರುತಿಸಲ್ಪಡುತ್ತಿತ್ತು. ಜೊತೆಗೆ ತಾಂತ್ರಿಕ ಬದಲಾವಣೆ ತಂದ ಆರ್ಥಿಕ ಬದಲಾವಣೆಯೂ ಸಹ ಆಧುನೀಕರಣ ಎಂದು ಭಾವಿಸಲ್ಪಟ್ಟಿತು.

ಹೀಗಾಗಿ ಆಧುನೀಕರಣವೆಂದರೆ ಒಂದು ನಿರ್ದಿಷ್ಟ ಸಂಪ್ರದಾಯ ವಷ್ಟೆ. ಕೈಗಾರಿಕಾ ಪೂರ್ವ ಸಮಾಜವು ಕೈಗಾರಿಕೀಕೃತ ಅಥವಾ ನಾಗರಿಕೃತ ಸಮಾಜವಾಗಿ ಪರಿವರ್ತನೆ ಹೊಂದುವ ಸಂದರ್ಭದಲ್ಲಿ ಉಂಟಾಗುವ ಆಂತರಿಕ, ಬದಲಾವಣೆಗಳೆನ್ನಬಹುದು. ಇನ್ನೊಂದು ಅರ್ಥದಲ್ಲಿ ಆಧುನೀಕರಣ ಎಂದರೆ ಎಲ್ಲರೂ ಶಿಕ್ಷಣ ಪಡೆಯುವುದು. ಉದ್ಯೋಗ ಪಡೆಯುವುದು ಎಲ್ಲರೂ ಉತ್ಪಾದನೆಯಲ್ಲಿ ಸಮಪಾಲುದಾರಿಕೆ ಮತ್ತು ಹೊಣೆಗಾರಿಕೆಯನ್ನು ಹೊಂದುವುದು. ಸಾಮಾಜಿಕ, ಸಾಂಸ್ಕೃತಿಕ, ವೈಜ್ಞಾನಿಕ,

ತಾಂತ್ರಿಕವಾಗಿ ಬದಲಾವಣೆ ಮತ್ತು ಬೆಳೆವಣಗೆಯನ್ನು ಅರ್ಥಪೂರ್ಣವಾಗಿ ರೂಢಿಸಿಕೊಳ್ಳುವುದು ಎಂದರ್ಥ. ಈ ದೃಷ್ಟಿಕೋನದಿಂದ ಅವಲೋಕಿಸಿದಾಗ ಸಮಾಜವು ಪ್ರಸ್ತುತ ದಿನಮಾನಗಳಲ್ಲಿ ಸಕ್ರಿಯವಾಗಿ ಬದಲಾವಣೆಯನ್ನು ಹೊಂದುತ್ತಿರುವ ಮುಖೇನ ಹಳೆಯ ವಿಧಾನ ಅಥವಾ ವ್ಯವಸ್ಥೆಯನ್ನು ಕಳಚಿಕೊಂಡು ದಿನದಿಂದ ದಿನಕ್ಕೆ ಆಧುನಿಕತೆಯನ್ನು ಮೈಗೂಡಿಸಿಕೊಳ್ಳುತ್ತಿದೆ. ಈ ಹಿನ್ನೆಲೆಯಿಂದ ಸಮಾಜದಲ್ಲಿ ಸಂಘರ್ಷವು ಸಹ ಸಮಾಜದ ದಿಕ್ಕನ್ನು ಬದಲಾಯಿಸುವ ಹಾಗೂ ಜನ ಸಮುದಾಯವನ್ನು ಎಚ್ಚರಿಸುವ ಕೆಲಸವನ್ನು ಸೃಷ್ಟಿಮಾಡುತ್ತದೆ. ಎಲ್ಲದಕ್ಕೂ ಮುಖ್ಯವಾಗಿ ವಿಜ್ಞಾನ ಮತ್ತು ತಂತ್ರಜ್ಞಾನಗಳು ಶರವೇಗದಲ್ಲಿ ಬೆಳೆಯುತ್ತಿವೆ. ಇದರ ಜೊತೆಗೆ ಜನ ಸಮುದಾಯ ಹೊಂದಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಆದರೂ ಅವುಗಳ ಜೊತೆಗೆ ಸೇರಿಕೊಂಡು ಮುಂದೆ ಸಾಗುತ್ತದೆ ಎಂದು ಹೇಳಬಹುದು. ಪ್ರಪಂಚದ ಮೇಲೆ ನಡೆಯುತ್ತಿರುವ ವಿಸ್ಮಯಗಳನ್ನು ಭೂಮಿಯ ಮೇಲೆ ಕುಳಿತು ಅನ್ಯ ಗ್ರಹಗಳಿಗೆ ಸಂಪರ್ಕವನ್ನು ಸಾಧಿಸುವ ಪ್ರಯತ್ನವನ್ನು ಮಾನವ ಸಮಾಜ ಮಾಡುತ್ತಿದೆ. ಇಷ್ಟೂ ಸಾಲದೆಂಬಂತೆ ಯಂತ್ರ ಮಾನವನ ಕಾರ್ಯವನ್ನು ಕಸಿದುಕೊಂಡಿದೆ. ಈ ದಿಸೆಯಲ್ಲಿ ಮಾನವ ಸಂಪನ್ಮೂಲಗಳನ್ನು ಕೆಳಗೆ ತಳ್ಳುವ ಕಾರ್ಯವು ಇವತ್ತಿನ ಆಧುನಿಕ ಯುಗ ಮಾಡುತ್ತದೆ. ಇಡೀ ಸಮಾಜ ಸಂಪೂರ್ಣವಾಗಿ ಯಾಂತ್ರೀಕೃತ ಗೊಳ್ಳುತ್ತಿದೆ.

ಮಾದಿಗರು ಇವುಗಳ ಮಧ್ಯೆ ಇಂದು ಆಧುನಿಕತೆಯ ಕಡೆ ಮುಖ ಮಾಡುತ್ತಿದ್ದಾರೆ. ವಿಜ್ಞಾನ ಮತ್ತು ತಂತ್ರಜ್ಞಾನದ ಫಲವಾಗಿ ಸುಧಾರಿತ ಸಾಮಾಜಿಕ ಜೀವನವನ್ನು ನಡೆಸುತ್ತಿದ್ದಾರೆ. ಆಧುನಿಕರಣವು ನೂತನ ರೀತಿಯ ಸಾಮಾಜಿಕ ವ್ಯವಸ್ಥೆಯನ್ನು ಬಯಸುತ್ತದೆ. ಹೀಗಾಗಿ ಅದಕ್ಕೆ ಹೊಂದಿಕೊಳ್ಳುವ ಪ್ರಯತ್ನ ಈ ಸಮುದಾಯ ಮಾಡುತ್ತದೆ. ಆಧುನಿಕತೆಯಲ್ಲಿರುವ ಅಸಂಗತ ಅಂಶಗಳನ್ನು ಮೈಗೂಡಿಸಿಕೊಂಡು ಸಾಮಾಜಿಕ ಬದಲಾವಣೆ ಹೊಂದಲು ಪ್ರಯತ್ನ ಮಾಡಲಾಗಿದೆ. ಮಾದಿಗರು ಇನ್ನೂ ಅಭಿವೃದ್ಧಿ ಹೊಂದಲು ಇವರಿಗೆ ಮುಖ್ಯವಾಗಿ ಶಿಕ್ಷಣವನ್ನು ನೀಡಬೇಕಾಗಿದೆ. ಸಮಾಜದಲ್ಲಿ ಇವರು ಮಾಡುವ ವೃತ್ತಿಯನ್ನು ಸಮಾನ ಮನೋಧರ್ಮದಡಿ ಗೌರವಿಬೇಕಿದೆ, ಜನರು ಅವರನ್ನು ನೋಡುವ ದೃಷ್ಠಿಕೋನದಲ್ಲಿ ಬದಲಾವಣೆ ಮಾಡಿಕೋಳ್ಳಬೇಕು. ಈ ಸಮುದಾಯ ಸಮಸ್ಯೆಗಳನ್ನು ವಿಶೇಷವಾಗಿ ಅಧ್ಯಯನ ಮಾಡಿ ಶಾಶ್ವತ ಪರಿಹಾರವನ್ನು ಸರ್ಕಾರ ಕೊಡಬೇಕು ಹಾಗೂ ಸ್ವಯಂಸೇವಾ ಸಂಸ್ಥೆಗಳು ಯಾವುದೇ ಫಲಅಪೇಕ್ಷೆ ಮಡೆಯದೆ ನಿಸ್ವಾರ್ಥ ಮನಸಿನಿಂದ ದುಡಿಯುವ ಅನಿವಾರ್ಯತೆ ಇದೆ. ಈ ಸಮುದಾಯವನ್ನು ಸಾಮಾಜಿಕ ವ್ಯವಸ್ಥೆಯಲ್ಲಿ ಮುಂದೆ ಬರಲು ಪ್ರಮಾಣಿಕ ಸೇವೆಯನ್ನು ಸರ್ಕಾರ ಮಾಡಬೇಕಾದ ಬಹುದೊಡ್ಡ ಜವಾಬ್ದಾರಿ ಇದೆ ಎಂದು ಹೇಳಬಹುದು.

೮.೪ ಮಾದಿಗ ಸಮುದಾಯ ಸಂಘಟನೆ ಮತ್ತು ಹೋರಾಟ

ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಸಾಮಾಜಿಕ ಸ್ತರ ವ್ಯವಸ್ಥೆಯಲ್ಲಿ ಅನೇಕ ಶ್ರೇಣೀಕೃತವಾದ ಸಾಮಾಜಿಕ ವರ್ಗ, ವರ್ಣ, ಜಾತಿ ಎಂಬ ಪರಿಕಲ್ಪನೆಯನ್ನು ಸೃಷ್ಟಿಮಾಡಿಕೊಂಡುಬರಲಾಗಿದೆ. ಭಾರತೀಯ ಸಾಂಸ್ಕೃತಿಕ ರಾಜಕಾರಣದಲ್ಲಿ ಬ್ರಾಹ್ಮಣರಿಗೆ ಪವಿತ್ರ ಸ್ಥಾನವಿತ್ತು. ಅವರನ್ನು ದೇವರ

ಪ್ರತಿರೂಪವಾಗಿ ಕಾಣುತ್ತಿದ್ದರು. ಇಂತಹ ಪ್ರಭಾವಿತವಾದ ಸಮುದಾಯಗಳ ಜೊತೆಗೆ ಬದುಕಲು ಇವರಿಗೆ ಅವಕಾಶವೂ ಇರಲಿಲ್ಲ. ಆದ್ದರಿಂದ ಸಾಮಾಜಿಕ ಅನಿಷ್ಟವಾದ ಜಾತಿಪದ್ಧತಿಯಿಂದಾಗಿ ಗ್ರಾಮೀಣ ಭಾರತದ ಹಳ್ಳಿಗಳು ಕೇರಿಗಳಾಗಿ ಒಡೆದು ಶ್ರೇಣೀಕೃತ ಅಸಮಾನತೆಯ ಜೀವನ ಪದ್ಧತಿಯನ್ನು ಅಳವಡಿಸಿಕೊಂಡಿರುವುದು ಒಂದು ಕಡೆಯಾದರೆ, ಇವರೆಲ್ಲರಿಗಿಂತಲೂ ಕಡೆಯಾಗಿ ಅಸ್ಪೃಶ್ಯತೆಯ ಕಳಂಕವನ್ನು ಹೊತ್ತುಕೊಂಡು ಊರಿನ ಹೊರಗೆ ಕನಿಷ್ಠತಮ ಜೀವನ ಕ್ರಮವನ್ನು ಮಾದಿಗ ಸಮುದಾಯ ನಡೆಸುತ್ತಿತ್ತು.

ಮಾದಿಗ ಸಮುದಾಯವು ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಶೈಕ್ಷಣಿಕವಾಗಿ ತೀರಾ ಹಿಂದುಳಿದಿದ್ದು ಎಲ್ಲ ಬಗೆಯ ಅನುಕೂಲಗಳಿಂದ ವಂಚಿತವಾಗಿದೆ. ಪರರ ಸೇವೆಯಲ್ಲಿ ಮನೆಮಂದಿಯೆಲ್ಲ ಹಣ್ಣಾಗಿ ದುಡಿತದ ಶ್ರಮವನ್ನು ಕುಡಿತದಲ್ಲಿ ಮರೆತು ಮೂರ್ತಿವೆತ್ತಂತಾಗಿ, ಆತ್ಮ ವಿಶ್ವಾವಾಸವನ್ನೇ ಕಳೆದುಕೊಂಡ ಬದುಕನ್ನು ನಡೆಸುತ್ತಿದ್ದರು. ತಾವು ಮಾಡುವ ಯಾವುದೇ ಕೆಲಸವನ್ನು ನಿಷ್ಠೆ ಮತ್ತು ಪ್ರಾಮಾಣಿಕತೆಯಿಂದ ಮಾಡುವುದರಿಂದ ಮೋಕ್ಷ ಸಂಪಾದಿಸಬಹುದೆಂಬ ನಂಬಿಕೆಯನ್ನು ಸಮುದಾಯದವರು ನಂಬಿಕೊಂಡು ಬಂದವರು. ಪರಲೋಕದಲ್ಲಿ ತಮ್ಮ ವೃತ್ತಿಯ ಬಗೆಗೆ ಆತ್ಮಗೌರವವನ್ನು ತಾಳಲು ಸಹಾಯಕವಾಗಿದೆ ಎಂಬ ಬಲವಾದ ನಂಬಿಕೆಯನ್ನು ಇಟ್ಟುಕೊಂಡಿದ್ದರು. ಆದ್ದರಿಂದ ಈ ಸಮುದಾಯವು ಜಮೀನ್ದಾರಿ ವರ್ಗವನ್ನು ಅವಲಂಬಿಸಿ ಜೀವನವನ್ನು ನಡೆಸುತ್ತಿರುವುದು ಇತಿಹಾಸದುದ್ದಕ್ಕೂ ನೋಡಬಹುದು. 'ಹಳ್ಳಿಗಳಲ್ಲಿ ಜಮೀನ್ದಾರರೇ ಪೊಲೀಸ್, ಕೋರ್ಟ್, ಕಛೇರಿ, ಕಾನೂನು. ದಲಿತರ ಮೇಲೆ ದೌರ್ಜನ್ಯ ನಡೆಸುವವರೂ ಅವರೇ ನ್ಯಾಯ ಹೇಳುವವರೂ ಅವರೇ. ಈ ವಸ್ತುಸ್ಥಿತಿಯಲ್ಲಿ ದಲಿತರು. ದಲಿತ ಮಹಿಳೆಯರು ನಲುಗಿ ಹೋಗಿದ್ದಾರೆ. ಹಳ್ಳಿಗಳಲ್ಲಿರುವ ಜಮೀನ್ದಾರಿ ವ್ಯವಸ್ಥೆಯ ಹೋರಾಡಲು ವಿರಿದ್ಧ ಸಾಧ್ಯವಾಗುತ್ತಿಲ್ಲ. ಎದುರಿಸದೇ ಬಿಡಲು ಆಗುತ್ತಿಲ್ಲ ದಲಿತ ಹೋರಾಟದಲ್ಲಿ ಭಾಗವಹಿಸುವುದೆಂದರೆ ಅದು ಮತ್ತೊಂದು ರೀತಿಯಲ್ಲಿ ಜಮೀನ್ದಾರಿ ವರ್ಗದ ವಿರುದ್ಧ ಹೋರಾಟಕ್ಕೆ ಇಳಿದಂತೆಯೇ. ಜಮೀನ್ದಾರರನ್ನು ಎದುರುಹಾಕಿಕೊಳ್ಳದ ಹೊರತು ದಲಿತ ಹೋರಾಟಕ್ಕೆ ಚಲನೆಯೇ ಇಲ್ಲ. ಜಮೀನ್ದಾರರಿಗೆ ಎದುರಾಗುವ ವಿಷಯದಲ್ಲಿ ಪುರುಷರಿಗಿಂತ ಮಹಿಳೆಯರಿಗೆ ಅವಕಾಶಗಳು ಕಡಿಮೆ. ದುಡಿಮೆಯ ಸಂಬಂಧ ಅವರನ್ನು ಹಾಗೆ ಬಂಧಿಸಿಟ್ಟಿದೆ. ಈ ಸಂಬಂಧ ಸಡಿಲಗೊಳ್ಳದ ಹೊರತು ಜಮೀನ್ದಾರರ ಮನೆಗಳಲ್ಲಿ ಕೂಲಿ, ಜೀತ ಮುಂತಾದುವುಗಳ ಮೇಲೆಯೇ ಎಷ್ಟೆಷ್ಟು ಅವಲಂಬನೆ ಇರುತ್ತದೋ ಅಷ್ಟಷ್ಟೂ ಹೋರಾಟ ಹುಟ್ಟಲು ಕಾವು ಇರುತ್ತದೆ ನಿಜ."[೧೧] ಆದರೆ ಈ ಪರಿಸ್ಥಿತಿಯಲ್ಲಿ ಪಕ್ವತೆಯನ್ನು ಮಾದಿಗರು ಪಡೆಯುವಲ್ಲಿ ವಿಫಲರಾಗಿದ್ದಾರೆ.

"ಹನ್ನೆರಡನೆ ಶತಮಾನದಲ್ಲಿ ದಲಿತ ವಚನಕಾರರು ಬೃಹತ್ ಪ್ರಮಾಣದಲ್ಲಿ ಕಂಡು ಬಂದಿದ್ದಾರೆ ನಿಜ. ಆದರೆ ಹರಿದಾಸ ಸಾಹಿತ್ಯದಲ್ಲಿ ಇಂತಹ ದಲಿತರು ಹೆಚ್ಚಾಗಿ ಕಂಡು ಬರಲಿಲ್ಲ. ಅಂತೆಯೇ ದಲಿತ ಅಸ್ಪೃಶ್ಯ ಸಂಘಟನೆಯು ಶಕ್ತಿಯುತವಾಗಿ ಬೆಳೆದು ಬರಲಿಲ್ಲ. ಜಾತಿಯ ಕಟ್ಟುಪಾಡುಗಳು ಕಠಿಣವಾಗಿ ಬೆಳೆದು ಬಂದು ಅವರಿಗೆ ರಾಜರ ಆಶ್ರಯವಾಗಲಿ, ಸಮಾಜದ ಸ್ಥಾನಮಾನವಾಗಲಿ

ಇಲ್ಲದೆ ಇದ್ದುದರಿಂದ ದಲಿತ ಅಸ್ಪೃಶ್ಯರು ಮುಂದೆ ಬರಲು ಸಾಧ್ಯವಾಗಲಿಲ್ಲ. ದಲಿತ ಹರಿದಾಸರಿದ್ದರೂ ಅವರು ಓದು ಬರಹ ಬಾರದೆ ಇರುವಂತಹವರು, ಅವರಿಗೆ ಅಕ್ಷರಜ್ಞಾನ ನೀಡಲು ಬಹುತೇಕ ಯಾರು ಮುಂದೆ ಬರಲಿಲ್ಲವೆನಿಸುತ್ತದೆ. ಕೇವಲ ತಂಬೂರಿ ಹಿಡಿದು ಭಿಕ್ಷೆ ಬೇಡಿ ಹೊಟ್ಟೆಹೊರೆಯುವಂತವರಿದ್ದಾರೆ. ಆದ್ದರಿಂದ ಹನ್ನೆರಡನೆ ಶತಮಾನದ ವಚನ ಸಾಹಿತ್ಯ ಕಾಲವನ್ನು ದಲಿತ ವರ್ಗದವರ ಸಾಮಾಜಿಕ ಹೋರಾಟದ 'ಸುವರ್ಣಯುಗ'ವೆಂದು ಕರೆಯಬಹುದಾಗಿದೆ."[೨]

'ಹನ್ನೆರಡನೆ ಶತಮಾನ ಪೂರ್ವದಲ್ಲಿ ದಲಿತರು ವಿದ್ಯೆ ಕಲಿಯಬಾರದು, ವೇದಾಧ್ಯಯನ ಮಾಡಬಾರದು, ಶಾಸ್ತ್ರಗಳನ್ನು ತಿಳಿಯಬಾರದು, ಪುರಾಣಗಳನ್ನು ಕೇಳಬಾರದು ಮತ್ತು ದಲಿತರಿಗೆ ಶಿಕ್ಷಣವನ್ನು ಹೇಳಿಕೊಟ್ಟರೆ ಅವರು ಶಿಷ್ಯರೊಂದಿಗೆ ನರಕದಲ್ಲಿ ಬೀಳುತ್ತಾರೆ ಎಂಬ ನಂಬಿಕೆಯಿತ್ತು. ಆದರೆ ದಲಿತ ವಚನಕಾರರು ಬಸವಣ್ಣನ ಕೃಪೆಯಿಂದ ಶಿಕ್ಷಣ ಪಡೆದರೆ, ವೇದ, ಶಾಸ್ತ್ರ, ಪುರಾಣಗಳನ್ನು ಅಧ್ಯಯನ ಮಾಡಿ ಹಳೆಯ ನಂಬಿಕೆಗಳೆನ್ನೆಲ್ಲಾ ಸುಳ್ಳುಮಾಡಿದರು. ಇದರ ಮೂಲಕ ಪ್ರತಿ ಹಳ್ಳಿಗೂ ಸಂಚರಿಸಿ ಜನ ಸಮುದಾಯಗಳಿಗೆ ಶಿಕ್ಷಣವನ್ನು ಕಲಿಸುವ ಹಾಗೂ ಅವರಲ್ಲಿ ಸಂಘಟನೆ ಮನೋಭಾವನೆ ಬೆಳೆಸುವ ಮಹತ್ತರವಾದ ಕೆಲಸ ಹನ್ನೆರಡನೆ ಶತಮಾನದಲ್ಲಿ ಪ್ರಾರಂಭವಾಗಿತ್ತು. ಇದರ ಮೂಲಕ ಪ್ರಭಾವಿತರಾದ ದಲಿತ ಸಮುದಾಯಗಳಲ್ಲಿ ಮಾದಿಗ ಸಮುದಾಯವೂ ಒಂದಾಗಿತ್ತು.

"ಸ್ವತಃ ಅಂಬೇಡ್ಕರ್ ತಮ್ಮ ಸಮುದಾಯದ ನೋವು, ಹಿಂಸೆ, ಅವಮಾನಗಳನ್ನು ಅರಿತುಕೊಂಡದ್ದು ಶಿಕ್ಷಣದ ಮೂಲಕವೇ. ಮನುಷ್ಯನ ಮೆದುಳು ಚಿಂತನೆಯ ಕುಲುಮೆಯಾಗಿ ಎಲ್ಲರೊಳಗೆ ಒಂದೇ ತೆರನಾಗಿ ಕೆಲಸ ಮಾಡುತ್ತದೆ ಎಂದು ಗ್ರೋಬರ್ ಎಂಬ ವಿಜ್ಞಾನಿ ಸಂಶೋಧನೆಯ ಮೂಲಕ ದೃಢಪಡಿಸಿದ್ದಾರೆ. ಹೀಗೆ ಶಿಕ್ಷಣದ ಮಹತ್ವವನ್ನು ಅರಿತಿದ್ದ ಅಂಬೇಡ್ಕರ್ ಭಾರತದ ದಲಿತರೆಲ್ಲರೂ ಶಿಕ್ಷಿತ ಸಮೂಹವಾಗಿ ಹೊರಹೊಮ್ಮಿದಾಗಲೇ ಶೋಷಣೆಗಳಿಂದ ಮುಕ್ತಿ ದೊರಕುವುದು ಸಾಧ್ಯ ಎಂಬುದನ್ನು ಅರಿತಿದ್ದರು. ಆದ್ದರಿಂದಲೇ ಅವರ ಮೂರು ಮಹಾಮಂತ್ರ ಪದಗಳಾದ 'ಶಿಕ್ಷಣ, ಸಂಘಟನೆ, ಹೋರಾಟ'ಗಳಲ್ಲಿ ಶಿಕ್ಷಣವೇ ಆದ್ಯತೆಯನ್ನು ಪಡೆದುಕೊಳ್ಳುತ್ತದೆ. ಶಿಕ್ಷಣವಿಲ್ಲದಿದ್ದರೆ ಹೋರಾಟ ಮತ್ತು ಸಂಘಟನೆ ಜೀತ ಪದ್ಧತಿಯಂತೆ ಯಾಂತ್ರಿಕವಾಗಿ ನಿರ್ಜೀವವಾಗುತ್ತದೆ."[೧೩] ಈ ಹಿನ್ನೆಲೆಯಿಂದ ಭಾರತದಾದ್ಯಂತ ಅನೇಕ ಸಂಘಟನೆಗಳು ಹುಟ್ಟಿಕೊಂಡಿವೆ.

ಇಂತಹ ಅನೇಕ ನೋವುಗಳನ್ನು ಮನಗಂಡ ದಲಿತ ಸಾಹಿತಿಗಳು, ವಿದ್ಯಾವಂತ ಯುವ ಬರಹಗಾರರು, ಹಿರಿಯ ಯಜಮಾನರು, ದಲಿತ ರಾಜಕೀಯ ಮುಖಂಡರು ಸಮುದಾಯದ ಸಂಘಟನೆ ಮಾಡುವಂತಹ ಪ್ರಯತ್ನ ಮಾಡಿದ್ದರು. ಜೊತೆಗೆ ೧೯೫೦ ಜನವರಿ ೨೬ರಂದು ಡಾ. ಬಿ ಆರ್ ಅಂಬೇಡ್ಕರ್ ಅಖಂಡ ಭಾರತಕ್ಕೆ ಬೃಹತ್ ಸಂವಿಧಾನವನ್ನು ರಚಿಸಿದರು. ಇವರ ತಮ್ಮ ಆರಂಭದ ದಿನಗಳಲ್ಲಿ ಸಾಮಾಜಿಕ ಸಮಾನತೆಗಾಗಿ ಸ್ವಾಭಿಮಾನದ ಬದುಕಿಗಾಗಿ ದಲಿತ ಸಮುದಾಯಗಳನ್ನು ಬಲಗೊಳಿಸುವ ಸಲುವಾಗಿ ಧಾರ್ಮಿಕ ಸೈನಿಕದಳ (೧೯೩೬), ಬಹಿಷ್ಕಾರತ ಹಿತಕಾರಾಣಿ ಸಭಾ (೧೯೨೪), ಸಮತಾ ಸಮಾಜ (೧೯೩೬), ಪೀಪಲ್ಸ್ ಎಜುಕೇಷನ್ ಸೊಸೈಟಿ

(೧೯೪೪), ಭಾರತೀಯ ಬೌದ್ಧ ಮಹಾಸಭಾ (೧೯೫೫) ಸ್ಥಾಪಿಸಿ, ಸಮಾಜದ ಅಸಮಾನತೆ ತೊಡೆದುಹಾಕುವ ಕೆಲಸವನ್ನು ಡಾ. ಬಿ. ಆರ್. ಅಂಬೇಡ್ಕರ್ ಅವರು ಮಾಡಿದರು.

ಇತ್ತೀಚಿನ ದಿನಮಾನಗಳಲ್ಲಿ ಅನೇಕ ಸಂಘಟನೆಗಳು ಹುಟ್ಟಿಕೊಂಡಿವೆ. ದಲಿತ ಸಂಘರ್ಷ ಸಮಿತಿ (ಭೀಮವಾದ), ದಲಿತ ಸಂಘರ್ಷ ಸಮಿತಿ (ಎನ್ ಮೂರ್ತಿ ಬಣ), ದಲಿತ ರಕ್ಷಣಾ ವೇದಿಕೆ, ಸ್ವಾಭಿಮಾನ ದಲಿತ ರಕ್ಷಣಾ ವೇದಿಕೆ, ಮಾದಿಗ ದಂಡೋರ, ಡಾ. ಬಿ. ಆರ್. ಅಂಬೇಡ್ಕರ್ ಸಂಘ, ದಲಿತ ಸಿಂಹ, ದಲಿತ–ದಮನಿತರ ಸ್ವಾಭಿಮಾನಿ ಹೋರಾಟ ಸಮಿತಿ ಇತ್ಯಾದಿ. ಇದರ ಜೊತೆಗೆ ಅನೇಕ ರಾಜಕೀಯ ಪಕ್ಷಗಳೂ ಸಹ ಹುಟ್ಟಿಕೊಂಡಿರುವುದನ್ನು ನೋಡಬಹುದಾಗಿದೆ. ಈ ನಿಟ್ಟಿನಲ್ಲಿ ದಲಿತ ಚಳುವಳಿಗಳು ದಲಿತರ ಮೇಲೆ ನಡೆಯುವಂತಹ ದೌರ್ಜನ್ಯವನ್ನು ಪ್ರಶ್ನಿಸುತ್ತಿವೆ. ದಲಿತ ಸಾಹಿತಿಗಳು ಹಾಗೂ ದಲಿತ ಸಂಘಟನೆಗಳು ಸಮುದಾಯದಲ್ಲಿ ಒಗ್ಗಟ್ಟಿನ ಮನೋಭಾವನೆ, ಸಂಘಟನೆ ಭಾವನೆ, ದಲಿತರಲ್ಲಿ ಆಕ್ರೋಶವನ್ನು ಉಂಟುಮಾಡುವ ರೀತಿಯಲ್ಲಿ ಸಾಮಾಜಿಕ ಸಂಚಲನವನ್ನು ಉಂಟುಮಾಡುವ ಹಾಗೂ ದಲಿತ ಮಹಿಳೆಯರ ಮೇಲೆ ನಡೆಯುತ್ತಿರುವ ಲೈಂಗಿಕ ಶೋಷಣೆಯನ್ನು ವಿರೋಧಿಸುವ ಮತ್ತು ಪ್ರತಿಭಟಿಸುವಂತಹ ಧೈರ್ಯವನ್ನು ತುಂಬುತ್ತಿದ್ದಾರೆ. ಈ ಎಲ್ಲಾ ದಲಿತ ಸಂಘಟನೆಗಳು ಸಕಾರತ್ಮಕವಾಗಿ ಕೆಲಸವನ್ನು ಮಾಡುವುದರ ಮೂಲಕ ಸಮುದಾಯದ ಸಂಘಟನೆ ಮಾಡುತ್ತಿದ್ದಾರೆ.

೮.೪.೧ ದಲಿತ ಸಂಘರ್ಷ ಸಮಿತಿ

ಪ್ರಾಚೀನ ಕಾಲದಿಂದಲೂ ಭಾರತದಲ್ಲಿ ದಲಿತ ಸಮುದಾಯವನ್ನು ಅಸ್ಪೃಶ್ಯತೆ ಅವಮಾನಗಳಿಂದ ನೋವು ಮತ್ತು ಸಂಕಟಗಳನ್ನು ಅನುಭವಿಸಿಕೊಂಡು ಬಂದಿರುವುದನ್ನು ಚರಿತ್ರೆಯುದ್ದಕ್ಕೂ ಗಮನಿಸಬಹುದು. ಆದರೆ ಇಂತಹ ನೋವನ್ನು ಅನುಭವಿಸುತ್ತಿರುವ ಈ ದಲಿತ ಸಮುದಾಯವೊಂದು ತನ್ನ ಬಿಡುಗಡೆಗೆ ತುಡಿಯುತಿದ್ದರೂ ಅದಕ್ಕೋಂದು ಖಚಿತ ಹೋರಾಟದ ಸ್ವರೂಪ ಪಡೆಯುವ ಸಲುವಾಗಿ '೧೯೭೨ರ ಹೊತ್ತಿನಲ್ಲಿ ದಲಿತ ಚಳುವಳಿ ಬೆಂಗಳೂರಿನಲ್ಲಿ ಸ್ಥಾಪನೆಗೊಂಡಿತು ಡಿ.ಮ. ತಿಮ್ಮರಾಯಪ್ಪ ಎಂಬುವರು ಆ ಸಮಯದಲ್ಲಿ ದಲಿತ ಕ್ರಿಯೆ ಸಮಿತಿ ಎಂಬ ಸಂಘಟನೆಯೊಂದನ್ನು ಹುಟ್ಟುಹಾಕಿ, ಡಾ. ಅಂಬೇಡ್ಕರ್ ತತ್ವ ಪ್ರಚಾರಕ್ಕೆ ಬದ್ದರಾಗಿದ್ಧರು."[೧೪]

ನಂತರ ೧೯೭೩ರಲ್ಲಿ ಕರ್ನಾಟಕ ರಾಜ್ಯದ ಸಚಿವರಾಗಿದ್ದ ದಿವಂಗತ ಬಿ. ಬಸವಲಿಂಗಪ್ಪನವರು ಮೈಸೂರಿನ ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ಸಮಾರಂಭವೊಂದರಲ್ಲಿ ಭಾಗವಹಿಸಿ ಮಾತನಾಡುತ್ತ, ಕನ್ನಡ ಸಾಹಿತ್ಯ ಬೂಸ ಅಂತಂದು ಕಾಂತ್ರಿಕಾರಕ ಕಿಡಿಯೊಂದನ್ನು ಹಾರಿಸಿದರು. ಆ ಕಿಡಿ ಅಂದಿನ ಸಾಹಿತ್ಯಿಕ, ಸಾಂಸ್ಕೃತಿಕ ಲೋಕದಲ್ಲಿ ಬೆಂಕಿಯನ್ನು ಬೆಳಕನ್ನೂ ಏಕಕಾಲದಲ್ಲಿ ನೀಡಿತು."[೧೫] ಇವುಗಳಿಂದ ಪ್ರೇರಿತವಾದ ದಲಿತ ಹಾಗೂ ಪ್ರಗತಿಪರ ಮನಸ್ಸುಗಳು ಹೋರಾಟದ ಮನೋಭಾವನೆಯನ್ನು ಬೆಳೆಸಿಕೊಂಡವು.

ಈ ಚಳುವಳಿಗಳ ಮೂಲ ಅಂಶಗಳನ್ನು ಆಧಾರವಾಗಿ ಇಟ್ಟಿಕೊಂಡು ಕರ್ನಾಟಕದಲ್ಲಿ ದಲಿತ ಸಂಘರ್ಷ ಸಮಿತಿ ಹುಟ್ಟಿಕೊಂಡಿತ್ತು. ದಲಿತ ಸಂಘರ್ಷ ಸಮಿತಿ ಮಾಡಿದ ಚಳುವಳಿಯಿಂದಾಗಿ

ಅನೇಕ ಮಹತ್ತರವಾದ ಬದಲಾವಣೆಯಾಗಿದೆ. ಚಳುವಳಿಯಿಂದ ಸಮಾಜದಲ್ಲಿ ಅಶಾಂತಿಯನ್ನು ತೊಡದುಹಾಕಿ ಹೊಸ ಅಥವಾ ನವ ಸಮಾಜ ನಿರ್ಮಾಣದಲ್ಲಿ ಮೊದಲಿನಿಂದ ಡಾ. ಬಿ. ಆರ್. ಅಂಬೇಡ್ಕರರ್ ಮಾಡಿದಂಥ ಕಾರ್ಯಗಳು, ಅವರ ನಂತರ ಅಂಬೇಡ್ಕರ್ ಅವರ ಸಂಘಟನೆ ಮಾರ್ಗದರ್ಶನದಲ್ಲಿ ದಲಿತ ಸಂಘರ್ಷ ಸಮಿತಿಯನ್ನು ಪ್ರಾರಂಭಿಸಿದರು. ಈ ಸಂಘಟನೆ ೧೯೭೨ರಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿಯೊಂದು ರಚಿಸಿತು. ಮೊದಲ ಬಾರಿಗೆ ಭದ್ರಾವತಿಯಲ್ಲಿ ೧೯೭೪ರಲ್ಲಿ ಆಗ ಕೃಷ್ಣಪ್ಪನವರೊಂದಿಗೆ ಚಿ. ರಾಜಣ್ಣ, ಎನ್ ಬಿ ರಾಜು, ಈರಯ್ಯ, ಎನ್ ಗಿರಿಯಪ್ಪ, ಚಂದ್ರಪ್ರಸಾದ್ ತ್ಯಾಗಿ, ಬೋರಯ್ಯ ಮುಂತಾದವರು. ಜೊತೆಗೂಡಿ ಅನೇಕ ಕಾರ್ಯಕರ್ತರು ಭಾಗಿಯಾಗಿ ಚಳುವಳಿಯನ್ನು ಮುನ್ನಡೆಸುವ ಮಟ್ಟಿಗೆ ದಲಿತ ಸಂಘರ್ಷ ಸಮಿತಿಯು ಕರ್ನಾಟಕದಲ್ಲಿ ತನ್ನ ಕಾರ್ಯವನ್ನು ಪ್ರಾರಂಭಿಸಿತು.

"ದಲಿತ ಸಂಘರ್ಷ ಸಮಿತಿ (ದಸಂಸ) ತನ್ನ ಮುಂದುವರೆಸಿಕೊಂಡು ಬಂದ ಉದ್ದೇಶಗಳು

೧. ಹರಿಜನ-ಗಿರಿಜನರ ಸಮಸ್ಯೆಗಳ ಬಗೆಗೆ ವ್ಯವಹರಿಸುವುದು.

೨. ಹರಿಜನ-ಗಿರಿಜನರ ಮಧ್ಯೆ ಒಮ್ಮತ ರೂಪಿಸುವುದು ಮತ್ತು ಇವರಲ್ಲಿ ಉಪ ಜಾತಿಗಳನ್ನು ನಾಶಗೊಳಿಸುತ್ತಾ ಅವರ ಐಕ್ಯತೆಗಾಗಿ ದುಡಿಯುವುದು.

೩. ಹರಿಜನ-ಗಿರಿಜನರು ಆರ್ಥಿಕವಾಗಿ ಹಿಂದುಳಿದವರಾಗಿದ್ದು, ಸರ್ಕಾರದ ಸಹಕಾರದೊಂದಿಗೆ ಕೋಳಿ ಸಾಕಾಣಿಕೆ, ಡೈರಿ ಮತ್ತಿತರ ಸಣ್ಣ ಕೈಗಾರಿಕೆಗಳನ್ನು ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಪ್ರಾರಂಭಿಸಿ ಈ ಮೂಲಕ ಇವರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಪ್ರಯತ್ನಿಸುವುದು.

೪. ಹಣಕಾಸು ಸಂಸ್ಥೆಗಳನ್ನು ಪ್ರಾರಂಭಿಸಲು ತುಳಿತಕ್ಕೊಳಪಟ್ಟವರಿಗೆ ತಕ್ಷಣ ಉಪಾಯ ಒದಗಿಸುವ ಮೂಲಕ ಭೂಮಾಲೀಕ ಮತ್ತು ಮಾಡಿರ್ವಾಗಳ ಬಂಧನದಿಂದ ಬಿಡಿಸುವುದು.

೫. ಹರಿಜನ-ಗಿರಿಜನರ ಮೇಲಾಗುವ ದೌರ್ಜನ್ಯಗಳನ್ನು ತಡೆದು ಸವರ್ಣಿಯರ, ಹಿಂದುಗಳು ಮತ್ತು ಹರಿಜನ-ಗಿರಿಜನರ ಮಧ್ಯೆ ಸಾಮರಸ್ಯವನ್ನು ಉಂಟುಮಾಡುವುದು.

೬. ತಳವರ್ಗದ ಜನಾಂಗದವರನ್ನು ಪ್ರಜಾಪ್ರಭುತ್ವದ ಆಧಾರದ ಮೇಲೆ ಶಿಕ್ಷಣ ನೀಡಲು ಮುದ್ರಣಾಲಯ ಆರಂಭಿಸಿ, ದೈನಿಕ ಪತ್ರಿಕೆಯಾಗಲಿ ಅಥವಾ ವಾರ ಪತ್ರಿಕೆಯಾಗಲಿ ಪ್ರಾರಂಭಿಸುವುದು.

೭. ಹರಿಜನ-ಗಿರಿಜನರ ಒಳ್ಳೆಯ ಜ್ಞಾನವೃದ್ಧಿಗೆ ವಾಚನಾಲಯ ತೆರೆಯುವುದು.

೮. ಹರಿಜನ ಸಮುದಾಯದ ಸಂಪೂರ್ಣ ಅಭಿವೃದ್ಧಿಗೆ ಆರ್ಥಿಕವಾಗಿ, ರಾಜಕೀಯವಾಗಿ ಮತ್ತು ಸಾಮಾಜಿಕವಾಗಿ ಕೆಲಸ ಮಾಡುವುದು. ಇಂತಹ ಉದ್ದೇಶಗಳು ಜನಪರ ದೃಷ್ಟಿಕೋನವುಳ್ಳ ಪರಿವರ್ತನವಾದಿ ಆಂದೋಲನಗಳೆಂದು ಕರೆಯಬಹುದಾದ ಈ ಚಳುವಳಿ ಕರ್ನಾಟಕದಲ್ಲಿ ಮಹತ್ತರವಾದ ಪರಿಣಾಮವನ್ನು ಸೃಷ್ಟಿ ಮಾಡಿದೆ ಎಂದು ಹೇಳಬಹುದು."[೧೬]

ಬಿ. ಕೃಷ್ಣಪ್ಪರವರು ಕಟ್ಟಿದ "ದಲಿತ ಸಂಘರ್ಷ ಸಮಿತಿ"ಯನ್ನು ಆದರ್ಶಪ್ರಾಯವಾಗಿಟ್ಟುಕೊಂಡು, ಕೃಷ್ಣಪ್ಪನವರ ಹೆಸರನ್ನು ಇಟ್ಟುಕೊಂಡು ಯುವ ಮುಂಖಡರಾದ ಮಳವಳ್ಳಿ ಶಂಕರ, ಎಂ ಜಯಣ್ಣ, ದೇವದಾಸ, ಶ್ರೀಧರ್ ಕಲ್ವಿರ್ ಮೊದಲಾದವರು ಚಿತ್ರದುರ್ಗದಲ್ಲಿ ಸಭೆಯೊಂದನ್ನು ಕರೆದು ಡಿಸೆಂಬರ್ ೧೯೯೭, ತಮಗೆ ನಿಜವಾದ ರಾಜ್ಯ ಸಂಘಟನೆಯೊಂದು ಘೋಷಿಸುವುದರೊಳಗೆ ಎದುರು ಬಣದ ಮುಖಂಡ ಡಿ ಒ ಸಾಗರವರನ್ನು ಸಂಘಟನೆಯಿಂದ ಐದು ವರ್ಷಗಳ ಕಾಲ ಉಚ್ಚಾಟಿಸುವ ನಿರ್ಣಯ ಕೈಗೊಂಡು ವಿವಾದಕ್ಕೆ ಹೊಸ ತಿರುವು ನೀಡಿದರು. ಈ ನಿರ್ಣಯದ ವಿರುದ್ಧ ಪ್ರತಿ ಹೇಳಿಕೆ ನೀಡಿದ ಸಾಗರ ಬಣ ಈ ಸಭೆ ಕೈಗೊಂಡ ನಿರ್ಣಯಗಳಿಗೆ ಯಾವುದೇ ರೀತಿಯ ಬೆಲೆ ಇಲ್ಲವೆಂದು ಖಾರವಾಗಿ ಪ್ರತಿಕ್ರಿಯಿಸಿತು. ಒಟ್ಟಿನಲ್ಲಿ ದಸಂಸ ಒಡೆದು ಎರಡು ಪ್ರಮುಖ ಹೋಳುಗಾಳಾಗುವುದರೊಡನೆ ರಾಜ್ಯದ ದಸಂಸದ ಕಾರ್ಯಕರ್ತರಲ್ಲಿ ಗೊಂದಲದ ಅಲೆಗಳನ್ನು ಸೃಷ್ಟಿಸಿದರು. ವಾಸ್ತವದ ಸಂಗತಿಯೆಂದರೆ. ಕಾರ್ಯಕರ್ತರು ರಾಜ್ಯ ಮಟ್ಟದ ಎರಡು ಬಣಗಳ ಮಧ್ಯೆ ಹರಿದುಹಂಚಿ ಹೋದರು. ಡಿ ಒ ಸಾಗರ ಬಣ ಜನತಾದಳದತ್ತ ಮತ್ತು ಎಂ. ಜಯಣ್ಣ ಅವರ ಬಣ ಬಿ.ಎಸ್.ಪಿ ಯತ್ತ ಒಲವು ತೋರಿದ್ದುದು ದಸಂಸದಲ್ಲಿ ಒಡುಕುಂಟಾಗಲು ಮುಖ್ಯ ಕಾರಣವೆಂದು ಸ್ಪಷ್ಟಪಟ್ಟಿತು. ಎರಡು ಬಣಗಳು ರಾಜಕೀಯ ಸಂಬಂಧಗಳಿಂದಾಗಿ ದಸಂಸಯ ದಿಕ್ಕು ತಪ್ಪಿತು. ಇದರ ಮಧ್ಯೆ ಚಿತ್ರದುರ್ಗದ ಭಾಗದಲ್ಲಿ ಎಂ. ಜಯಣ್ಣ ಬಣ ಮಾದಿಗ ಸಮುದಾಯದ ಮೇಲೆ ನಡೆಯುವ ದೌರ್ಜನ್ಯಗಳನ್ನು ಖಂಡಿಸುವ ಸಲುವಾಗಿ ಈ ಭಾಗದ ಜನರಿಗೆ ಅರಿವನ್ನು ಮೂಡಿಸುವ ಪ್ರಯತ್ನವನ್ನು ಮಾಡಿದ್ದಾರೆ. ಇವರ ಬೆಂಬಲವನ್ನು ಆಧರಿಸಿ ಚಿತ್ರದುರ್ಗದಲ್ಲಿ ಅನೇಕ ಪ್ರತಿಭಟನೆ ಹುಟ್ಟಿಕೊಂಡವು. ಉದಾಹರಣೆಗೆ ದಿನಾಂಕ ೦೮.೦೭.೨೦೧೧ರಂದು ಹೊಸದುರ್ಗ ತಾಲೂಕಿನ ದೊಡ್ಡಗಟ್ಟ ಗ್ರಾಮದಲ್ಲಿ ದಲಿತರ ಮೇಲಿನ ಸರ್ವಣಿಯರ ದೌರ್ಜನ್ಯವನ್ನು ತಡೆದು, ಆರೋಪಿಗಳನ್ನು ಬಂಧಿಸಿಬೇಕೆಂದು ಆಗ್ರಹಿಸಿ ಮಾದಿಗ ಮಹಾಸಭಾದ ನೇತೃತ್ವದಲ್ಲಿ ದಲಿತರು ತಾಲೂಕು ಕಛೇರಿಗೆ ಮುತ್ತಿಗೆ ಹಾಕಿ ಪ್ರತಿಭಟಿಸಿದರು.

ಗ್ರಾಮದಲ್ಲಿ ದಲಿತರು ಭಯದಿಂದ ಬದುಕುವ ಪರಿಸ್ಥಿತಿ ನಿರ್ಮಾಣವಾಗಿದೆ. ಕ್ಷುಲ್ಲಕ ಕಾರಣಕ್ಕಾಗಿ ಪದೇ ಪದೇ ದೌರ್ಜನ್ಯ ನಡೆಯುತ್ತಿದ್ದರೂ ರಕ್ಷಣೆ ಒದಗಿಸಲು ಯಾರು ಮುಂದಾಗುತ್ತಿಲ್ಲವೆಂದು ಪ್ರತಿಭಟನಕಾರರು ಆರೋಪಿಸಿದರು. ಪೊಲೀಸ್ ಇಲಾಖೆಯವರು ಗ್ರಾಮದಲ್ಲಿ ನಡೆದ ಘಟನೆಯಲ್ಲಿ ಹಲ್ಲೆಗೊಳಗಾದವರಿಗೆ ರಕ್ಷಣೆ ನೀಡುವ ಬದಲು ಹೆಸರಿಗೆ ಮಾತ್ರ ದಲಿತರ ಮೇಲಿನ ದೌರ್ಜನ್ಯ ಕಾಯ್ದೆಯಡಿಯಲ್ಲಿ ಪ್ರಕರಣ ದಾಖಲಿಸಿದ್ದಾರೆ. ಘಟನೆಗೆ ಕಾರಣರಾದವರನ್ನು ಬಂಧಿಸಿಲ್ಲ. ಘಟನೆಯ ಸಂದರ್ಭದಲ್ಲಿ ದಲಿತ ಸರ್ಕಾರಿ ನೌಕರರ ಮೇಲೆ ದೂರು ದಾಖಲೆ ಮಾಡಿಕೊಂಡಿದ್ದಾರೆಂದು ಆಕ್ರೋಶ ವ್ಯಕ್ತಪಡಿಸಿದರು.

ಸರ್ಕಾರ ಕೂಡಲೇ ಕ್ರಮ ಕೈಗೊಂಡು, ತಪ್ಪಿತಸ್ಥರನ್ನು ಬಂಧಿಸಿ ದಲಿತರಿಗೆ ರಕ್ಷಣೆ ಒದಗಿಸಬೇಕು. ದಲಿತರ ಮೇಲೆ ದಾಖಲಾಗಿರುವ ಸುಳ್ಳು ಪ್ರಕರಣ ಕೈಬಿಡಬೇಕೆಂದು ಆಗ್ರಹಿಸಿ ಶಿರಸ್ತೆದಾರ್

ಜಯಣ್ಣರವರಿಗೆ ಮನವಿ ಸಲ್ಲಿಸಿದರು. ಈ ಪ್ರತಿಭಟನೆಯಲ್ಲಿ ಭಾಗವಹಿಸಿದ ಮುಖಂಡರಾದ ಜಿಲ್ಲಾ ಪಂಚಾಯಿತಿ ಸದಸ್ಯರಾದ ಎಂ ಲಕ್ಷ್ಮಣ, ತಾಲೂಕು ಆದಿಜಾಂಬವ ಸಮಾಜದ ಅಧ್ಯಕ್ಷ ಆರ್ ತಿಮ್ಮಯ್ಯ, ಕುಮಾರ, ಏಕಾಂತ, ಸುರೇಶ, ಮಾಲಿಂಗಪ್ಪ, ಜಯಪ್ಪ, ನಾಗರಾಜ, ಕೆಂಚಪ್ಪ ಪ್ರತಿಭಟನೆಯ ನೇತೃತ್ವ ವಹಿಸಿದರು."[೧೭] ಈ ಪ್ರತಿಭಟನೆಗೆ ಸಂಬಂಧಿಸಿದಂತೆ ನೇರವಾಗಿ ಎಂ ಲಕ್ಷ್ಮಣ ಅವರನ್ನು ಸಂದರ್ಶನ ಮಾಡಿದ ಸಂದರ್ಭದಲ್ಲಿ ಈ ಮಾದಿಗ ಸಮುದಾಯದ ಜನರನ್ನು ಸುಮಾರು ನಾಲ್ಕು ವರ್ಷಗಳ ಕಾಲ ಊರಿನಿಂದ ಹೊರಹಾಕಿರುವ ಹಾಗೂ ಇವರ ಮೇಲೆ ಅನೇಕ ಬಾರಿ ದೌರ್ಜನ್ಯಗಳನ್ನು ಮಾಡಿದ ಮಾಹಿತಿಯನ್ನು ತಿಳಿಸಿಕೊಟ್ಟರು. ಈ ರೀತಿಯಾದ ದಲಿತರ ಮೇಲೆ ನಡೆದ ದೌರ್ಜನ್ಯದ ಬಳಿಕ ಅಪರಾಧಿಗಳಿಗೆ ಶಿಕ್ಷೆ, ದಂಡ, ಎಚ್ಚರಿಕೆ, ಸಾಮಾಜಿಕ ಬಹಿಷ್ಕಾರದ ದೆಸೆಯಿಂದ ದಲಿತರು ಶೋಷಣೆಗೆ ಒಳಗಾಗುವ ಸರ್ಕಾರದ ಕಾನೂನುಗಳು ಸಂಪೂರ್ಣವಾಗಿ ಕುರುಡಾಗಿರುತ್ತದೆ.

ಕಾನೂನು ಪರಿಪಾಲನೆ ವ್ಯವಸ್ಥೆಯು ನಿಷ್ಕ್ರಿಯವಾಗಿರುತ್ತದೆ. ಪ್ರಮುಖ ಘಟನೆಗಳು ಪೊಲೀಸ್ ಠಾಣೆಗೆ ಹೋಗುವುದೇ ಇಲ್ಲ. ಒಂದುವೇಳೆ ದಲಿತರು ಧೈರ್ಯ ಮಾಡಿ ಪೊಲೀಸ್ ಠಾಣೆಗೆ ದೂರು ಸಲ್ಲಿಸಲು ಪ್ರಯತ್ನಿಸಿದರೆ ಇವರಿಗಿಂತ ಮೊದಲೇ ಸವರ್ಣೀಯರು ಹೋಗಿ ಪೋಲಿಸ್ ಠಾಣೆಯಲ್ಲಿ ತಮ್ಮ ಪ್ರಯತ್ನವನ್ನು ಬಿರುಸಿನಿಂದಲೇ ಮಾಡುತ್ತಾರೆ. ಕೋರ್ಟಿನ ಮೆಟ್ಟಿಲುಗಳನ್ನು ಪದೇ ಪದೇ ಹತ್ತಿ ಇಳಿಯುವ ಆರ್ಥಿಕ ಶಕ್ತಿಯಾಗಲಿ ಬೇಕಾಗುವ ಧೈರ್ಯ ಚೈತನ್ಯವಾಗಲಿ ಈ ಸಮುದಾಯದ ಜನರಿಗೆ ಇಲ್ಲ. ಆದರೂ ಕೂಡ ಎಲ್ಲರನ್ನೂ ಸಂಘಟನೆ ಮಾಡುವ ಮೂಲಕ ವೈಚಾರಿಕ ಪ್ರಜ್ಞೆಯನ್ನು ಮೂಡಿಸುವುದರ ಮೂಲಕ ಹೋರಾಟದ ಮನೋಭಾವನೆ ಬೆಳೆದು ಬಂದಿದೆ ಎಂದು ಹೇಳಬಹುದು.

ಪರಿಸಮಾಪ್ತಿ

ಭಾರತೀಯ ಸಾಮಾಜಿಕ ಜಾತಿ ವ್ಯವಸ್ಥೆಯಲ್ಲಿ ನಿರಂತರವಾಗಿ ದಲಿತರ ಮೇಲೆ ದೌರ್ಜನ್ಯ, ದಬ್ಬಾಳಿಕೆ, ಹಿಂಸೆಗೆ ಕೊನೆಯೇ ಇಲ್ಲದ ಪರಿಸ್ಥಿತಿ ಉದ್ಭವವಾಗಿರುವುದು ಕಂಡುಬರುತ್ತಿದೆ. ಇತ್ತೀಚಿನ ಸಾಮಾಜಿಕ ಬೆಳವಣಿಗೆಯನ್ನು ಗಮನಿಸಿದರೆ ದಲಿತರು ಸಮಾಜದಲ್ಲಿ ಜೀವನವನ್ನು ನಡೆಸುವುದು ಕಷ್ಟದ ಕೆಲಸವಾಗಿದೆ. "೧೯೫೦ರ ಜನವರಿ ೨೬ ರಂದು ಭಾರತ ಸಂವಿಧಾನವನ್ನು ಒಪ್ಪಿಕೊಂಡ ದಿನವೇ ಬಿ. ಆರ್. ಅಂಬೇಡ್ಕರ್ ಹೇಳಿದ್ದರು. ಸಮಾನತೆಯನ್ನು ಸಾರುವ ಪ್ರಜಾಪ್ರಭುತ್ವ ಮತ್ತು ಅಸಮಾನತೆಯೇ ಸಾರವಾಗಿರುವ ಸಾಮಾಜಿಕ ವ್ಯವಸ್ಥೆಯ ನಡುವಿನ ವೈರುಧ್ಯದ ಅರಿವು ಅವರಿಗಿದ್ದ ಕಾರಣದಿಂದಲೇ ಕಟ್ಟಾ ಪ್ರಜಾಪ್ರಭುತ್ವ ಪ್ರೇಮಿಯಾಗಿದ್ದ ಅಂಬೇಡ್ಕರ್ ಕೂಡ ಇಂತಹ ಕಟುಮಾತುಗಳನ್ನು ಆಡಿದ್ದರು."[೧೮] ಎಪ್ಪತ್ತೈದು ವರ್ಷಗಳ ನಂತರವಾದರೂ ಪರಿಸ್ಥಿತಿ ಬದಲಾಗಿದೆಯೇ ಇಲ್ಲ.

ಸ್ವಾತಂತ್ರ್ಯನಂತರದ ಭಾರತದಲ್ಲಿ ರಾಜಕೀಯವಾಗಿ ದಲಿತರ ಸ್ಥಿತಿ ಏನಾಗಲಿದೆ ಎಂಬ ಸ್ಪಷ್ಟ ಅರಿವು ಅಂಬೇಡ್ಕರ್ ಅವರಿಗಿತ್ತು. ಅದಕ್ಕಾಗಿಯೇ ಅವರ ದಲಿತ ಪ್ರತಿನಿಧಿಗಳನ್ನು ದಲಿತ ಮತದಾರರೇ ಆಯ್ಕೆ ಮಾಡುವಂತಹ ಪ್ರತ್ಯೇಕ ಮತದಾನದ ಹಕ್ಕನ್ನು ನೀಡುವಂತೆ ದುಂಡುಮೇಜಿನ ಪರಿಷತ್‌ನಲ್ಲಿ

ವಾದಿಸಿದ್ದರು. ದಲಿತ ಮತದಾರರು ಉಳಿದೆಲ್ಲರ ಜತೆಯಲ್ಲಿ ಸೇರಿ ಸಾಮಾನ್ಯ ಅಭ್ಯರ್ಥಿಗೆ ಮತದಾನ ಮಾಡುವ ಜತೆಯಲ್ಲಿ ಕೇವಲ ತಮ್ಮ ಮತದಿಂದಲೇ ದಲಿತ ಅಭ್ಯರ್ಥಿಯನ್ನು ಚುನಾಯಿಸುವ ಅಧಿಕಾರವೂ ಇರಬೇಕು. ಇಲ್ಲದೆ ಹೋದರೆ ದಲಿತ ಜನಪ್ರತಿನಿಧಿಗಳು ರಾಜಕೀಯ ಪಕ್ಷಗಳ ಗುಲಾಮರಾಗುತ್ತಾರೆ ಎಂದು ಅವರು ಪ್ರತಿಪಾದಿಸಿದ್ದರು. ಕೊನೆಗೂ ಬ್ರಿಟಿಷ್ ಪ್ರಧಾನಿ ರಾಮ್ಸೆ ಮ್ಯಾಕ್‌ಡೋನಾಲ್ಡ್ ಅಂಬೇಡ್ಕರ್ ಅಭಿಪ್ರಾಯವನ್ನು ಒಪ್ಪಿಕೊಂಡರೂ ಗಾಂಧೀಜಿಯವರ ವಿರೋಧದಿಂದಾಗಿ ಅದು ಕಾರ್ಯರೂಪಕ್ಕೆ ಬರಲಿಲ್ಲ."[೧೯] ದಲಿತರಿಗೆ ಪ್ರತ್ಯೇಕ ಮತದಾನದ ಹಕ್ಕು ನೀಡಿದ್ದರೆ. ಪ್ರತಿಯೊಂದು ರಾಜ್ಯದಿಂದ ಬಹುತೇಕ ದಲಿತ ರಾಜಕಾರಣಿಗಳನ್ನು ಪಡೆಯಬಹುದಾಗಿತ್ತು. ದುರಂತವೆಂದರೆ ಕರ್ನಾಟಕ ರಾಜ್ಯದಲ್ಲಿ ಸುಮಾರು ಇಪ್ಪತ್ತೈದು ಜನ ಮುಖ್ಯಮಂತ್ರಿಗಳು ಆದರೂ ಅದರಲ್ಲಿ ಒಬ್ಬರಾದರೂ ದಲಿತ ಅಥವಾ ಮಾದಿಗ, ಹೊಲೆಯ ದಲಿತ ಸಂಬಂಧಿಗಳು ಮುಖ್ಯಮಂತ್ರಿಯಾಗಿದ್ದಾರಾ ಇದು ವಿಪರ್ಯಾಸ.

ಬಹುಶಃ ಈಗಲಾದರು ಪರಿಸ್ಥಿತಿ ಬದಲಾಗಿದೆಯೇ? ಬೇರೆ ಬೇರೆ ರಾಜ್ಯಗಳಲ್ಲಿ ದಲಿತ ಸಮುದಾಯಕ್ಕೆ ಸೇರಿರುವ ಐದು ಮಂದಿ ಮುಖ್ಯಮಂತ್ರಿಗಳಾಗಿದ್ದಾರೆ. ಅವರಲ್ಲಿ ನಾಲ್ಕು ಮಂದಿ ಕಾಂಗ್ರೆಸ್ ಪಕ್ಷದ ಶಿಸ್ತಿನ ಸಿಪಾಯಿಗಳು ಅವರೆಲ್ಲ ಮುಖ್ಯಮಂತ್ರಿಯಾಗಿದ್ದು ಸ್ವಂತ ಬಲದಿಂದ ಅಲ್ಲ ಕಾಂಗ್ರೆಸ್ ಬೆಂಬಲದಿಂದ. ಇದಕ್ಕೆ ಹೊರತಾದವರೆಂದರೆ ಉತ್ತರ ಪ್ರದೇಶದ ಮುಖ್ಯಮಂತ್ರಿಯಾಗಿದ್ದ ಮಾಯಾವತಿಯವರೊಬ್ಬರೇ. ಈ ಕಾರಣದಿಂದಲೋ ದಲಿತ ರಾಜಕೀಯದ ಯಶಸ್ವಿ ಮಾದರಿ ಉತ್ತರ ಪ್ರದೇಶದ 'ಬಹುಜನ ಸಮಾಜ ಪಕ್ಷದ್ದು' ಮಾತ್ರ ಕಳೆದ ಚುನಾವಣೆಯಲ್ಲಿ ಬಿಎಸ್‌ಪಿ ಪರಾಭವಗೊಂಡಿದ್ದರೂ ತಳ್ಳಿಹಾಕಿ ಬಿಡುವಂತಹ ಪಕ್ಷ ಅದಲ್ಲ ಎನ್ನುವುದು ಅದರ ಬೆಳವಣಿಗೆಯನ್ನು ಗಮನಿಸುತ್ತ ಬಂದವರಿಗೆಲ್ಲರಿಗೂ ಗೊತ್ತು. ಆದರೆ ಈ ಪಂಕ್ತಿಯನ್ನು ತಿಳಿದು ಕೊಳ್ಳಬೇಕಾದರೆ ಆ ಪಕ್ಷದ ಸ್ಥಾಪಕರಾದ ಕಾನ್ಶಿರಾಮ್ ಅವರನ್ನು ಮೊದಲು ಅರ್ಥಮಾಡಿಕೊಳ್ಳಬೇಕು. ಅಂಬೇಡ್ಕರ್ ಅವರ ನಂತರದ ಬಹುಮುಖ್ಯ ದಲಿತ ರಾಜಕೀಯ ನಾಯಕ ಕಾನ್ಶಿರಾಮ್ ಎನ್ನುವುದರಲ್ಲಿ ಅನುಮಾನ ಇಲ್ಲ."[೨೦]

ಪ್ರಸ್ತುತ ಕರ್ನಾಟಕದ ರಾಜಕೀಯವನ್ನು ನೋಡುವುದಾದರೆ ಬಹುತೇಕ ರಾಜಕೀಯ ಪಕ್ಷಗಳು ಜಾತಿಯಧಾರಿತವಾಗಿವೆ. ದೊಡ್ಡ ಪಕ್ಷಗಳ ಪೈಪೋಟಿ, ಅಧಿಕಾರದ ಆಸೆ, ಹಣವನ್ನು ಹೊಂದಿರುವ ಬಂಡವಾಳಶಾಹಿ ಪ್ರಭುತ್ವದಿಂದಾಗಿ ರಾಜಕಾರಣ ಸಿಲುಕಿಕೊಂಡು ನರಳುವ ಸ್ಥಿತಿ ಇದೆ. ಅದರಲ್ಲೂ ದಲಿತರು, ತಳಸಮುದಾಯಗಳ ಪರಿಸ್ಥಿತಿಯನ್ನು ಗಮನಿಸಿದರೆ ಈ ಸಮುದಾಯಗಳಿಗೆ ರಾಜಕಾರಣದ ಗಂಧಗಾಳಿಯು ಇಲ್ಲದ ಪರಿಸ್ಥಿತಿ ನಿರ್ಮಾಣವಾಗಿತ್ತು. ಪ್ರಾಯಶಃ ಸಂವಿಧಾನದಲ್ಲಿ ತಳವರ್ಗಗಳಿಗಾಗಿ ಮೀಸಲಾತಿ ಕಲ್ಪಿಸದೇ ಹೋಗಿದ್ದಲ್ಲಿ ತಳ ಸಮುದಾಯಗಳಿಗೆ ಇಂದಿಗೂ ಅಧಿಕಾರವೆಂಬುದು ಕೇವಲ ಮರೀಚಿಕೆಯಾಗಿ ಉಳಿದುಬಿಡುವ ಸಾಧ್ಯತೆಯೇ ಹೆಚ್ಚಾಗಿತ್ತು. ಲೋಹಿಯಾರಂಥವರು ಈ ಕಾರಣಕ್ಕಾಗಿಯೇ ಅಲ್ಪಸಂಖ್ಯಾತ ಜಾತಿಗಳಿಗೂ ರಾಜಕೀಯ ವ್ಯವಸ್ಥೆಯಲ್ಲಿ ಪಾಲ್ಗೊಳ್ಳುವ ಅವಕಾಶ ಕಲ್ಪಿಸಬೇಕೆಂದು ತಿಳಿಸುತ್ತಾರೆ. ತಳ ಸಮುದಾಯಗಳಿಗೆ ಅಧಿಕಾರದ ಗದ್ದುಗೆ ಹಿಡಿಯಲು ಮತ್ತು

ರಾಜಕೀಯದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಮೀಸಲಾತಿ ಪರಿಣಾಮಕಾರಿ ವ್ಯವಸ್ಥೆಯಾಗಿದೆ. ಈ ಕಾರಣದಿಂದಾಗಿ ಚಿತ್ರದುರ್ಗ ಜಿಲ್ಲೆಯ ಮಾದಿಗ ಸಮುದಾಯದಲ್ಲಿ ಲೋಕಸಭೆ ಸದಸ್ಯರು, ವಿಧಾನ ಸಭೆ ಸದಸ್ಯರು, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಯಲ್ಲಿ ಜನಪ್ರತಿನಿಧಿಗಳಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ರಾಜಕೀಯದಲ್ಲಿ ಸಕ್ರಿಯವಾಗಿ ಭಾಗವಹಿಸುವುದರ ಮೂಲಕ ಸಮುದಾಯದ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದಾರೆ.

ಟಿಪ್ಪಣಿಗಳು.

೧. ಶಿವಪ್ಪ ಕೆ, ೨೦೦೪, ಬಳ್ಳಾರಿ ಜಿಲ್ಲೆಯ ಹೊಲೆಯ ಮಾದಿಗರ ಸಂಸ್ಕೃತಿ, ಪುಟ, ೧೯.

೨. ಅನೀಸ್ ಸಿರಾಜ್ ಎಸ್ (ಸಂ), ೨೦೧೧, ಕರ್ನಾಟಕ ಗ್ಯಾಝೆಟಿಯರ್ ಇಲಾಖೆ, ಕರ್ನಾಟಕ ಕೈಪಿಡಿ, ಪುಟ, ೪೪೮.

೩. ಅದೇ ಪುಟ, ೪೪೮.

೪. ಅದೇ ಪುಟ, ೪೪೮, ೪೪೯.

೫. ಅದೇ ಪುಟ, ೪೪೯.

೬. ಅದೇ ಪುಟ, ೪೫೦.

೭. ಅದೇ ಪುಟ, ೪೫೨.

೮. ಅದೇ ಪುಟ, ೪೫೧, ೪೫೨.

೯. ಕೃಷ್ಣ ಬಿ ಆರ್, ೨೦೦೮, ಸಮಾಜಶಾಸ್ತ್ರ (ಭಾಗ-೧), ಪುಟ, ೪೨೪, ೪೨೫.

೧೦. ಅದೇ ಪುಟ, ೪೨೫.

೧೧. ಪುಟ್ಟಯ್ಯ ಬಿ ಎಂ, ೨೦೦೮, ಮುಖಾಮುಖಿ ಸಮಾಜ ಸಂಸ್ಕೃತಿ ಚಳುವಳಿ. ಪುಟ, ೫೬.

೧೨. ನಾರಾಯಣಸ್ವಾಮಿ ಜಿ, ೨೦೦೩, ಮಧ್ಯಕಾಲಿನ ಕನ್ನಡ ಸಾಹಿತ್ಯದಲ್ಲಿ ದಲಿತ ಸಂವೇದನೆ: ಒಂದು ಅಧ್ಯಯನ, ಪಿಎಚ್. ಡಿ ಮಹಾಪ್ರಬಂಧ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು. ಪುಟ, ೨೯೧.

೧೩. ಮೂಡ್ನಾಕೂಡು ಚಿನ್ನಸ್ವಾಮಿ, ೨೦೦೮, ಒಂದು ಕೊಡ ಹಾಲಿನ ಸಮರ, ಸಾಮಾಜಿಕ ಚಳುವಳಿಗಳು, ಬುದ್ಧ, ಬಸವ, ಬಾಬಾ ಸಾಹೇಬ, ಪುಟ, ೪೪

೧೪. ಮಲ್ಲಿಕಾ ಘಂಟಿ ಎಸ್ (ಸಂ), ೨೦೦೮, ದಲಿತ ಸಾಹಿತ್ಯ ಚಳವಳಿ, ಪುಟ, ೩೬.

೧೫. ಅದೇ ಪುಟ, ೩೭.

೧೬. ಚಂದ್ರಶೇಖರ್ ಟಿ ಆರ್, ೨೦೦೬, ದಲಿತ ಅಧ್ಯಯನ, ಪುಟ, ೩೫೧.

೧೭. ದಿನಪತ್ರಿಕೆ, ಪ್ರಜಾವಾಣಿ, ದಿನಾಂಕ, ೯.೭.೨೦೦೪.

೧೮. ಮುನಿವೆಂಕಟಪ್ಪ ಎ (ಸಂ), ೨೦೧೩, ದಲಿತ ಚಳುವಳಿ ಚರಿತ್ರೆ, ಪುಟ, ೭೨.

೧೯. ಅದೇ ಪುಟ, ೭೩.

೨೦. ಅದೇ ಪುಟ, ೭೩.

ಸಮಾರೋಪ

ಅಧ್ಯಯನದ ಫಲಿತಗಳು ಮತ್ತು ಸಲಹೆಗಳು

ಸಮಾರೋಪ

ಭಾರತೀಯ ಸಮಾಜದಲ್ಲಿ ಜಾತಿ ಆಧಾರಿತವಾಗಿ ಉನ್ನತ ಸಾಮಾಜಿಕ ಸ್ಥಾನಮಾನಗಳು ನಿರ್ಧಾರವಾಗುತ್ತವೆ. ಇವುಗಳ ಆಧಾರ ಮೇಲೆ ಸಮಾಜದಲ್ಲಿ ಭೇದ-ಭಾವದ ಬುನಾದಿಯ ಪರಿಣಾಮವಾಗಿ ಜಾತಿ-ಜಾತಿಗಳ ಮಧ್ಯೆ ಮೇಲು-ಕೀಳು, ಶ್ರೇಷ್ಠ-ಕನಿಷ್ಠ, ಉಚ್ಚ-ನೀಚಗಳೆಂಬ ಅಸಮಾನತೆಯ ಮನೋಭಾವಗಳು ಆಳವಾಗಿ ಬೇರೂರಿವೆ.

"ಜಾತಿಯ ಹಿಂದೂ ಸಮಾಜದ ಸಾಮಾಜಿಕ ಸ್ವರೂಪವನ್ನು ಬಹುಶಃ ಈ ಹಂತದಲ್ಲೇ ಸ್ವಲ್ಪ ನೆನೆಯುವುದು ಸೂಕ್ತವೆಂದು ತೋರುತ್ತದೆ. ಅನ್ಯ ಸಮಾಜಗಳಂತೆಯೇ ಇಲ್ಲಿ ಸಾಮಾಜಿಕವಾಗಿ ೧) ಪುರೋಹಿತ ವರ್ಗವನ್ನು ಬ್ರಾಹ್ಮಣರೆಂತಲೂ ೨) ಸೈನಿಕ ವರ್ಗವನ್ನು ಕ್ಷತ್ರಿಯರೆಂತಲೂ ೩) ವರ್ತಕ ವರ್ಗವನ್ನು ವೈಶ್ಯರೆಂತಲೂ ಹಾಗೂ ೪) ದುಡಿಯುವ ವರ್ಗವನ್ನು ಶೂದ್ರರು ಎಂಬುದಾಗಿಯೂ ವಿಭಜಿಸಲಾಗಿದೆ. ಇಲ್ಲಿ ತುಂಬಾ ಮುಖ್ಯವಾಗಿ ಗಮನಿಸಬೇಕಾದ ಸಂಗತಿ ಎಂದರೆ, ಈ ವಿಭಜನೆ ಮೂಲಭೂತವಾಗಿ ವರ್ಗವ್ಯವಸ್ಥೆಯೆನಿಸಿದ್ದು, ಒಂದು ವರ್ಗದ ವ್ಯಕ್ತಿ ಇನ್ನೊಂದು ವರ್ಗಕ್ಕೆ ಅಗತ್ಯವಾದ ಅರ್ಹತೆ ಪಡೆದನೆಂದರೆ ಸುಲಭವಾಗಿ ಅವನು ತನ್ನ ವರ್ಗವನ್ನು ಬದಲಾಯಿಸಿಕೊಳ್ಳಬಹುದಾಗಿತ್ತು. ಯಥಾಪ್ರಕಾರ ಆಯಾ ವರ್ಗಗಳ ಸಿಬ್ಬಂದಿ ಕೂಡ ಈ ಬದಲಾವಣೆಯನ್ನು ಹೊಂದಬಹುದಾಗಿದೆ. ಹಾಗಾಗಿ ಇದರಿಂದ ವ್ಯಕ್ತವಾಗುವುದೇನೆಂದರೆ ಹಿಂದೂಗಳು ಚರಿತ್ರೆಯ ಯಾವುದೋ ಒಂದು ಹಂತದಲ್ಲಿ ಹಿಂದೂ ಜಾತಿ ವ್ಯವಸ್ಥೆಯ ಪುರೋಹಿತ ವರ್ಗ ತನ್ನನ್ನು ತಾವೇ ಉಳಿದ ಮೂರು ವರ್ಗಗಳಿಂದ ಸಾಮಾಜಿಕವಾಗಿ ಪ್ರತ್ಯೇಕಗೊಳಿಸಿಕೊಂಡು ತನ್ನ ಜಾತಿಯವರಲ್ಲದ ಅಥವಾ ಅಬ್ರಾಹ್ಮಣರನ್ನು ಕಂಡಕೂಡಲೇ ಬಾಗಿಲು ಮುಚ್ಚಿಕೊಳ್ಳುವ ನೀತಿಯನ್ನು ಅಳವಡಿಸಿಕೊಂಡು ತಮ್ಮದು ಪುರೋಹಿತ ವರ್ಗವೆಂದು ಘೋಷಿಸಿಕೊಳ್ಳುತ್ತದೆ"(ಜವರಯ್ಯ ಮ. ನ:೨೦೧೦:೨೨೮.)

"ಪೂರೋಹಿತ ವರ್ಗವೆಂದರೆ ಬ್ರಾಹ್ಮಣರು ಎಂಬ ಒಂದು ಜಾತಿಯಾಗಿ ಬೆಳೆದು ಬಂದುದಾಗಿದೆ. ತತ್ಪರಿಣಾಮವಾಗಿ ಉಳಿದ ಮೂರು ವರ್ಗಗಳ ಜನ ಸಾಮಾಜಿಕ ಶ್ರಮವಿಭಜನೆಯ ನಿಯಮಕ್ಕೆ

ಬಲಿಪಶುಗಳಾಗಿ, ಅವರಲ್ಲಿ ಕೆಲವರು ಬಹುಸಂಖ್ಯಾತ ಗುಂಪಾಗಿಯೂ ಉಳಿದವರು ಕೇವಲ ಒಂದು ಸಣ್ಣ ಗುಂಪಾಗಿಯೂ ಪ್ರತ್ಯೇಕತೆಯಲ್ಲಿ ಮುರುಟಿಕೊಂಡವು. ಅದಾಗಿ ವೈಶ್ಯ ಹಾಗೂ ಶೂದ್ರ ವರ್ಗಗಳು ಇವತ್ತಿನ ಅಸಂಖ್ಯಾತ ಜಾತಿಗಳಿಗೆ ಮೂಲವೆನಿಸಿದ್ದು ಆಜಾತಿಗಳ ಬೆಳವಣಿಗೆಗೆ ಜೀವದ್ರವ್ಯ ದೊರೆಯಲು ಕೂಡ ಆ ಎರಡು ವರ್ಗಗಳೇ ಮೂಲ ಕಾರಣಗಳೆನಿಸಿವೆ. ಹಾಗೆಯೇ ಅಲ್ಪಸಂಖ್ಯಾತರಾದ ಕ್ಷತ್ರಿಯರಿಗೆ ಪೂರ್ಣವಾಗಿ ದಕ್ಕುವುದು ಕೂಡ ಅಸಾಧ್ಯವಾಗಿ ಕೊನೆಗೆ ಆ ವರ್ಗದ ಕೆಲವರು ಮಾತ್ರ ಸೈನಿಕರಾಗಿಯೂ ಮತ್ತೆ ಕೆಲವರು ಆಡಳಿತಗಾರರಾಗಿಯೂ ಪರಿವರ್ತಿತರಾಗಿದ್ದಾರೆ"(ಜವರಯ್ಯ ಮ. ನ:೨೦೧೦;೨೨೮.)

ಮುಖ್ಯವಾಗಿ ಭಾರತೀಯ ಸಂಸ್ಕೃತಿಯಲ್ಲಿ ಎರಡು ರೀತಿಯ ಸಂಸ್ಕೃತಿಯನ್ನು ಗುರುತಿಸಿರುವುದು ನೋಡಬಹುದು, ಅವುಗಳಲ್ಲಿ ಶಿಷ್ಟ ಸಂಸ್ಕೃತಿ ಮತ್ತು ಪರಿಶಿಷ್ಟರ ಸಂಸ್ಕೃತಿ ಎಂದು. ಶಿಷ್ಟ ಸಂಸ್ಕೃತಿಗೆ ಸಮಾಜದಲ್ಲಿ ಯಾವತ್ತಾದರೂ ಅಡೆತಡೆಗಳು, ಎಡರು ತೊಡರುಗಳು ಎದುರಾಗಿಲ್ಲ. ಯಾಕೆಂದರೆ ಅವುಗಳಿಗೆ ಲಿಖಿತ ಸಾಕ್ಷಾಧಾರಗಳು, ಪುರಾವೆ ಸಹಿತ ಆಕರ ಸಾಮಗ್ರಿಗಳು ಹಾಗೂ ನಂಬಲಾರ್ಹವಾದ ಪರಿಕರಗಳು ದೊರಕುತ್ತವೆ. ಆದರೆ ಇದೇ ಮಾತನ್ನು ಪರಿಶಿಷ್ಟರ ಚಾರಿತ್ರಿಕ ಅಧ್ಯಯನಕ್ಕೆ ಸಂಬಂಧಿಸಿದಂತೆ ಹೇಳಲಾಗುತ್ತಿದೆಯೇ? ಇದೊಂದು ಬಹುದೊಡ್ಡ ಹಾಗೂ ತೊಡಕಿನ ಪ್ರಶ್ನೆ ಎಂಬಂತೆ ತೋರಬಹುದು. ಆದರೆ ಪರಿಶಿಷ್ಟರ ಅಧ್ಯಯನಗಳಿಗೆ ಚಾರಿತ್ರಿಕವಾದ ಯಾವುದೇ ಆಕರ ಸಾಮಗ್ರಿಗಳು ನಿಜಕ್ಕೂ ಇಲ್ಲವೇ? ಇಲ್ಲವೆಂಬಂತೆ ನಂಬಲಾಗಿತ್ತು ಹಾಗೂ ನಂಬಿಸಲಾಗಿತ್ತು. ಆದರೆ ಇಂದು ಮನುಷ್ಯ ಇತಿಹಾಸವನ್ನು ಹೊಸ ದೃಷ್ಟಿಕೋನದಿಂದ ನೋಡುವ ಪರಿಪಾಟವನ್ನು ಬೆಳೆಸಿಕೊಳ್ಳುವ ಮನೋಧೋಣೆ ಬೆಳೆದು ಬರಬೇಕು.

ಪ್ರಸ್ತುತ ದಿನಮಾನಗಳಲ್ಲಿ ಮಾದಿಗ ಸಮುದಾಯದ ಸ್ಥಿತಿಗತಿಗಳತ್ತ ದೃಷ್ಟಿಹಾಯಿಸಿದರೆ ಸೂಕ್ತವೆನಿಸುತ್ತದೆ. ನೈಜ ಸಂಗತಿ ಏನೆಂದರೆ ಬಹುಜನ ಮಾದಿಗರು ಇವತ್ತು ತಮ್ಮ ಕೈಯಲ್ಲಿರುವ ಚಪ್ಪಲಿ ಉದ್ಯೋಗವನ್ನು ಕಳೆದುಕೊಂಡು ವಿಚಲಿತರಾಗಿದ್ದಾರೆ. ಶತ ಶತಮಾನಗಳ ಕಾಲ ಯಾವ ವ್ಯವಸ್ಥೆಯ ಕಾಲುಗಳ ಸಂರಕ್ಷಣೆ ತಾವು ಮಾಡಿದ್ದರೋ ಇಂದು ಅವರ ಕಾಲುಗಳಿಗೆ ನೆಲೆ ಇಲ್ಲದಾಗಿದೆ. ಚರ್ಮೋದ್ಯಮದಲ್ಲಿ ವಿಫಲರಾದ ಮಾದಿಗರು ಇವತ್ತು ಜಾಗತೀಕರಣ ಬೀಸಿದ ಚಂಡಮಾರುತದಲ್ಲಿ ಚರ್ಮಗಾರಿಕೆ ಉನ್ನತ ಜಾತಿಯವರು ಮತ್ತು ಬಂಡವಾಳಶಾಹಿಗಳು ಕಸಿದುಕೊಂಡಿದ್ದಾರೆ.

ನೂರಾರು ವರ್ಷಗಳ ಕಾಲ ದಲಿತ ಸಮುದಾಯಗಳನ್ನು ಅಸ್ಪೃಶ್ಯತೆಯಿಂದ ನಡೆಸಿಕೊಂಡು ಬಂದ ವ್ಯವಸ್ಥೆಯನ್ನು ದೂರಮಾಡಲು ಹುಟ್ಟಿಕೊಂಡ ಮಹಾಚೇತನ ಅಂಬೇಡ್ಕರ್ ಅವರ ಸ್ವಾಭಿಮಾನದ ಅರಿವಿನ ಫಲವಾಗಿ, ಮೀಸಲಾತಿ ಸೌಲಭ್ಯದ ಬೆಚ್ಚನೆಯ ಕಾವಿನಲ್ಲಿ ಇನ್ನೇನು ಸ್ವರ್ಗಕ್ಕೆ ಕಿಚ್ಚಿನ ಕೊಳ್ಳಿ ಇಡಬೇಕೆನ್ನುವಷ್ಟರಲ್ಲಿ ಇಂದು ಮೀಸಲಾತಿ ಸೌಲಭ್ಯದ ಬುಡಕ್ಕೇ ನೀರು ಬಂದು ಬಿಟ್ಟಿದೆ. ಇದರಲ್ಲಿ ತೇಲುವವರಾರೋ, ಮುಳುಗುವವರಾರೋ ಸಾವಿರಾರು ವರ್ಷಗಳಿಂದ ಅಸ್ಪೃಶ್ಯತಾ ರೋಗಕ್ಕೆ ತುತ್ತಾಗಿದ ಈ ದಲಿತ ಸಮುದಾಯ ಹಾಗೂ ಈ ದೇಶದ ಬೃಹತ್ ಸಂವಿಧಾನವನ್ನು ಬದಲಾವಣೆ ಮಾಡುತ್ತವೆ ಎನ್ನುವ ವಿಚಾರಗಳನ್ನು ಮಾತನಾಡುವ ರಾಜಕೀಯ ನವಸೈತ್ತನುಗಳು ನಮ್ಮ ದೇಶವನ್ನು ಆಳುತ್ತಿದ್ದವೆ.

ಮಾದಿಗರಲ್ಲಿ ಓದಿ ಮುಂದೆ ಬಂದವರು ಮರಳಿ ಹಿಂದೆ ಈ ಸಮುದಾಯವನ್ನು ನೋಡಿದ್ದು ಬಹಳ ಕಡಿಮೆ. ಇದರಿಂದ ಈ ಸಮುದಾಯವು ತಬ್ಬಲಿಗಳಂಥಾಗಿದ್ದಾರೆ ದಿಕ್ಕು ತೋಚದ ಅನಾಥರಾಗಿದ್ದಾರೆ. ಈ ಕಾಲಘಟ್ಟದಲ್ಲಿ ಅವರಿಗೆ ಕಾಡುತ್ತಿರುವ ಅನಾಥ ಪ್ರಜ್ಞೆಯಿಂದ ಪ್ರತಿಯೊಬ್ಬರು ಜರೂರಾಗಿ ಶಿಕ್ಷಣ ಪಡೆಯುವಂತೆ ಮಾಡಿದೆ. ಉದ್ಯೋಗದಲ್ಲಿ ಮುಂದೆಬರಲು ಸಹಾಯಕವಾಗಿದೆ. ಸಮಾಜದಲ್ಲಿ ಸ್ವಾಭಿಮಾನದಿಂದ ದುಡಿದು ಬದುಕಲು ಮುಂದಾಗಿದ್ದಾರೆ.

ಅಧ್ಯಯನದ ಫಲಿತಗಳು

೧. ಸಮಾಜದಲ್ಲಿ ಅತ್ಯಂತ ಕೆಳಸ್ತರದಲ್ಲಿರುವ ದಲಿತ ವೃಂದಗಳಲ್ಲಿ ಮಾದಿಗರು ಒಂದು. ಮಧ್ಯ ಕರ್ನಾಟಕದಾದ್ಯಂತ ಸಾಮಾನ್ಯವಾಗಿ ಮಾದಿಗರು ಎಂಬ ಒಂದೇ ಹೆಸರಿನಿಂದ ಕರೆದರೂ ಪ್ರಾದೇಶಿಕವಾಗಿ ಬೇರೆ ಬೇರೆ ಹೆಸರುಗಳಿವೆ. ಮಾದಿಗರನ್ನು ಮಾತಂಗಿಯ ಮಕ್ಕಳು ಎಂದು ಕರೆಯುವುದನ್ನು ಪ್ರಸ್ತುತ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

೨. ಮಾದಿಗರ ವಿವರಗಳನ್ನು ದಾಖಲೆ ಮಾಡಿರುವುದು ಹಾಗೂ ಶಾಸನಗಳಲ್ಲಿ ದೊರೆಯುವುದು ತುಂಬಾ ವಿರಳ ಕ್ರಿ. ಶ. ೯೬೪ರಲ್ಲಿ ಕೆತ್ತಿಸಲಾದ ಸೊರಬ ಶಿಲಾ ಶಾಸನದ ಪ್ರಕಾರ ತಾಳಗುಂದದ ಬ್ರಾಹ್ಮಣರು, ಗೋವುಗಳನ್ನು ದಾನ ನೀಡಿದ ಮಾದಿಗ ವ್ಯಕ್ತಿಯನ್ನು ಹಾಡಿಹರಸಿದ್ದಾರೆ. ಮತ್ತೊಂದು ಶಾಸನವೊಂದರಲ್ಲಿ ಮಾದಿಗರು ತಾವು ಕೈಗೊಂಡಿದ್ದ ಪ್ರಧಾನ ವೃತ್ತಿಯಾದ ಚರ್ಮಗಾರಿಕೆಗೂ ತೆರಿಗೆಗಳನ್ನು ಸಲ್ಲಿಸುತ್ತಿದ್ದುದು ಕಂಡುಬರುತ್ತದೆ. ಬಾದಾಮಿಯ ಮಹಾಜನರು ಊರಿನ ಚರ್ಮಕಾರರ ತೆರಿಗೆಗಳನ್ನು ತೆಗೆದು ಹಾಕಿದರಂತೆ. ರಾಜ್ಯದ ಬೊಕ್ಕಸಕ್ಕೆ ಬರುತ್ತಿದ್ದ ಆದಾಯಗಳಲ್ಲಿ ಚರ್ಮಗಾರಿಕೆಯ ತೆರಿಗೆ ಒಂದಾಗಿತ್ತು ಎನ್ನುವುದಕ್ಕೆ ಅಧ್ಯಯನ ಸಾಕ್ಷೀಕರಿಸುತ್ತದೆ.

೩. ಮಾದಿಗರು ಪ್ರತಿಯೊಂದು ಗ್ರಾಮದಲ್ಲಿ ಊರಿನಿಂದ ಹೊರಗಡೆ ವಾಸಿಸುತ್ತಿದ್ದಾರೆ. 'ತೊಗಲಿನ' ಕೆಲಸ ಮಾಡುವುದರಿಂದ ಮತ್ತು ಸತ್ತ ದನಗಳನ್ನು ಊರಿನಿಂದ ಹೊರಗೆ ತೆಗೆದುಕೊಂಡು ಹೋಗಿ ಚರ್ಮವನ್ನು ಸುಲಿಯುವುದು ಹಾಗೂ ಅದರ ಮಾಂಸವನ್ನು ತರುವುದು. ತಂದ ಚರ್ಮವನ್ನು ಕರೆಬಾನಿ (ಗಲ್ಲೆಬಾನಿ)ಗಳಲ್ಲಿ ನೆನೆಹಾಕಿ ಹದ ಮಾಡುವುದರಿಂದ ಕೆಟ್ಟವಾಸನೆ ಬರುವುದರಿಂದ ಜೊತೆಗೆ ಅಸಹನೀಯವೆನಿಸುವುದರಿಂದ ಊರ ಹೊರಗೆ ಉಳಿಯಬೇಕಾಯಿತು. ಈ ಸಮುದಾಯದ ಜನರು ಅಮಂಗಳ ಎನ್ನುವ ಕಾರಣಕ್ಕೆ ಊರಿನ ದಕ್ಷಿಣ ದಿಕ್ಕಿನಲ್ಲಿ ವಾಸ ಮಾಡುತ್ತಿದ್ದಾರೆ ಎನ್ನುವುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೪. ಕರ್ನಾಟಕದಲ್ಲಿ ಅನೇಕ ಶಾಕ್ತ ಪಂಥಗಳು ಇವೆ. ಅವುಗಳಲ್ಲಿ ಮಾದಿಗ ಸಮುದಾಯವು ಒಂದು. ಬೇರೆ ಯಾವುದೇ ಜಾತಿ ಸಮುದಾಯಗಳಿಗೆ ಇರುವುದಕ್ಕಿಂತ ಬಹುದೊಡ್ಡ ಸಿದ್ಧಾಂತಗಳು ಒಳಗೊಂಡಿದೆ. ಬೇರೆ ದಲಿತ ಸಮುದಾಯಗಳಿಗಿಂತ ಬಹಳ ಹೆಚ್ಚಾದ ಪುರಾಣ ಪರಂಪರೆಯಿರುವ ಸಮುದಾಯವೆಂದರೆ ಅದು ಮಾದಿಗ ಸಮುದಾಯವಾಗಿದೆ ಎನ್ನುವ ಅಂಶವನ್ನು ಈ ಅಧ್ಯಯನದಿಂದ ಗುರುತಿಸಿದೆ.

೫. ಚಿತ್ರದುರ್ಗ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಬಹುತೇಕ ಮಾದಿಗರು ಸಾಮಾಜಿಕ ವ್ಯವಸ್ಥೆಯನ್ನು ಪ್ರತ್ಯೇಕವಾಗಿಯೇ ರೂಪಿಸಿಕೊಂಡಿದ್ದಾರೆ. ಜನನ, ನಾಮಕರಣ, ಜವುಳ, ಋತುಮತಿ, ವಿವಾಹ, ಸೀಮಂತ, ಶವಸಂಸ್ಕಾರ, ಕೌಟುಂಬಿಕ ವ್ಯವಸ್ಥೆ ಹೀಗೆ ಅನೇಕ ಆಚರಣೆಗಳು ಆಯ ಜಾತಿಯ ಜನಗಳು ಮಾತ್ರ ಅಧಿಕೃತವಾಗಿ ಭಾಗವಹಿಸುವ ಪದ್ಧತಿಯಿದೆ. ಕೇರಿಯ ಯಜಮಾನ ಊರಿನ ನ್ಯಾಯ ತೀರ್ಮಾನ ಮಾಡುವಲ್ಲಿ ನಿರ್ಣಾಯಕನಾಗಿರುತ್ತಾನೆ. ಸಮಾಜದಲ್ಲಿ ಅಸ್ಪೃಶ್ಯರಾಗಿದ್ದರೂ ಇವರ ಆಚರಣೆ ಸಂಪ್ರದಾಯಗಳಲ್ಲಿ ಅತ್ಯಂತ ಶ್ರೀಮಂತಿಕೆ ಮೌಲ್ಯಗಳು, ಸಮಾಜವನ್ನು ಗೌರವಿತವಾಗಿ ಕಾಣುವ ಬಹುದೊಡ್ಡ ಸಾಂಸ್ಕೃತಿಕ ಅನನ್ಯತೆಯನ್ನು ಈ ಸಮುದಾಯವು ಬೆಳೆಸಿಕೊಂಡು ಬಂದಿದೆ.

೬. ಮಾದಿಗರ ವೈವಾಹಿಕ ಆಚರಣೆಗಳಲ್ಲಿ ಬದಲಾವಣೆಯಾಗುತ್ತಿವೆ. ವೈಭವದ ಆಚರಣೆ ಇಂದು ನೀರಸವಾಗಿದೆ. ಅಂತರ್ಜಾತಿ ವಿವಾಹಗಳಿಗೆ ಯುವಪೀಳಿಗೆ ಒಪ್ಪಿಗೆ ಸೂಚಿಸುತ್ತಿರುವುದು ಕಂಡುಬರುತ್ತಿದೆ.

೭ ಚಿತ್ರದುರ್ಗ ಜಿಲ್ಲೆಯಲ್ಲಿ ಬರುವ ಮಾದಿಗ ಸಮುದಾಯದವರು ಹಿಂದೆ ಸೇವಿಸುತ್ತಿದ್ದ ಆಹಾರಗಳಲ್ಲಿ ಬದಲಾವಣೆ ಮಾಡಿಕೊಂಡಿರುವುದು ತಿಳಿದುಬರುತ್ತದೆ. ವಿಶೇಷ ಸಂದರ್ಭಗಳಲ್ಲಿ ಕೋಣ, ಕೋಳಿ ಮುಂತಾದವುಗಳನ್ನು ದೇವಿಗೆ ಬಲಿ ಕೊಟ್ಟು ನಂತರ ಮಾಂಸದ ಊಟವನ್ನು ಹಳ್ಳಿಯ ಜನರು ಎಲ್ಲರೂ ಸೇವಿಸುವ ಪದ್ಧತಿಯಿದೆ. ಅದರೆ ಮಾಂಸಾಹಾರವನ್ನು ಸೇವಿಸುವರ ಪ್ರಮಾಣ ಕಡಿಮೆಯಾಗಿದೆ. ಆಧುನೀಕರಣ, ಶಿಕ್ಷಣ ಮತ್ತು ಸಂಪರ್ಕ ಮಾಧ್ಯಮಗಳು, ಇತ್ತೀಚಿನ ಯುವ ಜನರನ್ನು ಸೆಳೆದಿರುವ ಕಾರಣಕ್ಕೆ ತಮ್ಮ ಆಹಾರ ಪದ್ಧತಿಯಲ್ಲಿ ಬದಲಾವಣೆಯನ್ನು ಮಾಡಿಕೊಂಡಿದ್ದಾರೆ.

೮. ಧಾರ್ಮಿಕ ಆಚರಣೆಯಲ್ಲಿ ಮಾದಿಗ ಸಮುದಾಯವು ತಮ್ಮದೇಯಾದ ನಂಬಿಕೆಯನ್ನು ಇಟ್ಟುಕೊಂಡಿದ್ದಾರೆ. ಕೆಲವರು ತಮ್ಮ ಕುಲಕ್ಕೆ ಸಂಬಂಧಿಸಿದ ದೇವರುಗಳನ್ನು ವಿಂಗಡನೆ ಮಾಡಿಕೊಂಡು ಪೂಜೆ ಮಾಡುತ್ತಾರೆ. ತಮ್ಮ ದೇವಾಲಯದ ಆಂತರಿಕ ಮೇಲ್ವಿಚಾರಣೆಯನ್ನು ಆ ಕುಲದ ಹಿರಿಯ ಪುರುಷರು ಮತ್ತು ಸ್ತ್ರೀಯರೇ ವಹಿಸಿಕೊಂಡಿರುವುದನ್ನು ಅಧ್ಯಯನದಿಂದ ಗುರುತಿಸಲಾಗಿದೆ.

೯. ಚಿತ್ರದುರ್ಗ ಜಿಲ್ಲೆಯ ಜಾತ್ರೆಗಳಲ್ಲಿ ಮಾದಿಗ ಸಮುದಾಯದ ಪಾತ್ರ ವಿಶೇಷವಾಗಿದೆ. ಜಾತ್ರೆಗಳು ಪ್ರಾರಂಭವಾಗುವುದಕ್ಕಿಂತ ಮುಂಚೆ ಇವರ ಕಾರ್ಯಗಳು ಆರಂಭಗೊಳ್ಳುತ್ತವೆ. ಊರಿಗೆ ಸುದ್ದಿ ಮುಟ್ಟಿಸುವುದರಿಂದ ಹಿಡಿದು ದೇವಸ್ಥಾನ ಸುತ್ತಮುತ್ತಲು ಸ್ವಚ್ಛಗೊಳಿವುದು, ಕಟ್ಟುನಿಟ್ಟಿನಿಂದ ಊರಿನ ಸುತ್ತಲು ಕಾಯುವುದು. ಊರಿನ ಸುತ್ತಲು ಸುಳ್ಳಿ ಕಳೆಯನ್ನು ಹಾಕುವುದು ಹಾಗೂ ತಮಟೆ ನುಡಿಸುವುದಷ್ಟೆ ಅಲ್ಲ ಕೋಣವನ್ನು ಬಲಿ ನೀಡಿ ಅನ್ನದ ಜತೆ ಬೆರೆಸಿ ಊರ ಗಾಡಿಯ ಸುತ್ತಲು ಚರಗ ಚೆಲ್ಲುವ ಕಾರ್ಯಗಳೆಲ್ಲ ಮಾದಿಗರದ್ದೇ ಆಗಿರುತ್ತದೆ.

೧೦. ಪ್ರಸ್ತುತ ದಿನಮಾನಗಳಲ್ಲಿ ಮಾದಿಗರು ಹೆಚ್ಚು ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದುತ್ತಿದ್ದಾರೆ. ಕೆಲವು ಕ್ರೈಸ್ತ ಮಿಷನರಿಗಳು ಈ ಸಮುದಾಯದ ಮಕ್ಕಳಿಗೆ ಉಚಿತ ಶಿಕ್ಷಣ, ವೈದ್ಯಕೀಯ, ವಸತಿ ಹೀಗೆ ಅನೇಕ ಮೂಲಭೂತ ಸೌಲಭ್ಯಗಳನ್ನು ನೀಡುತ್ತವೆ. ಇದರ ಮೂಲಕ ಸಮಾಜದಲ್ಲಿ ಉನ್ನತ

ಮಟ್ಟದ ಜೀವನವನ್ನು ನಡೆಸಬಹುದು ಎನ್ನುವ ಕಾರಣಕ್ಕೆ ಮತಾಂತರ ಹೊಂದಿರುವ ಅಂಶವನ್ನು ಕಂಡುಕೊಳ್ಳಲಾಗಿದೆ.

೧೧. ಸಾಮಾನ್ಯವಾಗಿ ಮಾದಿಗರು ಜಾಡಮಾಲಿಗಳಾಗಿ, ಚಮ್ಮಾರರಾಗಿ, ಹಳ್ಳಿಯ ಕಾವಲುಗಾರರಾಗಿ, ಕಸಾಯಿಗಳಾಗಿ, ಬಿಟ್ಟಿಸೇವೆಯ ಕೂಲಿಗಳಾಗಿ ಮತ್ತು ಹಳ್ಳಿಯಲ್ಲಿ ನಿಕೃಷ್ಟ ಸೇವೆಗಳನ್ನು ಮಾಡುತ್ತಿದ್ದಾರೆ. ಸಾಮಾಜಿಕ-ಆರ್ಥಿಕ ಒತ್ತಡಗಳಿಂದಾಗಿ ಮಾದಿಗರಲ್ಲಿ ಹೆಚ್ಚಿನವರು ಇದೇ ಕೆಲಸವನ್ನು ಇನ್ನೂ ಮುಂದುವರೆಸಿಕೊಂಡು ಬಂದಿದ್ದಾರೆ.

೧೨. ಚಿತ್ರದುರ್ಗ ಜಿಲ್ಲೆಯಲ್ಲಿ ಬಹುತೇಕ ಮಾದಿಗ ಸಮುದಾಯದ ಜನರು ಮಳೆ ಆಧಾರಿತವಾದ ಒಣ ಭೂಮಿಯನ್ನು ಹೊಂದಿದ್ದಾರೆ. ಮಳೆಯನ್ನು ನಂಬಿಕೊಂಡು ಬದುಕುತ್ತಿದ್ದಾರೆ. ಜೊತೆಗೆ ಅಲ್ಪಸ್ವಲ್ಪ ಭೂಮಿಯನ್ನು ಹೊಂದಿದ್ದರೂ ತಮ್ಮ ಮಕ್ಕಳ ಮದುವೆಗೆ, ಹಬ್ಬ-ಹರಿದಿನಗಳಿಗೆ ಕಳೆದುಕೊಂಡಿದ್ದಾರೆ. ಕೆಲವರು ಬೆಳೆದಿರುವ ಬೆಳೆಗಳಲ್ಲಿ ಮಧ್ಯವರ್ತಿಗಳ ಮೋಸಕ್ಕೆ ಸಿಲುಕಿ ಅನ್ಯಾಯಕ್ಕೆ ಒಳಗಾಗಿದ್ದಾರೆ. ಇಂಥವೆಲ್ಲ ಸಮಸ್ಯೆಗಳನ್ನು ಅರಿತುಕೊಂಡು ಶಿಕ್ಷಣವನ್ನು ಪಡೆಯುವ ದಿಕ್ಕಿಗೆ ಸಾಗುವಂತಹ ಪ್ರಯತ್ನವನ್ನು ಯುವಕರು ಮಾಡುತ್ತಿದ್ದಾರೆ.

೧೩. ಮಾದಿಗ ಸಮುದಾಯವು ಸಾಂವಿಧಾನಿಕವಾಗಿ ಸಿಗುವ ಸೌಲಭ್ಯಗಳನ್ನು ಪಡೆದುಕೊಂಡು ಇವತ್ತು ಎಲ್ಲಾ ಕ್ಷೇತ್ರದಲ್ಲಿ ಸಾಮಾಜಿಕ ಬದಲಾವಣೆಯನ್ನು ಹೊಂದಲು ಪ್ರಯತ್ನ ಮಾಡುತ್ತಿದ್ದಾರೆ. ರಾಜಕೀಯವಾಗಿ ಕ್ಷೇತ್ರದಲ್ಲಿ ದಾಪುಗಾಲು ಹಾಕುತ್ತಿದೆ. ಸಂವಿಧಾನದ ೭೩ನೇ ತಿದ್ದುಪಡಿ ಪ್ರಕಾರ ರಾಜಕೀಯವಾಗಿ ಬೆಳೆಯಲು ಸಹಾಯವಾಗಿದೆ ಹಾಗೂ ಸ್ಥಳೀಯ ಮಟ್ಟದಲ್ಲಿ ಸ್ಪರ್ಧಿಸಲು ಅವಕಾಶವನ್ನು ಪಡೆದುಕೊಂಡಿದ್ದಾರೆ.

೧೪. ಇತ್ತೀಚಿನ ದಿನಗಳಲ್ಲಿ ಮಾದಿಗ ಸಮುದಾಯದಲ್ಲಿ ಸಾಮಾಜಿಕ ಸಂಘಟನೆಯು ಹೆಚ್ಚುತ್ತಿರುವುದು ಕಂಡುಬರುತ್ತದೆ. ರಾಜಕೀಯ ಮುಖಂಡರುಗಳು ಕೈಜೋಡಿಸುವುದರ ಮೂಲಕ ಶಿಕ್ಷಣ ಮತ್ತು ಉದ್ಯೋಗಗಳನ್ನು ನೀಡುವುದರ ಮೂಲಕ ಈ ಸಮುದಾಯದಲ್ಲಿ ಬದಲಾವಣೆಯಾಗುತ್ತಿದೆ.

ಸಲಹೆಗಳು

೧. ಮಾದಿಗ ಸಮುದಾಯವರ ಅಭಿವೃದ್ಧಿಗಾಗಿ ರೂಪಿಸಿದ ಸರ್ಕಾರದ ಯೋಜನೆಗಳು ಸಮರ್ಪಕವಾಗಿ ಫಲಾನುಭವಿಗಳಿಗೆ ಸಿಗುವಂತಾಗಬೇಕು.

೨. ಖಾಸಗಿ ಶಾಲೆ, ಕಾಲೇಜುಗಳಲ್ಲಿ ಈ ಸಮುದಾಯದ ಮಕ್ಕಳಿಗೆ ಉಚಿತ ಪ್ರವೇಶವನ್ನು ಕಡ್ಡಾಯವಾಗಿ ಸಿಗುವಂತೆ ಮಾಡಬೇಕು.

೩. ಸರ್ಕಾರದಿಂದ ಸುವ್ಯವಸ್ಥಿತವಾದ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗಾಗಿ ವಸತಿ ನಿಲಯ ಹಾಗೂ ಪ್ರತಿಯೊಂದು ವಸತಿ ನಿಲಯದಲ್ಲಿ ಕಡ್ಡಾಯವಾಗಿ ಟ್ಯೂಶನ್ ವ್ಯವಸ್ಥೆ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ಕೊಡಬೇಕು.

೪. ಗ್ರಾಮೀಣ ಪ್ರದೇಶದ ಮಕ್ಕಳಿಗೆ ವೈದ್ಯಕೀಯ, ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣವನ್ನು ಉಚಿತವಾಗಿ ನೀಡಬೇಕು.

೫. ವಿದ್ಯಾವಂತ ನಿರುದ್ಯೋಗ ಯುವಕರಿಗೆ ತಿಂಗಳಿಗೆ ಧನಸಹಾಯ ಮತ್ತು ಉದ್ಯೋಗಾವಕಾಶಗಳನ್ನು ಒದಗಿಸಬೇಕು.

೬. ಈ ಸಮುದಾಯದವರು ವಾಸಿಸುವ ಪ್ರದೇಶಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಬೇಕು.

೭. ಸಮಾಜದಲ್ಲಿ ಸಿಗುವ ಶೈಕ್ಷಣಿಕ, ರಾಜಕೀಯ ಮಿಸಲಾತಿ ಸೌಲಭ್ಯಗಳನ್ನು ಬಳಸಿಕೊಳ್ಳುವ ಕಲೆಯನ್ನು ಯುವಪೀಳಿಗೆಗೆ ಕಲಿಯಬೇಕು, ಜ್ಞಾನವೇ ಎಲ್ಲ ಆಯಾಮಗಳ ಸೃಷ್ಟಿಯ ಮೂಲವೆಂದು ಅರಿಯಬೇಕು.

೮. ಅಸ್ಪೃಶ್ಯತೆ ಆಚರಿಸುವವರನ್ನು ಕಾನೂನಿನ ಅಡಿಯಲ್ಲಿ ಶಿಕ್ಷೆಗೆ ಒಳಪಡಿಸಬೇಕು ಮತ್ತು ಅಸ್ಪೃಶ್ಯತೆ ಬಗ್ಗೆ ಪ್ರತಿ ವರ್ಷವೂ ಜನರಿಗೆ ತಿಳುವಳಿಕೆ ಕೊಡುವ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು.

೯. ದಿನಗೂಲಿ ಪೌರ ಕಾರ್ಮಿಕರಾಗಿ ಕೆಲಸ ಮಾಡುತ್ತಿರುವವರನ್ನು ಶೀಘ್ರವಾಗಿ ಕಾಯಂಗೊಳಿಸಬೇಕು. ಅಲ್ಲದೆ ಇವರಿಗೆ ಪ್ರತೇಕ ಆಸ್ಪತ್ರೆಯನ್ನು ಸ್ಥಾಪಿಸಬೇಕು. ವಿವಿಧ ಸುರಕ್ಷಿತ ಪರಿಕರಗಳನ್ನು ಒದಗಿಸಬೇಕು.

೧೦. ಮಾದಿಗ ಸಮುದಾಯದೊಳಗಿರುವ ಅಮಾನವೀಯ ಸಂಸ್ಕೃತಿಗಳಾದ ದೇವದಾಸಿ ಪದ್ಧತಿ, ಸತ್ತ ಪ್ರಾಣಿಗಳನ್ನು ಸಾಗಿಸುವುದು, ಮನಸ್ಸಿಗೆ ಘಾಸಿ ಉಂಟುಮಾಡುವ ಮಾರಿಹಬ್ಬದಲ್ಲಿ 'ಚರಗ ಚೆಲ್ಲುವ' ಆಚರಣೆ ಹಾಗೂ ಸಾಲದ ಕೂಪಕ್ಕೆ ತಳ್ಳುವ ಮದ್ಯಪಾನ ಇತ್ಯಾದಿ ಚಟಗಳನ್ನು ಕೈಬಿಡಬೇಕು.

೧೧. ಮಾದಿಗ ಸಮುದಾಯದಯ ಮಹಿಳೆಯರ ಅಭಿವೃದ್ಧಿ ಮತ್ತು ಸಬಲೀಕರಣಗಳಿಗೆ ಆದ್ಯತೆ ನೀಡಿ ಅವರು ಎದುರಿಸುತ್ತಿರುವ ಸಮಸ್ಯೆ ಮತ್ತು ಸವಾಲುಗಳ ಬಿಕ್ಕಟ್ಟನ್ನು ಪರಿಹರಿಸಬೇಕು.

೧೨. ಸರ್ಕಾರದ ಸೌಲಭ್ಯಗಳು ಬೇರೆ ಮಧ್ಯವರ್ತಿಗಳ ಕೈಗೆ ಸೇರದಂತೆ ನೇರವಾಗಿ ಈ ಸಮುದಾಯಗಳಿಗೆ ದೊರೆಯುವಂತೆ ಯೋಜನೆಯನ್ನು ರೂಪಿಸಬೇಕು.

೧೩. ಮಾದಿಗ ಸಮುದಾಯಕ್ಕೆ ಬದಲಾದ ಪ್ರಪಂಚದ ಜ್ಞಾನವನ್ನು ಪರಿಚಯ ಮಾಡಿಕೊಡುವ ಕೆಲಸವನ್ನು ಸಂಘ-ಸಂಸ್ಥೆಗಳು ಹಾಗೂ ಸರ್ಕಾರ ಮಾಡಬೇಕು. ಈ ರೀತಿಯಾಗಿ ಮಾಡಿದರೆ ಸ್ವಶಕ್ತಿಯಿಂದ ಬೆಳೆಯಲು ಸಹಕಾರಿಯಾಗುತ್ತದೆ.

೧೪. ಈ ಸಮುದಾಯದ ಕೃಷಿಕರಿಗೆ ಸರ್ಕಾರದಿಂದ ಬಡ್ಡಿರಹಿತ ಸಾಲ, ಸಬ್ಸಿಡಿ, ಪೂರಕವಾದ ಸಲಕರಣೆಗಳನ್ನು ಒದಗಿಸುವ ವ್ಯವಸ್ಥೆಯಾಗಬೇಕು. ಯುವಕರಿಗೆ ಕೃಷಿಗೆ ಪೂರಕವಾದ ಉದ್ಯೋಗಗಳನ್ನು ಕಲ್ಪಿಸಿ ಕೌಶಲ್ಯ, ತರಬೇತಿ ಕೊಟ್ಟು ಸ್ವಾವಲಂಬಿಗಳಾಗಿಸಬೇಕು.

೧೫. ಸಮಾಜದಲ್ಲಿ ಮೇಲ್ವರ್ಗದ ತುಳಿತದಿಂದ ಮುಕ್ತರಾಗಲು ಹಾಗೂ ಸಾಮಾಜಿಕ, ಧಾರ್ಮಿಕ, ಸಂಸ್ಕೃತಿಗಳ ಮೇಲೆ ಆಗುತ್ತಿರುವ ಅನ್ಯಾಯಗಳನ್ನು ಪ್ರಬಲ ಹೋರಾಟಗಳನ್ನು ಮಾಡುವುದರ ಮುಖೇನ ಹಿಮ್ಮೆಟ್ಟಿಸುವಂತಾಗಬೇಕು.

೧೬. ಈ ಸಮುದಾಯವು ಕಳೆದುಕೊಂಡ ಮನೆ–ಗುಡಿಸಲು ಗರಿಷ್ಠ ಪರಿಹಾರ ನೀಡಿ ಮನೆಗಳನ್ನು ಕಟ್ಟಿಸಿಕೊಡಬೇಕು.

೧೭. ಮಾದಿಗ ಸಮುದಾಯದ ಮೇಲೆ ನಡೆಯುತ್ತಿರುವ ಹಲ್ಲೆಗಳನ್ನು ತಪ್ಪಿಸಬೇಕು ಮತ್ತು ಹಲ್ಲೆ ಮಾಡಿದ ಎಲ್ಲಾ ಆರೋಪಿಗಳನ್ನು ಕೂಡಲೇ ಬಂಧಿಸಿ ಸೂಕ್ತ ಕಾನೂನು ಕ್ರಮ ಜರುಗಿಸಬೇಕು.

೧೮. ಮಾದಿಗ ಸಮುದಾಯಕ್ಕೆ ಸಾರ್ವಜನಿಕವಾಗಿ ಯಾವುದೇ ನಿರ್ಬಂಧನೆಗಳು ಇಲ್ಲದೆ ಅಂಗಡಿ, ಹೋಟೆಲ್, ದೇವಾಲಯಗಳಿಗೆ ಮುಕ್ತವಾಗಿ ಪ್ರವೇಶ ಅವಕಾಶವನ್ನು ಕಲ್ಪಿಸಿಕೊಡಬೇಕು.

೧೯. ಚಿತ್ರದುರ್ಗದ ಗ್ರಾಮೀಣ ಪ್ರದೇಶದಲ್ಲಿ ಇರುವ ಸರ್ಕಾರದ ಭೂಮಿಯನ್ನು ಸ್ವಾಧೀನಪಡಿಸಿಕೊಂಡು, ಮನೆ ಇಲ್ಲದ ಮಾದಿಗ ಸಮುದಾಯದವರಿಗೆ ನಿವೇಶನಗಳನ್ನು ಮಂಜೂರು ಮಾಡಿಕೊಡಬೇಕು.

೨೦. ಚಿತ್ರದುರ್ಗದ ಗ್ರಾಮೀಣ ಪ್ರದೇಶದಲ್ಲಿ ತಮ್ಮ ಮಕ್ಕಳ ವಿವಾಹ, ಹಬ್ಬ, ಜಾತ್ರೆಗಳಿಗೆ ಭೂಮಿಯನ್ನು ಕಡಿಮೆ ಬೆಲೆಯಲ್ಲೇ ಕಳೆದುಕೊಂಡು ಇವತ್ತೂ ಭೂಮಿಯೇ ಇಲ್ಲದ ಪರಿಸ್ಥಿತಿಯಿದೆ ಇಂತಹವುಗಳನ್ನು ಸಮೀಕ್ಷೆ ಮಾಡಿ ಇವರ ಭೂಮಿಗಳನ್ನು ಕೊಡಸಬೇಕಾದ ಅನಿವಾರ್ಯತೆಯಿದೆ.

೨೧. ನಗರ, ಪಟ್ಟಣಗಳಲ್ಲಿ ವಾಸಿಸುವ ಆರ್ಥಿಕವಾಗಿ ಹಿಂದುಳಿದ ಮಾದಿಗ ಸಮುದಾಯದವರನ್ನು ಗುರುತಿಸಿ ಉಚಿತ ನಿವೇಶನಗಳನ್ನು ಕೊಡಬೇಕು.

೨೨. ಈ ಸಮುದಾಯದ ವಯೋವೃದ್ಧರ, ವಿಕಲಚೇತನರಿಗೆ ಹಾಗೂ ವಿಧವೆಯರಿಗೆ ಪ್ರತಿ ತಿಂಗಳು ಸರಿಯಾದ ಕ್ರಮದಲ್ಲಿ ಮಾಸಿಕ ವೇತನ ನೀಡಬೇಕು.

೨೩. ಸರ್ಕಾರದ ಗೋಮಾಳ ಭೂಮಿಯನ್ನು ಇವರಿಗೆ ದೊರೆಯುವಂತೆ ಮಾಡಬೇಕು ಹಾಗೂ ಸಣ್ಣ ಮತ್ತು ಅತಿಸಣ್ಣ ಕೃಷಿಕರಿಗೆ ಆರ್ಥಿಕ ಸಹಾಯವನ್ನು ನೀಡಬೇಕು.

೨೪. ಅಂತರ್ಜಾತಿಯ ವಿವಾಹ ಮಾಡಿಕೊಂಡ ದಂಪತಿಗಳಿಗೆ ಹೆಚ್ಚಿನ ಧನಸಹಾಯ ನೀಡುವುದರ ಜೊತೆಗೆ ಸಾಮಾಜಿಕ ಭದ್ರತೆಯನ್ನು ಒದಗಿಸಿಕೊಡಬೇಕು.

೨೫. ವಿವಿಧ ಸ್ಥರದ ಪಂಚಾಯತಿ ಸಂಸ್ಥೆಗಳಲ್ಲಿ ಆಯ್ಕೆಗೊಂಡವರಿಗೆ ಸಂವಿಧಾನದ ಬಗ್ಗೆ ಮತ್ತು ಸರ್ಕಾರದ ಯೋಜನೆಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಒದಗಿಸಬೇಕು.

೨೬. ಪ್ರತಿಯೊಂದು ಗ್ರಾಮದಲ್ಲಿ ಮಾದಿಗ ಸಮುದಾಯಕ್ಕೆ ಪ್ರತ್ಯೇಕವಾದ ಸ್ಮಶಾನ ಭೂಮಿಯನ್ನು ಒದಗಿಸಿಕೊಡಬೇಕು.

ಅನುಬಂಧಗಳು

ಪರಾಮರ್ಶನ ಗ್ರಂಥಗಳು

ಅಂಕಿ ಅಂಶಗಳು

ಸಂಪನ್ಮೂಲ ವ್ಯಕ್ತಿಗಳ ಮಾಹಿತಿ

ಪರಿಶಿಷ್ಟ ಜಾತಿಗಳ ಪಟ್ಟಿ

ಕ್ಷೇತ್ರಕಾರ್ಯದ ಪ್ರಶ್ನಾವಳಿ

ಅನುಬಂಧ
ಪರಾಮರ್ಶನ ಗ್ರಂಥಗಳು

ಅನಂತಕೃಷ್ಣ ಐಯ್ಯರ್, ೧೯೯೪, ಮೈಸೂರಿನ ಜಾತಿ ಮತ್ತು ಬುಡಕಟ್ಟುಗಳು (ಸಂ) ೩, ಮಿಥಲ್ ಪ್ರಕಾಶನ, ದೆಹಲಿ.

ಅಮರಪ್ರಿಯ, ೧೯೯೮, ಆದಿಜಾಂಬವ ಕಿರುಚರಿತ್ರೆ, ಮಾತಂಗ ಪ್ರಕಾಶನ, ಆದಿಜಾಂಬವ ಸೇವಾ ಸಂಘ, ಹೊಳ್ಕುಂದು, ಗುಲ್ಬರ್ಗಾ.

ಅಸುಂಡಿ ಶಿವರಾಮ, ೨೦೦೭, ದಲಿತ ಸಾಂಸ್ಕೃತಿಕ ಲೋಕ, ಸಚಿನ್ ಪಬ್ಲಿಕೇಶನ್, ಬೆಂಗಳೂರು.

ಅರವಿಂದ ಮಾಲಗತ್ತಿ (ಸಂ), ೨೦೦೬, ಕನ್ನಡ ವಿಷಯ ವಿಶ್ವಕೋಶ, ಜಾನಪದ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಅರವಿಂದ ಮಾಲಗತ್ತಿ (ಸಂ), ೨೦೦೨, ದಲಿತ ಮಾರ್ಗ, ಕನ್ನಡ ಪುಸ್ತಕ ಪ್ರಧಿಕಾರ, ಬೆಂಗಳೂರು.

ಆನಂದ್ ತೇಲ್ತುಂಬ್ಡೆ (ಮೂಲ), ರಾಹು (ಅನು), ೨೦೧೪, ಅಂಬೇಡ್ಕರೋತ್ತರ ದಲಿತ ಸಂಘರ್ಷ ದಾರಿ–ದಿಕ್ಕು ಚಿಂತನ ಪುಸ್ತಕ, ಬೆಂಗಳೂರು.

ಆನಂದ್ ತೇಲ್ತುಂಬ್ಡೆ (ಮೂಲ), ೨೦೧೩, ನಾ ದಿವಾಕರ (ಅನು), ಜಾಗತೀಕರಣ ಮತ್ತು ದಲಿತರು, ಲಡಾಯಿ ಪ್ರಕಾಶನ, ಗದಗ.

ಆರಾಧ್ಯ ಬಿ ಎಂ ಎಂ, ೧೯೯೫, ಪರಿಶಿಷ್ಟ ಜನಾಂಗದವರಿಗೆ ಸಂವಿಧಾನ ಕೊಡುಗೆ, ಅಪ್ಪು ಪ್ರಕಾಶನ, ಬೆಂಗಳೂರು.

ಈರಣ್ಣ, ೨೦೦೬, ಪರಿಸರ ಅಧ್ಯಯನ, ಸೃಷ್ಠಿ ಪ್ರಕಾಶನ, ಧಾರವಾಡ.

ಈಶ್ವರಪ್ಪ ಎಂ ಜಿ, ೧೯೯೫, ಚಿತ್ರದುರ್ಗ ಜಿಲ್ಲೆಯ ವ್ಯವಸಾಯ ಜಾನಪದ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಎಡ್ಗರ್ ಥರ್ಸಟನ್, ೧೯೫೫, ದಿ ಕಾಸ್ಟ್ ಅಂಡ್ ಟ್ರೈಬ್ಸ್ ಆಫ್ ಸದರ್ನ್ ಇಂಡಿಯಾ, ಅಲಿಜೆಪ್ನೋ ವಿಶ್ವವಿದ್ಯಾಲಯ, ದೆಹಲಿ.

ಎಲ್ಲಪ್ಪ ಕೆಕೆ ಪುರ, ೧೯೯೩, ದೊಕ್ಕಲ ಮಕ್ಕಳು ಒಂದು ಅಧ್ಯಯನ, ಶ್ರೀದುರ್ಗ ಪ್ರಕಾಶನ, ಕೆಕೆ ಪುರ.

ಒಡೆಯರ್ ಸಿ ಹೆಗ್ಗಡೆ, ೨೦೧೦, ಜಾತಿ ಶ್ರೇಣೀಕರಣ ಮತ್ತು ಅಸ್ಪೃಶ್ಯತೆ: ಒಂದು ಐತಿಹಾಸಿಕ ವಿಶ್ಲೇಷಣೆ, ಲಕ್ಷ್ಮೀ ಪ್ರಿಂಟಿಂಗ್ ಮತ್ತು ಪಬ್ಲಿಷರ್ ಹೌಸ್, ಮೈಸೂರು.

ಕಟಗಿಹಳ್ಳಿ ಎಸ್ ಎಸ್, ೨೦೦೯, ಸಾವಯವ ಕೃಷಿ: ದಿಕ್ಸೂಚಿ ಲೇಖನಗಳು, ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು.

ಕಮಲ ಎಂ ಆರ್, ೨೦೦೪, ಕಪ್ಪು ಹಕ್ಕಿಯ ಬೆಳಕಿನ ಹಾಡು, ಕಥನ ಪ್ರಕಾಶನ, ರಾಜಾಜಿನಗರ, ಬೆಂಗಳೂರು.

ಕಮಲಾಕ್ಷ ಪಿ, ೧೯೬೮, ದಕ್ಷಿಣ ಕನ್ನಡ ಜಿಲ್ಲೆಯ ಹರಿಜನ ಮತ್ತು ಗಿರಿಜನರ ಸಾಮಾಜಿಕ ಇತಿಹಾಸ, ಸಿದ್ಧಾರ್ಥ ಪ್ರಿಂಟರ್ಸ್, ಮಂಗಳೂರು.

ಕಂಬಾರ ಸಿ ಆರ್, ೨೦೧೮, ಗಿರಿನಾಡು, ಗಾಯತ್ರಿ ಪ್ರಕಾಶನ, ಬಳ್ಳಾರಿ.

ಕಾಂಚಾ ಐಲಯ್ಯ, ೧೯೯೮, ಮುಟ್ಟಿಸಿಕೊಂಡವರು, ಬುಟ್ಟಿ ಪ್ರಕಾಶನ, ದಾವಣಗೆರೆ.

ಕೇಶವನ್ ಪ್ರಸಾದ್ ಕೆ, ೧೯೯೩, ಕಪ್ಪೆ ಹೊಲೆಯರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಕೋಟಗಾನಹಳ್ಳಿ ರಾಮಯ್ಯ, ೧೯೯೩, ಸಿಂದ್ ಮಾದಿಗರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಕೃಷ್ಣ ಬಿ ಆರ್, ೨೦೦೮, ಸಮಾಜಶಾಸ್ತ್ರ(ಭಾಗ-೧), ಚೇತನ ಬುಕ್ ಹೌಸ್, ಮೈಸೂರು.

ಕೃಷ್ಣಪ್ಪ ಪಿ ವಿ, ೨೦೦೦, ಚಳುವಳಿಗಳು ಮತ್ತು ಬರಹಗಳು, ಪ್ರೊ. ಬಿ. ಕೃಷ್ಣಪ್ಪ ಟ್ರಸ್ಟ್(ರಿ), ಬೆಂಗಳೂರು.

ಗಂಗಾಧರ ದೈವಜ್ಞ, ೨೦೦೦, ಬುಡಕಟ್ಟು ಸಮಾಜ ಹುಟ್ಟು ಸಾವಿನ ನಡುವೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಗಾಡ್ವಿನ್ ಶಿರಿ, ೧೯೯೭, ದಲಿತ ಕ್ರೈಸ್ತರು, ಕ್ರಿಶ್ಚಿಯನ್ ಇನ್‌ಸ್ಟಿಟ್ಯೂಟ್ ಫಾರ್ ದಿ ಸ್ಟಡಿ ಆಫ್ ರಿಲಿಜಿಯನ್ ಅಂಡ್ ಸೊಸೈಟಿ, ಬೆಂಗಳೂರು.

ಗಿರಿಜಾ ಟಿ, ೧೯೯೧, ಚಿತ್ರದುರ್ಗ ಜಿಲ್ಲಾದರ್ಶಿನಿ, ರೇಖಾ ಪ್ರಕಾಶನ ಮೈಸೂರು.

ಗುರುಮೂರ್ತಿ ಕೆ ಜಿ, ೧೯೯೬, ಧರ್ಮ ಮತ್ತು ರಾಜಕೀಯ, ವಿಮೋಚನಾ ಪ್ರಕಾಶನ, ವಿಮೋಚನಾ ದೇವದಾಸಿ ಪುನರ್ವಸತಿ ಸಂಘ, ಅಥಣಿ.

ಗುರುಮೂರ್ತಿ ಕೆ ಜಿ, ೨೦೧೧, ಕರ್ನಾಟಕ ಜಾನಪದ ಹಬ್ಬಗಳು ಮತ್ತು ಅವುಗಳ ಸಾಂಸ್ಕೃತೀಕರಣ, ಪ್ರಿಯದರ್ಶಿನಿ ಪ್ರಕಾಶನ, ಹಂಪಿನಗರ, ಬೆಂಗಳೂರು.

ಗೊಳಸಂಗಿ ಅರ್ಜುನ, ೨೦೦೦, ದಲಿತ ಬದುಕು ಮತ್ತು ಸಂಸ್ಕೃತಿ ಜಾನಪದೀಯ ಅಧ್ಯಯನ, ದೇವದಾಸಿ ವಿಮೋಚನಾ ಸಂಸ್ಥೆ, ಅಥಣಿ.

ಗೊಳಸಂಗಿ ಅರ್ಜುನ, ೧೯೯೮, ಗ್ರಾಮೀಣ ಪ್ರದೇಶದಲ್ಲಿ ಒಕ್ಕಲುತನ ಸಮಸ್ಯೆ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಗೋ. ರು. ಚನ್ನಬಸಪ್ಪ, ೧೯೭೭, ಕರ್ನಾಟಕದ ಜನಪದ ಕಲೆಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಗೌರಮ್ಮ ಕೆ ಯಲ್ಲಪ್ಪ ಬೂತಯ್ಯ ಟಿ, ೨೦೧೦, ಭಾರತದ ಜಾತಿಪದ್ಧತಿಯ ಸವಾಲುಗಳು, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಚಲುವರಾಜು, ೧೯೯೩, ದಕ್ಕಲಿಗರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಆಕಾಡೆಮಿ, ಬೆಂಗಳೂರು.

ಚಂದ್ರ ಪೂಜಾರಿ ಎಂ, ೨೦೦೮, ಸಂಶೋಧನಾ ಪ್ರಸ್ತಾವ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಚಂದ್ರ ಪೂಜಾರಿ ಎಂ, ೨೦೦೫, ಸಮಾಜ ಸಂಶೋಧನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಚಂದ್ರಪೂಜಾರಿ ಎಂ, ೨೦೦೫, ಸಂಶೋಧಕರು ಮತ್ತು ಕ್ಷೇತ್ರಕಾರ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಚಂದ್ರಶೇಖರ ಕಂಬಾರ, ೨೦೦೬, ಕನ್ನಡ ಜಾನಪದ ವಿಶ್ವಕೋಶ, ಸಂಪುಟ ೧-೨. ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

ಚಂದ್ರಶೇಖರ ಟಿ ಆರ್ (ಸಂ), ೨೦೦೧, ದಲಿತ ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಜವರಯ್ಯ ಮ. ನ, ೨೦೧೦, ಅಂಬೇಡ್ಕರ್ ಶೂದ್ರರು ಮತ್ತು ಮಹಿಳೆಯರು, ಬಹುಜನ ಮಾಧ್ಯಮ ಕೇಂದ್ರ (ರಿ), ಮೈಸೂರು.

ಜವರೇಗೌಡ ದೇ, ೧೯೭೬, ಜನಪದ ಅಧ್ಯಯನ, ಡಿ ವಿ ಕೆ ಮೂರ್ತಿ, ಕೃಷ್ಣಮೂರ್ತಿಪುರಂ, ಮೈಸೂರು.

ಜಾನಕಲ್ ರಾಜಣ್ಣ ಎಂ, ೨೦೦೮, ದಕ್ಕಲಿಗ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ಜೋಗನ್ ಶಂಕರ್, ೧೯೯೩, ದೇವದಾಸಿ ಸಂಪ್ರದಾಯ, ಜೈಭಾರತ ಪ್ರಕಾಶನ, ಮಂಗಳೂರು.

ಝಳಕಿ ಡಂಕಿನ್, ೨೦೧೨, ಭಾರತದಲ್ಲಿ ಜಾತಿವ್ಯವಸ್ಥೆ ಇದೆಯೇ?, ಆನಂದಕಂದ ಗ್ರಂಥಮಾಲೆ, ಮಲ್ಲಾಡಿಹಳ್ಳಿ.

ದಾಸನೂರು ಕೂಸಣ್ಣ, ೧೯೯೫, ಶೋಷಿತ ಜಂಗಮರ ಮೀಸಲಾತಿ, ಮಾತಂಗ ಪ್ರಕಾಶನ, ಮೈಸೂರು.

ದಾಸನೂರು ಕೂಸಣ್ಣ, ೧೯೯೯, ಬಹಿಷ್ಕೃತರ ಸಂಘರ್ಷ ಮತ್ತು ಪರಿವರ್ತನೆ, ಮಾತಂಗ ಪ್ರಕಾಶನ, ಮೈಸೂರು.

ದಾಸನೂರು ಕೂಸಣ್ಣ, ೨೦೦೧, ಡಾ. ಬಿ. ಆರ್. ಅಂಬೇಡ್ಕರ್ ಸಾಮಾಜಿಕ ಚಿಂತನೆ, ಮಾತಂಗ ಪ್ರಕಾಶನ, ಮೈಸೂರು.

ದಾಸನೂರು ಕೂಸಣ್ಣ, ೨೦೦೩, ಬೇಡರಿಗೇಕೆ ಹೊಲೆಮಾದಿಗರ ಮೇಲೆ ಬುದ್ಧ ವೈರತ್ವ?, ಮಾತಂಗ ಪ್ರಕಾಶನ, ಮೈಸೂರು.

ದಾಸನೂರು ಕೂಸಣ್ಣ, ೨೦೦೬, ರೈತರ ಆತ್ಮಹತ್ಯೆ ಮತ್ತು ದಲಿತರ ನವಬ್ರಾಹ್ಮಣಿಕೆ?, ಮಾತಂಗ ಪ್ರಕಾಶನ, ಮೈಸೂರು.

ದುರ್ಗಾದಾಸ್ ಕೆ ಆರ್, ೨೦೦೦, ಅನುಸಂಧಾನದ ಹೊಸ ಹಾದಿ, ಸಮತಾ ಪ್ರಕಾಶನ, ಧಾರವಾಡ.

ದೇವಯ್ಯ ಹರವೆ, ೧೯೯೧, ದಲಿತ ಸಾಹಿತ್ಯ ಮತ್ತು ಇತರ ಲೇಖನಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

ದೇವರಾಜ ಓ ಅವರು, (೨೦೧೩), ಮಧ್ಯಕಾಲೀನ ಕರ್ನಾಟಕ ಚರಿತ್ರೆಯಲ್ಲಿ ದಲಿತರು, ಪಲ್ಲವ ಪ್ರಕಾಶನ, ಚನ್ನಪಟ್ಟಣ.

ನರಸಿಂಹಮೂರ್ತಿ ಎಚ್, ೨೦೦೨, ನಮ್ಮ ಹಬ್ಬಗಳು, ವಿಕಾಸ ಪ್ರಕಾಶನ, ಉಡುಪಿ.

ನರಸು ಪಿ, ೧೯೨೨, ಎ ಸ್ಟಡಿ ಆಫ್ ಇಂಡಿಯಾ, ಮದ್ರಾಸ್.

ನಂಜುಂಡಸ್ವಾಮಿ ಎಂ, ೨೦೧೨, ಹೊಲೆಯರ-ಮಾದರು-ರಾಜರು, ಮಾಳವ ಫಿಲೋಲಾಜಿಕಲ್ ಅಕಾಡೆಮಿ, ಬೆಂಗಳೂರು.

ನಂಜುಂಡಸ್ವಾಮಿ ಎಂ, ೨೦೧೨, ಭಾರತದ ಮೊದಲನೆಯ ದೊರೆಗಳು, ಮಾಳವ ಫಿಲೋಲಾಜಿಕಲ್ ಅಕಾಡೆಮಿ, ಬೆಂಗಳೂರು.

ನಾಗವಾರ ಲಕ್ಷ್ಮೀನಾರಾಣ, ೨೦೦೦, ಬಿ ಬಸವಲಿಂಗಪ್ಪ ಮತ್ತು ಬೂಸ ಚಳುವಳಿಯ ಕಾಲು ಶತಮಾನ, ಕರ್ನಾಟಕ ದಲಿತ ಸಂಘರ್ಷ ಸಮಿತಿ, ಬೆಂಗಳೂರು.

ನಾಗರಾಜು, ೧೯೯೩, ಕೆಂಬಟ್ಟೆ ಹೊಲೆಯರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ನಾಗರಾಜು ಓ, ೨೦೦೮, ಆದಿಜಾಂಬವ ಕುತೇಜ ಕುರಂಗರಾಜ ವೈಭವ, ಶಶಾಂಕ ಪ್ರಕಾಶನ, ತುಮಕೂರು.

ನಾಗೇಶ ಹೆಗಡೆ, ೨೦೧೩, ಗೋಹತ್ಯೆ ಒಂದು ಪರಾಮರ್ಶೆ, ನವಕರ್ನಾಟಕ ಪ್ರಕಾಶನ, ಬೆಂಗಳೂರು.

ನಾರಾಯಣ, ೧೯೮೭, ವಚನ ಸಾಹಿತ್ಯ ಒಂದು ಸಂಸ್ಕೃತಿ ಅಧ್ಯಯನ, ಗದಗ.

ನೆಲ್ಲಿಸರ ಬಸವರಾಜ, ೧೯೮೪, ಆಸಾದಿಗಳು, ಐಬಿಎಚ್ ಪ್ರಕಾಶನ, ಬೆಂಗಳೂರು.

ಪಾಂಡುರಂಗ ಬಾಬು, ೧೯೯೭, ಆದಿಜಾಂಬವರ ಕನ್ನಡ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಪಾಟೀಲ ಕಲ್ಲನ ಗೌಡ, ೧೯೪೫, ಅಸ್ಪೃಶ್ಯತೆ ನಿವಾರಣೆ, ಹುಬ್ಬಳ್ಳಿ.

ಪುಟ್ಟಯ್ಯ ಬಿ ಎಂ, ೨೦೦೮, ಮುಖಾಮುಖಿ ಸಮಾಜ ಸಂಸ್ಕೃತಿ ಚಳುವಳಿ, ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ.

ಪುಟ್ಟಯ್ಯ ಬಿ ಎಂ, ೨೦೦೮, ದಲಿತರು ಮತ್ತು ಭೂಮಿಯ ಪ್ರಶ್ನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪೂರ್ವಚಾರ್, ೨೦೦೦, ಹಂಪಿ ಶಾಸನಗಳು, ಕನ್ನಡ ವಿಶ್ವವಿದ್ಯಾಲಯ, ಸಂಪುಟ. ೩. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪೆಂಡಕೂರು ಗುರುಮೂರ್ತಿ, ೨೦೧೦, ಭಗ್ನ ವಿಜಯನಗರ ಚರಿತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪೋತೆ ಎಚ್ ಟಿ, ೨೦೧೨, ದಲಿತ ಲೋಕ, ಕುಂಟುಬ ಪ್ರಕಾಶನ, ಗುಲಬರ್ಗಾ.

ಪ್ರಕಾಶ ಡಿ ಸಿ, ೨೦೦೦, ಕ್ರಾಂತಿಗೆ ಕರೆ (ಪೆರಿಯಾರ್ ವಿಚಾರ), ದಲಿತ ರಾಷ್ಟ್ರೀಯ ಆಂದೋಲನ, ಬೆಂಗಳೂರು.

ಪ್ರಧಾನ ಗುರುದತ್ತ (ಸಂ), ೨೦೦೯, ಮತಾಂತರ (ಸತ್ಯದ ಮೇಲೆ ಹಲ್ಲೆ) ಸಾಹಿತ್ಯ ಪ್ರಕಾಶನ ಕೊಪ್ಪಿಕರ ಬೀದಿ, ಹುಬ್ಬಳ್ಳಿ.

ಪ್ರಭಾಕರ ಎ ಎಸ್, ೨೦೦೦, ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪ್ರಭಾಕರ ಎ ಎಸ್, ೨೦೦೪ ಬುಡಕಟ್ಟು ಅಭಿವೃದ್ಧಿ ಮಿಮಾಂಸೆ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ಪ್ರಭಾಕರ ಎ ಎಸ್, ೨೦೦೬, ಆದಿವಾಸಿ ಆಖ್ಯಾನ, ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ.

ಬರಗೂರು ರಾಮಚಂದ್ರಪ್ಪ (ಸಂ), ೧೯೯೩, ಕನ್ನಡ ಸಾಹಿತ್ಯದಲ್ಲಿ ಅಸ್ಪೃಶ್ಯತೆಯ ಪರಿಕಲ್ಪನೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಬಂಜಗೆರೆ ಜಯಪ್ರಕಾಶ, ೧೯೯೩, ಸಂಸ್ಕೃತಿ-ಉಪಸಂಸ್ಕೃತಿ (ಪ್ರಸ್ತಾವನೆ), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಬಂಜಗೆರೆ ಜಯಪ್ರಕಾಶ, ೨೦೦೭, ಆನುದೇವಾ ಹೊರಗಣವನು, ಲಕ್ಷ್ಮಿ ಪ್ರಕಾಶನ, ಬೆಂಗಳೂರು.

ಬಾಗೂರು ನಾಗರಾಜಪ್ಪ, ೨೦೦೪, ಹೊಸದುರ್ಗ ಸೀಮೆ ಜಾನಪದ, ಸಿ ವಿ ಜಿ, ಪಬ್ಲಿಕೇಷನ್ಸ್, ಬೆಂಗಳೂರು.

ಬಿಳಿಮಲೆ ಪುರುಷೋತ್ತಮ, ೨೦೦೦, ಹುಲಿಗೆಮ್ಮ, ಪ್ರಸಾರಾಂಗ. ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಬಿದರಹಳ್ಳಿ ನರಸಿಂಹಮೂರ್ತಿ (ಸಂ), ೧೯೯೭, ಜಾಂಬವತಿ ಕಲ್ಯಣ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ. ಬೆಂಗಳೂರು.

ಬೇವಿನಕಟ್ಟಿ ಮಂಜುನಾಥ, ೧೯೯೬, ಮಾತಂಗಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಬೋರಲಿಂಗಯ್ಯ ಹಿ ಚಿ, ೧೯೭೯, ಉಜ್ಜನಿ ಚೌಡಮ್ಮ ಗ್ರಾಮದೇವತೆ ಅಧ್ಯಯನ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ಬೋರಲಿಂಗಯ್ಯ ಹಿ ಚಿ, ೨೦೧೦, ಕುಣಬಿಯರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಬೋರಲಿಂಗಯ್ಯ ಹಿ ಚಿ, ೨೦೧೦, ಕರ್ನಾಟಕ ಜನಪದ ಕಲೆಗಳ ಕೋಶ (ಸಂ) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಬೋರಲಿಂಗಯ್ಯ ಹಿ ಚಿ. ಪ್ರಭಾಕರ್ ಎ ಎಸ್ (ಸಂ), ೨೦೦೪, ಬುಡಕಟ್ಟು ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

ಭಗವತ್ ಶರಣ ಉಪಾಧ್ಯಾಯ, ೨೦೧೧, ಭಾರತೀಯ ಬಹುಮುಖಿ ಸಂಸ್ಕೃತಿ, ನವಕರ್ನಾಟಕ ಪ್ರಕಾಶನ, ಬೆಂಗಳೂರು.

ಭಟ್ ಎಸ್ ಆರ್, ೨೦೧೧, ಪ್ರಾಚೀನ ಭಾರತದಲ್ಲಿ ಜನಜೀವನ, ನವಕರ್ನಾಟಕ ಪ್ರಕಾಶನ, ಬೆಂಗಳೂರು.

ಭೈರಪ್ಪ ಕೆ, ೨೦೦೫, ಭಾರತೀಯ ಸಮಾಜ, ಸಪ್ನ ಬುಕ್ ಹೌಸ್, ಬೆಂಗಳೂರು.

ಮರಡಿ ಶ್ರೀನಿವಾಸ, ಬೇವಿನಬೆಂಚಿ ವೆಂಕಟೇಶ, ಗುಂಜಳ್ಳಿ ನರಸಿಂಹ, ಅರೋಲಿ ರಮೇಶ (ಸಂ), ೨೦೧೪, ಒಳಮೀಸಲಾತಿ ಮುಟ್ಟಲಾರದವನ ಒಡಲಾಳ, ಲಡಾಯಿ ಪ್ರಕಾಶನ, ಗದಗ.

ಮಹೇಶ್ ಸಿ ಕೆ, ೨೦೦೩, ಮೀಸಲಾತಿ ಮತ್ತು ಭವಿಷ್ಯದ ಪಥಗಳು, ವಿಮೋಚನ ಪ್ರಕಾಶನ, ಚಿತ್ರದುರ್ಗ.

ಮಹೇಶ ಸಿ ಕೆ, ೨೦೦೩, ಅಂಬೇಡ್ಕರ್ ಮತ್ತು ಮೀಸಲಾತಿ ವರ್ಗೀಕರಣ, ಮಾತಂಗ ಪರಿವಾರ, ಬೆಂಗಳೂರು.

ಮಹೇಶ ಸಿ ಕೆ, ೨೦೦೬, ದಲಿತ ಚರಿತ್ರೆ ಮತ್ತು ಬುದ್ಧಧಮ್ಮ, ವಿಮೋಚನಾ ಪ್ರಕಾಶನ, ಚಿತ್ರದುರ್ಗ.

ಮಹಾದೇವಯ್ಯ ಪಿ, ೨೦೦೫, ದಲಿತರು ಮತ್ತು ಪರ್ಯಾಯ ರಾಜಕಾರಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮಾಲ್ಲಿಕಾ ಘಂಟಿ, ೨೦೦೮, ದಲಿತ ಸಾಹಿತ್ಯ ಚಳುವಳಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಮೀರಾಸಾಬಿಹಳ್ಳಿ ಶಿವಣ್ಣ, ೧೯೯೯, ದುರುಗ ಜಾನಪದ, ಶಕ್ತಿ ಮುದ್ರಣ ಮತ್ತು ಪ್ರಕಾಶನ, ಬೆಂಗಳೂರು.

ಮೀರಾಸಾಬಿಹಳ್ಳಿ ಶಿವಣ್ಣ, ೨೦೦೩, ಮ್ಯಾಸಮಂಡಲ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ಮುನಿವೆಂಕಟಪ್ಪ ವಿ, ೧೯೯೮, ದಲಿತ ಚಳುವಳಿ ಒಂದು ಅವಲೋಕನ, ವಿಚಾರವಾದಿ ಪ್ರಕಾಶನ, ಮೈಸೂರು.

ಮುನಿವೆಂಕಟಪ್ಪ ವಿ (ಸಂ), ೨೦೧೩, ದಲಿತ ಚಳುವಳಿ ಚರಿತ್ರೆ, ಎಸ್ ಎಂ ಎಸ್ ಪಬ್ಲಿಕೇಶನ್, ಮೈಸೂರು.

ಮುನಿವೆಂಕಟಪ್ಪ ವಿ (ಸಂ), ೨೦೧೩, ದಲಿತ ಸಾಹಿತ್ಯ ಕೋಶ, ಲಿಖಿತ್ ಪ್ರಕಾಶನ, ಮೈಸೂರು.

ಮೂಡ್ನಾಕೂಡು ಚಿನ್ನಸ್ವಾಮಿ, ೨೦೦೮, ಒಂದು ಕೊಡ ಹಾಲಿನ ಸಮರ, ಸಾಮಾಜಿಕ ಚಳುವಳಿಗಳು, ಬುದ್ಧ, ಬಸವ, ಬಾಬಾ ಸಾಹೇಬ, ನವಕರ್ನಾಟಕ ಪಬ್ಲಿಕೇಷನ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು.

ಮೇತ್ರಿ ಕೆ ಎಂ, ೨೦೦೨, ಬುಡಕಟ್ಟು ಕುಲಕಸುಬುಗಳು ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮೊಗಳ್ಳಿ ಗಣೇಶ, ೧೯೯೯, ದಲಿತರು ಮತ್ತು ಜಾಗತೀಕರಣ, ಪ್ರಸಾರಾಂಗ. ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮೋಹನ ಜೆ, ೧೯೯೯, ಪರಿಶಿಷ್ಟ ಜಾತಿ, ಪಂಗಡಗಳ ಮೇದಾರರ ವರ್ತನೆಗಳು, ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ.

ಮೈಲಹಳ್ಳಿ ರೇವಣ್ಣ, ೧೯೯೬, ಮಾದಾರ ಜನಪದ ಒಂದು ಅಧ್ಯಯನ, ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು.

ಮೈಲಹಳ್ಳಿ ರೇವಣ್ಣ, ೨೦೦೪, ಮಾದಾರ ಸಂಸ್ಕೃತಿ ಮತ್ತು ಸಾಹಿತ್ಯ, ರಾಜ್ ಪ್ರಕಾಶನ, ಮೈಸೂರು.

ರಮೇಶ ಬಿ ಜಿ, ೨೦೦೭, ನಮ್ಮ ಹಬ್ಬಗಳು, ಚಂದನ ಪ್ರಕಾಶನ, ಬೆಂಗಳೂರು.

ರಹಮತ್ ತರೀಕೆರೆ, ೨೦೦೬, ಕರ್ನಾಟಕದ ನಾಥಪಂಥ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ರಹಮತ್ ತರೀಕೆರೆ, ೨೦೧೭, ಕರ್ನಾಟಕದ ಶಾಕ್ತಪಂಥ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ರಹಮತ್ ತರೀಕೆರೆ, ೨೦೦೮, ಕರ್ನಾಟಕದ ಸೂಫಿಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ರಹಮತ್ ತರೀಕೆರೆ, ೨೦೦೯, ಕನ್ನಡ ಸಂಶೋಧನೆ ತಾತ್ವಿಕ ವಿಚಾರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ರಹಮತ್ ತರೀಕೆರೆ, ೨೯೯೬, ಪ್ರತಿಸಂಸ್ಕೃತಿ, ಅಭಿನವ ಪ್ರಕಾಶನ, ಬೆಂಗಳೂರು.

ರಘೋತ್ತಮ ಹೊ ಬ, ೨೦೧೪, ಎದೆಗೆ ಬಿದ್ದ ಗಾಂಧಿ, ಸಾಂಚಿ ಪುಸ್ತಕ, ಚಾಮರಾಜನಗರ.

ರಾಜ್ ಎಂ ಸಿ, ೨೦೦೨, ದಲಿತತ್ವ, ಅಂಬೇಡ್ಕರ್ ಸಂಪನ್ಮೂಲ ಕೇಂದ್ರ, ಶಾಂತಿನಗರ, ತುಮಕೂರು.

ರಾಜಶೇಖಯ್ಯ ಎ ಎಂ (ಸಂ), ೧೯೯೯, ಡಾ. ಬಾಬಾ ಸಾಹೇಬ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು–೫, ಬೆಂಗಳೂರು.

ರಾಜಶೇಖಯ್ಯ ಎ ಎಂ (ಸಂ), ೧೯೯೯, ಡಾ. ಬಾಬಾ ಸಾಹೇಬ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು ೧೨, ಭಾಗ–೧, ಬೆಂಗಳೂರು.

ರಾಮಚಂದ್ರ ಜೋಷಿ, ೨೦೦೫., ಭಾರತೀಯ ಸಮಾಜ ರಚನೆ ಮತ್ತು ಪರಿವರ್ತನೆ, ಶ್ರೀಸಿದ್ಧಲಿಂಗೇಶ್ವರ ಪ್ರಕಾಶನ, ಗುಲಬರ್ಗಾ

ರಾಜಶೇಖರ ಪಿ ಕೆ, ೨೦೦೩, ಜಾನಪದ ಸಂಭ್ರಮ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ರಾಜಶೇಖರ್ ಎಸ್, ೨೦೦೪, ಸಾಮಾಜಿಕ ಪ್ರವೇಶ, ಭ್ರಮರ ಪ್ರಕಾಶನ, ಶಿವಮೊಗ್ಗ.

ರಾವು, ೨೦೧೦, ಜಾತಿ ವ್ಯವಸ್ಥೆ ವಿಕಾಸ ವಿನಾಶ, ಸುಮೇದ ಪ್ರಕಾಶನ, ಗುಲಬರ್ಗಾ.

ಯಲ್ಲಪ್ಪ ಬೂತಯ್ಯ ಟಿ, ೨೦೦೦, ದಾರ್ಶನಿಕರು ಮತ್ತು ದಲಿತರು, ಆದಿ ಸಾಹಿತ್ಯ ಪ್ರಕಾಶನ, ಮೈಸೂರು.

ಯಲ್ಲಪ್ಪ ಬೂತಯ್ಯ ಟಿ, ೨೦೧೨, ಮಾತಂಗ ವಚನಗಳು, ಆದಿ ಭಾರತ ಸಾಹಿತ್ಯ ಪ್ರಕಾಶನ, ಮೈಸೂರು.

ಲಕ್ಷ್ಮಿನಾರಾಯಣ, ೨೦೦೧, ಡಾ. ಬಿ. ಆರ್. ಅಂಬೇಡ್ಕರ್ ಮತ್ತು ಸಮಕಾಲೀನ ದಲಿತರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ,

ಲಕ್ಷ್ಮೀಪತಿ ಕೋಲಾರ, ೧೯೯೩, ಮಾಷ್ಟಿಕರ ಸಂಸ್ಕೃತಿ, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಲಕ್ಷ್ಮಣ ತೆಲಗಾವಿ, ೨೦೦೭, ಹಿಂದುಳಿದ ವರ್ಗಗಳ ಮತ್ತು ದಲಿತ ಚಳುವಳಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಡ್ಡಗೆರೆ ನಾಗರಾಜಯ್ಯ, ೨೦೦೦, ಆಸಾದಿ ಖಂಡಕಾವ್ಯ, ಪಂಚಮ ಪ್ರಕಾಶನ, ಶಿರಾ.

ವಡ್ಡಗೆರೆ ನಾಗರಾಜಯ್ಯ, ೨೦೦೧, ಆಸಾದಿ, ಪಂಚಮ ಪ್ರಕಾಶನ, ತುಮಕೂರು.

ವಡ್ಡಗೆರೆ ನಾಗರಾಜಯ್ಯ, ೨೦೦೮, ಬದ್ಧನೆಡೆಗೆ, ಕರ್ನಾಟಕ ಸಾಹಿತ್ಯ ಪರಿಷತ್ತು, ಬೆಂಗಳೂರು.

ವಡ್ಡಗೆರೆ ನಾಗರಾಜಯ್ಯ, ೨೦೧೦, ವಡ್ಡಗೆರೆ ನಾಗಮ್ಮ: ಮಹಾಸತಿ ಕಾವ್ಯ, ಅನ್ನಪೂರ್ಣ ಪಬ್ಲಿಷಿಂಗ್ ಹೌಸ್, ಮಾಗಡಿ ರಸ್ತೆ, ಬೆಂಗಳೂರು.

ವಾಸುದೇವ ಬಡಿಗೇರ, ೨೦೧೧, 'ಬಳ್ಳಾರಿ ಪರಿಸರದ ಸಾಂಸ್ಕೃತಿಕ ಪರಂಪರೆ', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿಜಯಶ್ರೀ ಇಟ್ಟಣ್ಣವರ, ೨೦೧೧, ಹದಿನೆಂಟು ಜಾತಿಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಿರೂಪಾಕ್ಷಿ, ಚಿನ್ನಹಗರಿ ಸಿರಿ, ೨೦೦೬, ಚಿನ್ನಹಗರಿ ಪ್ರಕಾಶನ, ಪೂಜಾರಹಳ್ಳಿ.

ವಿಲ್ಯಂ ಮಾಡ್ತಾ (ಸಂ), ೧೯೯೩, ಜಾನಪದ ಸಾಹಿತ್ಯ ದರ್ಶನ ಭಾಗ-೧೭, ಜನಾಂಗಿಕ ಅಧ್ಯಯನ, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ವಿಕ್ಟರ್ ಎಸ್. ಡಿಸೋಜಾ, ೧೯೭೭, ಭಾರತದಲ್ಲಿ ಜಾತಿ ಪದ್ಧತಿ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ವೀರಸಂಗಯ್ಯ ಜೆ ಎಂ, ೨೦೧೩, ರೈತ ಉಳಿದರೆ ಉಳಿದೀತು.. ಹಳ್ಳಿ ಉಳಿದರೆ ದೇಶ ಉಳಿದೀತು.., ಕ್ರಿಯಾ ಪ್ರಕಾಶನ, ಸಂಪಂಗಿರಾಮನಗರ, ಬೆಂಗಳೂರು.

ವಿಯೋಗಿ ಹರಿ, ೧೯೫೬, ಅಸ್ಪೃಶ್ಯತೆ ಒಂದು ಮಹಾಶಾಪ, ದೆಹಲಿ.

ವೀರಭದ್ರಪ್ಪ ವಿ ವಿ, ಜಾಹ್ನವಿ ಬಿ ಟಿ, ೧೯೯೫, ಮುಟ್ಟಿಸಿಕೊಂಡವರು, ಬುಟ್ಟಿ ಪ್ರಕಾಶನ, ದಾವಣಗೆರೆ.

ವೆಂಕಟರಾವ್ ಬಿ ವಿ, ೨೦೦೨, ಕೃಷಿ ಮತ್ತು ಪರಿಸರ, ನವಕರ್ನಾಟಕ ಪ್ರಕಾಶನ, ಬೆಂಗಳೂರು.

ವೆಂಕಟೇಶ ಎಂ ಎನ್, ೧೯೯೫, ಮೈಲಾರದ ಜಾತ್ರೆಗಳು ಪ್ರದರ್ಶನ ಅಧ್ಯಯನ, ಅಭಿ ಆದರ್ಶ ಪ್ರಕಾಶನ, ಭದ್ರಾವತಿ.

ಶರ್ಮ ಆರ್ ಎಸ್, ೨೦೦೪, ಪ್ರಾಚೀನ ಭಾರತದಲ್ಲಿ ಶೂದ್ರರು. ನವಕರ್ನಾಟಕ ಪ್ರಕಾಶನ, ಬೆಂಗಳೂರು.

ಶಂಕರನಾರಾಯಣ ತೀ ನಂ, ೧೯೮೨, ಕಾಡುಗೊಲ್ಲ ಸಂಪ್ರದಾಯಗಳು ಮತ್ತು ನಂಬಿಕೆಗಳು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಶಂಕರರಾವ್ ಚ ನ, ೨೦೦೩, ಸಮಾಜಶಾಸ್ತ್ರ ಸಂಪುಟ-೧, ಜೈಭಾರತ ಪ್ರಕಾಶನ, ಮಂಗಳೂರು.

ಶಂಕನಪುರ ಮಹಾದೇವ, ೨೦೧೧, ಮಲೆಯ ಮಾದಯ್ಯನ ಸಾಂಸ್ಕೃತಿಕ ಚರಿತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಶಿವಪ್ಪ ಕೆ, ೨೦೦೪, ಬಳ್ಳಾರಿ ಜಿಲ್ಲೆಯ ಹೊಲೆಯ ಮಾದಿಗರ ಸಂಸ್ಕೃತಿ, ಸಾರ ಎಂಟರಪ್ರೈಸಸ್, ಮೈಸೂರು.

ಶಿವಪ್ರಕಾಶ ಎಚ್ ಎಸ್, ೧೯೯೨, ಮಾದರಿ ಮಾದಯ್ಯ, ಸಮುದಾಯ ಪ್ರಕಾಶನ, ಬೆಂಗಳೂರು.

ಶ್ರೀನಿವಾಸಪ್ಪ, ೨೦೦೦, ಔಷಧೀಯ ಬೆಳೆಗಳ ಬೇಸಾಯ, ಕಾವ್ಯಕಲಾ ಪ್ರಕಾಶನ ಬೆಂಗಳೂರು.

ಶ್ರೀಮತಿ ಹೆಚ್ ಎಸ್, ೧೯೯೮, ಪ್ರಾಚೀನ ಭಾರತದ ಚರಿತ್ರೆ: ಡಿ.ಡಿ. ಕೋಸಾಂಬಿಯವರ ಚಿಂತನೆಗಳು, ಬೆಳ್ಳಿಚುಕ್ಕಿ ಬುಕ್ ಟ್ರಸ್ಟ್, ಬೆಂಗಳೂರು.

ಶ್ರೀಪಡ್ರೆ, ೨೦೦೮, ದೇಶಿ ಕೃಷಿ ಜ್ಞಾನ, ಮಣ್ಣು ಮತ್ತು ನೀರು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ಸಬರದ ಬಸವರಾಜ. ೨೦೦೯, ಜನಪದ ದೈವಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸದಾಶಿವಯ್ಯ ಎಚ್ ಎಂ, ೧೯೮೦, ಸಮಾಜಶಾಸ್ತ್ರ ಭಾಗ–೨, ಕನ್ನಡ ಆಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಸತ್ಯನಾಥ ಟಿ ಎಸ್, ೧೯೮೮, ಕನ್ನಡ ಜಾನಪದ: ಕೆಲವು ಮುಖಗಳು. ಶಾರದ ಪ್ರಕಾಶನ, ಬೆಂಗಳೂರು.

ಸತ್ಯನಾರಾಯಣ ರಾ, ೧೯೯೮, (ಸಂ), ಶ್ರೀಮತಂಗಮುನಿ ವಿರಚಿತ ಬೃಹದ್ದೇಶಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸುಭಾಷ್ ಭರಣಿ, ೨೦೦೫, ಧರೆಗೆ ದೊಡ್ಡವರು, ಕನ್ನಡ ಪುಸ್ತಕ ಪ್ರಾದಿಕಾರ, ಬೆಂಗಳೂರು.

ಸಿದ್ಧಲಿಂಗಯ್ಯ, ೨೦೦೦, ಜನ ಸಂಸ್ಕೃತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸಿದ್ಧಲಿಂಗಯ್ಯ, ೧೯೯೭, ಗ್ರಾಮದೇವತೆಗಳು, ಮೂಲಭಾರತಿ ಪ್ರಕಾಶನ, ಬೆಂಗಳೂರು.

ಸಿದ್ಧಯ್ಯ ಕೆ ಬಿ, ೨೦೦೯, ಗಲ್ಲೆಬಾನಿ, ನಮ್ಮ ಪ್ರಕಾಶನ, ಬಿಳಿಗೆರೆ, ತಿಪಟೂರು ತಾಲೂಕು.

ಸೋಸಲೆ ಚಿನ್ನಸ್ವಾಮಿ ಎನ್, ೨೦೧೨, ದಲಿತರ ದೌರ್ಜನ್ಯ ಮತ್ತು ಸಾಮಾಜಿಕ ನ್ಯಾಯದ ಪ್ರಶ್ನೆಗಳು, ಯಾಜಿ ಪ್ರಕಾಶನ, ಭೂಮಿ, ಹೊಸಪೇಟೆ.

ಸೋಸಲೆ ಚಿನ್ನಸ್ವಾಮಿ ಎನ್, ೨೦೦೪, ಸಾಮ್ರಾಜ್ಯ ಮತ್ತು ಸಂಸ್ಥಾನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಹಯವದನರಾವ್, ೧೯೦೧, ದ ಮೈಸೂರು ಟ್ರೈಬ್ಸ ಮತ್ತು ಕ್ಯಾಸ್ಟ್, (ಸಂಪುಟ–೪), ಮೈಸೂರು ಸರ್ಕಾರ, ಮೈಸೂರು.

ಹಾ ಮಾ ನಾಯಕ, ೧೯೭೧, ಜಾನಪದ ಸ್ವರೂಪ–ಜನಪದ ಗೀತ ಪ್ರಕಾರಗಳು, ಗೀತ ಪ್ರಕಾಶನ, ಬೆಂಗಳೂರು.

ಹಿರೇಮಠ ಎಸ್ ಎಸ್, ೨೦೦೧, ದಲಿತ ಸಂಸ್ಕೃತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಹಿರೇಮಠ ಎಸ್ ಎಸ್, ೧೯೯೩, ಕರ್ನಾಟಕ ದಲಿತ ಸಂಸ್ಕೃತಿ ಪರಂಪರೆ ಭಾಗ–೨, ಜಾತ್ರೆಗಳು, ಸಮತಾ ಪ್ರಕಾಶನ, ಹೊಸಪೇಟೆ.

ಹಿರೇಮಠ ಎಸ್ ಎಸ್, ೧೯೯೭, ಮಾದರ ಚನ್ನಯ್ಯನ ನಾಡಿನಲ್ಲಿ, ಅಮೃತ ಪ್ರಕಾಶನ, ಹರಪನಹಳ್ಳಿ.

ಹಿರೇಮಠ ಎಸ್ ಎಸ್, ೧೯೮೮, ಜನಪದ ಸಮಾಜ ಸಂಸ್ಕೃತಿ, ಸೂರ್ಯ ಪ್ರಕಾಶನ, ಮಲ್ಲಾಡಿಹಳ್ಳಿ.

ಹೆಗಡೆ ಆರ್ ಪಿ (ಅನು), ಜೆಯಲಾಲ ಆರ್ಯ (ಮೂಲ), ೨೦೧೪, ದಲಿತ ಸಮಾಜ ಇಂದಿನ ಸವಾಲುಗಳು, ಲಡಾಯ ಪ್ರಕಾಶನ, ಗದಗ.

ಹೆಗ್ಗೆರೆ ರಂಗಪ್ಪ (ಸಂ), ೨೦೦೪, ಮಾತಂಗ ಸಂಸ್ಕೃತಿ, ಶ್ರೀ ಆದಿಜಾಂಬವ ಮಾದಿಗ ಮಹಾಸಂಸ್ಥಾನ ಟ್ರಸ್ಟ್ (ರಿ) ಕೋಡಿಹಳ್ಳಿ.

ಹುಚ್ಚಪ್ಪ ಮಾಸ್ತರ ಎನ್, ೧೯೯೭, ಚಂದ್ರಗುತ್ತಿ ರೇಣುಕಾಂಬೆ ಜಾತ್ರೆ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

ಇಂಗ್ಲೀಷ್ ಕೃತಿಗಳು

Ayer Anathakrishnan. L. K, 1994, the Mysore Tribes and Castes Vol. 1 to 5, Mysore University, Mysore.

Anad Teltumbde, 1997, Ambedkar in and for the post Ambedkar Dalit Movement, Sugawa prakashana, pune.

Ayyangar, M, 1962, Ananthasayanam, Indian Culture and Religious Thought, University of Calcutta, Calcutta.

Ambedka B. R, 2003, Annihlation of Caste, Kousalya Prakashana, Aurangabad.

Ambedka B. R, 1947, 'State and Miorities', what are Their Rights and how to them in the Constitution of Free India, publisher, Siddarth Books, Delhi.

Basu D.D, 2000, Shorter Constitution, Prentice Hall of India, New Delhi, 1994.

Chatterjee S.K., Educational Development of Scheduled Caste: Looking Ahead, Gayan Pubication, New Delhi.

Chinna Rao Yagati, 2003, Dalit Studies: A Bibliographical Handbook, Karnataka Publishers, New Delhi.

Enthoven R. E, 1990, the Tribes and Castes of Bombay Vol. 1, Asian Educational Services, New Delhi.

Edger Thurston, 1987, Rangachari k., Caste and Tribes of Southern India Vol. 6 P to S, Asian Educational Services, New Delhi.

Fukuhar J. N, An Outlin of the Religious literature of India,

Hawanur G. S, 1975, Karnataka Backward Classes Commission Report, Govt. of Karnataka, Bangalore.

Hayavdana Rao C, The Mysore Gazetteer (Vol. II part I), Govt of Karnataka, Bangalore.

Kapadia K.M, 1968, Marriage and Family in India: Oxford University Press, Culcutta.

Kuppu Awamy, 1986, Social change in India: Vikas Publishing House, pvt.Ltd, New Delhi.

Jogdand P.G, 1995, Dlit Women in India: Issues and Perspectives, Gayan Publication, New Delhi.

Jha D.N, 2002, The Myth of the Holy cow, N. Y. Verso Publication, London.

Justice P. S. Narayana's, 2004, The Schedul Castes and Schedule Tribes (Prevention of Attrocities), Published by K. C. GOGIA, For M/S. Gogia Publiton.

Manohar Yadav, 1998, Career and Dalith Movement In Karnataka, Journal of Social and Economic Development, Vol-I, No-1, Bangalore.

Narasimhaiah H, 1975, Thoughts on Science and Society, Bangalore University Press.

Radhakumu Mookerji, 1921, ASOKA, Nationalism in Hindu Culture, Theosophical Publishing House.

Singh K.S, 1994, the Scheduled Tribes, Anthropological Survey of India, New Delhi.

Sangwan, Om Prakash (Ed), 1996, Dalit Socity and Challenges of Development, Common Wealth Publication, New Delhi.

Shankara Makasgi Punekar, 1991, Harijin Contribution to Indian Medival Philosophy, Prasaranga, Bangalore University.

Sherring Rev M. A, 1974, the Tribes and Castes of the Bombay Presidency.

Sing K. S, 2010, People of India, National Series Vol. II, The Scheduled Castes and Anthropological Survey of India.

Srinivas M. N, 1992, Caste in Modern India, Media Promoters and Publisher Pvt. Ltd., Bombay.

Shankar Rao C. N, 2008, Indian Society and Social Thought-2, Publisher Swapna Books, Bangalore.

ಎಂ. ಫಿಲ್ ಮತ್ತು ಪಿಎಚ್. ಡಿ ಮಹಾಪ್ರಬಂಧಗಳು

ಕೆಂಚವೀರಪ್ಪ ಎನ್, ೨೦೧೧, ಕರ್ನಾಟಕದಲ್ಲಿ ಆಸಾದಿ ಸಂಪ್ರದಾಯ, ಎಂ. ಫಿಲ್, ಸಂಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಗೀತಾ ಎಂ. ಯಂಕಂಚಿ, ೨೦೧೨, ಕರ್ನಾಟಕ ಅರಣ್ಯವಾಸಿ ಬುಡಕಟ್ಟು ಸಮುದಾಯಗಳ ಆಹಾರ ವೈವಿಧ್ಯತೆ ಹಾಗೂ ಭದ್ರತೆ, ಪಿಎಚ್.ಡಿ ಮಹಾಪ್ರಬಂಧ ಮಾರ್ಗದರ್ಶಕರು ಡಾ. ಚಲುವರಾಜು, ಕನ್ನಡ ವಿಶ್ವವಿದ್ಯಾಲಯ, ಹಂಪಿ–ವಿದ್ಯಾರಣ್ಯ.

ಚನ್ನಣ್ಣ ವಾಲೀಕಾರ, ೧೯೯೩, ಹೈದ್ರಾಬಾದ್ ಕರ್ನಾಟಕದ ಗ್ರಾಮದೇವತೆಗಳು, ಅಪ್ರಕಟಿತ ಪಿಎಚ್. ಡಿ. ಮಹಾಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ತಿಪ್ಪೇಸ್ವಾಮಿ ಕೆರೆಯಾಗಳಹಳ್ಳಿ, ೨೦೦೯, ಚಿತ್ರದುರ್ಗ ಜಿಲ್ಲೆಯ ಆಸಾದಿಗಳ ಬದುಕು ಮತ್ತು ಸಂಪ್ರದಾಯ, ಎಂ. ಫಿಲ್ ಸಂಪ್ರಬಂಧ, ತುಮಕೂರು ವಿಶ್ವವಿದ್ಯಾಲಯ, ತುಮಕೂರು.

ನಾರಾಯಣಸ್ವಾಮಿ ಜಿ, ೨೦೦೩, ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ದಲಿತ ಸಂವೇದನೆ: ಒಂದು ಅಧ್ಯಯನ, ಪಿಎಚ್. ಡಿ ಮಹಾಪ್ರಬಂಧ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

ರಾಜಕುಮಾರ ಕೆ ಆರ್ ಜೆ, ೨೦೦೭, ಸ್ವಾತಂತ್ರ್ಯ ಪೂರ್ವದಲ್ಲಿ ಮಾದಿಗ ಸಮುದಾಯ, ಚರಿತ್ರೆ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಡ್ಡಗೆರೆ ನಾಗರಾಜಯ್ಯ, ೨೦೧೪, ಕರ್ನಾಟಕದ ಆದಿಜಾಂಬನ ಮಾತಂಗ ಪರಂಪರೆ: ಸಾಂಸ್ಕೃತಿಕ ವಿಶ್ಲೇಷಣೆ, ಪಿಎಚ್.ಡಿ ಮಹಾಪ್ರಬಂಧ, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಾಯ್. ಹೊನ್ನುಂಗರ ಎಸ್, ೨೦೧೩, ಛಲವಾದಿ ಸಮುದಾಯ: ಸಮಾಜಶಾಸ್ತ್ರೀಯ ಅಧ್ಯಯನ, (ಗದಗ ಜಿಲ್ಲೆಯನ್ನು ಪರಿಗಣಿಸಿ), ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಶರಣಪ್ಪ ಕೆ ಸಿ, ೨೦೧೭, ಹಟ್ಟಿ ಸಂಸ್ಕೃತಿ ಮತ್ತು ಪರಂಪರೆ–ಸಾಮಾಜಿಕ ಅಧ್ಯಯನ, ಅಪ್ರಕಟಿತ ಪಿಹೆಚ್. ಡಿ ಮಹಾಪ್ರಬಂಧ, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಶ್ರೀಧರ, ೨೦೦೭, ಪಂಬದರಲ್ಲಿ ಸಾಮಾಜಿಕ ಬದಲಾವಣೆ, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಹನುಮಂತಪ್ಪ, ೨೦೦೬, ಮೊಳಕಾಲ್ಮೂರು ತಾಲೂಕು ಪರಿಸರದ ಮಾದಿಗ ಸಮುದಾಯದ ಜಾನಪದೀಯ ಅಧ್ಯಯನ, ಜಾನಪದ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ.

ವರದಿಗಳು

ಅನೀಸ್ ಸಿರಾಜ್ ಎಸ್, ಕರ್ನಾಟಕ ಗ್ಯಾಝೇಟಿಯರ್ ಇಲಾಖೆ, ಕರ್ನಾಟಕ ಕೈಪಿಡಿ, ಬೆಂಗಳೂರು, ೨೦೧೧

ಜಿಲ್ಲಾ ಸಂಖ್ಯಾ ಸಂಗ್ರಹಣ ಅಧಿಕಾರಿಗಳು– ಚಿತ್ರದುರ್ಗ ಜಿಲ್ಲಾ ಅಂಕಿ ಅಂಶಗಳ ನೋಟ, ೨೦೦೯– ೧೦.

ಜಿಲ್ಲಾ ಸಂಖ್ಯಾ ಸಂಗ್ರಹಣ ಅಧಿಕಾರಿಗಳು– ಚಿತ್ರದುರ್ಗ ಜಿಲ್ಲಾ ಅಂಕಿ ಅಂಶಗಳ ನೋಟ, ೨೦೧೨– ೧೩.

ಜಿಲ್ಲಾ ಸಂಖ್ಯಾ ಸಂಗ್ರಹಣ ಅಧಿಕಾರಿಗಳು– ಚಿತ್ರದುರ್ಗ ಜಿಲ್ಲಾ ಅಂಕಿ ಅಂಶಗಳ ನೋಟ, ೨೦೧೪– ೧೫.

Studies of Scheduled Tribes in Karnataka, Karnataka Human Development Report-2005.

National Family Health Survey, 2005-06.

National Sample survey Organization NSSO -2010.

ಸಂಪನ್ಮೂಲ ವ್ಯಕ್ತಿಗಳ ಮಾಹಿತಿ

ಕ್ರ.ಸಂ	ಸಂಪನ್ಮೂಲ ವ್ಯಕ್ತಿಗಳ ಹೆಸರು ಮತ್ತು ವಿಳಾಸ	ಲಿಂಗ	ವಯಸ್ಸು	ವಿದ್ಯಾರ್ಹತೆ	ವೃತ್ತಿ
೧	ಅಶಾ, ದೇವರೆಡ್ಡಿಹಳ್ಳಿ ಗ್ರಾ, ಚಳ್ಳಕೆರೆ ತಾ.	ಮಹಿಳೆ	೩೯	೬ನೇತರಗತಿ	ಅಂಗನವಾಡಿ ಕಾರ್ಯಕರ್ತೆ
೨	ಓಬಳೇಶ, ನನ್ನಿವಾಳ ಗ್ರಾ, ಚಳ್ಳಕೆರೆ ತಾ.	ಪುರುಷ	೬೮	ಇಲ್ಲ	ಪೂಜಾರಿ
೩	ಕೆಂಚಮ್ಮ, ಗೌರಸಮುದ್ರ ಗ್ರಾ, ಚಳ್ಳಕೆರೆ ತಾ.	ಮಹಿಳೆ	೮೨	ಇಲ್ಲ	ಕೃಷಿಕೂಲಿ
೪	ಗುರುಲಿಂಗಪ್ಪ, ಗೌರಸಮುದ್ರ ಗ್ರಾ, ಚಳ್ಳಕೆರೆ ತಾ.	ಪುರುಷ	೬೬	೪ನೇ ತರಗತಿ	ಕೃಷಿಕೂಲಿ
೫	ಜಯಮ್ಮ, ಗೌರಸಮುದ್ರ ಗ್ರಾ, ಚಳ್ಳಕೆರೆ ತಾ.	ಮಹಿಳೆ	೪೭	ಇಲ್ಲ	ತರಕಾರಿ ವ್ಯಾಪಾರಿ
೬	ತಿಪ್ಪೇರುದ್ರಪ್ಪ, ದೇವರೆಡ್ಡಿಹಳ್ಳಿ ಗ್ರಾ, ಚಳ್ಳಕೆರೆ ತಾ.	ಪುರುಷ	೬೮	೨ನೇ ತರಗತಿ	ಕೃಷಿಕೂಲಿ
೭	ತಿಪ್ಪಕ್ಕ, ಪರಶುರಾಂಪುರ ಗ್ರಾ, ಚಳ್ಳಕೆರೆ ತಾ.	ಮಹಿಳೆ	೫೬	ಇಲ್ಲ	ಕೃಷಿಕೂಲಿ
೮	ದುರುಗಮ್ಮ, ಪರಶುರಾಂಪುರ ಗ್ರಾ, ಚಳ್ಳಕೆರೆ ತಾ.	ಮಹಿಳೆ	೬೫	ಇಲ್ಲ	ಕೃಷಿಕೂಲಿ
೯	ನಾಗರಾಜ, ಪರಶುರಾಂಪುರ ಗ್ರಾ, ಚಳ್ಳಕೆರೆ ತಾ.	ಪುರುಷ	೭೬	ಇಲ್ಲ	ಕೃಷಿಕೂಲಿ
೧೦	ನಿಂಗಪ್ಪ, ಪರಶುರಾಂಪುರ ಗ್ರಾ, ಚಳ್ಳಕೆರೆ ತಾ.	ಪುರುಷ	೮೦	೩ನೇ ತರಗತಿ	ಕೃಷಿಕೂಲಿ
೧೧	ನೀಲಮ್ಮ ದೇವರೆಡ್ಡಿಹಳ್ಳಿ ಗ್ರಾ, ಚಳ್ಳಕೆರೆ ತಾ.	ಮಹಿಳೆ	೪೬	ಇಲ್ಲ	ಕೃಷಿಕೂಲಿ
೧೨	ಪಾಪಯ್ಯ, ನನ್ನಿವಾಳ ಗ್ರಾ, ಚಳ್ಳಕೆರೆ ತಾ.	ಪುರುಷ	೫೧	೩ನೇ ತರಗತಿ	ಕೃಷಿಕೂಲಿ
೧೩	ಬೋರಯ್ಯ, ಪರಶುರಾಂಪುರ ಗ್ರಾ, ಚಳ್ಳಕೆರೆ ತಾ	ಪುರುಷ	೬೫	ಇಲ್ಲ	ಕೃಷಿಕೂಲಿ

೧೪	ಮಲ್ಲೇಶ, ಪರಶುರಾಂಪುರ ಗ್ರಾ, ಚಳ್ಳಕೆರೆ ತಾ.	ಪುರುಷ	೫೪	೬ನೇ ತರಗತಿ	ಗ್ರಾಮ ಪಂಚಾಯ್ತಿ ಸದಸ್ಯರು
೧೫	ಮಂಜುಳಾ, ಗೌರಸಮುದ್ರ ಗ್ರಾ, ಚಳ್ಳಕೆರೆ ತಾ.	ಮಹಿಳೆ	೪೦	ಇಲ್ಲ	ಕೃಷಿಕೂಲಿ
೧೬	ಮಾರಕ್ಕ, ನನ್ನಿವಾಳ ಗ್ರಾ, ಚಳ್ಳಕೆರೆ ತಾ.	ಮಹಿಳೆ	೭೨	ಇಲ್ಲ	ಕೃಷಿಕೂಲಿ
೧೭	ರೇಣುಕಮ್ಮ, ನನ್ನಿವಾಳ ಗ್ರಾ, ಚಳ್ಳಕೆರೆ ತಾ.	ಮಹಿಳೆ	೬೩	ಇಲ್ಲ	ಕೃಷಿಕೂಲಿ
೧೮	ಲಕ್ಷ್ಮಿದೇವಿ, ದೇವರೆಡ್ಡಿಹಳ್ಳಿ ಗ್ರಾ, ಚಳ್ಳಕೆರೆ ತಾ.	ಮಹಿಳೆ	೫೪	ಇಲ್ಲ	ಕೃಷಿಕೂಲಿ
೧೯	ಶಿವಕುಮಾರ, ನನ್ನಿವಾಳ ಗ್ರಾ, ಚಳ್ಳಕೆರೆ ತಾ.	ಪುರುಷ	೪೯	೧೦ನೇ ತರಗತಿ	ಗ್ರಾಮ ಪಂಚಾಯ್ತಿ ಸದಸ್ಯರು
೨೦	ಸಣ್ಣ ಹನುಮಂತಪ್ಪ, ದೇವರೆಡ್ಡಿಹಳ್ಳಿ ಗ್ರಾ, ಚಳ್ಳಕೆರೆ ತಾ.	ಪುರುಷ	೭೨	ಇಲ್ಲ	ಕೃಷಿಕೂಲಿ
೨೧	ಅಂಜಿನಮೂರ್ತಿ, ಗೋನೂರು ಗ್ರಾ, ಚಿತ್ರದುರ್ಗ ತಾ.	ಪುರುಷ	೬೪	ಇಲ್ಲ	ಕೃಷಿಕೂಲಿ
೨೨	ಕುಮಾರ, ಗೋನೂರು ಗ್ರಾ, ಚಿತ್ರದುರ್ಗ ತಾ.	ಪುರುಷ	೫೪	ಬಿಇಡ್	ಶಿಕ್ಷಕರು
೨೩	ಚಂದ್ರಮ್ಮ, ಭರಮಸಾಗರ ಗ್ರಾ, ಚಿತ್ರದುರ್ಗ ತಾ.	ಮಹಿಳೆ	೪೭	೮ನೇ ತರಗತಿ	ಗ್ರಾಮ ಪಂಚಾಯ್ತಿ ಸದಸ್ಯರು
೨೪	ಜಯರಾಮಪ್ಪ, ಜಾನಕೊಂಡ ಗ್ರಾ, ಚಿತ್ರದುರ್ಗ ತಾ.	ಪುರುಷ	೬೯	೬ನೇ ತರಗತಿ	ನಿವೃತ್ತ ಪೌರ ಕಾರ್ಮಿಕರು
೨೫	ತಿಪ್ಪೀರಮ್ಮ, ಕೊನಬೇವು ಗ್ರಾ, ಚಿತ್ರದುರ್ಗ ತಾ.	ಮಹಿಳೆ	೬೮	ಇಲ್ಲ	ಗ್ರಾಮ ಪಂಚಾಯ್ತಿ ಸದಸ್ಯರು
೨೬	ನೀಲಮ್ಮ, ಭರಮಸಾಗರ ಗ್ರಾ, ಚಿತ್ರದುರ್ಗ ತಾ.	ಮಹಿಳೆ	೮೧	ಇಲ್ಲ	ಕೃಷಿಕೂಲಿ
೨೭	ಮಂಗಳಮ್ಮ, ಕೊನಬೇವು ಗ್ರಾ, ಚಿತ್ರದುರ್ಗ ತಾ.	ಮಹಿಳೆ	೪೮	೮ನೇ ತರಗತಿ	ಕೃಷಿಕೂಲಿ
೨೮	ಮಂಜಪ್ಪ, ಕೊನಬೇವು ಗ್ರಾ, ಚಿತ್ರದುರ್ಗ ತಾ.	ಪುರುಷ	೭೪	೨ನೇ ತರಗತಿ	ನಿವೃತ್ತ ಪೌರಕಾರ್ಮಿಕರು
೨೯	ಮಹಂತೇಶ, ಜಾನಕೊಂಡ ಗ್ರಾ, ಚಿತ್ರದುರ್ಗ ತಾ.	ಪುರುಷ	೬೩	೮ನೇ ತರಗತಿ	ಕೃಷಿಕೂಲಿ

೩೦	ಮಚ್ಚಂದ್ರಪ್ಪ, ಗೋನೂರು ಗ್ರಾ. ಚಿತ್ರದುರ್ಗ ತಾ.	ಪುರುಷ	೫೬	೬ನೇ ತರಗತಿ	ಕೃಷಿಕೂಲಿ
೩೧	ಮೀನಾಕ್ಷಿ, ಭರಮಸಾಗರ ಗ್ರಾ, ಚಿತ್ರದುರ್ಗ ತಾ.	ಮಹಿಳೆ	೪೨	ಇಲ್ಲ	ಕೃಷಿಕೂಲಿ
೩೨	ರತ್ನಮ್ಮ, ಗೋನೂರು ಗ್ರಾ, ಚಿತ್ರದುರ್ಗ ತಾ.	ಮಹಿಳೆ	೫೮	ಇಲ್ಲ	ಕೃಷಿಕೂಲಿ
೩೩	ರಾಜಪ್ಪ, ಭರಮಸಾಗರ ಗ್ರಾ, ಚಿತ್ರದುರ್ಗ ತಾ.	ಪುರುಷ	೪೪	ಬಿಇಡ್	ಪ್ರಥಮ ದರ್ಜೆ ಸಹಾಯಕ
೩೪	ರಾಮಣ್ಣ ಕೆ, ಜಾನಕೊಂಡ ಗ್ರಾ, ಚಿತ್ರದುರ್ಗ ತಾ.	ಪುರುಷ	೮೦	ಇಲ್ಲ	ಕೃಷಿಕೂಲಿ
೩೫	ರೇಣುಕಮ್ಮ, ಕೊನಬೇವು ಗ್ರಾ, ಚಿತ್ರದುರ್ಗ ತಾ.	ಮಹಿಳೆ	೭೬	ಇಲ್ಲ	ಕೃಷಿಕೂಲಿ
೩೬	ಶಂಬುಲಿಂಗಪ್ಪ ಜಿ ಜಾನಕೊಂಡ ಗ್ರಾ, ಚಿತ್ರದುರ್ಗ ತಾ.	ಪುರುಷ	೫೮	೧೦ನೇ ತರಗತಿ	ಗ್ರಾಮ ಪಂಚಾಯ್ತಿ ಸದಸ್ಯರು
೩೭	ಶಾರದಮ್ಮ, ಗೋನೂರು ಗ್ರಾ, ಚಿತ್ರದುರ್ಗ ತಾ.	ಮಹಿಳೆ	೩೯	೯ನೇ ತರಗತಿ	ಕೃಷಿಕೂಲಿ
೩೮	ಸಾಕಮ್ಮ, ಕೊನಬೇವು ಗ್ರಾ, ಚಿತ್ರದುರ್ಗ ತಾ.	ಮಹಿಳೆ	೬೭	ಇಲ್ಲ	ಕೃಷಿಕೂಲಿ
೩೯	ಸಿದ್ದಮ್ಮ, ಭರಮಸಾಗರ ಗ್ರಾ, ಚಿತ್ರದುರ್ಗ ತಾ.	ಮಹಿಳೆ	೬೬	ಇಲ್ಲ	ಕೃಷಿಕೂಲಿ
೪೦	ಸುಶೀಲಮ್ಮ, ಜಾನಕೊಂಡ ಗ್ರಾ,ಚಿತ್ರದುರ್ಗ ತಾ.	ಮಹಿಳೆ	೩೭	ಡಿಇಡ್	ಶಿಕ್ಷಕಿ
೪೧	ಅಂಜಿನಪ್ಪ, ಚಿಕ್ಕೇರಹಳ್ಳಿ ಗ್ರಾ, ಮೊಳಕಾಲ್ಮುರು ತಾ.	ಪುರುಷ	೪೮	ಇಲ್ಲ	ಕೃಷಿಕೂಲಿ
೪೨	ಈರಣ್ಣ, ನೇರ್ಲಹಳ್ಳಿ ಗ್ರಾ, ಮೊಳಕಾಲ್ಮುರು ತಾ.	ಪುರುಷ	೫೫	ಇಲ್ಲ	ವ್ಯವಸಾಯ
೪೩	ಕೊಲ್ಲಾರಪ್ಪ, ನೇರ್ಲಹಳ್ಳಿ ಗ್ರಾ, ಮೊಳಕಾಲ್ಮುರು ತಾ.	ಪುರುಷ	೮೨	೨ನೇ ತರಗತಿ	ವ್ಯವಸಾಯ
೪೪	ಕೊಲ್ಲಾಣ್ಣ, ಕೊನಸಾಗರ ಗ್ರಾ, ಮೊಳಕಾಲ್ಮುರು ತಾ.	ಪುರುಷ	೪೦	೧೦ನೇ ತರಗತಿ	ಡ್ರೈವರು
೪೫	ಚಂದ್ರಪ್ಪ, ಕೊನಸಾಗರ ಗ್ರಾ, ಮೊಳಕಾಲ್ಮುರು ತಾ.	ಪುರುಷ	೫೫	ಇಲ್ಲ	ಕೃಷಿಕೂಲಿ

೪೬	ಗಂಗಣ್ಣ, ರಾಜಪುರ ಗ್ರಾ, ಮೊಳಕಾಲ್ಮುರು ತಾ.	ಪುರುಷ	೬೯	೬ನೇ ತರಗತಿ	ಕೃಷಿಕೂಲಿ
೪೭	ತಿಪ್ಪೇಸ್ವಾಮಿ, ಕೊನಸಾಗರ ಗ್ರಾ, ಮೊಳಕಾಲ್ಮುರು ತಾ.	ಪುರುಷ	೬೯	೩ನೇ ತರಗತಿ	ಕೃಷಿಕೂಲಿ
೪೮	ತಿಮ್ಮಣ್ಣ, ರಾಜಪುರ ಗ್ರಾ, ಮೊಳಕಾಲ್ಮುರು ತಾ.	ಪರುಷ	೫೬	೯ನೇ ತರಗತಿ	ವ್ಯವಸಾಯ, ಮಾಜಿ ಗ್ರಾಮ ಪಂಚಾಯ್ತಿ ಸದಸ್ಯರು
೪೯	ದುರುಗಪ್ಪ, ನೇರ್ಲಹಳ್ಳಿ ಗ್ರಾ, ಮೊಳಕಾಲ್ಮುರು ತಾ.	ಪುರುಷ	೬೨	೪ನೇ ತರಗತಿ	ಚಮ್ಮಗಾರಿಕೆ
೫೦	ಪೆನ್ನಕ್ಕ, ಕೊನಸಾಗರ ಗ್ರಾ, ಮೊಳಕಾಲ್ಮುರು ತಾ.	ಮಹಿಳೆ	೬೫	ಇಲ್ಲ	ತರಕಾರಿ ವ್ಯಾಪಾರ
೫೧	ಬಸಣ್ಣ ಪಿ, ಕೊನಸಾಗರ ಗ್ರಾ, ಮೊಳಕಾಲ್ಮುರು ತಾ.	ಪುರುಷ	೪೬	೯ನೇ ತರಗತಿ	ವ್ಯವಸಾಯ, ಮಾಜಿ ಗ್ರಾಮ ಪಂಚಾಯ್ತಿ ಸದಸ್ಯರು
೫೨	ವ್ಮರಿಯಪ್ಪ, ಚಿಕ್ಕೇರಹಳ್ಳಿ ಗ್ರಾ, ಮೊಳಕಾಲ್ಮುರು ತಾ.	ಪುರುಷ	೪೯	೧೦ನೇ ತರಗತಿ	ವ್ಯವಸಾಯ, ಮಾಜಿ ಗ್ರಾಮ ಪಂಚಾಯ್ತಿ ಸದಸ್ಯರು
೫೩	ಮಲಿಯಮ್ಮ, ಚಿಕ್ಕೇರಹಳ್ಳಿ ಗ್ರಾ, ಮೊಳಕಾಲ್ಮುರು ತಾ.	ಮಹಿಳೆ	೬೯	೧೦ನೇ ತರಗತಿ	ಅಂಗನವಾಡಿ ಶಿಕ್ಷಕಿ
೫೪	ಲಕ್ಷ್ಮಮ್ಮ, ಚಿಕ್ಕೇರಹಳ್ಳಿ ಗ್ರಾ, ಮೊಳಕಾಲ್ಮುರು ತಾ.	ಮಹಿಳೆ	೬೬	೬ನೇ ತರಗತಿ	ಕೃಷಿಕೂಲಿ
೫೫	ಸಣ್ಣ ಈರಮ್ಮ, ನೇರ್ಲಹಳ್ಳಿ ಗ್ರಾ, ಮೊಳಕಾಲ್ಮುರು ತಾ.	ಮಹಿಳೆ	೭೫	ಇಲ್ಲ	ಕೃಷಿಕೂಲಿ
೫೬	ಸಣ್ಣತಮ್ಮಪ್ಪ, ನೇರ್ಲಹಳ್ಳಿ ಗ್ರಾ, ಮೊಳಕಾಲ್ಮುರು ತಾ.	ಪುರಷ	೫೯	೩ನೇ ತರಗತಿ	ಕೃಷಿಕೂಲಿ
೫೭	ಸಣ್ಣ ದುರುಗಪ್ಪ, ಚಿಕ್ಕೇರಹಳ್ಳಿ ಗ್ರಾ, ಮೊಳಕಾಲ್ಮುರು ತಾ.	ಪುರುಷ	೫೬	೨ನೇ ತರಗತಿ	ಕೃಷಿಕೂಲಿ
೫೮	ಸಣ್ಣಮಾರಣ್ಣ, ರಾಜಪುರ ಗ್ರಾ, ಮೊಳಕಾಲ್ಮುರು ತಾ.	ಪುರುಷ	೮೦	ಇಲ್ಲ	ಕೃಷಿಕೂಲಿ
೫೯	ಹುಲಿಗಮ್ಮ, ರಾಜಪುರ ಗ್ರಾ, ಮೊಳಕಾಲ್ಮುರು ತಾ.	ಮಹಿಳೆ	೬೦	ಇಲ್ಲ	ಕೃಷಿಕೂಲಿ

೬೦	ಹೊನ್ನೂರಪ್ಪ, ರಾಜಪುರ ಗ್ರಾ, ಮೊಳಕಾಲ್ಮುರು ತಾ.	ಪುರುಷ	೭೨	೨ನೇ ತರಗತಿ	ಕೃಷಿಕೂಲಿ
೬೧	ಕರಿಯಣ್ಣ, ಬುರುಜಿನರೊಪ್ಪ ಗ್ರಾ, ಹಿರಿಯೂರು ತಾ.	ಪುರುಷ	೭೨	ಇಲ್ಲ	ಕೃಷಿಕೂಲಿ
೬೨	ಕರಿಯಣ್ಣ, ಧರ್ಮಪುರ ಗ್ರಾ, ಹಿರಿಯೂರು ತಾ.	ಪುರುಷ	೫೮	ಇಲ್ಲ	ಕೃಷಿಕೂಲಿ
೬೩	ಕರಿಯಮ್ಮ, ಬುರುಜಿನರೊಪ್ಪ ಗ್ರಾ, ಹಿರಿಯೂರು ತಾ.	ಮಹಿಳೆ	೬೧	ಇಲ್ಲ	ಕೃಷಿಕೂಲಿ
೬೪	ಗೀತ ಎಸ್ ಟಿ, ಧರ್ಮಪುರ ಗ್ರಾ, ಹಿರಿಯೂರು ತಾ.	ಮಹಿಳೆ	೩೫	ಪಿಯುಸಿ	ಗ್ರಾಮ ಪಂಚಾಯ್ತಿ ಸದಸ್ಯರು
೬೫	ಚಂದ್ರಶೇಖರ, ಧರ್ಮಪುರ ಗ್ರಾ, ಹಿರಿಯೂರು ತಾ.	ಪುರುಷ	೬೯	೭ನೇ ತರಗತಿ	ಗ್ರಾಮ ಪಂಚಾಯ್ತಿ ಸದಸ್ಯರು
೬೬	ಜಯಮ್ಮ, ಬುರುಜಿನರೊಪ್ಪ ಗ್ರಾ, ಹಿರಿಯೂರು ತಾ.	ಮಹಿಳೆ	೪೬	೩ನೇ ತರಗತಿ	ಗ್ರಾಮ ಪಂಚಾಯ್ತಿ ಸದಸ್ಯರು
೬೭	ತಿಪ್ಪೇಸ್ವಾಮಿ ಹೆ ಓ, ದಿಂಡಾವರ ಗ್ರಾ, ಹಿರಿಯೂರು ತಾ.	ಪುರುಷ	೪೩	ಎಂ ಎ	ಪ್ರಥಮ ದರ್ಜೆ ಸಹಾಯಕ, ಜಿಲ್ಲಾ ಅಡಳಿತ, ಚಿತ್ರದುರ್ಗ
೬೮	ತಿಪ್ಪೇಸ್ವಾಮಿ, ಧರ್ಮಪುರ ಗ್ರಾ, ಹಿರಿಯೂರು ತಾ.	ಪುರುಷ	೬೧	೯ನೇ ತರಗತಿ	ಪೌರಕಾರ್ಮಿಕ
೬೯	ತಿಪ್ಪಕ್ಕ, ಹರ್ತಿಕೋಟೆ ಗ್ರಾ, ಹಿರಿಯೂರು ತಾ.	ಮಹಿಳೆ	೬೪	ಇಲ್ಲ	ಕೃಷಿಕೂಲಿ
೭೦	ತಿಮ್ಮರಾಯ, ಹರ್ತಿಕೋಟೆ ಗ್ರಾ, ಹಿರಿಯೂರು ತಾ.	ಪುರುಷ	೪೮	೩ನೇ ತರಗತಿ	ಕೃಷಿಕೂಲಿ
೭೧	ನಾಗರತ್ನಮ್ಮ, ದಿಂಡಾವರ ಗ್ರಾ, ಹಿರಿಯೂರು ತಾ.	ಮಹಿಳೆ	೪೮	ಇಲ್ಲ	ಕೃಷಿಕೂಲಿ
೭೨	ನಾಗರಾಜ, ಹರ್ತಿಕೋಟೆ ಗ್ರಾ, ಹಿರಿಯೂರು ತಾ.	ಪುರುಷ	೭೨	ಇಲ್ಲ	ಕೃಷಿಕೂಲಿ
೭೩	ನಿಲಕಂಠಪ್ಪ, ಕೆದಿಂಡಾವರ ಗ್ರಾ, ಹಿರಿಯೂರು ತಾ.	ಪುರುಷ	೪೬	೪ನೇ ತರಗತಿ	ಡ್ರೈವರು
೭೪	ದುರುಗಪ್ಪ, ಬುರುಜಿನರೊಪ್ಪ ಗ್ರಾ, ಹಿರಿಯೂರು ತಾ.	ಪುರುಷ	೮೧	೨ನೇ ತರಗತಿ	ಕೃಷಿಕೂಲಿ

೭೫	ಮಲ್ಲಿಕಾರ್ಜುನ ಬಿ, ಬುರುಜಿನರೊಪ್ಪ ಗ್ರಾ, ಹಿರಿಯೂರು ತಾ.	ಪುರುಷ	೬೦	೯ನೇ ತರಗತಿ	ಗ್ರಾಮ ಪಂಚಾಯ್ತಿ ಸದಸ್ಯರು
೭೬	ರಮೇಶ, ಹರ್ತಿಕೋಟೆ ಗ್ರಾ, ಹಿರಿಯೂರು ತಾ.	ಪುರುಷ	೫೪	೧೦ನೇ ತರಗತಿ	ಗ್ರಾಮ ಪಂಚಾಯ್ತಿ ಸದಸ್ಯರು
೭೭	ರಾಮಣ್ಣ, ದಿಂಡಾವರ ಗ್ರಾ, ಹಿರಿಯೂರು ತಾ.	ಪುರುಷ	೭೦	೨ನೇ ತರಗತಿ	ಗ್ರಾಮ ಪಂಚಾಯ್ತಿ ಸದಸ್ಯರು
೭೮	ಲಲಿತಮ್ಮ, ದಿಂಡಾವರ ಗ್ರಾ, ಹಿರಿಯೂರು ತಾ.	ಮಹಿಳೆ	೬೩	ಇಲ್ಲ	ಕೃಷಿಕೂಲಿ
೭೯	ಸದಾಶಿವಯ್ಯ, ಹರ್ತಿಕೋಟೆ ಗ್ರಾ, ಹಿರಿಯೂರು ತಾ.	ಪುರುಷ	೪೯	೨ನೇ ತರಗತಿ	ಕೃಷಿಕೂಲಿ
೮೦	ಶಿವಣ್ಣ, ಧರ್ಮಪುರ ಗ್ರಾ, ಹಿರಿಯೂರು ತಾ.	ಪುರುಷ	೫೫	೮ನೇ ತರಗತಿ	ಪೌರಕಾರ್ಮಿಕ
೮೧	ಕರಿಯಪ್ಪ, ಮಾಡದಕೆರೆ ಗ್ರಾ, ಹೊಸದುರ್ಗ ತಾ.	ಪುರುಷ	೭೫	ಇಲ್ಲ	ಕೃಷಿಕೂಲಿ
೮೨	ಕುಮಾರಪ್ಪ, ದೊಡ್ಡಘಟ್ಟ ಗ್ರಾ, ಹೊಸದುರ್ಗ ತಾ.	ಪುರುಷ	೪೮	ಇಲ್ಲ	(ದೇವದಾಸ) ಕೃಷಿಕೂಲಿ
೮೩	ಕೃಷ್ಣಮೂರ್ತಿ, ಮಾಡದಕೆರೆ ಗ್ರಾ, ಹೊಸದುರ್ಗ ತಾ.	ಪುರುಷ	೯೦	ಇಲ್ಲ	ಕೃಷಿಕೂಲಿ
೮೪	ಗಂಗಮ್ಮ, ಗೊವಿನಕಲ್ಲು ಗ್ರಾ, ಹೊಸದುರ್ಗ ತಾ.	ಮಹಿಳೆ	೪೮	ಇಲ್ಲ	ಕೃಷಿಕೂಲಿ
೮೫	ಗಿಡ್ಡ ರಾಮಪ್ಪ, ಶ್ರೀರಾಂಪುರ ಗ್ರಾ, ಹೊಸದುರ್ಗ ತಾ.	ಪುರುಷ	೬೪	ಇಲ್ಲ	ಕೃಷಿಕೂಲಿ
೮೬	ಗುರುಮೂರ್ತಿ, ದೊಡ್ಡಘಟ್ಟ ಗ್ರಾ, ಹೊಸದುರ್ಗ ತಾ.	ಪುರುಷ	೪೨	೧೦ನೇ ತರಗತಿ	ಕೈಗಾರಿಕೆಯಲ್ಲಿ ದಿನಗೂಲಿ ಕಾರ್ಮಿಕರು
೮೭	ಚಂದ್ರಪ್ಪ, ಮಾಡದಕೆರೆ ಗ್ರಾ, ಹೊಸದುರ್ಗ ತಾ.	ಪುರುಷ	೬೭	೬ನೇ ತರಗತಿ	ಕೃಷಿಕೂಲಿ
೮೮	ಚಂದ್ರಮ್ಮ, ಮಾಡದಕೆರೆ ಗ್ರಾ, ಹೊಸದುರ್ಗ ತಾ.	ಮಹಿಳೆ	೭೦	ಇಲ್ಲ	ಕೃಷಿಕೂಲಿ
೮೯	ನಾಗಪ್ಪ, ಗೊವಿನಕಲ್ಲು ಗ್ರಾ, ಹೊಸದುರ್ಗ ತಾ.	ಪುರುಷ	೪೫	೭ನೇ ತರಗತಿ	ಜವನ(ಗ್ರಾಮ ಪಂಚಾಯ್ತಿ)
೯೦	ಪಾರಮ್ಮ, ಶ್ರೀರಾಂಪುರ ಗ್ರಾ, ಹೊಸದುರ್ಗ ತಾ.	ಮಹಿಳೆ	೪೮	ಇಲ್ಲ	ಕೃಷಿಕೂಲಿ

೯೧	ಪೂಜಾರಿ ಪಾಲಪ್ಪ, ದೊಡ್ಡಘಟ್ಟ ಗ್ರಾ, ಹೊಸದುರ್ಗ ತಾ.	ಪುರುಷ	೫೫	೩ನೇ ತರಗತಿ	ದೇವರ ಪೂಜಾರಿ
೯೨	ಮಂಜಮ್ಮ, ಶ್ರೀರಾಂಪುರ ಗ್ರಾ, ಹೊಸದುರ್ಗ ತಾ.	ಮಹಿಳೆ	೪೬	ಇಲ್ಲ	ಕೃಷಿಕೂಲಿ
೯೩	ಯೋಗಿರಂಗಪ್ಪ, ಶ್ರೀರಾಂಪುರ ಗ್ರಾ, ಹೊಸದುರ್ಗ ತಾ.	ಪುರುಷ	೫೧	ಇಲ್ಲ	ಕೃಷಿಕೂಲಿ
೯೪	ರಂಗಪ್ಪ, ಗೊವಿನಕಲ್ಲು ಗ್ರಾ, ಹೊಸದುರ್ಗ ತಾ.	ಪುರುಷ	೬೮	೭ನೇ ತರಗತಿ	ಕೃಷಿಕೂಲಿ
೯೫	ರಾಮಚಂದ್ರಪ್ಪ, ಶ್ರೀರಾಂಪುರ ಗ್ರಾ, ಹೊಸದುರ್ಗ ತಾ.	ಪುರುಷ	೪೫	೪ನೇ ತರಗತಿ	ಕೃಷಿಕೂಲಿ
೯೬	ರುದ್ರಮ್ಮ, ಮಾಡದಕೆರೆ ಗ್ರಾ, ಹೊಸದುರ್ಗ ತಾ.	ಮಹಿಳೆ	೩೫	೯ನೇ ತರಗತಿ	ಕೃಷಿಕೂಲಿ
೯೭	ವೆಂಕಟೇಶ ಡಿ, ದೊಡ್ಡಘಟ್ಟ ಗ್ರಾ, ಹೊಸದುರ್ಗ ತಾ.	ಪುರುಷ	೪೫	೧೦ನೇ ತರಗತಿ	ಅರಣ್ಯ ಇಲಾಖೆಯಲ್ಲಿ ದಿನಗೂಲಿ ನೌಕರ
೯೮	ಶಿವಪ್ಪ, ಗೊವಿನಕಲ್ಲು ಗ್ರಾ, ಹೊಸದುರ್ಗ ತಾ.	ಪುರುಷ	೫೩	೩ನೇತರಗತಿ	ಕೃಷಿಕೂಲಿ
೯೯	ಹನುಮಂತಪ್ಪ, ಗೊವಿನಕಲ್ಲು ಗ್ರಾ, ಹೊಸದುರ್ಗ ತಾ.	ಪುರುಷ	೫೧	೧೦ನೇ ತರಗತಿ	ಕೃಷಿಕೂಲಿ
೧೦೦	ಕೃಷ್ಣಪ್ಪ, ಅಂಬೇಡ್ಕರ್ ನಗರ, ಹೊಳಲ್ಕೆರೆ ತಾ.	ಪುರುಷ	೮೦	ಇಲ್ಲ	ಕೃಷಿಕೂಲಿ
೧೦೧	ಗಿರೀಶ, ತಾಳ್ಯ ಗ್ರಾ, ಹೊಳಲ್ಕೆರೆ ತಾ.	ಪುರುಷ	೨೮	೧೦ನೇ ತರಗತಿ	ಕೃಷಿಕೂಲಿ
೧೦೨	ಗೀತಮ್ಮ, ತಾಳ್ಯ ಗ್ರಾ, ಹೊಳಲ್ಕೆರೆ ತಾ.	ಮಹಿಳೆ	೩೫	ಇಲ್ಲ	ಕೃಷಿಕೂಲಿ
೧೦೩	ಚಂದ್ರಪ್ಪ, ಹೆಚ್ ಡಿ ಪುರ ಗ್ರಾ, ಹೊಳಲ್ಕೆರೆ ತಾ.	ಪುರುಷ	೪೦	೧೦ನೇ ತರಗತಿ	ಗ್ರಾಮ ಪಂಚಾಯ್ತಿ ಸದಸ್ಯರು
೧೦೪	ಚಂದ್ರಪ್ಪ, ತಾಳ್ಯ ಗ್ರಾ, ಹೊಳಲ್ಕೆರೆ ತಾ.	ಪುರುಷ	೪೫	ಬಿಇಡ್	ಶಿಕ್ಷಕರು
೧೦೫	ದೊಡ್ಡಹಾಲಪ್ಪ, ಚಿಕ್ಕಮ್ಮಿಗನೂರು ಗ್ರಾ, ಹೊಳಲ್ಕೆರೆ ತಾ.	ಪುರುಷ	೬೮	ಇಲ್ಲ	ಕೃಷಿಕೂಲಿ

೧೦೬	ದುರುಗಪ್ಪ, ಅಂಬೇಡ್ಕರ್ ನಗರ, ಹೊಳಲ್ಕೆರೆ ತಾ.	ಪುರುಷ	೫೬	೬ನೇ ತರಗತಿ	ಪೌರಕಾರ್ಮಿಕ
೧೦೭	ದುರುಗಪ್ಪ, ಹೆಚ್ ಡಿ ಪುರ ಗ್ರಾ, ಹೊಳಲ್ಕೆರೆ ತಾ.	ಪುರುಷ	೪೨	೪ನೇ ತರಗತಿ	ಕೃಷಿಕೂಲಿ
೧೦೮	ದ್ಯಾಮಕ್ಕ, ತಾಳ್ಯ ಗ್ರಾ, ಹೊಳಲ್ಕೆರೆ ತಾ.	ಮಹಿಳೆ	೭೮	ಇಲ್ಲ	ಕೃಷಿಕೂಲಿ
೧೦೯	ನೀಲಪ್ಪ, ಚಿಕ್ಕಮ್ಮಿಗನೂರು ಗ್ರಾ, ಹೊಳಲ್ಕೆರೆ ತಾ.	ಪುರುಷ	೭೧	ಇಲ್ಲ	ಕೃಷಿಕೂಲಿ
೧೧೦	ಭೈರಪ್ಪ, ಅಂಬೇಡ್ಕರ್ ನಗರ, ಹೊಳಲ್ಕೆರೆ ತಾ.	ಪುರುಷ	೫೫	೭ನೇ ತರಗತಿ	ಪೌರಕಾರ್ಮಿಕ
೧೧೧	ಮಾರುತೀಶ, ತಾಳ್ಯ ಗ್ರಾ, ಹೊಳಲ್ಕೆರೆ ತಾ.	ಪುರುಷ	೩೭	ಡಿಇಡ್	ಶಿಕ್ಷಕರು
೧೧೨	ರಂಗಪ್ಪ, ಅಂಬೇಡ್ಕರ್ ನಗರ, ಹೊಳಲ್ಕೆರೆ ತಾ.	ಪುರುಷ	೬೯	೭ನೇ ತರಗತಿ	ಪಿ ಡಬ್ಲ್ಯೂ ಡಿ ಡ್ರೈವರು
೧೧೩	ರತ್ನಮ್ಮ, ಚಿಕ್ಕಮ್ಮಿಗನೂರು ಗ್ರಾ, ಹೊಳಲ್ಕೆರೆ ತಾ.	ಮಹಿಳೆ	೬೦	ಇಲ್ಲ	ಕೃಷಿಕೂಲಿ
೧೧೪	ರಮೇಶ, ತಾಳ್ಯ ಗ್ರಾ, ಹೊಳಲ್ಕೆರೆ ತಾ.	ಪುರುಷ	೩೩	ಇಲ್ಲ	ಕೃಷಿಕೂಲಿ
೧೧೫	ರಾಜಪ್ಪ, ಅಂಬೇಡ್ಕರ್ ನಗರ, ಹೊಳಲ್ಕೆರೆ ತಾ.	ಪುರುಷ	೪೫	ಪಿಯುಸಿ	ಪಟ್ಟಣ ಪಂಚಾಯಿತಿ ಸದಸ್ಯರ
೧೧೬	ರುದ್ರಪ್ಪ, ಚಿಕ್ಕಮ್ಮಿಗನೂರು ಗ್ರಾ, ಹೊಳಲ್ಕೆರೆ ತಾ.	ಪುರುಷ	೮೦	ಇಲ್ಲ	ಕೃಷಿಕೂಲಿ
೧೧೭	ಲೋಕಪ್ಪ, ತಾಳ್ಯ ಗ್ರಾ, ಹೊಳಲ್ಕೆರೆ ತಾ.	ಪುರುಷ	೫೯	ಇಲ್ಲ	ಕೃಷಿಕೂಲಿ
೧೧೮	ಹನುಮಂತಪ್ಪ, ಅಂಬೇಡ್ಕರ್ ನಗರ, ಹೊಳಲ್ಕೆರೆ ತಾ.	ಪುರುಷ	೭೦	೭ನೇ ತರಗತಿ	ಪಿ ಡಬ್ಲ್ಯೂ ಡಿ ಡ್ರೈವರು
೧೧೯	ಹನುಮಂತಮ್ಮ, ತಾಳ್ಯ ಗ್ರಾ, ಹೊಳಲ್ಕೆರೆ ತಾ.	ಮಹಿಳೆ	೬೦	ಇಲ್ಲ	ಕೃಷಿಕೂಲಿ
೧೨೦	ಹಾಲಪ್ಪ, ಅಂಬೇಡ್ಕರ್ ನಗರ, ಹೊಳಲ್ಕೆರೆ ತಾ.	ಪುರುಷ	೫೦	ಬಿ ಎ	ಪ್ರಥಮ ದರ್ಜೆ ಸಹಾಯಕರು, ಪಟ್ಟಣ ಪಂಚಾಯಿತಿ

ಅಂಕಿ ಅಂಶಗಳು

ಚಿತ್ರದುರ್ಗ ಜಿಲ್ಲೆಯ ಬರುವ ಮಾದಿಗ ಸಮುದಾಯದ ಗ್ರಾಮ ಪಂಚಾಯಿತ್ ಅಧ್ಯಕ್ಷ, ಉಪಾಧ್ಯಕರು ಮತ್ತು ಸದಸ್ಯರ ಮಾಹಿತಿ ವಿವರ

೧. ಚಳ್ಳಕೆರೆ ತಾಲೂಕಿನ ಗ್ರಾಮ ಪಂಚಾಯಿತ್‌ಗಳು

ಕ್ರ ಸಂ	ಗ್ರಾಮ ಪಂಚಾಯ್ತಿ	ಸದಸ್ಯರ ಹೆಸರುಗಳು ಮತ್ತು ವಿಳಾಸ	ಸದಸ್ಯರ ಸಂಖ್ಯೆ	ಒಟ್ಟು ಸದಸ್ಯರ ಸಂಖ್ಯೆ
೧	ಅಬ್ಬೇನಹಳ್ಳಿ	ಬಸಪ್ಪ ಆರ್ (ಉಪಾಧ್ಯಕ್ಷರು), ತೊರೆಕೊಲಮ್ಮನಹಳ್ಳಿ ಗ್ರಾ, ಮೊ: ೭೮೯೬೨೯೬೬೮೬		
		ಶಾಂತಮ್ಮ, ಅಬ್ಬೇನಹಳ್ಳಿ ಗ್ರಾ, ಮೊ: ೮೮೬೧೬೭೦೧೯೫		
		ಮಾರಕ್ಕ, ಮಲ್ಲೇಬೇಕನಹಳ್ಳಿ ಗ್ರಾ, ಮೊ: ೮೧೫೨೯೮೭೭೬೬	೦೩	೧೯
೨	ಎನ್ ಮಹದೇವಪುರ	ತಿಪ್ಪಕ್ಕ, ಎನ್ ಮಹದೇವಪುರ ಗ್ರಾ, ಮೊ: ೯೯೬೪೬೮೮೩೧೬		
		ನಿಂಗಪ್ಪ ಜಿ, ಎನ್ ಮಹದೇವಪುರ ಗ್ರಾ, ಮೊ: ೯೧೬೪೭೭೦೪೭೪	೦೨	೧೩
೩	ಎನ್ ದೇವರಹಳ್ಳಿ	ರತ್ನಮ್ಮ (ಅಧ್ಯಕ್ಷರು), ಎನ್ ದೇವರಹಳ್ಳಿ ಗ್ರಾ, ಮೊ: ೮೪೯೬೯೫೫೪೯೨		
		ಕೆಂಚಮ್ಮ, ವರವು ಗ್ರಾ, ಮೊ: ೯೫೯೧೯೪೬೮೮೧		
		ರುದ್ರಪ್ಪ, ವರವುಕಾವಲು ಗ್ರಾ, ಮೊ: ೮೧೦೫೫೩೯೧೭	೦೩	೧೪
೪	ಓಬಳಾಪುರ	ಸುದಾ, ತಿಪ್ಪರೆಡ್ಡಿಹಳ್ಳಿ ಗ್ರಾ, ಮೊ: ೯೦೦೨೪೧೫೧೩		
		ಭಾಗ್ಯಮ್ಮ ಆರ್, ದೋಣಿಹಳ್ಳಿ ಗ್ರಾ, ಮೊ: ೯೫೩೫೨೧೮೮೩೪		

		ದುರುಗೇಶಿ ಎಮ್, ಓಬಳಾಪುರ ಗ್ರಾ, ಮೊ: ೯೬೬೩೯೦೨೪೪೨	೦೩	೧೮
೫	ಕಾಲುವೇಹಳ್ಳಿ	ರೇಣುಕಮ್ಮ (ಅಧ್ಯಕ್ಷರು), ಕ್ಯಾತಗೊಂಡನಹಳ್ಳಿ ಗ್ರಾ, ಮೊ: ೭೦೨೨೮೨೪೦೦೭	೦೧	೧೪
೬	ಗೋಪನಹಳ್ಳಿ	ಕರಾವತಿ ಜಿ ಆರ್ (ಅಧ್ಯಕ್ಷರು), ಗೋಪನಹಳ್ಳಿ ಗ್ರಾ, ಮೊ: ೯೫೯೧೨೬೭೦೮೯		
		ದ್ಯಾಮಮ್ಮ ಎಂ, ಗೋಪನಹಳ್ಳಿ ಗ್ರಾ, ಮೊ: ೯೪೮೯೨೮೦೫೨೬		
		ರಾಜಣ್ಣ, ಚಿಕ್ಕೇನಹಳ್ಳಿ ಗ್ರಾ, ಮೊ: ೮೫೪೬೮೧೬೭೪೨		
		ತಿಪ್ಪೇಸ್ವಾಮಿ ಜಿ ಹೆಚ್, ಗೋಪನಹಳ್ಳಿ ಗ್ರಾ, ಮೊ: ೯೫೩೮೯೧೫೮೬೭	೦೪	೧೭
೭	ಗೌಡಗೆರೆ	ತಿಪ್ಪೀರಮ್ಮ (ಅಧ್ಯಕ್ಷರು), ಮಲ್ಲೂರಹಟ್ಟಿ ಗ್ರಾ, ಮೊ: ೮೮೬೧೬೮೨೦೮೫		
		ತಿಪ್ಪಮ್ಮ, ಗೌಡಗೆರೆ ಗ್ರಾ, ಮೊ: ೫೪೭೮೯೬೫೮೪೭		
		ತಿಪ್ಪೇಸ್ವಾಮಿ, ಜೋಗಿಹಟ್ಟಿ ಗ್ರಾ, ಮೊ: ೮೯೭೪೫೮೯೬೫೮	೦೩	೧೩
೮	ಗೌರಸಮುದ್ರ	ಗುರುಲಿಂಗಪ್ಪ (ಅಧ್ಯಕ್ಷರು), ಓಬನಹಳ್ಳಿ ಗ್ರಾ, ಮೊ: ೮೮೬೧೬೨೦೮೨೪		
		ಜಯಮ್ಮ, ಹನುಮಂತನಹಳ್ಳಿ ಗ್ರಾ, ಮೊ: ೭೨೫೯೩೭೭೬೭೦		
		ಮಂಜುಳಾ, ಬಂಡೇತಿಮ್ಲಾಪುರ ಗ್ರಾ, ಮೊ: ೯೭೪೨೫೬೬೫೭೪		
		ಮಲ್ಲೇಶ ಟಿ, ಗೌರಸಮುದ್ರ ಗ್ರಾ, ಮೊ: ೮೯೭೧೯೮೩೩೪೧	೦೪	೨೪
೯	ಘಟಪರ್ತಿ	ವಸಂತ, ಹೊನ್ನೂರು ಗ್ರಾ, ಮೊ: ೭೦೨೬೫೧೯೪೦೦		
		ವರಲಕ್ಷ್ಮಿ, ಘಟಪರ್ತಿ ಗ್ರಾ,, ಮೊ: ೮೭೪೮೦೭೭೫೮೨		
		ನಿಂಗಪ್ಪ , ಘಟಪರ್ತಿ ಗ್ರಾ, ಮೊ: ೮೧೫೨೦೨೨೧೬೪		
		ಮಹಾಂತೇಶ ಬಿ, ಘಟಪರ್ತಿ ಗ್ರಾ, ಮೊ: ೯೮೪೪೭೩೫೮೯೨		

		ಏಕಾಂತಮ್ಮ, ಘಟಪರ್ತಿ ಗ್ರಾ, ಮೊ: ೮೧೯೭೩೩೪೭೦೬	೦೫	೧೯
೧೦	ಚನ್ನಮ್ಮನಾಗತಿಹಳ್ಳಿ	ತಿಪ್ಪಮ್ಮ (ಉಪಾಧ್ಯಕ್ಷರು) ಮತ್ಸಮುದ್ರ ಗ್ರಾ, ಮೊ: ೮೧೯೭೧೧೭೮೦೫		
		ರಾಘವೇಂದ್ರ ಈ, ಹಾಲಗೊಂಡನಹಳ್ಳಿ ಗ್ರಾ, ಮೊ: ೯೮೮೦೧೨೫೨೯೮		
		ಪುತಿಮಾ, ಚಿಟ್ಟೋಕಂಬ ಗ್ರಾ, ಮೊ: ೯೬೩೨೪೫೧೩೪೯		
		ಲಕ್ಷ್ಮಿ, ದ್ಯಾವರನಹಳ್ಳಿ ಗ್ರಾ, ಮೊ: ೭೭೬೦೬೯೧೩೭೩		
		ಮಹಾದೇವಮ್ಮ, ಮತ್ಸಮುದ್ರ ಗ್ರಾ, ಮೊ: ೯೭೪೩೫೪೯೩೫೫		
		ರುದ್ರಮುನಿ ಹೆಚ್, ಪುರ್ತಿಹಳ್ಳಿ ಗ್ರಾ, ಮೊ: ೯೯೭೨೫೩೪೪೪೯		
		ಪಂಕಜ ಹೆಚ್. ಚನ್ನಮ್ಮನಾಗತಿಹಳ್ಳಿ ಗ್ರಾ, ಮೊ: ೯೯೦೦೮೦೪೪೨೩	೦೭	೧೮
೧೧	ಚೌಳೂರು	ಹನುಮಂತಪ್ಪ, ಜೆ ಜೆ ಕಾಲೊನಿ ಗ್ರಾ, ಮೊ: ೮೧೯೭೦೩೯೪೦೪		
		ದುರುಗಮ್ಮ, ಜಂಜರಗುಂಟೆ ಗ್ರಾ, ಮೊ: ೯೯೦೨೮೨೮೧೩೬		
		ವಿಜಯಕುಮಾರ ಎಲ್ ಹೆಚ್, ಸೂರನಹಳ್ಳಿ ಗ್ರಾ, ಮೊ: ೯೭೪೧೨೪೮೧೮೦		
		ಲಕ್ಷ್ಮಕ್ಕ, ಜಂಜರಗುಂಟೆ ಗ್ರಾ, ಮೊ: ೯೮೪೪೪೯೮೩೫೪		
		ಮಹದೇವಮ್ಮ, ಚೌಳೂರು ಗ್ರಾ, ಮೊ: ೮೧೫೦೮೦೧೯೯೬		
		ದೊಡ್ಡೀರಣ್ಣ ಈ, ಬಸವೇಶ್ವರಕಲೋನಿ ಗ್ರಾ, ಮೊ: ೯೭೩೧೨೮೪೭೭೯	೦೬	೧೯
೧೨	ಬೇಡರೆಡ್ಡಿಹಳ್ಳಿ	ಮಲ್ಲಕ್ಕ (ಆಧ್ಯಕ್ಷರು), ಬೇಡರೆಡ್ಡಿಹಳ್ಳಿ ಗ್ರಾ, ಮೊ: ೭೮೯೯೪೫೭೯೩೬		
		ಶಕುಂತುಮ್ಮ, ಬೇಡರೆಡ್ಡಿಹಳ್ಳಿ ಗ್ರಾ, ಮೊ: ೯೬೬೩೯೬೨೦೪೮		
		ವೀರಣ್ಣ ಬಿ ಎಂ, ಬೇಡರೆಡ್ಡಿಹಳ್ಳಿ ಗ್ರಾ, ಮೊ: ೯೮೦೫೬೭೦೪೨	೦೩	೧೩

೧೩	ಬೆಳಗೆರೆ	ಮಹದೇವಮ್ಮ, ಬೆಳಗೆರೆ ಗ್ರಾ, ಮೊ: ೯೮೮೬೨೭೯೭೮೫		
		ಈ ದ್ಯಾಮಣ್ಣ, ಹುಲಿಕುಂಟಿ ಗ್ರಾ,, ಮೊ: ೯೯೦೨೦೬೪೯೬೪		
		ರಂಗನಾಥ ಆರ್, ಕಲಮರಹಳ್ಳಿ ಗ್ರಾ, ಮೊ: ೯೫೯೧೯೪೭೯೦೩	೦೩	೨೧
೧೪	ಬುಡ್ನಹಟ್ಟಿ	ಅಶೋಕ ವಿ ಎಸ್, ವೀರದಿಮ್ಮಕಹಳ್ಳಿ ಗ್ರಾ, ಮೊ: ೯೪೮೧೬೫೯೧೦೧		
		ರಂಗಪ್ಪ ಡಿ ಆರ್, ದುರ್ಗಾವಾರ ಗ್ರಾ, ಮೊ: ೯೪೮೩೮೯೬೧೯೫		
		ಶಾರದಮ್ಮ, ಬುಡ್ನಹಟ್ಟಿ ಗ್ರಾ, ಮೊ: ೯೭೪೩೦೬೩೧೮೦		
		ನೀಲಮ್ಮ, ವೀರದಿಮ್ಮಕಹಳ್ಳಿ ಗ್ರಾ, ಮೊ: ೯೬೧೧೭೭೩೩೧೪		
		ಅನಿಲ್ ಕುಮಾರ, ಬುಡ್ನಹಟ್ಟಿ ಗ್ರಾ, ಮೊ: ೯೭೪೦೫೬೮೭೯೮	೦೫	೨೦
೧೫	ಜಾಜೂರು	ಭೀಮಕ್ಕ (ಅಧ್ಯಕ್ಷರು), ಜಾಜೂರು ಗ್ರಾ, ಮೊ: ೯೯೦೧೧೧೬೩೧೫		
		ರೂಪ ಎ, ಜಾಜೂರು ಗ್ರಾ, ಮೊ: ೯೫೩೫೬೦೫೩೨೮		
		ಕವಿತ, ಜಾಜೂರು ಗ್ರಾ, ಮೊ: ೮೧೦೫೩೩೨೩೫೬		
		ತಿಪ್ಪೇಸ್ವಾಮಿ ಟಿ ಎಸ್, ಜಾಜೂರು ಗ್ರಾ, ಮೊ: ೮೧೦೫೩೩೨೩೫೬	೦೪	೧೮
೧೬	ತಳುಕು	ಸುಮಿತ್ರಮ್ಮ, ತಳುಕು ಗ್ರಾ, ಮೊ: ೯೭೪೦೮೪೫೮೦೪		
		ವಿಜಯಮ್ಮ, ತಳುಕು ಗ್ರಾ, ಮೊ: ೮೯೭೦೦೪೮೭೫೦		
		ತಿಪ್ಪಕ್ಕ, ತಳುಕು ಗ್ರಾ, ಮೊ: ೯೧೬೪೧೭೧೦೪೩	೦೩	೨೩
೧೭	ತಿಮ್ಮಣ್ಣ ನಾಯಕನಕೋಟೆ	ಶಿವಮ್ಮ ಎ (ಉಪಾಧ್ಯಕ್ಷರು), ತಿಮ್ಮಣ್ಣ ನಾಯಕನಕೋಟೆ ಗ್ರಾ, ಮೊ: ೯೬೧೧೮೯೪೭೪೪		

		ಸುಮಲತ, ತಿಮ್ಮಣ್ಣ ನಾಯಕನಕೋಟೆ ಗ್ರಾ, ಮೊ: ೮೧೯೭೧೮೩೯೫		
		ಶ್ರೀನಿವಾಸಮೂರ್ತಿ ವೈ ಹೆಚ್, ತಿಮ್ಮಣ್ಣ ನಾಯಕನಕೋಟೆ ಗ್ರಾ, ಮೊ: ೯೯೧೬೫೫೬೦೧೬		
೧೮	ತಿಮ್ಮಪ್ಪಯ್ಯನಹಳ್ಳಿ	ನಿಂಗಪ್ಪ (ಉಪಾಧ್ಯಕ್ಷರು), ಗಜ್ಜಗಾನಹಳ್ಳಿ ಗ್ರಾ, ಮೊ: ೯೯೧೦೩೭೦೭೧೭		
		ಶಿವಮ್ಮ, ತಿಮ್ಮಪ್ಪಯ್ಯನಹಳ್ಳಿ ಗ್ರಾ, ಮೊ: ೯೫೩೫೨೮೫೪೬೮		
		ಮಂಜಣ್ಣ ಟಿ, ತಿಮ್ಮಪ್ಪಯ್ಯನಹಳ್ಳಿ ಗ್ರಾ, ಮೊ: ೯೬೧೧೪೯೮೧೨೩	೦೩	೧೮
೧೯	ದೇವರಮರಿಕುಂಟೆ	ಅಂಜಿನಪ್ಪ, ದೇವರಮರಿಕುಂಟೆ ಗ್ರಾ, ಮೊ: ೮೯೭೦೦೧೫೨೫೨		
		ಲೊಕೇಶ ಆರ್, ಬೊಂಬೇರಹಳ್ಳಿ ಗ್ರಾ, ಮೊ: ೮೮೬೧೬೮೭೮೦೧		
		ದೇವಿರಮ್ಮ, ವಡ್ಡೇರಹಳ್ಳಿ ಗ್ರಾ, ಮೊ: ೯೫೩೫೭೭೪೪೭೫	೦೩	೧೮
೨೦	ದೇವರೆಡ್ಡಿಹಳ್ಳಿ	ಸಣ್ಣಹನುಂತಪ್ಪ, ದೇವರಹಳ್ಳಿ ಗ್ರಾ, ಮೊ: ೯೭೪೩೪೪೭೯೩೦		
		ಅಶಾ, ದೇವರೆಡ್ಡಿಹಳ್ಳಿ ಗ್ರಾ, ಮೊ: ೯೧೬೪೦೧೮೧೯೦		
		ತಿಪ್ಪೇರುದ್ರಪ್ಪ ಬಿ ಎಲ್, ಬೋಗನಹಳ್ಳಿ ಗ್ರಾ, ಮೊ: ೯೯೮೦೧೮೮೧೮೧		
		ನೀಲಮ್ಮ, ಮಲ್ಲಸಮುದ್ರ ಗ್ರಾ, ಮೊ: ೮೯೭೦೫೭೯೦೦೫		
		ಲಕ್ಷ್ಮಿದೇವಿ, ಬುಕ್ಕಂಬೂದಿ ಗ್ರಾ, ಮೊ: ೯೫೩೫೮೪೯೪೩೨	೦೫	೨೪
೨೧	ದೊಡ್ಡಚೆಲ್ಲುರು	ಸಾಕಮ್ಮ (ಉಪಾಧ್ಯಕ್ಷರು), ದೊಡ್ಡಚೆಲ್ಲುರು ಗ್ರಾ, ಮೊ: ೭೦೨೬೬೮೪೯೬೫		
		ತಿಪ್ಪಮ್ಮ, ದೊಡ್ಡಚೆಲ್ಲುರು ಗ್ರಾ, ಮೊ: ೯೯೦೧೦೪೯೭೩೩		
		ಅನಿತಲಕ್ಷ್ಮಿ ಆರ್, ದೊಡ್ಡಚೆಲ್ಲುರು ಗ್ರಾ, ಮೊ: ೯೯೦೨೮೫೦೫೩೮	೦೩	೧೬

೨೨	ದೊಡ್ಡುಳ್ಳಾರ್ತಿ	ಗೋವಿಂದರಾಜು ಆರ್ (ಅಧ್ಯಕ್ಷರು), ದೊಡ್ಡುಳ್ಳಾರ್ತಿ ಗ್ರಾ, ಮೊ: ೯೯೭೯೭೨೫೫೫		
		ಕಮಲಮ್ಮ, ದೊಡ್ಡುಳ್ಳಾರ್ತಿ ಗ್ರಾ, ಮೊ: ೯೬೧೧೧೭೧೯೬ ೦೨ ೧೪		
೨೩	ದೊಡ್ಡೇರಿ	ಸಾಕಮ್ಮ (ಅಧ್ಯಕ್ಷರು), ದೊಡ್ಡೇರಿ ಗ್ರಾ, ಮೊ: ೯೯೪೫೪೫೫೩೧೦		
		ಮೂರ್ತಿ, ದೊಡ್ಡೇರಿ ಗ್ರಾ, ಮೊ: ೯೫೯೧೩೧೦೧೨೬		
		ದ್ಯಾಮಕ್ಕ, ದೊಡ್ಡೇರಿ ಗ್ರಾ, ಮೊ: ೯೪೮೧೧೬೨೭೮೨	೦೩	೧೭
೨೪	ನಗರಂಗೆರೆ	ವೀರಮ್ಮ ಟಿ, ಸಿದ್ದಾಪುರ ಗ್ರಾ, ಮೊ: ೮೧೯೭೦೩೮೯೫೮		
		ದ್ಯಾಮಕ್ಕ, ಲಕ್ಷ್ಮೀಪುರ ಗ್ರಾ, ಮೊ: ೯೯೦೦೧೨೬೬೯೪		
		ರುದ್ರಮುನಿ ಕೆ, ಸಿದ್ದಾಪುರ ಗ್ರಾ, ಮೊ: ೯೭೪೦೩೪೮೪೭೪		
		ಗುರುಪಾದಮ್ಮ, ಹೊಟ್ಟಪ್ಪನಹಳ್ಳಿ ಗ್ರಾ, ಮೊ: ೯೯೮೦೬೭೪೩೫೫	೦೪	೨೧
೨೫	ನಲಗೇತನಹಟ್ಟಿ	ಓಬಳೇಶ, ಗೊಲ್ಲಹಳ್ಳಿ ಗ್ರಾ, ಮೊ: ೯೪೪೯೩೩೮೦೨೫		
		ಮಾರಕ್ಕ, ರಾಮದುರ್ಗ ಗ್ರಾ, ಮೊ: ೯೬೧೧೭೭೩೨೬೯		
		ನಾಗರಾಜ ಕೆ ಬಿ, ನಲಗೇತನಹಟ್ಟಿ ಗ್ರಾ, ಮೊ: ೮೮೬೭೫೮೩೦೨೪	೦೩	೧೬
೨೬	ನನ್ನಿವಾಳ	ಶಿವಕುಮಾರ ಎನ್, ನನ್ನಿವಾಳ ಗ್ರಾ,		
		ಯಶೋಧ ಜಿ, ನನ್ನಿವಾಳ ಗ್ರಾ, ಮೊ: ೯೫೩೮೩೯೨೧೨		
		ಅನಿತಲಕ್ಷ್ಮಿ, ಗೋರ್ಲಕಟ್ಟೆ ಗ್ರಾ, ಮೊ: ೮೧೦೫೦೯೩೭೪೯	೦೩	೨೫
೨೭	ನೇರಲಗುಂಟೆ	ಸಿದ್ದಮ್ಮ (ಅಧ್ಯಕ್ಷರು), ನೇರಲಗುಂಟೆ ಗ್ರಾ, ಮೊ: ೯೭೪೩೯೦೬೬೭		
		ನಾಗಮ್ಮ, ನೇರಲಗುಂಟೆ ಗ್ರಾ, ಮೊ: ೯೫೩೮೭೮೩೫೪೧		

		ವಾಸಣ್ಣ, ನೇರಲಗುಂಟೆ ಗ್ರಾ, ಮೊ: ೮೯೭೧೩೪೫೧೨೧	೦೩	೧೬
೨೮	ಪಿ ಮಹದೇವಪುರ	ತಿಪ್ಪಮ್ಮ (ಉಪಧ್ಯಕ್ಷರು), ಪಿ ಓಬನಹಳ್ಳಿ ಗ್ರಾ, ಮೊ: ೯೯೪೫೮೦೨೫೭೯		
		ಲಕ್ಷ್ಮಿದೇವಿ, ಪಿ ಮಹದೇವಪುರ ಗ್ರಾ, ಮೊ: ೯೯೬೪೬೬೮೨೧೦		
		ರಾಜಶೇಖರ ಸಿ, ಪಿ ಮಹದೇವಪುರ ಗ್ರಾ, ಮೊ: ೯೮೮೦೨೪೪೯೯೬		
		ರೂಪ, ಕಡೇಹುಡೇ ಗ್ರಾ, ಮೊ: ೯೭೪೩೦೨೨೧೩೬	೦೪	೧೬
೨೯	ಪರಶುರಾಂಪುರ	ದೀಪ ಎನ್, ಪರಶುರಾಂಪುರ ಗ್ರಾ, ಮೊ: ೯೮೪೪೪೧೭೫೦೪	೦೧	೨೬
೩೦	ಮಲ್ಲೂರಹಳ್ಳಿ	ಮಾರಕ್ಕ (ಉಪಾಧ್ಯಕ್ಷರು), ಮಲ್ಲೂರಹಳ್ಳಿ ಗ್ರಾ, ಮೊ: ೯೯೦೧೬೮೫೮೭೮		
		ಮಹಾತೇಶ ಪಿ, ಮಲ್ಲೂರಹಳ್ಳಿ ಗ್ರಾ, ಮೊ: ೯೭೪೦೭೨೮೬೧೯		
		ಮಲ್ಲೇಶಪ್ಪ ಹೆಚ್, ರೇಖಲಗೆರೆ ಗ್ರಾ, ಮೊ: ೯೧೬೪೩೯೫೦೬೭	೦೩	೨೦
೩೧	ಮನ್ನೇಕೋಟೆ	ಮಲ್ಲಣ್ಣ, ಕೋಡಿಹಳ್ಳಿ ಗ್ರಾ, ಮೊ: ೯೯೬೪೮೭೪೧೬೪		
		ಪಾರ್ವತಮ್ಮ, ಹೊಸಹಳ್ಳಿ ಗ್ರಾ, ಮೊ: ೭೩೫೩೦೬೩೪೫೩		
		ತಿಪ್ಪಯ್ಯ, ಮನ್ನೇಕೋಟೆ ಗ್ರಾ, ಮೊ: ೮೭೨೨೯೫೪೫೭	೦೩	೧೮
೩೨	ಮೀರಾಸಾಬಿಹಳ್ಳಿ	ವನಜಾಕ್ಷಿ ವಿ, ವಿಡುಪನಕುಂಟೆ ಗ್ರಾ, ಮೊ: ೩೬೬೯೧೮೪೭೯		
		ನಿರ್ಮಾಲಮ್ಮ, ಕರೀಕೆರೆ ಗ್ರಾ, ಮೊ: ೭೩೫೩೪೮೯೬೨೪	೦೨	೨೧
೩೩	ಮೈಲನಹಳ್ಳಿ	ದುರುಗಮ್ಮ (ಅಧ್ಯಕ್ಷರು), ಮೈಲನಹಳ್ಳಿ ಗ್ರಾ, ಮೊ: ೭೮೯೯೩೧೩೩೭೯		
		ಲಲಿತಮ್ಮ, ಗುಡಿಹಳ್ಳಿ ಗ್ರಾ,, ಮೊ: ೯೭೪೧೮೮೩೮೫೬		
		ರವಿ ಈ, ಬೂದಿಹಳ್ಳಿ ಗ್ರಾ, ಮೊ: ೯೯೦೨೨೭೭೯೦೯	೦೩	೧೬

೩೪	ರಾಮಜೋಗಿಹಳ್ಳಿ	ನಾಗರಾಜ ವೈ, ಕುರುಡಿಹಳ್ಳಿ ಗ್ರಾ, ಮೊ: ೯೯೦೦೫೮೯೯೦೧		
		ಬೋರಯ್ಯ ಟಿ, ಬಾಲೇನಹಳ್ಳಿ ಗ್ರಾ, ಮೊ: ೯೯೦೧೧೨೫೦೦೬	೦೨	೧೮
೩೫	ರೇಣುಕಾಪುರ	ಚಂದ್ರಣ್ಣ ಹೆಚ್, ಕಸವಿಗೊಂಡನಹಳ್ಳಿ ಗ್ರಾ, ಮೊ: ೯೯೭೨೨೧೩೮೪೯		
		ಸಿದ್ದಮ್ಮ, ತಪ್ಪಗೊಂಡನಹಳ್ಳಿ ಗ್ರಾ, ಮೊ: ೯೯೮೦೧೬೩೭೨೬		
		ಶಾಂತಕ್ಕೆ, ಬಸಾಪುರ ಗ್ರಾ, ಮೊ: ೯೯೮೦೩೮೭೬೨೮	೦೩	೧೯
೩೬	ಸಾಣಿಕೆರೆ	ತಿಪ್ಪಮ್ಮ, ಕಾಪರಹಟ್ಟಿ ಗ್ರಾ, ಮೊ: ೯೬೮೬೨೩೮೦೫೨		
		ಆಂಜನೇಯ ಹೆಚ್, ಕಮ್ಮತಮರಿಗುಂಟೆ ಗ್ರಾ, ಮೊ: ೯೪೮೨೦೧೨೫೪೯		
		ದುರುಗಪ್ಪ ಜಿ, ಕಾಪರಹಟ್ಟಿ ಗ್ರಾ, ಮೊ: ೯೯೦೨೪೮೨೬೭೨		
		ಕೆಂಚಣ್ಣ ಎಸ್ ಆರ್, ಹೆಗ್ಗೆರೆ ಗ್ರಾ, ಮೊ: ೯೭೩೧೧೮೮೦೫೨		
		ಭೂತರಾಜ ಟಿ, ಜಡೇಕುಂಟೆ ಗ್ರಾ, ಮೊ: ೯೯೭೨೩೨೭೨೪೪	೦೫	೨೦
೩೭	ಸಿದ್ದೇಶ್ವರನದುರ್ಗ	ಶ್ರೀನಿವಾಸ ಕೆ ಎನ್, ಸಿದ್ದೇಶ್ವರನದುರ್ಗ ಗ್ರಾ, ಮೊ: ೯೯೦೧೬೯೯೫೬೪		
		ದುರುಗಮ್ಮ, ಕ್ಯಾದಿಗುಂಟೆ ಗ್ರಾ, ಮೊ: ೯೭೪೨೩೩೮೮೩೧		
		ಶೋಧ ಎನ್, ಪಿಲ್ಲಹಳ್ಳಿ ಗ್ರಾ, ಮೊ: ೮೪೯೫೫೮೮೮೨೭	೦೩	೧೮
೩೮	ಸೋಮಗುದ್ದು	ದುರುಗೇಶ, ಹಿರೇಮಧುರೆ ಗ್ರಾ, ಮೊ: ೯೭೩೧೮೧೮೪೯೩		
		ರೇಣುಕಮ್ಮ, ಚಿಕ್ಕಮಧುರೆ ಗ್ರಾ, ಮೊ: ೯೯೦೨೪೬೯೦೮		
		ಗಂಗಮ್ಮ, ಗುಂಜಿಗುಂಟೆ ಗ್ರಾ, ಮೊ: ೭೭೬೦೧೦೬೩೧೪		
		ಅಜ್ಜಪ್ಪ ಡಿ, ಸೋಮಗುದ್ದು ಗ್ರಾ, ಮೊ: ೯೯೦೧೫೨೬೫೨೭		

		ಭಾಗ್ಯಮ್ಮ, ಸೋಮಗುದ್ದು ಗ್ರಾ, ಮೊ: ೯೭೩೧೮೦೩೯೦೯	೦೫	೧೮
೩೯	ಹಿರೇಹಳ್ಳಿ	ರಾಜ ಎ ಕೆ (ಉಪಾಧ್ಯಕ್ಷರು), ಬುಕ್ಲೋರಹಳ್ಳಿ ಗ್ರಾ, ಮೊ: ೯೮೮೦೮೮೫೧೦೬		
		ತಿಪ್ಪೇಸ್ವಾಮಿ ಎನ್, ಹಿರೇಹಳ್ಳಿ ಗ್ರಾ, ಮೊ: ೮೧೯೭೨೫೨೧೫೫		
		ತಿಪ್ಪಮ್ಮ, ಹಿರೇಹಳ್ಳಿ ಗ್ರಾ, ಮೊ: ೯೬೧೧೧೨೭೯೦೭		
		ಕರಿಬಸಮ್ಮ, ಹಿರೇಹಳ್ಳಿ ಗ್ರಾ, ಮೊ: ೭೭೬೦೩೦೫೨೯೪		
		ದುರುಗಮ್ಮ, ಹಿರೇಹಳ್ಳಿ ಗ್ರಾ, ಮೊ: ೯೯೮೦೯೮೦೬೭೦	೦೫	೨೨
		ಒಟ್ಟು	೧೨೭	೬೫೯

೨. ಚಿತ್ರದುರ್ಗ ಗ್ರಾಮ ಪಂಚಾಯಿತ್‌ಗಳು

ಕ್ರ ಸಂ	ಗ್ರಾಮ ಪಂಚಾಯ್ತಿ	ಸದಸ್ಯರ ಹೆಸರುಗಳು ಮತ್ತು ವಿಳಾಸ	ಸದಸ್ಯರ ಸಂಖ್ಯೆ	ಒಟ್ಟು ಸದಸ್ಯರ ಸಂಖ್ಯೆ
೧	ಅನ್ನೇಹಾಳ್	ಕೆಂಚಮ್ಮ (ಉಪಾಧ್ಯಕ್ಷರು), ಕಕ್ಕೇರವು ಗ್ರಾ, ಮೊ: ೯೫೩೫೯೨೮೪೨೬		
		ಮಂಜುನಾಥ ಕೆ, ಕಕ್ಕೇರವು ಗ್ರಾ, ಮೊ: ೮೧೦೫೧೯೩೫೮೦		
		ಕುಮಾರಪ್ಪ, ಮಹಾದೇವನಕಟ್ಟೆ ಗ್ರಾ, ಮೊ: ೯೭೩೧೦೧೦೪೭೬	೦೩	೧೬
೨	ಆಲಗಟ್ಟ	ಸಿದ್ದಪ್ಪ, ಓಬವ್ವನಾರ್ತಿಹಳ್ಳಿ ಗ್ರಾ, ಮೊ: ೭೮೨೯೯೪೦೨೭೩		
		ಕರಿಯಮ್ಮ, ಆಲಗಟ್ಟ ಗ್ರಾ, ಮೊ: ೯೫೩೫೯೫೬೧೯೬		
		ಗೌರಮ್ಮ ಕೆ ಸಿ, ಚಿಕ್ಕಾಲಗಟ್ಟೆ ಗ್ರಾ, ಮೊ: ೯೬೬೩೬೫೬೨೬೦		
		ಬಸವರಾಜ ಎನ್, ಚಿಕ್ಕೇನಹಳ್ಳಿ ಗ್ರಾ, ಮೊ: ೯೭೪೩೮೦೯೫೬೪	೦೪	೨೦
೩	ಅಳಗವಾಡಿ	ಕುಮಾರ ಎಸ್, ಪಳಿಕೇಹಳ್ಳಿ ಗ್ರಾ, ಮೊ: ೯೯೪೫೬೫೨೩೬೮		
		ಶಿವಮ್ಮ, ಓಬಳಾಪುರ ಗ್ರಾ, ಮೊ: ೯೯೭೧೪೦೪೫೬೦		
		ಸುಧಾ ಡಿ, ಅಳಗವಾಡಿ ಗ್ರಾ, ಮೊ: ೮೯೭೦೧೨೫೬೨೯	೦೩	೨೦
೪	ಇಂಗಳದಾಳ್	ಅಂಬಿಕ, ಕುರುಮರಡಿಕೆರೆ ಗ್ರಾ, ಮೊ: ೮೭೫೯೭೫೫೩೫೨		
		ರಂಗಮ್ಮ, ಇಂಗಳದಾಳ್ ಗ್ರಾ, ಮೊ: ೯೬೧೧೭೬೯೨೧೪		
		ಮಚ್ಚೇಂದ್ರಪ್ಪ ಎಂ ಸಿ, ಯರೇಹಳ್ಳಿ ಗ್ರಾ, ಮೊ: ೯೮೮೦೪೬೨೯೦೧		

		ದ್ಯಾಮಪ್ಪ ಎಲ್, ಕುಂಚಿಗನಾಳ್ ಗ್ರಾ, ಮೊ: ೯೪೪೯೦೦೮೭೦೦	೦೪	೧೮
೫	ಇಸಾಮುದ್ರ	ಮೀನಾಕ್ಷಿ, ಇಸಾಮುದ್ರ ಗ್ರಾ, ಮೊ: ೭೭೬೦೧೭೫೨೮೭		
		ಜಯಶೀಲ ಯು, ಹೊಸಹಟ್ಟಿ ಗ್ರಾ, ಮೊ: ೯೯೬೪೨೧೦೧೭೫	೦೨	೧೫
೬	ಈ ಆರ್ ಹಳ್ಳಿ	ಕೃಷ್ಣಮೂರ್ತಿ ಡಿ ಆರ್, ಗುಡ್ಡದರಂಗವ್ವನಹಳ್ಳಿ ಗ್ರಾ, ಮೊ: ೯೮೮೦೮೫೨೨೦೨		
		ಮಾಳಮ್ಮ, ಗುಡ್ಡದರಂಗವ್ವನಹಳ್ಳಿ ಗ್ರಾ, ಮೊ: ೯೬೧೧೮೯೮೨೫೯		
		ವನಜಾಕ್ಷಮ್ಮ, ತಮಟಕಲ್ಲು ಗ್ರಾ, ಮೊ: ೭೭೬೦೬೧೮೩೬೬		
		ನಾಗರಾಜ ಸಿ, ಆಯತೋಳ ಗ್ರಾ, ಮೊ: ೬೯೩೨೦೭೦೨೦೨		
		ಓಬಳೇಶಪ್ಪ, ಗುಡ್ಡದರಂಗವ್ವನಹಳ್ಳಿ ಗ್ರಾ, ಮೊ: ೮೯೫೧೧೦೩೧೮	೦೫	೧೭
೭	ಎಂ ಕೆ ಹಟ್ಟಿ	ರೇಣುನಕಮ್ಮ, ಮತದಕುರುಬರಹಟ್ಟಿ ಗ್ರಾ, ಮೊ: ೮೯೭೧೭೧೮೪೨೯		
		ಸುಶೀಲಮ್ಮ, ಮತದಕುರುಬರಹಟ್ಟಿ ಗ್ರಾ, ಮೊ: ೭೮೯೯೪೭೬೫೯		
		ನರೇಂದ್ರಬಾಬು ಕೆ, ಮತದಕುರುಬರಹಟ್ಟಿ ಗ್ರಾ, ಮೊ: ೯೬೧೧೨೧೭೧೮೮		
		ಶಾಂತಕುಮಾರ ಎಂ ಆರ್, ಮತದಕುರುಬರಹಟ್ಟಿ ಗ್ರಾ, ಮೊ: ೯೯೦೧೭೯೦೦೫೬	೦೪	೨೩
೮	ಐಯ್ಯನಹಳ್ಳಿ	ಲಕ್ಷ್ಮಿದೇವಿ, ಬೀರಾವರ ಗ್ರಾ, ಮೊ: ೯೯೦೨೭೫೨೧೬೬		
		ಕಮಲಮ್ಮ, ಮಾರಗಟ್ಟು ಗ್ರಾ, ಮೊ: ೯೪೮೨೯೪೩೩೫೯	೦೨	೧೬
೯	ಕಾಲಗೆರೆ	ರೇಣುಕಮ್ಮ, ಗೊಲ್ಲರಹಳ್ಳಿ ಗ್ರಾ, ಮೊ: ೯೬೮೬೧೩೧೮೪೧		
		ಮಂಜಪ್ಪ, ಕಾಲಗೆರೆ ಗ್ರಾ, ಮೊ: ೮೭೨೨೧೭೫೨೭೯		
		ರತ್ನಮ್ಮ, ದ್ಯಾಪನಹಳ್ಳಿ ಗ್ರಾ, ಮೊ: ೯೮೮೦೫೮೪೨೦೨	೦೩	೨೦

೧೦	ಕೋಗುಂಡೆ	ಇಂದ್ರಮ್ಮ (ಅಧ್ಯಕ್ಷರು), ಗ್ರಾ, ಮೊ: ೯೬೬೩೩೪೩೮೭೯		
		ನೇತ್ರಮ್ಮ, ಕೋಗುಂಡೆ ಬಹದ್ದೂರಗಟ್ಟ ಗ್ರಾ, ಮೊ: ೯೮೮೦೪೪೮೫೪೭		
		ಭಾರತಮ್ಮ, ಕೊಡಿಹಳ್ಳಿ ಗ್ರಾ, ಮೊ: ೭೮೨೯೧೮೩೪೭೧	೦೩	೧೮
೧೧	ಕೊನಬೇವು	ಮಂಗಳಮ್ಮ (ಉಪಾಧ್ಯಕ್ಷರು), ಹುಣಸೇಕಟ್ಟೆ ಗ್ರಾ, ಮೊ: ೯೬೮೬೫೦೩೪೧೯		
		ತಿಪ್ಪೀರಮ್ಮ, ಕೊನಬೇವು ಗ್ರಾ, ಮೊ: ೭೭೬೦೯೧೭೦೬೪		
		ರಾಮಣ್ಣ ಕೆ, ಬಾಗೊನಾಳ್ ಗ್ರಾ, ಮೊ: ೯೯೦೧೨೦೮೪೫೦	೦೩	೧೯
೧೨	ಕೊಳಹಾಳ್	ಅನ್ನಪೂರ್ಣ, ಹೆಗ್ಗೆರೆ ಗ್ರಾ, ಮೊ: ೭೦೨೨೯೩೭೬೨೧		
		ಜಯಮಾಲ, ಹಂಪನೂರು ಗ್ರಾ, ಮೊ: ೯೬೬೩೯೪೧೧೫೭		
		ಜಯರಾಮಪ್ಪ, ಹಂಪನೂರು ಗ್ರಾ, ಮೊ: ೯೯೬೪೮೦೨೩೫೩	೦೩	೧೯
೧೩	ಗೊಡಬನಹಾಳ್	ಗೀತಮ್ಮ (ಅಧ್ಯಕ್ಷರು, ಪಂಡ್ರರಹಳ್ಳಿ ಗ್ರಾ, ಮೊ: ೯೮೮೬೫೫೩೦೫೭		
		ಕಮಲಮ್ಮ, ಗೋಡಬನಹಳ್ಳಿ ಗ್ರಾ, ಮೊ: ೯೯೦೧೫೧೭೯೩೭		
		ನಾಗರಾಜ ಆರ್, ಪಂಡ್ರರಹಳ್ಳಿ ಗ್ರಾ, ಮೊ: ೯೭೪೨೩೯೦೦೩೬	೦೩	೧೧
೧೪	ಗೋನೂರು	ಕುಮಾರ (ಅಧ್ಯಕ್ಷರು), ಗೋನೂರು ಗ್ರಾ, ಮೊ: ೯೫೩೫೬೬೪೨೧೦		
		ರತ್ನಮ್ಮ, ಬಚ್ಚೆರಬೊರನಹಳ್ಳಿ ಗ್ರಾ, ಮೊ: ೯೭೪೧೭೩೯೨೩೬		
		ಶಾರದಮ್ಮ, ಮಲ್ಲಾಪುರ ಗ್ರಾ, ಮೊ: ೯೯೪೫೯೯೮೭೨೫	೦೩	೨೧
೧೫	ಚಿಕ್ಕಬೆನ್ನೂರು	ಅಂಜಿನಪ್ಪ, ಚಿಕ್ಕಬೆನ್ನೂರು ಗ್ರಾ, ಮೊ: ೯೭೪೧೭೧೯೭೨೦		

		ಸವಿತ, ಕುಲ್ಲುಂಟೆ ಗ್ರಾ, ಮೊ: ೯೦೦೬೮೬೪೩೫೮	೦೨	೧೯
೧೬	ಚಿಕ್ಕಗೊಂಡನಹಳ್ಳಿ	ಗೌರಮ್ಮ (ಅಧ್ಯಕ್ಷರು), ಚಿಕ್ಕಗೊಂಡನಹಳ್ಳಿ ಗ್ರಾ, ಮೊ: ೯೮೪೫೨೧೬೧೨೭		
		ತಿಪ್ಪೇಸ್ವಾಮಿ ಡಿ, ಚಿಕ್ಕಗೊಂಡನಹಳ್ಳಿ ಗ್ರಾ, ಮೊ: ೯೯೬೪೮೩೩೦೯೩	೦೨	೧೪
೧೭	ಚೋಳಘಟ್ಟ	ಸಿದ್ದಪ್ಪ ಹೆಚ್ (ಅಧ್ಯಕ್ಷರು), ಈಚಲನಾಗೊನಹಳ್ಳಿ ಗ್ರಾ, ಮೊ: ೯೮೮೦೮೨೫೦೫೭	೦೧	೧೬
೧೮	ಜಾನಕೊಂಡ	ರತ್ನಮ್ಮ (ಉಪಾಧ್ಯಕ್ಷರು), ಗಂಜಿಗಟ್ಟೆ ಗ್ರಾ, ಮೊ: ೯೮೮೦೫೬೪೯೮೩		
		ಶಂಬುಲಿಂಗಪ್ಪ ಜಿ, ಸೊಲ್ಲಾಪುರ ಗ್ರಾ, ಮೊ: ೮೧೯೭೪೭೦೩೬೮	೦೨	೧೪
೧೯	ಜಿ ಎನ್ ಕೋಟೆ	ಸುಶೀಲಮ್ಮ, ಪಲ್ಲವಗೆರೆ ಗ್ರಾ, ಮೊ: ೯೭೪೦೫೩೪೦೮೧		
		ಗಂಗಮ್ಮ, ಸಜ್ಜಗೆರೆ ಗ್ರಾ, ಮೊ: ೮೮೮೯೯೧೭೩೫		
		ಸ್ವಾಮಿಲಿಂಗಪ್ಪ ಟಿ, ನೆರೇನಹಾಳ್ ಗ್ರಾ, ಮೊ: ೯೮೪೪೩೩೦೭೧೬		
		ಲಕ್ಷ್ಮಿದೇವಿ ಜಿ ಎನ್ ಕೋಟೆ ಗ್ರಾ, ಮೊ: ೯೯೬೪೦೬೩೪೬೧	೦೪	೨೪
೨೦	ಡಿ ಎಸ್ ಹಳ್ಳಿ	ರಾಮಕೃಷ್ಣಪ್ಪ ಬಿ ಟಿ (ಉಪಾಧ್ಯಕ್ಷರು), ಡಿ ಎಸ್ ಹಳ್ಳಿ ಗ್ರಾ, ಮೊ: ೮೮೬೧೮೪೦೨೯೫		
		ಶಿವರಾಜ್ ಎಸ್ ಕೆ, ಡಿ ಎಸ್ ಹಳ್ಳಿ ಗ್ರಾ, ಮೊ: ೯೬೨೦೬೨೦೨೫೧		
		ರಾಜಶೇಖರ್, ಡಿ ಎಸ್ ಹಳ್ಳಿ ಗ್ರಾ, ಮೊ: ೮೧೦೫೪೮೯೦೬೯		
		ಜಾನಕಿ ಎಂ ಎಸ್, ಡಿ ಎಸ್ ಹಳ್ಳಿ ಗ್ರಾ, ಮೊ: ೭೬೭೬೪೭೬೯೯೧	೦೪	೨೧
೨೧	ತುರುವನೂರು	ಮಾರಕ್ಕ (ಅಧ್ಯಕ್ಷರು), ತುರುವನೂರು ಗ್ರಾ, ಮೊ: ೯೮೮೦೦೪೦೩೧೭		
		ದುರುಗಮ್ಮ, ತುರುವನೂರು ಗ್ರಾ, ಮೊ: ೮೧೦೫೯೫೦೪೨		

		ರತ್ನಮ್ಮ, ತುರುವನೂರು ಗ್ರಾ, ಮೊ: ೯೮೪೪೪೮೯೬೧೩		
		ದುರುಗಮ್ಮ, ತುರುವನೂರು ಗ್ರಾ, ಮೊ:		
		ಶರಣಪ್ಪ ಬಿ, ತುರುವನೂರು ಗ್ರಾ, ಮೊ: ೮೯೫೭೪೯೫೧೨	೦೫	೩೩
೨೨	ದ್ಯಾಮವ್ವನಹಳ್ಳಿ	ಅಜ್ಜಪ್ಪ, ದ್ಯಾಮವ್ವನಹಳ್ಳಿ ಗ್ರಾ, ಮೊ: ೯೯೧೬೭೮೨೦೨೧		
		ಗುರುಮೂರ್ತಪ್ಪ ಆರ್, ದ್ಯಾಮವ್ವನಹಳ್ಳಿ ಗ್ರಾ, ಮೊ: ೮೧೯೭೦೯೯೭೧೯		
		ಶಿವಮ್ಮ , ಬೊಮ್ಮೇನಹಳ್ಳಿ ಗ್ರಾ, ಮೊ: ೯೭೪೧೯೨೨೭೩೧		
		ಶ್ರೀದೇವಿ, ಕಾಸವರಹಳ್ಳಿ ಗ್ರಾ, ಮೊ: ೯೭೪೩೨೩೬೨೪೯	೦೪	೧೮
೨೩	ಬೆಳಗಟ್ಟ	ಜಯಮ್ಮ (ಅಧ್ಯಕ್ಷರು), ಬೆಳಗಟ್ಟ ಗ್ರಾ, ಮೊ: ೯೭೩೯೩೫೦೮೪೫		
		ಬೊರಯ್ಯ, ಬೆಳಗಟ್ಟ ಗ್ರಾ, ಮೊ: ೮೨೭೭೭೭೪೦೦೯		
		ಗೌರಮ್ಮ ಓ, ಹಾಯ್ಕಲ್ ಗ್ರಾ ಮೊ: ೯೯೦೦೪೮೭೧೨೪		
		ಚಿತ್ರಮ್ಮ, ಹಾಯ್ಕಲ್ ಗ್ರಾ, ಮೊ: ೯೯೪೫೨೨೯೩೫	೦೪	೨೧
೨೪	ಬ್ಯಾಲಹಳು	ರೇಣುಕಮ್ಮ (ಅಧ್ಯಕ್ಷರು), ಬ್ಯಾಲಹಳು ಗ್ರಾ, ಮೊ: ೯೯೮೯೯೬೮೪೬	೦೧	೧೦
೨೫	ಬೊಮ್ಮೇನಹಳ್ಳಿ	ಕೆಂಚಮ್ಮ ಆರ್ (ಉಪಾಧ್ಯಕ್ಷರು), ಕಡಲೇಗುದ್ದ ಗ್ರಾ, ಮೊ: ೮೮೬೧೧೦೭೨೦೩	೦೧	೧೬
೨೬	ಭರಮಸಾಗರ	ಚಂದ್ರಮ್ಮ, ಭರಮಸಾಗರ ಗ್ರಾ, ಮೊ: ೯೦೦೮೩೮೭೭೮೦		
		ಸಿದ್ದಮ್ಮ, ಕೋಡಿರಂಗವ್ವನಹಳ್ಳಿ ಗ್ರಾ, ಮೊ: ೯೭೪೩೨೯೭೯೬		
		ನೀಲಮ್ಮ, ಭರಮಸಾಗರ ಗ್ರಾ, ಮೊ: ೯೮೮೬೫೩೪೪೧೨	೦೩	೨೬

೨೭	ಭೀಮಸಮುದ್ರ	ಮೀನಾಕ್ಷಿ (ಉಪಾಧ್ಯಕ್ಷರು), ವಿಪಾಳ್ಯ ಗ್ರಾ, ಮೊ: ೯೯೪೫೭೬೪೦೨೨		
		ವಿಜಯಮ್ಮ, ತುರೇಬೈಲು ಗ್ರಾ, ಮೊ: ೮೯೭೦೬೦೨೦೫೩	೦೨	೨೦
೨೮	ಮದಕರಿಪುರ	ಸಾಕಮ್ಮ (ಉಪಾಧ್ಯಕ್ಷರು), ಪಿಳ್ಳೆಕೆರೆನಹಳ್ಳಿ ಗ್ರಾ, ಮೊ: ೯೮೮೬೮೦೦೦೩೧		
		ಕುಸುಮ್ಮ ಎಂ ಎಲ್, ಪಿಳ್ಳೆಕೆರೆನಹಳ್ಳಿ ಗ್ರಾ, ಮೊ: ೮೯೫೮೮೦೮೧೦		
		ಲಕ್ಷ್ಮಿದೇವಿ ಟಿ, ಮದಕರಿಪುರ ಗ್ರಾ ಮೊ: ೯೯೧೬೦೦೮೮೬೧		
		ಮಲ್ಲಿಕಾರ್ಜುನ ಹಚ್, ಮದಕರಿಪುರ ಗ್ರಾ, ಮೊ: ೯೮೮೦೩೧೮೭೧೧	೦೪	೨೩
೨೯	ಮದೇಹಳ್ಳಿ	ವನಜಾಕ್ಷಮ್ಮ, ಮದೇಹಳ್ಳಿ ಗ್ರಾ, ಮೊ: ೭೯೯೪೬೦೦೩೮		
		ನಾಗರಾಜ, ಮದೇಹಳ್ಳಿ ಗ್ರಾ, ಮೊ: ೯೯೦೧೦೨೮೮೫೪	೦೨	೨೦
೩೦	ಮುದ್ದಪರ	ಚಂದ್ರಮ್ಮ (ಅಧ್ಯಕ್ಷರು), ಮದೇಹಳ್ಳಿ ಗ್ರಾ, ಮೊ: ೮೯೨೬೦೪೩೪೦		
		ರುದೆಪ್ಪ, ಮದೇಹಳ್ಳಿ ಗ್ರಾ, ಮೊ: ೯೭೪೧೧೮೮೦೪೧		
		ರೇಣುಕಮ್ಮ, ಮದೇಹಳ್ಳಿ ಗ್ರಾ, ಮೊ: ೭೮೯೯೪೫೯೫೪೮	೦೩	೧೯
೩೧	ಮಾಡನಾಯ್ಕನಹಳ್ಳಿ	ಉಚ್ಚಂಗಮ್ಮ, ಪಾಪೇನಹಳ್ಳಿ ಗ್ರಾ, ಮೊ: ೯೬೧೧೭೪೧೧೫೬		
		ರುದ್ರಮ್ಮ ಓ, ಚಿಕ್ಕಪ್ಪನಹಳ್ಳಿ ಗ್ರಾ, ಮೊ: ೯೮೪೪೫೭೬೬೯೧		
		ಗೌರಮ್ಮ , ಮಾಡನಾಯ್ಕನಹಳ್ಳಿ ಗ್ರಾ, ಮೊ: ೯೮೮೦೫೯೩೯೪೯		
		ಕುಬೇಂದ್ರಪ್ಪ ಟಿ, ಸುಲ್ತಾನಿಪುರ ಗ್ರಾ, ಮೊ: ೯೯೪೫೭೬೪೦೭೩	೦೪	೧೩
೩೨	ಯಳಗೋಡು	ನಿರಂಜನಮೂರ್ತಿ ಹೆಚ್ (ಅಧ್ಯಕ್ಷರು), ಯಳಗೋಡು ಗ್ರಾ, ಮೊ: ೯೬೬೩೯೪೧೩೪೦		

		ದ್ಯಾಮಕ್ಕ, ಯಳಗೋಡು ಗ್ರಾ, ಮೊ: ೯೭೪೧೧೭೭೦೮೭		
		ಕವಿತ ಜಿ ಸಿ, ಬಸ್ತಿಹಳ್ಳಿ ಗ್ರಾ, ಮೊ: ೯೭೪೦೪೫೦೬೯೦	೦೩	೧೪
೩೩	ಲಕ್ಷ್ಮಿಸಾಗರ	ನಾಗೇಂದ್ರಪ್ಪ, ಕ್ಯಾಸಾಪುರ ಗ್ರಾ, ಮೊ: ೯೬೬೩೧೭೨೧೬೪		
		ಮಹಂತೇಶ ಸಿ ಆರ್, ಚಿಕ್ಕಪುರ ಗ್ರಾ, ಮೊ: ೯೫೫೧೪೬೭೪೭೭		
		ಅನಿತ ಕೆ, ಲಕ್ಷ್ಮಿಸಾಗರ ಗ್ರಾ, ಮೊ: ೯೬೬೩೨೨೦೮೨೫	೦೩	೨೪
೩೪	ಸಿದ್ದಾಪುರ	ಮಮುತ ಹೆಚ್, ಮಾನಂಗಿ ಗ್ರಾ, ಮೊ: ೯೮೮೬೮೩೩೬೨೮		
		ಸುವರ್ಣ, ಕಾಟೇಹಳ್ಳಿ ಗ್ರಾ, ಮೊ: ೯೯೪೫೧೨೩೮೫೧		
		ಶಿವರುದ್ರಪ್ಪ ಜಿ, ಜಾಲಿಕಟ್ಟೆ ಗ್ರಾ, ಮೊ: ೮೧೦೫೩೦೫೯೨೯		
		ಉಷಾರಾಣಿ, ಸಿದ್ದಾಪುರ ಗ್ರಾ, ಮೊ: ೭೮೨೯೭೮೮೯೭೫	೦೪	೧೬
೩೪	ಸಿರಿಗೆರೆ	ಮಲ್ಲೇಶಪ್ಪ ಎಸ್, ಸಿರಿಗೆರೆ ಗ್ರಾ ಮೊ: ೯೧೬೪೩೮೬೬೦೫		
		ಲತಾ, ಸೀಗೆಹಳ್ಳಿ ಗ್ರಾ, ಮೊ: ೮೧೦೫೪೨೪೪೫೦		
		ತಿಪ್ಪಮ್ಮ, ಹಳೇರಂಗಾಪುರ ಗ್ರಾ, ಮೊ: ೮೪೯೯೬೫೧೦೦೫		
		ಕೆಂಚಮ್ಮ, ಸಿರಿಗೆರೆ ಗ್ರಾ, ಮೊ: ೮೧೯೭೬೫೫೭೪೯	೦೪	೧೭
೩೫	ಸೊಂಡೇಕೊಳ	ತಿಪ್ಪಮ್ಮ, ಸೊಂಡೇಕೊಳ ಗ್ರಾ, ಮೊ: ೯೬೩೨೦೬೨೩೨೧	೦೧	೧೧
೩೬	ಹೀರೆಗುಂಟನೂರು	ಗೌರಮ್ಮ (ಉಪಾಧ್ಯಕ್ಷರು), ಹೊಸಹಳ್ಳಿ ಗ್ರಾ, ಮೊ: ೯೬೧೧೪೧೫೬೯೦		
		ಏಕಾಂತಮ್ಮ, ಹಳಿಯೂರು ಗ್ರಾ, ಮೊ: ೯೮೮೬೫೫೧೦೫೨		

		ಪ್ರಹ್ಲಾದ್, ಹಳಿಯೂರು ಗ್ರಾ, ಮೊ: ೯೭೩೧೨೮೩೩೭೩		
		ಹನುಮಂತಪ್ಪ, ಕೊಡಗವಳ್ಳಿ ಗ್ರಾ, ಮೊ: ೯೮೮೬೮೬೫೮೫೭		
		ಸುನಂದಮ್ಮ, ಹೀರೆಗುಂಟನೂರು ಗ್ರಾ, ಮೊ: ೯೬೩೨೭೭೯೦೪೦		
		ಶಿವಣ್ಣ ಎಸ್, ಹುಕಾಸೇಕಟ್ಟೆ ಗ್ರಾ, ಮೊ: ೯೭೪೦೭೦೬೧೮೫	೦೬	೨೫
೩೭	ಹುಲ್ಲೂರು	ಸುವರ್ಣಮ್ಮ, ಬೆನಕಮಹಳ್ಳಿ ಗ್ರಾ, ಮೊ: ೯೫೯೧೩೫೪೫೬೮		
		ಸುಶೀಲಮ್ಮ, ಕುರುಬರಹಳ್ಳಿ ಗ್ರಾ, ಮೊ: ೯೫೩೫೫೭೬೪೮೧		
		ಕೃಷ್ಣಪ್ಪ ಎ, ಕುರುಬರಹಳ್ಳಿ ಗ್ರಾ, ಮೊ: ೯೮೪೫೦೨೮೬೫೪		
		ವನಜಮ್ಮ, ಕುರುಬರಹಳ್ಳಿ ಗ್ರಾ, ಮೊ: ೯೯೭೨೪೭೫೧೬೨		
		ಪುಟ್ಟಸ್ವಾಮಿ ಕುರುಬರಹಳ್ಳಿ ಗ್ರಾ, ಮೊ: ೯೬೮೬೭೯೫೩೧೯		
		ಅಂಜಿನಮೂರ್ತಿ ಹೆಚ್, ಸಿಂಗಾಪುರ ಗ್ರಾ, ಮೊ: ೯೯೪೫೦೧೯೭೦೭	೦೬	೨೩
		ಒಟ್ಟು	೧೧೫	೭೧೦

೩. ಮೊಳಕಾಲ್ಮೂರು ಗ್ರಾಮ ಪಂಚಾಯಿತ್‌ಗಳು

ಕ್ರ.ಸಂ	ಗ್ರಾಮ ಪಂಚಾಯ್ತಿ	ಸದಸ್ಯರ ಹೆಸರುಗಳು ಮತ್ತು ವಿಳಾಸ	ಸದಸ್ಯರ ಸಂಖ್ಯೆ	ಒಟ್ಟು ಸದಸ್ಯರ ಸಂಖ್ಯೆ
೧	ಕೊಡ್ಲಹಳ್ಳಿ	ತಿಪ್ಪಮ್ಮ, ಕೊಡ್ಲಹಳ್ಳಿ ಗ್ರಾ, ಮೊ: ೯೮೪೫೬೫೮೩೬೬		
		ಈರಮ್ಮ, ಕೊಡ್ಲಹಳ್ಳಿ ಗ್ರಾ, ಮೊ: ೯೧೬೪೯೪೮೮೧೮		
		ಮಲ್ಲಿಕಾರ್ಜುನ ಬಿ, ಕೊಡ್ಲಹಳ್ಳಿ ಗ್ರಾ, ಮೊ: ೯೯೬೪೮೫೪೦೬೫		
		ಈಶ್ವರಪ್ಪ ಹೆಚ್, ಮಾರಮ್ಮನಹಳ್ಳಿ ಗ್ರಾ, ಮೊ: ೯೦೦೮೫೬೦೭೪೦	೦೪	೨೧
೨	ಕೊನಸಾಗರ	ಮುಕುಂದ, ಕೊನಸಾಗರ ಗ್ರಾ, ಮೊ: ೭೮೨೯೩೩೭೨೪೦		
		ಯೊಶೋಧಮ್ಮ, ಕೊನಸಾಗರ ಗ್ರಾ, ಮೊ: ೮೫೪೬೮೨೨೪೦೬		
		ಯಲ್ಲಮ್ಮ, ಕೊನಸಾಗರ ಗ್ರಾ, ಮೊ: ೮೧೦೫೦೬೦೨೨೦	೦೩	೨೧
೩	ಚಿಕ್ಕೇರಹಳ್ಳಿ	ಸೋಮಶೇಖರ, ಭಟ್ರಹಳ್ಳಿ ಗ್ರಾ, ಮೊ: ೯೯೪೫೯೭೫೩೬೬		
		ಮಲಿಯಕ್ಕ, ಅಮಕುಂದಿ ಗ್ರಾ, ಮೊ: ೮೯೭೧೦೭೮೩೧೨		
		ಹಂಪಮ್ಮ, ಚಿಕ್ಕೇರಹಳ್ಳಿ ಗ್ರಾ, ಮೊ: ೮೯೧೬೨೧೮೫೩೧	೦೩	೧೫
೪	ಜೆ ಬಿ ಹಳ್ಳಿ	ಪಾರ್ವತಮ್ಮ, ಜೆ ಬಿ ಹಳ್ಳಿ ಗ್ರಾ, ಮೊ: ೮೮೬೧೨೭೪೫೫೪		
		ಗಂಗಮ್ಮ, ಜೆ ಬಿ ಹಳ್ಳಿ ಗ್ರಾ, ಮೊ: ೯೯೪೫೭೮೯೭೩೪		
		ಹೊನ್ನೂರಸ್ವಾಮಿ, ಜೆ ಬಿ ಹಳ್ಳಿ ಗ್ರಾ, ಮೊ: ೯೭೩೧೩೫೬೩೭೩		

		ಹೊಲೆಪ್ಪ, ಓಬಳಾಪುರ ಗ್ರಾ, ಮೊ: ೭೨೫೯೬೨೦೫೬೯		
		ಹನುಮಂತಪ್ಪ, ಜೆ ಬಿ ಹಳ್ಳಿ ಗ್ರಾ, ಮೊ: ೭೦೨೨೭೨೨೪೬೬		
		ಶಿವಮ್ಮ, ಜೆ ಬಿ ಹಳ್ಳಿ ಗ್ರಾ, ಮೊ: ೭೬೭೬೭೫೮೫೯೪		
		ಲಕ್ಷ್ಮಿ, ಜೆ ಬಿ ಹಳ್ಳಿ ಗ್ರಾ, ೦೭ ೨೨		
೫	ತಮ್ಮೇನಹಳ್ಳಿ	ಹೊನ್ನೂರಪ್ಪ, ತಮ್ಮೇನಹಳ್ಳಿ ಗ್ರಾ, ಮೊ: ೭೦೨೨೮೧೨೨೨೪		
		ಶಿವಗಂಗಮ್ಮ, ಕರಡಿಹಳ್ಳಿ ಗ್ರಾ, ಮೊ: ೮೧೦೫೯೮೧೩೭೬		
		ಗಾಯಿತ್ರಿ ಟಿ, ಶಿರೆಕೋಳ ಗ್ರಾ, ಮೊ: ೯೦೦೮೯೭೦೪೯೨		
		ಪರಶುರಾಮ, ತಮ್ಮೇನಹಳ್ಳಿ ಗ್ರಾ, ಮೊ: ೭೮೧೫೦೯೪೦೭೧	೦೪	೨೬
೬	ತುಮಕೂರ್ಲಹಳ್ಳಿ	ಮಾರಕ್ಕ, ಚಿಕ್ಕಂತಿ ಗ್ರಾ, ಮೊ: ೯೯೦೨೭೮೨೦೦೮		
		ಗಂಗಮ್ಮ, ಚಿಕ್ಕೋಬನಹಳ್ಳಿ ಗ್ರಾ, ಮೊ: ೯೭೩೧೫೩೩೬೭೯		
		ತಿಪ್ಪೇಸ್ವಾಮಿ ಟಿ ಹೆಚ್, ತುಮಕೂರ್ಲಹಳ್ಳಿ ಗ್ರಾ, ಮೊ: ೯೯೦೦೫೪೪೩೯೮		
		ಮಂಜಮ್ಮ, ಚಿಕ್ಕೋಬನಹಳ್ಳಿ ಗ್ರಾ, ಮೊ: ೭೭೬೦೧೬೦೬೫೬	೦೪	೨೧
೭	ದೇವಸಮುದ್ರ	ಪಾರ್ವತಮ್ಮ, ವೆಂಕಟಪುರ ಗ್ರಾ, ಮೊ: ೯೯೮೦೮೫೩೪೭೫		
		ಪಾರ್ವತಿ, ಪೆನ್ನಮ್ಮನಹಳ್ಳಿ ಗ್ರಾ, ಮೊ: ೯೭೪೦೩೬೧೩೨೪		
		ದೊಡ್ಡಯಲ್ಲಪ್ಪ ಕೆ ಹೆಚ್, ದೇವಸಮುದ್ರ ಗ್ರಾ, ಮೊ: ೯೭೩೧೧೬೪೯೧೧		
		ಹುಲುಗಪ್ಪ ಜಿ, ದೇವಸಮುದ್ರ ಗ್ರಾ, ಮೊ: ೯೪೪೯೩೨೧೪೨೨		
		ನುಂಕಮ್ಮ ಎಸ್, ತಿಮಲಪುರ ಗ್ರಾ, ಮೊ: ೯೬೩೨೨೫೧೦೫೧	೦೫	೧೮

೮	ನಾಗಸಮುದ್ರ	ಪದ್ಮ (ಅಧ್ಯಕ್ಷರು), ನಾಗಸಮುದ್ರ ಗ್ರಾ, ಮೊ: ೯೯೮೦೫೬೮೬೩೫		
		ಲಕ್ಷ್ಮಿ, ನಾಗಸಮುದ್ರ ಗ್ರಾ, ಮೊ: ೮೯೭೧೧೪೭೯೯೮		
		ತಿಪ್ಪೇಸ್ವಾಮಿ ಟಿ, ನಾಗಸಮುದ್ರ ಗ್ರಾ, ಮೊ, ೯೯೦೦೨೨೭೯೯೨	೦೩	೨೧
೯	ನೇರ್ಲಹಳ್ಳಿ	ಶಾಂತಮ್ಮ (ಉಪಾಧ್ಯಕ್ಷರು), ನೇರ್ಲಹಳ್ಳಿ ಗ್ರಾ, ಮೊ: ೮೯೭೦೦೭೪೯೯೧		
		ತಿಪ್ಪೇಸ್ವಾಮಿ, ಗೂಂಡ್ಲರು ಗ್ರಾ, ಮೊ: ೮೧೧೦೫೩೬೫೫೯	೦೨	೧೩
೧೦	ಬಿ ಜಿ ಕೆರೆ	ನಾಗಮ್ಮ (ಉಪಾಧ್ಯಕ್ಷರು), ಬಿ.ಜಿ ಕೆರೆ ಗ್ರಾ, ಮೊ: ೯೯೦೧೩೦೪೫೯೯		
		ತಿಪ್ಪಮ್ಮ, ಬಿ.ಜಿ ಕೆರೆ ಗ್ರಾ, ಮೊ: ೯೮೮೬೮೮೧೦೨		
		ಮಲ್ಲೇಶಪ್ಪ ಈ, ಬಿ.ಜಿ ಕೆರೆ ಗ್ರಾ, ಮೊ: ೮೯೭೦೨೩೨೧೩೧		
		ನಾಗರಾಜ ಹೆಚ್ ವಿ, ಬಿ.ಜಿ ಕೆರೆ ಗ್ರಾ, ಮೊ: ೯೯೦೦೩೬೫೮೦೩		
		ನಾಗಭೂಷಣ ಬಿ ಟಿ, ಬಿ.ಜಿ ಕೆರೆ ಗ್ರಾ, ಮೊ: ೯೭೩೯೪೮೮೪೧೭		
		ಮಂಜಣ್ಣ, ಬಿ.ಜಿ ಕೆರೆ ಗ್ರಾ,		
		ಬಸಮ್ಮ, ಬಿ.ಜಿ ಕೆರೆ ಗ್ರಾ,		
		ಜಯಣ್ಣ, ಬಿ.ಜಿ ಕೆರೆ ಗ್ರಾ,		
		ಗಾಯಿತ್ರಿ, ಬಿ.ಜಿ ಕೆರೆ ಗ್ರಾ,	೦೯	೨೧
೧೧	ರಾಂಪುರ	ಲಕ್ಷ್ಮಿದೇವಿ, ರಾಂಪುರ ಗ್ರಾ, ಮೊ: ೯೪೮೩೮೯೯೮೧೮		
		ಹುಲುಗಪ್ಪ, ರಾಂಪುರ ಗ್ರಾ, ಮೊ: ೯೪೮೨೬೭೮೩೫೩		
		ನೀಲಮ್ಮ, ರಾಂಪುರ ಗ್ರಾ, ಮೊ: ೯೫೯೦೩೮೨೧೩೧		

		ತಿಪ್ಪೇಸ್ವಾಮಿ, ರಾಂಪುರ ಗ್ರಾ, ಮೊ: ೮೧೯೭೪೮೩೭೨೯		
		ಗೌರಮ್ಮ, ರಾಂಪುರ ಗ್ರಾ, ಮೊ: ೯೪೪೯೭೬೦೭೨೮		
		ಜಯಮ್ಮ, ರಾಂಪುರ ಗ್ರಾ, ಮೊ: ೯೯೧೬೦೧೬೫೫೭		
		ಮುದ್ದರಾಜ, ರಾಂಪುರ ಗ್ರಾ, ಮೊ: ೯೯೮೬೪೪೯೦೬೩		
		ಪರಮೇಶ್ವಪ್ಪ, ರಾಂಪುರ ಗ್ರಾ, ಮೊ: ೯೪೪೯೫೩೭೧೪೯		
		ತಿಪ್ಪಮ್ಮ ಟಿ, ರಾಂಪುರ ಗ್ರಾ, ಮೊ: ೭೦೨೨೫೫೪೨೮೯	೦೯	೨೬
೧೨	ರಾಯಾಪುರ	ನಾರಾಜ (ಉಪಾಧ್ಯಕ್ಷರು), ರಾಯಾಪುರ, ಗ್ರಾ, ಮೊ: ೮೧೦೫೮೨೫೧೮೫		
		ಮಂಜಮ್ಮ, ಯರೇನಹಳ್ಳಿ ಗ್ರಾ, ಮೊ: ೮೮೬೧೨೭೦೯೪೭		
		ಸಾಕಮ್ಮ, ಸಿದ್ದಯ್ಯಕೋಟೆ ಗ್ರಾ, ಮೊ: ೯೮೪೫೦೭೫೭೧೧		
		ತಿಪ್ಪಕ್ಕ, ರಾಯಾಪುರ ಗ್ರಾ, ಮೊ: ೮೧೦೫೫೪೨೮೭೪	೦೪	೧೮
೧೩	ಸಂತೇಗುಡ್ಡ	ರಾಧಮ್ಮ, ಮೇಲಿನಕಣಿಮೆ ಗ್ರಾ, ಮೊ: ೯೫೯೦೭೦೬೧೯೦	೦೧	೧೪
೧೪	ಸಿದ್ದಾಪುರ	ಬಸಣ್ಣ, ಗೌರಸಮುದ್ರ ಗ್ರಾ, ಮೊ: ೯೫೯೧೧೫೬೧೫೪		
		ಚೆನ್ನಮ್ಮ, ರಾಮಸಾಗರ ಗ್ರಾ, ಮೊ: ೯೬೧೧೮೧೯೭೨೩		
		ಅಂಜನೇಯ, ಚಿಕ್ಕನಹಳ್ಳಿ ಗ್ರಾ, ಮೊ: ೯೪೮೨೬೮೭೩೬೮		
		ಹನುಮಕ್ಕ ಎ ಕೆ, ಕಾಡುಸಿದ್ದಾಪುರ ಗ್ರಾ, ಮೊ: ೯೩೪೧೧೬೪೧೯೭	೦೫	೧೭
೧೫	ಹಾನಗಲ್	ಶಿವಣ್ಣ ಹೆಚ್, ಹಾನಗಲ್ ಗ್ರಾ, ಮೊ: ೮೧೪೭೪೬೬೫೫೫		
		ಪಾರ್ವತಮ್ಮ, ಸುಲೇನಹಳ್ಳಿ ಗ್ರಾ,	೦೨	೧೯

೧೬	ಹಿರೇಕೆರಹಳ್ಳಿ	ಲೊಕೆಶ್ (ಅಧ್ಯಕ್ಷರು), ಹಿರೇಕೆರಹಳ್ಳಿ ಗ್ರಾ, ಮೊ: ೯೭೪೨೫೧೯೮೫೫		
		ಅಂಜೀನಮ್ಮ, ಹಿರೇಕೆರಹಳ್ಳಿ ಗ್ರಾ, ಮೊ: ೯೫೩೫೯೭೫೧೪೩		
		ದುರುಗಮ್ಮ, ಗುಡ್ಡದಹಳ್ಳಿ ಗ್ರಾ, ಮೊ: ೯೭೪೨೫೮೯೮೧೩	೦೩	೧೦
		ಒಟ್ಟು	೬೮	೩೦೩

೪. ಹಿರಿಯೂರು ಗ್ರಾಮ ಪಂಚಾಯಿತ್‌ಗಳು

ಕ್ರ.ಸಂ	ಗ್ರಾಮ ಪಂಚಾಯ್ತಿ	ಸದಸ್ಯರ ಹೆಸರುಗಳು ಮತ್ತು ವಿಳಾಸ	ಸದಸ್ಯರ ಸಂಖ್ಯೆ	ಒಟ್ಟು ಸದಸ್ಯರ ಸಂಖ್ಯೆ
೧	ಆದಿವಾಲ	ತಿಪ್ಪೇಸ್ವಾಮಿ ಹೆಚ್, ಆದಿವಾಲ ಗ್ರಾ, ಮೊ: ೯೮೪೫೭೫೯೪೬		
		ನಾಗಮ್ಮ, ಆದಿವಾಲ ಗ್ರಾ, ಮೊ: ೯೬೩೨೩೨೫೭೧		
		ಭಾಗ್ಯಮ್ಮ ಸಿ ಟಿ, ಪಟ್ರೇಹಳ್ಳಿ ಗ್ರಾ, ಮೊ: ೯೦೦೮೨೭೩೭೬೩	೦೩	೨೨
೨	ಅಬ್ಬಿನಹೊಳೆ	ರಾಧಮ್ಮ (ಉಪಾಧ್ಯಕ್ಷರು), ಅಬ್ಬಿನಹೊಳೆ ಗ್ರಾ, ಮೊ: ೮೧೯೭೩೦೧೭೫೬		
		ನಾಗರಾಜ ಡಿ ಹೆಚ್, ದೇವರಕೊಟ್ಟ ಗ್ರಾ, ಮೊ: ೮೮೬೧೯೭೯೫೫೮		
		ಮಹಾರುದ್ರಪ್ಪ ಎಂ, ಚೆಲ್ಲಹಳ್ಳಿ ಗ್ರಾ, ಮೊ: ೯೭೪೦೬೭೮೨೨೬	೦೩	೧೭.
೩	ಇಕ್ಕನೂರು	ಮೀನಾಕ್ಷಿ, ಇಕ್ಕನೂರು ಗ್ರಾ, ಮೊ: ೯೭೪೦೬೮೪೦೩೫		
		ತಿಪ್ಪಮ್ಮ, ಇಕ್ಕನೂರು ಗ್ರಾ, ಮೊ: ೯೫೯೧೦೬೭೦೦೩		
		ಲಲಿತಮ್ಮ, ಮ್ಯಾದನಹೊಳೆ ಗ್ರಾ, ಮೊ: ೯೫೩೫೭೩೮೨೦೮	೦೩	೨೦
೪	ಈಶ್ವರಗೆರೆ	ಚಂದ್ರಶೇಖರ, ಈಶ್ವರಗೆರೆ ಗ್ರಾ, ಮೊ: ೮೭೨೨೪೨೨೮೨೦		
		ನಾಗರತ್ನಮ್ಮ, ಕೂಡ್ಲಹಳ್ಳಿ ಗ್ರಾ, ಮೊ: ೮೪೯೭೦೫೦೨೭೫		
		ದೇವರಾಜ, ವೇಣುಕಲ್ಲು ಗುಡ್ಡ ಗ್ರಾ, ಮೊ: ೯೯೭೨೩೮೭೯೩೦		
		ಲಲಿತಮ್ಮ, ಹೂವಿನಹೊಳೆ ಗ್ರಾ, ಮೊ: ೯೯೪೫೬೩೮೮೩೪	೦೪	೨೧
೫	ಉಡುವಳ್ಳಿ	ಶಾಂತಮ್ಮ, ಹಿಂಡಸಕಟ್ಟೆ ಗ್ರಾ, ಮೊ: ೯೯೪೫೪೮೩೮೯೨		

		ನಾಗವೇಣಿ ಪಿ, ಪರಮೇನಹಳ್ಳಿ ಗ್ರಾ, ಮೊ: ೯೫೩೫೭೧೦೧೮೩	೦೨	೧೯
೬	ಎಂ ಡಿ ಕೋಟೆ	ಮಹದೇವಿ (ಅಧ್ಯಕ್ಷರು), ಸೊಂಡೆಕೆರೆ ಗ್ರಾ, ಮೊ: ೮೭೨೨೪೦೧೯೦೩		
		ಈರಣ್ಣ, ರಾಮ ಜೋಗಿಹಳ್ಳಿ ಗ್ರಾ, ಮೊ: ೯೯೭೨೪೯೬೭೭೮	೦೨	೨೦
೭	ಐಮಂಗಲ	ಮೂರ್ತಿ ಡಿ, ಕಲ್ಲುಹಟ್ಟಿ ಗ್ರಾ, ಮೊ: ೯೬೩೨೦೪೧೩೬೬		
		ಮಲ್ಲಮ್ಮ ಕೆ, ಐಮಂಗಲ ಗ್ರಾ, ಮೊ: ೯೯೧೬೫೫೮೭೭೪		
		ತಿಮ್ಮಕ್ಕ, ದಾಸಣ್ಣನಮಾಳಿಗೆ ಗ್ರಾ, ಮೊ: ೯೯೧೪೦೮೮೨೦೧		
		ತಿಪ್ಪೇಸ್ವಾಮಿ, ಕಲ್ಲುಹಟ್ಟಿ ಗ್ರಾ, ಮೊ: ೯೬೬೩೧೪೧೭೨	೦೪	೨೦
೮	ಕಣಜನಹಳ್ಳಿ	ರಾಧಮ್ಮ (ಉಪಾಧ್ಯಕ್ಷರು), ಕಣಜನಹಳ್ಳಿ ಗ್ರಾ, ಮೊ: ೯೭೪೯೯೭೧೪೪೧		
		ದೊಡ್ಡಕರಿಯಪ್ಪ, ಬುರುಡುಗುಂಟೆ ಗ್ರಾ, ಮೊ: ೯೫೩೫೮೧೬೮೫೧	೦೨	೧೭
೯	ಕಸ್ತೂರಿರಂಗಪ್ಪನಹಳ್ಳಿ	ರಾಮಯ್ಯ ಕೆ ಎನ್ (ಅಧ್ಯಕ್ಷರು), ಕಸ್ತೂರಿರಂಗಪ್ಪನಹಳ್ಳಿ ಗ್ರಾ, ಮೊ: ೯೮೪೫೧೭೧೬೫೨		
		ಲಕ್ಷ್ಮಿದೇವಿ, ಬೇರನಗುಂಟೆ ಗ್ರಾ, ಮೊ: ೯೫೩೫೩೦೭೬೨೧		
		ಮಂಗಳಮ್ಮ, ಗೊರ್ಲಡ್ಕು ಗ್ರಾ, ಮೊ: ೯೮೮೦೦೮೭೯೯೩	೦೩	೧೩
೧೦	ಕರಿಯಾಲ	ಕಮಲಮ್ಮ, ಗಾಯಿತ್ರಿಪುರ ಗ್ರಾ, ಮೊ: ೯೪೮೭೩೬೬೫೦೮		
		ಸದಾಶಿವಯ್ಯ, ಓಬಳಾಪುರ ಗ್ರಾ, ಮೊ: ೮೪೫೩೫೯೯೩೬		
		ಲಕ್ಷ್ಮಿದೇವಿ, ಓಬಳಾಪುರ ಗ್ರಾ, ಮೊ: ೯೯೪೫೯೯೪೧೮೧	೦೩	೧೫
೧೧	ಕೂನಿಕೆರೆ	ರಂಗಸ್ವಾಮಿ (ಅಧ್ಯಕ್ಷರು), ಲಚ್ಚವ್ವನಹಳ್ಳಿ ಗ್ರಾ, ಮೊ: ೯೯೭೨೯೩೧೪೦		
		ಗಿರಿಜಮ್ಮ, ಹುಚ್ಚವ್ವನಹಳ್ಳಿ ಗ್ರಾ, ಮೊ: ೯೦೦೮೪೪೧೦೪೫		

		ಸುನಂದಮ್ಮ, ಕೂನಿಕೆರೆ ಗ್ರಾ, ಮೊ: ೯೭೩೧೪೦೧೫೪೭	೦೩	೧೯
೧೨	ಗನ್ನಾಯಕನಹಳ್ಳಿ	ತಿಪ್ಪೇಸ್ವಾಮಿ ಪಿ ಎಸ್, ಗನ್ನಾಯಕನಹಳ್ಳಿ ಗ್ರಾ, ಮೊ:		
		ಭಾಗ್ಯಮ್ಮ, ಜಡ್ಡೇಹೊಂಡನಹಳ್ಳಿ ಗ್ರಾ, ಮೊ: ೯೦೦೮೧೦೪೦೪೪	೦೨	೧೫
೧೩	ಗೌಡನಹಳ್ಳಿ	ಕರಿಯಣ್ಣ ಜೆ, ಬಗ್ಗನಡು ಗ್ರಾ, ಮೊ: ೯೬೩೨೦೫೩೯೧೩		
		ಶಾರದಮ್ಮ, ಗಾಂಧಿನಗರ ಗ್ರಾ, ಮೊ: ೭೩೫೩೯೮೩೮೧೪		
		ಶಿವಲಿಂಗಮ್ಮ, ಗಾಂಧಿನಗರ ಗ್ರಾ, ಮೊ: ೯೯೦೨೯೦೭೨೪೮	೦೩	೧೫
೧೪	ಜವನಗೊಂಡನಹಳ್ಳಿ	ಕರಿಯಪ್ಪ, ಜವನಗೊಂಡನಹಳ್ಳಿ ಗ್ರಾ, ಮೊ: ೮೪೯೬೮೫೬೧೯೦		
		ವಸಂತಲಕ್ಷ್ಮಿ, ಜವನಗೊಂಡನಹಳ್ಳಿ ಗ್ರಾ, ಮೊ: ೯೯೦೨೪೮೩೨೬೭	೦೨	೧೭
೧೫	ದಿಂಡಾವರ	ಕರಿಯಮ್ಮ ಆರ್, ಪಿಲಾಲಿ ಗ್ರಾ, ಮೊ: ೮೧೯೭೮೯೩೨೬೦		
		ರಾಮಣ್ಣ, ದಿಂಡಾವರ ಗ್ರಾ, ಮೊ: ೯೮೪೫೫೭೩೭೫೫		
		ಶಿಲ್ಪಕುಮಾರಿ ಟಿ, ದಿಂಡಾವರ ಗ್ರಾ, ಮೊ: ೯೫೩೫೭೨೨೩೯೦		
		ನಿಲಕಂಠಪ್ಪ ಕೆ, ವೀರವ್ಯನಾರಿತ್ತಿಹಳ್ಳಿ ಗ್ರಾ, ಮೊ: ೮೧೦೫೦೮೩೦೭೩	೦೪	೨೦
೧೬	ಧರ್ಮಪುರ	ಹೇಮಲತಾ, ಶ್ರವಣಗೆರೆ ಗ್ರಾ, ಮೊ: ೯೯೮೦೧೦೫೫೪೬		
		ಕರಿಯಣ್ಣ, ಧರ್ಮಪುರ ಗ್ರಾ, ಮೊ: ೮೧೦೫೪೧೯೮೬೩		
		ಉಷಾಕಿರಣ, ಧರ್ಮಪುರ ಗ್ರಾ, ಮೊ: ೯೮೮೦೫೬೪೮೯೧		
		ಚಂದ್ರಶೇಖರ, ಕೃಷ್ಣಾಪುರ ಗ್ರಾ, ಮೊ: ೯೯೦೨೩೮೦೬೮೦		
		ಗೀತ ಎಸ್ ಟಿ, ಕೃಷ್ಣಾಪುರ ಗ್ರಾ, ಮೊ: ೯೯೮೦೩೬೦೮೩೨		
		ಶಿವಣ್ಣ, ಶ್ರವಣಗೆರೆ ಗ್ರಾ, ಮೊ: ೮೮೬೧೯೬೩೬೮೩		

		ತಿಪ್ಪೇಸ್ವಾಮಿ, ಶ್ರವಣಗೆರೆ ಗ್ರಾ, ಮೊ: ೯೯೦೨೮೮೩೭೩೫	೦೭	೧೯
೧೭	ಪಿ ಡಿ ಕೋಟೆ	ರಾಧಮ್ಮ (ಅಧ್ಯಕ್ಷರು), ಹಲಗಲದ್ದಿ ಗ್ರಾ, ಮೊ: ೯೬೩೨೬೬೧೪೫೩		
		ಭೂತೇಶ ಎಸ್, ಸಕ್ಕರೆ ಗ್ರಾ, ಮೊ: ೯೮೮೦೫೪೯೭೦೨		
		ಪುಟ್ಟರಂಗಮ್ಮ, ಮದ್ದಿಹಳ್ಳಿ ಗ್ರಾ, ಮೊ: ೯೬೧೧೮೫೫೩೭೦		
		ತಿಪ್ಪಮ್ಮ, ಹಲಗಲದ್ದಿ ಗ್ರಾ, ಮೊ: ೯೯೦೧೨೫೬೬೧೨	೦೪	೧೧
೧೮	ಬಂಡೇನಹಳ್ಳಿ	ತಿಮ್ಮರಾಯ (ಅಧ್ಯಕ್ಷರು), ಬಂಡೇನಹಳ್ಳಿ, ಮೊ: ೮೫೪೯೦೬೭೫೫೩		
		ತಿಮ್ಮಕ್ಕ, ಹೊಸಕೆರೆ ಗ್ರಾ, ಮೊ: ೯೫೯೧೦೨೪೯೪೩		
		ಸುನಿತಾ ಸಿ, ಬಂಡೇನಹಳ್ಳಿ ಗ್ರಾ, ಮೊ: ೮೮೬೧೫೪೯೧೯೩	೦೩	೧೩
೧೯	ಬಬ್ಬೂರು	ರಾಧಮ್ಮ ಡಿ (ಉಪಾಧ್ಯಕ್ಷರು), ಬಬ್ಬೂರು ಗ್ರಾ, ಮೊ: ೮೯೭೧೭೩೭೬೩೦		
		ಶಿವಣ್ಣ ವೈ, ಬಬ್ಬೂರು ಗ್ರಾ, ಮೊ: ೯೮೮೦೬೨೧೭೫೨		
		ಕೆಂಚಮ್ಮ, ಬಬ್ಬೂರು ಗ್ರಾ, ಮೊ: ೯೯೦೨೭೬೩೫೪೦	೦೩	೧೬
೨೦	ಬುರುಜಿನರೊಪ್ಪ	ಅಂಬಿಕ ಎಸ್ (ಅಧ್ಯಕ್ಷರು), ಕೋವೇರಹಳ್ಳಿ ಗ್ರಾ, ಮೊ: ೯೯೪೫೧೮೬೧೧		
		ಜಯಮ್ಮ ಟಿ, ಪಾಲವ್ವನಹಳ್ಳಿ ಗ್ರಾ, ಮೊ: ೮೭೪೬೮೦೧೪೪೨		
		ಮಲ್ಲಿಕಾರ್ಜುನ ಬಿ ಕೆ, ಬುರುಜಿನರೊಪ್ಪ ಗ್ರಾ, ಮೊ: ೯೮೪೪೪೧೧೩೪೭	೦೩	೧೯
೨೧	ಬ್ಯಾಡರಹಳ್ಳಿ	ಲಕ್ಷ್ಮವ್ವ, ಬ್ಯಾಡರಹಳ್ಳಿ ಗ್ರಾ, ಮೊ: ೭೭೬೦೭೦೬೦೭೩		
		ರವಿ ಎಸ್ ಲಿಂಗನ್ನವರು, ಬ್ಯಾಡರಹಳ್ಳಿ ಗ್ರಾ, ಮೊ: ೯೪೪೮೩೧೮೪೩೧		
		ಯಲ್ಲಪ್ಪ ನಾಗಪ್ಪ ಪಾತ್ರೋಟ, ಬ್ಯಾಡರಹಳ್ಳಿ, ಮೊ: ೯೯೦೧೪೨೪೯೪೦	೦೩	೧೯
೨೨	ಮರಡಿಹಳ್ಳಿ	ಮಂಜುಳ (ಅಧ್ಯಕ್ಷರು), ಮರಡಿಹಳ್ಳಿ ಗ್ರಾ, ಮೊ: ೯೭೩೧೦೭೧೯೮೨		

		ಈಶ್ವರಪ್ಪ (ಉಪಾಧ್ಯಕ್ಷರು), ಮರಡಿಹಳ್ಳಿ ಗ್ರಾ, ಮೊ: ೯೭೩೧೩೪೮೩೮೫		
		ಮಹಲಿಂಗಪ್ಪ ಆರ್, ಮರಡಿಹಳ್ಳಿ ಗ್ರಾ, ಮೊ: ೯೮೮೦೦೩೮೧೮೭		
		ಗೀತಮ್ಮ, ಮರಡಿಹಳ್ಳಿ ಗ್ರಾ, ಮೊ: ೯೭೪೧೪೧೬೭೧೬	೦೪	೧೦
೨೩	ಮಸ್ಕಲ್	ಕಮಲಮ್ಮ (ಉಪಾಧ್ಯಕ್ಷರು), ಮಸ್ಕಲ್ ಗ್ರಾ, ಮೊ: ೮೧೫೨೯೦೮೫೩		
		ರೇಣುಕಾಜ್ಯೋತಿ, ಮಸ್ಕಲ್ ಗ್ರಾ, ಮೊ: ೯೮೮೦೦೨೦೫೭		
		ಕೊಲ್ಲಮ್ಮ, ಮಸ್ಕಲ್ ಗ್ರಾ, ಮೊ: ೯೭೪೧೫೫೫೪೧೪	೦೩	೧೫
೨೪	ಮೇಟಿಕುರ್ಕೆ	ಮಂಜುಳ (ಉಪಾಧ್ಯಕ್ಷರು), ಬೀರೇನಹಳ್ಳಿ ಗ್ರಾ, ಮೊ: ೯೬೮೬೮೭೮೨೦೬		
		ನಾಗವೇಣಿ ಎಂ ಬಿ, ಯರದಕಟ್ಟೆ ಗ್ರಾ, ಮೊ: ೯೯೦೧೪೦೯೨೫		
		ಜಯಣ್ಣ , ಮೇಟಿಕುರ್ಕೆ ಗ್ರಾ, ಮೊ: ೮೭೨೨೭೧೩೨೧೪	೦೩	೧೭
೨೫	ಯಲ್ಲದಕೆರೆ	ಸುಜಾತ (ಉಪಾಧ್ಯಕ್ಷರು), ಬೆಗಳಿಕಟ್ಟೆ ಗ್ರಾ, ಮೊ: ೯೭೩೧೬೦೯೦೯		
		ಭಾಗ್ಯ ಬಿ ಕೆ, ಬ್ಯಾರಮಡು ಗ್ರಾ, ಮೊ: ೯೯೦೧೮೦೭೪೨೧	೦೨	೨೩
೨೬	ಯರಬಳ್ಳಿ	ನೀಲಮ್ಮ ಎಂ, ಕಂದಿಕೆರೆ ಗ್ರಾ, ಮೊ: ೯೭೪೧೦೫೨೪೮೯		
		ಸರಸ್ವತಿ, ಕಳವಿಭಾರಿ ಗ್ರಾ, ಮೊ: ೭೦೨೬೬೭೨೨೧೬		
		ಮಹದೇವಪ್ಪ ಆರ್, ಯರಬಳ್ಳಿ ಗ್ರಾ, ಮೊ: ೯೭೪೧೯೭೨೯೨	೦೩	೧೭
೨೭	ರಂಗನಾಥಪುರ	ರಾಜಶೇಖರ್ ಟಿ, ಶಿವಪುರ ಗ್ರಾ, ಮೊ: ೯೬೪೮೯೦೨		
		ಶಾರದಮ್ಮ, ರಂಗನಾಥಪುರ ಗ್ರಾ, ಮೊ: ೭೩೫೩೭೮೩೫೫		
		ಮಹಾಲಿಂಗಪ್ಪ ಎನ್, ಉಪ್ಪಳಗೆರೆ ಗ್ರಾ, ಮೊ: ೯೬೬೩೫೭೫೭೭೨		
		ರುದ್ರಮ್ಮ, ಟಿ ನಾಗೇನಹಳ್ಳಿ ಗ್ರಾ, ಮೊ: ೮೮೬೧೧೫೭೦೦೬		

		ಶಾಂತ ಈ, ಉಪ್ಪಳಗೆರೆ ಗ್ರಾ, ಮೊ: ೯೯೮೦೭೩೦೬೮೯	೦೫	೧೫
೨೮	ರಂಗೇನಹಳ್ಳಿ	ವಿರುಪಾಕ್ಷಪ್ಪ ಆರ್, ಬಿದರಕೆರೆ ಗ್ರಾ, ಮೊ: ೯೫೩೫೮೬೪೩೫೯		
		ಭಾರತಿ ಆರ್, ರಂಗೇನಹಳ್ಳಿ ಗ್ರಾ, ಮೊ: ೭೨೫೯೬೫೯೭೬೬	೦೨	೧೪
೨೯	ವಾಣಿವಿಲಾಸಪುರ	ಮಹಾಲಕ್ಷ್ಮಿ, ಕಂಬದಹಳ್ಳಿ ಗ್ರಾ, ಮೊ: ೮೧೯೭೨೯೮೯೫೭೦೧ ೧೬		
೩೦	ಸೂರಗೊಂಡನಹಳ್ಳಿ	ಜ್ಯೋತಿ (ಉಪಾಧ್ಯಕ್ಷರು), ಗುಡಿಹಳ್ಳಿ ಗ್ರಾ, ಮೊ: ೯೮೮೦೪೩೪೬೬೮		
		ಭೂತಯ್ಯ ಎಲ್, ಗುಡಿಹಳ್ಳಿ ಗ್ರಾ, ಮೊ: ೯೭೪೦೪೭೧೨೦೦		
		ಲಕ್ಷ್ಮಿದೇವಿ, ಸೂರಗೊಂಡನಹಳ್ಳಿ ಗ್ರಾ, ಮೊ: ೯೫೩೫೦೯೫೦೪	೦೩	೨೨
೩೧	ಹರಿಯಬ್ಬೆ	ಕೆಂಚಮ್ಮ, ಸುಗೂರು ಗ್ರಾ, ಮೊ: ೯೯೦೧೧೨೫೩೮೯		
		ನಾಗರಾಜ, ಮಂಗಸವಳ್ಳಿ ಗ್ರಾ, ಮೊ: ೯೯೦೦೩೩೭೨೬೫		
		ರಮೇಶವ, ಹರಿಯಬ್ಬೆ ಗ್ರಾ, ಮೊ: ೭೪೦೬೯೬೬೧೫೮	೦೪	೧೯
೩೨	ಹರ್ತಿಕೋಟೆ	ರಂಗಮಹೇಶ ಹೆಚ್ ಎಂ (ಅಧ್ಯಕ್ಷರು), ಹರ್ತಿಕೋಟೆ ಗ್ರಾ, ಮೊ: ೯೯೮೬೫೩೫೧೬೬		
		ತಿಪಮ್ಮ, ಮಲ್ಲಪ್ಪಹಳ್ಳಿ ಗ್ರಾ, ಮೊ: ೯೭೩೧೩೫೫೯೨೭		
		ಕೆಂಚತಾಯಮ್ಮ, ಮಲ್ಲಪ್ಪಹಳ್ಳಿ ಗ್ರಾ, ಮೊ: ೯೭೪೦೩೨೦೮೭೯	೦೩	೧೪
೩೩	ಹೊಸಯಳನಾಡು	ನಿಂಗಮ್ಮ, ಹಳೇನಾಡು ಗ್ರಾ, ಮೊ: ೯೮೪೪೪೫೬೩೧೧	೦೧	೨೧
		ಒಟ್ಟು	೯೯	೫೧೦

೫. ಹೊಸದುರ್ಗ ಗ್ರಾಮ ಪಂಚಾಯಿತ್‌ಗಳು

ಕ್ರ ಸಂ	ಗ್ರಾಮ ಪಂಚಾಯ್ತಿ	ಸದಸ್ಯರ ಹೆಸರುಗಳು ಮತ್ತು ವಿಳಾಸ	ಸದಸ್ಯರ ಸಂಖ್ಯೆ	ಒಟ್ಟು ಸದಸ್ಯರ ಸಂಖ್ಯೆ
೧	ಆನಿವಾಳ	ಶಿವಮ್ಮ, ಆನಿವಾಳ ಗ್ರಾ, ಮೊ: ೯೯೬೦೩೫೮೧೨೭ ೦೧	೧೦	
೨	ಆತ್ತಿಮಗೆ	–	–	೧೫
೩	ಎಸ್ ನೇರಲಕೆರೆ	ಪರಪ್ಪ, ಸೈಯದ್‌ಸಾಬ್ ಪಾಳ್ಯ ಗ್ರಾ, ಮೊ:೯೮೪೫೯೧೫೦೮೯೦೧	೧೫	
೪	ಕಬ್ಬಳ	ಸಾವಿತ್ರಮ್ಮ, ಕಬ್ಬಳ ಗ್ರಾ,	೦೧	೧೪
೫	ಕಂಚೀಪುರ	ಸರಸ್ವತಿ ಟಿ ಕೆ, ಕಂಚೀಪುರ ಗ್ರಾ, ಮೊ: ೯೫೩೫೪೦೪೨೧೮	೦೧	೨೦
೬	ಕಂಗುವಳ್ಳಿ	ಜಯಮ್ಮ, ಆಲದಹಳ್ಳಿ ಗ್ರಾ, ಮೊ: ೮೭೪೮೮೭೮೧೪೬		
		ಶೋಭ ಹೆಚ್, ಕಂಗುವಳ್ಳಿ ಗ್ರಾ, ಮೊ: ೯೦೦೬೯೫೮೯೭	೦೨	೧೬
೭	ಕಾರೇಹಳ್ಳಿ	ತಿಮ್ಮಣ್ಣ, ಕಾರೇಹಳ್ಳಿ ಗ್ರಾ, ಮೊ: ೮೧೯೭೨೭೨೧೩೬		
		ಬಸಮ್ಮ, ಕಾರೇಹಳ್ಳಿ ಗ್ರಾ, ಮೊ:	೦೨	೧೬
೮	ಕುರುಬರಹಳ್ಳಿ	ಗಂಗಮ್ಮ, ಕುರುಬರಹಳ್ಳಿ ಗ್ರಾ, ಮೊ:೮೯೭೧೯೪೧೨೭೨	೦೧	೧೧
೯	ಕೆಲ್ಲೋಡು	ಮಂಜುನಾಥ (ಉಪಾಧ್ಯಕ್ಷರು), ಕೆಲ್ಲೋಡು ಗ್ರಾ, ಮೊ: ೯೦೧೮೧೬೫೬೪	೦೧	೧೭
೧೦	ಕೈನಡು	ಕವಿತ ಕೆ ಎಂ (ಉಪಧ್ಯಕ್ಷರು), ಕೈನಡು ಗ್ರಾ, ಮೊ: ೯೮೮೦೦೪೬೫೫೩	೦೧	೧೫
೧೧	ಗುಡ್ಡದನೇರಲಕೆರೆ	–	–	೨೨
೧೨	ಚಿಕ್ಕಬಾಲ್ಯದಕರೆ	ಲಕ್ಷ್ಮಮ್ಮ, ದೊಡ್ಡಬಾಲ್ಯದಕೆರೆ ಗ್ರಾ, ಮೊ: ೯೦೧೬೪೨೫೩೧		

		ಹನುಮಂತಪ್ಪ, ಚಿಕ್ಕಬಾಲ್ಯದಕರೆ ಗ್ರಾ, ಮೊ: ೯೯೭೨೫೬೮೭೭೦	೦೨	೧೨
೧೩	ಜಾನಕಲ್	ಕಣ್ಣುಮಪ್ಪ, ಜಾನಕಲ್ ಗ್ರಾ,	೦೧	೧೮
೧೪	ತಂಡಗ	ಸುರೇಶ ಜಿ, ಗರಗ ಗ್ರಾ, ಮೊ: ೯೬೬೩೮೭೮೨೪೭	೦೧	೧೭
೧೫	ದೇವಪುರ	ಮಾರುತಿ ಎಂ ಎನ್, ಹೊನ್ನೇನಹಳ್ಳಿ ಗ್ರಾ, ಮೊ: ೯೫೯೧೧೯೪೯೭೪	೦೧	೧೯
೧೬	ದೇವಿಗೆರೆ	ವಸಂತಮ್ಮ, ಮಾವಿನಕಟ್ಟೆ ಗ್ರಾ, ಮೊ: ೭೦೯೦೨೭೩೦೧೬		
		ದಿನೇಶ ಈ, ದೇವಿಗೆರೆ ಗ್ರಾ, ಮೊ: ೯೭೪೧೬೬೦೩೫೪		
		ಮಂಜಮ್ಮ, ಆಂತಿಕೊಳಲು ಗ್ರಾ, ಮೊ: ೯೪೪೮೫೪೨೫೨೯		
		ಕುಮಾರ ಬಿ ಎ, ಬೀಪನಹಳ್ಳಿ ಗ್ರಾ, ಮೊ: ೮೪೯೪೪೯೦೮೭೭	೦೪	೧೭
೧೭	ದೊಡ್ಡಘಟ್ಟ	ಮಾಡ್ಲಪ್ಪ ಹೆಚ್ ಟಿ, ಎನ್ ವಿ ಹಟ್ಟಿ ಗ್ರಾ, ಮೊ: ೭೨೫೫೫೨೪೩೯೭		
		ಶಿವಪ್ಪ, ಗೂಳಿಹಟ್ಟಿ ಗ್ರಾ, ಮೊ: ೮೧೦೫೩೧೯೨೫೦	೦೨	೧೮
೧೮	ದೊಡ್ಡಕಿಟ್ಟದಹಳ್ಳಿ	ಮಿನಾಕ್ಷಿ ಟಿ ಹೆಚ್ ಅಂಜನಮೂರ್ತಿ, ದೊಡ್ಡಕಿಟ್ಟದಹಳ್ಳಿ ಗ್ರಾ,		
		ಮೊ: ೯೬೮೬೭೪೬೫೦೩		
		ಭಾರತಮ್ಮ ಗಿರಿಯಪ್ಪ, ನಾಕೀಕೆರೆ ಗ್ರಾ, ಮೊ: ೮೧೯೭೦೭೫೫೭೩ ಕರಿಬಸಪ್ಪ ಓ, ಸಣ್ಣಕಿಟ್ಟದಹಳ್ಳಿ ಗ್ರಾ, ಮೊ: ೮೧೯೭೪೯೪೧೪೮	೦೩	೧೨
೧೯	ದೊಡ್ಡತೇಕಲವಟ್ಟಿ	–	–	೧೫
೨೦	ಬಲ್ಲಾಳ ಸಮುದ್ರ	ಬಸವರಾಜಪ್ಪ ಎಲ್, ಅಲಗಟ್ಟೆ ಗ್ರಾ,		
		ನಾಗರಾಜಪ್ಪ, ಕಲ್ಕೆರೆ ಗ್ರಾ, ಮೊ: ೯೧೦೮೩೧೯೮೨೪	೦೨	೧೨
೨೧	ಬಾಗೂರು	ಜಯಮ್ಮ, ಆತ್ತಿಮಗೆ ಗ್ರಾ, ಮೊ: ೯೯೦೨೭೭೯೮೭೭		

		ರಾಜಪ್ಪ, ಬಾಗೂರು ಗ್ರಾ, ಮೊ:೮೧೫೧೯೨೩೨೫೨	೦೨	೧೪
೨೨	ಬೆಲಗೂರು	ಮಂಜುಳ, ಬೆಲಗೂರು ಗ್ರಾ, ಮೊ: ೭೨೫೯೪೫೩೮೬೮		
		ತಮ್ಮಯ್ಯ, ಹರಿಯನಹಳ್ಳಿ ಗ್ರಾ, ಮೊ: ೯೮೪೫೪೪೦೩೬೨		
		ಚಂದ್ರಪ್ಪ, ಬೆಲಗೂರು ಗ್ರಾ, ಮೊ: ೮೧೦೫೨೯೨೭೫೦	೦೩	೧೯
೨೩	ಬೋಕಿಕೆರೆ	ರಂಗಮ್ಮ ಆರ್, ಮಾರಗೂಂಡನದಿಬ್ಬ ಗ್ರಾ, ಮೊ: ೯೬೧೧೮೧೩೦೭೭	೦೧	೧೯
೨೪	ಮಧುರೆ	–	–	–
೨೫	ಮತ್ತೋಡು	–	–	–
೨೬	ಮಲ್ಲಪ್ಪನಹಳ್ಳಿ	ಲತಾ (ಉಪಾಧ್ಯಕ್ಷರು), ಚಿಕ್ಕಯಗಟೆ ಗ್ರಾ, ಮೊ: ೯೮೪೪೮೧೯೨೪೮		
		ರತ್ನಮ್ಮ, ಬುರುಡೇಕಟ್ಟೆ ಗ್ರಾ, ಮೊ: ೭೭೬೦೦೭೫೬೮೩		
		ಚಂದ್ರಪ್ಪ ಎಸ್, ಮಲ್ಲಪ್ಪನಹಳ್ಳಿ ಗ್ರಾ, ಮೊ: ೯೭೪೦೯೨೨೧೩೦	೦೩	೧೪
೨೭	ಮಾಡದಕೆರೆ	ಲಕ್ಷ್ಮಕ್ಕ (ಅಧ್ಯಕ್ಷರು), ಮಾಡದಕೆರೆ ಗ್ರಾ, ಮೊ: ೯೯೪೫೦೦೯೨೨೧		
		ರಾಜಣ್ಣ, ಮಾಡದಕೆರೆ ಗ್ರಾ, ಮೊ: ೯೯೪೫೧೯೯೧೫೬	೦೨	೧೨
೨೮	ಲಕ್ಷೀಹಳ್ಳಿ	ಚಂದ್ರಮ್ಮ ವೈಮುದ್ದಪ್ಪ (ಉಪಾಧ್ಯಕ್ಷರು), ಲಕ್ಷೀಹಳ್ಳಿ ಗ್ರಾ, ಮೊ: ೮೧೯೭೭೬೮೫೧೧		
		ವಿನೋದಮ್ಮ, ಲಕ್ಷೀಹಳ್ಳಿ ಗ್ರಾ, ಮೊ: ೯೯೭೨೭೫೮೧೪೫		
		ಶಿವಣ್ಣ, ಲಕ್ಷೀಹಳ್ಳಿ ಗ್ರಾ, ಮೊ: ೯೭೩೧೭೦೦೯೦೪	೦೩	೧೭
೨೯	ಶ್ರೀರಾಂಪುರ	ಇಂಧಮ್ಮ, ಶ್ರೀರಾಂಪುರ ಗ್ರಾ, ಮೊ: ೮೮೬೧೫೧೨೩೨೮		
		ಸೋಮಶೇಖರ, ಶ್ರೀರಾಂಪುರ ಗ್ರಾ, ಮೊ: ೯೯೦೧೮೬೪೨೬೭	೦೨	೧೭

೩೦	ಸಾಣೇಹಳ್ಳಿ	ರೇಖಾ ಬಿ ಕೆ, ನೀರಗುಂದ ಗ್ರಾ, ಮೊ: ೯೯೪೫೯೧೦೩೬೨		
		ಕಣುಮಕ್ಕ, ಪೀಲಾಪುರ ಗ್ರಾ, ಮೊ: ೯೯೦೧೬೨೧೫೮೮		
		ಮಂಜುನಾಥ ಎಸ್ ಹೆಚ್, ಸಾಣೇಹಳ್ಳಿ ಗ್ರಾ, ಮೊ: ೯೬೩೭೯೩೪೯೬೫	೦೩	೨೦
೩೧	ಹುಣವಿನಡು	ಕವಿತ, ಕಪ್ಪುಗೆರೆ ಗ್ರಾ, ಮೊ: ೯೯೮೬೬೨೩೩೩೦		
		ರುದ್ರಪ್ಪ ಎನ್, ಗೊರವಿನಕಲ್ಲು ಗ್ರಾ, ಮೊ: ೯೫೩೫೬೧೭೯೯೮	೦೨	೨೨
೩೨	ಹೆಗ್ಗೆರೆ	ಗೌರಮ್ಮ, ಹೆಗ್ಗೆರೆ ಗ್ರಾ, ಮೊ: ೯೮೪೫೬೪೮೩೯೧	೦೧	೧೫
೩೩	ಹೆಬ್ಬಳ್ಳಿ	ರತ್ನಮ್ಮ, ಹಬ್ಬಳ್ಳಿ ಗ್ರಾ, ಮೊ: ೮೨೫೯೮೪೬೫೦೬	೦೧	೧೩
		ಒಟ್ಟು	೫೦	೪೯೩

೬. ಹೊಳಲ್ಕೆರೆ ಗ್ರಾಮ ಪಂಚಾಯಿತ್‌ಗಳು

ಕ್ರ ಸಂ	ಗ್ರಾಮ ಪಂಚಾಯ್ತಿ	ಸದಸ್ಯರ ಹೆಸರುಗಳು ಮತ್ತು ವಿಳಾಸ	ಸದಸ್ಯರ ಸಂಖ್ಯೆ	ಒಟ್ಟು ಸದಸ್ಯರ ಸಂಖ್ಯೆ
೧	ಅರೇಹಳ್ಳಿ	ಜಗಮ್ಮ (ಉಪಾಧ್ಯಕ್ಷರು), ಜಯಂತಿನಗರ ಗ್ರಾ, ಮೊ: ೯೯೬೧೮೯೨೬೨೮	೦೧	೧೩
೨	ಅಂದನೂರು	ರಾಜಪ್ಪ (ಉಪಾಧ್ಯಕ್ಷರು), ದಂಡಿಗೇನಹಳ್ಳಿ ಗ್ರಾ, ಮೊ: ೮೫೪೮೯೨೬೭೪೭		
		ಭಾಗ್ಯಮ್ಮ, ಹಿರಿಯೂರು ಗ್ರಾ, ಮೊ: ೭೮೨೯೯೨೭೫೨೩	೦೨	೧೯
೩	ಆಡನೂರು	ಗೌರಮ್ಮ ಎ (ಉಪಾಧ್ಯಕ್ಷರು, ಅಪ್ಪರಸನಹಳ್ಳಿ ಗ್ರಾ, ಮೊ: ೯೯೭೨೦೨೦೩೦೩		
		ಆಂಜಿನಪ್ಪ ಜೆ, ಆಡನೂರು ಗ್ರಾ, ಮೊ: ೯೯೦೧೪೬೨೫೩೦		
		ಹನುಮಂತಪ್ಪ, ಪಾಡಿಗಟ್ಟೆ ಗ್ರಾ, ಮೊ: ೯೯೪೫೭೨೮೯೦೭		
		ಯಶೋಧಮ್ಮ, ಚೀರನಹಳ್ಳಿ ಗ್ರಾ, ಮೊ: ೯೦೦೮೯೫೦೧೯೮	೦೩	೨೧
೪	ಆರ್ ನುಲೇನೂರು	ನಾಗರಾಜ ಆರ್, ಬಸಾಪುರ ಗ್ರಾ, ಮೊ: ೮೮೬೧೦೨೪೮೨೯	೦೧	೧೪
೫	ಉಪ್ಪರಿಗೇನಹಳ್ಳಿ	ವಿಜಯಕುಮಾರ, ಗೊಲ್ಲರಹಳ್ಳಿ ಗ್ರಾ, ಮೊ: ೯೫೩೫೯೮೩೭೩೫		
		ತೊಳಸಮ್ಮ, ಗೂಳಿಹೊಸಹಳ್ಳಿ ಗ್ರಾ, ಮೊ: ೯೪೮೩೬೫೦೪೬೩		
		ರೇಣುಕಾಮ್ಮ, ನಂದನಹೊಸೂರು ಗ್ರಾ, ಮೊ: ೯೯೬೪೪೮೧೩೨೭		
		ಕೊಲ್ಲಮ್ಮ, ಕೆರೆಯಾಗಹಳ್ಳಿ ಗ್ರಾ, ಮೊ: ೮೧೦೫೬೨೨೭೭೧	೦೪	೨೧
೬	ಎನ್ ಜಿ ಹಳ್ಳಿ	ಶ್ರೀನಿವಾಸ ಜಿ (ಅಧ್ಯಕ್ಷರು), ಎನ್ ಜಿ ಹಳ್ಳಿ ಗ್ರಾ, ಮೊ: ೯೯೭೨೪೧೧೨೫೭		
		ಮಂಜಮ್ಮ, ಎನ್ ಜಿ ಹಳ್ಳಿ ಗ್ರಾ, ಮೊ: ೯೩೪೩೧೩೪೪೩೭	೦೨	೧೫

೭	ಗಂಗಸಮುದ್ರ	ನೀಲಮ್ಮ (ಉಧ್ಯಕ್ಷರು), ಗಂಗಸಮುದ್ರ ಗ್ರಾ, ಮೊ: ೯೫೩೮೧೪೯೫೪೭	೦೧	೧೦
೮	ಗುಂಡೇರಿ	ಪದ್ಮಾವತಿ ಆರ್, ಇಡೇಹಳ್ಳಿ ಗ್ರಾ, ಮೊ: ೮೧೦೫೪೨೯೬೭೫		
		ಮಂಜುನಾಥ, ಗುಂಡೇರಿ ಗ್ರಾ,		
		ವೆಂಕಟೇಶ, ಮಾಳೇನಹಳ್ಳಿ ಗ್ರಾ,	೦೩	೧೭
೯	ಗುಂಜಿಗನೂರು	ಗಂಗಮ್ಮ, ಗುಂಜಿಗನೂರು ಗ್ರಾ, ಮೊ: ೮೮೬೧೦೨೧೫೫೨		
		ಚಂದ್ರಪ್ಪ, ಚಿಕ್ಕಂದವಾಡಿ ಗ್ರಾ, ಮೊ: ೯೪೮೧೧೭೩೩೯೩	೦೨	೧೬
೧೦	ಚಿಕ್ಕಜಾಜೂರು	ಕವಿತಾ, ಚಿಕ್ಕಜಾಜೂರು ಗ್ರಾ, ಮೊ: ೯೯೮೦೬೫೦೦೨೧		
		ಮಲ್ಲೇಶ ಎಂ, ಚಿಕ್ಕಜಾಜೂರು ಗ್ರಾ, ಮೊ: ೯೯೮೦೧೨೦೪೫೪		
		ಲಕ್ಷ್ಮಿದೇವಿ ರುದ್ರೇಶ್, ಚಿಕ್ಕಜಾಜೂರು ಗ್ರಾ,		
		ಸಾವಿತ್ರಮ್ಮ, ಬಾಣಗೆರೆ ಗ್ರಾ, ಮೊ: ೯೯೭೨೨೮೮೭೫೨	೦೪	೧೮
೧೧	ಚಿಕ್ಕಎಮ್ಮಿಗನೂರು	ರಂಗಪ್ಪ ಟಿ, ಚಿಕ್ಕಎಮ್ಮಿಗನೂರು ಗ್ರಾ, ಮೊ: ೯೯೭೨೯೮೮೦೬೦		
		ಪ್ರೇಮ, ಚಿಕ್ಕಎಮ್ಮಿಗನೂರು ಗ್ರಾ,		
		ಜಯಮ್ಮ, ಕೊಡಗವಳ್ಳಿ ಗ್ರಾ, ಮೊ: ೮೧೦೫೪೧೭೭೮೨	೦೩	೧೭
೧೨	ಚಿತ್ರಹಳ್ಳಿ	ದೇವಿರಮ್ಮ, ಚಿತ್ರಹಳ್ಳಿ ಗ್ರಾ, ಮೊ: ೯೪೮೦೫೦೦೩೯೮		
		ಅಂಜಿನಮ್ಮವ, ಹನುಮನಕಟ್ಟೆ ಗ್ರಾ, ಮೊ:	೦೨	೨೨
೧೩	ಟಿ ನುಲೇನೂರು	ಜಯ್ಯಪ್ಪ ಕೆ (ಅಧ್ಯಕ್ಷರು), ಬಿ ಜಿ ಹಳ್ಳಿ ಗ್ರಾ, ಮೊ: ೯೪೮೦೨೬೯೦೭೧		
		ಮಂಜಮ್ಮ, ಟಿ ನುಲೇನೂರು ಗ್ರಾ, ಮೊ: ೯೪೮೨೬೩೯೦೯೫		
		ಸುನೀತ ಎಸ್ ಬಿ, ಲಿಂಗದಹಳ್ಳಿ ಗ್ರಾ, ಮೊ: ೯೪೮೧೧೮೨೭೬೨		

	ಮಹಂತೇಶ ಪಿ ಎಸ್, ತೊಡರನಾಳ್ ಗ್ರಾ, ಮೊ: ೯೭೩೧೮೬೯೬೭೭	೦೪	೧೩
೧೪ ತಾಳಿಕಟ್ಟೆ	ಗಂಗಮ್ಮ, ತಾಳಿಕಟ್ಟೆ ಗ್ರಾ, ಮೊ: ೯೯೦೧೭೧೮೯೬೪		
	ಲೋಲಮ್ಮ, ತಾಳಿಕಟ್ಟೆ ಕಾವಲು ಗ್ರಾ,	೦೨	೧೯
೧೫ ತಾಳ್ಯ	ಶಿವಪ್ಪ, ತಾಳ್ಯ ಗ್ರಾ, ಮೊ: ೭೦೨೨೮೪೯೮೮		
	ನೀಲಮ್ಮ, ಕುಮ್ಮಿನಘಟ್ಟ ಗ್ರಾ, ಮೊ: ೯೮೪೪೫೯೦೮೫೯	೦೨	೧೭
೧೬ ತೇಕಲವಟ್ಟೆ	ಕೆಂಚಪ್ಪ, ಕೊಳಾಳು ಗ್ರಾ, ಮೊ: ೭೬೭೬೮೫೯೨೧೨	೦೧	೧೯
೧೭ ತುಪ್ಪದಹಳ್ಳಿ	ಜ್ಞಾನಮೂರ್ತಿ, ತುಪ್ಪದಹಳ್ಳಿ ಗ್ರಾ, ಮೊ: ೮೭೪೯೦೮೮೭೦೪	೦೧	೧೫
೧೮ ದುಮ್ಮಿ	ಸುಶೀಲಮ್ಮ (ಉಪಾಧ್ಯಕ್ಷರು), ದೊಗ್ಗನಾಳ್ ಗ್ರಾ, ಮೊ: ೯೪೮೦೫೦೦೫೮		
	ದಾಸಿಕಟ್ಟೆ ರುದ್ರಪ್ಪ, ಗ್ರಾ, ಅಂಜಿನಾಪುರ ಗ್ರಾ, ಮೊ: ೯೬೬೩೬೫೪೨೦೫		
	ಪ್ರಕಾಶ ಕೆ, ಕಾಲ್ಕೆರೆ ಗ್ರಾ, ಮೊ: ೯೯೬೪೮೯೫೫೪೬		
	ಕುಕ್ಕಡಮ್ಮ ಕೆ, ದುಮ್ಮಿ ಗ್ರಾ, ಮೊ: ೯೦೦೮೬೮೫೫೫೪	೦೪	೨೩
೧೯ ಮದ್ದೇರು	ಅಡಿವಪ್ಪ, ಟಿ ಎಮ್ಮೀಗನೂರು ಗ್ರಾ, ಮೊ: ೮೧೦೫೪೧೨೪೧		
	ನಾಗರತ್ನಮ್ಮ, ಟಿ ಎಮ್ಮೀಗನೂರು ಗ್ರಾ,		
	ಸ್ವಾಮಿ, ಮದ್ದೇರು ಗ್ರಾ,	೦೩	೧೭
೨೦ ಮಲ್ಲಾಡಿಹಳ್ಳಿ	ರವಿಕುಮಾರ್, ಮಲ್ಲಾಡಿಹಳ್ಳಿ ಗ್ರಾ, ಮೊ: ೯೪೫೧೯೨೯೪೯		
	ಅನಸೂಯಮ್ಮ, ಕೆಂಗಂಟೆ ಗ್ರಾ,	೦೨	೧೫
೨೧ ಮುತ್ತುಗದೂರು	ಗೌರಮ್ಮ ಎಂ ಇ, ಮುತ್ತುಗದೂರು ಗ್ರಾ, ಮೊ: ೭೨೫೬೩೮೪೩೪		
	ಶವಮಾರ್ತಪ್ಪ, ವಿಶ್ವನಾಥನಹಳ್ಳಿ ಗ್ರಾ, ಮೊ: ೯೭೩೧೪೬೮೧೯		

		ರೇಖಮ್ಮವ, ಕಾಳಘಟ್ಟ ಗ್ರಾ, ಮೊ: ೯೪೪೮೩೫೩೭೯೬		
		ರುದ್ರಪ್ಪ ಎಂ ಎಸ್, ಗ ಮುತ್ತುಗದೂರು ಗ್ರಾ, ಮೊ: ೮೧೯೭೭೮೨೬೬೯		
		ರಾಜಪ್ಪ, ಮುತ್ತುಗದೂರು ಗ್ರಾ, ಮೊ: ೯೫೩೫೬೯೨೨೭೬	೦೫	೧೮
೨೨	ಬಿದರಕೆರೆ	ಬಸಪ್ಪ, ಗುಂಡಸಮುದ್ರ ಗ್ರಾ, ಮೊ: ೯೭೪೦೨೫೫೮೮೬		
		ಕಮಲಮ್ಮ, ಜಕ್ಕನಹಳ್ಳಿ ಗ್ರಾ, ಮೊ: ೯೭೪೩೮೦೩೪೭೮	೦೨	೧೩
೨೩	ಬಿ ದುರ್ಗ	ಕಾಂತಮ್ಮ, ಬಿ ದುರ್ಗ ಗ್ರಾ, ಮೊ: ೯೯೪೫೪೯೩೬೮೧		
		ದಿನೇಶ ಎನ್ ಎಮ್, ಹಿರೇಕಂದವಾಡಿ ಗ್ರಾ, ಮೊ: ೮೭೪೬೯೪೯೨೮೨	೦೨	೧೮
೨೪	ರಾಮಗಿರಿ	ನೀಲಮ್ಮ (ಉಪಾಧ್ಯಕ್ಷರು), ದಾಸಿಕಟ್ಟೆ ಗ್ರಾ, ಮೊ: ೮೧೯೭೪೩೫೩೦೩		
		ಕರಿಸಿದ್ದಪ್ಪ, ರಾಮಗಿರಿ ಗ್ರಾ, ಮೊ: ೯೯೦೦೮೬೪೭೯೭	೦೨	೧೫
೨೫	ವಿಶ್ವನಾಥಹಳ್ಳಿ	ಮಮತ, ವಿಶ್ವನಾಥಹಳ್ಳಿ ಗ್ರಾ, ಮೊ: ೭೮೯೨೪೭೯೪೪		
		ರೂಪ, ಸಾಂತೇಹಳ್ಳಿ ಮೊ: ೯೭೪೦೩೧೧೪೧೦	೦೨	೧೪
೨೬	ಶಿವಗಂಗ	ಶಂಕರಪ್ಪ (ಅಧ್ಯಕ್ಷರು), ಗಿಲಿಕೇನಹಳ್ಳಿ ಗ್ರಾ, ಮೊ: ೯೦೦೮೧೧೮೧೪೬	೦೧	೧೨
೨೭	ಶಿವಪುರ	ರುದ್ರಮ್ಮ (ಅಧ್ಯಕ್ಷರು), ಕುನುಗಲಿ ಗ್ರಾ, ಮೊ: ೯೦೦೮೨೫೦೫೨೪		
		ಸುಧಾ, ಶಿವಪುರ ಗ್ರಾ, ಮೊ: ೯೭೪೦೬೦೧೫೨೪		
		ಮಹಾಂತೇಶಪ್ಪ, ಹುಲೇಮಳಲಿ ಗ್ರಾ, ಮೊ: ೯೭೪೦೬೦೨೭೭೧	೦೩	೧೯
೨೮	ಹಿರೇಎಮ್ಮಿಗನೂರು	ಹಾಲಮ್ಮ ಎ ಕೆ (ಉಪಾಧ್ಯಕ್ಷರು), ಕಡೂರು ಗ್ರಾ, ಮೊ: ೯೦೦೮೭೭೩೫೧೧		
		ದುರುಗೇಶ ಕುಮಾರ ಆರ್, ಹಿರೇಎಮ್ಮಿಗನೂರು ಗ್ರಾ, ಮೊ: ೭೨೫೯೮೪೩೫೬೦		
		ಪಾರಮ್ಮ, ಕಾಮನಹಳ್ಳಿ ಗ್ರಾ, ಮೊ: ೯೬೮೬೨೮೯೬೭೭		

		ರೇಣುಕಾಮ್ಮ, ನಂದಿಹಳ್ಳಿ ಗ್ರಾ, ಮೊ: ೯೯೮೦೭೬೬೭೯೫	೦೪	೧೭
೨೯	ಹೆಚ್ ಡಿ ಪುರ	ಅನ್ನಪೂರ್ಣಮ್ಮ, ಹೆಚ್ ಡಿ ಪುರ ಗ್ರಾ, ಮೊ: ೭೮೯೯೯೮೭೫೦		
		ಮೈಲಾರಪ್ಪ, ಗ್ರಾ, ಹೆಚ್ ಡಿ ಪುರ ಗ್ರಾ, ಮೊ: ೮೮೬೪೧೮೯೫೯೧	೦೨	೨೧
		ಒಟ್ಟು	೭೦	೫೦೧

ಚಿತ್ರದುರ್ಗ ಜಿಲ್ಲೆಯ ಮಾದಿಗ ಸಮುದಾಯದ ತಾಲೂಕು ಪಂಚಾಯಿತಿಯ ಅಧ್ಯಕ್ಷ, ಉಪಾಧ್ಯಕ್ಷರ ಮತ್ತು ಸದಸ್ಯರ ಮಾಹಿತಿ ವಿವರ

೧. ಚಳ್ಳಕೆರೆ ತಾಲೂಕು ಪಂಚಾಯಿತ್

ಕ್ರ. ಸಂ	ಸದಸ್ಯರ ಹೆಸರುಗಳು	ಮೊಬೈಲ್ ಸಂಖ್ಯೆ	ಸದಸ್ಯರ ಸಂಖ್ಯೆ	ಒಟ್ಟು ಸದಸ್ಯರ ಸಂಖ್ಯೆ
೧	ಗಿರಿಯಪ್ಪ ಟಿ	೯೯೪೫೫೩೬೭೦೩		–
೨	ತಿಪ್ಪಕ್ಕ	೯೯೬೪೫೪೪೦೪೧	–	–
೩	ಸಮರ್ಥರಾವ್ ಹೆಚ್	೯೬೧೧೭೦೭೩೪೧	–	–
	ಒಟ್ಟು		೦೩	೩೦

೨. ಚಿತ್ರದುರ್ಗ ತಾಲೂಕು ಪಂಚಾಯಿತ್

ಕ್ರ. ಸಂ	ಸದಸ್ಯರ ಹೆಸರುಗಳು	ಮೊಬೈಲ್ ಸಂಖ್ಯೆ	ಸದಸ್ಯರ ಸಂಖ್ಯೆ	ಒಟ್ಟು ಸದಸ್ಯರ ಸಂಖ್ಯೆ
೧	ದುರುಗಮ್ಮ	೯೭೪೨೩೯೦೦೩೬	–	–
೩	ತಿಪ್ಪಮ್ಮ	೮೭೪೭೮೪೧೧೧೨	–	–
	ಒಟ್ಟು		೦೨	೨೯

೩. ಮೊಳಕಾಲ್ಮೂರು ತಾಲೂಕು ಪಂಚಾಯಿತ್

ಕ್ರ ಸಂ	ಸದಸ್ಯರ ಹೆಸರುಗಳು	ಮೊಬೈಲ್ ಸಂಖ್ಯೆ	ಸದಸ್ಯರ ಸಂಖ್ಯೆ	ಒಟ್ಟು ಸದಸ್ಯರ ಸಂಖ್ಯೆ
೧	ಚನ್ನಮ್ಮ	೭೨೫೯೦೮೪೫೫೪	–	–
೨	ತಿಮ್ಮಕ್ಕ	೯೯೦೧೩೭೨೪೩೨	–	–
೩	ಮಂಜುನಾಥ ಎ ಕೆ (ಉಪಧ್ಯಕರು)	೯೪೪೯೭೪೩೭೭೩	–	–
	ಒಟ್ಟು		೦೩	೧೩

೪. ಹಿರಿಯೂರು ತಾಲೂಕು ಪಂಚಾಯಿತ್

ಕ್ರ. ಸಂ	ಸದಸ್ಯರ ಹೆಸರುಗಳು	ಮೊಬೈಲ್ ಸಂಖ್ಯೆ	ಸದಸ್ಯರ ಸಂಖ್ಯೆ	ಒಟ್ಟು ಸದಸ್ಯರ ಸಂಖ್ಯೆ
೧	ಓಂಕಾರಪ್ಪ	೯೮೪೫೯೩೬೬೫೩	–	–
೨	ಕರಿಯಪ್ಪ ಪಿ ಎಂ	೯೬೩೨೦೯೨೩೪೫	–	–
೩	ತಿಪ್ಪೇಸ್ವಾಮಿ ಬಿ ಕೆ	೯೮೮೦೦೧೬೩೬೧	–	–
೪	ತಿಪ್ಪಮ್ಮ	೯೬೩೨೧೩೨೪೨೯	–	–
	ಒಟ್ಟು		೦೪	೨೩

೫. ಹೊಸದುರ್ಗ ತಾಲೂಕು ಪಂಚಾಯಿತ್

ಕ್ರ. ಸಂ	ಸದಸ್ಯರ ಹೆಸರುಗಳು	ಮೊಬೈಲ್ ಸಂಖ್ಯೆ	ಸದಸ್ಯರ ಸಂಖ್ಯೆ	ಒಟ್ಟು ಸದಸ್ಯರ ಸಂಖ್ಯೆ
೧	ಶಶಿಕಲಾ ಆರ್	೯೯೮೦೨೦೨೬೩೮	–	–
೨	ಹೇಮ ಮಂಜುನಾಥ	೯೫೩೫೩೧೧೩೦೨	–	–
	ಒಟ್ಟು		೦೨	೨೦

೬. ಹೊಳಲ್ಕೆರೆ ತಾಲೂಕು ಪಂಚಾಯಿತ್

ಕ್ರ. ಸಂ	ಸದಸ್ಯರ ಹೆಸರುಗಳು	ಮೊಬೈಲ್ ಸಂಖ್ಯೆ	ಸದಸ್ಯರ ಸಂಖ್ಯೆ	ಒಟ್ಟು ಸದಸ್ಯರ ಸಂಖ್ಯೆ
೧	ವಿದ್ಯಾ ಗೋಡೆಮನೆ	೯೪೪೮೧೫೪೯೮೨	–	–
೨	ಸುಜಾತ ಬಿ (ಅಧ್ಯಕ್ಷರು)	೯೧೦೮೧೧೦೪೧೦	–	–
	ಒಟ್ಟು		೦೨	೨೦

೧. ಚಿತ್ರದುರ್ಗ ಜಿಲ್ಲೆಯ ಮಾದಿಗ ಸಮುದಾಯದ ಜಿಲ್ಲಾ ಪಂಚಾಯಿತ್ ಅಧ್ಯಕ್ಷರ, ಉಪಾಧ್ಯಕ್ಷರ ಮತ್ತು ಸದಸ್ಯರ ಮಾಹಿತಿ ವಿವರ

ಕ್ರ. ಸಂ	ಸದಸ್ಯರ ಹೆಸರುಗಳು	ಮೊಬೈಲ್ ಸಂಖ್ಯೆ	ಸದಸ್ಯರ ಸಂಖ್ಯೆ	ಒಟ್ಟು ಸದಸ್ಯರ ಸಂಖ್ಯೆ
೧	ಗೀತಾ ಆರ್	೯೬೬೩೨೧೩೨೦೬	೧	-
೨	ಚಂದ್ರಿಕಾ ಶ್ರೀನಿವಾಸ	೯೦೦೮೪೨೭೪೫೦	೧	-
೩	ನರಸಿಂಹರಾಜ್ ಆರ್	೯೯೦೨೨೧೫೫೧೫	೧	-
೪	ಪ್ರಕಾಶ ಬಿ ಪಿ	೯೪೪೮೩೩೮೭೩೯	೧	-
೫	ಮಮುತಾ ಆರ್	೯೯೮೦೪೫೭೮೯೬	೧	-
೬	ಮುಂಡ್ರಿಗಿ ನಾಗರಾಜ	೯೯೮೦೩೬೮೯೯೯	೧	-
೭	ಸವಿತಾ ಬಿ	೮೯೭೧೮೦೧೦೮೫	೧	-
	ಒಟ್ಟು		೦೭	೩೭

ಪರಿಶಿಷ್ಟ ಜಾತಿಗಳ ಪಟ್ಟಿ

ಕ್ರ ಸಂ	ಹೆಸರು	ಕ್ರ ಸಂ	ಹೆಸರು
೧.	ಆದಿ ಆಂಧ್ರ	೨.	ಆದಿದ್ರಾವಿಡ
೩.	ಆದಿಕರ್ನಾಟಕ	೪.	ಆದಿಯ (ಕೊಡಗು ಜಿಲ್ಲೆಯಲ್ಲಿ)
೫.	ಅಗೇರ	೬.	ಅಜಿಲಾ
೭.	ಅರುಂತತಿಯರು	೮.	ಅರ್‍ವಮಾಲ
೯.	ಅನಾಮುಕ	೧೦	ಅರೆಮಾಲ
೧೧	ಭೈರ	೧೨	ಬಾಕುಡಾ
೧೩	ಬಂಟ (ಬೆಳಗಾವಿ, ಬಿಜಾಪುರ, ಉತ್ತರ ಕನ್ನಡ ಜಿಲ್ಲೆ)	೧೪	ಬಲಗೈ
೧೫	ಬಾಂದಿ	೧೬	ಬಾಕಡ
೧೭	ಬಂಜಾರ, ಲಂಬಾಣಿ	೧೮	ಬಾತಡ
೧೯	ಬೇಡ ಜಂಗಮ, ಬುಡ್ಗಜಂಗಮ	೨೦.	ಬೆಳ್ಳರ
೨೧	ಭಂಗಿ, ಮೆಹ್ತರ, ಓಲ್ಗಾನ, ರುಬಿ, ಮಲ್ಕಾನ, ಹಲಾಲ್ಖೋರ್, ಲಾಲಾಬೇಗಿ, ಬಾಲ್ಮೀಕಿ, ಕೊರರ್, ಜಾಡ್ಮಾಲಿ	೨೨	ಭಂಬಿ, ಬಾಂಬೀ, ಆಸಾಡರು, ಅಸೋಡಿ, ಚಮಡಿಯ, ಚಮಾರ್, ಚಂಬಾರ್, ಚಮಗಾರ, ಹರಳಯ್ಯ, ಹರಳಿ, ಬಾಲ್ಯ, ಮಾಚಿಗಾರ, ಮೇಚಿಗಾರ, ಮಾದರ, ಮಾದಿಗ್, ಮೇಚಿ, ಮಾಚಿ, ಕಾಮಾಟಿಮೇಚಿ, ರಾಣಿಗಾರ್, ರೋಹಿದಾಸ್, ರೋಹಿತ, ಸಮಗಾರ್

೨೩	ಬೋವಿ	೨೪	ಬಿಂಡ್ಲ
೨೫	ಬ್ಯಾಗಾರ	೨೬	ಚಕ್ಕಿಲಿಯನ್
೨೭	ಚಲವಾದಿ, ಚಲ್ವಾದಿ, ಚನ್ನಯ್ಯ	೨೮	ಚಂಡಾಲ
೨೯.	ಚೆನ್ನದಾಸರ, ಹೊಲೆಯದಾಸರ್	೩೦.	ದಕ್ಕಳ, ದೊಕ್ಕಳವರು
೩೧	ದಕ್ಕಳಿಗ	೩೨.	ದೋರ್, ಕಕ್ಕಯ್ಯ, ಕಂಕಯ್ಯ
೩೩.	ದೊಂ, ದೊಂಬರು, ಪೈದಿ, ಪಾನೋ	೩೪	ಎಲ್ಲಮಾಲ್ದಾರ್, ಯಲ್ಲಮ್ಮರವಾಂಣ್ಲು
೩೫	ಗಂಟಿ ಚೋರರು	೩೬.	ಗರೋಡ, ಗರೋ
೩೭.	ಗೊದ್ದ	೩೮.	ಗೋಸಂಗಿ
೩೯.	ಹಳೀರು	೪೦	ಹಲ್ಪರ, ಹಸ್ಲರ್ ಹುಲಸ್ವಾರ್
೪೧	ಹಂದಿ ಜೋಗಿ	೪೨	ಹಲ (ಹಸ್ಲ)
೪೩	ಹೊಲಾರ್, ವಲ್‌ಹಾರ್	೪೪	ಹೊಲಯ, ಹೊಲೇರ್, ಹೊಲೆಯ
೪೫	ಹೊಲಯ ದಾಸರಿ	೪೬	ಜಗ್ಗಲಿ
೪೭	ಜಾಂಬುವುಲು	೪೮	ಕಡೆಯನ್
೪೯	ಕಲ್ಲಾದಿ	೫೦	ಕೆಪ್‌ಮಾರಿಸ್
೫೧	ಕೊಲುಪುಲ್ ವಾಂಣ್ಲು	೫೨	ಕೂಸ
೫೩	ಕೊರಚ	೫೪	ಕೊರಮ
೫೫	ಕೋಟೆಗಾರ್, ಮೇತ್ರಿ	೫೬	ಕುಡುಂಬನ್
೫೭	ಕುರವನ್	೫೮	ಲಿಂಗದೇರು
೫೯	ಮಾಚಲ	೬೦.	ಮಾದರಿ
೬೧	ಮಾದಿಗ	೬೨.	ಮಹರ್, ತರಳ, ಧೇಗು ಮೇಗು
೬೩.	ಮಹ್ಯವಂನ್ಶಿ, ದೇಡ್, ವಣಕರ್, ವರು–ವಣ–ಕರ್	೬೪	ಮೈಲಾ
೬೫	ಮಾಲ	೬೬.	ಮಾಲ ದಾಸರಿ
೬೭	ಮಾಲ ಹನ್ನೈ	೬೮.	ಮಾಲ ಜಂಗಮ
೬೯.	ಮಾಲ ಮಾಸ್ತಿ	೭೦.	ಮಾಲ ಸಾಲೆ, ನೆಟ್ಕಣಿ

೭೧	ಮಾಲ ಸಂನ್ಯಾಸಿ	೭೨.	ಮಾಂಗ, ಮಾತಂಗ, ಮಿಣಿ ಮಾದಿಗ
೭೩.	ಮಾಂಗ ಗಾರುಡಿ, ಮಾಂಗ ಗರೋಡಿ	೭೪	ಮನ್ನೇ
೭೫	ಮಾಸ್ತಿ	೭೬	ಮಾವಿಲನ್
೭೭	ಮೇಘವಲ್, ಮೇಘವಾರ್	೭೮	ಮೊಗೇ
೭೯	ಮುಕ್ರಿ	೮೦.	ಮಂಡಾಲ
೮೧	ನದಿಯಾ, ಹದಿ	೮೨.	ನಲ್ಕದಾಯ
೮೩.	ನಲ್ಕೆಯವ	೮೪	ನಾಯಾದಿ
೮೫	ಪಾಳೆ (ಪಳೆ)	೮೬.	ಪಲ್ಲನ್
೮೭	ಪಂಬದ	೮೮.	ಪಂಚಮ
೮೯.	ಪಣ್ಣಿಯಾಂಡಿ	೯೦.	ಪರ್ರೈಯನ್, ಪರಯ
೯೧	ಪರಯನ್	೯೨.	ರಾಣಿಯರ್
೯೩.	ಸಮಗಾರ್	೯೪	ಸಾಂರ್
೯೫	ಸಪಾರಿ	೯೬.	ಶಿಳ್ಳೇಕ್ಯಾತ
೯೭	ಸಿಂಧೊಳ್ಳು, ಚಿಂದೊಳ್ಳು	೯೮.	ಸುಡಗಾಡು ಸಿದ್ಧ
೯೯.	ತೋಟಿ	೧೦೦	ತಿರ್ಗಾರ್, ತಿರ್ಬಂದ
೧೦೧	ವಳ್ಳುವನ್		

ಮಾದಿಗ ಸಮುದಾಯದ ಸಾಮಾಜಿಕ ಬದಲಾವಣೆ (ಚಿತ್ರದುರ್ಗ ಜಿಲ್ಲೆಯನ್ನು ಅನುಲಕ್ಷಿಸಿ)

೧. ಸಾಮಾನ್ಯ ಮಾಹಿತಿ

ಎ. ಸಮೀಕ್ಷೆಯ ದಿನಾಂಕ
ಬಿ. ಒಳಪಂಗಡ :
ಸಿ. ಬೆಡಗು :
ಡಿ. ಮಾತೃಭಾಷೆ
ಇ. ಮನೆದೇವರು / ದೈವ

ಇ. ಕುಲಚಿಹ್ನೆ
ಎಫ್. ಮನೆತನದ ಹೆಸರು
ಜಿ. ಕು.ಗ್ರಾಮ / ಗ್ರಾಮ / ನಗರ
ಎಚ್. ವಾರ್ಡ್
ಐ. ಪಂಚಾಯತಿ
ಜೆ. ತಾಲೂಕು

ಕೆ. ಜಿಲ್ಲೆ
ಎಲ್. ಭೂಹಿಡುವಳಿ (ಎಕರೆಗಳಲ್ಲಿ)
೧. ಒಣ :
೨. ನೀರಾವರಿ :

ಒ. ಪಶುಸಂಪತ್ತು (ಸಂಖ್ಯೆಗಳಲ್ಲಿ)
೧. ಎತ್ತು, ಹೋರಿ :
೨. ಆಕಳು, ಕರು :
೩. ಎಮ್ಮೆ, ಕೋಣ :
೪. ಕುರಿ :
೫. ಮೇಕೆ :
೬. ಕೋಳಿ :

ಪಿ. ಮನೆ ವಿವರ
೧. ಗುಡಿಸಲು
೨. ಟಿನ್‌ಮನೆ
೩. ದಾಬಾ ಮಾಳಿಗೆ
೪. ಆರ್.ಸಿ.ಸಿ.
೫. ಹೆಂಚಿನ ಮನೆ
೬. ಆಶ್ರಯ ಮನೆ
೭. ಬಾಡಿಗೆ ಮನೆ

ಕ್ಯೂ ಇತರೆ ಸೌಲಭ್ಯಗಳು

೧. ಪಡಿತರ ಚೀಟಿ　೨. ಗ್ಯಾಸ್　೩. ನಲ್ಲಿ　೪. ಶೌಚಾಲಯ　೫. ಸ್ನಾನಗೃಹ　೬. ಸೈಕಲ್　೭. ರೇಡಿಯೋ　೮. ಟೇಪ್ ರಿಕಾರ್ಡರ್
೯. ಟಿ.ವಿ.　೧೦. ದೂರವಾಣಿ　೧೧. ಮೊಟರ್ ಸೈಕಲ್　೧೨. ಇತರೆ

೧೧. ವೈಯಕ್ತಿಕ ಮಾಹಿತಿ

ಕ್ರಸಂ.	ಕುಟುಂಬದ ಸದಸ್ಯರ ಹೆಸರುಗಳು	ಸಂಬಂಧ ಮುಖ್ಯಸ್ಥ/ಮುಖ್ಯಸ್ಥೆಳು	ಲಿಂಗ	ವಯಸ್ಸು	ಶಿಕ್ಷಣ	ವೈವಾಹಿಕ ಸ್ಥಾನಮಾನ	ಕಸಬು	ಸರ್ಕಾರಿ ಸೌಲಭ್ಯಗಳು ( )			
								ಓಟಿನಕಾರ್ಡ	ವಿಧವಾ ವೇತನ	ಅಂಗವಿಕಲ	ಶಿಷ್ಯವೇತನ
೧											
೨											
೩											

ಮಾರ್ಗದರ್ಶಕರು
ಪ್ರೊ ಚಲುವರಾಜು, ಪ್ರಾಧ್ಯಾಪಕರು

ಸಹ ಮಾರ್ಗದರ್ಶಕರು
ಪ್ರೊ ಕೆ ಎಂ ಮೇತ್ರಿ, ಪ್ರಾಧ್ಯಾಪಕರು

ಸಂಶೋಧಕರು
ರಾಜಣ್ಣ ಡಿ

ಮಾಹಿತಿ ದಾಖಲೆದಾರರ ಸಹಿ ಮತ್ತು ವಿಳಾಸ

ನಕ್ಷೆಗಳು

ನಕ್ಷೆಗಳು

ಕರ್ನಾಟಕ ರಾಜ್ಯ ನಕ್ಷೆ





ಚಿತ್ರದುರ್ಗ ಜಿಲ್ಲೆಯ ನಕ್ಷೆ

Chitradurga District



ಚಿತ್ರದುರ್ಗ ಜಿಲ್ಲೆಯಲ್ಲಿ ಸಮೀಕ್ಷೆಗೊಳಪಡಿಸಿದ ಮಾದಿಗ ಸಮುದಾಯದ ಅಧ್ಯಯನ ಕ್ಷೇತ್ರದ ನೆಲೆಗಳು



ಛಾಯಾಚಿತ್ರಗಳು

ಛಾಯಾಚಿತ್ರಗಳು



ನಾಮಕರಣ



ಜವಳ

ಋತುಮತಿಗೆ ಸಂಬಂದಿ ಛಾಯಾಚಿತ್ರಗಳು



ಋತುಮತಿಗೆ ಸಂಬಂದಿಕರು ಆಯಾರು ಮಾಡುವುದು



ಗಂಗೆಪೂಜೆ



ಗಂಗಪೂಜೆ ಮುಗಿಸಿಕೊಂಡು ಮನೆಬರುತ್ತಿರುವುದು



ಹರಣೆ ಸ್ವಾರೇವನ್ನು ದೇವರ ಗುಡಿಯಲ್ಲಿ ಪೂಜೆ ಮಾಡುವ ಆಚರಣೆ



ಮನೆಯಲ್ಲಿ ಹರಣೆ ಸ್ವರೇಗೆ ಪೂಜೆ



ಮನೆಯ ಮೇಲು ಚಾವಣಿಗೆ ಉತ್ತುತ್ತಿ, ಒಣಕೊಬ್ಬರಿ, ತಾಳೆಗರಿ, ಹರಿಶಿಣ, ಕಂಕಣ ಕಟ್ಟಿರುವುದು



ತಾಳಿಕಾಟ್ಟುವ ಆಚರಣೆ



ಮದಲಿಂಗ ಮದುಲಿಗಿತ್ತಿಗೆ ಸಾಸುವೆ ಇಡುವ ಆಚರಣೆ



ಉಗುಂರ ತೊಡೆಸುವ ಆಚರಣೆ



ಹಿಂದಿನ ಕಾಲದ ಗಲ್ಲೆಬಾನೆ



ಪೂಜೆ ಮಾಡಿರುವ ಗಲ್ಲೆಬಾನೆ



ಹದಮಾಡಿರುವ ಚರ್ಮ

ದೇವರ ಮುಂದೆರುವ ಪದಗಟ್ಟೆಗಳು









ದೊಡ್ಡಹಿರಿಯಮ್ಮ ದೇವಸ್ಥಾನ, ಕೊನಸಾಗರ



ನಾಯಕನಹಟ್ಟಿ ತಿಪ್ಪೇಸ್ವಾಮಿ ದೇವಸ್ಥಾನ, ನಾಯಕನಹಟ್ಟಿ



ಸಣ್ಣಹಿರಿಯಮ್ಮ ದೇವಸ್ಥಾನ, ಕೊನಸಾಗರ



ಕೋಲ್ಲಾರಮ್ಮ ದೇವಿ, ಕೊಂಡ್ಲಹಳ್ಳಿ



ಶ್ರೀಮಾತಂಗಮ್ಮ, ದುರುಗಮ್ಮ ಮತ್ತು ಮಾರಿಯಮ್ಮ ದೇವರುಗಳು, ಶಿವಮೊಗ್ಗ



ಪೆನ್ನೋಬಳೇಶ್ವರಸ್ವಾಮಿಯ ಪೆಟ್ಟಿಗೆ ದೇವರು, ಕೋನಸಾಗರ



ಸಿದ್ದಯ್ಯನಕೋಟೆಯ ಶ್ರೀದುರುಗಮ್ಮ ದೇವರು



ಹೊಳಲ್ಕೆರೆಯ ಶ್ರೀಕರಿಯಮ್ಮ ದೇವರು



ಶ್ರೀಕೋಲ್ಲಾರಮ್ಮ ದೇವರು, ತಾಳ್ಯ



ಶ್ರೀಕರಿಯಮ್ಮ ದೇವರು, ಹೊಸದುರ್ಗ



ಶ್ರೀತಾಯಮ್ಮ ದೇವರು, ದೊಡ್ಡಘಟ್ಟ



ಚಿನ್ನೋಬನಹಳ್ಳಿಯ ಕಂಚಿ ಓಬಳೇಶ್ವರ ದೇವರು

ಬುಡ್ಡೇಕಲ್ಲು ಅಥವಾ ಮುದ್ರಕಲ್ಲುಗಳು







ಚಿನ್ನೋಬನಹಳ್ಳಿಯ ಕಂಚಿ ಓಬಳೇಶ್ವರ ಜಾತ್ರೆಗೆ ಸಂಬಂಧಿಸಿದ ಛಾಯಾಚಿತ್ರಗಳು



ಮಣೇವು ಆಡುವುದು



ದೇವರ ಮೆರವಣಿಗೆ



ಕಂಚಿ ಓಬಳೇಶ್ವರ ದೇವರಿಗೆ ದೇವರ ಎತ್ತುಗಳನ್ನು ಬಿಡುವುದು



ಹಿರಿಯರಯನ್ನು ಪೂಜಿಸುವ ದೇವರ ಕಲ್ಲುಗಳು, ನೇರ್ಲಹಳ್ಳಿ



ಹಿರಿಯರನ್ನು ಪೂಜಿಸುವ ದೇವರ ಕಲ್ಲುಗಳು, ರಾಮಸಾಗರ



ಶ್ರೀಕೋಲ್ಲಾರಮ್ಮ ದೇವರ ಗುಡಿಮುಂದೆ ಇರುವ ಎದುರುಗಂಬ



ಮೂರು ದಿನದಲ್ಲಿ ಸತ್ತವರಿಗೆ ಹೆಡೆ ಹಾಕಿರುವುದು



ಒಂಬತ್ತು ಅಥವಾ ಹದಿನಾರು ದಿನದಲ್ಲಿ ಸತ್ತವರಿಗೆ ಹೆಡೆ ಹಾಕಿರುವುದು



ಶ್ರೀಕೆಂಚಮ್ಮ ದೇವರು, ಹಿರಿಯೂರು



ಶ್ರೀದುರುಗಮ್ಮನ ಪಟ್ಟದ ಕೋಣ, ನೇರ್ಲಹಳ್ಳಿ



ತಂಗಡಿಗಿಡ ದೇವರು



ಶ್ರೀಮಾದಾರ ಚನ್ನಯ್ಯಸ್ವಾಮಿಯ ಜೊತೆ ಸಂಶೋಧಕ, ಚಿತ್ರದುರ್ಗ



ಮಾದಿಗ ಸಮುದಾಯ ವಾಸಮಾಡುವ ಮನೆಗಳು, ಚಿತ್ರಹಳ್ಳಿ



ಮಾದಿಗ ಸಮುದಾಯ ವಾಸಮಾಡುವ ಮನೆಗಳು, ತಾಳ್ಯ



ಸಮಾಜಶಾಸ್ತ್ರದ ಉಪನ್ಯಾಸಕರಾದ ಎಚ್ ಎಂ ವೆಂಕಟೇಶ ಜೊತೆ ಸಂಶೋಧಕ ಚರ್ಚೆ



ಮಾದಿಗ ಸಮುದಾಯದ ವಿದ್ಯಾಸಂಸ್ಥೆಯಾದ ಶ್ರೀದೇವರಾಜ ಅರಸು ವಿದ್ಯಾಸಂಸ್ಥೆ, ಚಿತ್ರದುರ್ಗ



ಮಾದಿಗ ಸಮುದಾಯದ ಮೆಡಿಕಲ್ ಕಾಲೇಜು ಮತ್ತು ಅಮೃತ ಅಸ್ಪತ್ರೆ, ಚಿತ್ರದುರ್ಗ



ಶ್ರೀ ಶಿವಶರಣ ಮಾದಾರ ಚನ್ನಯ್ಯ ಗುರುಪೀಠ, ಚಿತ್ರದುರ್ಗ



ಪಾದರಕ್ಷೆ ಮಾಡುವ ಮಾದಿಗ ಸಮುದಾಯದ ಹಿರಿಯರು



ಪಾದರಕ್ಷೆ ಮಾಡುವ ಮಾದಿಗ ಸಮುದಾಯದ ಹಿರಿಯರು



ಮಾತಂಗ ಸಾಹಿತ್ಯ ಪರಿಷತ್ ಅವರಿಂದ ಅಭಿನಂದಿಸಲ್ಪಡುವ ಕವಿ–ಲೇಖಕರುಗಳು, ಚಿತ್ರದುರ್ಗ



ಹಂಪಿ ಶ್ರೀಮಾತಂಗ ಮಹಾಮುನಿಗಳ ಜಯಂತೋತ್ಸವ, ಹಂಪಿ




ಶ್ರೀ ಶಿವಶರಣ ಮಾದಾರ ಚನ್ನಯ್ಯಸ್ವಾಮಿಜೀಯವರ ಜನ್ಮ ಜಯಂತಿ ಕಾರ್ಯಕ್ರಮ, ಚಿತ್ರದುರ್ಗ



ಹಂಪಿಯ ಶ್ರೀಮಾತಂಗ ಮಹಾಮುನಿಗಳ ಜಯಂತೋತ್ಸವ ಉದ್ಘಾಟನಾ ಕಾರ್ಯಕ್ರಮ, ಹಂಪಿ





ಕನ್ನಡ ವಿಶ್ವವಿದ್ಯಾಲಯ

ಮಾತೆಂಬುದು ಜ್ಯೋತಿರ್ಲಿಂಗ

ಬುಡಕಟ್ಟು ಅಧ್ಯಯನ ವಿಭಾಗ